ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ

Biodiversity(Culture) in: Knnada Litrecher

(ಯು.ಜಿ.ಸಿ. ಪೋಸ್ಟ್ ಡಾಕ್ಟರೇಟ್ ಫೆಲೋ ಸಂಶೋಧನಾ ಅಂತಿಮ ವರದಿ)

(Final Report Prepared for the UGC post Doctorel Fellow)

ಪಿಡಿಎಫ್ ಸಂಶೋಧಕರು

PDF Scholar

ಡಾ. ಕುಶಾಲ ಬಿ.ಸಿ.

Dr. Kushala.B.C

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

Kuvempu Institute of Kannada Studies

ಮಾನಸಗಂಗೋತ್ರಿ, ಮೈಸೂರು.

Manasagangotri, Mysore-570006

ಮೇಲ್ವಿಚಾರಕರು

Supervision

ಪ್ರೊ. ಅರವಿಂದ ಮಾಲಗತ್ತಿ

Prof. Aravinda Malagatti

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

Kuvempu Institute of Kannada Studies

ಮಾನಸಗಂಗೋತ್ರಿ,ಮೈಸೂರು.

Manasagangotri, Mysore-570006

2023

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

Kuvempu Institute of Kannada Studies

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

University of Mysore, Mysuru.

ಸಂಶೋಧಕರ ದೃಢೀಕರಣ ಪತ್ರ

ಪ್ರೊ. ಅರವಿಂದ ಮಾಲಗತ್ತಿ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು. ಇವರ ಮೇಲ್ವಿಚಾರಣೆಯಲ್ಲಿ "ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ" ಎಂಬ ವಿಷಯದ ಮೇಲೆ ಪಿ.ಡಿ.ಎಫ್ ಅಂತಿಮ ವರದಿಯನ್ನು ಸಿದ್ದಪಡಿಸಿ, ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಸಂಶೋಧನಾ ವರದಿಯ ವಿಷಯ ಮತ್ತು ವಿಷಯಾಂಶಗಳನ್ನು ಕೃತಿಚೌರ್ಯ ಮಾಡಿಲ್ಲ. ಈ ಮೊದಲು ಯಾವುದೇ ಉದ್ದೇಶಕ್ಕಾಗಲಿ, ಪದವಿಗಾಗಲಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೇಲ್ವಿಚಾರಕರು ಪಿ.ಡಿ.ಎಫ್.ಸಂಶೋಧಕ

ಪ್ರೊ. ಅರವಿಂದ ಮಾಲಗತ್ತಿ
ಮೈಸೂರು ವಿಶ್ವವಿದ್ಯಾನಿಲಯ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು–9

ಡಾ. ಕುಶಾಲ. ಬಿ.ಸಿ.
ಮೈಸೂರು ವಿಶ್ವವಿದ್ಯಾನಿಲಯ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–9

ಮುಖ್ಯಸ್ಥರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು–9

ದಿನಾಂಕ: 18–10–2023
ಮೈಸೂರು.

ಅರಿಕೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ: ಪರಿಸರ ಪ್ರಜ್ಞೆ ಎಂಬ ವಿಷಯದ ಮೇಲೆ ಸಂಶೋಧನೆ ಮಾಡುವಾಗ, ವಿಜ್ಞಾನದ ವಿಷಯಗಳನ್ನು ಕವಿ, ಲೇಖಕರುಗಳು ತಮ್ಮ ಕಾವ್ಯ, ಮತ್ತಿತರ ಸಾಹಿತ್ಯ ಕೃತಿಗಳಲ್ಲಿ ಬಳಸಿರುವ ಮಾದರಿಗಳು ನನ್ನ ಗಮನಕ್ಕೆ ಬಂದವು. ಇವುಗಳನ್ನು ಸಾಹಿತ್ಯ ವಿಚಾರಗಳಾಗಿ ಪರಿಶೀಲಿಸಿರುವ ವಿಮರ್ಶೆ, ಸಂಶೋಧನೆಗಳು ಹೆಚ್ಚಾಗಿದ್ದವು. ಇವುಗಳನ್ನು ನಾನು ಸಾಹಿತ್ಯದಲ್ಲಿ ವಿಜ್ಞಾನದ ವಿಚಾರಗಳನ್ನಾಗಿ ಏಕೆ ನೋಡಬಾರದು? ಎಂಬ ಪ್ರಶ್ನೆ ತುಂಬಾ ಕಾಡಿತ್ತು. ಆದ್ದರಿಂದ ನಾನು ಪಿ.ಡಿ.ಎಫ್ ವಿಷಯವಾಗಿ **'ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ'** ಎಂಬ ವಿಷಯವನ್ನು ಯು.ಜಿ.ಸಿಯಿಂದ ಕೊಡಮಾಡುವ ಪರಿಶಿಷ್ಟ ಜಾತಿ–ವರ್ಗಗಳ ಪೇಲೋಶಿಪ್ ಗೆ ಅರ್ಜಿ ಸಲ್ಲಿಸಿದ್ದೆ. ಅದರ ಆಯ್ಕೆ ಸಮಿತಿಯಿಂದ ಈ ವಿಷಯ ನೇಮಕವಾದ ಮೇಲೆ, ಆ ಇಲಾಖೆ ಆರ್ಥಿಕ ಸಹಾಯ ನೀಡಿ, ಪಿ.ಡಿ.ಎಫ್ ಸಂಶೋಧನೆ ಮಾಡಲು ಅವಕಾಶ ಮಾಡಿಕೊಟ್ಟಿತು. ಮೊದಲು ಈ ಇಲಾಖೆಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಕೆಲಸವನ್ನು ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾಡಲು ಆಯ್ಕೆ ಮಾಡಿಕೊಂಡ ಮೇಲೆ, ಅದರ ಪತ್ರ ವ್ಯವಹಾರದ ಆರ್ಥಿಕ ಚಟುವಟಿಕೆ ಈ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ–ವರ್ಗಗಳ ವಿಶೇಷ ಘಟಕದಿಂದ ನೆಡೆಯಿತು. ಅಲ್ಲಿಯ ಉಪ ಕುಲಸಚಿವರು ಮತ್ತು ಸಿಬ್ಬಂದಿ ವರ್ಗದವರ ಸಹಕಾರಕ್ಕೆ ಧನ್ಯವಾದಗಳು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಪ್ರೊ. ಅರವಿಂದ ಮಾಲಗತ್ತಿ ಅವರ ಮೇಲ್ವಿಚಾರಣೆಯಲ್ಲಿ ನಾನು ಅವರಿಂದ ಕಲಿತ ಅಪಾರ ಸೂಕ್ಷ್ಮ ಹೊಳಹುಗಳು ಸಂಶೋಧನೆ ಹೆಚ್ಚು ಮೌಲ್ಯಯುತ ವಿಷಯ ಚರ್ಚೆಯಾಗಲು ಸಾಧ್ಯವಾಗಿದೆ. ಅದಕ್ಕಾಗಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆಲಸ ಮಾಡುವಾಗ ಅಲ್ಲಿಯ ನಿರ್ದೇಶಕರುಗಳು ಮತ್ತು ಸಿಬ್ಬಂದಿ ವರ್ಗ ತುಂಬಾ ಸಹಕರಿಸಿದ್ದಾರೆ ಅವರಿಗೆಲ್ಲಾ ಪ್ರೀತಿಯ ವಂದನೆಗಳನ್ನು ಸಲ್ಲಿಸುತ್ತೇನೆ.

'ಜೀವ ಸಂಸ್ಕೃತಿ' ಎಂಬ ವಿಷಯದಲ್ಲಿ ಸಂಶೋಧನಾ ಕೆಲಸ ಮಾಡುವಾಗ ಇದರ ಆಳಕ್ಕೆ ಇಳಿದಂತೆಲ್ಲ ಬಹುಶಿಸ್ತೀಯ ಸಂಶೋಧನಾ ಮಾರ್ಗಗಳ ಮಾದರಿಯನ್ನು ಅನುಸರಿಸ ಬೇಕಾಯಿತು. ಆಗ ಭೌತಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಪರಿಸರ ವಿಜ್ಞಾನಗಳಂತಹ ವೈಜ್ಞಾನಿಕ ವಿಷಯವನ್ನು ಸರಳವಾಗಿ ಗ್ರಹಿಸಲು ಸ್ವಲ್ಪ ಹೆಚ್ಚು ಸಮಯ ಬೇಕಾಯಿತು. ಈ ವಿಜ್ಞಾನದ ವಿಷಯ ಜ್ಞಾನಗಳನ್ನು ಅರ್ಥ ಮಾಡಿಕೊಂಡು, ಆವುಗಳ ಸರಳ ಜ್ಞಾನವನ್ನು, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗಿರುವ ವಿಜ್ಞಾನದ ವಿಷಯ, ವಿಚಾರಗಳಿಗೆ ಅನ್ವಯಿಸಿ, ಸಂಶೋಧನೆಗೆ ಪೂರಕವಾಗಿ ಬಳಸಿಕೊಳ್ಳಲು ಮಾಡಿದ ಪ್ರಯತ್ನ, ಬಹುಶಿಸ್ತೀಯ ಸಂಶೋಧನೆಯಾಗಿ ಪರಿಣಮಿಸಿತು. ಇದರಿಂದ ಅಧ್ಯಯನ ತುಂಬಾ ವಿಸ್ತಾರವಾಗಿ ಬೆಳೆದು, ಹೆಚ್ಚು ಸ್ಪಷ್ಟತೆ ಪಡೆದುಕೊಳ್ಳಲು ಅನುಕೂಲವಾದಂತೆ, ಸಮಯವು ವಿಸ್ತಾರವಾಯಿತು. ಇಂತಹ ಜ್ಞಾನ ಕಾರ್ಯದ ಕೆಲಸಕ್ಕೆ ಸಾಹಿತ್ಯ ಮತ್ತು ವಿಜ್ಞಾನದ ಹಲವಾರು ಜನ ವಿದ್ವಾಂಸರೊಡನೆ ಚರ್ಚಿಸಿದ್ದೇನೆ. ಅವರು ಕೊಟ್ಟ ಸೂಚನೆ, ಮಾಹಿತಿ, ಆಧಾರಗಳಿಂದ ನನ್ನ ಅಸ್ಪಷ್ಟತೆಗಳು ಸ್ಪಷ್ಟವಾಗುತ್ತಾ ಬಂದವು. ಇದಕ್ಕೆ ಕಾರಣವಾದ ಎಲ್ಲಾ ಪ್ರಾಧ್ಯಾಪಕರಿಗೂ ಗೌರವ ಪೂರ್ವಕವಾಗಿ ಅಭಿವಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಶೋಧನಾ ಕೆಲಸ ಮುಗಿಯಲು ಕಾರಣ ಕರ್ತರಾದ ಸಕಲರಿಗೂ ಪ್ರೀತಿಯ ವಂದನೆಗಳೊಂದಿಗೆ ಸ್ಮರಿಸುತ್ತೇನೆ,

ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ

ಪರಿವಿಡಿ

ಅಧ್ಯಯನದ ಹಿನ್ನೆಲೆ, ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ: 1 ಜೀವ–ಜೀವಿ–ಜೀವನ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯ ಅವಲೋಕನ:

ಅಧ್ಯಾಯ: 2 ಕನ್ನಡ ಸಾಹಿತ್ಯದಲ್ಲಿ: ಸಸ್ಯ ಮತ್ತು ಕೀಟಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ):

2:1. ಜೀವ–ಜೀವಿಗಳ ವಿಕಾಸ ಸ್ವರೂಪ

2:2. ಕನ್ನಡ ಸಾಹಿತ್ಯದಲ್ಲಿ: ಸಸ್ಯಗಳ ಸಂಸ್ಕೃತಿ

2:2:1. ಸಸ್ಯಗಳು ವಿಕಾಸವಾದ ಪ್ರಾಕೃತಿಕ ಸ್ವರೂಪ

2:2:2. ಸಸ್ಯ ಸಂಕುಲಗಳ ಆದಿ ಹುಲ್ಲು: ಸಕಲ ಜೀವಿಗಳಿಗಾದ ಆಹಾರ ಮತ್ತು ರಕ್ಷಣಾ ಸಂಸ್ಕೃತಿ

2:2:3. ಸಸ್ಯ ಸಂಪತ್ತಿನ ಹೂ ಸಿರಿ; ಸಸ್ಯಗಳ ಸಂತಾನಾಭಿವೃದ್ಧಿ ಸಂಸ್ಕೃತಿ

2:2:4. ಮಾಂಸಹಾರಿ ಸಸ್ಯಗಳ ಆಹಾರ ಸಂಸ್ಕೃತಿ

2:2:5. ಗಿಡ–ಮರಗಳ ಔಷಧಿ ಗುಣವುಳ್ಳ ಬಹುಪಯೋಗಿ ಸಂಸ್ಕೃತಿ

2:2:6. ಕೀಟಗಳ ಜೀವನ ಸಂಸ್ಕೃತಿ

ಅಧ್ಯಾಯ: 3 ಕನ್ನಡ ಸಾಹಿತ್ಯದಲ್ಲಿ: ಹಕ್ಕಿ ಪಕ್ಷಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ):

3:1. ಹಕ್ಕಿ–ಪಕ್ಷಿ ಉಪವರ್ಗ ಜೀವಿಗಳು ವಿಕಾಸವಾದ ಪ್ರಾಕೃತಿಕ ಸಂಸ್ಕೃತಿ

3:2. ಹಕ್ಕಿ–ಪಕ್ಷಿ ಉಪವರ್ಗ ಜೀವಿಗಳ ಆಹಾರ, ಆವಾಸ, ಸಂತಾನೋತ್ಪತ್ತಿ..... ಚಟುವಟಿಕೆಗಳ ಕ್ರಮ (ಸಂಸ್ಕೃತಿ)

ಅಧ್ಯಾಯ: 4 ಕನ್ನಡ ಸಾಹಿತ್ಯದಲ್ಲಿ: ಪ್ರಾಣಿ ವರ್ಗಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ):

4:1. ಪ್ರಾಣಿ ಉಪವರ್ಗ ಜೀವಿ ಸಂಕುಲಗಳು ವಿಕಾಸವಾದ ಪ್ರಾಕೃತಿಕ ಸಂಸ್ಕೃತಿ

4:2. ಪ್ರಾಣಿ ಸಂಕುಲದ ಉಪ ಜೀವಿಗಳ ಆಹಾರ, ಅವಸಾನ..... ಚಟುವಟಿಕೆಗಳ ಸಂಸ್ಕೃತಿ

4:3. ಪ್ರಾಣಿಗಳ ಗುಣ ಸ್ವಭಾವದ ನಡವಳಿಕೆಗಳು

4:4. ಮಾನವನ ಸ್ವಾರ್ಥ ಪ್ರವೃತ್ತಿಯ ಗುಣಕಾರ್ಯಗಳಿಂದ ಜೀವಹಾನಿ ಸಂಸ್ಕೃತಿ

ಅಧ್ಯಾಯ: 5 ಕನ್ನಡ ಸಾಹಿತ್ಯದಲ್ಲಿ: ಪ್ರಕೃತಿ–ಭೂಮಿ–ಮಾನವ ಗುಣ ಧರ್ಮಗಳು:

5:1. ಪ್ರಕೃತಿ–ಭೂಮಿ ವಿಕಾಸವಾದ ಸ್ವಭಾವಿಕ ಸಾಂಸ್ಕೃತಿಕ ಚಟುವಟಿಕೆಗಳು

5:2. ಪ್ರಕೃತಿ–ಭೂಮಿ ಮಾನವನ ಆರಾಧಾನ ಭಾವಗಳು

5:3. ಪ್ರಕೃತಿಯೊಂದಿಗೆ ಮಾನವನ ತಾದಾತ್ಮ್ಯದ ದೈವಿ ಭಾವಗಳು

5:4. ಪ್ರಕೃತಿಯ ಜೀವಿಗಳ ಮೇಲೆ ಮಾನವನ ಕ್ರೌರ್ಯ ಸಂಸ್ಕೃತಿ

5:5. ಭೂಮಿಯ ತಾಳ್ಮೆ ಮತ್ತು ರೌದ್ರ ರೂಪಿಯ ದ್ವಿಮುಖ ಸಂಸ್ಕೃತಿ

ಅಧ್ಯಾಯ: 6. ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯ ತಾತ್ವಿಕ ಮಾರ್ಗ

ಜೀವ ತತ್ವದ ಸೈದ್ಧಾಂತಿಕತೆ:

6:1. ಪ್ರಕೃತಿ ಜೀವಿಗಳ ಹುಟ್ಟಿನ ರೂಪಗಳು. ಏಳು ಮಾದರಿಗಳು

6:2. ಜೀವಿ ಸಂಕುಲಗಳ ಹುಟ್ಟಿಗೆ: ವಿಭಿನ್ನ ಸಂತಾನೋತ್ಪತ್ತಿಯ ತಾತ್ವಿಕ ಸಿದ್ಧಾಂತ:

6:3. ಜೀವಿ ಸಂಕುಲಗಳ ಯೌವನ–ಸಂತಾನೋತ್ಪತ್ತಿಗಳ ಸ್ವಾಭಾವಿಕವಾದ ತಾತ್ವಿಕ ನಿಯಮಗಳು:

6:4. **ಜೀವಿ**ಗಳಲ್ಲಿ ಮುಪ್ಪು, ಸಹಜ ಸಾವು ಮತ್ತು ಆಕಸ್ಮಿಕ ಅವಸಾನವಾಗುವ ಜೀವನ ಚಟುವಟಿಕೆಗಳ ತಾತ್ವಿಕ ಸಿದ್ಧಾಂತ:

6:5. ಮಾನವೀಯತೆಯೊಳಗಿರುವ ಮಾನವತ್ವದ; ಮಾನವ ಕೇಂದ್ರೀತ, ಜೀವಹೀನ ತತ್ವ, ಸಿದ್ಧಾಂತಗಳು:

ಸಮಾರೋಪ:

1: ಸಂಶೋಧನ ಫಲಿತಗಳು

2: ಪರಾಮರ್ಶನ ಸಾಹಿತ್ಯ

2:I. ಪ್ರಾಚೀನ ಧರ್ಮ, ಪುರಾಣ ಕೃತಿಗಳು

2:II. ಸೃಜನಶೀಲ ಮತ್ತು ವಿಮರ್ಶಾ ಕೃತಿಗಳು

2:III ಸಂಪಾದನ ಕೃತಿಗಳು

ಸಸಸಸಸ **2:IV.** ವೈಚಾರಿಕ ಮತ್ತು ವೈಜ್ಞಾನಿಕ ಕೃತಿಗಳು

2:V. ಅನುವಾದಿತ ಕೃತಿಗಳು

2:VI. ಸಂಶೋಧನಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳು

2:VII. ಇತಿಹಾಸದ ಕೃತಿಗಳು

2:VIII. ವಿಶ್ವ ಕೋಶ ಮತ್ತು ಅರ್ಥ ಕೋಶಗಳು

2:IX. ಪತ್ರಿಕೆ ಮತ್ತು ನಿಯತಕಾಲಿಕಗಳು

ಅಧ್ಯಯನದ ಹಿನ್ನೆಲೆ, ಉದ್ದೇಶ ಮತ್ತು ವ್ಯಾಪ್ತಿ

ಮಾನವ ಜಗತ್ತೇ ಇಂದು 20ನೇ ಶತಮಾನದಿಂದ ಇಪ್ಪತ್ತಾ ನಾಲ್ಕನೇ ವರ್ಷಕ್ಕೆ ಕಾಲಿಡುವಷ್ಟು ಕಾಲ ಕಳೆದದ್ದಾಗಿದೆ. ಜೀವವ್ಯೂಹವಾಗಿರುವ ಪ್ರಕೃತಿಯ ಜೀವ ಪರಿಸರ ಎಲ್ಲಿದೆಯೋ ಅಲ್ಲೆಲ್ಲಾ ಮಾನವನಿರಬಹುದು, ಇಲ್ಲದೆಯೂ ಇರಬಹುದು ಅವನದೆ ಪಾರುಪತ್ಯ. ಇನ್ನೂಳಿದ ಜೀವಿಗಳಿಗೆ ಅಲ್ಲಿ ಪ್ರಾಧಾನ್ಯತೆಯೆ ಇಲ್ಲ. ಎಲ್ಲವೂ ಮಾನವಮಯವಾಗಿ ಪ್ರಕೃತಿಯನ್ನೆ ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲು ಇನ್ನೂ ಪ್ರಯತ್ನಿಸುತ್ತಿದ್ದಾನೆ. ಏಕೆಂದರೆ ಮಾನವನೆ ಇಲ್ಲದ ಗ್ರಹತಾರೆಗಳಲ್ಲಿಗೆ ಹೊಗಲು, ಅಲ್ಲಿ ತನ್ನ ವಾಸಯೋಗ್ಯವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಚಂದ್ರ, ಮಂಗಳ, ಬುಧ ಗ್ರಹಗಳಲ್ಲಿ ಸಂಶೋಧಿಸಿ, ಚಂದ್ರನಲ್ಲಿ ಈಗಾಗಲೇ ಜಾಗವನ್ನು ಖರೀದಿಸಿದ್ದಾನೆ ಎಂಬುದೆ ಮಾನವನ ವಿಜ್ಞಾನ, ತಂತ್ರಜ್ಞಾನದ ಮಹತ್ವದ ಸಾಧನೆಯೆಂಬುದನ್ನು ಮಾನವ ಕುಲಕ್ಕೆ ಗರಿಮೂಡಿದಂತಾಗಿದೆ, ಇಷ್ಟೇ ಏಕೆ? ಸೂರ್ಯನಲ್ಲಿಗೂ ತನ್ನ ತಂತ್ರಜ್ಞಾನವನ್ನು ತಲುಪಿಸಿದ್ದಾನೆ. ಈ ವಿಜ್ಞಾನ, ತಂತ್ರಜ್ಞಾನಗಳು ಈ ಕಾಲದ ಬೆಳವಣಿಗೆ ತುಂಬಾ ಪ್ರಧಾನವಾಗಿದೆ ನಿಜ. ಆದರೆ ಆದಿ ಮಾನವನಿಂದ ಆಧುನಿಕ ಮಾನವನವರೆಗೆ ಮಾನವ ಕುಲ ತನ್ನ ಸಮಾಜ, ಸಂಸ್ಕೃತಿಗಳನ್ನು ಅರಸುತ್ತ ಬಂದು ತಾನು ಬೆಳೆದು ಬಂದ ಚಾರಿತ್ರಿಕ ಹೆಜ್ಜೆ ಗುರುತುಗಳನ್ನು ಕಂಡುಕೊಂಡಿದ್ದಾನೆ, ಹಾಗಾಗಿ ಪ್ರಪಂಚದಾದ್ಯಂತ ಈ ಮಾನವನ ಸಮಾಜ ಸಂಸ್ಕೃತಿಗಳು ಮಹತ್ವದ ಸ್ಥಾನ ಪಡೆದಿವೆ. ಇವುಗಳು ಕೂಡ ಪ್ರಕೃತಿಯನ್ನೆ ಅವಲಂಬಿಸಿವೆ, ಪ್ರಕೃತಿಯನ್ನು ಬಿಟ್ಟು ಮಾನವನನ್ನು ಕಲ್ಪಿಸಿ ಕೊಳ್ಳಲು ಸಾಧ್ಯವಿಲ್ಲ, ಅಂದರೆ ಅವನಿಂದ ಪ್ರಕೃತಿಯನ್ನು ಹೊರತುಪಡಿಸಿದರೆ, ಅವನಿಗೆ ಅಸ್ಥಿತ್ವವೇ ಇಲ್ಲವೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಅದೇ ರೀತಿ ಮಾನವನಂತೆ ಪ್ರಕೃತಿಯ ಸಕಲ ಜೀವಿಗಳು ಈ ನಿಸರ್ಗಾವಲಂಬಿಗಳಾಗಿರುವುದು ಸಹಜ. ಆದ್ದರಿಂದ ಪ್ರಕೃತಿಯಲ್ಲಿ ವಾಸಮಾಡುತ್ತಿರುವ ಪ್ರತಿ ಜೀವಿಗಳಿಗೂ ಅವುಗಳದೇ ಆದಾ ಸಮಾಜ, ಸಂಸ್ಕೃತಿಗಳು ಇರುತ್ತವೆ ಎಂಬ ತಿಳುವಳಿಕೆ, ಇಂತಹ ವಿಜ್ಞಾನ, ತಂತ್ರಜ್ಞಾನವುಳ್ಳ ಮಾನವನಿಗೆ ಇನ್ನೂ ಬಾರದೆ ಅವನಿಂದಾಗುತ್ತಿರುವ ಪ್ರಾಕೃತಿಕ ಮತ್ತು ಸಾಮಾಜಿಕ ದುರಂತಗಳು ದಿನೇ ದಿನೆ ಹೆಚ್ಚಾಗುತ್ತಿವೆ. ಈ ಜೀವಿಗಳ ಸಂಸ್ಕೃತಿ ಪ್ರಜ್ಞೆಯ ತಿಳುವಳಿಕೆ ಇರುವವರು; ಬೆರಳೆಣಿಕೆಯ ಜನರಾದ್ದರಿಂದ, ಇವರಿಂದ ಪ್ರಕೃತಿಯ ಪ್ರಧಾನ ರಕ್ಷಣೆ ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಸರ್ಕಾರಗಳಿಗೆ. ಆಡಳಿತ ಮತ್ತು ಬಂಡವಾಳ ಶಾಹಿಗಳಿಗೆ ಮಾನವ ಕೇಂದ್ರಿತ ಮಾನವಾಭಿವೃದ್ದಿಯೇ ಪ್ರಧಾನವಾದ್ದರಿಂದ ಇವರು ಮಾಡುವ ಎಲ್ಲಾ ಕಾರ್ಯಗಳು ಅಭಿವೃದ್ಧಿಯ ಹೆಸರಲ್ಲಿ, ಮಾನವರು ಕಂಡುಕೊಂಡ ಸಾಧನೆಯ ಗುರಿಗಳಿಂದ ಮಾನವನೇನು ಸಕಲ ಜೀವಿಗಳ ವಿನಾಶಕ್ಕೆ ದಾರಿ ಮಾಡಿರುವುದು ಅಭಿವೃದ್ದಿಯ ವಿಡಂಬನೆಯಾಗಿದೆ.

ಸಾಹಿತ್ಯ, ವಿಜ್ಞಾನ, ಸಮಾಜ ವಿಜ್ಞಾನ, ವಾಣಿಜ್ಯ ಮತ್ತು ವ್ಯವಾಹಾರಿಕ ವಿಜ್ಞಾನ, ಹಾಗೂ ತಂತ್ರಜ್ಞಾನ ಮತ್ತಿತರ ಜ್ಞಾನಶಾಖೆಗಳೆಲ್ಲಾ ಮಾನವ ಕೇಂದ್ರಿತ ಅಧ್ಯಯನ, ಮಾತು, ತತ್ವ–ಚಿಂತನೆ ಮತ್ತು ಬರಹಗಳೆಲ್ಲಾ ಸಹಜವಾಗಿ ಮುಂದುವರೆದುಕೊಂಡು ಬಂದಿವೆ. ಪೂರ್ವಕಾಲದಿಂದಲೂ ಇದೇ ಹಿನ್ನೆಲೆಯಿಂದ ಬೆಳೆದು ಬಂದಿದ್ದರೂ ಸಂವಿಧಾನ, ತತ್ವಶಾಸ್ತ್ರ, ಧರ್ಮಶಾಸ್ತ್ರಗಳು ನಿಸರ್ಗ ಸಿದ್ಧಾಂತದ ಬಗ್ಗೆ, ಅದರ ರಕ್ಷಣೆಯ ಬಗ್ಗೆ, ಪ್ರಕೃತಿಯ ಅನನ್ಯತೆಯ ಬಗ್ಗೆಯೂ ಮಾತಾಡಿವೆ. ಆದರೆ ಅವೆಲ್ಲಾ ಮನವನ ಬಳಕೆಗಾಗಿ ನಿಸರ್ಗದಲ್ಲಿ ಸಹಜವಾಗಿ ಹುಟ್ಟಿ ಬೆಳೆಯುತ್ತಿವೆ ಎಂದುಕೊಂಡು, ಜನ ಪ್ರಕೃತಿಯ ಬಳಕೆಗೆ ಮುಂದಾದದ್ದು ಸಹಜವಾಗಿದೆ. ಈ ಪ್ರವೃತ್ತಿ ಬೆಳೆದು ಬಂದು, ಇಂದು ಸಕಲ ಜೀವಹಾನಿಗೆ ಕಾರಣವಾಗಿ, ಅವನಿಂದ ಹಿಂಸಾವಾದಿ ಗುಣ ತತ್ವಗಳು ರೂಪುಗೊಂಡಿವೆ. ಇದರ ಮುನ್ನಾಲೋಚನೆ ಹೊಂದಿದ್ದ, ಭಾರತೀಯ ಬೌದ್ಧ ಮತ್ತು ಜೈನ ಧರ್ಮಗಳ ತತ್ವ–ಚಿಂತನೆಗಳ ಪ್ರತಿಪಾದನೆ ಮಾತ್ರ ಜೀವಕೇಂದ್ರಿತವಾಗಿವೆ. ಆದರೆ ಇವುಗಳ ಮೂಲ ಬೇರನ್ನು ಗ್ರಹಿಸಿ, ಅನುಸರಿಸಲಾಗದೆ, ಕೆಲವು ಸೀಮಿತ ತಿಳುವಳಿಕೆಗಳಿಂದ ಅವುಗಳನ್ನು ಮಾನವ ನೆಲೆಗೆ ತಂದು ವ್ಯಾಖ್ಯಾನಿಸಲಾಗಿದೆ. ಇಂತಹ ವ್ಯಾಖ್ಯಾನದ ಮಾತುಗಳು ದುರ್ಬಲ ಜನ–ಜೀವಿಗಳ ಪರ ಕಾಳಜಿಯನ್ನು ಎತ್ತಿ ಹಿಡಿದು ಅವನ್ನು ಮಾನವೀಯತೆ, ಮಾನವತ್ವ, ಮನುಷ್ಯತ್ವದಂತಹ ಮಾತುಗಳಿಗೆ ಜೋಡಿಸಲಾಗಿದೆ. ಮಾನವರು ತಮ್ಮ ಅಧ್ಯಯನದ ಚಿಂತನೆಯ ಅರಿವು ವೃದ್ಧಿಯಾದಂತೆ ನಾನಾ ರೀತಿಯ ಜ್ಞಾನದ ಕಣ್ಣು ತೆರೆದುಕೊಂಡ ನಂತರ; ಗಿಡ–ಮರ–ಸಸ್ಯ, ಹಕ್ಕಿ–ಪಕ್ಷಿ, ಪ್ರಾಣಿ, ಜಲಚರಗಳು ಮತ್ತಿತರ ಜೀವಿಗಳ ಬಗ್ಗೆ ಕಾಳಜಿ, ಕಳಕಳಿ ರೂಢಿಗೆ ಬಂದವು. ಅವುಗಳನ್ನು ಮಾನವೀಯತೆ, ನಾಗರೀಕತೆಯೆಂದು ಕರೆದು, ಈ ಮಾನವನ ನಡೆ, ನುಡಿ, ಆಚಾರ, ಸಂಪ್ರದಾಯಗಳನ್ನು ಸಂಸ್ಕೃತಿಯೆಂದು ಕರೆಯುವುದು ರೂಢಿಯಾಯಿತು. ಆನಂತರದಿಂದ ಪ್ರಕೃತಿಯ ಜೀವಿಗಳ ಬಗ್ಗೆಯೂ ಕಾಳಜಿ, ರಕ್ಷಣೆ ಮಾಡುವುದನ್ನು ಮನುಷ್ಯತ್ವ, ಮಾನವೀಯತೆಗಳೆಂದೇ ಗುರುತಿಸಲಾಗುತ್ತಿದೆ ನಿಜ.

ಇಲ್ಲಿ ಮಾನವನ ಪ್ರಧಾನ ಪಾತ್ರ ಮತ್ತು ಉದ್ದೇಶ ಯಾವುದಕ್ಕೆ ಬಳಕೆಯಾಗುತ್ತೊ ಅವೆಲ್ಲಾ ಮಾನವ ಕೇಂದ್ರಿತ ಕೆಲಸ ಕಾರ್ಯ–ಯೋಜನೆಗಳೆಂಬುದು ಮೇಲೆ ಪ್ರಸ್ತಾಪಿಸಿದಂತೆ ಸ್ಪಷ್ಟವಾಗಿದೆ. ಈ ಎಲ್ಲಾ ಹಿನ್ನೆಲೆಯಿಂದ ನೋಡಿದರೆ ಮಾನವನಂತೆ; ಪ್ರಕೃತಿಯ ಸಕಲ ಜೀವಿಗಳ ನಡವಳಿಕೆಗಳು ಅಂದರೆ ಹುಟ್ಟು, ಸಾವು, ಆಹಾರ, ಸಂತನೋತ್ಪತ್ತಿ, ಕುಟುಂಬ ಜೀವನ ಮತ್ತು ಸಾವು ಮುಂತಾದವುಗಳು ಪ್ರಕೃತಿ ಸಹಜ ನಡವಳಿಕೆಗಳಾಗಿವೆ. ಇವುಗಳಿಂದ ಕಲಿತ ಮಾನವನ ಜೀವನ ನಡವಳಿಕೆಗಳು ಮಾತ್ರ ನಾಗರಿಕತೆಯ ದಾರಿಯಲ್ಲಿ ಬೇರೆ ಸ್ವರೂಪದ ಅಭಿವ್ಯಕ್ತಿಗೊಳ್ಳುತ್ತಿವೆ. ಇವೆರಡು ಪ್ರತಿ ಹಂತದಲ್ಲೂ ಒಂದಕ್ಕೊಂದು ಸಾಮ್ಯವಿದ್ದರೂ ಇಲ್ಲದಂತಿರುವ ಜೀವನ ನಡವಳಿಕೆಗಳಾಗಿವೆ. ಹಾಗಾಗಿ ಮಾನವ ಮತ್ತು ಜೀವ ಸಂಕುಲಗಳ ಜೀವನ ನಡವಳಿಕೆಗಳ ಆಧಾರದ ಮೇಲೆ; ಮಾನವನಿಗಿರುವ ಸಂಸ್ಕೃತಿಗಳಂತೆ ಪ್ರಕೃತಿಯ ಸಕಲ ಜೀವಿಗಳಿಗೂ ಅವುಗಳ ಜೀವನ ಸಂಸ್ಕೃತಿಗಳಿವೆ ಎಂಬ ಸ್ವಾಭಾವಿಕ ಸತ್ಯವನ್ನರಿತು, ಇದುವರಿಗೂ ರೂಡಿಯಲ್ಲಿರುವ ಸಾಂಸ್ಕೃತಿಕ ಪರಿಕಲ್ಪನೆಯ ವ್ಯಾಖ್ಯಾನಗಳನ್ನು ಪುನರ್ ಪರಿಶೀಲಿಸಬೇಕಾಗಿದೆ. ಆದ್ದರಿಂದ ಇಂತಹ ತತ್ವ–ಚಿಂತನೆಗಳೇ ಬದಲಾಗಬೇಕೆಂಬ ಹಿನ್ನೆಲೆಯಿಂದ ಈ ವಿಷಯವನ್ನು ಚರ್ಚಿಸಿ, ಪರಿಶೋಧಿಸಲು ಈ ಸಂಶೋಧನೆಯನ್ನು ಕೈಗೆತ್ತಿಕೊಂಡಿದ್ದೇನೆ.

ಈ ಎಲ್ಲಾ ಹಿನ್ನೆಲೆಗಳಿಂದ ಜಾಗತಿಕ ಮತ್ತು ಪ್ರಾದೇಶೀಕ ಪರಿಸರ ಸಮಸ್ಯೆಗಳಿಗೆ ಹಾಗೂ ಜೀವಿಗಳ ಜೀವನ ಹಿಂಸೆಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಸಲುವಾಗಿ ಕೆಲವು ಸೂಕ್ಷ್ಮ ಮಾರ್ಗಗಳನ್ನು ಕಂಡುಕೊಳ್ಳಲು ಈ ಅಧ್ಯಯನದಿಂದ ಪರಿಶೋಧಿಸ ಬೇಕೆಂಬುದೆ ಇಲ್ಲಿಯ ಉದ್ದೇಶ. ಆದ್ದರಿಂದ ಇಲ್ಲಿಯ ಚರ್ಚಿತ ವಿಷಯಗಳು ವಿಶ್ವದಾಧ್ಯಂತ ಪಸರಿಸಬೇಕೆಂದು ಆಶಿಸಿ ಪ್ರಯತ್ನಿಸಲಾಗಿದೆ. ಮಾನವರಂತೆ ಜಗತ್ತಿನ ಜೀವಿಗಳಿಗೂ ಅವುಗಳದ್ದೆಯಾದ ಸ್ವಾಭಾವಿಕ ಜೀವನ ನಡವಳಿಕೆಗಳ ಸಂಸ್ಕೃತಿಯಿದೆ ಎಂದು ಪರಿಶೋಧಿಸುವುದೆ ಇಲ್ಲಿಯ ಮುಖ್ಯ ಉದ್ದೇಶವಾಗಿದೆ. ಇದರ ಮೂಲಕ ಮಾನವನಿಗಿರುವಂತೆ, ಪ್ರಕೃತಿಯ ಜೀವಿಗಳಾದ ಅಮೀಬ, ಎರೆಹುಳು, ಇರುವೆಗಳಂತಹ ಸೂಕ್ಷ್ಮ ಜೀವಿಗಳಿಗೂ ಪ್ರಧಾನ ಸ್ಥಾನವಿದೆ ಎಂದೂ ತಾತ್ವಿಕವಾಗಿ ಕಟ್ಟಿಕೊಡಬೇಕಾಗಿದೆ. ಈ ಮೂಲಕ ಜೀವಿಗಳ ಸಾಂಸೃತಿಕ ಮಹತ್ವ ಈ ಜೀವ ಸಂಕುಲಕ್ಕೆಲ್ಲಾ ಸಿಕ್ಕಿದರೆ ಸಾಕು, ಮಾನವನ ಎಲ್ಲಾ ಮೌಲ್ಯಗಳು ಬದಲಾಗಬಹುದೆಂಬ ನಂಬಿಕೆಯಿಂದ ಈ ವಿಷಯವನ್ನು ಪರಿಶೋಧಿಸಲು ಮುಂದಾಗಿದ್ದೇನೆ.

ಈ ಶೋಧಕ್ಕೆ ಕನ್ನಡ ಸಾಹಿತ್ಯವೆ ಕೇಂದ್ರವಾದದ್ದರಿಂದ ಈ ಅಧ್ಯಯನ ತುಂಬಾ ವಿಸ್ತರವಾದ ಕ್ಷೇತ್ರ. ಆದರೂ ಅದರ ಪರಿಶೋಧಕ್ಕಿಳಿದಾಗ ಜೀವ ಸಂಸ್ಕೃತಿಗೆ ಪೂರಕವಾದ ಮಾಹಿತಿ ಇಲ್ಲಿ ಪ್ರಾಚಿನ ಕನ್ನಡ, ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ನನ್ನ ಪರಿಕಲ್ಪನೆಗೆ ಅನುಗುಣವಾದ ಮಾಹಿತಿ ಚರ್ಚೆಯ ಕೊರತೆಯಿರುವುದರಿಂದ; ಆಧುನಿಕ ಕನ್ನಡ ಸಾಹಿತ್ಯದಲ್ಲೂ ತುಂಬಾ ವಿರಳವಾಗಿರುವುದರಿಂದ ನಾನು ಸಾಹಿತ್ಯದಲ್ಲಿ ಯಾವುದೆ ಒಂದು ಸೀಮಿತ ಕಾಲ ಕ್ಷೇತ್ರಗಳೆಂದು ಪರಿಗಣಿಸದೆ, ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬಹುಶಿಸ್ತೀಯ ನೆಲೆಯಲ್ಲಿ ಜೀವ ಸಂಸ್ಕೃತಿಗೆ ಪೂರಕವಾಗಿ ಯಾವ ಯಾವ ವಿಷಯ ವಿಚಾರದಲ್ಲಿ ಮಾಹಿತಿ ಸಿಗುತ್ತದೊ ಆ ಎಲ್ಲಾ ವಿಷಯ ಮಾಹಿತಿಗಳನ್ನು ಬಳಸಿಕೊಂಡು ಇಲ್ಲಿ ಪರಿಶೋಧಿಸ ಬಹುದೆಂದು ಹೊರಟಿದ್ದೇನೆ. ಏಕೆಂದರೆ "ಜೀವ ಸಂಸ್ಕೃತಿ" ಎಂಬ ವಿಷಯ ಪರಿಕಲ್ಪನೆಯೇ ಹೊಸದು. ಇದು ಸಾಹಿತ್ಯ, ಸಮಾಜ ವಿಜ್ಞಾನ, ವಿಜ್ಞಾನ ಇನ್ನಿತರೆ ಯಾವ ವಿಷಯಗಳಲ್ಲೂ ಹೆಚ್ಚು ಚರ್ಚೆಗೆ ಒಳಪಟ್ಟು ಬಳಕೆಯಾಗಿಲ್ಲಾ. ಅದ್ದರಿಂದ ಈ ವಿಷಯ ಪ್ರಾಚಿನ, ಮಧ್ಯಕಾಲಿನ ಸಾಹಿತ್ಯದಲ್ಲಿ ಬಳಕೆಯಾಗದಿರುವುದರಿಂದ ಜೀವ ಸಂಸ್ಕೃತಿಯಿಂದ ವೈಜ್ಞಾನಿಕವಾಗಿ ಪರಿಶೀಲಿಸಿ, ನಂತರ ಜೀವಿಗಳಾಗಿ ರೂಪುಗೊಂಡಿರುವ ವಿಕಾಸ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ಜೀವಿಗಳ ಸಂಸ್ಕೃತಿಯ ಪರಿಕಲ್ಪನೆಗೆ ಒಳಪಡಿಸಿಕೊಂಡು ಪರಿಶೀಲಿಸಲಾಗಿದೆ. ಈ ಹಿನ್ನೆಲೆಯಿಂದ ತುಂಬಾ ಮಿತಿಯೊಳಗೆ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಸಂದರ್ಭಕ್ಕನುಗುಣವಾಗಿ, ಹಾಗೂ ವಿಷಯಕ್ಕನುಗುಣವಾಗಿ ಬಳಸಿಕೊಳ್ಳಲಾಗಿದೆ, ಇವುಗಳ ಜೊತೆಗೆ ಶಾಸನ, ವಿಜ್ಞಾನ, ಸಮಾಜ ವಿಜ್ಞಾನ, ಮಾನವ ಶಾಸ್ತ್ರ, ಮನೋಶಾಸ್ತ್ರ, ಜಾನಪದ ಸಾಹಿತ್ಯ, ಪತ್ರಿಕಾ ಬರಹಗಳನ್ನೆಲ್ಲ ಇಲ್ಲಿ ಬಳಸಿಕೊಂಡು ಪರಿಶೋಧಿಸಲಾಗಿದೆ. ಹಾಗಾಗಿ ಇಲ್ಲಿಯ ಅಧ್ಯಯನದ ವ್ಯಾಪ್ತಿ ತುಂಬಾ ವಿಸ್ತಾರವಾಗಿದೆ ನಿಜ. ಇಲ್ಲಿ "ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ" ಎಂದು ಶೀರ್ಷಿಕೆಯಿದ್ದರೂ, ಎಲ್ಲಾ ಕಾಲದ ಸಾಹಿತ್ಯವನ್ನು ಇಲ್ಲಿ ಬಳಸಿಕೊಳ್ಳಲಾಗಿಲ್ಲ. ಏಕೆಂದರೆ ನನ್ನ ವಿಷಯ ಕೇಂದ್ರಿತ ಮಾಹಿತಿ ಯಾವ ಸಾಹಿತ್ಯದಲ್ಲಿ ಸಿಗಲಿಲ್ಲವೋ ಆ ಸಾಹಿತ್ಯವನ್ನು ಈ ಅಧ್ಯಯನದಲ್ಲಿ ಕಾಟಚಾರಕ್ಕಾಗಿ ಬಳಸಿಕೊಳ್ಳಲಾಗಿಲ್ಲ. ನನ್ನ ವಿಷಯ ಸಮರ್ಥನೆಯ ಪ್ರತಿಪಾದನೆಗಾಗಿ ಯಾವ ವಿಷಯ ಎಲ್ಲಿ ಸಿಕ್ಕರೂ ತೆಗೆದುಕೊಂಡು ಬಳಸಿ, ಎಲ್ಲವನ್ನೂ ಸಂಯುಕ್ತ ಚರ್ಚೆಯ ಮಾದರಿಯನ್ನು ಅನುಸರಿಸಿ; ಬಹುಶಿಸ್ತೀಯ, ಅಂತರ್ ಶಿಸ್ತೀಯ ಸಂಶೋಧನೆಯಿಂದ, ಇನ್ನೊಂದಿಷ್ಟು ಹೊಸ ಹೊಸ ಪರಿಕಲ್ಪನೆಗೆ, ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಪಿ.ಡಿ.ಎಫ್ ಸಂಶೋಧನಾ ವಿಷಯ ಮೇಲೆ ಹೇಳಿದಂತೆ "ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ" ಈ ಸಂಶೋಧನಾ ಬರಹದಲ್ಲಿ ಮೊದಲು ಸಂಶೋಧನೆಯ ಹಿನ್ನೆಲೆ, ಉದ್ದೇಶ ಮತ್ತು ವ್ಯಾಪ್ತಿಯನ್ನು ಪೀಠಿಕಾ ಸ್ವರೂಪದಲ್ಲಿ ದಾಖಲಿಸಲಾಗಿದೆ. ಮೊದಲ ಅಧ್ಯಯದಲ್ಲಿ ಎಂದಿದ್ದರೂ ಇಲ್ಲಿ ಕೇವಲ ಕನ್ನಡ ಸಾಹಿತ್ಯ ಕ್ಷೇತ್ರವಾದರೂ ಆ ಕ್ಷೇತ್ರದಲ್ಲಿ ಮಾಹಿತಿ ಕೊರತೆಯಾದದ್ದರಿಂದ, ಬೇರೆ ಬೇರೆ ಕ್ಷೇತ್ರಗಳಿಂದ ತಂದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಬೇರೆ ಕಡೆಯಿಂದ ತಂದ ವಿಜ್ಞಾನದ ಮಾಹಿತಿಗಳನ್ನಿಟ್ಟುಕೊಂಡು ಮೊದಲ ಅಧ್ಯಾಯದಲ್ಲಿ ಜೀವ–ಜೀವಿ–ಜೀವನ ಸಂಸ್ಕೃತಿಯ ಪರಿಕಲ್ಪನೆಗೆ, ಪೂರಕವಾದ ಸಮರ್ಥನೆಗೆ ಬಳಸಿಕೊಂಡು ಇಲ್ಲಿ ಪರಿಶೀಲಿಸಲಾಗಿದೆ.

ಇಲ್ಲಿಯ ಸಂಶೋಧನೆ ವಿಷಯ ಕೇಂದ್ರಿತವಾಗಿದೆಯೆ ಹೊರತು, ಕ್ಷೇತ್ರ ಕೇಂದ್ರಿತವಾಗಿಲ್ಲ. ಜೊತೆಗೆ ಲೇಖಕ, ಚಿಂತಕರು ಕೇಂದ್ರಿತವಾಗಿಲ್ಲವೆಂಬುದೆ ಈ ಸಂಶೋಧನೆಯ ವಿಶೇಷ. ಈ ಎಲ್ಲಾ ಹಿನ್ನೆಲೆ, ಉದ್ದೇಶ, ವ್ಯಾಪ್ತಿಗಳ ಸುತ್ತ ಚಲಿಸಿ ಸಿಕ್ಕ ಮಾಹಿತಿಗಳ ಆಧಾರದ ಮೇಲೆ ಪರಿಶೀಲಿಸಿ ಜೀವ ಸಂಸ್ಕೃತಿಯ ಪರಿಕಲ್ಪನೆಯನ್ನು ಕಟ್ಟಿಕೊಡಲಾಗಿದೆ. ಮೊದಲ ಮತ್ತು ಕೊನೆಯ ಭಾಗಗಳನ್ನು ಬಿಟ್ಟು; 6 ಅಧ್ಯಾಯಗಳಲ್ಲಿ ಜೀವಿಗಳ ಹಲವು ಬಗೆಗಳನ್ನು ಕ್ರೂಡಿಕೃತ ಭಾಗಗಳನ್ನಾಗಿ (ಸಸ್ಯ, ಪ್ರಾಣಿ, ಪಕ್ಷಿ–ಕೀಟ) ಮಾಡಿಕೊಂಡು ತುಂಬಾ ಚರ್ಚಿಸಿ, ಜೀವ, ಜೀವಿಗಳ ಮತ್ತು ಜೀವನ ಸಂಸ್ಕೃತಿಗಳನ್ನು ಪರಿಶೀಲಿಸಿ, ದಾಖಲಿಸಿ, ವ್ಯಾಖ್ಯಾನಗೊಳಿಸಿ ಸ್ಪಷ್ಟಪಡಿಸಲು ಪ್ರಯತ್ನಿಸಲಾಗಿದೆ.

ಪ್ರಪಂಚದ ಸರ್ವವ್ಯಕ್ತಿ, ವ್ಯವಸ್ಥೆ, ರಂಗಗಳನ್ನೆಲ್ಲ ನಿದ್ರೆಗೆಡಿಸುತ್ತಿರುವ ನಿಸರ್ಗ ಪರಿಸರದ ಸಕಲ ಜೀವಿಗಳಲ್ಲಿ ಏರುಪೇರುಗಳುಂಟಾಗಿ, ನಾನಾ ವೈಪರಿತ್ಯಗಳ ಪರಿಣಾಮ ಎಷ್ಟೋ ಜೀವ ಸಂಕುಲ ವಿನಾಶಗೊಂಡಿವೆ. ಇನ್ನೂ ಕೆಲವು ವಿನಾಶದಂಚಿನಲ್ಲಿವೆ. ಇಂತಹ ಪ್ರಾಕೃತಿಕ ಸಮಸ್ಯೆಗಳಿಗಿಂತ ಹೆಚ್ಚಾದ ಮಾನವ ಸಂಕುಲದ ಸಮಸ್ಯೆಗಳಿಲ್ಲ. ಆದರೂ ಈಗ ಅವನ ಸಮಸ್ಯಗಳೇ ಪ್ರಧಾನವಾಗಿವೆ. ಇವೆಲ್ಲಾ ರಾಜಕಾರಣಿಗಳು ಮತ್ತು ಬಂಡವಾಳ ಶಾಹಿಗಳು ತಂದಿಟ್ಟ; ಪ್ರಕೃತಿ ಮೇಲಿನ ಆಕ್ರಮಣಕಾರಿ ಯೋಜನೆ, ಸಿದ್ಧಾಂತಗಳ, ಕಾರ್ಯಚಟುವಟಿಕೆಗಳಿಂದ ಆಗುತ್ತಿರುವ ಪ್ರಕೃತಿಯ ಅಸಮತೋಲನದ ಪರಿಣಾಮಗಳೇ ಕಾರಣವಾಗಿವೆ. ಇವುಗಳ ಮೂಲ ಪರಿಹಾರ ಮಾರ್ಗಗಳ ಬಗ್ಗೆ ಯೋಚಿಸಿ, ರೂಪಿಸಿಕೊಳ್ಳದಿರುವುದೆ ಮಾನವನ ದೌರ್ಬಲ್ಯ. ಇದು ಮಾನವರ ಸ್ಥಳಿಯ ಪರಿಸರ, ಸಾಮಾಜಿಕ, ಸಾಂಸೃತಿಕ ಸಮಸ್ಯೆಯು ಹೌದು. ಅಂತಾರಾಷ್ಟ್ರೀಯ ಸಮಸ್ಯೆಯೂ ಹೌದು. ರೈತರಿಂದ ಹಿಡಿದು ಪರಿಸರವಾದಿಗಳತನಕ, ನಕ್ಸಲಿಯರಿಂದ ಹಿಡಿದು ಈ ಸಮಾಜದ ಅನೇಕ ವರ್ಗಗಳ ಜನಸಾಮಾನ್ಯರು ಸೇರಿ; ಈಗೀಗ ನಿಸರ್ಗ ಜೀವಿಗಳ ಬಗ್ಗೆ ತಮ್ಮ ಕಾಳಜಿಯನ್ನು ತೋರಿಸುತ್ತಿದ್ದಾರೆ. ಹೀಗಿದ್ದು ಸಾಹಿತ್ಯ ಇದರಿಂದ ದೂರವಾಗಿರಲು ಸಾಧ್ಯವೆ? ನಿಧಾನವಾಗಿ ಆಧುನಿಕ ಕನ್ನಡ ಸಾಹಿತ್ಯದ ಒಳಗೆ ಈ ಪರಿಸರ ಸಂವೇದನೆ ಅನೇಕ ರೂಪ, ರೀತಿಗಳಲ್ಲಿ ಪ್ರವೇಶ ಮಾಡುತ್ತಿದೆ. ಇದಕ್ಕೆ ಕಾರಣ, ಲೇಖಕರಿಗೆ ಬಹಳ ಪ್ರಿಯವಾದ ನಿಸರ್ಗ ಪರಿಸರ ನಾಶಗೊಳ್ಳುತ್ತಿರುವುದು ಮತ್ತು ಅದರೊಳಗೆ ಬದುಕುತ್ತಿರುವ ಜೀವಿಗಳ ಸಮುದಾಯಗಳು ತಲ್ಲಣಗೊಳ್ಳುತ್ತಿರುವುದು. ಗುಳುಮಾವಿನ ಮರ ತನ್ನ ಚಕ್ಕೆಯನ್ನು ಕಳೆದುಕೊಳ್ಳುವುದು, ಒಂದು ಮರದ ಅಸ್ತಿತ್ವದ ಪ್ರಶ್ನೆ ಮಾತ್ರವಾಗಿಲ್ಲ. ಅದರ ಸುತ್ತಮುತ್ತಲ ಜೀವಿಗಳ ಜೀವನ ಸಂಸ್ಕೃತಿಯ ಅಸ್ಥಿತ್ವವೂ ಸೇರಿಕೊಂಡಿದೆ. ಹಾಗೆಯೆ ಒಂದು ಹಳ್ಳಿಯ ಅಸಹಾಯಕ ಕುಟುಂಬವೊಂದು, ತನ್ನ ಅಸ್ಥಿತ್ವ ಕಳೆದುಕೊಳ್ಳುತ್ತಿರುವುದು ಇದರ ಜೊತೆಗೆ ಸೇರುತ್ತದೆ. ಹೀಗಾಗಿಯೇ ಪರಿಸರ ಸಮಸ್ಯೆ ಏಕಕಾಲಕ್ಕೆ ಸ್ಥಳೀಯ ಸಮಸ್ಯೆಯಾಗಿರುವಂತೆ ಜಾಗತಿಕ ಸಮಸ್ಯೆಯೂ ಆಗಿದೆ. ಯಾಕೆಂದರೆ, ಪ್ರಾಪಂಚೀಕರಣ ಪ್ರಕ್ರಿಯೆಯಲ್ಲಿ ಸ್ಥಳೀಯವಾದುದರ ಮೇಲೆ ಜಾಗತಿಕ ಆರ್ಥಿಕ ರಾಜಕೀಯ ಚಲನೆಗಳು ವಿಚಿತ್ರ ರೀತಿಯಲ್ಲಿ ಪರಿಣಾಮ ಬೀರುತ್ತಿರುವ ಸಂದರ್ಭವಿದು. ಹೀಗಾಗಿ ಪರಿಸರ ಸಂವೇದನೆಯು ಅನಿವಾರ್ಯವಾಗಿ ಅಂತರಾಷ್ಟ್ರೀಯ ಚೌಕಟ್ಟಿನ ಒಳಗೆ ನಿಲ್ಲುವ ಸಂಗತಿಯಾಗಿದೆ. ಅದರಲ್ಲೂ ಭಾರತದಂತಹ ದೇಶಗಳಲ್ಲಿ ಬರೆಯುತ್ತಿರುವಂತಹ ಲೇಖಕರಿಗೆ ಪರಿಸರದ ಪ್ರಶ್ನೆ ತುಂಬ ಸಂಕೀರ್ಣವಾದುದ್ದಾಗಿದೆ. ಏಕೆಂದರೆ ಕಚ್ಚಾ ಸಾಮಗ್ರಿ ಹಾಗೂ ಹೊಸ ಹೊಸ ಮಾರುಕಟ್ಟೆಗಳನ್ನು ಹುಡುಕಿಕೊಂಡು ಈಗ ಭಾರತದಂತಹ ದೇಶಗಳಿಗೆ ಬಂಡವಾಳಶಾಹಿ ರಾಷ್ಟ್ರಗಳು ಪ್ರವೇಶಿಸುತ್ತಿವೆ. ಆಳುವ ದೇಶೀಯ ಪ್ರಭುತ್ವಗಳು ಇದಕ್ಕೆ ಮಣಿಯುತ್ತಿವೆ. ಇವರ್ಯಾರಿಗೂ ಜಗತ್ತಿನ ಜೀವರಾಶಿಗಳ ಜೀವನ ಸಂಸ್ಕೃತಿಯ ಪರಿಜ್ಞಾನವಿಲ್ಲದ ಕಾರಣ, ಭವಿಷ್ಯದಲ್ಲಿ ಪ್ರಕೃತಿಯ ಪರಿಣಾಮದ ಬಗ್ಗೆ ಯಾವ ಪರಿವೆಯೂ ಇಲ್ಲದೆ, ಮುಂದಿನ ಈ ಪೀಳಿಗೆಯ ಮಾನವನ ಬದುಕು ಏನಾಗುತ್ತದೆ ಎಂಬ ಆಲೋಚನೆಯನ್ನೂ ಮಾಡದೆ, ಈ ಆರ್ಥಿಕ, ರಾಜಕಾರಣಕ್ಕೆ ಕೆಂಪು ಹಾಸು ಹಾಸುತ್ತಿವೆ. ಆದ್ದರಿಂದಲೇ ಪರಿಸರ ಈಗ ಇಕಾಲಜಿ ಅಸಮತೋಲನದ ಪ್ರಶ್ನೆಯಾಗಿ ಉಳಿದಿಲ್ಲ. ಅದೊಂದು ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಭಾವನಾತ್ಮಕ ಸಮಸ್ಯೆ ಕೂಡ ಆಗಿ ಮಾರ್ಪಟ್ಟಿದೆ. ಈ ಹಿನ್ನೆಲೆಯಿಂದ ಅನಿವಾರ್ಯವಾಗಿ ಲೇಖಕರು ತಮ್ಮ ಕೃತಿಗಳ ಒಳಗೆ ಈ

ಸಂವೇದನೆಗೆ ಅವಕಾಶ ಮಾಡಿ ಕೊಡುತ್ತಿದ್ದಾರೆ. ತಮ್ಮ ಕೃತಿಗಳಲ್ಲಿ ಇದಕ್ಕೆ ಬೇರೆ ಬೇರೆ ಆಯಾಮವನ್ನೂ ಆಕಾರವನ್ನೂ ಕೊಡುತ್ತಿದ್ದಾರೆ. ಕನ್ನಡ ಸಾಹಿತ್ಯವು ಒಳಗೊಳ್ಳುತ್ತಿರುವ ಈ ಹೊಸ ವಸ್ತು, ಹೊಸ ಸಂವೇದನೆ, ಹೊಸ ಆಕರಗಳನ್ನು ಕುರಿತು ಆಲೋಚಿಸುವುದು ತುಂಬಾ ಉಪಯುಕ್ತವಾಗಿದೆ.

ಪ್ರಾಕೃತಿಕ ಜೀವ ಸಂಕುಲಗಳ ಇಂತಹ ಪರಿಸರ ಸಮಸ್ಯೆ ಯಾವುದೇ ಒಂದು ಜಾತಿ, ಧರ್ಮ, ದೇಶದ ಸಮಸ್ಯೆಯಾಗಿಲ್ಲ. ಇದು ಇಡೀ ಜಗತ್ತಿನ ಜೀವಗಣಗಳ ಜೀವನ್ಮರಣದ ಪ್ರಶ್ನೆಯಾಗಿ ಕಾಡುತ್ತಿದೆ. ಆದ್ದರಿಂದಲೇ ಎಲ್ಲಾ ರಾಷ್ಟ್ರಗಳು ಪರಿಸರದ ರಕ್ಷಣೆಯ ಬಗ್ಗೆ ಧ್ವನಿ ಎತ್ತುತ್ತಿವೆ. ಆದರೆ ಈ ಸಮಸ್ಯೆಯ ಮೂಲ ಬೇರನ್ನು ಕಂಡುಕೊಂಡು ಅದರ ಪರಿಹಾರ ಮಾರ್ಗಗಳನ್ನು ಕಾರ್ಯ ರೂಪಕ್ಕೆ ತರದಿರುವ ಕಾರಣ ಪರಿಸರ ಸಮಸ್ಯೆ ಸಮಸ್ಯೆಯಾಗಿಯೇ ಎಲ್ಲರನ್ನು ಕಾಡುತ್ತಿದೆ. ಇದರ ಪರಿಣಾಮವಾಗಿ ಜಗತ್ತಿನ ಹಲವಾರು ಅಮಾಯಕ ಜೀವಿಗಳನ್ನು ಮತ್ತು ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. ಪರಿಸರ ವಿಕೋಪದ ಮುನ್ಸೂಚನೆಗಳಿರುವ ಕಡೆ ಅಲ್ಲಿಯ ಜನರ ನಿದ್ರೆಗೆಡಿಸುತ್ತಿದೆ. ಈ ಮಾತಿಗೆ ಇಂದು ಸಂಭವಿಸುತ್ತಿರುವ ಚಂಡಮಾರುತ, ಭೂಕಂಪ, ಬರಗಾಲಗಳು ಮತ್ತು ವಿಚಿತ್ರಕಾರಕ ರೋಗ ರುಜಿನಗಳೇ ಸಾಕ್ಷಿ. ಹಾಗಾಗಿ ಈ ಜಗತ್ತಿನ ಮೂಲಭೂತವಾದ ಸಮಸ್ಯೆ ಪರಿಸರ ಸಮಸ್ಯೆಯೇ ಹೊರತು ಬೇರೆ ಯಾವುದು ಅಲ್ಲ. ಉಳಿದ ಏನೇ ಸಮಸ್ಯೆಗಳಿದ್ದರೂ ಅವು ನಂತರದವು. ಹೀಗಿದ್ದರೂ ಜಗತ್ತಿನ ಹೆಚ್ಚು ರಾಷ್ಟ್ರಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ಉದಾಸೀನ ಮಾಡುತ್ತಿವೆ. ಕೆಲವು ರಾಷ್ಟ್ರಗಳು ಮಾತ್ರ ಸ್ವಲ್ಪ ಗಮನ ಹರಿಸುತ್ತಿವೆ. ಆದರೆ ಇದು ಜಗತ್ತಿನ ಸಮಸ್ಯೆಯಾಗಿರುವುದರಿಂದ ಇಡೀ ಜಗತ್ತೆ ಒಂದಾಗಿ ನಿರ್ದಿಷ್ಟ ಕಾರ್ಯ ಯೋಜನೆಗಳನ್ನು ಒಂದೇ ಗುರಿಯಿಂದ ಕೈಗೊಂಡು ಮುಂದುವರಿಸಬೇಕು. ಇಲ್ಲದಿದ್ದರೆ ನಾಳೆಯ ಜೀವಿಗಳ ಜೀವಂತಿಕೆಯೇ ಕಷ್ಟ. ಈ ಕಾರಣದಿಂದಲೇ ಕನ್ನಡ ಸಾಹಿತ್ಯ ಇಂತಹ ಪರಿಸರ ಸಮಸ್ಯೆಗೆ ಹೇಗೆ ಸ್ಪಂದಿಸುತ್ತಿದೆ? ಈ ಸಮಸ್ಯೆಯ ಮೂಲವೇನು? ಇದರ ಬೆಳವಣಿಗೆಗೆ ಕಾರಣವೇನು? ಪರಿಸರ ಸಮತೋಲನ ಸ್ಥಿತಿಯ ಮಾರ್ಗಗಳೇನು? ಮುಂತಾದ ಅಂಶಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಈ ಸಮಸ್ಯೆಯ ಆಳ ಅಗಲ, ಸೂಕ್ಷ್ಮತೆಯನ್ನು ಕಂಡುಕೊಳ್ಳುವ ಉದ್ದೇಶದಿಂದ ಈ ಕೃತಿಗೆ ಕನ್ನಡ ಸಾಹಿತ್ಯವನ್ನು ಬಳಸಿಕೊಳ್ಳಲಾಗಿದೆ. ಇದರ ಮೂಲಕ ಪರಿಸರ ಸಂವೇದನೆಯನ್ನು ಕನ್ನಡ ಸಾಹಿತ್ಯವು ಯಾವ ಬಗೆಯಲ್ಲಿ ಜೀವನ ಮೌಲ್ಯಗಳ ಹೊಸ ಪ್ರಜ್ಞೆಯ ಹುಡುಕಾಟಕ್ಕೆ ಒಂದು ನೆಪವನ್ನಾಗಿ ಮಾಡಿಕೊಳ್ಳುತ್ತಾ ಇದೆ ಎಂಬುದನ್ನು ಗುರುತಿಸುವುದು ಕೂಡ ಈ ಕೃತಿಯ ಮುಖ್ಯ ಆಶಯವಾಗಿದೆ. ಹೀಗೆ ಪರಿಸರ ಸಂವೇದನೆಯು ಜೀವ ಸಂಸ್ಕೃತಿಗಳ ಸಂವೇದನೆಯಾಗಿ ಕನ್ನಡ ಸಾಹಿತ್ಯ ಕೃತಿಗಳ ಮೂಲಕ ಅನಂತವಾಗಿ ಹಲವು ರೂಪದಲ್ಲಿ ಹಲವು ಆಕಾರಗಳಲ್ಲಿ ಮೈ ಪಡೆಯುತ್ತ, ವಿಶಿಷ್ಟ ಜೀವನ ದರ್ಶನವನ್ನು ಹೊಮ್ಮಿಸುತ್ತ ಇರುವುದನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಪರಿಸರ, ಜೀವಿಗಳು ಎಂದೊಡನೆ ಯಾವ ಪರಿಸರ? ಯಾವ ಜೀವಿಗಳು ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಏಕೆಂದರೆ ಇಂದು ಪರಿಸರ, ಜೀವಿಗಳ ವ್ಯಾಪ್ತಿ ತುಂಬ ವಿಸ್ತಾರವಾಗಿ ಬೆಳೆಯುತ್ತಿದೆ. ಆದ್ದರಿಂದಲೇ ಮೇಲೆ ಹೇಳಿದಂತೆ ಇಂದು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ಭಾವುಕ, ಬೌದ್ಧಿಕ ಹೀಗೆ ನಾನಾ ರೀತಿಯ ಪರಿಸರಗಳನ್ನಾಗಿ ಒಡೆದು ನೋಡುವ ಪರಿಪಾಠ ಬೆಳೆದಿದೆ. ಇವೆಲ್ಲಾ ಮಾನವ ಸಮಾಜ ಕಾರ್ಯಗಳನ್ನು ಕೇಂದ್ರ ಮಾಡಿಕೊಂಡ ಕಟ್ಟಲ್ಪಟ್ಟ ಪರಿಸರಗಳು, ಆದರೆ ಇಲ್ಲೇಲ್ಲೂ ಪ್ರಕೃತಿಯ ಇನ್ಯಾವ ಜೀವಿಗಳು ಇಲ್ಲ. ಹಾಗಾಗಿ ಇಲ್ಲಿಯ ಸಂಶೋಧನೆ ಮಾನವನ ಸಮಾಜ ಸಂಸ್ಕೃತಿಯಂತೆ ಜಗತ್ತಿನ ಪ್ರತಿಯೊಂದು ಜೀವಕ್ಕೂ ಅವುಗಳದೇ ಆದಾ ಸಮಾಜ ಸಂಸ್ಕೃತಿಯಿದೆ ಎಂಬುದನ್ನು ಈ ಅಧ್ಯಯದಲ್ಲಿ ಪರಿಶೋಧಿಸಲು ಮುಂದಾಗಿದ್ದೇನೆ. ಇವುಗಳ ಜೊತೆಗೆ ವಿಶೇಷವಾಗಿ ತಾಳ್ತಾಜೆ ವಸಂತ ಕುಮಾರ ಅವರು ತಮ್ಮ "ಪರಿಸರ ಪ್ರಜ್ಞೆಯ ನೆಲೆಗಳು" ಎಂಬ ಲೇಖನವನ್ನು 9–11–97 ರ ಉದಯವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಅವರು ನೈತಿಕ ಪರಿಸರ, ಸಂವಹನ ಪರಿಸರಗಳನ್ನು ಗುರುತಿಸಿದ್ದಾರೆ. ಈ ಕ್ರಮ ಪರಿಸರ ಅಧ್ಯಯನದ ಆಳ ಮತ್ತು ಸೂಕ್ಷ್ಮತೆಯನ್ನು ಅರಿಯುವುದಕ್ಕಾಗಿ ನಡೆಯುತ್ತಿದೆಯೇ ಹೊರತು, ಜೀವ ಸಂಸ್ಕೃತಿಗಳ ಆಳ ಅಗಲಗಳನ್ನು ಕುರಿತವಾಗಿಲ್ಲ. ಹಾಗೆ ನೋಡಿದರೆ ಇಲ್ಲಿ ಚರ್ಚಿತ ಅಂಶಗಳು ಮಾನವನ ಚಿಂತನೆ, ವರ್ತನೆ, ಕ್ರಿಯೆಗಳಿಂದಲೇ ಸೃಷ್ಟಿಯಾಗಿ ಸಮಾಜದ ಒಂದೊಂದು ಅಂಗವಾಗಿ ರೂಪುಗೊಳ್ಳುತ್ತಿವೆ. ಆದ್ದರಿಂದ ಇವೆಲ್ಲ ಸಾಮಾಜಿಕ ಪರಿಸರದೊಳಗೆ ಸೇರುತ್ತವೆ. ಇದರೊಳಗೆ ಮಾನವ ಮಾನವರೊಡನೆ ನಡೆಯುವ ಜಾತಿ ವರ್ಗ, ಧರ್ಮಗಳ ನಡುವೆ ಹಿಂಸೆ, ಅಸಮಾನತೆ, ತಾರತಮ್ಯ ಮುಂತಾದ ಪ್ರಕ್ರಿಯೆಗಳು ಹೆಚ್ಚಾಗಿವೆ.

ಸಾಮಾಜಿಕ ಪರಿಸರ ಸೃಷ್ಟಿಸಿದಂತಹ ಸಮಸ್ಯೆಗಳ ಪರಿಣಾಮದಿಂದಾಗಿ ಮಾನವನೇನು ಇಡೀ ಜೀವ ಸಮುದಾಯದ ಬೇರನ್ನೆ ನಾಶಮಾಡುವಂತೆ ನೈಸರ್ಗಿಕ ಅಥವಾ ಪ್ರಾಕೃತಿಕ ಜೀವ ಸಂಕುಲಗಳ ಸಾಂಸ್ಕೃತಿಕ ಪರಿಸರ ಸಮಸ್ಯೆಯಾಗಿ ಉಲ್ಬಣವಾಗಿದೆ. ಅಂದರೆ ಇದರೊಳಗೆ ಮಾನವ ಸಾಮಾಜಿಕ ಸಮಸ್ಯೆಗಳ ಬೇರುಗಳು

ಪ್ರಬಲವಾಗಿವೆ. ಈ ಮಾತಿಗೆ ಹೆಜ್ಜಾಲ, ಚಿದಂಬರ ರಹಸ್ಯ, ಕರ್ವಾಲೊಗಳಂತಹ ಕಾದಂಬರಿ ಕಥನವೇ ಸಾಕ್ಷಿ. ಹಾಗಾಗಿ ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರ, ಸಂಸ್ಕೃತಿಗಳೆಂಬ ಎರಡು ಪ್ರಧಾನ ಭಾಗಗಳ ಸಂಕೀರ್ಣ ಜಾಲದ ಸೂಕ್ಷ್ಮತೆಯನ್ನು ಕಂಡುಕೊಳ್ಳ ಬೇಕಾಗಿದೆ. 'ಸಾಮಾಜಿಕ ಪರಿಸರ'ದ ನಾನಾ ಆಳ, ಹೊಳವು, ತೊಡಕುಗಳನ್ನು ಇಲ್ಲಿ ಪರಿಶೀಲಿಸ ಬೇಕಾಗಿದೆ.

ಒಟ್ಟಾರೆ "ಪರಿಸರ' ಪದ ಇಕಾಲಜಿಗೆ ಪರ್ಯಾಯವಾಗಿ ಇಂಗ್ಲೀಷಿನ (Environment) ಗೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ಜಗತ್ತಿನ ಸಮಸ್ತ ಜೀವರಾಶಿಯನ್ನು ಒಂದು ಎಳೆಯಲ್ಲಿ ಬಂಧಿಸಿರುವ ಖ್ಯಾತಿ ಈ ಇಕಾಲಜಿ ವಿಜ್ಞಾನಕ್ಕೆ ಸಂದಿದೆ. ಇಕಾಲಜಿ ಎಂಬ ಶಬ್ದ ಗ್ರೀಕ್ ಮೂಲ ಐಕೋಸ್ (Oikos) ಶಬ್ದದಿಂದ ಬಂದಿದೆ. ಐಕೋಸ್ ಎಂದರೆ ಮನೆ ಎಂದರ್ಥ. ಒಂದು ಮನೆಯ ಒಟ್ಟು ಚಟುವಟಿಕೆಗಳಂತೆ ವಿಶ್ವದ ಜೈವಿಕ ಚಟುವಟಿಕೆಗಳನ್ನು ಈ ಪದ ಪ್ರತಿನಿಧಿಸುತ್ತದೆ. ಇಕಾಲಜಿಯು ಕ್ರಮೇಣ ಒಂದು ನಿರ್ದಿಷ್ಟ ಪರಿಸರ (Environment) ದಲ್ಲಿ ಬದುಕುವ ಜೀವಿಗಳ ನಡುವಿನ ಪರಸ್ಪರ ಸಂಬಂಧಗಳಿಂದ ಉಂಟಾದ ಜೀವವ್ಯವಸ್ಥೆ ಹಾಗೂ ಆ ಪರಿಸರದ ಭೌತಿಕ ಅಂಶಗಳು 'ಮಣ್ಣು, ಗಾಳಿ, ನೀರು, ನೆರಳು, ಬೆಳಕು' ಇತ್ಯಾದಿ ಜೈವಿಕ ವ್ಯವಸ್ಥೆಯ ಮೇಲೆ ಬೀರುವ ಒಟ್ಟು ಪರಿಣಾಮದ ಸ್ವರೂಪವನ್ನು ಅಧ್ಯಯನ ಮಾಡುವ ವಿಜ್ಞಾನವಾಗಿ ರೂಪುಗೊಂಡಿತು."1 ಇದನ್ನು ಪರಿಸರ ವಿಜ್ಞಾನದಲ್ಲಿ (Environment Science) ಎಂದು ಬಳಸಲಾಗುತ್ತಿದೆ. ಇಂತಹ ಅಧ್ಯಯನಗಳಲ್ಲೂ ಪ್ರಕೃತಿಯೊಳಗೆ ಅಡಗಿರುವ ಅಸಂಖ್ಯ ಜೀವ ಸಂಕುಲಗಳ ಮತ್ತು ಅವುಗಳ ಜೀವನ ವೈವಿಧ್ಯ ನಡವಳಿಕೆಗಳ ಸಾಂಸ್ಕೃತಿಕ ಪರಿಕಲ್ಪನೆಯಿಂದ ಅಧ್ಯಯನಗಳಾಗಲಿ, ಸಂಶೋಧನೆಗಳಾಗಲಿ ಶಿಕ್ಷಣದಲ್ಲಿ ನೆಡೆದಿಲ್ಲ. ಈ ಎಲ್ಲಾ ಹಿನ್ನೆಲೆಯಿಂದ ಈ ವಿಷಯವನ್ನು ಕೈಗೆತ್ತಿಕೊಂಡು ಪರಿಶೋಧಿಸಲಾಗುತ್ತಿದೆ. ಹಾಗೆ ನೋಡಿದರೆ, ಪರಿಸರ ಪದವಾಗಲಿ, ಸಂಸ್ಕೃತಿ ಪದವಾಗಲಿ ಕನ್ನಡಕ್ಕೆ ಹೊಸದಲ್ಲ. ಮೊದ ಮೊದಲು ಪರಿಸರದ ಅರ್ಥ ಮತ್ತು ಪರಿಕಲ್ಪನೆ ತುಂಬ ಪರಿಮಿತವಾದ ಕಲ್ಪನೆಯಲ್ಲಿತ್ತು. ಅಂದರೆ ಹಸಿರಾಗಿರುವ ಗಿಡಮರಗಳುಳ್ಳ ಅರಣ್ಯ, ಕಾಡುಗಳೆಂಬ ಅರ್ಥದಲ್ಲಿ ಈ ಪದ ರೂಢಿಯಲ್ಲಿತ್ತು. ಆದರೆ ಈಗ ಈ ಪರಿಮಿತ ಭಾವ ಅರ್ಥಗಳು ವಿಸ್ತಾರವಾಗಿ ಬದಲಾಗಿವೆ. ಒಂದು ಕಾಲಕ್ಕೆ 'ಕಾಡು' ಎಂಬ ಅರ್ಥವನ್ನಷ್ಟೇ ನೀಡುತ್ತಿದ್ದ ಪರಿಸರದ ಪರಿಕಲ್ಪನೆ ಮಾನವನ ನಾಗರೀಕತೆ ವಿಕಾಸವಾದಂತೆ ವಿಸ್ತೃತವಾಯಿತು. ಹೀಗೆ ಏನೆಲ್ಲಾವನ್ನು ತನ್ನ ತೆಕ್ಕೆಗೆ ಸೇರಿಸಿಕೊಳ್ಳುತ್ತ ಹೋಗಿ, ಅದು ಪ್ರಾಕೃತಿಕ ಪರಿಸರದ ಸಂಸ್ಕೃತಿಯನ್ನಷ್ಟೇ ಅಲ್ಲದೆ, ಮಾನವ ನಿರ್ಮಿತ ಪರಿಸರ ಸಂಸ್ಕೃತಿಯೂ ಸೇರಿಕೊಂಡು ಅನನ್ಯವಾದ ಅರ್ಥ, ಸ್ವರೂಪವನ್ನು ಪಡೆದಿದೆ. ಪ್ರಕೃತಿಯಲ್ಲಿ ಸ್ವಾವಲಂಬಿಯಾದ ಕೆಲವು ಸಸ್ಯ ಸಂಪತ್ತುಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಜೀವ ಜಗತ್ತು ಪರಾವಲಂಬಿಗಳಾಗಿವೆ. ಆಹಾರ ಸರಪಳಿಯಲ್ಲಿ ಜೀವಿಗಳು ಪ್ರಕೃತಿಯ ನಿಯಮ ಬದ್ಧವಾಗಿ ಒಂದನ್ನೊಂದು ಅವಲಂಬಿಸಿ ಬದುಕುತ್ತಿವೆ. ಆದರೆ ಈ ನಿಯಮಕ್ಕೆ ವಿರುದ್ಧವಾಗಿ ಬದುಕುತ್ತಿರುವವನೆ ಮನುಷ್ಯ. ಇವನು ಸಸ್ಯಹಾರಿಯಾಗಿದ್ದವನು ಕಾಲ ಕ್ರಮೇಣ ಮಾಂಸಹಾರಿಯಾದ. ಅಲ್ಲದೆ ತನ್ನ ಸ್ವಾರ್ಥ ಸಾಧನೆಗಾಗಿ ವಿಜ್ಞಾನ ತಂತ್ರಜ್ಞಾನಗಳನ್ನು ಕಂಡು ಕೊಂಡು, ಸಸ್ಯ ಮತ್ತು ಪ್ರಾಣಿ ಪರಿಸರಗಳ ಜೀವಹಾನಿಗೆ ಕಾರಣನಾದ. ಹಾಗಾಗಿ ಪ್ರಕೃತಿಯ ಜೀವ ಸಂಪತ್ತಿನಲ್ಲಿ ಏರುಪೇರಾಗಿ ಕಾಡು ಪ್ರಾಣಿಗಳೆಲ್ಲ ಊರು ಸೇರಿ ಮನುಷ್ಯನ ಹಿಂಸೆ, ಸಾವಿಗೆ ಮುಂದಾದವು. ಆಗ ಮಾನವ ಯಾಕೆ ಹೀಗೆಂದು ಚಿಂತಿಸಿದಾಗ ಆಧುನಿಕತೆ ಬೆಳೆದು ಇರುವೆ, ಜೇಡ, ಹಲ್ಲಿಗಳಂತಹ ತಿರಸ್ಕೃತ ಜೀವಿಗಳು ಪರಿಸರ ಪರಿಕಲ್ಪನೆಯೊಳಗೆ ಸೇರಿಕೊಂಡವು. ಹಾಗಾಗಿ ಮಾನವನ ಎಲ್ಲ ಚಟುವಟಿಕೆಗಳಿಂದ ಜೀವ, ನಿರ್ಜೀವ ಕ್ರಿಯೆಗಳು ಸೃಷ್ಟಿಸಿದ ಸ್ಥಿತಿಗತಿಗಳ ವಾತಾವರಣವನ್ನು ಪರಿಸರ ಆವರಿಸಿಬಿಟ್ಟಿತು. ಹೀಗೆ ಕಾಡು, ನಾಡು, ಬಯಲುಗಳ ಜೀವ ಸಂಪತ್ತನೆಲ್ಲ ತನ್ನೆಡೆಗೆ ಸೆಳೆದುಕೊಂಡು ನಾಡಿನ ಮಾನವ ನಿರ್ಮಿತ ವಸ್ತು, ವಿಷಯ, ಸಂದರ್ಭ, ಸನ್ನಿವೇಶಗಳ ಸೃಷ್ಟಿಯ ವೈವಿಧ್ಯ ಚಟುವಟಿಕೆಯ ರೂಪಗಳನ್ನೆಲ್ಲಾ ಸಂಸ್ಕೃತಿಯ ರೂಪದಲ್ಲಿ ಇಂದು ಹೇಳಲಾಗದು. ಏಕೆಂದರೆ ಜೀವ ವೈವಿಧ್ಯತೆಗಳ ಸ್ವರೂಪ ಈಗ ಬದಲಾಗಿದೆ. ಇದನ್ನು ಮಾನವ ಕೇಂದ್ರಿತ ಚಟುವಟಿಕೆಗಳನ್ನೆಲ್ಲಾ ಜೀವ, ಜೀವಿಗಳ ವೈವಿಧ್ಯತೆಗಳ ಪರಿಕಲ್ಪನೆಗೆ ಸೇರಿಸಲಾಗದು. ಆದರೂ ಸಂಸ್ಕೃತಿ ಎನ್ನುವುದು ಮಾನವನಿಗಾಗಿ ರೂಪುಗೊಂಡಿರುವುದರಿಂದ; ಮಾನವರ ಸಕಲ ಕಾರ್ಯಚಟುವಟಿಕೆಗಳನ್ನೆಲ್ಲಾ, ಸಂಸ್ಕೃತಿ ಪರಿಕಲ್ಪನೆಗಳಿಂದ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಅಲ್ಲದೆ ಮಾನವ ನಿರ್ಮಿತ ಸರ್ವ ಪರಿಸರ ಮಾಲಿನ್ಯಗಳಿಂದ ಹಿಡಿದು ಅಗೋಚರವಾದ ಶಬ್ದ ಮಾಲಿನ್ಯದವರೆಗೆ ಪರಿಸರ ಚಟುವಟಿಕೆಗಳ ವ್ಯಾಪ್ತಿ ವಿಸ್ತೃತಗೊಂಡಿದೆ. ಹಾಗಾಗಿ ಈಗ ಈ ಪರಿಸರದ ಪರಿಕಲ್ಪನೆಯೋಳಗೆ ಜೀವಿ ಸಂಕುಲಗಳ ಜೀವನ ಚಟುವಟಿಕೆಗಳ ವೈವಿಧ್ಯತೆಗಳನ್ನೆಲ್ಲಾ ರೂಢಿಯಲ್ಲಿರುವ ಸಾಂಸೃತಿಕತೆಯನ್ನು ಒಳಗೊಳ್ಳ ಬೇಕಾಗಿದೆ.

ಈ ಸಂಸ್ಕೃತಿ, ಪರಿಸರವೆನ್ನುವವು ಜೀವಿಗಳದ್ದೊ. ಖಗೋಳದ್ದೊ, ವಿಜ್ಞಾನವೊ, ಮಾನವ ಸಮಾಜ ಮಾತ್ರವೊ, ಸಾಹಿತ್ಯವೊ ಇಲ್ಲ ಇನ್ಯಾವುದು? ಎಂಬ ಪ್ರಶ್ನೆಗಳೇನಾದರು ಮೊಳೆತರೆ ಉತ್ತರ ಕಷ್ಟ ಸಾಧ್ಯ. ಯಾಕೆಂದರೆ ಈ ಯಾವುದೇ ಒಂದಲ್ಲದ ಇಂತಹ ನಾನಾ ವ್ಯವಸ್ಥೆಗಳನ್ನೊಳಗೊಂಡ ವ್ಯಾಪಕತೆಯನ್ನು ಪರಿಸರ, ಸಂಸ್ಕೃತಿಗಳು ಪಡೆದುಕೊಂಡಿದೆ. ಪರಿಸರದ ಈ ಎಲ್ಲ ಭಾಗ ಉಪಭಾಗಗಳೊಡನೆಯೂ ಮಾನವ ಅವಿನಾಭಾವ ಸಂಬಂಧ ಹೊಂದಿದ್ದಾನೆ. ಇವನ ಬುದ್ಧಿ ಭಾವಗಳ ಬೆಳೆವಣಿಗೆಯಿಂದಾಗಿ ಕಾಲ ಮತ್ತು ಸಾಮಾಜಿಕ, ಪ್ರಾಕೃತಿಕ ಪರಿಸರಗಳೆ ಜೀವ–ಜೀವಿ ವೈವಿದ್ಯತೆಗಳೆಲ್ಲ ಬದಲಾವಣೆಗೊಳಪಟ್ಟಿರುವ ಕ್ರಮವಾಗಿದೆ, ಈ ಎಲ್ಲಾ ಪರಿಸರಗಳಲ್ಲೂ ಏರುಪೇರುಗಳುಂಟಾಗಿ ಪರಿಸರವೆನ್ನುವವು ಸಂಕೀರ್ಣಗೊಂಡಿವೆ. ಈ ಸ್ಥಿತಿಗೆ ಪ್ರಕೃತಿಯ ಮೇಲಿನ ಮಾನವರ ಪರಿಕಲ್ಪನೆಗಳ ಬೆಳೆವಣಿಗೆಯೇ ಮೂಲ.

ವಾಸ್ತವವಾಗಿ ಮನುಷ್ಯರನ್ನು ಬುದ್ಧಿಜೀವಿ ಮತ್ತು ಭಾವ ಜೀವಿಗಳೆಂಬ ಎರಡು ಗುಂಪುಗಳ ನೆಲೆಯಲ್ಲಿ ಅವರ ಪ್ರತಿಯೊಂದು ವ್ಯವಹಾರ, ತಿಳಿವಳಿಕೆ, ನಡವಳಿಕೆಗಳಿಂದ ಗುರುತಿಸಬಹುದು. ಸಾಮಾನ್ಯವಾಗಿ ಆದಿಯಿಂದಲೂ ಮಾನವ ಪ್ರಕೃತಿ ಪರಿಸರದ ರಹಸ್ಯಕ್ಕೆ ಅದರ ರೌದ್ರ ಮತ್ತು ಸೌಮ್ಯ ಸ್ವರೂಪಿ ಗುಣಗಳೆರಡರ ಮಿಳಿತದ ಭವ್ಯ ದರ್ಶನಕ್ಕೆ ವಿಸ್ಮಯಗೊಂಡಿದ್ದಾನೆ. ಈ ಪ್ರಕೃತಿ ಮೂರ್ತವಾಗಿದ್ದರೂ ಅದರ ಗುಣ ಧರ್ಮಗಳು ಅಮೂರ್ತವಾಗಿವೆ. ಆದ್ದರಿಂದ ಅದು ಮಾನವನ ಹಿಡಿತ ಮತ್ತು ಗ್ರಹಿಕೆಗೆ ಸಿಗದಿದ್ದರಿಂದ ಅವನಿಗೆ ಪ್ರಕೃತಿ ಮೇಲೆ ದೈವಿ ಭಾವ ಮೂಡಿದೆ. ಈ ಭಾವನೆಯುಳ್ಳ ಹೆಚ್ಚಿನ ಸಮುದಾಯವೇ ಮೂಲನಿವಾಸಿ, ಗ್ರಾಮೀಣ ಬಹುಜನರು. ಇವರು ಪ್ರಕೃತಿಯೊಡನೆ ಬೆಳೆಯುತ್ತಾ ಪ್ರಕೃತಿಯ ಆರಾಧನೆಯಲ್ಲಿ ತೊಡಗಿದವರು. ಸೂರ್ಯ, ಚಂದ್ರ, ಭೂಮಿ, ಗಿಡ, ಮರ, ಬೆಟ್ಟಗುಡ್ಡ, ಪಶು ಪಕ್ಷಿ, ಪ್ರಾಣಿ, ನದಿ, ಸಾಗರಗಳೆಲ್ಲವನ್ನು ದೇವರುಗಳನ್ನಾಗಿ ಕಾಣುವ ಪರಿಕಲ್ಪನೆಯನ್ನು ಬೆಳೆಸಿಕೊಂಡವರು. ಆದ್ದರಿಂದಲೇ ಇವರು ಭಾವಜೀವಿಗಳಾದರು. ಇವರ ಗುಂಪಿಗೆ ಕವಿ ಕಲಾವಿದರೂ ಸೇರುತ್ತಾರೆ.

ಇವರಿಗೆ ವಿರುದ್ಧವಾದ ಪರಿಕಲ್ಪನೆಯುಳ್ಳವರು ನಗರ, ಪಟ್ಟಣ ಸಮುದಾಯದ ಬಹುಪಾಲು ಸ್ವಾರ್ಥಾಭಿವೃದ್ಧಿಗಾಗಿ ತಮ್ಮ ಸುತ್ತ ಮುತ್ತಲ ಪ್ರಕೃತಿ ಜೀವಿಗಳನ್ನು ನಿರ್ಲಕ್ಷಿಸುವ ಜನರು, ಇವರು ಭಾವಹೀನ ಬುದ್ಧಿ ಜೀವಿಗಳು. ಈ ಗುಂಪಿಗೆ ಬಂಡವಾಳಶಾಹಿ, ಆಡಳಿತಾಶಾಹಿ ಮತ್ತು ಸರ್ಕಾರಗಳು ಸೇರುತ್ತವೆ. ಮಾನವ ಕೇಂದ್ರಿತವಾದ ಸ್ವಾರ್ಥ ಬೆಳೆವಣಿಗೆಯ ಯೋಜನಾಭಿವೃದ್ಧಿಗೆ, ಇವರ ಪ್ರೀತಿ ಪೂರಕವಾದ ಪ್ರಕೃತಿಯ ಸಂಪತ್ತಿಗೆ ಪೂಜ್ಯಭಾವನೆಗಳಿಲ್ಲ. ಕೇವಲ ಅದರ ಭಕ್ಷಣೆ ಮಾಡುವುದೆ ಅವರ ಗುಣ. ಇಂತಹ ಸ್ವಭಾವದಿಂದ ಕ್ಷಣಿಕ ಸುಖಕ್ಕೆ ಮಾರುಹೋಗಿ ಆ ಅನುಭವವನ್ನೆ ದೇವರೆಂದು ಭಾವಿಸಿದರು.

ಈಗ ಪ್ರಬಲ ಶಕ್ತಿಯಾಗಿರುವ ಇವರ ಪ್ರೇರಣೆ ಪ್ರಭಾವಗಳಿಂದ ಗ್ರಾಮೀಣ, ಭಾವಜೀವಿಗಳೂ ತಮ್ಮ ಜೀವನದ ಅಸ್ತಿತ್ವಕ್ಕಾಗಿ, ಸ್ವಾರ್ಥಿಗಳಾಗಿ ಪ್ರಕೃತಿ ನಾಶಕ್ಕೆ ವ್ಯಾಮೋಹಗೊಂಡಿದ್ದಾರೆ. ಇದು ಇಂದಿನ ಪ್ರಕೃತಿಯದೇನು, ಮಾನವನ ದುರಂತಕೂಡ. ಹಾಗಾದರೆ ಇಂದು ಮಾನವನಿಗೆ ಕ್ಷಣಿಕವಾದ ಆಧುನಿಕತೆಯ ಅಪರಿಮಿತ ವಿಲಾಸಿ ಭೋಗ ಜೀವನವೇ ಮುಖ್ಯವೇ? ಇವರಿಗೆ ಮುಂದಿನ ಪೀಳಿಗೆಯ ಭವಿಷ್ಯದ ಬಯಕೆ ಬೇಡವೇ? ಬೇಕೆಂದರೆ ಪ್ರಕೃತಿ ಇಲ್ಲದೆ ಮಾನವನ ಅಸ್ತಿತ್ವ ಹೇಗೆ? ಹಾಗಿದ್ದ ಮೇಲೆ ಮಾನವನ ಮೊದಲ ಆದ್ಯತೆ ಯಾವುದಕ್ಕೆ ಎಂಬ ಮೂಲಭೂತ ಪ್ರಶ್ನೆಗಳನ್ನೆತ್ತಿದರೆ ಎದುರಾಗುವುದು **"ಮಾನವನ ಅಸ್ತಿತ್ವದ ಪ್ರಶ್ನೆ"**. ಇವನ ಅಸ್ತಿತ್ವದ ತಿಳಿವಳಿಕೆಯಲ್ಲೆ ನಿಸರ್ಗ ಮತ್ತು ಜೀವ–ಜೀವಿಸಂಕುಲಗಳ ರಕ್ಷಣೆಯ ಪ್ರಜ್ಞೆಯು ಇರುತ್ತದೆ. ಇದನ್ನೇ **"ವೈವಿಧ್ಯ ಚಟುವಟಿಕೆಗಳ ಸಾಂಸ್ಕೃತಿಕ ಪರಿಸರ ಪ್ರಜ್ಞೆ"** ಎನ್ನುವುದು. ಈ ಅಂಶವನ್ನೆ ಕನ್ನಡ ಸಾಹಿತ್ಯದಲ್ಲಿ ಪರಿಶೋಧಿಸಬೇಕೆಂದಿರುವುದು.

"ಜೀವಿಗಳ ವೈವಿದ್ಯ ಚಟುವಟಿಕೆಗಳ (ಸಾಂಸ್ಕೃತಿಕ) ಪರಿಸರ" ಎಂಬುದು ಈ ಕೃತಿಯ ಕೇಂದ್ರ ವಿಷಯ. ಈಗಾಗಲೇ ಚರ್ಚಿಸಿರುವಂತೆ ಪರಿಸರವೆಂಬುದು ಇಲ್ಲಿ ಪ್ರಕೃತಿಗೆ ಸಂಬಂಧಿಸಿದ್ದು. ಈ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಇದುವರೆಗೆ ಆಗದಿದ್ದರೂ ಪ್ರಕೃತಿಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯದಲ್ಲಿ ಸಂಶೋಧನೆಗಳಾಗಿವೆ. ಉದಾಹರಣೆಗೆ ಕೆ. ಆರ್. ಸಿದ್ದಗಂಗಮ್ಮ ಅವರ 'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ ಒಂದು ಅಧ್ಯಯನ' ಮತ್ತು ಸುವರ್ಣ ಲತಾ ಅವರ 'ಕುವೆಂಪು ಕಾವ್ಯಗಳಲ್ಲಿ ಪ್ರಕೃತಿ' ಹೀಗೆ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕುವೆಂಪು, ಶಿವರಾಮಕಾರಂತ, ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದಲ್ಲಿ ಪರಿಸರ ಸಂಬಂಧಿ ಅಧ್ಯಯನಗಳನ್ನು ಮಾಡಲಾಗಿದೆ. ಇಂತಹ ಹಲವು ಮಹಾಪ್ರಬಂಧಗಳು ಪ್ರಕೃತಿ ಸೌಂದರ್ಯವನ್ನು ಅದರಿಂದ ಮಾನವ ಸಂಸ್ಕೃತಿಯ ಸಿರಿ, ಅವನ ಮಾನಸಿಕ ಆನಂದ, ಉಲ್ಲಾಸ, ಶಾಂತಿಯನ್ನು ಮಾತ್ರ ಎತ್ತಿ ಹಿಡಿಯುತ್ತವೆ. ಜೊತೆಗೆ ಆ ಸಾಹಿತ್ಯದ ಮಹತ್ವ, ಕವಿಯ ಔಚಿತ್ಯ ಪ್ರಜ್ಞೆಯನ್ನು ತೆರೆದಿಡುತ್ತವೆ. ಆದರೆ ಈ ಯಾವ ಪ್ರಬಂಧಗಳು ಮಾನವನ ಸುಖ, ಶಾಂತಿ, ಆನಂದಕ್ಕೆ ಕಾರಣವಾದ ಆ ಪ್ರಕೃತಿಯ ಗಿಡ–ಮರ, ಬೆಟ್ಟ–ಗುಡ್ಡ, ಪ್ರಾಣಿ–ಪಕ್ಷಿ, ನದಿ–ಸಾಗರಗಳ

ಮೇಲಾಗುತ್ತಿರುವ ಮಾನವನ ಆಕ್ರಮಣಾಕಾರಿ ಪ್ರವೃತ್ತಿಗೆ ಆತಂಕಪಡುವುದಿಲ್ಲ. ಹಾಗೂ ಪ್ರಾಣಿಗಳ ಜೀವನ ಸಂಸ್ಕೃತಿಯ ಬಗ್ಗೆ ಚಿಂತಿಸುವುದಿಲ್ಲ. ಮಾನವನ ಸಂಸ್ಕೃತಿಯ ಬಗ್ಗೆ ಅಧ್ಯಯನಗಳಾಗಿ; ಜನಪದ ಸಂಸ್ಕೃತಿ, ಬುಡಕಟ್ಟು, ಜಾತಿ–ಧರ್ಮ ಇನ್ನಿತರ ಸಂಸ್ಕೃತಿಗಳ ಬಗ್ಗೆ ನಾನಾ ರೀತಿಗಳಲ್ಲಿ ನೂರಾರು ಸಾಹಿತ್ಯ ಸಂಶೋಧನೆಗಳಾಗಿವೆ. ಇಂತಹ ಸಂಶೋಧನೆಗಳು ಕೂಡ ಮಾನವ ಕೇಂದ್ರಿತವಾಗಿವೆ. ಈ ಸ್ವರೂಪದ ಅಧ್ಯಯನಗಳಲ್ಲಿ ಪ್ರಕೃತಿಯ ರಕ್ಷಣೆಗೆ, ಜೀವ ಸಂಕುಲಗಳ ಜೀವಂತಿಕೆಗೆ ಮತ್ತು ಮಾನವನ ಮುಂದಿನ ಪೀಳಿಗೆಯ ನೆಮ್ಮದಿಯ ಅಸ್ತಿತ್ವಕ್ಕೆ ಪ್ರೇರಣೆ, ಪ್ರೋತ್ಸಾಹದ ಸೂಚನಾ ಮಾರ್ಗಗಳು ಈ ಸಮಾಜಕ್ಕೆ ಸಿಕ್ಕಿವೆಯೇ ಎಂದು ಪ್ರಶ್ನಿಸಿಕೊಂಡರೆ ಉತ್ತರ ಕಷ್ಟ ಸಾಧ್ಯ.

ಇನ್ನೊಂದು ಮಾದರಿಯ ಬರವಣಿಗೆಯಿದೆ. ಇದಕ್ಕೆ ಪ್ರಭುಸ್ವಾಮಿ ಮಠ ಅವರ 'ಪರಿಸರ ಪ್ರಜ್ಞೆ ಮತ್ತು ಬಸವಣ್ಣ' ಎಂಬ ಲೇಖನದಲ್ಲಿ 12 ನೇ ಶತಮಾನದ ಬಸವಣ್ಣನವರ ಒಂದು ವಚನದ ಈ ವಿಶ್ಲೇಷಣೆಯನ್ನು ಗಮನಿಸ ಬಹುದು

"ಮರಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತಣಿ ತಣಿದು
ಪ್ರಾಣವ ಕೊಂಡುಂಡು ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ ?
ಒಂದಿಂದ್ರಿಯ ಮೊದಲಾಗಿ ಐಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ ಅದು ಕಾರಣ
ಕೂಡಲ ಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವದು.
ಕೊಂಡು ನಿರ್ದೋಷಿಗಳಾಗಿ ಬದುಕಿದರು"2

ಇದು ಪ್ರಭುಸ್ವಾಮಿ ಮಠ ಅವರ ಪ್ರಕಾರ 'ಪರಿಸರ ಪ್ರಜ್ಞೆ' ಯನ್ನು ಸೂಚಿಸುವ ವಚನ. ಇದರಲ್ಲಿ ಬಸವಣ್ಣನವರು ಇಡೀ ಪರಿಸರವನ್ನು ಜನ ಅಸಮತೋಲನಗೊಳಿಸಿ, ಅದರಿಂದಾಗುವ ಜೀವವಿರೋಧಿ ಪರಿಣಾಮವನ್ನು ಸೂಚಿಸಿದ್ದಾರೆಂದು ಅವರು ವಿಶ್ಲೇಷಣೆ ಮಾಡುತ್ತಾರೆ. ಆದರೆ ಈ ವಚನ ಪರಿಸರ ಪ್ರಜ್ಞೆಯಿಂದ ಬರೆದದ್ದು ಎಂಬ ನಿರ್ಧಾರಕ್ಕೆ ಬರುವುದಾದರೆ 12 ನೇ ಶತಮಾನದಲ್ಲಿ ಇಂದಿನ ಯಾವುದೇ ವೈಜ್ಞಾನಿಕ ತಾಂತ್ರಿಕತೆಯ ಬೆಳೆವಣಿಗೆಯಾಗಿರಲಿಲ್ಲ. ಕಾರ್ಖಾನೆಗಳೂ ಇರಲಿಲ್ಲ. ಆದರೆ ದಿನ ನಿತ್ಯ ಜೀವನಾಧಾರ ಚಟುವಟಿಕೆಗಳಿಗೆ ಮರಗಿಡಗಳನ್ನು ಕಡಿಯುವುದು ಸಹಜವಾಗಿತ್ತು. ಒಂದು ಜೀವಿ ಮತ್ತೊಂದು ಜೀವಿಯನ್ನು ಅವಲಂಬಿಸಿ ತನ್ನ ಅಸ್ತಿತ್ವಕ್ಕಾಗಿ ಹೋರಾಡುವುದು ಪ್ರಕೃತಿಯಲ್ಲಿ ಸಹಜವಾದುದ್ದು. ಇಂತಹ ಅವಲಂಬನೆಯನ್ನೇ ಆ ಕಾಲದ "ಮರಗಿಡ ಬಳ್ಳಿ ಧಾನ್ಯಂಗಳ ಬೆಳೆಸೆಲ್ಲವ ತಣಿ ತಣಿದು, ಪ್ರಾಣವ ಕೊಂಡುಂಡು ಶರೀರವ ಹೊರೆವ ದೋಷಕ್ಕೆ, ಇನ್ಯಾವುದು ವಿದಿಯಯ್ಯ?" ಎಂಬ ಮಾತನ್ನು ಇಂದಿನ ಅಸಮತೋಲನಕ್ಕೆ ಬಳಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಅಂದಿನ ಜನರು ತಮ್ಮ ಜೀವನ ಆಹಾರ ಪದ್ದತಿಗೆ ಮರ ಗಿಡಗಳ ಬೇರು, ಬಳ್ಳಿ, ಧವಸ, ಧಾನ್ಯಗಳನ್ನು ಬೆಳಸಿ ತಿನ್ನುವುದನ್ನು ದೋಷವಾಗಲಿ, ಹಿಂಸೆಯಾಗಲಿ ಆಗುತ್ತದೆಂದು ಭಾವಿಸಿದರೆ ಅದು ಆ ವಚನದ ಸತ್ಯ ಗ್ರಹಿಕೆಯಲ್ಲ. ಅದು ಮಾನವನ ಹಸಿವಿನ ಆಹಾರ ವೈವಿಧ್ಯತೆಯ ಚಟುವಟಿಕೆಗಳ ಸಂಸ್ಕೃತಿ. ಹಸಿವು ಕಳೆಸಿ ದೇಹ ಬೇಳೆಸಿಕೊಳ್ಳುವುದನ್ನು ದೋಷವೆಂದಿದ್ದಾನೆ. ಅದೇ ರೀತಿ "ಒಂದಿಂದ್ರಿಯ ಮೊದಲಾಗಿ ಐಂದ್ರಿಯ ಕಡೆಯಾದ, ಜೀವಜಾಲದಲ್ಲಿದೆ ಚರಾಚರವೆಲ್ಲ" ಎಂಬ ಸಾಲು ಸಕಲ ಜೀವಜಾಲಗಳ ಜೀವನ ಸಂಬಂಧದ ವೈವಿಧ್ಯ ನಡವಳಿಕೆಗಳ ಸಾಂಸ್ಕೃತಿಕ ಪರಂಪರೆಯನ್ನು ಅಭಿವ್ಯಕ್ತಿಸುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಅರಿಯಬಹುದಾಗಿದೆ. ಇದು ಆ ಕಾಲದ ಜನರೇನು ಸಕಲ ಕಾಲದ ಜನರ ಜೀವನ ಪದ್ದತಿ ಎಂಬುದನ್ನು ಮರೆಯಭಾರದು. ಇದನ್ನು ಅರಿತು ಹೇಳಿದ ಬಸವಣ್ಣನ ವಚನವನ್ನು ಮನಗಾಣಬೇಕು. ಆದರೆ ಆ ಕಾಲದ ಮಾನವನ ಜೀವನಾನುಭವದ ಗ್ರಹಿಕೆಯನ್ನು ಈಗ 22 ನೇ ಶತಮಾನದ ಅನುಭವದ ಗ್ರಹಿಕೆಯನ್ನಾಗಿ ಮಾಡಲಾಗದು. ಈ ತರಹದ ಬರಹ "ಪಂಪನಲ್ಲಿ ಪರಿಸರ ಪ್ರಜ್ಞೆ" ಎಂದು ಶಿವರಾಮಯ್ಯನವರು ಬರೆದ ಲೇಖನವು ಸಹ ಇಂತಹ ದೂರನ್ವಯ ದೋಷದ ಒಂದು ಲೇಖನ. ಹಾಗಾಗಿ ಈ ಶತಮಾನದ ಸಮಸ್ಯೆಯನ್ನು 10, 12ನೇ ಶತಮಾನದ ಸಾಹಿತ್ಯ ಕೃತಿಯಲ್ಲಿ ಹುಡುಕಿ ನೋಡುವುದು ಅರ್ಥಹೀನವಾದುದ್ದು. ಆದ್ದರಿಂದ ಇವತ್ತಿನ ಪರಿಸರ ಸಮಸ್ಯೆಯಾಗಲಿ, ಸಾಂಸ್ಕೃತಿಕ ವಿಶಾಲ ಪರಿಕಲ್ಪನೆಯಾಗಲಿ ಇವನ್ನೆಲ್ಲಾ ಇಂತಹ ಸಂಶೋಧನಾ ಅಧ್ಯಯನಕ್ಕೆ 20 ನೇ ಶತಮಾನದ ಸಾಹಿತ್ಯವಾದ ಆಧುನಿಕ ಕನ್ನಡ ಸಾಹಿತ್ಯವೆನಿಸಿರುವ 1920–25 ರ ನವೋದಯ ಸಾಹಿತ್ಯದಿಂದ 20 ನೇ ಶತಮಾನ ಮುಗಿಸಿರುವ ದಲಿತ, ಬಂಡಾಯ, ಮಹಿಳಾ ಸಾಹಿತ್ಯಗಳವರೆಗಿನ ಸಾಹಿತ್ಯ ಮತ್ತು ಸಾಹಿತ್ಯೇತರ ಬರಹಗಳಲ್ಲಿ ಅರಸಿ ತೆಗೆಯುವುದು ಸೂಕ್ತವೆನಿಸಿದೆ. ಆದರೆ ಸಾಂಸ್ಕೃತಿಕ ಪರಿಕಲ್ಪನೆ ಮಾತ್ರ ಪ್ರಾಚೀನ ಪರಿಕಲ್ಪನೆಯಿಂದ ಆಧುನಿಕ ಪರಿಕಲ್ಪನೆಯವರೆಗೆ ಬೆಳೆದು ಬಂದು ಈಗ

ವಿಶಾಲಾರ್ಥ ಪಡೆದುಕೊಂಡಿದೆ ನಿಜ. ಇದೂ ಕೂಡ ಮಾನವ ಕೇಂದ್ರಿತವಾಗೆ ವಿಸ್ತರಿಸಿಕೊಂಡಿದೆಯೆ ಹೊರತು, ಜೀವ–ಜೀವಿಗಳ ಜೀವನ ಸಂಸ್ಕೃತಿ ವಿಷಯ ಕೇಂದ್ರಿತವಾಗಿ ಹೆಚ್ಚಿನ ಸೃಜನ ಶೀಲ ಸಾಹಿತ್ಯ ಕೃತಿಗಳು ರಚನೆಯಾಗುವ ಅರ್ಥ ವೈಶಾಲ್ಯತೆಯನ್ನು ಪಡೆದುಕೊಂಡಿಲ್ಲ ಎಂಬುದೇ ಇಲ್ಲಿಯ ಸಂಶೋಧನಾ ವಿಷಯದ ಕೇಂದ್ರ ವಸ್ತುವಾಗಿದೆ.

ಈ ಶತಮಾನದಲ್ಲಿ ಉಂಟಾಗಿರುವ ಪರಿಸರ ಸಮಸ್ಯೆಯನ್ನು ಶೋಧಿಸುವ, ಅದಕ್ಕೆ ಪರಿಹಾರ ಕಂಡುಕೊಳ್ಳುವ ಸಂಶೋಧನೆಗಳು ಕನ್ನಡ ಸಾಹಿತ್ಯದಲ್ಲಿ ನೆಡೆದೇ ಇಲ್ಲವೆಂದರೆ ತಪ್ಪಾಗಲಾರದು. ಆದ್ದರಿಂದ ಈ ಪರಿಸರ ಸಮಸ್ಯೆಯನ್ನು ಬಿಡಿಸಿ, ಉತ್ತರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುವ ಸಲುವಾಗಿ, ಜೀವ ಕೇಂದ್ರಿತ ನೆಲೆಯ ಸಾಂಸ್ಕೃತಿಕ ಪರಿಕಲ್ಪನೆಯಲಿ ನೋಡುವ ದೃಷ್ಟಿಯಿಂದ ಈ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದರ ಮೂಲಕ ಜೀವಿಗಳ ಸಂಸ್ಕೃತಿಯ ತಾತ್ವಿಕತೆಯನ್ನು ಎತ್ತಿ ಹಿಡಿಯುವುದೇ ಇಲ್ಲಿನ ಮುಖ್ಯ ಉದ್ದೇಶ.

ಪ್ರಕೃತಿಯ ಭೂಮಿ, ಜೀವಸೃಷ್ಟಿಯ ಅಭೂತಪೂರ್ವ ಗುಣ ಹೊಂದಿದೆ. ಈ ಭೂಮಿಗೆ ತನ್ನ ಮೇಲಿರುವ ಸರ್ವ ಜೀವಗಣಗಳು ನಶಿಸುತ್ತಿದ್ದರೆ ಅವುಗಳನ್ನು ರಕ್ಷಿಸುವ, ಸೃಷ್ಟಿಸುವ ಹಕ್ಕು, ಶಕ್ತಿಯಿರುವುದು ಇದಕ್ಕೊಂದಕ್ಕೆ ಮಾತ್ರ. ಈ ಮಾತು ಎಷ್ಟು ಸತ್ಯವೋ, ಭೂಗರ್ಭದೊಳಗಿರುವ ಖನಿಜ ಮತ್ತು ತೈಲ ಸಂಪತ್ತುಗಳು ನಶಿಸುತ್ತಿದ್ದರೂ; ಭೂಮಿ ತನ್ನ ಸಹಜ ಸ್ಥಿತಿಯಲ್ಲೆ ಆದಿಯಿಂದಲೂ ಈಗಿರುವಂತೆ ಇದ್ದರೂ ತನ್ನ ಗರ್ಭದೊಳಗೆ ಕಳೆದುಕೊಂಡ ಸಂಪತ್ತುಗಳನ್ನು ಪುನಃ ಸೃಷ್ಟಿಸಲಾರದೆಂಬುದು ಕೂಡ ಅಷ್ಟೇ ಸತ್ಯ. ಹಾಗೇನಾದರೂ ಸೃಷ್ಟಿಸುವ ಗುಣ ಶಕ್ತಿಗಳಿದ್ದರೆ ಅದು ಪ್ರಳಯೋತ್ತರದ ಕೋಟ್ಯಾಂತರ ವರ್ಷಗಳನ್ನು ಪೂರೈಸಿದ ಮಾನವನೊಳಗೊಂಡ ಭೂಮಿಗೆ ಮಾತ್ರ. ಆದ್ದರಿಂದಲೇ ಮನುಕುಲ ಈಗ ಪ್ರಳಯ ಭೀತಿಯಿಂದ ಆತಂಕ ಪಡುತ್ತಿರುವುದು. ಪ್ರಕೃತಿಯ ಈ ವೈಚಿತ್ರ್ಯವನ್ನು ಅರಿತು ಪ್ರಳಯ ಭೀತಿಯ ಹಿನ್ನೆಲೆ ಮತ್ತು ಅದರ ಮುಂದೂಡಿಕೆಯ ಕ್ರಮದ ಬಗ್ಗೆ ಚರ್ಚಿಸಿ ಪರಿಶೀಲಿಸುವುದಾಗಿದೆ. ಪ್ರಕೃತಿಯ ಸ್ವಾಭಾವಿಕ ಸೃಷ್ಟಿಯ ಜೀವಪರಿಸರವನ್ನು ಮನುಷ್ಯ ತಾನೇ ಸೃಷ್ಟಿಸಿಕೊಂಡ ವ್ಯವಸ್ಥೆ ವ್ಯವಹಾರಗಳಿಗೆಲ್ಲ ಹೇಗೆ ಬಳಸಿಕೊಳ್ಳುತ್ತಿದ್ದಾನೆ? ಇದರಿಂದ ಪ್ರಕೃತಿಯ ಜೀವ ಸಂಕುಲ ಏನಾಗುತ್ತಿದೆ? ಮಾನವ ಸಮಾಜದ ಬೆಳೆವಣಿಗೆಯ ಮೇಲೆ ಇದರ ಪರಿಣಾಮವೇನು? ಎಂಬ ಮೂಲಭೂತ ಪ್ರಶ್ನೆಗಳನ್ನು ಬಿಡಿಸಲು ಪ್ರಯತ್ನಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಾತಿನ ಧ್ವನಿಯಿಲ್ಲದ ಗಿಡ–ಮರ, ಪ್ರಾಣಿ–ಪಕ್ಷಿಗಳ ಧ್ವನಿಯಾಗಿರುವ ಪಾತ್ರಗಳು ಇಲ್ಲವೆನ್ನಲಾಗದಂತೆ 'ದೇಸಗತಿ' ಕಥೆಯ ಲಂಗಾಟದ ಸ್ವಾಮಿಗಳು, 'ಕಾಡುಕಡಿದು ಊರು ಮಾಡಿದರು' ಕಾದಂಬರಿಯ ಹಾಲಜ್ಜ, 'ಪುಷ್ಪರಾಣಿ'ಯಂತಹ ನಾಟಕದ ಕೆಲವು ಪಾತ್ರಗಳು ತುಂಬ ವಿರಳವಾಗಿವೆ. ಇದೇ ರೀತಿ ಪ್ರಕೃತಿಯ ಗಿಡ ಮರಗಳನ್ನೋ, ಇಲ್ಲ, ಪ್ರಾಣಿ, ಪಕ್ಷಿ, ಕೀಟಗಳನ್ನು ಅಷ್ಟೋ ಇಷ್ಟೋ ಒಂದು ಕೃತಿ ವಸ್ತುವನ್ನಾಗಿ ಮಾಡಿಕೊಂಡ ಕರ್ವಾಲೋ, ಹೆಜ್ಜಾಲಗಳಂತಹ ಸೃಜನಶೀಲ ಕೃತಿಗಳು ಅಷ್ಟೇ ವಿರಳವಾಗಿವೆ. ಆದ್ದರಿಂದಲೇ ಕನ್ನಡ ಸಾಹಿತ್ಯದಲ್ಲಿ ಬೆರಳೆಣಿಕೆಯಷ್ಟಿರುವ ಈ ಜೀವಿ ಪರಿಸರ ಸಂಬಂಧಿ ಕೃತಿಗಳು ಇದ್ದೂ ಇಲ್ಲದಂತಿವೆ. ಆದ್ದರಿಂದಲೋ ಏನೋ ಈ ಪ್ರಾಕೃತಿಕ ಪರಿಸರ, ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳನ್ನು ಸಂಸ್ಕೃತಿ ಯಂತಹ ಹೊಸ ಪರಿಕಲ್ಪನೆಯ ಮೇಲಿನ ಸಾಹಿತ್ಯ ಸಂಶೋಧನೆಗಳು ಆಗಿಲ್ಲದಿರುವುದು. ಈ ಕೊರತೆಯನ್ನು ತುಂಬುವ ಸಲುವಾಗೆ ಜೀವಕೇಂದ್ರಿತವಾದ **"ಜೀವ–ಜೀವಿ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ"** ಎಂಬ ಹೊಸ ಗ್ರಹಿಕೆಯ ಈ ಸಾಹಿತ್ಯದ ಸಂಶೋಧನಾ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಇದುವರೆಗಿನ ಸಾಹಿತ್ಯ ಪ್ರಕೃತಿ ಪರಿಸರವನ್ನು ಸೌಂದರ್ಯಕ್ಕಾಗಿ, ವರ್ಣನೆಗಾಗಿ, ಮತ್ತು ಪ್ರಕೃತಿಯ ವಿಸ್ಮಯಕಾರಿ ಗುಣಕ್ಕಾಗಿ ಇಲ್ಲಿ ಪ್ರತಿಮೆ, ಸಂಕೇತ, ಉಪಮೆಗಳಿಗೆ ಬಳಸಿಕೊಂಡು ಚಿತ್ರಿಸಲಾಗಿದೆಯೇ ಹೊರತು, ಇದನ್ನು ಅಂದರೆ ಗಿಡಮರ, ಪ್ರಾಣಿ–ಪಕ್ಷಿ, ಕೀಟಗಳನ್ನು ಒಂದು ಜೀವವೆಂದು ಪರಿಗಣಿಸಿ ಇವುಗಳನ್ನು ಒಡಲಾಳದ 'ಸಾಕವ್ವ' ನಂತೆ ಸಂಸ್ಕಾರದ 'ಪ್ರಾಣೇಶಚಾರಿ'ಯಂತ ಪಾತ್ರಗಳಾಗಿ ಸಾಹಿತ್ಯ ಪರಿಗಣಿಸಿಯೇ ಇಲ್ಲ ಎನ್ನುವುದರಲ್ಲಿ ಎರಡು ಮಾತಿಲ್ಲ. ಅಷ್ಟೇ ಏಕೆ? ಯಾವ ಸಾಹಿತ್ಯ, ಸಂಸ್ಕೃತಿ, ಸಮಾಜ, ವಿಜ್ಞಾನಗಳನ್ನು ತೆಗೆದು ನೋಡಿದರೂ ಮಾನವ ಕೇಂದ್ರಿತವಾದ ಸಮಾಜ, ಸಂಸ್ಕೃತಿ, ಸಾಹಿತ್ಯ ಪರಿಸರ ಆಗಿರುತ್ತವೆಯೇ ವಿನಹ; ಅವು ಜೀವ ಕೇಂದ್ರಿತ ಪ್ರಕೃತಿ ಸಹಜ ಜೀವಿಗಳ ಅವಿನಾಭಾವ ಸಂಬಂಧದ ಸಮಾಜ ಜೀವಿಗಳ ಪರಿಸರದಲ್ಲಿರುವ 'ಮಾತನಾಡುವ ಮತ್ತು ಮಾತುಬಾರದ ಜೀವಗಣಗಳ ಸಹಜೀವನದ ಒಕ್ಕೂಟ' ವಾಗಿ ಕಂಡು ಬರುವುದಿಲ್ಲ. ಈ ಸೂಕ್ಷ್ಮತೆಯನ್ನು ಅರಸಿ ತಗೆದಿಡುವ ಪರಿಶೋಧನೆಯು ಇಲ್ಲಿಯ ಸಂಶೋಧನ ಮಾರ್ಗವಾಗಿದೆ. ಹಾಗೆ ನೋಡಿದರೆ ಪ್ರಕೃತಿ ಜೀವಿಗಳೊಡನೆ ಮಾನವನ ಸಹಬಾಳ್ವೇ ಜನಪದ ಸಾಹಿತ್ಯ, ಸಂಸ್ಕೃತಿಗಳಲ್ಲಿರುವಂತೆ ಶಿಷ್ಟ

ಸಾಹಿತ್ಯ ಸಂಸ್ಕೃತಿಗಳಲಿಲ್ಲ. ಇದ್ದರೂ ಅವು ಮಾನವನ ಸಂಸ್ಕೃತಿಯಲ್ಲಿ ಜೀವನಾಧಾರಕ್ಕೆ ಬಳಕೆಯಾಗಿವೆ. ಹಾಗೆಯೇ ಸಾಹಿತ್ಯದಲ್ಲೂ ಅವನ ರಕ್ಷಣೆಗೆ, ಜೀವನಾಧಾರಕ್ಕೆ, ಬಂದು ಹಾದು ಹೋಗುತ್ತವೆಯೇ ಹೊರತು ನಿಂತು ಪ್ರಧಾನ ಪಾತ್ರ, ವಸ್ತು, ವಿಷಯಗಳಾಗಿರುವ ಕೃತಿಗಳು ಕಡಿಮೆ. ಹಾಗಿದ್ದರೂ ಈ ಸಾಹಿತ್ಯದೊಳಗೆ 'ಮರಳುಗಾಡಿನ ಜಲ' ದಂತೆ ಸಿಕ್ಕುವ ಪ್ರಾಕೃತಿಕ ಪರಿಸರದ ಸಕಲ ಜೀವಿಗಳ ವೈವಿಧ್ಯ ಚಟುವಟಿಕೆಗಳ ಸಾಂಸ್ಕೃತಿಕ ಚಿತ್ರಣವುಳ್ಳ ಅಂಶಗಳನ್ನು ಹೆಕ್ಕಿ ತೆಗೆಯುವ ಪ್ರಯತ್ನವನ್ನು ಈ ಶೋಧದಲ್ಲಿ ಮಾಡಲಾಗುತ್ತದೆ.

'ಮಾನವ ಸಮಾಜ ಪರಿಸರ' ದ ಅಧ್ಯಯನ, ಸಂಶೋಧನೆಗಳಾಗಿರುವಂತೆ ಈ ಮುಂದೆ ಪ್ರಕೃತಿಯ ಗಿಡ–ಮರ, ಪ್ರಾಣಿ–ಪಕ್ಷಿ, ಮುಂತಾದ ಜೀವಿಗಳ ಸಂಸ್ಕೃತಿ ಸಮಾಜದ ಅಧ್ಯಯನವು ಆಗಬೇಕು. ಆದ್ದರಿಂದ ಆ ನಿಟ್ಟಿನ ಅಧ್ಯಯನ ಬರೆವಣಿಗೆಗಳ ಪ್ರಾಮುಖ್ಯತೆಯನ್ನು ಗುರುತಿಸುವುದೇ ಇಲ್ಲಿಯ ಪ್ರಮುಖ ಕಾರಣವಾಗಿದೆ. ಇದಕ್ಕೆ ಪೂರಕವಾದ ಅಂಶಗಳನ್ನು ಅಳವಡಿಸಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಮೊದಲೇ ಹೇಳಿದಂತೆ ಯಾವುದೇ ಸಮಾಜದ ಸಾಹಿತ್ಯ ಸಂಸ್ಕೃತಿಗಳೊಳಗೆ ಕತ್ತಲು ಬೆಳಕಿನಂತೆ ಮಾನವ ಪರಿಸರ ಮತ್ತು ಪ್ರಾಕೃತಿಕ ಪರಿಸರಗಳೆರಡೂ ಜೀವಂತಿಕೆಯಿಂದ ಒಂದರೊಳಗೊಂದು ಬೆಸೆದುಕೊಂಡಿರುತ್ತವೆ. ಇವೆರಡನ್ನೂ ಒಡೆದು ಬೇರೆ ಮಾಡಲಾಗುವುದಿಲ್ಲ. ಈ ಎರಡೆಳೆಯ ಸಾಹಿತ್ಯ ಹೆಣಿಗೆಯಲ್ಲಿ, ಪ್ರಕೃತಿ ಪರಿಸರದ ಜೀವಿಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ ಜ್ಯೋತಿಯ ಬೆಳಕಲ್ಲಿ ಮಾನವ ಜೀವನದ ಸಾಂಸ್ಕೃತಿಕ ಪರಿಸರ ಜೀವಂತಿಕೆಯಾಗಿರುವುದರ ಔಚಿತ್ಯವನ್ನರಿತು, ಈ ತತ್ವವನ್ನು ಜನ ಮನದಲ್ಲಿ ಭಿತ್ತಿ ಜನಪ್ರಿಯಗೊಳಿಸಬೇಕಾಗಿದೆ. ಏಕೆಂದರೆ ಈ ಯುಗದಲ್ಲಿ ಪರಿಸರ ಸಮಸ್ಯೆಯಿಂದ ಬಿಡಿಸಿಕೊಳ್ಳಲಾಗದ ಮಾನವ ಸಮುದಾಯ ಈಗಾಗಲೇ ಆತಂಕಕ್ಕೊಳಗಾಗಿದೆ. ಆದ್ದರಿಂದ ಇಡೀ ಜೀವಪರಿಸರವೇ ಸಂಪೂರ್ಣ ನಾಶವಾಗುತ್ತಿರುವುದನ್ನು ಅರಿತು, ಅದರಿಂದ ಪಾರಾಗಲು ಪರಿಸರದ ಶುದ್ಧೀಕರಣಕ್ಕೆ, ಅದರ ಉಜ್ವಲ ಸ್ಥಿತಿಗೆ ತರುವ ಸಾಧ್ಯತೆಗಳ ಬಗ್ಗೆ, ಸಾಹಿತ್ಯದ ಮಾರ್ಗದರ್ಶನಗಳೇನು? ಎಂದು ಹುಡುಕಿ ತೆಗೆಯುವ ಸಲುವಾಗಿ ಪ್ರಾಕೃತಿಕ ಜೀವಿಗಳ ಜೀವನ ಪರಿಸರದ ನಾನಾ ಚಟುವಟಿಕೆಗಳ ಸಾಂಸ್ಕೃತಿಕ ಅಧ್ಯಯನದ ಕಡೆ ಹೆಚ್ಚು ಗಮನ ಸೆಳೆಯುವ ಕೆಲಸವಾಗಬೇಕಾಗಿದೆ.

ಈ ಅಧ್ಯಯನ ತುಂಬ ವಿಸ್ತಾರವಾದುದ್ದು ಎನ್ನುವುದಕ್ಕೆ **"ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ"** ಎಂಬ ಶೀರ್ಷಿಕೆಯೇ ಸಾಕು. ಇದರ ಆಳ ಅಗಲಗಳ ನೇರ ಪ್ರವೇಶಕ್ಕಾಗಿ ಇಲ್ಲಿ ಕನ್ನಡ ಸಾಹಿತ್ಯದೊಳಗೆ ಅದರ ಎಲ್ಲ ಘಟ್ಟಗಳು ಮತ್ತು ಆ ಸಾಹಿತ್ಯ ಘಟ್ಟಗಳ ಎಲ್ಲಾ ಪ್ರಕಾರಗಳು ಸೇರಿವೆ. ಹಾಗೂ ಆ ಕಾಲಘಟ್ಟಗಳಲ್ಲಿ ಬಂದಿರುವ ಅನುವಾದ, ವೈಚಾರಿಕ, ವೈಜ್ಞಾನಿಕ, ಸಂಶೋಧನೆ, ಪತ್ರಿಕಾ ಬರೆಹ ಮುಂತಾದ ಸಾಹಿತ್ಯೇತರ ಬರೆಹಗಳೆಲ್ಲ ಈ ಅಧ್ಯಯನಕ್ಕೊಳಪಡುತ್ತವೆ, ಯಾಕೆಂದರೆ ಸಾಹಿತ್ಯದ ವ್ಯಾಪ್ತಿ ವಿಫುಲವಾಗಿದೆ. ಈ ಅಪರಿಮಿತ ಸಾಹಿತ್ಯವನ್ನು ಪರಿಮಿತಿ ಅಧ್ಯಯನದೊಳಗೆ ಹೊಂದಿಸಿಕೊಳ್ಳಲು ತುಂಬಾ ಶ್ರಮಪಡಬೇಕಾಗಿದೆ. ಯಾಕೆಂದರೆ ಈ ಸಾಹಿತ್ಯದ ಯಾವುದಾದರೂ ಒಂದು ಘಟ್ಟವನ್ನು ಆಯ್ಕೆ ಮಾಡಿಕೊಳ್ಳೋಣವೆಂದರೆ, ಈ ಅಧ್ಯಯನದ ಪರಿಕಲ್ಪನೆಯುಳ್ಳ ವಿಷಯ, ವಸ್ತುಗಳ ಕೊರತೆ ಕಂಡು ಬಂತು. ಅಲ್ಲದೆ ಸಾಹಿತ್ಯದ ಯಾವುದಾದರೊಂದು ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳೋಣವೆಂದು ಹುಡುಕಿದರೂ ಯಾವೊಂದು ಪ್ರಕಾರದಲ್ಲೂ ಪೂರಕ ಸಂಬಂಧಿ ಕೃತಿಗಳು ಹೆಚ್ಚು ದೊರೆಯಲಿಲ್ಲ. ಹಾಗಾಗಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅಲ್ಲೊಂದು ಇಲ್ಲೊಂದು ವಿರಳವಾಗಿ ದೊರೆಯುತ್ತಿದ್ದನ್ನು ಕಂಡು; ಒಟ್ಟು ಕನ್ನಡ ಸಾಹಿತ್ಯವನ್ನೇ ಆಯ್ಕೆ ಮಾಡಿಕೊಳ್ಳಬೇಕಾಯಿತು. ಈ ಕಾರಣಕ್ಕಾಗಿ ಸಂಶೋಧನಾ ಕ್ಷೇತ್ರ ವಿಸ್ತಾರವಾಯಿತು. ಈ ಸಂಶೋಧನ ಅಧ್ಯಯನದ ಪರಿವಿಡಿಯ ವಸ್ತು, ವಿಷಯಗಳ ಜೋಡಣೆಗೆ ಸಾಹಿತ್ಯ ಕೃತಿಗಳಲ್ಲಿ ಪೂರಕ ಮಾಹಿತಿ ಹೆಚ್ಚು ಸಿಗುತ್ತಿರಲಿಲ್ಲಾ ಆ ಕಾರಣಕ್ಕಾಗಿ, ಹಾಗೂ ಬಳಸಿಕೊಂಡ ಎಲ್ಲಾ ಕೃತಿಗಳ ವಸ್ತು, ವಿಷಯಗಳನ್ನು ಅಧ್ಯಯನಕ್ಕೊಳಪಡಿಸಿಕೊಳ್ಳಲಾಗಿಲ್ಲ. ಈ ಜೀವ ಸಂಸ್ಕೃತಿಗೆ ಅನುಗುಣವಾದ ಅಂಶಗಳು ಸಾಹಿತ್ಯ ಕೃತಿಗಳಲ್ಲೇ ದೊರೆಯದಿದ್ದರಿಂದ ಸಾಹಿತ್ಯೇತರ ಕೃತಿಗಳಾದ ವೈಚಾರಿಕ, ವೈಜ್ಞಾನಿಕ, ಪತ್ರಿಕಾ ಬರೆಹ ಮುಂತಾದವುಗಳ ಮಾಹಿತಿ ವಿವರಣೆಯನ್ನು ಬಳಸಿಕೊಳ್ಳಲಾಗಿದೆ. ಇಲ್ಲಿಯ ಅಧ್ಯಯನಕ್ಕೆ ಕೃತಿಯು ಮುಖ್ಯವಾಗಿಲ್ಲ, ಕರ್ತೃವೂ ಮುಖ್ಯವಾಗಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ 'ಜೀವ–ಜೀವಿ ಸಂಸ್ಕೃತಿ'ಗೆ ಸಂಬಂಧಿತ ವಿಷಯ, ವಸ್ತುಗಳು ಮಾತ್ರ ಪ್ರಧಾನವಾಗಿವೆ. ಆದ್ದರಿಂದಲೇ ಇಲ್ಲಿಯ ಬರವಣಿಗೆಯಲ್ಲಿ ಈ ಸಂಶೋಧನಾ ವಿಷಯಕ್ಕೆ ಪೂರಕ ಮಾಹಿತಿ ಈ ಯಾವ ಸಾಹಿತ್ಯ ಕೃತಿಗಳಲ್ಲಿ ಸಿಕ್ಕರೂ ಸಂದರ್ಭೋಚಿತವಾಗಿ ಒಟ್ಟೊಟ್ಟಿಗೆ ಬಳಸಿ ಕೊಂಡು ಚರ್ಚಿಸಲಾಗಿದೆ. ಒಟ್ಟಾರೆ ಇಲ್ಲಿಯ ಸ್ಪಷ್ಟ ಚರ್ಚೆಗಾಗಿ, ಅದರ ಪೂರಕ ಮಾಹಿತಿಗಾಗಿ ಪ್ರಾಚೀನದಿಂದ ಆಧುನಿಕ ಸಾಹಿತ್ಯದ ಜೊತೆಗೆ ವೇದ, ಪುರಾಣ, ಧರ್ಮಗ್ರಂಥಗಳು, ಚರಿತ್ರೆ,

ಶಾಸನ ಸಾಹಿತ್ಯ, ಜನಪದ ಸಾಹಿತ್ಯ, ವಿಜ್ಞಾನ ಮುಂತಾದವುಗಳ ಮಾಹಿತಿಯನ್ನು ಬಳಸಿಕೊಂಡು ಚರ್ಚಿಸಿರುವುದು ವಿಶೇಷವಾಗಿದೆ. ಹಾಗಾಗಿ ಈ ಎಲ್ಲಾ ಮಾಹಿತಿಗಳ ಅನನ್ಯತೆಯಿಂದಾಗಿ ಅಂತರ್ ಶಿಸ್ತೀಯ, ಬಹುಶೀಸ್ತೀಯ ಅಧ್ಯಯನವಾಗಿ ರೂಪುಗೊಂಡಿದೆ. "ಕನ್ನಡ ಸಾಹಿತ್ಯದಲ್ಲಿ: ಜೀವ ಸಂಸ್ಕೃತಿ" ಎಂಬ ವಿಷಯದ ಈ ಮಹಾಪ್ರಬಂಧದ ಅಂತಿಮ ವರದಿಗೆ, ಕ್ಷೇತ್ರ ಕಾರ್ಯದಿಂದ ಹಲವಾರು ಗ್ರಂಥಾಲಯಗಳಿಗೆ ಭೇಟಿ ಕೊಟ್ಟು ಹೆಚ್ಚು ಹೆಚ್ಚು ಪುಸ್ತಕ, ವಿಷಯ, ಚಿಂತನೆಗಳ ಭಿನ್ನತೆಯನ್ನು ಮನವರಿಕೆ ಮಾಡಿಕೊಂಡು 'ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ'ಯ ಸತ್ಯವನ್ನು ಸಮಾಜದ ಮುಂದಿಡಲು ಈ ಸಂಶೋಧನಾ ಕಾರ್ಯ ಮಾಡಲಾಗಿದೆ. ಈ ಕಾರ್ಯಕ್ಕೆ ಹಲವಾರು ಓದುಗರೊಂದಿಗೆ, ವಿಷಯ ತಜ್ಞರೊಂದಿಗೆ ಚರ್ಚಿಸಿ, ಈ 'ಜೀವ–ಜೀವಿ ವೈವಿದ್ಯ ಚಟುವಟಿಕೆಗಳ ಸಂಸ್ಕೃತಿ' ಸಂಬಂಧಿ ಚಿಂತನೆಗಳನ್ನು ಗಟ್ಟಿಗೊಳಿಸಿಕೊಂಡು ಈ ವಿಷಯ ಶೋಧನೆಯ ಆಳಕ್ಕೆ ಪ್ರವೇಶಿಸಿದ್ದೇನೆ. ಇಲ್ಲಿಯ ವಿಷಯದ ಸ್ವರೂಪ ಈ ರೀತಿ ಇದೆ. ವಿಷಯ ಕೇಂದ್ರಿತವಾದ ಈ ಪರಿಶೋಧ ಐದು ಭಾಗಗಳಿಂದ ಕೂಡಿದ್ದು, ಇಲ್ಲಿರುವ ಮಾಹಿತಿಗಳಿಗನುಗುಣವಾಗಿ ವಿಶ್ಲೇಷಿಸಿ ವ್ಯಾಖ್ಯಾನಿಸಲಾಗಿದೆ.

ಈ ಕೃತಿಯ ಆರಂಭದಲ್ಲಿ 'ಅಧ್ಯಯನದ ಹಿನ್ನೆಲೆ, ಉದೇಶ ಮತ್ತು ವ್ಯಾಪ್ತಿ' ಶೀರ್ಷಿಕೆಯಡಿ ಇವತ್ತಿನ ಪರಿಸರದ ಜೀವಿಗಳ ಸಮುಹ, ಅವುಗಳ ಅಸ್ತಿತ್ವ ಹಾಗೂ ಜೀವನ ನಡವಳಿಕೆಗಳ, ಸಾತ್ವಿಕ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ. ಇದುವರೆಗಿನ ಜೀವ ಪರಿಸರ ಸಂಬಂಧಿ ಅಧ್ಯಯನ, ಅದರ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಂತಹ ಹಲವಾರು ಅಂಶಗಳನ್ನು ಇಲ್ಲಿ ಚರ್ಚಿಸಿದೆ. ಎರಡನೇ ಭಾಗದಲ್ಲಿ 'ಕನ್ನಡ ಸಾಹಿತ್ಯದಲ್ಲಿ: ಸಸ್ಯ ಮತ್ತು ಕೀಟಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ' ಸಸ್ಯ ಸಂಕುಲಗಳ ಹುಟ್ಟು, ಬೆಳವಣಿಗೆ, ಆವಾಸ, ಆಹಾರ, ಇತರ ಜೀವಿಗಳೊಂದಿಗೆ ಸಂಬಂಧ..' ಎಂಬ ಮುಖ್ಯ ವಿಷಯದ ಅಡಿಯಲ್ಲಿ ಇಡೀ ಸಸ್ಯ ಸಂಕುಲಗಳ ಸಾಂಸ್ಕೃತಿಕ ಪರಿಕಲ್ಪನೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಮೂರನೇ ಭಾಗದಲ್ಲಿ 'ಕನ್ನಡ ಸಾಹಿತ್ಯದಲ್ಲಿ: ಹಕ್ಕಿ–ಪಕ್ಷಿ ಸಂಕುಲಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ' ಹಕ್ಕಿ–ಪಕ್ಷಿಗಳ ಹುಟ್ಟು ಬೆಳೆವಣಿಗೆ ಮತ್ತು ಜೀವನ ಕ್ರಮ, ಆಹಾರ, ಅವಸಾನ, ಮತ್ತಿತರ ಜೀವ ಸಂಸ್ಕೃತಿಯ ವಿಚಾರಾಂಶಗಳನ್ನು ಚರ್ಚಿಸಲಾಗಿದೆ. ನಾಲ್ಕನೇ ಭಾಗದಲ್ಲಿ 'ಕನ್ನಡ ಸಾಹಿತ್ಯದಲ್ಲಿ: ಪ್ರಾಣಿಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ' ಪ್ರಾಣಿಗಳ ಹುಟ್ಟು ಬೆಳವಣಿಗೆ, ಆವಾಸ, ಆಹಾರ, ಅವಸಾನ ಮತ್ತಿತರ ಜೀವನಕ್ರಮಗಳನ್ನು ಕುರಿತ ಪ್ರಾಣಿ ಸಂಸ್ಕೃತಿಯ ವಿಚಾರಾಂಶಗಳನ್ನು ಕುರಿತು ಚರ್ಚಿಸಲಾಗಿದೆ. ಐದನೇಯ ಭಾಗದಲ್ಲಿ 'ಕನ್ನಡ ಸಾಹಿತ್ಯದಲ್ಲಿ: ಪ್ರಕೃತಿ–ಭೂಮಿ–ಮಾನವ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿಗಳ ಪರಿಣಾಮ, ದುಷ್ಪರಿಣಾಮ, ಮತ್ತು ಪರಿಹಾರ ಮಾರ್ಗಗಳ ಬಗ್ಗೆ ಪರೀಶಿಲಿಸಲಾಗಿದೆ. ಆರನೇಯ ಭಾಗವಾದ "ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿಯ ತಾತ್ವಿಕ ಮಾರ್ಗ"ದಲ್ಲಿ ಎಲ್ಲಾ ಜೀವಿಗಳ ಸಂಸ್ಕೃತಿಯ ಸೈದ್ಧಾಂತಿಕ ಮಾರ್ಗವನ್ನು ಕಟ್ಟಿಕೊಡಲಾಗಿದೆ. ಈ ಪ್ರಬಂಧದ ವರದಿಯ ಕೊನೆಯ ಭಾಗವಾದ 'ಉಪಸಂಹಾರ'ದಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿಯನ್ನು ಕಂಡ ಬಗೆಯನ್ನು ಪರಿಶೀಲಿಸಲಾಗಿದೆ. ಈ ಘಟ್ಟಗಳ ಪ್ರಕೃತಿ ತಿಳಿವಳಿಕೆಯ ವಿವಿಧ ಮಜಲುಗಳನ್ನು, ಅವುಗಳ ಸಾಧಕ ಭಾದಕಗಳನ್ನು ಕುರಿತು ಚರ್ಚಿಸಿ, ಅಲ್ಲಿ ಕಂಡುಕೊಂಡ ಸಾರಾಂಶಗಳ ಮತ್ತು ಅವುಗಳ ಮಹತ್ವ, ಮೌಲ್ಯಗಳ ಮುಂದಿನ ಫಲಿತವನ್ನು ದಾಖಲಿಸಲಾಗಿದೆ. ಹಾಗೂ ಮುಂದಿನ ಸಂಶೋಧನ ಅಧ್ಯಯನಗಳ ಸಾಧ್ಯತೆಗಳ ಬಗ್ಗೆ ಸೂಚನೆ ನೀಡಲಾಗಿದೆ. ಅಂತ್ಯದಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ನಾನಾ ಗ್ರಂಥಗಳ ಮಾದರಿ ಪಟ್ಟಿಯನ್ನು ನೀಡಲಾಗಿದೆ.

ಕೊನೆ ಟಿಪ್ಪಣಿ

1. ಪುಟ್ಟಸ್ವಾಮಿ.ಕೆ, ಕೃಪಾಕರ ಸೇನಾನಿ, ಜೀವಜಾಲ, ಪು–ಅರಿಕೆ ಭಾಗ
2. ಶಿವರಾಮಯ್ಯ, ಸಾಹಿತ್ಯ ಪರಿಸರ, ಪು– 64–74

ಅಧ್ಯಾಯ: 1

ಜೀವ–ಜೀವಿ–ಜೀವನ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ) ಅವಲೋಕನ

'ಜೀವ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂಬುದು ಜಗತ್ತಿನ ನಾನಾಚಟುವಟಿಕೆಗಳ ಸಂಸ್ಕೃತಿಗಳಲ್ಲಿ ಒಂದು. ಇದು ಹೆಚ್ಚು ಜನಪ್ರಿಯ ಸಂಸ್ಕೃತಿ ಚಿಂತನೆಯಾಗಿ ಬೆಳೆಯದೆ ಇರುವ ಕಾರಣ, ಇವತ್ತಿನ ಭೌತ ಮತ್ತು ಅಭೌತ ಪರಿಸರಗಳ ಜಾಗತಿಕ ದುಷ್ಪರಿಣಾಮಗಳಿಂದ ಪ್ರಕೃತಿಯ ಸಕಲ ಜೀವಿಗಳ ಜೀವ–ಜೀವನದ ನಾನಾ ಸಮಸ್ಯೆಗಳು ಉದ್ಭವವಾಗುತ್ತಿವೆ. ಇವುಗಳ ನಿಯಂತ್ರಣಕ್ಕಾಗಿ ಪ್ರಕೃತಿಯೊಂದಿಗೆ ಮಾನವ ಪ್ರತಿಸ್ಪಂದಿಸಿ; ಅರ್ಥೈಸಿಕೊಂಡು ವ್ಯವಹರಿಸಬೇಕಾಗಿದೆ. ಸಕಲ ಜೀವಿಗಳ ಸಮುದಾಯಗಳೊಂದಿಗೆ ಮಾನವ ತನ್ನ ಪ್ರೀತಿಯ ನಡವಳಿಕೆಗಳಿಂದ ಇವತ್ತಿನ ತಾಂತ್ರಿಕ, ವೈಜ್ಞಾನಿಕ, ವೈಚಾರಿಕ ಪ್ರಜ್ಞೆಯಿಂದ ಹೇಗೆ ಸಹ ಜೀವನ ನೆಡೆಸಲು ಸಾಧ್ಯವೆಂಬುದನ್ನು ಬಿತ್ತಿ, ಬಿಡಿಸಿ ಹೇಳಿ ಜನಪ್ರಿಯಗೊಳಿಸಬೇಕಾಗಿದೆ. ಇದರಿಂದ 'ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)'ಯ ಪ್ರಾಚೀನ ಮತ್ತು ಆಧುನಿಕ ಪರಿಕಲ್ಪನೆಗಳನ್ನು ಅವಲೋಕಿಸುವ ಪ್ರಯತ್ನವಿದು.

ಏಕೆಂದರೆ ಈ ಸಂಸ್ಕೃತಿಯ ಬಗ್ಗೆ ಇನ್ನೂ ಸ್ಪಷ್ಟ ಪರಿಕಲ್ಪನೆ ರೂಪುಗೊಳ್ಳಲಾಗಿಲ್ಲ. ಹಾಗಿದ್ದರೂ ಈಗಿರುವ ವೈಜ್ಞಾನಿಕ, ತಾತ್ವಿಕ, ಸಾಹಿತ್ಯ, ಇತಿಹಾಸ ಇನ್ನಿತರ ಬಹುಶಿಸ್ತೀಯ ದಾಖಲೆಗಳ ಆಧಾರದ ಮೇಲೆ 'ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ'ಯ ಸತ್ಯವನ್ನು ಪುನರ್ ವ್ಯಾಖ್ಯಾನಿಸುವುದು ಯುಕ್ತವಾಗಿದೆ. ಮೊದಲಿಗೆ 'ಸಂಸ್ಕೃತಿ' ಎಂಬುದು ಸಂಸ್ಕೃತ ಪದ. ಇದರ ಅರ್ಥ ಮತ್ತು ವ್ಯಾಖ್ಯಾನಗಳನ್ನು; ಮಾನವನಿಗಾಗಿ, ಮಾನವ ನೀಡಿರುವ ಮಾನವ ಕೇಂದ್ರಿತ ಅನುಭವಾತ್ಮಕ ವಿವರಣೆಗಳಾಗಿವೆ. ಹೀಗಾಗಿ 'ಸಂ+ಕೃತಿ=ಸಂಸ್ಕೃತಿ'. 'ಸಂ' ಎಂದರೆ 'ಹಲವು'. 'ಕೃತಿ' ಎಂದರೆ ಪುಸ್ತಕ, ಗ್ರಂಥ, ಶಾಸನ, ಶ್ರಮದ ಕೆಲಸ ಮುಂತಾದವು. ಇವೆಲ್ಲ ಕ್ರಿಯಾ ರೂಪಿಯಾದವು. ಅಂದರೆ ಈ ಸಂಸ್ಕೃತಿ ಪದದ ಭಾವರ್ಥ– ಮಾನವನ ಮನಸ್ಸು ಮತ್ತು ಕೈ ಯಿಂದ ಅಂದರೆ ಯುಕ್ತಿ, ಶಕ್ತಿಗಳಿಂದ ಕಟ್ಟಲ್ಪಟ್ಟದ್ದು, ಮಾಡಲ್ಪಟ್ಟದ್ದು, ನಿರ್ಮಿಸಲ್ಪಟ್ಟದ್ದೆಂಬುದು. ಹೀಗೆ ಮಾಡಿರುವವನ್ನೆ ಕೃಷಿ, ಕೈಗಾರಿಕೆ, ನಗರ, ಗ್ರಾಮ, ಅಣು ಸಂಸ್ಕೃತಿಗಳಿಂದಾದ ವಿಜ್ಞಾನ–ತಂತ್ರಜ್ಞಾನಗಳಿಂದ ಬೆಳೆದ ಆಧುನಿಕ ವೈವಿದ್ಯ ಕ್ರಿಯಾ ಚಟುವಟಿಕೆಗಳಾಗಿವೆ. ಈ ರೀತಿಯಲ್ಲಿ ಕರೆಯಲ್ಪಟ್ಟಿರುವ ನಾನಾ ಹೆಸರಿನ ಮಾನವನ ಕ್ರಿಯಾ ಚಟುವಟಿಕೆಗಳೆ ಸಂಸ್ಕೃತಿಗಳಾಗಿವೆ. ಇವುಗಳಲ್ಲಿ ಒಂದು ಅಣು ಸಂಸ್ಕೃತಿಯನ್ನೂ ಹೀಗೆ ಪರಿಭಾವಿಸಬಹುದು. ಉದಾ: 'ವಿಜ್ಞಾನಿ ತನ್ನ ಪ್ರಯೋಗಾಲಯದಲ್ಲಿ ನಾನಾ ಜೀವಾಣುಗಳನ್ನು ಬಳಸಿ ವೈಜ್ಞಾನಿಕವಾಗಿ ಕಂಡುಕೊಂಡ ಫಲಿತದಿಂದ ಅಣುಗಳ ಕಾರ್ಯವಿಧಾನದ ಕ್ರಮಗಳ ಕ್ರಿಯೆಯನ್ನು; 'ಕ್ರಿಯಾ ಚಟುವಟಿಕೆಗಳ' ನೆಲೆಯಲ್ಲಿ ಅರ್ಥಮಾಡಿಕೊಳ್ಳ ಬಹುದು. ಇದರಲ್ಲಿ ಪ್ರಯೋಗಾಲಯದ ಸಂಸ್ಕೃತಿಯಿದೆ, ಜೊತೆಗೆ ಅಣುಗಳು ಅವುಗಳ ಸಮಯಕ್ಕೆ ತಕ್ಕಂತೆ ಪರಿವರ್ತನೆಯಾಗುವ, ರೂಪಾಂತರವಾಗುವ ಕ್ರಿಯಾ ಗುಣಗಳ ವೈವಿಧ್ಯ ಚಟುವಟಿಕೆಗಳ

ಕ್ರಮವನ್ನೆ 'ಅಣು ಸಂಸ್ಕೃತಿ'ಯೆನ್ನ ಬಹುದು. ಇದೇ ತರಹ ಜಗತ್ತಿನ ಜೀವಿಗಳ ಜೀವನ ವಿಧಾನದಲ್ಲಿರುವ ಅವುಗಳ ನಡವಳಿಕೆಯ ಕ್ರಿಯಾ ಚಟುವಟಿಕೆಗಳ ಕ್ರಮವನ್ನೆ ಆಯಾ 'ಜೀವಿಗಳ ಸಂಸ್ಕೃತಿ' ಎಂದು ಕರೆಯಬಹುದು. ಹಾಗೆ ನೋಡಿದರೆ, ಇವಕ್ಕೆಲ್ಲ ಜಗತ್ತಿನ ಪ್ರಕೃತಿಯ ಜೀವಿಗಳಲ್ಲಿ ಮಾನವನಲ್ಲಿರುವ ಮೆದುಳು, ಗಂಟಲು, ಕೈ ಈ ಮೂರು ವಿಶೇಷ ಅಂಗಗಳು. ಇವು ಒಂದಕ್ಕೊಂದು ಪರಸ್ಪರ ಕ್ರಿಯಾಶಕ್ತಿಯನ್ನೊಳಗೊಂಡಿವೆ. ಇವುಗಳ ಪರಿಣಾಮ ಮೇಲೆ ಪ್ರಸ್ತಾಪಿಸಲ್ಪಟ್ಟ ಅಪಾರ ಮಾನವ ನಿರ್ಮಿತ ಸಂಸ್ಕೃತಿಗಳು ಕಟ್ಟಲ್ಪಟ್ಟು ಬೆಳೆದಿವೆ. ಇಂತಹ ಕ್ರಿಯಾ ಚಟುವಟಿಕೆಗಳು ಇನ್ನಿತರ ಯಾವ ಜೀವಿಗಳಿಗೂ ಸಾಧ್ಯವಾಗಿಲ್ಲವೆಂಬುದೆ ಅವನ ವಿಶೇಷ. ಏನೆಂದರೆ ಪ್ರಕೃತಿಯಲ್ಲಿರುವ ಸಕಲ ಜೀವಿಗಳ ದೇಹಕ್ಕಿಂತ; ಮಾನವನ ಮೆದುಳು ಚಿಕ್ಕದಾಗಿ, ಅವನಿಗಿರುವಂತೆ ಗಂಟಲ ಧ್ವನಿ ಪೆಟ್ಟಿಗೆಯ ಸ್ವರೂಪ, ವಿಶಿಷ್ಟ ಗುಣ ಶಕ್ತಿಗಳು ಇತರ ಜೀವಿಗಳಿಗೆ ಇಲ್ಲದಿರುವುದು ಹಾಗೂ ಮಾನವನಿಗಿರುವ ಕೈ ರಚನೆ ಮತ್ತು ಅವನ ಕೈನಿಂದ ಮಾಡುವ ಕೆಲಸಗಳಂತೆ ಇನ್ಯಾವ ಜೀವಿಗಳಿಗೂ ಸಾಧ್ಯವಾಗದಿರುವುದು. ಇದಲ್ಲದೆ ಮಾನವನು ಯೋಚನೆ ಮಾಡಿ ಮಾಡುವ ಕೆಲಸಗಳಂತೆ ಬೇರೆ ಜೀವಿಗಳಿಗೂ ಈ ಆಲೋಚನಾ ಶಕ್ತಿ ಇದ್ದರೂ; ಅವುಗಳ ಆಲೋಚನೆಗೆ ಅನುಗುಣವಾಗಿ ತಮ್ಮ ಕೈ ಮತ್ತು ಕಾಲುಗಳ ಮಿತಿಯಲ್ಲಿ ಕೆಲಸ ಮಡುವವೇ ಹೊರತು ಮಾನವನಂತೆ ಕಾರ್ಯರೂಪಗೊಳಿಸಲಾರವು. ಆದರೆ ಮಾನವ ತನ್ನ ಮನದಲ್ಲಿ ಏನು ಆಲೋಚಿಸುತ್ತಾನೊ ಅವೆಲ್ಲವನ್ನು ಮಾಡಲಾಗದಿದ್ದರೂ ಅವನಿಗೆ ಸಾಧ್ಯವಾಗುವ ಎಲ್ಲಾ ಕಾರ್ಯಗಳನ್ನು ಮಾಡುತ್ತಾನೆ. ಆದ್ದರಿಂದಲೆ ಇವನು ವಿಶಿಷ್ಟ ಜೀವಿಯಾಗಿ, ತನ್ನ ಹಾಗೂ ತನ್ನ ಕುಟುಂಬದ ಆರೋಗ್ಯ, ರಕ್ಷಣೆ, ಬೆಳವಣಿಗೆಗಾಗಿ ಮತ್ತು ಅವನ ಅಧಿಕಾರ, ಕೀರ್ತಿಸಾಧನೆಗಾಗಿ ನಾನಾ ಸಂಪತ್ತಿನ ಕ್ರೂಢಿಕರಣ ಮಾಡಲು ಹೋರಾಡುತ್ತಾನೆ. ಹಾಗೆಯೇ ಸಾಮುದಾಯಿಕ, ಜಾಗತಿಕ ಸಹಾಯ, ಕಾರ್ಯ ಸಾಧನೆಗಳನ್ನು ಮಾಡಿರುವ ಅನನ್ಯ ಕಾರ್ಯ ಚಟುವಟಿಕೆಗಳೆ ಮಾನವನ ಸಾಂಸ್ಕೃತಿಕ ನೆಲೆಗಳು. ಇದಕ್ಕೆ ವಿರೋದ ಎಂಬಂತಿರುವುದೇ 'ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಪರಿಕಲ್ಪನೆ. ಇದರಲ್ಲಿ ಸಕಲ ಜೀವಿಗಳು ತಮ್ಮ ಜೀವಾ ಹಿತಕ್ಕಾಗಿ ಹೋರಾಡುತ್ತಲೇ, ಅವು ತಮ್ಮ ನಾಳೆಯ ಜೀವ ಹಿತಕ್ಕಾಗಿ ಯೋಚಿಸದೇ ಪ್ರತಿಸ್ಪಂಧಿಸುವ ಪ್ರಾಕೃತಿಕ ನಡವಳಿಕೆಗಳಿರುತ್ತವೆ. ಅಂದರೆ ಪ್ರಕೃತಿಯಿಂದಲೇ ಎಲ್ಲವೂ ನಿರ್ಮಾಣವಾಗಿ, ರಚನೆಯಾಗಿ ಕಟ್ಟಲ್ಪಡುವುದು ಗಮನಾರ್ಹವಾಗಿದೆ. ಇದನ್ನೇ 'ಪ್ರಕೃತಿ (ನಿಸರ್ಗ)ವೈವಿಧ್ಯ ಚಟುವಟಿಕೆಗಳ ಸಂಸ್ಕೃತಿ' ಎಂದು ಕರೆಯಲ್ಪಟ್ಟಿರುವುದು. ಇದರ ತುಣುಕುಗಳಾದ ಆಕಾಶ, ಭೂಮಿಯಲ್ಲಿರುವ ಜೀವಿಗಳಲ್ಲಿ ನಡೆಯುವ ಪ್ರಾಕೃತಿಕ ಚಟುವಟಿಕೆಗಳನ್ನು ಕೇಂದ್ರ ಮಾಡಿಕೊಂಡು ಆಯಾ ಹೆಸರಿನ ಸಂಸ್ಕೃತಿಗಳೆಂದು ಕರೆಯಲಾಗುತ್ತಿದೆ. ಪ್ರಾಕೃತಿಕ ಪರಿಸರದಲ್ಲಿರುವ ಭೂಮಿ–ಆಕಾಶಗಳ ನಡುವಿನ ಸಾವಯವ ಜೀವ–ಜೀವಿಗಳ ಸಂಬಂಧವೇ ವಿಸ್ಮಯವಾದುದ್ದು. ಇದರಲ್ಲಿರುವ ಅಸಂಖ್ಯಾ ಪರಸ್ಪರ ಕ್ರಿಯಾರೂಪಿ; ಧನಾತ್ಮಕ ಮತ್ತು ಋಣಾತ್ಮಕ ಸಹಬಂಧವೇ ಈ ನಿಸರ್ಗ ಜೀವಿಗಳ ಜೀವನವೆಂಬುದು ಸ್ಪಷ್ಟವಾಗಿದೆ.

'ಜೀವ–ಜೀವಿಗಳ ನಡುವೆ ಮತ್ತು ಅವುಗಳ ಜೀವ–ಭಾವಗಳಿಂದ ನಡೆಯುವ ಕ್ರಿಯಾ ಚಟುವಟಿಕೆಗಳ ಕ್ರಮವೆ ಜೀವನದ ಸಹಜ ನಡವಳಿಕೆಗಳಾಗಿರುತ್ತವೆ. ಇಂತಹ ಹೆಜ್ಜೆಗಳು ಆಕಸ್ಮಿಕ ಹಾಗೂ ಸಹಜವಾಗಿ ಸಂಭವಿಸುವುದು ಸಹಜ. ಹಾಗಾಗಿ ಈ ಪ್ರಾಕೃತಿಕ ಚಟುವಟಿಕೆಗಳ ಸೃಜನಶೀಲವಾದ ನಿಯಮಬದ್ದ ಈ ಸಂಪ್ರದಾಯವನ್ನೇ 'ಜೀವ–ಜೀವಿಗಳ ಜೀವನ ಚಟುವಟಿಕೆಗಳ ಕ್ರಮ (ಸಂಸ್ಕೃತಿ)'ಗಳೆಂದು ಕರೆಯಬಹುದಾಗಿದೆ. ಇದರಲ್ಲಿ ಸಕಲ ಜೀವ–ಜೀವಿಗಳ ಸಮ ಮತ್ತು ವಿಭಿನ್ನ ವರ್ಗಗಳ ನಡುವೆ ಸಂಭವಿಸುವ ಸ್ವಾಭಾವಿಕ ಘಟನೆಗಳ ಕ್ರಿಯಾಗುಣವಿರುತ್ತದೆ. ಇಂತಹ ನಡವಳಿಕೆಗಳ ಸಹಬಂಧವೇ 'ಜೀವ ವೃತ್ತ'. ಇದು ಪ್ರಕೃತಿಯ ಚೌಕಟ್ಟೊಳಗೆ ಇರುವುದರಿಂದ ಪ್ರಕೃತಿ ಕೇಂದ್ರಿತ 'ಜೀವ ವ್ಯೂಹ'ವೆಂದು ಕರೆಯುವುದು. ಈ ವೃತ್ತಕ್ಕೊಳಪಡುವ ನಿಸರ್ಗದ ನೀತಿ–ನಿಯಮಗಳ ಅವಿನಾಭಾವದ ಸ್ವಾಭಾವಿಕ ಸಂಬಂಧವನ್ನೇ ಮೇಲೆ ಹೇಳಿದಂತೆ, ಇಲ್ಲಿ 'ಪ್ರಕೃತಿ ಸಂಸ್ಕೃತಿ' ಎಂದು ಕರೆಯಲಾಗಿರುವುದು. ಇದೇ ಜಗತ್ತಿನ ಪ್ರಧಾನ ಸಂಸ್ಕೃತಿಯೂ ಆಗಿದೆ. ಇದರಿಂದ ನಡೆಯುವ ಜೀವ, ಜೀವಿಗಳ ಜೀವನ ಸಂಸ್ಕೃತಿಗಳಲ್ಲಿ ಹಕ್ಕಿ–ಪಕ್ಷಿ, ಕೀಟ, ಸಸ್ಯ, ಪ್ರಾಣಿ, ಮಾನವ ಸಂಸ್ಕೃತಿಗಳು ಒಂದಕ್ಕೊಂದು ಭಿನ್ನವಾಗಿರುವುದು ಗಮನಾರ್ಹ ಸಂಗತಿ.

ಜೀವ ಸಂಸ್ಕೃತಿಯನ್ನು 'ಅಣು ಸಂಸ್ಕೃತಿ' ಎಂದೂ ಕರೆಯಬಹುದು. ಅಣುಗಳನ್ನೆ ವಿಜ್ಞಾನ 'ಪಾರ್ಟಿಕಲ್ಸ್' ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ಕಣಗಳೆಂದು ಕರೆಯುತ್ತದೆ. ಇವು ಕೆಲವೊಮ್ಮೆ ನಿಶ್ಕ್ರಿಯೆಗೊಳ್ಳತ್ತವೆ, ಎಲ್ಲಿಯವರೆಗೆ

ಅಂದರೆ ಅವುಗಳಿಗೆ ಆಧಾರ ಶಕ್ತಿಯಾಗಿ ಇನ್ನೊಂದು + ಅಥವಾ – ಅಣು ಸಿಗುವವರೆಗೆ ದೀರ್ಘಕಾಲಿಕವಾಗಿಯಾದರೂ ಕಾಯುತ್ತವೆ. ಸಿಕ್ಕಮೇಲೆ; ಧನಾತ್ಮಕವಾಗಿಯಾದರೂ ಸರಿ, ಋಣತ್ಮಾಕವಾಗಿಯಾದರೂ ಸರಿ, ಅವು ತಮಗೆ ತಾವೆ ರೂಪಾಂತರಗೊಂಡು ಬೆಳವಣಿಗೆಯಾಗುತ್ತವೆ. ಇವುಗಳಿಗೆ ಬೇರೆ ಜೀವಿಗಳಿಗಿರುವಂತೆ ಆಹಾರ, ನೀರು, ಗಾಳಿ, ಬೆಳಕು(ಬೆಂಕಿ) ಏನೂ ಬೇಕಾಗಿಲ್ಲ. ಸಿಕ್ಕರೂ ತಿರಸ್ಕರಿಸುವುದಿಲ್ಲ, ಅವುಗಳು ಎಲ್ಲಿ ಬೇಕೋ ಅಲ್ಲಿ, ಅಲ್ಲಿಯ ವಾತವರಣಕ್ಕೆ ಅನುಗುಣವಾಗಿ ತಟಸ್ಥ (ನಿಶ್ಕ್ರಿಯೆ)ಯಾಗಿರುತ್ತವೆ, ಇಲ್ಲಾ ಚಟುವಟಿಕೆಯಲ್ಲಿರುತ್ತವೆ. ಇವುಗಳಿಗೆ ಸಾವಿಲ್ಲ, ಯಾವುದೇ ನಿಶ್ಚಿತವಾದ ಸ್ಥಿರ ಕಾಲ, ರೂಪ, ಬಣ್ಣ, ಆಕಾರಗಳಿರುವುದಿಲ್ಲ. ಆದರೂ ಅವುಗಳಿಗೆ ಅವಕಾಶ ಸಿಕ್ಕಾಗ ಅವು ಎಲ್ಲಿದ್ದರೂ ಯಾವರೂಪವನ್ನಾದರೂ ತಾಳಿ ಅವುಗಳ ಕೆಲಸವನ್ನಾರಂಬಿಸುತ್ತವೆ. ಇವುಗಳ ಕೆಲಸ ಕಣ್ಣಿಗೆ ಕಾಣುವುದಿಲ್ಲ, ಇದು ಭೂಮಿ ಮತ್ತು ಆಕಾಶಗಳ ನಡುವೆ ನಡೆಯುವ ವಿಸ್ಮಯ ಕಾರ್ಯಗಳು. ಇವುಗಳನ್ನು ಗಮನಿಸಿ, ಎದುರಿಸಿ, ಹೊಂದಾಣಿಕೆಯಲ್ಲಿ ಜೀವಿಸುತ್ತಿರುವ ಮಾನವ ಪ್ರಕೃತಿಯಲ್ಲಿ ನಡೆಯುತ್ತಿರುವ ಈ ಸ್ವಾಭಾವಿಕ ಚಟುವಟಿಕೆಗಳಾದ ಹುಟ್ಟು, ಸಾವುಗಳ ನಡುವಿನ ಜೀವನ ವೈರುದ್ಯಗಳ ವಿಸ್ಮಯವನ್ನು ಕಂಡು ಅವುಗಳನ್ನು ದೇವರು, ಪ್ರಕೃತಿ, ನಿಸರ್ಗ ನಿಯಮ ಹೀಗೆ ನಾನಾ ಪರಿಕಲ್ಪನೆಗಳಿಂದ ಕರೆಯುತ್ತಿದ್ದಾನೆ,. ಇಂತಹ ಚಟುವಟಿಕೆಗಳ ಮೂಲ ಆಧಾರ ಶಕ್ತಿಯಾದ ಪಾರ್ಟಿಕಲ್(ಜೀವ)ದ ವೈವಿಧ್ಯ ಚಟುವಟಿಕೆಗಳ ನಡೆಯ ಕ್ರಮವನ್ನೆ **“ಜೀವ ಸಂಸ್ಕೃತಿ”** ಎಂದು ಇಲ್ಲಿ ಗುರುತಿಸಲಾಗಿದೆ. ಇವುಗಳಿಂದಲೇ ಜಗತ್ತಿನ ಸಕಲ ಘನ, ದ್ರವ, ಅನಿಲಗಳೊಳಗಿನ ಜೀವಿಗಳ ರೂಪಾಂತರ ಪ್ರಕ್ರಿಯೆ ಅಂದರೆ; ಕಾಲ, ಹುಟ್ಟು, ಜೀವನ, ಸಾವುಗಳು ಚಲನಶೀಲವಾಗಿರುವುದು. ಈ ಆಧಾರದ ಮೇಲೆಯೇ ಕೊರೋನಾ ರೂಪಾಂತರ ಕ್ರಿಯೆಗಳು ನೆಡೆಯುತ್ತಿರುವುದನ್ನು ಗಮನಿಸಬೇಕು. ಇದನ್ನೆ ಇನ್ನೊಂದು ರೀತಿಯಲ್ಲಿ **“ಅಣು ಸಂಸ್ಕೃತಿ”** ಎಂದು ಕರೆಯಲಾಗಿದೆ. ಇವುಗಳಿಂದ ಮಾನವನಿಗೂ ಸಕಲ ಜೀವಿಗಳಿಗೆ ಒಳ್ಳೆದೂ ಆಗಬಹುದು, ಕೆಟ್ಟದ್ದು ಆಗಬಹುದು.

ಈ ಜೀವಾಣುಗಳಿಂದಲೇ ಸಸ್ಯ ಸಂಕುಲ ಸೃಷ್ಟಿಯಾಗಿರುವುದು. ಈ ವರ್ಗಕ್ಕೆ ಪಾಚಿಯಿಂದ ಬೃಹದ್ದಾದ ಮರಗಳವರೆಗೆ ಸಸ್ಯವರ್ಗಕ್ಕೆ ಸೇರುತ್ತವೆ. ಇವುಗಳ ಚಲನಶೀಲತೆಯಿಲ್ಲದೆ; ನಿಂತಲ್ಲೆ ತನ್ನ ರಕ್ಷಣೆಯನ್ನು ಭೂಮಿ, ಆಕಾಶದ ನಕ್ಷತ್ರಗಳಾದ ಸೂರ್ಯ–ಚಂದ್ರರಿಂದ ಪಡೆದುಕೊಳ್ಳುತ್ತವೆ. ಜೊತೆಗೆ ಆಹಾರ, ನೀರು, ಸಂತಾನೋತ್ಪತ್ತಿಯಾದ ಪರಾಗಸ್ಪರ್ಶ ಕ್ರಿಯೆಗೊಳಪಟ್ಟು ಅವುಗಳ ಸಂತತಿಯನ್ನು ಬೆಳಸಿಕೊಳ್ಳುತ್ತವೆ. ಹಾಗೆಯೆ ತನ್ನಲ್ಲಿಗೆ ಬರುವ ಸುತ್ತಮುತ್ತಲಿನ ಜೀವಗಳಿಗೆಲ್ಲ ಆಶ್ರಯದ ನೆರಳು ನೀಡಿ; ತಾನು ಬಿಟ್ಟ ಎಲೆ, ಚಿಗುರು, ಹೂವು, ಕಾಯಿ, ಹಣ್ಣು, ಬೇರು, ಕಾಂಡ, ಅದರ ಗೆಡ್ಡೆ, ಗೆಣಸುಗಳೆಲ್ಲವನ್ನು ಬೇರೆ ಜೀವಿಗಳಿಗೆ ಆಹಾರವಾಗಿ ನೀಡಿ ತನ್ನ ಜೀವನವನ್ನೆ ಅನ್ಯ ಜೀವಿಗಳ ಜೀವನಕ್ಕಾಗಿ ತ್ಯಾಗ ಮಾಡುತ್ತವೆ. ಈ ಎಲ್ಲಾ **“ಸಸ್ಯ ಚಟುವಟಿಕೆಗಳ ಪ್ರತಿನಿತ್ಯದ ಜೀವನ ಕ್ರಮವನ್ನೆ (ಸಂಸ್ಕೃತಿ)”** ಎನ್ನಬಹುದಾಗಿದೆ.

ಸಸ್ಯಗಳಂತೆ ಸಕಲ ಪ್ರಾಣಿಗಳು ಕೂಡ ಈ ಜೀವಣುಗಳಿಂದಲೇ ಜನ್ಮತಾಳುತ್ತಿರುವುದು. ಈ ಗುಂಪಿಗೆ ಚಿಕ್ಕ ಜೀವಿಗಳಿಂದ ಡೈನೋಸಾರ್‌ಗಳಂತಹ ಬೃಹತ್ ಪ್ರಾಣಿಗಳವರೆಗೂ ಸೇರುತ್ತವೆ. ಇವು ಸಸ್ಯ ಸಂಕುಲಕ್ಕೆ ಭಿನ್ನ. ಏಕೆಂದರೆ ನಡೆದಾಡುವುದರಿಂದ, ಆಹಾರ, ನೀರು, ಸಂತಾನೋತ್ಪತ್ತಿಗಾಗಿ ಹೆಣ್ಣು ಗಂಡನ್ನು, ಗಂಡು ಹೆಣ್ಣನ್ನು ಪರಸ್ಪರ ಅರಸಿ ಹೋಗುತ್ತವೆ. ಇವು ಆಯಾ ದಿನದ ಆಹಾರ, ನೀರನ್ನು ಹುಡುಕಿ ತಿಂದುಕೊಂಡು, ತನ್ನ ಮಕ್ಕಳಿಗೆ ತಂದುಕೊಟ್ಟು ಬೆಳೆಸುತ್ತಾ ಜೀವನ ಮಾಡುತ್ತವೆ. ಆಹಾರಕ್ಕಾಗಿ ಹೊಗುವಾಗ ಜೊತೆಯಲ್ಲಿ ಹೊಗುವುದು, ಹೆಚ್ಚಿನ ಪ್ರಾಣಿಗಳಿಗೆ ಸಹಜವಾಗಿದೆ, ಕೆಲವು ಮಾತ್ರ ಒಂಟಿಯಾಗಿ ಭೇಟೆಯಾಡಿ, ತಮ್ಮ ಆಹಾರವನ್ನು ಸಂಪಾದಿಸಿಕೊಳ್ಳುತ್ತವೆ. ವಾಸಮಾಡಬೇಕಾದರೂ ಕಾಡು, ಬೆಟ್ಟ–ಗುಡ್ಡ, ಪೊಟರೆ, ಗಿಡ–ಮರ, ಭೂಮಿಯಲ್ಲಿ, ಜಲಚರಗಳು ನೀರಿನಲ್ಲಿ ಹೀಗೆ ಆಯಾ ಜೀವಿಗಳು ಅವುಗಳ ಪರಿಸರದ ವಾತವರಣಕ್ಕೆ ಅನುಗುಣವಾಗಿ ಜೀವಿಸುತ್ತಿರುತ್ತವೆ. ಈ ಜೀವನ ಪದ್ಧತಿಯನ್ನೆ **“ಪ್ರಾಣಿಗಳ ಚಟುವಟಿಕೆಗಳ ಕ್ರಮ (ಸಂಸ್ಕೃತಿ)”** ಎಂದು ಪರಿಗಣಿಸ ಬಹುದಾಗಿದೆ.

ಹಕ್ಕಿ–ಪಕ್ಷಿ–ಕೀಟಗಳ ಸಂಸ್ಕೃತಿಯನ್ನು ಇದೇ ಮಾದರಿಯ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಇವು ಸಸ್ಯ, ಪ್ರಾಣಿ, ಮಾನವನಿಗೂ ಭಿನ್ನವಾದವು. ಏಕೆಂದರೆ ಇವು ನಡೆದಾಡಿದಂತೆ ಹಾರಾಡುವುದು ಇವುಗಳ ವೈಶಿಷ್ಟ್ಯ ಈ

ಗುಣ ಇನ್ಯಾವ ಜೀವಿಗಳಿಗೂ ಇಲ್ಲ. ಹಾರಾಡುವ ಗುಣವುಳ್ಳವೆ ಒಂದು ವರ್ಗದ ಜೀವಿಗಳು. ಇವುಗಳದ್ದು ಅಷ್ಟೇ ಆಹಾರ, ನೀರು, ಆವಾಸ, ಸಂತಾನೋತ್ಪತ್ತಿ, ಕೂಡಿಬಾಳುವ ಜೀವನ ನಡವಳಿಕೆಗಳು ಮಾನವನಿಗೆ ಆಕರ್ಷಣೆಯಾಗಿವೆ. ಹಾಗಾಗಿ ಇವುಗಳ ದಿನನಿತ್ಯದ ವ್ಯವಹಾರಿಕ ಸಂಬಂಧದದ ಪದ್ಧತಿಗಳನ್ನೆ "ಹಕ್ಕಿ–ಪಕ್ಷಿ–ಕೀಟಗಳ ವೈವಿದ್ಯ ಚಟುವಟಿಕೆಗಳನ್ನೆ ಸಂಸ್ಕೃತಿ" ಎಂದು ಕರೆಯುವುದು ಕಷ್ಟ. ಏಕೆಂದರೆ ಇದು ಮಾನವ ಕೇಂದ್ರಿತವಾದದ್ದು. ಇದನ್ನು ಜೀವಕೇಂದ್ರಿತವಾಗಿ ವಿಸ್ತರಿಸಲು ಸಂಸ್ಕೃತಿಗೆ ಬದಲಾಗಿ ಪರ್ಯಾಯ ಪದವನ್ನು ಸಹಜವಾಗಿ ಬಳಸಬೇಕಾಗಿದೆ. ಹಾಗೆ ನೋಡಿದರೆ, ಜಗತ್ತಿನ ಪ್ರಕೃತಿಯಲ್ಲಿ ಜನಿಸಿರುವ ಪ್ರತಿಯೊಂದು ಜೀವಿಯ ವರ್ಗಕ್ಕೂ ಹಾಗೂ ಪ್ರತಿಯೊಂದು ಜೀವಿಗೂ ಅದರದೆಯಾದ ಒಂದೊಂದು ಜೀವನ ಪದ್ಧತಿಯಿರುತ್ತದೆ ನಿಜ. ಆದರೆ ಅಧ್ಯಯನ ಹಿತ ದೃಷ್ಟಿಯಿಂದ ವಿಶಾಲವಾದ ಅರ್ಥದಲ್ಲಿ ಈ ವೈವಿಧ್ಯ ಜೀವಿಗಳ ವಿವಿದ ಜೀವನ ಪದ್ಧತಿಯನ್ನು ಬಳಸಿ, ಪರಿಭಾವಿಸ ಬೇಕೆಂಬುದು ಇಲ್ಲಿಯ ಉದ್ದೇಶ.

ಈ ಎಲ್ಲಾ ಜೀವಿಗಳಂತೆ ಮಾನವನು ಜೀವಾಣುಗಳಿಂದಲೇ ಸೃಷ್ಟಿಯಾಗಿದ್ದರೂ; ಈ ಎಲ್ಲಾ ಜೀವಿಗಳಿಗೂ ಭಿನ್ನವಾದ ಪ್ರಾಣಿ ವರ್ಗಕ್ಕೆ ಸೇರಿದ ಮಾನವನೆಂಬುದೆ ವಿಶೇಷ. ಇವನು ಹಕ್ಕಿ–ಪಕ್ಷಿ–ಕೀಟ, ಸಸ್ಯ, ಪ್ರಾಣಿಗಳಿಂದಲೇ ಕಲಿತು, ಅವುಗಳಂತೆ ನಡೆದಾಡುತ್ತಾನೆ, ಹಾರುತ್ತಾನೆ, ಈಜುತ್ತಾನೆ, ಚಿಂತಿಸಿದಂತೆ ಕೆಲಸ ಮಾಡುತ್ತಾನೆ. ತನ್ನ ಆಹಾರಕ್ಕಾಗಿ ಇವೆಲ್ಲವನ್ನು ಬಳಸಿಕೊಂಡು, ದೀರ್ಘಕಾಲಿಕವಾಗಿ ಇವೆಲ್ಲವನ್ನು ತನ್ನ ಕುಟುಂಬಕ್ಕಾಗಿ ಸಂಗ್ರಹಿಸಿಡುತ್ತಾನೆ. ವಿಶೇಷವೆನೆಂದರೆ, ಯಾವ ಜೀವಕ್ಕೂ ಇಲ್ಲದ; ಮೆದಳು, ಮನಸ್ಸಿನ ಚಿಂತನೆ, ಬೆನ್ನು ಮೂಳೆ(ಪಾದದಿಂದ ತಲೆಯವರೆಗೆ ನೇರವಾದ ಮೂಳೆ ಇರುವುದು ಈ ಮಾನವನಿಗೆ ಮಾತ್ರ. ಆದ್ದರಿಂದಲೇ ಅವನ ಮನಸ್ಸಿನ ವೇಗ ಹೆಚ್ಚಾಗಿರುವುದು.) ಜೊತೆಗೆ ಅವನು ಕೈ–ಕಾಲುಗಳನ್ನು ಹೊಂದಿದ್ದು, ಅವುಗಳ ಬಳಕೆಯಿಂದ ಕೆಲಸ ಮಾಡುವುದನ್ನು ಕಲಿತಿದ್ದಾನೆ. ಎಲ್ಲಾ ಜೀವಿಗಳಿಗೂ ಇರುವಂತೆ ದಿನನಿತ್ಯದ ಚಟುವಟಿಕೆಗಳಲ್ಲದೆ, ದೇವರು, ಪುರಾಣ, ಧರ್ಮಗ್ರಂಥ, ಸಾಹಿತ್ಯ, ವಿಜ್ಞಾನ, ತತ್ವಶಾಸ್ತ್ರಗಳ ಆಧಾರಗಳನ್ನಿಟ್ಟುಕೊಂಡು ಭಿನ್ನವಾದ ಆಚಾರ, ವಿಚಾರ, ನಂಬಿಕೆಗಳ ಮೇಲೆ ಸಂಸ್ಕೃತಿಗಳನ್ನು ಮಾನವ ಸಮಾಜದ ನಾಗರಿಕತೆಗಾಗಿ ಕಟ್ಟಿಕೊಂಡಿದ್ದಾನೆ. ಇದನ್ನೆ "ಮಾನವ ಸಂಸ್ಕೃತಿ"ಎಂದಿರುವುದು. ಇದರಂತೆ ಯಾವ ಜೀವಿಗಳು ಇಲ್ಲವೆಂದು, ಮಾನವನಿಗೆ ಸಮಾನವಾಗಿ ಬೇರೆ ಜೀವಿಗಳನ್ನು ಪರಿಗಣಿಸಲಾಗಿಲ್ಲವೆಂಬುದು ಗಮನಾರ್ಹ ಸಂಗತಿ. ಆದ್ದರಿಂದಲೇ ಅವನು ಪ್ರಾಕೃತಿಕ ಸಮಗ್ರತೆಯ ದೃಷ್ಟಿಯುಳ್ಳ ಜೀವ ತತ್ವ, ಜೀವ–ಜೀವಿಗಳ ಸಾಂಸ್ಕೃತಿಕ ಪ್ರಜ್ಞೆಗೆ ಬದಲಾಗಿ; ಮಾನವತ್ವ, ಮನವೀಯತೆ, ಮನುಷ್ಯತ್ವವೆಂಬ ಪರಿಕಲ್ಪನೆಗಳನ್ನೆ ಶ್ರೇಷ್ಠವೆಂದು, ಮಾನವ ಕೇಂದ್ರಿತವಾಗೆ ಕಟ್ಟಿಕೊಂಡಿರುವುದು, ಪ್ರಾಕೃತಿಕ, ಸಾಮಾಜಿಕವಾದ ನಾನಾ ಸಮಸ್ಯೆಗಳಿಗೆ ಮೂಲವಾಗಿರಬಹುದೆ? ಎಂಬ ಮೂಲ ಪ್ರಶ್ನೆಯ ಮೂಲಕ ಮುಂದಿನ ಪರಿಶೋಧನೆಗೆ ಮುಂದಾಗಲಾಗಿದೆ. ಜೊತೆಗೆ ಈ ತಾತ್ವಿಕತೆಯನ್ನಿಟ್ಟುಕೊಂಡು, ಮಾನವ ಸಂಸ್ಕೃತಿಗೂ ಭಿನ್ನವಾದ ಪ್ರಕೃತಿ ಸಹಜವಾದ ಸರ್ವಜೀವಿಗಳ ಸಮಾನ ಜೀವನ ನಡವಳಿಕೆಗಳ ಆಧಾರದ ಪರಿಕಲ್ಪನೆಯ ಮೇಲೆ "ಸಕಲ ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ"ವನ್ನು ಪರಿಶೋಧಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಎಲ್ಲಾ ಹಿನ್ನೆಲೆಯಿಂದ ವೈಜ್ಞಾನಿಕ ಪರಿಶೋಧಕ್ಕೆ ಕೈಹಾಕಿದರೆ ಇದರೊಳಗಿನ ಜೀವ–ಜೀವಿಯ ಹುಟ್ಟೆ ಒಂದು ರೀತಿಯ ವಿಸ್ಮಯಕರವಾಗಿ ಕಾಣುತ್ತದೆ. ಏಕೆಂದರೆ, ಪ್ರಕೃತಿಯ ಯಾವ ಜೀವಿಗಳು ಇದ್ದಕ್ಕಿದ್ದಂತೆ ಧರ್ಮಗ್ರಂಥ, ಪುರಾಣ, ಮಹಾಕಾವ್ಯಗಳಲ್ಲಿರುವಂತೆ ಯಾವ ದೇವರುಗಳ, ಋಷಿಮುನಿಗಳ ಮಾಯ, ಮಂತ್ರ, ವರ–ಶಾಪಗಳಿಂದ ಹುಟ್ಟಿಲ್ಲ. ಅವು ಪ್ರಕೃತಿಯ ನಾನಾ ರೂಪಿ ಸೂಕ್ಷ್ಮಾತಿ ಸೂಕ್ಷ್ಮ ಜೀವಕಣಗಳ ಪರಸ್ಪರ ಸ್ವಾಭಾವಿಕ ಸಂಯೋಗದಿಂದ ಹಲವು ರೂಪದ ಅಸಂಖ್ಯಾ ಜೀವ ವೈವಿಧ್ಯಗಳು ಜನ್ಮತಾಳಿವೆ. ಈ ಜೀವಿಗಳು ಅವಸಾನಗೊಂಡಾಗ ಅಂದರೆ ಸಾವಾದಾಗ, ಅವುಗಳೊಳಗಿನ ಜೀವ ಇನ್ನೊಂದು ಜೀವಕ್ಕೆ ಗಾಳಿ, ನೀರು, ಬೆಳಕು(ಬೆಂಕಿ)ಗಳ ಮೂಲಕ ವರ್ಗವಣೆಯಾಗುತ್ತದೆ. ಜೀವಿಗಳ ದೇಹ ಮಾತ್ರ ಕರಗಿ ಇನ್ನೊಂದು ವಸ್ತುವಾಗಿ ರೂಪಾಂತರಗೊಳ್ಳುತ್ತದೆ. ಈ ಜೀವ–ಜೀವಿ–ವಸ್ತುಗಳ ರೂಪಾಂತರ ಕ್ರಿಯೆಗೆ ಮೂಲವಾದ ಪ್ರೊಟಾನ್, ನ್ಯೂಟ್ರಾನ್, ಎಲಾಕ್ಟ್ರಾನ್ ಪರಮಾಣುಗಳಾಗಿ ವಿಜ್ಞಾನದ ಕಣ್ಣಿಗೆ ಗೋಚರಿಸಿವೆ.

ಈ ಪರಮಾಣುಗಳನ್ನು ಒಡೆಯುತ್ತಾ ಹೋಗಿ "ಈ ಶತಮಾನದ ಭೌತವಿಜ್ಞಾನ ಶೋಧಿಸಿದ್ದೆ 'ಹಿಗ್ಸ್ ಬೋಸಾನ್ ಕಣ'. ಅಂದರೆ ವಿಜ್ಞಾನಿಗಳಾದ ಸತ್ಯೇಂದ್ರನಾಥ ಬೋಸ್, ಪೀಟರ್ ಹಿಗ್ಸ್ ಮುಂದಾಳತ್ವದಲ್ಲಿ ಕಂಡುಹಿಡಿಯಲ್ಪಟ್ಟಿದ್ದರಿಂದ ಆ ಕಣಕ್ಕೆ ಇವರ ಹೆಸರನ್ನು ಇಡಲಾಗಿದೆ. ಇದನ್ನು ಒಡೆಯುತ್ತಾ ಹೋಗಿ 'ಕ್ವಾಂಟಮ್'ನ 'ಕ್ವಾರ್ಕ್' ಕಣವನ್ನು ಗುರುತಿಸಲಾಗಿದೆ. ಇದು ವಿಶ್ವ ಸೃಷ್ಟಿಯ ಮೂಲ ಕಣವೆಂದು ಈ ವಿಜ್ಞಾನಿಗಳು ಸಾರಿದ್ದಾರೆ. ಜೊತೆಗೆ ಈ ಕ್ವಾರ್ಕ ಕಣವನ್ನು ಮತ್ತೆ ಒಡೆದು ನೋಡುವ ಪ್ರಯತ್ನದಲ್ಲಿ ವಿಜ್ಞಾನಿಗಳು ಸಾಗಿರುವುದು ವಿಶೇಷ".1 ಇದರ ಮೂಲಕ ಯಾವ ಸೂಕ್ಷ್ಮಾತಿ ಸೂಕ್ಷ್ಮ ಕಣವಾಗಿ ಗೋಚರಿಸಲ್ಪಡುತ್ತದೋ, ಅದೇ ಈ ಜಗತ್ತಿನ ಮೂಲ ಕಣದ ಜೀವ ತೃಣ. ಈ ತೃಣವೇ ಜಗತ್ತಿನ ಜೀವ ಸೃಷ್ಟಿಯ ಮೂಲ. ಇದರ ಮೂಲಕ ಇಂತಹ ಕಣಗಳ ಅಂತರಂಗದೊಳಗೆ ಹುಟ್ಟುವ ಆಂತರಿಕ ಶಕ್ತಿಯ ಕ್ರಿಯಾಶೀಲ ಗುಣದಿಂದ ಅವುಗಳ ಪರಸ್ಪರ ಸಂಯೋಗದ ಕಾರಣದಿಂದ, ಉಂಟಾಗುವ ಕ್ರಮಬದ್ಧ ಕ್ರಿಯಾಶಕ್ತಿಯ ಫಲವೇ ಜೀವದ ಹುಟ್ಟು. ಹೀಗೆ ಯಾವ ಜೀವ ತೃಣ, ಜೀವಿಯ ಹುಟ್ಟು ಮತ್ತು ಬೆಳವಣಿಗೆಯ ಸ್ವರೂಪಕ್ಕೆ ಮೂಲ ಕಾರಣವಾಗಿರುತ್ತದೊ ಅದೇ ವೈಜ್ಞಾನಿಕವಾಗಿ ಮೂಲ ಜೀವ. ಇದಕ್ಕೆ ಆದಿ, ಅಂತ್ಯವೆಂಬ ಯಾವ ಪರಿಕಲ್ಪನಾತ್ಮಕ ಭಾವಾರ್ಥಗಳಿಲ್ಲದೆ ಚಿರ ಸತ್ಯವಾಗಿದೆ. ಹಾಗಾಗಿ ಇದಕ್ಕೆ ಅನನ್ಯ ರೂಪ, ಬಣ್ಣ, ಗುಣ, ಕ್ರಿಯಾಶಕ್ತಿ ಅಂತರ್ಗತವಾಗಿರುವುದರಿಂದಲೇ ಇದರ ಇನ್ನೊಂದು ರೂಪಿ ಜೀವದೊಂದಿಗೆ ಕೂಡಿ ಅದನ್ನು ಅದರ ಶಕ್ತಿ ಮತ್ತು ಗುಣಕ್ಕನುಗುಣವಾದ ಜೀವಿಯನ್ನಾಗಿ ರೂಪಾಂತರಗೊಳಿಸುತ್ತದೆ. ಈ ಕ್ರಿಯೆಯಿಂದಾಗುವ ಅಪಾರ ವೈರಸ್ಸ್‌ಗಳು ಪ್ರಕೃತಿಯೊಳಗೆ ಅಡಕವಾಗಿವೆ. ಇಂತಹ ರೂಪಾಂತರದಿಂದಾಗಿ ಜಗತ್ತಿನ ಸಕಲ ಜೀವಿಗಳು ರೂಪುಗೊಳ್ಳುತ್ತವೆ. ಅಂದರೆ 'ಧನಾತ್ಮಕ ಜೀವ ತೃಣ' ಅದರ ಇನ್ನೊಂದು 'ಋಣಾತ್ಮಕ ಜೀವ ತೃಣ' ದೊಂದಿಗೆ ಅಗೋಚರಿಯಾಗಿ ಅಂತರ್ಗತವಾಗಿ ಕೂಡುವ ಕ್ರಿಯಾಗುಣದಿಂದ ಜೀವಿಯ ಸ್ವರೂಪ ಪಡೆಯುವ ಕ್ರಿಯೆಯನ್ನು ನಾವು **"ಜೀವ ಚಟುವಟಿಕೆಗಳ ಕ್ರಮ (ಸಂಸ್ಕೃತಿ)"** ಎಂದು ಕರೆಯಬಹುದಾಗಿದೆ. ಇದು ತನ್ನ ಅಂತರ್ಗತ ಶಕ್ತಿಯಿಂದಲೇ ಋಣಾತ್ಮಕ ಜೀವದ ಗುಣಲಕ್ಷಣಗಳಿಗೆ ಅನುಗುಣವಾಗಿ, ಪ್ರೋತ್ಸಾಹ ಶಕ್ತಿಯಾಗಿ, ಅದರ ಸ್ವರೂಪಕ್ಕನುಗುಣವಾದ ಜೀವಿಯ ದೇಹ ಬೆಳವಣಿಗೆಗೆ ಕಾರಣವಾಗುತ್ತದೆ. ಇದೇ ಮಾದರಿಯಲ್ಲಿ ಗಿಡ–ಮರ, ಪ್ರಾಣಿ–ಪಕ್ಷಿ, ಕೀಟಗಳಂತಹ ಇನ್ನಿತರ ಜೀವಿ ಸಂಕುಲಗಳು ಹುಟ್ಟಿಕೊಳ್ಳುತ್ತವೆ. ಈ ಜೀವಿಗಳು ಮೇಲೆ ಹೇಳಿದಂತೆ ಅವಸಾನವಾದಾಗ ಇವುಗಳೊಳಗಿದ್ದ ಧನಾತ್ಮಕ ಜೀವ ಇನ್ನೊಂದು ಜೀವಿಯ ಹುಟ್ಟು ಮತ್ತು ಋಣಾತ್ಮಕ ಜೀವದ ದೈಹಿಕ ಬೆಳವಣಿಗೆಗೆ ಕೇಂದ್ರವಾಗಿ ಸೇರಿಕೊಳ್ಳುತ್ತದೆ. ಈ ಗುಣ–ನಿಯಮದ ಮೂಲದಿಂದ ಜೀವ ತೃಣ ಯಾವಾಗ? ಎಲ್ಲಿ? ಯಾವುದರೊಂದಿಗೆ, ಹೇಗೆ? ಏನಾಗಿಸೇರಿದರೂ ತನ್ನ ಅಸ್ಥಿತ್ವಕ್ಕೆ ದಕ್ಕೆ ಬಾರದಹಾಗೆ ಉಳಿಯುವ ಕಣ, ತೃಣಗಳಾಗಿ, ಕೊನೆಗೂ ಅವುಗಳದೆಯಾದ 'ಧನಾತ್ಮಕ ಜೀವ'ವಾಗೆ ಉಳಿಯುತ್ತವೆ. ಆದರೆ 'ಋಣಾತ್ಮಕ ಜೀವ ತೃಣ' ಮಾತ್ರ ಸಕಲ ಜೀವಿಗಳ ದೇಹ ರೂಪಿ ಬೆಳವಣಿಗೆಗೆ ಪ್ರೇರಣೆ–ಪ್ರೋತ್ಸಾಹ ಶಕ್ತಿಯೂ ಆಗಿರುತ್ತದೆ. ನಂತರ ಅದು ಇದ್ದ ಜೀವಿಯ ದೇಹ ಅವಸಾನಗೊಂಡಾಗ ಇನ್ನೊಂದು ವಸ್ತುವಿಗೆ ರೂಪಾಂತರಗೊಳ್ಳುತ್ತದೆ. ಈ ಗುಣ ಮತ್ತು ಶಕ್ತಿ; ಋಣಾತ್ಮಕ [–] ಜೀವ ತೃಣದ ಕಣಕ್ಕೆ ಇರುವುದು ವಿಸ್ಮಯವಾದದ್ದು. ಅದೇ ರೀತಿ 'ಧನಾತ್ಮಕ [+] ಜೀವ ತೃಣ ಕಣ' ಏನೆಲ್ಲ ಶಕ್ತಿ, ಗುಣ ನಿಯಮಗಳನ್ನು ತನ್ನೊಳಗೆ ಅಂತರ್ಗತಗೊಳಿಸಿಕೊಂಡು; ಮೇಲೆ ಹೇಳಿದಂತೆ ತನ್ನನ್ನು ತಾನು ಉಳಿಸಿಕೊಳ್ಳುವ ಗುಣವಿರುವುದು ಇನ್ನೂ ವಿಶೇಷ. ಇದನ್ನೆ ಪ್ರಕೃತಿ ವಿಸ್ಮಯ, ಪ್ರಕೃತಿ ಸಂಸ್ಕೃತಿ, ಪ್ರಕೃತಿ ನಿಯಮ ಹೀಗೆ ಏನೆಲ್ಲ ಹೆಸರಿಂದ ಕರೆಯಲಾಗಿದೆ. ಇದನ್ನೆ 'ಧನಾತ್ಮಕ+ ಮತ್ತು ಋಣಾತ್ಮಕ– ಜೀವ ಕಣ–ತೃಣ'ವೆನ್ನುವುದು. ಇವು ಸಕಲ ಜೀವಿಗಳ ಹುಟ್ಟು ಹಾಗೂ ಬೆಳವಣಿಗೆಗೆ ಮತ್ತು ಅವುಗಳ ಅವಸಾನದ ಗುಣ, ನಿಯಮಗಳ ಸ್ವಾಭಾವಿಕ ಕ್ರಿಯಾಶೀಲಾ ನಡೆಯನ್ನೊಳಗೊಂಡಿರುತ್ತವೆ. ಇದನ್ನೆ **"ಜೀವ/ಜೀವಿ ಚಟುವಟಿಕೆಗಳ ಕ್ರಮ (ಸಂಸ್ಕೃತಿ)"** ಅಥವಾ 'ಜೀವ/ಜೀವಿಗಳ ವೈಜ್ಞಾನಿಕ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂದು ಕರೆಯಬಹುದಾಗಿದೆ. ಇದರಲ್ಲಿ ಆ ಸೂಕ್ಷ್ಮ ಜೀವ ಕಣಗಳ, ಜೀವನ ಸಂಸ್ಕೃತಿಯು ಇರುವುದನ್ನು ಮನಗೊಂಡೆ ಇಲ್ಲಿ **"ಜೀವ ಚಟುವಟಿಕೆಗಳ ಕ್ರಮ"** ಇದರ ಮುಂದಿನ ಬೆಳವಣಿಗೆಯೆ **"ಜೀವಿಗಳ ಚಟುವಟಿಕೆಗಳ ಕ್ರಮ"** ಅಥವಾ ಈ ಜೀವಿಗಳ **"ಜೀವನ ಚಟುವಟಿಕೆಗಳ ಕ್ರಮ (ಸಂಸ್ಕೃತಿ)"** ಎಂದು ಗುರುತಿಸಬಹುದಾಗಿದೆ.

ಈ ಜೀವ ಕಣ, ತೃಣಗಳು ಪ್ರಕೃತಿಯೊಳಗೆ ಅಗೋಚರವಾಗಿ ಅಂತರ್ಗತವಾಗಿರುವುದರಿಂದ ಧನಾತ್ಮಕ ಜೀವ ಕಣ, ಋಣಾತ್ಮಕ ಜೀವ ಕಣಗಳ ಚಟುವಟಿಕೆಯನ್ನು ಕೆಳಕಂಡಂತೆ ಗುರುತಿಸಿಕೊಳ್ಳಬಹುದಾಗಿದೆ.

ವಿಜ್ಞಾನದ ಪ್ರಯೋಗಿಕ ಪರಿಶೀಲನೆಯಲ್ಲಿ– "ಕೆಲವು ನಿದರ್ಶನಗಳಲ್ಲಂತೂ ಒಂದೇ ಒಂದು ಕಣ ಮಾತ್ರ ಇರುತ್ತದೆ. ಮತ್ತೆ ಕೆಲವದರಲ್ಲಿ ಒಂದಕ್ಕಿಂತ ಹೆಚ್ಚು ಕಣಗಳಿರಬಹುದು, ಆದರೆ ಈ ಕಣಗಳು ಬೇರೆ ಎಲ್ಲಾ ಪ್ರಾಣಿಗಳಲ್ಲಿರುವಂತೆ ಕಣಕಂತೆ ಅಥವಾ ಕಣಧಾತುಗಳಾಗಿರುವುದಿಲ್ಲ. ಒಂದು ಕಣದಲ್ಲಿ ಸ್ನಿಗ್ಧತೆ ಇಲ್ಲವೆ ಅರೆ ದ್ರವರೂಪದ ಜೈವಿಕ ವಸ್ತುವಾದ "ಜೀವರಸ" ಇರುತ್ತದೆ. ಈ ದ್ರವ್ಯವು ಹರಳು ಹರಳಾಗಿದ್ದು, ಅದರ ಮಧ್ಯ ಗೋಳಾಕೃತಿಯುಳ್ಳ ಭಾರವಾದ ಭಾಗವಿರುತ್ತದೆ. ಇದನ್ನೇ ನ್ಯೂಕ್ಲಿಯಸ್ ಅಥವಾ "ಜೀವಕಣ" ಎನ್ನುತ್ತೇವೆ. ಕೆಲವು ವೇಳೆ ಒಂದಕ್ಕಿಂತ ಹೆಚ್ಚು ಜೀವ ಕಣಗಳಿರುತ್ತವೆ".2

ಈ ದ್ರವರೂಪಿ ಗೋಳಾಕೃತಿಯ ನ್ಯೂಕ್ಲಿಯಸ್‌ನ ಜೀವ ಕಣವನ್ನೇ ಜೀವಿಗಳ ಜೀವ, ಪ್ರಾಣವೆಂದು ತಿಳಿಯುವುದಾಗಿದೆ. ಇದನ್ನೇ 'ಧನಾತ್ಮಕ[+] ಜೀವಕಣ'ವೆನ್ನುವುದು. ಕೆಲವುವೇಳೆ ಒಂದಕ್ಕಿಂತ ಹೆಚ್ಚು ಜೀವಕಣಗಳಿರುತ್ತವೆ ಎನ್ನುವ ಮಾತಿನಲ್ಲಿ 'ಋಣಾತ್ಮಕ[–] ಜೀವಕಣ'ದೊಳಗೆ ಧನಾತ್ಮಕ ಕಣ ಕೂಡಿ ಆಗುವ ಬೆಳವಣಿಗೆಯನ್ನೆ ಜೀವಿ ಸ್ವರೂಪದಲ್ಲಿ ಹೆಚ್ಚು ಜೀವ ಕಣಗಳಿರುವುದನ್ನು ಪ್ರಾಯೋಗಿಕವಾಗಿ ಮೇಲೆ ಹೇಳಿದಂತೆ ಕಂಡುಕೊಳ್ಳಬಹುದಾಗಿದೆ. ಇದರಿಂದ ಈ ಜೀವ ಕಣಗಳ ಕ್ರಿಯಾರೂಪಿ ಬೆಳವಣಿಗೆಯಿಂದಲೇ ಜೀವಿಗಳಾಗಿ ರೂಪುಗೊಳ್ಳುತ್ತವೆಂಬುದು ಸ್ಪಷ್ಟವಾಗಿದೆ. ಇದನ್ನರಿತರೆ 'ಜೀವವಿಲ್ಲದೆ ಜೀವಿಯಿಲ್ಲ, ಜೀವಿಯಿಲ್ಲದೆ ಜೀವದ ಕ್ರಿಯಾಗುಣವಿಲ್ಲ'ವೆಂಬುದು ಸ್ಪಷ್ಟವಾಗುತ್ತದೆ.

ಮೇಲಿನ ವಿವರಣೆಯಂತೆ 'ಧನಾತ್ಮಕ+ಜೀವ'ದ ಬೆಳವಣಿಗೆಯ ಆರಂಭದ ರೂಪವೇ ಆಲ್ಗೆಯಂತಹ ಅಮಿಬಾ. ಇದು ಪೋರ್ಟಿಸಲ್ಲ ಮತ್ತು ಗ್ಲೋಬಿಜೆರೈನ್‌ಗಳಂತಹ ಬಹಳ ತಳ ಮಟ್ಟದ ಪ್ರಾಣಿಗಳನ್ನೊಳಗೊಂಡಿದೆ. ಈ ಏಕ ಕಣ ಜೀವಿಗಳಲ್ಲಿ ಜೀವರಸವು ನಗ್ನವಾಗಿರುತ್ತದೆ. ಒಳಭಾಗ ಮುದ್ದೆಯಂತಿದ್ದು, ತೆಳುವಾದ ಹೊರ ಪದರವನ್ನು ಹೊಂದಿರುತ್ತದೆ. ಇವು ಯಾವುದೇ ರೀತಿಯ ನಿರ್ದಿಷ್ಟ ಆಕಾರ ಹೊಂದಿರುವುದಿಲ್ಲ. ಹೀಗಿದ್ದುಕೊಂಡರೂ ಅವುಗಳ ದೇಹಕ್ಕನುಗುಣವಾಗಿ ಶರೀರದ ಯಾವುದಾದರೊಂದು ಭಾಗದಿಂದ ಆಹಾರವನ್ನು ತೆಗೆದುಕೊಳ್ಳುತ್ತವೆ. ಇವು ಅವುಗಳ ದೇಹದಿಂದ ಮುಂಚಾಚಿದ 'ಹಾಲೆ'ಗಳನ್ನು ಹರಡುವಂತಹ ಶಕ್ತಿಯನ್ನು ಪಡೆದಿರುತ್ತವೆ. ಈ ಹಾಲೆ ಅಥವಾ ಜೀವರಸದೆಳೆಗಳನ್ನೆ 'ಮಿಥ್ಯಾಪಾದ'ಗಳೆನ್ನುವುದು. ಇನ್ನು ಕೆಲವು ಏಕಕಣ ಜೀವಿಗಳಾದ ಪ್ಲಾಜೆಲ್ಲೇಟ ಮತ್ತು ಇನ್ಫೊಸೋರಿಯಗಳಲ್ಲಿ ಮಿಥ್ಯಾಪಾದಗಳೇ ಇರುವುದಿಲ್ಲ. ಪ್ರತ್ಯೇಕ ರಂದ್ರದಿಂದ ಆಹಾರ ಸೇವಿಸಿ, ಲಯಬದ್ಧವಾದ ಚಲನೆಯುಳ್ಳ ಜೀವ ದ್ರವ್ಯದ ಎಳೆಗಳನ್ನೊಳಗೊಂಡಿರುತ್ತದೆ. "ಏಕಕಣ ಪ್ರಾಣಿಗಳಲ್ಲಿ ಸಂತಾನೋತ್ಪತ್ತಿಯು ಸಾಮಾನ್ಯವಾಗಿ ಸೀಳಿಕೆ ಇಲ್ಲದೆ ಬಿರಿತದಿಂದಾಗುತ್ತದೆ. ಇಬ್ಬಾಗ ವಿಭಜನೆಯಿಂದ ಕೆಲವು ವೇಳೆ ಗುಪ್ತ ಬೀಜಕಣ ಉತ್ಪತ್ತಿಯಾಗಿ ಅಡಗಿಕೊಂಡಿದ್ದು, ಹಿತಕರ ಸನ್ನಿವೇಶ ಮತ್ತೆ ತಲೆದೋರಿದಾಗ ಅವು ಮೊಳೆತು ಏಕಕಣ ಪ್ರಾಣಿಗಳಾಗುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಸಂತಾನೋತ್ಪತ್ತಿಯು ಎರಡು ಅಥವಾ ಹೆಚ್ಚು ಏಕೀಕಣಗಳ ಸಂಯೋಗದಿಂದಾಗುತ್ತವೆ. ಈ ರೀತಿಯ ಸಂಯೋಗ ಕ್ರಿಯೆಯು ಹತ್ತಿರ ಹತ್ತಿರ ಲೈಂಗಿಕ ಸಂತಾನೋತ್ಪತ್ತಿಯ ಅರ್ಥ ವೈಶಾಲ್ಯದಂತೆಯೆ ಕೆಲವು ಏಕಕಣ ಪ್ರಾಣಿಗಳಲ್ಲಿ ಮೈಕಟ್ಟು ಇರುವುದಿಲ್ಲ. ಆದರೆ ಕೆಲವದರಲ್ಲಿ ಕವಚವು ಸಿಂಪಿಯಂತೆ ರೂಪಿತವಾಗುತ್ತದೆ."3 ಹೀಗೆ ಉದ್ಭವವಾಗುವ ಏಕಕಣ ಜೀವಿಗಳು ಸಾಮಾನ್ಯವಾಗಿ ನದಿ, ಸಾಗರ, ಸಮುದ್ರಗಳಲ್ಲೆ ಇರುವುದು ಕಂಡುಬರುತ್ತದೆ. ಇದು ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಜೀವಶಾಸ್ತ್ರಗಳಲ್ಲಿ ನಾನಾ ರೀತಿಯ ವೈಜ್ಞಾನಿಕ ಶೋಧವಾಗಿ, ಆ ಆಳದ ಹರವಿನಿಂದ ಇಂತಹ ನಾನಾ ಸೂಕ್ಷ್ಮತೆಗಳು ಕಂಡುಬರುತ್ತಿವೆ. ಆದ್ದರಿಂದಲೇ ನಮಗೆ ಏಕಕಣ ಜೀವಿಗಳಿಂದ ನಾನಾ ರೂಪಿ ಜೀವಿಗಳು ರೂಪುಗೊಂಡಿವೆ, ಅವುಗಳಿಂದ ಬಹುಕಣ ಜೀವಿಗಳಾಗಿ ಏಕ ಕಾಲದಲ್ಲಿ ಪ್ರಕೃತಿ ಕ್ರಿಯೆಯಿಂದ ಹುಟ್ಟಿಕೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಈ ಏಕಕಣ ಜೀವಿಗಳಾದ ಪ್ರೋಟೋಜೋವ, ಪೊರಿಫೆರ, ಕುಟುಕಾ, ಕಣವಂತ, ಕಂಟಕ ಚರ್ಮಿಗಳು, ವಲಯದೇಹಿ ಬಹುಪಾದಿಗಳು, ಪಾಲಿಜೋವಗಳು, ಮೃದ್ವಂಗಿಗಳು ಮತ್ತು ಸಂದಿಪದಿಗಳಂತಹ ನಾನಾ ರೂಪಿ ಉಪಜಾತಿ ಜೀವಿಗಳೆಲ್ಲ ಕೂಡಿ ಅಮಿಬಾಗಳಾಗಿ ಏರ್ಪಡುತ್ತವೆ. ಎಷ್ಟೋ ಪಾಚಿ ಸಸ್ಯಗಳ ಸಹಾಯದಿಂದ; ಗಾಳಿ, ನೀರು, ಬೆಳಕಿನ ವಾತಾವರಣದ ಪರಿಣಾಮದಿಂದ ನಾನಾ ವಿಧದ ಸಸ್ಯ ಸಂಪತ್ತು ಜೀವ ಪಡೆದಿವೆ. ಇವುಗಳಿಂದ ಕೀಟ, ಜಲಚರ, ಕಾಡು, ಬೆಟ್ಟ, ಗುಡ್ಡ, ಬಯಲು ಪ್ರದೇಶ, ಮರುಭೂಮಿಗಳೊಳಗೂ ವಾಸಿಸುವ ಅಸಂಖ್ಯಾ ಪ್ರಾಣಿ ಸಂಪತ್ತನ್ನೊಳಗೊಂಡ ಜೀವಿ ಪರಿಸರ ತನಗೆ ತಾನೆ ಹುಟ್ಟಿ, ಬೆಳೆದು ಅವುಗಳ ಜೀವನ

ಸಾಗಿಸುತ್ತಾ ಬಂದಿವೆ. ಈ ಪ್ರಕೃತಿಯ ನಿಯಮಿತ ಕ್ರಮಗಳನ್ನೊಳಗೊಂಡ 'ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ'ವನ್ನೆ 'ಪ್ರಾಕೃತಿಕ ಚಟುವಟಿಕೆಗಳ ಕ್ರಮ' (ಸಂಸ್ಕೃತಿ)'ಯೆಂದು ಗುರುತಿಸಬಹುದಾಗಿದೆ. ಈ ಪ್ರಕೃತಿ ಬಂಧದಲ್ಲಿರುವ ಜೀವಿಗಳು ತಮಗೆ ತಾವು ಹುಟ್ಟಿ ಸಾಯುವ ಪ್ರಕ್ರಿಯೆಯಲ್ಲಿರುವುದಿಲ್ಲ, ಇದ್ದರೆ ಅಂತಹವುಗಳಿಗೆ ಹುಟ್ಟಿನಲ್ಲೆ ಸಾವು ಸಂಭವಿಸುತ್ತದೆ. ವಾಸ್ತವವಾಗಿ ಪ್ರತಿಯೊಂದು ಜೀವಿಯೂ ಮತ್ತೊಂದು ವಸ್ತು, ಜೀವಿಗಳಿಗೆ ಉಪಯುಕ್ತವಾಗಿ ತಮ್ಮ ದೇಹ ಮತ್ತು ಮನಸ್ಸನ್ನುಸವೆಸಿ, ತಮ್ಮ ಋಣಾತ್ಮಕ ಜೀವಕಣದ ಶಕ್ತಿ ಕುಂದಿದಾಗ ಅಳಿಯುತ್ತವೆ. ಇದರಿಂದ ಅವುಗಳ ಅಳಿವು–ಉಳಿವು ಮತ್ತು ಹೊಂದಾಣಿಕೆಯಿಂದ, ಋಣಾತ್ಮಕ ತೀರ್ಮಾನಗಳ ನಡವಳಿಕೆಗಳಿಂದ, ಆಯಾ ಕಾಲ, ಪ್ರಾದೇಶಿಕ ವಾತವರಣಕ್ಕೆ ಒಗ್ಗಿಕೊಳ್ಳುವ ಗುಣವೇ ಜೀವಿಗಳ ಹೋರಾಟದ ಜೀವನವಾಗಿರುತ್ತದೆ. ಇದನ್ನೆ ನಿಸರ್ಗದ ತಾತ್ವಿಕ ಗುಣವೆನ್ನುವುದು. ಈ ಗುಣಕ್ಕೆ ಉದಾಹರಣೆಯಾಗಿ ಎರೆಹುಳುವಿನ ಜೀವನದ ಮೂಲಕ ಕಂಡುಕೊಳ್ಳಬಹುದು.

"ಎರೆಹುಳು ತನ್ನ ಆಹಾರವನ್ನು ಸಂಪಾದಿಸಿಕೊಳ್ಳಲು ಭೂಮಿಯನ್ನು ಎರಡು, ಮೂರು, ಅಡಿಗಳವರೆಗೂ ಕೊರೆಯಬೇಕಾಗುವುದು; ಸನ್ನಿವೇಶದಲ್ಲಿ ಆಗುವ ಬೆಳಕು, ಕತ್ತಲು ಶೀತ–ಶಾಖ ಮುಂತಾದ ಬದಲಾವಣೆಗಳಿಗೆ ಅನುಸಾರವಾಗಿ ತಮ್ಮ ಜೀವನದ ಧಾಟಿಯನ್ನು ವ್ಯವಸ್ಥೆಗೊಳಿಸಿ ಜೀವಿಸಬೇಕಾಗುವುದು ಅಥವಾ ತನ್ನ ಮೈ ಹೊದಿಕೆ, ಬಣ್ಣ ಮೊದಲಾದವುಗಳನ್ನು ಬದಲಾಯಿಸಬೇಕಾಗುವುದು. ಕಷ್ಟ ಸನ್ನಿವೇಶಗಳಿಂದ ತಪ್ಪಿಸಿಕೊಳ್ಳುವುದು, ಹಗೆಯೊಡನೆ ಹೋರಾಡುವುದು... ಇವೂ ಜೀವಿಗಳಿಗೆ ಅಗತ್ಯವಾದ ನಡವಳಿಕೆಗಳು. ಈ ಜೀವಿಯ ಹೋರಾಟವನ್ನೆ ಡಾರ್ವಿನ್ ಎಂಬ ಪ್ರಸಿದ್ಧ ಜೀವ ಶಾಸ್ತ್ರಜ್ಞ "ಜೀವಯಾತ್ರೆ" ಎಂದು ಕರೆದಿದ್ದಾರೆ"4

ಇಂತಹ ಸ್ಥಿತಿಗತಿಗಳು ಕೇವಲ ಎರೆಹುಳುವಿಗಲ್ಲ; ಪ್ರತಿ ಜೀವಿಗಳಿಗೂ ಅವುಗಳದ್ದೇಯಾದ ವರ್ಗಕ್ಕೆ ಅನುಗುಣವಾಗಿ ಹುಟ್ಟು, ಸಾವಿನ ನಡುವೆ ನಡೆಯುವ ಜೀವ ಮತ್ತು ಜೀವನ ರಷ್ಷಣೆಯ ಹೋರಾಟಗಳು ಭಿನ್ನವಾಗಿರುತ್ತವೆ ಅಷ್ಟೆ. ಹಾಗಾಗಿ ಎಲ್ಲಾ ಜೀವಿಗಳ ದೇಹ ಮತ್ತು ಮನಸ್ಸಿನ ಅನುಭವಗಳೇ ಹೊರತು, ದೃಶ್ಯಾತ್ಮಕವಾಗಿರುವುದಿಲ್ಲ. ಆದರೆ ಇಂತಹ ದೃಶ್ಯಗಳನ್ನು ಕವಿ ಬೇಂದ್ರೆ ತಮ್ಮ ಪದ್ಯದ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ.

"ಜೀವನವು ವಿಷವಾದ ವಿಷಮ ಲೀಲೆ,
ಜೀವ ಕಲಹವ ಪ್ರಥಮ ಪಾಠಶಾಲೆ,
ಜೀವ ಜೀವಕೆ ಹರಣ, ಜೀವ ಮರಣ,
ಪ್ರಾಣಿ ಜೀವನವೊಂದು ಪ್ರಾಣ ಹರಣ"5 (ಪ್ರಾಣಿ ಜೀವನ)

ಈ ಪದ್ಯವನ್ನು ಮೇಲೆ ಜೀವ, ಜೀವಿ, ಜೀವನಗಳನ್ನು ಕುರಿತ ಚರ್ಚೆಯ ಆಧಾರದ ಹಿನ್ನೆಲೆಯಲ್ಲೆ ಇದನ್ನು ಅರ್ಥೈಸ ಬಹುದು. ಇಲ್ಲಿ ಮನುಷ್ಯನೇನು ಯಾವುದೇ ಜೀವಿಯ ಜೀವದ ಮೊದಲ ಹೋರಾಟ ಕಾರ್ಯ ನಡೆಯುವುದನ್ನು ಕವಿ ಪ್ರಥಮ ಪಾಠಶಾಲೆ ಎನ್ನುತ್ತಾರೆ. 'ಜೀವ ಜೀವಕೆ ಹರಣ, ಜೀವ ಮರಣ' ಎನ್ನುವುದರಲ್ಲಿ ಕವಿ ಜೀವಿ–ಜೀವಿಗಳ ಹೋರಾಟದ ಘರ್ಷಣೆಯ ಪರಿಣಾಮವನ್ನು ಹರಣ, ಮರಣವೆಂದು ಕರೆದಿದ್ದಾರೆ ಸರಿ. ಇದು ಇದುವರೆಗೂ ಮಾನವ ಜನಾಂಗದಲ್ಲಿ ರೂಢಿಗತವಾಗಿ ನಂಬಿಕೊಂಡುಬಂದ ತಾತ್ವಿಕತೆಯ ಸಹಜ ಮಾತುಗಳಾಗಿವೆ ನಿಜ. ಆದರೆ ಇಲ್ಲಿ ಚರ್ಚೆಗೆ ಎತ್ತಿಕೊಂಡು ಪರಿಶೀಲಿಸುತ್ತಿರುವುದನ್ನು ಈ ಪದ್ಯ ಸಾಲಿಗೆ ಹೊಲಿಸಿದರೆ, ಈ ಸಾಲುಗಳನ್ನು ವಿಜ್ಞಾನದ ಅರ್ಥಕ್ಕೆ ಪರಿವರ್ತಿಸಿಕೊಳ್ಳಬೇಕಾಗಿದೆ. ಅದರ ಪ್ರಕಾರ ಜೀವ ಜೀವಕೆ ಹರಣವಾಗದು, ಮೇಲೆ ಹೇಳಿದಂತೆ ಘರ್ಷಣೆ, ಹೋರಾಟ ನಡೆಯುತ್ತದೆ. ಅವುಗಳ ಹರಣವಾಗಲಿ, ಮರಣವಾಗಲಿ ನಡೆಯದು. ಅದು ನಡೆಯುವುದು ಕೇವಲ ಜೀವದ ಜೀವಿಯ ದೇಹಕ್ಕೆ ಮಾತ್ರ ಈ ಹರಣ, ಮರಣ ನಡೆಯುತ್ತದೆ. ಆದರೆ ಜೀವ ಇನ್ನೊಂದಕ್ಕೆ ರೂಪಾಂತರಗೊಳ್ಳುತ್ತೆ ಅದು ಕಾಣದಿದ್ದರಿಂದ ಅದನ್ನು ಆತ್ಮ, ಪ್ರಾಣವೆಂದು ಕರೆಯುತ್ತಾ ಬರಲಾಗಿದೆ. ಇದನ್ನು ಜೀವವೆಂದು ಕರೆಯಲಾಗಿದೆ. ಈ ಪದ ಸರಿ. ಆದರೆ ಇದಕ್ಕೆ ಸಾವಿರದು ಎಂಬುದನ್ನು ಮರೆಯಬಾರದು. ಏಕೆಂದರೆ ಈ ಆತ್ಮ, ಪ್ರಾಣ, ಜೀವವೆಂದು ಕರೆಯುವವೆಲ್ಲಾ ಅವು ಕಾಣದಿದ್ದರಿಂದ ಹಾಗೆ ಈ ಪದದಿಂದ ಗುರುತಿಸಿ ಕರೆಯಲಾಗಿದೆ. ಇದು ವಿಜ್ಞಾನದ ವಿಷಯಗಳನ್ನು ಸಾಹಿತ್ಯ ಅಭಿವ್ಯಕ್ತಿಗೊಳಿಸುವ ಕ್ರಮ ಎಂಬುದು ಗಮನಿಸಬೇಕು. ಹಾಗಾದರೆ ಯಾವುದೆ ಜೀವಿಗಳಲ್ಲಿ ಕಾಣದಿರುವ ಅಂಗ

ಯಾವುದು? ಕಾಣದಿದ್ದರೂ ಅದು ಮಾಡುವ ಕಾರ್ಯ ಯಾವುದು? ಎಂದು ಪ್ರಶ್ನೆ ಮಾಡಿಕೊಂಡರೆ ಉತ್ತರ ಕಷ್ಟವೆನಿಸಿದರೂ ಸುಲಭ. ಯಾಕೆಂದರೆ ಪ್ರತಿ ಜೀವಿಗಳಿಗೂ ಮನಸ್ಸಿಲ್ಲದೆ ಅವುಗಳ ಕಾರ್ಯವಿಲ್ಲವೆಂದ ಮೇಲೆ ಅದು ಯಾರಲ್ಲೂ ಯಾವುದರಲ್ಲೂ ಕಾಣದ ಅಂಗವೆಂದರೆ ಅದೇ "ಮನಸ್ಸು" ಹಾಗಾಗಿ ಆ ಮನಸ್ಸಿಗೆ ಸಾವಿಲ್ಲ ಅದು ಪ್ರತಿ ಜೀವಿಯು ಮರಣ ಹೊಂದಿದರೆ ಅದರ ದೇಹಕ್ಕೆ ಮರಣವೇ ಹೊರತು, ಅದರ ಮನಸ್ಸುಳ್ಳ ಜೀವ ಕಣಕ್ಕಲ್ಲಾ ಎಂಬ ಸತ್ಯವನ್ನು ಅರಿಯಬೇಕು. ಇದೇ ಪ್ರಕೃತಿಯ ವಿಸ್ಮಯ. ಇದನ್ನು ಅರಿತು ಬಿಡಿಸಿ ಹೇಳಲಾರದೆ, ಮಾನವರ ಚಿಂತನೆಯಲ್ಲಿ; ಧರ್ಮ, ಕಾವ್ಯ, ಪುರಾಣ, ಚಿಂತಕರು ಅದನ್ನು ಆತ್ಮವೆಂದು ಕರೆದು ನಂತರ ಪುನರ್ಜನ್ಮದ ಪರಿಕಲ್ಪನೆಯನ್ನು ನೀಡಿದ್ದಾರೆ ಎಂಬುದನ್ನು ಮರೆಯಬಾರದು. ಆದರ ಈ ಪುನರ್ಜನ್ಮದ ಪರಿಕಲ್ಪನೆಯನ್ನು ಒಪ್ಪದ ಬುದ್ಧ ಈ ವೈಜ್ಞಾನಿಕ ಸತ್ಯವನ್ನು ಅರಿತಿದ್ದರಿಂದ ಯಾವ ಜೀವಕ್ಕೂ ಮಾನವನಿಂದ ಅತಿ ಸೂಕ್ಷ್ಮ ಜೀವಿಗಳವರೆಗೂ ಪುನರ್ಜನ್ಮ ಸಾಧ್ಯವಿಲ್ಲ, ಅವುಗಳು ಅಳಿದ ಮೇಲೆ "ಪುನರ್ಭವ " ಗೊಳ್ಳುತ್ತವೆ ಎಂದು. ಅಂದರೆ ರೂಪಾಂತರಗೊಳ್ಳುವುದು ಎಂಬ ಅರ್ಥವನ್ನು ಕೊಟ್ಟು ಸ್ಪಷ್ಟಪಡಿಸಿದ್ದಾನೆ. ಹಾಗಾಗಿ ಬೇಂದ್ರೆಯ ಈ ಪದ್ಯದ ಕೊನೆಯ ಸಾಲಿನಲ್ಲಿರುವ 'ಪ್ರಾಣಿ ಜೀವನವೊಂದು ಪ್ರಾಣ ಹರಣ' ಎಂಬ ಸಾಲಿನಲ್ಲೂ ಪ್ರಾಣಿ ಜೀವನವೊಂದು ಹರಣವೆ ಹೊರತು ಪ್ರಾಣ ಹರಣವಾಗುವುದಿಲ್ಲ ಎಂಬುದನ್ನು ನಾವು ಪುನರ್ ಮೌಲ್ಯೀಕರಣ ಮಾಡಿಕೊಳ್ಳುವ ಅಗತ್ಯ ವರ್ತಮಾನಕಾಲದ್ದಾಗಿದೆ. ವೈಜ್ಞಾನಿಕ ಪ್ರಜ್ಞೆಗೆ ಇದರ ಅಗತ್ಯವಿದೆ ಈಗ ಎಂಬುದನ್ನು ಮರೆಯಬಾರದು. ಪ್ರಾಣಿಗಳ ಜೀವನದಲ್ಲಿ ವಿಷಮ ಲೀಲೆಯಾಗಲು ಕಾರಣವೆನೆಂದು ಪ್ರಶ್ನಿಸಿಕೊಂಡರೆ ಅವುಗಳ ಮಿತಿಯಿಲ್ಲದ ಸಂತಾನೋತ್ಪತ್ತಿಯು ಒಂದು ಕಾರಣವಾದರೆ ಪ್ರಕೃತಿಯ ವೈಪರಿತ್ಯಗಳ ಬದಲಾವಣೆಯು ಇನ್ನೊಂದು ಕಾರಣವೆಂಬುದನ್ನು ಗಮನಿಸಬೇಕು. ಹಾಗಾಗಿ ಪ್ರತಿಯೊಂದು ಜೀವಿಯ ವರ್ಗದಲ್ಲಿಯೂ ಹೆಚ್ಚಾದ ಸಂತಾನೋತ್ಪತ್ತಿಯಿಂದಾಗಿ ಅವುಗಳ ಆಹಾರ, ವಾಸಸ್ಥಳ, ರಕ್ಷಣಾತ್ಮಕ ಸ್ಥಿತಿಗತಿಗಳು ಮಿತಿಯಾಗಿರುತ್ತವೆ. ಆದ್ದರಿಂದ ಒಂದರ ಮೇಲೊಂದು ಆಹಾರ ಮತ್ತು ರಕ್ಷಣೆಗಾಗಿ ಸಂಘರ್ಷಗಳುಂಟಾಗುತ್ತವೆ. ಇದರಲ್ಲಿ ಒಂದಕ್ಕೊಂದು ಹೋರಾಡಿ ಮಡಿಯುವುದು ಸಹಜ ಮತ್ತು ವಾಸ್ತವ. ಆದರೆ ಈ ಪ್ರಾಣಿಗಳ ಆವಾಸ ಸ್ಥಳ ಮತ್ತು ಆಹಾರಗಳನ್ನೆ ಮಾನವ ಕಿತ್ತುಕೊಂಡರೆ, ವಿನಾಶಗೊಳಿಸಿದರೆ ಅಲ್ಲಿ ವಾಸಿಸುವ ಜೀವಿಗಳು ಎಲ್ಲಿಗೆ ಹೋಗಬೇಕು. ಆಗ ಮತ್ತೊಂದು ರೀತಿಯ ಅಸಮತೋಲನದ ಹೋರಾಟ ಅವುಗಳಲ್ಲಿ ಸೃಷ್ಟಿಯಾಗುತ್ತದೆ. ಇದನ್ನೆ ಬೇಂದ್ರೆ ತಮ್ಮ ಕೊನೆಯ ಸಾಲಿನಲ್ಲಿ ಹೇಳಿರುವುದು. ಹಾಗಾಗಿ ಪ್ರಾಣಿಗಳ ಈ ಸಾವು ಬದುಕಿನ ನಾನಾ ಹೋರಾಟದ ಜೀವನವನ್ನೆ 'ಪ್ರಾಣಿಗಳ ಜೀವನ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂದು ಕರೆಯುವುದು. ಈ ಕ್ರಮಕ್ಕೆ ಒಳಪಡುವ ಸಕಲ ಪ್ರಾಣಿಗಳೆಂದರೆ ಏಕಕಣ, ಬಹುಕಣ ಪ್ರಾಣಿಗಳಿಂದ ಆನೆ, ಹುಲಿ, ಸಿಂಹ, ಚಿರತೆ, ನರಿ, ನಾಯಿ, ಹಸು, ಹಾವು, ಕೀರಾ, ಇಲಿ, ಹಕ್ಕಿ–ಪಕ್ಷಿ, ಕೀಟ, ದುಂಬಿಗಳವರೆಗೆ ಅಸಂಖ್ಯಾ ಪ್ರಾಣಿ, ಪಕ್ಷಿ, ಕೀಟ ಸಂಕುಲಗಳು ಸೇರುತ್ತವೆ. ಇವುಗಳೆಲ್ಲವುಗಳ ಜೀವನ ನಡವಳಿಕೆಗಳ ಕ್ರಿಯೆಗೆ ಮೂಲವಾದದ್ದೆ ಮನಸ್ಸು. ಆ ಮನಸ್ಸಿನ ಪ್ರೇರಣೆಯಿಂದಲೇ ಈ ಎಲ್ಲ ಪ್ರಾಣಿಗಳ ಜೀವನ ಚಟುವಟಿಕೆಗಳು ನಡೆಯುವುದು. ಈ ಚಟುವಟಿಕೆಗಳ ಒಟ್ಟು ಗುಂಪನ್ನೆ ಪ್ರಾಣಿಗಳ ಅಥವಾ 'ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮವೆಂದು ಮೇಲೆ ಕರೆಯಲಾಗಿರುವುದು. ಇದು ಸಕಲ 'ಜೀವ/ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)'ಯೊಳಗಿನ ಒಂದು ಭಾಗ. ಇದನ್ನು ಪ್ರಾಣಿಗಳ ಈ ಒಂದೊಂದು ಜೀವಿಯ ವರ್ಗಗಳ ಒಂದೊಂದು ಗುಂಪನ್ನು ನಾವು 'ಉಪವರ್ಗ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂದೂ ಕರೆಯಬಹುದಾಗಿದೆ. ಈ ಪ್ರಕೃತಿಯೊಳಗಿನ ಜೀವಿಗಳಲ್ಲಿರುವ ನಾನಾ ವರ್ಗಗಳಲ್ಲಿ ಒಂದೊಂದರ ಜೀವನ ಕ್ರಮಗಳು ಬೇರೆ ಬೇರೆಯಾಗಿರುವುದರಿಂದ ಈ 'ಉಪವರ್ಗ ಚಟುವಟಿಕೆಗಳ ಕ್ರಮ (ಸಂಸ್ಕೃತಿ)'ಯ ಅಧ್ಯಯನ ಇನ್ನೂ ವಿಸ್ತಾರಗೊಳ್ಳಬೇಕಾಗಿದೆ.

ಮೊದಲಿಗೆ ಈ ಜೀವ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯ ವಿಕಾಸ ಕ್ರಿಯೆಗಳ ಅವಲೋಕನ ಮಾಡಿದಾಗ ನಾನಾ ಮಾಹಿತಿಗಳು ಭೂ ಸಂಶೋಧನೆಯಿಂದ ಈಗಾಗಲೇ ದಾಖಲಾಗಿವೆ. ಅವುಗಳ ಪ್ರಕಾರ– "ಡೆವೋನಿಯನ್ ಯುಗಕ್ಕಿಂತ ಹಿಂದಿನ ಶಿಲೆಗಳಲ್ಲಿ ಭೂವಾಸಿ ಸಸ್ಯಗಳ ಅವಶೇಷಗಳು ದೊರೆಯುವುದು ಬಹಳ ಅಪರೂಪ. ಡೆವೋನಿಯನ್ ಯುಗದ ಆದಿಯಲ್ಲಿ ಭೂಮಿಯು ಮೊದಲ ಭಾರಿಗೆ ಸಸ್ಯ ಹೊದಿಕೆಯನ್ನು ಹೊಂದಿತ್ತೆಂಬುದನ್ನು ಶಿಲಾ ಕಡತದಿಂದ ತಿಳಿಯುತ್ತೇವೆ. ಆಗಿನಿಂದ ಸಸ್ಯವರ್ಗವು ಹೇರಳವಾಗುತ್ತಾ ಬಂದಿದೆ. ಅಲ್ಲಿಯವರೆಗೆ ಸಸ್ಯಗಳು ಜಲವಾಸಿಯಾಗಿದ್ದವು. ಜಲವಾಸದಿಂದ ನೆಲವಾಸಕ್ಕೆ ಬದಲಾವಣೆಯಾಗಿರುವುದನ್ನು

ನೆಲೆಯಾಂತರ [Transmigration] ಎಂದು ಕರೆಯಲಾಗಿದೆ. ಈ ಘಟನೆ ಸಸ್ಯ ಜಗತ್ತಿನಲ್ಲಿನ ಮಹತ್ತರವಾದ ಪರಿವರ್ತನೆ ಹಾಗೂ ಸಸ್ಯ ವಿಕಾಸದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ...

ಈ ಸಸ್ಯಗಳು ಭೂವಾಸಕ್ಕೆ ಅನುಕೂಲವಾದ ಅಂಗಗಳನ್ನು ಗಳಿಸಿದ್ದುವೆಂದು ಭಾವಿಸಬೇಕಾಗಿದೆ. ನೆಲದ ಮೇಲೆ ಸ್ಥಿರವಾಗಿ ನಿಲ್ಲುವುದು, ಲವಣ ದ್ರಾವಣಗಳನ್ನು ಹೀರುವುದು, ಭಾಷ್ಪವಿಸರ್ಜನೆ, ಕಿರಣ ಜನ್ಯ ಸಂಯೋಗ ಕ್ರಿಯೆ, ವಂಶಾಭಿವೃದ್ಧಿ ಮತ್ತು ಗಾಳಿಯ ಮೂಲಕ ಪ್ರಸಾರ ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಈ ಅಂಗಗಳು ರೂಪಿತವಾಗಿರಬೇಕು. ವಾಸ್ತವವಾಗಿ ಕೆಲವು 'ಆಲ್ಗೆ' ಜಾತಿಗಳು ಈ ದಿಶೆಯಲ್ಲಿ ಮುಂದೆ ಸಾಗಿವೆ. "ಸ್ಕಾಟ್ಲೆಂಡಿನ ಆಬರ್ಡೀನ ಪ್ರದೇಶದ ಕೆಂಪು ಮರಳು ಶಿಲೆಗಳಲ್ಲಿರುವ ರ್ಹೈನಿಚರ್ಟಗಳಲ್ಲಿರುವ ಸಸ್ಯವರ್ಗವೇ ನಮಗೆಗೊತ್ತಿರುವ ಸಸ್ಯವರ್ಗಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು."[6]

ಮೇಲಿನ ಉಲ್ಲೇಖಗಳನ್ನು ನೋಡಿದರೆ ಸಸ್ಯವರ್ಗಗಳು ತಮ್ಮ ಹುಟ್ಟು ಮತ್ತು ಬೆಳವಣಿಗೆಯಿಂದ ಅವುಗಳ ವಿಕಾಸ ಕ್ರಿಯೆಯನ್ನು "ನಿರ್ಜೀವಕಲ್ಪ, ಡೆವೋನಿಯನ್ ಯುಗಕ್ಕಿಂತ ಹಿಂದಿನ ಕಾಲದ ಸಸ್ಯವರ್ಗ, ಡೆವೋನಿಯನ್ ಆದಿಕಾಲ, ಡೆವೋನಿಯನ್ ಅಂತ್ಯ ಮತ್ತು ಕಾರ್ಬಾನಿ ಫೆರಸ್ ಆದಿಕಾಲ, ಪರ್ಮೊಕಾರ್ಬಾನಿಫೆರಸ್ ಕಾಲ, ಮದ್ಯಜೀವಕಲ್ಪ, ನವಜೀವಕಲ್ಪ"7 ಗಳೆಂದು ಏಳು ಭಾಗಗಳಲ್ಲಿ ವಿಭಾಗಿಸಿಕೊಂಡು ವಿಜ್ಞಾನದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಾವಿರಾರು ವರ್ಷಗಳ ಸಸ್ಯ ಚರಿತ್ರೆಯಲ್ಲಿ ಅವು ಹಂತ ಹಂತವಾಗಿ ಬದಲಾವಣೆಗೊಳಪಡುತ್ತಾ ಬಂದಿರುವ ಇವುಗಳ ಜೀವನ ಕ್ರಮವನ್ನೆ 'ಸಸ್ಯ ವರ್ಗಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂದು ಗುರುತಿಸಬಹುದಾಗಿದೆ. ಸಕಲ ಸಸ್ಯ ಸಂಕುಲಗಳ ಹುಟ್ಟು ಮತ್ತು ಬೆಳವಣಿಗೆ ಹಾಗೂ ಅವುಗಳು ಅವಸಾನವಾಗುವ ಕ್ರಿಯಾ ಚಟುವಟಿಕೆಗಳಿಗೆ ಅವುಗಳದ್ದೇಯಾದ ಮೂಲ ಮನೋಗುಣದ ಹಿನ್ನೆಲೆಯಿದೆ. ಇದರಿಂದ ಈ ಸಸ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ) ಬೆಳವಣಿಗೆಯಾಗುತ್ತಾ ಬಂದಿದೆ. ಅವುಗಳೊಳಗಿನ ಒಂದು ಸಸ್ಯವರ್ಗವೇ, 'ಮಾಂಸಹಾರಿ ಸಸ್ಯವರ್ಗ'ವಿದೆ ಇವನ್ನು ಸಸ್ಯಶಾಸ್ತ್ರದಲ್ಲಿ `Carrivarous' ಎಂದು ಕರೆಯಲಾಗಿದೆ. ತುಂಬ ಹಿಂದಿನಿಂದಲೂ ಈ ಸಸ್ಯಗಳ ಚಲನ ವಲನಗಳ ಬಗ್ಗೆ ವಿಜ್ಞಾನ ಗುರುತಿಸಿದೆ. ಆದರೆ ಅವುಗಳ ಚಲನ ವಲನಗಳ ಕ್ರಿಯಾಗುಣಕ್ಕೆ ಅವುಗಳ ಮನಸ್ಸು ಮೂಲವಾಗಿದೆ ಎಂಬುದನ್ನು ವಿಜ್ಞಾನಿ ಜಗದೀಶ್‌ಚಂದ್ರಭೋಸ್ ಅವರು ಪರಿಶೀಲಿಸಿದ್ದನ್ನು ಬಿಟ್ಟರೆ, ಅವುಗಳ ಮನೋವಿಜ್ಞಾನದ ಬಗ್ಗೆ ಸಂಶೋಧನೆಗಳು ಹೆಚ್ಚು ನಡೆದಿಲ್ಲವೆಂಬುದು ಸ್ಪಷ್ಟವಾಗಿದೆ. ಈ ಆಧಾರದ ಮೇಲೆಯೆ ಸಸ್ಯಗಳ ಮನಸ್ಸನ್ನು ಗುರುತಿಸಲು ಇದುವರೆಗೆ ಆಗಿರುವ ಸಾಮಾನ್ಯ ತಿಳುವಳಿಕೆಯಿಂದ ಅಸಂಖ್ಯಾ ಸಸ್ಯ ಸಂಕುಲಗಳನ್ನೆ ಗಮನದಲ್ಲಿರಿಸಿಕೊಂಡು ಪರಿಶೀಲನೆಗೊಳಪಡಿಸಲಾಗಿದೆ.

ಮುಂದಿನ ವಿಶ್ಲೇಷಣೆಗೆ ಪೂರಕವಾಗಿ ಸಸ್ಯಶಾಸ್ತ್ರ ಸಂಶೋಧನೆಯ ಕೆಲವನ್ನು ಇಲ್ಲಿ ಉಲ್ಲೇಖಿಸುವುದಾದರೆ, 'J.W.Buel ಅವರು ಪ್ರಕಟಿಸಿದ 'Seei and Land' (1887) ಪುಸ್ತಕದಲ್ಲಿ, Frecl M.White ಬರೆದ 'The purple Terrer' (1899) ಕೃತಿಯಲ್ಲಿ ಮತ್ತು ಚಾರ್ಲ್ಸ್ ಡಾರ್ವಿನ್ ಬರೆದ 'Insectivorous Plants' ಮುಂತಾದವರ ಬರಹಗಳು ಮಾಂಸಹಾರಿ ಮರ, ಗಿಡ, ಹೂವುಗಳ ಪರಿಚಯವನ್ನು ದಾಖಲಿಸುತ್ತವೆ. ಈ ಪುಸ್ತಕಗಳು ಮುಖ್ಯವಾಗಿ ಆಫ್ರಿಕ ಮತ್ತು ಮಧ್ಯ ಅಮೆರಿಕ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಸಿಗುವಂತಹ ಮಾಂಸಹಾರಿ ಮರಗಿಡಗಳಲ್ಲಿ aya-te-veo[I See You]ಎಂಬಮರ ಮಾನವನನ್ನು ತನ್ನೆಡೆಗೆ ಸೆಳೆದುಕೊಂಡು ಅವನ ದೇಹದ ರಕ್ತವನ್ನು ಹೀರಿ ಸಾಯಿಸುತ್ತಿತ್ತು ಎಂಬುದನ್ನು ಉಲ್ಲೇಖಿಸುತ್ತವೆ. ಜೊತೆಗೆ 1. Droseraceae 2.Ancistrocladas 3.Doncophylaceae ಎಂಬ 3 ಕುಟುಂಬಗಳನ್ನು ಗುರುತಿಸುತ್ತಾರೆ. ಇವುಗಳೊಳಗೆ ಬರುವ ನಾನಾ ಜಾತಿಯ ಮರ ಗಿಡಗಳಲ್ಲಿ Nepen thes Lowil ಗಿಡದ ಮಾಂಸಹಾರದ ವಿವರಣೆಯಾಗಲಿ Tipulidae,Drosophylam ನಂತಹ ಸಸ್ಯಗಳು ಮತ್ತು ಪಿಚ್ಚರ್, ಡ್ರಸಿರಾಗಳಂತಹ ನಾನಾ ಜಾತಿಯ ಹೂವುಗಳು ಅವುಗಳ ಗುಣ ಶಕ್ತಿಗೆ ಅನುಗುಣವಾಗಿ ಸ್ಪಂದಿಸುವ ಜೀವಿಗಳನ್ನು ಬೇಟೆಯಾಡುತ್ತವೆ. ಇವು ತಮ್ಮ ಗಂಧ, ರುಚಿ, ಸ್ಪರ್ಶ, ಶ್ರವಣ, ದೃಷ್ಟಿ ರಸಗಳಂತಹ ಪಂಚೇಂದ್ರಿಯಗಳ ಆಕರ್ಷಣೆಗೊಳಪಡುತ್ತವೆ. ಇದನ್ನು ವಿಜ್ಞಾನ 'Sense' ಎಂದು ಕರೆಯುತ್ತದೆ. ಹೀಗೆ ಮಾಂಸಹಾರಿ ಸಸ್ಯಗಳು ತಮ್ಮ ಆಹಾರವನ್ನು

ಸಂಪಾದಿಸಿಕೊಳ್ಳುತ್ತವೆ, ಎಂಬ ವಿವರಣೆ ನೀಡುತ್ತವೆ. ಈ ವಿವರಣೆ ಅಷ್ಟೆಸಾಕು. ಇಂತಹ ಸಸ್ಯಗಳು ಮಾನವನಿಂದ ಹಿಡಿದು ಸಣ್ಣ ಪುಟ್ಟ ಚಿಟ್ಟೆ ಹುಳುಗಳನ್ನು ತಮ್ಮ ಆಕರ್ಷಣಾ ಗುಣದಿಂದ ಅಹಾರಕ್ಕಾಗಿ ಸೆಳೆದುಕೊಳ್ಳುವುದನ್ನು ಗಮನಿಸಿದರೆ; ಅವುಗಳಿಗೂ ನಿಜವಾದ ಮನಸ್ಸಿದೆ ಎಂಬುದನ್ನು ಕಂಡುಕೊಳ್ಳಬಹುದು. ಇದರ ಸ್ಪಷ್ಟತೆಗಾಗಿ ಮಾನವ ಸುಮ್ಮನೆ ಅರಿವಿಲ್ಲದೆ ನೆಲದ ಮೇಲೆ ಬರಿಗಾಲಲ್ಲಿ ನೆಡೆದಾಡುತ್ತಿದ್ದಾಗ ಯಾವುದಾದರೂ ಒಂದು ಮುಳ್ಳು ಕಾಲಿಗೆ ತಾಕಿದರೆ ತಕ್ಷಣ ಅವನ ಕೈ, ಕಾಲನ್ನು ಮುಟ್ಟಿ ಸ್ಪಷ್ಟಪಡಿಸಿಕೊಳ್ಳುತ್ತದೆ. ಈ ಕ್ರಿಯೆಗೆ ಮನಸ್ಸೆ ಮುಖ್ಯ ಕೇಂದ್ರವೆಂಬುದನ್ನು ಯಾರಾದರೂ ಒಪ್ಪುವ ಸಾಮಾನ್ಯ ಜ್ಞಾನ. ಅದೇ ರೀತಿ ಆಕರ್ಷಣೆಗೆ ಒಳಪಡುವ ಮತ್ತು ಆಕರ್ಷಿಸುವ ಎರಡು ಕ್ರಿಯಾ ಗುಣಗಳು ಪ್ರಾಣಿ ಮತ್ತು ಸಸ್ಯಗಳಲ್ಲಿರುವ ವಿಶೇಷ ಗುಣ–ಶಕ್ತಿಗಳು. ಇಂತಹ ಕ್ರಿಯಾಗುಣಗಳಿಗೆ ಮೂಲ ಮನಸ್ಸಿರುವುದರಿಂದಲೇ ಈ ಕ್ರಿಯೆ ನೆಡೆಯುವುದು. ಇದನ್ನರಿತ ಕವಿ ಮಲ್ಲು.ಸಿ. ಕೊತ್ನೂರು ಅವರು ತಮ್ಮ ಪದ್ಯದಲ್ಲಿ ಡ್ರಸಿರಾ ಹೂವನ್ನು ಕಂಡ ಬಗೆಯಿದು–

"ಅಹಂಕಾರ ನೊಣಗಳ
ಹಾಡು ಪಾಡು
ಬದುಕುಳಿದರೆ ತಾನೆ
ಕುಳಿತೊಡನೆ ಕೊರಳಿಡಿದು
ದಿಗ್ಬಂದಿಸಿ ರಕ್ತಹಿರುತ್ತದೆ
ಡ್ರಸಿರಾ ಹೂವು: "8 [ಡ್ರಸಿರಾ ಹೂವು]

ಈ ಡ್ರಸಿರಾ, ಪಿಚ್ಚರ್ ನಂತಹ ಹಲವಾರು ಜಾತಿಯ Carrivarous ವರ್ಗದ ಸಸ್ಯಗಳು ತಮ್ಮ ಹೂವಿನ ಸುವಾಸನೆಯಿಂದಲೇ ಕ್ರಿಮಿಕೀಟಗಳನ್ನು ಸೆಳೆದು ಕುಳಿತ ಕೀಟಗಳನ್ನು ಹೂವಿನ ಪೊಕಳೆಗಳಿಂದ ಅಥವಾ ಅಂಟು ದ್ರವದಿಂದ ಬಂಧಿಸಿ ಜೀವದ್ರವ ಹೀರಿ ಪ್ರಾಣ ತೆಗೆದುಬಿಡುತ್ತವೆ. ಇವೆಲ್ಲ ಸಸ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯ ಕೆಲವು ಕ್ರಿಯಾಗುಣಗಳು, ಇದನ್ನೆ ಡ್ರಸಿರಾ ಹೂವು ಮಾಡಿರುವುದನ್ನು ಕವಿ ಇಲ್ಲಿ ಹಿಡಿದಿಟ್ಟಿದ್ದಾರೆ. ಅಂದರೆ ಡ್ರಸಿರಾ ಹೂವಿನ ವಾಸನೆಗೆ ನೊಣಗಳು ಹಾರಿ ಬಂದು ಈ ಹೂವಿನ ಪೊಕಳೆಗಳ ಮೇಲೆ ಕುಳಿತೊಡನೆ ತನ್ನ ಅಂಟು ದ್ರವದಿಂದ ನೊಣಗಳು ಹಾರದಂತೆ ಬಂದಿಸಿ ತನ್ನ ಹೂವಿನ ಪೊಕಳೆಗಳನ್ನು ಮಡಿಚಿ ಹಿಡಿದು ರಕ್ತಹಿರುತ್ತವೆ. ಈ ಕ್ರಿಯೆ ನೆಡೆಯಬೇಕಾದರೆ ಡ್ರಸಿರಾ ಗಿಡಕ್ಕೆ ಮನಸ್ಸಿದೆ ಎಂಬುದನ್ನು ಅಲ್ಲಗೆಳೆಯುವಂತಿಲ್ಲ. ಮನಸ್ಸಿದ್ದದ್ದರಿಂದಲೇ ಅದು ತನ್ನ ಆಹಾರದ ನೊಣ ಬಂದು ಸ್ಪರ್ಶಿಸಿದೊಡನೆ ತನ್ನ ಅಂಟು ದ್ರವದಿಂದ ದಿಗ್ಬಂದಿಸಿ ರಕ್ತಹಿರುವ ಕ್ರಿಯೆಯನ್ನು ಕವಿ ಗುರುತಿಸಿರುವುದನ್ನು ಮನಗಾಣಬೇಕು.

ಮೇಲೆ ಪ್ರಸ್ತಾಪಿಸಿ ಪ್ರಾಣಿ ಮತ್ತು ಸಸ್ಯವರ್ಗಗಳ ಪ್ರಾಚೀನ ವಿಕಾಸನದ ಬಗ್ಗೆ ಹೇಳಿರುವ ಹಾಗೆ ಸಮುದ್ರ ವಾಸಿಗಳ ಪ್ರಾಚೀನ ತಳಿ ಸಂತತಿ 'ಪಾಟಿಜೋವಾ'ಗಳ ಜೀವನ ಸ್ವರೂಪವನ್ನು ಇಲ್ಲಿ ತೆರೆದಿಡಬಹುದು. ವಲಯದೇಹಿ ಕುಲಕ್ಕೆ ಸೇರಿದ ಬಹುಕೇಶಪಾದಿಗಳಾದ ಕೀಟಗಳು ಹೆಚ್ಚು ಸಾಗರವಾಸಿಗಳೆ. ಇವುಗಳ ಅಂಗಗಳು ನಾನಾ ರೂಪದಲ್ಲಿ ಕವಾಟು, ಕೊಳವೆ, ಸ್ನಾಯುಗಳು ಆಯಾ ವರ್ಗಗಳಿಗೆ ಅನುಗುಣವಾಗಿ ರಚನೆಗೊಂಡು ನಾನಾ ಹಂತದ ಬೆಳವಣಿಗೆಯಾಗಿ ಫ್ರೌಡಾವಸ್ಥೆಯನ್ನು ತಲುಪುತ್ತವೆ. ಇವು ಪ್ರಪಂಚದ ಎಲ್ಲಾ ಭಾಗಗಳಲ್ಲೂ ದೊರೆತಿವೆ. ನೂರಾರು ಜಾತಿಯ ಈ ಬಹುಪಾದಿಗಳು ಕೆಲವು ಆಳದಲ್ಲಿ ಇನ್ನು ಕೆಲವು ಅಲ್ಪ ಆಳದಲ್ಲಿ ವಾಸಿಸಿದರೂ ಸಂಘಜೀವಿಗಳಾಗಿ ಬಾಳುತ್ತಾ, ಸಾಗರ ಬಂಡೆಗಳಲ್ಲಿ, ಶಿಲಾಪದರಗಳಲ್ಲಿ ಮತ್ತು ಹವಳಗಳ ಮೇಲೆ 15 ರಿಂದ 150 ಅಡಿ ಆಳದ ಅಂತರದಲ್ಲಿ ಆಯಾ ಜಾತಿಯ ಬಹುಪಾದಿ ಪ್ರಾಣಿಗಳು ಇರುವುದು ಸ್ವಾಭಾವಿಕವಾಗಿದೆ. ಆದೇ ಸಾಗರ ತಳದ ಬುರುಜು ಮಣ್ಣಿನಿಂದಾಗಿದ್ದರೆ ಅಷ್ಟಾಗಿ ಬಹುಪಾದಿಗಳ ಸಾಂದ್ರತೆ ಇರುವುದಿಲ್ಲ. ಈ ಸಾಗರ ತಳದ ಬಹುಪಾದಿಗಳ ಇನ್ನೊಂದು ಗುಂಪು ಮೃದ್ವಂಗಿಗಳು ಮತ್ತು ಸಂದಿಪದಿ ಪ್ರಾಣಿಗಳು, ಮುತ್ತಿನ ಚಿಪ್ಪು, ಶಂಖ, ಮೀನು, ಕಟಲ್ ಮೀನುಗಳಂತಹ ಹಲವು ಜಾತಿಯ ಬಹುತೇಕ ಮೃದ್ವಂಗಿಗಳು ಸಾಗರವಾಸಿಗಳಾದರೂ ಕೆಲವು ನೆಲದ ಮೇಲೂ ಮತ್ತೆ ಕೆಲವು ಸಿಹಿನೀರಿನಲ್ಲೂ ವಾಸಿಸುತ್ತವೆ. ವಲಯವಂತ ಸಂದಿಪದಿಗಳಂತೆ ಮೃದ್ವಂಗಿಗಳ ದೇಹವು ಸಂಧ್ಯಾಂತರ ಖಂಡದ ಭಾಗ ವಿಭಜನೆಯಾಗಿಲ್ಲ. ಜೊತೆಗೆ ಸಂದಿಪದಿಗಳಿಗಿರುವಂತೆ ಸಾಲು ಉಪಾಂಗ ಬಳೆಗಳೂ ಇರುವುದಿಲ್ಲ. ಮೃದ್ವಂಗಿಗಳ ಶರೀರವು

ದ್ವಿಪಾರ್ಶ್ವ ಸೌಷ್ಟವವನ್ನು ಹೊಂದಿ ಈ ಎರಡು ಪಾರ್ಶ್ವಗಳಲ್ಲೂ ಒಂದೇ ತೆರನಾದ ಅಂಗಗಳು ಪುನರಾವೃತ್ತಿಯಾಗುತ್ತವೆ. ಇವುಗಳ ಶರೀರದ ಮೇಲ್ಭಾಗದಿಂದ ಚರ್ಮದ ಮಡಚು ಆರಂಭವಾಗಿ ಬೆಳೆದು ಕವಚವಾಗುತ್ತದೆ. ಇದನ್ನೆ 'ಮ್ಯಾಂಟಲ್' ಎನ್ನುವುದು. ಈ ಪ್ರಾಣಿಗಳ ದೇಹದ ಕೆಳಭಾಗದಲ್ಲಿ ಚಲನೆಗೆ ಸಹಾಯಕವಾಗುವ ಸ್ನಾಯುಗಳಿಂದ ಮಾಡಿದ ಅಂಗವಿದೆ. ಇದೆ 'ಪಾದ' "ಬಹುತೇಕ ಮೃದ್ವಂಗಿಗಳ 'ಮ್ಯಾಂಟಲ್' ಕುಳಿಯಲ್ಲಿರುವ ಕಿವಿರುಗಳ ಮೂಖಾಂತರ ಉಸಿರಾಡುತ್ತವೆ. ಈ ಪ್ರಾಣಿಗಳಿಗೆ ಹೃದಯವಿದ್ದು ಅದು ಶರೀರದ ಮೇಲ್ಭಾಗದಲ್ಲಿರುತ್ತದೆ. ಅದು ಸಾಮಾನ್ಯವಾಗಿ ಒಂದು ಹೃತ್ಕುಕ್ಷಿ ಮತ್ತು ಎರಡು ಹೃತ್ಕರಣಗಳನ್ನು ಹೊಂದಿವೆ. ಲೆಮಿಲಿಬ್ರಾಂಕ್‌ಗಳನ್ನು ಬಿಟ್ಟು ಮಿಕ್ಕೆಲ್ಲಾ ಮೃದ್ವಂಗಿಗಳಲ್ಲಿ ಬಾಯಿಯು ತಳಭಾಗಕ್ಕಿರುವುದು, ಹಾಗೂ ಬಾಯಿಯಲ್ಲಿ ಆರದಂತಹ ಉಜ್ಜುವ ಅಂಗಗಳಿವೆ. ಇವೇ ಆರದಲ್ಲು. [ಓಡಾಂಟೊಪೋರ್‌ಗಳು] ಸಾದೃಶ ಮೃದ್ವಂಗಿಗಳಲ್ಲಿ ಆಸನ ದ್ವಾರವು, ದೇಹದ ತಳಭಾಗದಲ್ಲಿರುತ್ತದೆ. ಶುದ್ಧಿಕರಣಾಂಗ [ಮೂತ್ರಪಿಂಡ] ವಿದ್ದು ಅದು ದೇಹ ಕುಳಿಯ ಸ್ವಲ್ಪಭಾಗವನ್ನು ಹೊರಭಾಗದ ಸಂಪರ್ಕ ಹೊಂದುವಂತೆ ಮಾಡುತ್ತದೆ. ನರಮಂಡಲವಾದರೂ ಅನ್ನನಾಳದ ಸುತ್ತಲೂ ಇರುವ ಒಂದು ಬಳೆಯಂತಿದೆ. ಅದರಲ್ಲಿ ಸಾಮಾನ್ಯವಾಗಿ ಮೂರು ಮುಖ್ಯ ನರಮುಡಿಗಳಿವೆ. ಈ ನರಮುಡಿಯಿಂದ ನರಗಳು ಮುಂದೆ ಸಾಗಿವೆ. ಸಂತಾನಾಭಿವೃದ್ಧಿಯು ಲೈಂಗಿಕ ರೀತಿಯದಾಗಿದೆ. ಬುತೇಕ ಮೃದ್ವಂಗಿಗಳು ಏಕಲಿಂಗ ಪ್ರಾಣಿಗಳು ಆದಾಗ್ಯೂ ಕೆಲವು ಉಭಯ ಲಿಂಗಿಗಳೂ ಆಗಿವೆ."9 ಇಂತಹ ಸಮುದ್ರವಾಸಿ ಆದಿ ಜೀವ ಪರಂಪರೆಯ ಬೆಳವಣಿಗೆಯಿಂದ, ಆಧುನಿಕ ಜೀವ ಪರಂಪರೆಯವರೆಗೆ, ಈ ಜೀವಿಗಳ ಜೀವನ ಕ್ರಮಗಳ ಪರಿವರ್ತನ ಗುಣಗಳು ಕಾಲಕ್ಕನುಗುಣವಾಗಿ ಬದಲಾವಣೆಗೊಂಡಿವೆ. ಇದೇ ಮಾದರಿಯೊಳಗೆ ಕೆರೆ, ಭಾವಿ, ನದಿ, ಸಾಗರ, ಸಮುದ್ರಗಳಲ್ಲಿ ವಾಸಿಸುವ ನಾನಾ ಜಾತಿಯ ಪ್ರಾಣಿಗಳು ಮತ್ತು ನೀರು, ಬಯಲು ಪ್ರದೇಶಗಳೆರಡರಲ್ಲೂ ವಾಸಿಸುವ ಉಭಯವಾಸಿ ಜೀವಿಗಳ ಜೀವನ ಮಾದರಿಗಳು ಹೀಗೆ ಮುಂದುವರೆದು ಇದುವರೆಗೂ ಬೆಳೆದು ಬಂದಿವೆ. ಇಂತಹ ಪರಂಪರಗತ ಜೀವನ ಪದ್ಧತಿಯನ್ನು ಕಾಲಕ್ಕನುಗುಣವಾಗಿ ಹೊಂದಾಣಿಕೆಯೊಂದಿಗೆ ಸಾಗಿಬಂದಿರುವ ಈ 'ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮವೆ (ಸಂಸ್ಕೃತಿ)'ಯ ಜೀವನ ಪದ್ಧತಿ ಎಂಬ ಸ್ಪಷ್ಟಚಿತ್ರಣ ಸಂಶೋಧಕ ಹಾಗೂ ಓದುಗರ ಗಮನ ಸೆಳೆಯುತ್ತದೆ.

ಮೇಲೆ ಪ್ರಾಸ್ತಾಪಿಸಿದಂತೆ ಸಮುದ್ರ, ಸಾಗರ, ನದಿ, ಕೆರೆ, ಕಟ್ಟೆ, ಭಾವಿ, ಗುಂಡಿಗಳವರೆಗೆ ವಾಸಿಸುವ ಸಕಲ ಜಲಚರವಾಸಿಗಳಿಗೂ ಅವುಗಳದ್ದೇಯಾದ ಜೀವನ ಚಟುವಟಿಕೆಗಳಿಗೆ ಮೂಲ ಕಾರಣ ಅವುಗಳದ್ದೇಯಾದ ಭಿನ್ನ ಭಿನ್ನ ಮನಸ್ಸಿರುವುದರಿಂದ. ಇಂತಹ ನಾನಾ ಜಾತಿಯ 'ಪಾಟಿಜೋವಾ'ಗಳಿಂದ ಹಿಡಿದು ಹಾವು ಮೀನು, ಮೊಸಳೆ, ಆಮೆ, ಶಂಖದಂತ ಅಸಂಖ್ಯಾ ಜಲಚರಗಳ ಜೀವನ ಚಟುವಟಿಕೆಗಳು ನೆಡೆದಿವೆ. ಈ ಜೀವನ ಚಟುವಟಿಕೆಯ ನಡವಳಿಕೆಗಳನ್ನೆ 'ಜಲಚರ ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂದು ಕರೆದಿರುವುದು. ಜಲಚರವಿರಲಿ, ಭೂಚರವಿರಲಿ, ಸಸ್ಯ, ಪ್ರಾಣಿ, ಕೀಟ ಇಂತಹ ಸಕಲ (ಪ್ರಧಾನ) ಗುಂಪನ್ನು 'ವರ್ಗ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎನ್ನಬಹುದು. ಇವುಗಳೊಳಗೆ ಬರುವ ಉಪಗುಂಪನ್ನು ಮೇಲೆ ಹೇಳಿದಂತೆ 'ಉಪವರ್ಗ ಚಟುವಟಿಕೆಗಳ ಕ್ರಮ (ಸಂಸ್ಕೃತಿ)' ಎಂದು ಗುರುತಿಸಬಹುದಾಗಿದೆ.

ಒಟ್ಟಾರೆ ಜಲಚರ, ಸಸ್ಯ, ಪ್ರಾಣಿ, ಪಕ್ಷಿ, ಕೀಟ ಮುಂತಾದ ಅಸಂಖ್ಯಾ ಜೀವ ಪರಿಸರದ ಜೀವಿಗಳು ಈ ಹೋರಾಟದ ಬದುಕಿನಲ್ಲಿ ಸೋತು–ಗೆದ್ದು ಒಂದರೊಡನೊಂದು ಜೀವಂತವಾಗಿವೆ. ಇವು ಸಂಗಾತಿಯ ಸ್ನೇಹಕ್ಕಾಗಿ, ಆಹಾರಕ್ಕಾಗಿ, ಮಕ್ಕಳ ಪೋಷಣೆಗಾಗಿ, ತನ್ನ ವಾಸದ ಸ್ಥಳಕ್ಕಾಗಿ ಮತ್ತು ಜೀವರಕ್ಷಣೆಗಾಗಿ ಜಾಗೃತಗೊಂಡು ಹೋರಾಡುವ ಕ್ರಿಯಾ ಚಟುವಟಿಕೆಗಳು ನಡೆಯುವುದು, ಅವುಗಳದ್ದೇಯಾದ ಮನಸ್ಸಿರುವ ಕಾರಣದಿಂದ ಎಂಬುದು ಸ್ಪಷ್ಟ. ಆದರೆ ಇವುಗಳಿಗೆ ಮಾನವನಂತ ವೇಗಾಲೋಚನ ಗುಣದ ಮನಸ್ಸಿಲ್ಲದಿರಬಹುದು. ಹೀಗಿದ್ದರೂ ಅವುಗಳದ್ದೇಯಾದ ಚುರುಕು ಬುದ್ಧಿಯ ಮನಸ್ಸು ಇದ್ದೆ ಇರುತ್ತದೆ ಎಂಬುದನ್ನು ಅಲ್ಲಗೆಳೆಯುವಂತಿಲ್ಲ. ಇದಕ್ಕೆ ನಾಯಿ–ನರಿ, ಹುಲಿ–ಸಿಂಹ, ಆನೆ, ಕುದುರೆ, ಆಡು, ಹಸು, ಜಿಂಕೆ, ಗಿಳಿ, ಪಾರಿವಾಳ, ದುಂಬಿ ಇತ್ಯಾದಿ ಪ್ರಾಣಿ ಪಕ್ಷಿಗಳು ಅವುಗಳ ಸುತ್ತ ಮುತ್ತಲ ಪರಿಸರದ ಜೀವಿಗಳೊಂದಿಗೆ ಹಾಗೂ ಮಾನವನೊಂದಿಗೆ ನಡೆದುಕೊಳ್ಳುವ ಪ್ರತಿಕ್ರಿಯಾತ್ಮಕ ನಡವಳಿಕೆಗಳೇ ಸಾಕ್ಷಿ. ಈ ಯಾವುದೇ ಜಾತಿಯ ಪ್ರಾಣಿ–ಪಕ್ಷಿ–ಕೀಟಗಳನ್ನು ತೆಗೆದುಕೊಂಡರೂ ಅವುಗಳೊಂದಿಗೆ ಸ್ಪಂದಿಸುವ ಸಹ ಮನಸ್ಸಿನ ಸಹಚರರನ್ನು

ಹೊರತುಪಡಿಸಿ, ಅವುಗಳಿಗೆ ಪ್ರತಿರೋಧವನ್ನೊಡ್ಡುವ ಮತ್ತೊಂದು ಜೀವಿ ಬಂದಾಗ ಅದರ ರಕ್ಷಣೆಗಾಗಿ ಜಾಗೃತವಾಗುವ ಕ್ರಿಯೆ ಮಾನವನ ಮನಸ್ಸಿಗಿಂತಲೂ ವೇಗವಾದ ಚುರುಕು ಮನಸ್ಸೆ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ. ಆದೇ ರೀತಿ ಎಲ್ಲಾ ಪ್ರಾಣಿ–ಪಕ್ಷಿ–ಕೀಟ–ಸಸ್ಯಗಳಿಗೆ ಭಿನ್ನ ಭಿನ್ನವಾದ ಮನಸ್ಸಿರುವಂತೆ ಮಾನವರದ್ದು ಭಿನ್ನ ಭಿನ್ನ ಮನಸ್ಸಿರುವುದು ಅಷ್ಟೆ ಸತ್ಯ. ಅದೇ ಮಾನವನ ಮನಸ್ಸಿನ ಮೇಲೆ ಸಂಶೋಧನೆಗಳಾಗಿರುವಂತೆ ಪ್ರಾಣಿ–ಪಕ್ಷಿಗಳ ಮನಸ್ಸಿನ ಮೇಲೆ ಸ್ವಲ್ಪ ಅಲ್ಲೊಂದು ಇಲ್ಲೊಂದು ಸಂಶೋಧನೆಗಳು ಕೆಲಸ ಮಾಡಿವೆ. ಆದರೆ ಎಲ್ಲಾ ಜೀವಸಂಕುಲಗಳಿಗೂ ಅವುಗಳದ್ದೇಯಾದ ಮನಸ್ಸಿದೆ ಎಂಬ ಸತ್ಯವನ್ನು ಇದುವರೆವಿಗೂ ವಿಜ್ಞಾನ ಸಾಭೀತುಮಾಡಿಲ್ಲದೆಯೂ ಇರಬಹುದು. ಅಷ್ಟೇ ಏಕೆ? ಸಸ್ಯ ಮತ್ತು ಪ್ರಾಣಿ–ಪಕ್ಷಿ–ಕೀಟ–ಜಲಚರ ಜೀವಿಗಳ ದೈಹಿಕ ಬೆಳವಣಿಗೆಯ ಮೇಲೆ ಸಂಶೋಧನೆ ನಡೆದಿರುವಂತೆ ಅವುಗಳ ಮನೋಗುಣದ ಎರಿಳಿತಗಳಿಗೆ ಪೂರಕವಾದ ದೇಹಶಕ್ತಿ ರಚನೆಯಾಗಿರುವುದರ ಸೂಕ್ಷ್ಮ ಗ್ರಹಿಕೆಯ ಸಂಶೋಧನೆಗಳು ಇನ್ನೂ ದಟ್ಟವಾಗಿ ಆಗಬೇಕಾಗಿರುವುದನ್ನು ನಾವು ಮನಗಾಣಬೇಕಾಗಿದೆ. ಹಾಗಾಗಿ ಸಸ್ಯ, ಪ್ರಾಣಿ, ಪಕ್ಷಿ, ಕೀಟ ಜಲಚರಗಳ ಮನಸ್ಸಿನ ಕ್ರಿಯಾ ಚಟುವಟಿಕೆಗಳ ಬೆಳವಣಿಗೆಯ ಮೇಲೆ ಸರಿಯಾದ ಸಂಶೋಧನೆಗಳಾಗಿಲ್ಲ ಎಂಬುದರಲ್ಲಿ ಎರಡುಮಾತಿಲ್ಲ. ಆದ್ದರಿಂದ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಅವುಗಳ ಮನೋವಿಜ್ಞಾನ ಶಾಸ್ತ್ರಗಳು, ಸಾಹಿತ್ಯ, ಸಮಾಜ ವಿಜ್ಞಾನಗಳು ಜೀವ ಪರಿಸರದ ಮನೋವಿಜ್ಞಾನದ ಬಗ್ಗೆ ವೈಜ್ಞಾನಿಕವಾಗಿ ಬಹುಶಿಸ್ತೀಯ ನೆಲೆಯಿಂದ ಪರಿಶೀಲಿಸಿ ಸಂಶೋಧನಾತ್ಮಕವಾಗಿ ಮುನ್ನಡೆಯಬೇಕಾಗಿದೆ. ಈ ದಾರಿ ಹಿಡಿದರೆ ಪ್ರತಿ ಜೀವಿಗಳ ಚಲನ ವಲನಗಳನ್ನು ಗಮನಿಸಿ, ಅವುಗಳ ಮನಸ್ಥಿತಿಯಿಂದಾಗುವ ಧನಾತ್ಮಕ, ಋಣಾತ್ಮಕ ಗುಣ ಚಟುವಟಿಕೆಗಳು ಮನದಟ್ಟಾಗುತ್ತವೆ. ಇದರಿಂದ ಮತ್ತೊಂದು ಜೀವಿಯ ಮೇಲಾಗುವ ಪರಿಣಾಮ, ದುಷ್ಪರಿಣಾಮಗಳೇನು? ಎಂಬುದನ್ನು ಮಾನವನಿಗೆ ತೌಲನಿಕವಾಗಿ ಹೋಲಿಸಿ ಅಧ್ಯಯನ ಮಾಡಬೇಕಾಗಿದೆ. ಅದರ ಮೂಲಕ ಮಾನವನಿಗಿಂತ ಪ್ರಾಣಿ–ಪಕ್ಷಿ–ಕೀಟ–ಸಸ್ಯ ಜೀವಿಗಳಾವುವು ಕಡಿಮೆಯಿಲ್ಲ ಎಂಬುದನ್ನು ವೈಜ್ಞಾನಿಕವಾಗಿ ಸಾಭೀತು ಮಾಡಬೇಕಾದ ಅನಿವಾರ್ಯತೆಯ ತುರ್ತಿನ ಕಾಲವಿದು. ಆಧುನಿಕ ಜೀವ ಪರಿಸರದ ಸಾಂಸ್ಕೃತಿಕ ಕಾಲಘಟ್ಟದ ಪ್ರಧಾನ ಚರ್ಚೆಗೆ ಅಡಿಯಿಡುತ್ತಿರುವ ಇಂದು, ಈ ದಿಕ್ಕಿನ ಕಡೆ ಹೊಸ ಹೊಸ ಆವಿಷ್ಕಾರಗಳ ಶೋಧವನ್ನು ಕಂಡುಕೊಳ್ಳಬೇಕಾದ ಬಹುಜ್ಞಾನಶಿಸ್ತಿನ ಶಾಸ್ತ್ರೀಯ ಅಧ್ಯಯನದ ಕಡೆ ಜಗತ್ತೆ ಮುನ್ನಡಿ ಇಡಬೇಕಾಗಿರುವುದನ್ನು ಅಲ್ಲಗಳೆಯುವಂತಿಲ್ಲ.

ಏಕೆಂದರೆ ಯಾವ ಜೀವಿ ತೆಗೆದುಕೊಳ್ಳಿ ಮನಸ್ಸಿಲ್ಲದೆ ಅವಕ್ಕೆ ಬೇಕಾದ ಆಹಾರವನ್ನು ಅದರ ಸಂಗಾತಿ, ಮಕ್ಕಳ ರಕ್ಷಣೆಯನ್ನು ಮಾಡಿಕೊಳ್ಳಲಾರದೆಂಬ ಮೇಲಿನ ಮಾತು ಅರ್ಥವಾದರಷ್ಟೆ ಸಾಕು. ಎಲ್ಲಾ ಜೀವಿಗಳಿಗೂ ಅವುಗಳದ್ದೇ ಆದ ಮನಸ್ಸಿರುವುದು ಸ್ಪಷ್ಟ. ಅದೇ ರೀತಿ ಪ್ರತಿ ಜೀವಿಗೂ ಅದರದೇ ಆದ ಭಾಷೆಯ ಧ್ವನಿ, ಸಂಕೇತಗಳ ಗುಣ ಲಕ್ಷಣಗಳಿರುವುದು ಅಷ್ಟೇ ಸತ್ಯ. ಇದು ಅರ್ಥವಾದರೆ ಇವ್ಯಾವನ್ನು ಮಾನವನ ಭಾಷೆಗೆ ಅವನ ಮಾತು ಮತ್ತು ನಡವಳಿಕೆಗಳಿಗೆ ಹೋಲಿಸಿ ಶ್ರೇಷ್ಠ–ಕನಿಷ್ಠತೆಯ ಮೇಲೆ ಮೌಲ್ಯಮಾಪನ ಮಾಡುವುದು ಯುಕ್ತವಲ್ಲ. ಮಾನವ ತನ್ನ ವಿಭಿನ್ನ ಭಾಷೆಗಳ ಅಧ್ಯಯನ ಮಾಡಿ ಕಂಡುಕೊಂಡಂತೆ ಅಸಂಖ್ಯಾ ಜೀವಿಗಳ ಭಾಷಾ ವೈವಿಧ್ಯತೆ, ಮನೋವೈವಿಧ್ಯತೆ ಬಗ್ಗೆ ಮತ್ತು ಅವುಗಳ ಉಪಯುಕ್ತ ಮಾಹಿತಿ, ಹಾಗೂ ದುಷ್ಪರಿಣಾಮಗಳನ್ನು ಆಧಾರ ಸಹಿತ ತಿಳಿದುಕೊಳ್ಳಲು ಸಾಧ್ಯವಾದರೆ ಆಧುನಿಕ ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಗೆ ಹೆಚ್ಚು ಮಹತ್ವ ದೊರೆಯುತ್ತದೆ. ಈ ಬೆಳವಣಿಗೆಗಳು ಈ ಶತಮಾನದ ವಿಜ್ಞಾನ ತಂತ್ರಜ್ಞಾನ ಯುಗದಲ್ಲೂ ಆಗದಿರುವುದರಿಂದಲೇ ಸಸ್ಯ, ಪ್ರಾಣಿ, ಪಕ್ಷಿ, ಕೀಟಗಳಿಗೂ ಅವುಗಳದ್ದೇಯಾದ ಸಂಸ್ಕೃತಿ ಇದೆ ಎಂಬುದರ ಕಡೆ ಮಾನವ ಮತ್ತು ಅವನ ಉನ್ನತ ಜ್ಞಾನ ಶಿಸ್ತುಗಳು ಒತ್ತು ನೀಡದಿರುವುದರ ದುಷ್ಪರಿಣಾಮವನ್ನು ಮರೆಯುವಂತಿಲ್ಲ. ಈ ಎಲ್ಲಾ ಕಾರಣಗಳಿಂದಲೇ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಮಾನವ ಮತ್ತಿತರ ಜೀವ ಸಂಕುಲಗಳೇ ಜೀವನ್ಮರಣಗಳ ಭೀತಿಯನ್ನು ಎದುರಿಸುತ್ತಿವೆ. ಪ್ರಕೃತಿಯ ಇಂತಹ ಪ್ರಧಾನಾಂಶವನ್ನು ಜಗತ್ತಿನ ರಾಜ್ಯಾಧಿಕಾರಗಳಿಗೆ, ಮಾನವ ಸಂಕುಲಕ್ಕೆ ಮನವರಿಕೆ ಮಾಡಿ, ಅವರ ಕಾರ್ಯಚಟುವಟಿಕೆಗಳನ್ನು ಪರಿವರ್ತನೆಗೆ ಒಳಪಡಿಸಬೇಕಾಗಿರುವುದೇ ಗಮನಾರ್ಹ ಸಂಗತಿ.

ಈ ಶತಮಾನದವರೆಗೆ ಎಲ್ಲಾ ಜ್ಞಾನ ಕೇಂದ್ರಗಳು 'ಮಾನವ ಕೇಂದ್ರಿತ' ಮಾನವನ ಅಭಿವೃದ್ಧಿ ಮತ್ತು ಸಂಸ್ಕೃತಿಗಳನ್ನೆ ಬಿತ್ತಿ ಬೆಳೆದಿವೆಯೇ ಹೊರತು; ಮೇಲೆ ಪ್ರಸ್ತಾಸಿದಂತೆ. ಇವ್ಯಾವು 'ಜೀವಿ ಕೇಂದ್ರಿತ' ಜೀವಾಭಿವೃದ್ಧಿ ಮತ್ತು ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯ ಪ್ರಧಾನ ಧಾರೆಯನ್ನು ಪರಿಚಯಿಸಲಿಲ್ಲ. ಇವು

ಪ್ರಕೃತಿಯ ಜೀವಿಗ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯನ್ನೇ ಹಿಂದೆ ಸರಿಸಿ, ಮಾನವ ಸಂಸ್ಕೃತಿಯನ್ನೇ ಪ್ರಧಾನಧಾರೆಗೆ ತಂದು ಅದರೊಳಗೂ ವರ್ಗ, ಧರ್ಮ, ವೃತ್ತಿ, ಜಾತಿ ಕೇಂದ್ರಿತ ಸಂಸ್ಕೃತಿಗಳನ್ನಾಗಿ ವಿಭಾಗಿಸಿವೆ. ಅವುಗಳೊಳಗೂ ತಾರತಮ್ಯ ಬೇಧ–ಭಾವಗಳನ್ನು ಸೃಷ್ಟಿಸಿ ಪ್ರಕೃತಿಯ ಜೀವ ಕೇಂದ್ರಿತ ಬಹುಸಂಸ್ಕೃತಿಗೆ ವಿರುದ್ಧವಾಗಿ ಮಾನವ ಸಂಸ್ಕೃತಿಯನ್ನು ತಂದು ಅದನ್ನು ಪುಡಿ ಪುಡಿ ಮಾಡಿ ಶ್ರೇಷ್ಠ–ಕನಿಷ್ಠತೆಗಳ ಮನೋಧರ್ಮವನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ಹೋಗಲಾಡಿಸಲು ನಾವು ಪುನಹ 'ಜೀವ/ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)'ಯ ಕಡೆಗೆ ಮುಖಮಾಡಬೇಕಾಗಿರುವ ತುರ್ತನ್ನು ಎಲ್ಲಾ ಜ್ಞಾನಶಾಖೆಗಳಿಗೆ ಜಗತ್ತಿನೆಲ್ಲ ಸರ್ಕಾರ ಸಮಾಜಗಳಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಇದು ಬಲು ಕಷ್ಟದ ಕೆಲಸ ಇದಕ್ಕೆ ಬಹುಶಿಸ್ತೀಯ ಸಂಶೋಧನಾತ್ಮಕ ಅಧ್ಯಯನದ ಅಗತ್ಯತೆಯನ್ನು ಮನಗಾಣದೆ ಸಾಧ್ಯವಿಲ್ಲ. ಏಕೆಂದರೆ ಪ್ರಕೃತಿಯೇ ಬಹುಜೀವ/ಜೀವಿಗಳ ಬಹುಶಿಸ್ತೀಯ ಪ್ರಧಾನ ಕೇಂದ್ರವಾದುದ್ದರಿಂದ 'ಪ್ರತಿ ಜೀವಿಗಳು ಬಹುಶಿಸ್ತೀಯುಳ್ಳವು ಎಂಬುದನ್ನು ಮನಗಾಣದಿದ್ದರೆ ಹೇಗೆ? ಇದನ್ನು ಬಿಟ್ಟು ಮಾನವ ಇನ್ಯಾವ ಬೇರೆ ದಾರಿ ಹುಡುಕಿದರೂ ಅವನು ಇನ್ನೊಂದು ದುಷ್ಪರಿಣಾಮವನ್ನು ಎದುರಿಸಲು ಸಿದ್ಧನಾಗಬೇಕಾಗುತ್ತದೆ. ಇದು ಸಾರ್ವಕಾಲಿಕ ಪ್ರಕೃತಿ ನಿಯಮವೆಂಬುದನ್ನು ಮಾನವರ್‍ಯಾರು ಮರೆಯದಿದ್ದರೆ ಒಳಿತು.

ಕೊನೆ ಟಿಪ್ಪಣಿ:

1. ಕುಶಾಲ ಬರಗೂರು, ಧರೆಯೊಳಗಣ ಬೇರು, ಪುಟ–177
2. ಮೂಲ: ಹೆನ್ರಿವುಡ್ಸ, ಅನು: ಶಿವರುದ್ರಪ್ಪ, ಟಿ.ವಿ, ಪ್ರಾಗ್ಜೀವಿಶಾಸ್ತ್ರ ಅಕಶೇರುಕ, ಪುಟ–14
3. ಅದೇ, ಪುಟ–14–15
4. ನಾರಾಯಣರಾವ್.ಎ, ಪ್ರಾಣಿ ಜೀವನ, ಪು–4
5. ಅಂಬಿಕಾತನಯ ದತ್ತ, ಉಯ್ಯಾಲೆ, ಪುಟ–49
6. ರಂಗಯ್ಯ.ಡಿ, ಪ್ರಾಚೀನ ಸಸ್ಯ ವಿಜ್ಞಾನ,ಪುಟ–12–13
7. ಅದೇ, ಪುಟ–10
8. ಮಲ್ಲು.ಸಿ ಕೊತ್ನೂರು, ವಸುಂದರಾ, ಪುಟ–65
9. ಮೂಲ: ಹೆನ್ರಿವುಡ್ಸ್, ಅನು:ಶಿವರುದ್ರಪ್ಪ,ಟಿ.ವಿ, ಅಕಶೇರುಕ, ಪುಟ–223

ಅಧ್ಯಾಯ: 2
ಕನ್ನಡ ಸಾಹಿತ್ಯ: ಸಸ್ಯ ಮತ್ತು ಕೀಟಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ):

ಜೀವ–ಜೀವಿಗಳ ವಿಕಾಸದ ಸ್ವರೂಪ:

ಜೀವ–ಜೀವಿಗಳ ವಿಕಾಸ ಎಂಬುದು ಮಾನವ ಪ್ರಾಣಿಯ ಹುಟ್ಟಿಗೂ ಪೂರ್ವದ ಅಸಂಖ್ಯ ವರ್ಷಗಳಿಂದಲೇ ವಿಕಾಸವಾಗಿರುವುದು ಜಾಗತಿಕ ಸತ್ಯ. ಆದರೂ ಮಾನವ ತನ್ನ ಕಲ್ಪನೆ, ಭಾವನೆಗಳ ಪರಿಕಲ್ಪನೆಗಳಿಂದ, ಸಂಶೋಧನೆಗಳ ಆಧಾರದಿಂದ; ಜಗತ್ತಿನ ಸೂರ್ಯ, ಚಂದ್ರ, ನಕ್ಷತ್ರ, ಭೂಮಿ ಮುಂತಾದ ಗ್ರಹತಾರೆಗಳು ಮತ್ತು ಭೂಮಿ ಮೇಲಿನ ಜೀವ ಪರಿಸರ ಹುಟ್ಟಿ ವಿಕಾಸವಾದ ಬಗೆಗೆ ವೇದ, ಪುರಾಣ, ಧರ್ಮಗ್ರಂಥಗಳಲ್ಲದೆ; ಸಾಹಿತ್ಯ, ವಿಜ್ಞಾನಗಳ ಶೋಧದಿಂದ ಅಂದಾಜಿನ ಮೇಲೆ ಗುರುತಿಸಿ ಹೇಳಿದ್ದಾನೆ. ಇವುಗಳಲ್ಲಿ ವಿಜ್ಞಾನ ತನ್ನ ಸಿದ್ಧಾಂತಗಳ ಮೂಲಕ ಸಮರ್ಥ ಮಾಹಿತಿಗಳೊಂದಿಗೆ ವಿಶ್ವ, ಭೂಮಿ ಮತ್ತು ಜೀವಿಗಳ ಹುಟ್ಟಿನ ಕಾಲ ಮತ್ತು ಕಾರಣಗಳನ್ನು ತಿಳಿಸುತ್ತದೆ. ಇದರಲ್ಲಿ ಸ್ಫೋಟವಾದ ವಿಶ್ವದ ಹುಟ್ಟಿಗೆ 200000 ಮಿಲಿಯನ್ ವರ್ಷಗಳ ಹಿಂದೆಯೇ ಕಾರಣಗಳು ಸಂಭವಿಸಿವೆ ಎಂದು ವಾದಿಸಿದೆ. ಇದರ ತರ್ಕ ಮತ್ತು ಸಿದ್ಧಾಂತಗಳಿಂದ ಸದ್ಯಕ್ಕೆ ಒಪ್ಪಿಕೊಳ್ಳಲಾಗಿದೆ. ವಿಶ್ವಸೃಷ್ಟಿಯ ನಂತರ ಭೂಮಿಗೆ ಒಂದು ಸ್ವರೂಪ ಬಂದಿದ್ದರಿಂದ ಅದರ ಹುಟ್ಟು ಹಾಗೂ ವಯಸ್ಸಿನ ಪ್ರಶ್ನೆ ಸಹಜವಾಗಿ ಮೊಳೆಯುತ್ತವೆ. ಈ ಪ್ರಶ್ನೆಗೆ ಹಲವು ಪುರಾಣ ಧರ್ಮಗ್ರಂಥಗಳು ಉತ್ತರಕ್ಕಾಗಿ ತಡಕಾಡಿವೆ. ಅವುಗಳಲ್ಲಿ "ಹೀಭ್ರೂ ಗ್ರಂಥಗಳು ಕ್ರಿಸ್ತ ಪೂರ್ವ ನಾಲ್ಕು ಸಹಸ್ರ ವರ್ಷಗಳ ಹಿಂದೆ ಭೂಮಿ ನಿರ್ಮಾಣವಾಯಿತೆಂದು ಹೇಳುತ್ತವೆ. ..... 1654ರ ಐರ್ಲೆಂಡಿನ ಆರ್ಚ್ ಬಿಷಪ್ ಕ್ರಿಶ್ಚಿಯನ್ನರ ಓಲ್ಡ್ ಟೆಸ್ಟಮೆಂಟ್ ಗ್ರಂಥದ ಆಧಾರದ ಮೇಲೆ ಲೆಕ್ಕಹಾಕಿ ಭೂಮಿ ಕ್ರಿ. ಪೂ. ನಾಲ್ಕು ಸಾವಿರದ ನಾಲ್ಕನೇ ವರ್ಷದಲ್ಲಿ ಉದಿಸಿತು ಎಂದು ನಿರ್ಧರಿಸಿ ಕ್ರಿಸ್ತ ಪೂರ್ವ ನಾಲ್ಕು ಸಾವಿರದ ನಾಲ್ಕನೇ ಇಸವಿ, ಅಕ್ಟೋಬರ್ 26ನೇ ತಾರೀಖಿನ ಬೆಳಗಿನ ಒಂಬತ್ತು ಗಂಟೆಗೆ ಭೂಮಿ ಹುಟ್ಟಿತು ಎಂದು ಜಾತಕ ಬರೆದ"1 ಇಂತಹ ಕಾಲ ಸಮಯವನ್ನು ಪ್ರಸ್ತಾಪಿಸುವ ಧರ್ಮಗಳು ತಮ್ಮ ಧಾರ್ಮಿಕ ಗ್ರಂಥಗಳ ರಚನೆಯ ಕಾಲದ ಜ್ಞಾನ ಸೀಮಿತತೆಯಿಂದಾಗಿ ತಮ್ಮ ತಮ್ಮ ಜ್ಞಾನ, ಚಿಂತನೆಯೇ ಶ್ರೇಷ್ಠ, ಸತ್ಯವೆಂಬ ನಂಬಿಕೆಗೊಳಪಟ್ಟಿರುವುದು ತಿಳಿಯುತ್ತದೆ.

ವಿಜ್ಞಾನದ ಬೆಳವಣಿಗೆಯನ್ನು ಗಮನಿಸಿದರೆ 1820 ನೇ ಶತಮಾನದವರೆಗೆ ಪ್ರಕಟಿಸಿರುವ ಹಲವಾರು ವೈಜ್ಞಾನಿಕ ಶೋಧನೆಯ ಸಿದ್ಧಾಂತಗಳಲ್ಲಿ ಹೆಚ್ಚು ಗಮನ ಸೆಳೆದಿರುವಂತಹದ್ದು ಅಮೆರಿಕನ್ ವಿಜ್ಞಾನಿ ಬೊಲ್ಟ್‌ವುಡ್‌ನ 'ಪರಮಾಣು ಗಡಿಯಾರ' ಸಿದ್ಧಾಂತ. ಇದರಲ್ಲಿ ಬೊಲ್ಟ್‌ವುಡ್ ಭೂಮಿಯ ಶಿಲಾಪದರದಲ್ಲಿರುವ ಪರಮಾಣು ಗಡಿಯಾರದ ಆಧಾರದ ಮೇಲೆ ಭೂಮಿಯ ವಯಸ್ಸನ್ನು ಕಂಡು ಹಿಡಿದಿದ್ದಾನೆ. ಇದರ ಮೂಲಕ "ಹಿಂದಿನ ಕಲ್ಪನೆಗಳಿಗಿಂತ ಎಷ್ಟೋ ಪಟ್ಟು ಭೂಮಿ ಪ್ರಾಚೀನವಾದುದೆಂಬುದಂತೂ ಖಚಿತವಾಯ್ತು. ಸದ್ಯಕ್ಕೆ ಭೂಮಿಯ ವಯಸ್ಸು ಮೂರು ಬಿಲಿಯನ್ ವರ್ಷಗಳಿಗಿಂತಲೂ ಹಿಂದಿನದು ಎಂದು ಖಚಿತವಾಗಿ ಹೇಳಬಹುದು"2. ಈ ಭೂಮಿಯೇ ಮುಂದಿನ ಜೀವ ಪರಿಸರಕ್ಕೆ ಮೂಲಕಾರಣವೆಂಬುದನ್ನು ವಿಜ್ಞಾನ ತನ್ನ ವೈಜ್ಞಾನಿಕ ಮಾಹಿತಿ ಆಧಾರಗಳನ್ನು ನೀಡಿದೆ. ಈ ಅಂಶಗಳಿಂದ ವಿಶ್ವಸೃಷ್ಟಿಯಿಂದ ಭೂಮಿ ಹುಟ್ಟಿ, ಇದು ಇಡೀ "ಜೀವ ಸಂಸ್ಕೃತಿ"ಯಿಂದ ಬೆಳವಣಿಗೆಯಾಗಿ; ಜೀವ–ಜೀವಿಗಳ ಪರಿಸರದ ಸೃಷ್ಟಿಗೆ ಮೂಲವಾಗಿ, ಮಾನವ ಸಮಾಜದ ಮನದಲ್ಲಿ ಭೂಮಿ ತಾಯಿಯಾಗಿ ನೆಲೆಗೊಂಡಿದೆ.

ಈ ಸಮಾಜದ ಜನರು ತಮ್ಮ ಕಣ್ಣಿಗೆ ಗೋಚರಿಸುತ್ತಿದ್ದ ಜೀವ ಪರಿಸರ ಸೃಷ್ಟಿಗೆ ದೇವರು ಅಥವಾ ಅತಿಮಾನುಷ ಶಕ್ತಿಯೊಂದು ಕಾರಣವಾಗಿದೆ ಎಂದು ಭಾವಿಸಿದ್ದರು. ಇದರ ಬಗ್ಗೆ ಜನಪದ ಮತ್ತು ವೈದಿಕ ಪುರಾಣ, ಧರ್ಮಗ್ರಂಥಗಳು ಸಾಂದರ್ಭಿಕವಾಗಿ ಅವುಗಳ ಗ್ರಹಿಕೆಗೆ ಅನುಗುಣವಾಗಿ ಪ್ರತಿಪಾದಿಸುತ್ತವೆ. ಉದಾಹರಣೆಗಾಗಿ ಬೈಬಲ್‌ನಲ್ಲಿ ದೇವರು ಆರುದಿನಗಳಲ್ಲಿ ಸೃಷ್ಟಿಕಾರ್ಯವನ್ನು ನಡೆಸಿದ್ದಾನೆ ಎಂದು

ಹೇಳಿರುವುದನ್ನು ಗಮನಿಸಬಹುದು. ಇಂತಹ ಧಾರ್ಮಿಕ ನಂಬಿಕೆಗಳು ನಿರಾಧಾರವಾಗಿ ಅವೈಜ್ಞಾನಿಕತೆಯಿಂದ ಕೂಡಿವೆ. ಆದರೆ ವಿಜ್ಞಾನ ತನ್ನ ಜೀವ ಸೃಷ್ಟಿಯ ಸಿದ್ಧಾಂತದಿಂದ ಪ್ರಾಯೋಗಿಕ ವಿಶ್ಲೇಷಣೆಯೊದಗಿಸುತ್ತದೆ.

ಭೂಮಿ ಹುಟ್ಟಿದ 200 ಕೋಟಿ ವರ್ಷಗಳವರೆಗೆ ಅದರ ಮೇಲೆ ಯಾವ ಜೀವಿಗಳೂ ಕಾಣಿಸಿಕೊಂಡಿರಲಿಲ್ಲವೆಂದು ವಿಜ್ಞಾನ ಹೇಳಿದೆ. ಇದು ನಮಗೀಗಾ ತಿಳಿದಿರುವ ಸೂಕ್ಷ್ಮಜೀವ (ವೈರಸ್) ಗಳ ಹುಟ್ಟಿಗೆ ಕಾರಣವಾಗಬಹುದೆಂದು ಯೋಚಿಸಿ ನಾನಾ ಪ್ರಯೋಗ, ಸಿದ್ಧಾಂತಗಳನ್ನು ಮಂಡಿಸಿದೆ. ಇವುಗಳ ಪ್ರಕಾರ ಸೂಕ್ಷ್ಮಾಣುಗಳಿಂದ ರಾಸಾಯನಿಕ ಕ್ರಿಯೆ ನಡೆದು ಜೀವಗಳಿಂದ ಜೀವಿ ಸೃಷ್ಟಿಗೆ ಕಾರಣವಾಗಿದೆ. ಈ ಕ್ರಿಯೆಗೆ ಸಾಗರ, ಸಮುದ್ರಗಳಲ್ಲಿ ಅನುಕೂಲ ವಾತಾವರಣವಿರುವುದರಿಂದ ಇದನ್ನೇ ಜೀವಿಗಳ ಹುಟ್ಟಿಗೆ ಮೂಲವೆಂದಿದೆ. ಆದ್ದರಿಂದಲೇ "ಸಮುದ್ರವು 'ಜೀವ ತುಂಬಿದ ಸೂಪ್ '(ಸಾರು) ಎಂದು ಪ್ರೊಫೆಸರ್ ಶೇಷಯ್ಯ ಕರೆದಿದ್ದಾರೆ"3. ಇದಕ್ಕೆ ಸ್ಪಷ್ಟ ವಿವರಣೆಯನ್ನು ಕೊಟ್ಟ ವಿಜ್ಞಾನಿ 1922ರಲ್ಲಿ ಎ.ಐ.ಒಪೇರಿನ್ ಅವರು. "ಮೊದಲು ರಾಸಾಯನಿಕ ವಸ್ತುಗಳ ಸರಳ ದ್ರಾವಣವಿದ್ದು, ಅಣುರೂಪದಲ್ಲಿ ಒಂದಕ್ಕೊಂದು ಬಂಧಿತಗೊಂಡು, ಕ್ರಮೇಣ ವೃದ್ಧಿಯ ಕಾರಣದಿಂದ ಸಂಕೀರ್ಣ ವಸ್ತುಗಳಾಗಿ ಮಾರ್ಪಟ್ಟು, ಹೊಸ ಹೊಸ ಗುಣಗಳು ಕಂಡು ಬಂದು, ಈ ಹೊಸ ಗುಣಗಳು, ಅಣುಗಳ ಪರಸ್ಪರ ಸಂಬಂಧ ಹಾಗೂ ರಚನಾ ಅಂತರವನ್ನು (Spatial Arrangement) ನಿರ್ಧರಿಸಿ ಜೀವವೈಜ್ಞಾನಿಕ ಏಕಮುಖತೆ ಹಾಗೂ ನಂಬಿಕೆಗೆ ದಾರಿ ಮಾಡುತ್ತಿದ್ದಂತೆ ಅದಕ್ಕೆ ಹಲವಾರು ಬಗೆಯ ಸೂರ್ಯನಿಂದ ಬರುವ ಅಲ್ಟ್ರಾವೈಲೆಟ್ ಕಿರಣ, ವಿದ್ಯುತ್ ಕಿರಣ ವಿದ್ಯುತ್ತಾಪೀಹೀ ವಿಕಿರಣ ವಿತರಣ ಹಾಗೂ ಶಾಖ ಶಕ್ತಿಯು ನಿಮ್ನ ಮುಖಿ ಪೃಥ್ವೀಯ ಮೇಲೆ ಬಹುಮುಖಿ ಕ್ರಿಯೆಗಳನ್ನು ನಡೆಸಿ, ಜೀವದ ಹುಟ್ಟಿಗೆ ಕಾರಣಭೂತವಾಯಿತೆಂದೂ, ಆ ಅಣುವು ಕೋ ಅಸರ್‌ವೀಟ್ ಬಿಂದುಗಳಾಗಿ ದ್ವಿಪ್ರತಿ ಹೊಂದುವ ಸಾಮರ್ಥ್ಯ ಪಡೆದು ಜೀವಿಯಾಯಿತೆಂದು ಹೇಳುತ್ತಾರೆ"4.

ಇದೊಂದು ಕ್ರಾಂತಿಕಾರಕ ವಿಶ್ಲೇಷಣೆಯಾಗಿದ್ದು, ಅರಿವು ಮತ್ತು ಜ್ಞಾನದ ವಿಸ್ತೃತ ರೂಪವಾಗಿ ಇದು ಯಾರಿಗೂ ಒಪ್ಪಿಗೆಯಾಗುವಂತಿದೆ. ಆದರೆ ಜೀವದ ಹುಟ್ಟಿಗೆ ಎರಡನೇ ಅಧ್ಯಾಯದಲ್ಲಿ ಚರ್ಚಿಸಿರುವ ಜೀವ, ಜೀವಿಯ ಹುಟ್ಟಿನ ಬಗೆಗಿನ ಮಾತಿಗೆ ಈ ಮಾತು ಸಮರ್ಥನೆ ನೀಡಲಾರದು. ಏಕೆಂದರೆ ಸೂರ್ಯನಿಗೂ ಮೊದಲು ಹುಟ್ಟಿರುವುದು ಈ ಜೀವಾಣು. ಅದರಿಂದಲೇ ಆದದ್ದು ಈ ಜೀವಿ ಎಂಬುದನ್ನು ಪ್ರತಿಪಾದಿಸಲಾಗಿದೆ. ಮುಂದುವರೆದು ಹೇಳುವುದಾದರೆ, ಆ ಜೀವದ ಸೂಕ್ಷ್ಮಾಣುಗಳು ಪ್ರಕೃತಿಯ ಪ್ರತಿ ಪಾದದಲ್ಲಿಯೂ ಇರುವುದರಿಂದ ಆ ಜೀವಾಣುಗಳು ಓಪರಿನ್ ಹೇಳುವಂತೆ; ಸೂರ್ಯ, ಚಂದ್ರ, ಭೂಮಿಯಲ್ಲೂ ಇರುವುದು ಸಹಜವಾಗಿದೆ. ವಿಶೇಷವೇನೆಂದರೆ ಅದೇ ಜೀವಾಣು ಸೂರ್ಯ ಮತ್ತು ಭೂಮಿಯ ಪರಸ್ಪರ ಸಂಪರ್ಕದಿಂದಾಗುವ ಕ್ರಿಯೆಗಳನ್ನೆ ಇವರು ಗುರುತಿಸಿರುವುದು ಸರ್ವಮಾನ್ಯವಾಗಿದೆ. ಓಪರಿನ್ ಅವರು ತಮ್ಮ ಮುಂದುವರಿದ ವಿವರಣೆಯಲ್ಲಿ ಜೀವಿಗಳು ನೀರಿನಲ್ಲಿರುವ ರಾಸಾಯನಿಕ ವಸ್ತುಗಳನ್ನು ತಮ್ಮ ಆಹಾರಕ್ಕಾಗಿ ಬಳಸಿಕೊಂಡು ಬದುಕುವಾಗ ಪೈಪೋಟಿ ಬೆಳೆದು ಆಹಾರ ಕೊರತೆಯುಂಟಾಗಿ ಪರ್ಯಾಯವಾಗಿ ಬೇರೆ ರೀತಿಯ ರಾಸಾಯನಿಕ ವಸ್ತುಗಳ ಬಳಕೆಯ ಜೀವಿಗಳು ಹುಟ್ಟಿಕೊಳ್ಳುತ್ತವೆ. ಇವುಗಳ ಪೈಪೋಟಿ ಮತ್ತು ಪರ್ಯಾಯ ಮಾರ್ಗಗಳಿಂದ ಒಂದಕ್ಕಿಂತ ಒಂದು ಹೆಚ್ಚು ಶಕ್ತಿ ಸಾಮರ್ಥ್ಯವುಳ್ಳ ಜೀವಿಗಳಾಗಿ ಹುಟ್ಟುತ್ತಲೇ ಇರುತ್ತವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಗಿಡ, ಮರ, ಹುಲ್ಲು, ಬಳ್ಳಿ, ಪಾಚಿ ಮುಂತಾದ ಸಸ್ಯ ಪರಿಸರ ಜೀವಿಗಳು ಸೂರ್ಯನ ಬೆಳಕನ್ನು ಬಳಸಿಕೊಂಡು ಆಹಾರ ಮಾಡಿಕೊಂಡವೆಂದು, ಇನ್ನೊಂದು ಬಗೆಯ ಜೀವಿ ತನ್ನಂತಹದ್ದನ್ನೊ, ಇಲ್ಲ ಪಾಚಿಯನ್ನೊ ತಿಂದು ಬದುಕುತ್ತದೆ. ಇದು ಪ್ರಾಣಿ ವಂಶದ್ದಾಗಿರುತ್ತದೆ. ಈ ಯಾವ ಜೀವಿಗೂ ಜೀವಕ್ಕೂ ಮೊದಲು ಸ್ಪಷ್ಟ ಆಕಾರವಿರಲಿಲ್ಲ. ಕಾಲಕ್ರಮೇಣ ಇದು ಬದಲಾವಣೆಗೊಳಪಟ್ಟಿದೆ. ನಂತರ ಅವು ಇಂತಹ ಜೀವಿಯ ಒಂದು ಭಾಗ ಆಹಾರವನ್ನು ತಿಂದು ಅರಗಿಸಿಕೊಂಡರೆ, ಮತ್ತೊಂದು ಭಾಗ ಪುನರುತ್ಪತ್ತಿ ಮಾಡುತ್ತಿತ್ತು. ಇದು ಮೊದಲ ಜೀವಕಣ ಅಥವಾ ಏಕಕಣ. ಇದು ನಂತರ ಜೀವಿಯ ರೂಪ ಪಡೆದು ನಾನಾರೂಪಕ್ಕೆ ಬಂದಿವೆ. ಇವುಗಳಿಂದಲೇ ಬಹುಕಣ ಜೀವಿಗಳಾಗಿ ನಂತರ ಅಸಾಮಾನ್ಯವಾದ ಹಲವಾರು ಬಗೆಯ ಜೀವಿಗಳು ಉದಯಿಸಿದ ಮೇಲೆ ಮಾನವನೂ ಹುಟ್ಟಿರುವುದು ಎಂದು ವಿಜ್ಞಾನ ಸ್ಪಷ್ಟಪಡಿಸುತ್ತದೆ.

ಈ ವಿಕಾಸ ಕ್ರಿಯೆಯು ನೂರಾರು ಬೆಳವಣಿಗೆಯ ಹಂತಗಳಿಂದ "ಕೋಟಿಗಟ್ಟಲೆ ವರ್ಷಗಳು ಸಾಗಿದವು. ಕೆಲವೆಡೆಗಳಲ್ಲಿ ಸಮುದ್ರ ಹಿಂದೆ ಹೋಗಿ ನೆಲ ಕಾಣಿಸಿಕೊಂಡಿತು. ಆಗ ಸಮುದ್ರದಿಂದ ಭೂಮಿಯ ಮೇಲಕ್ಕೆಸೆಯಲ್ಪಟ್ಟ ಜೀವಿಗಳು ಹೊಸ ಪರಿಸ್ಥಿತಿಯಲ್ಲಿ ಜವುಗು ನೆಲದಲ್ಲಿ ಇರಬೇಕಾಯಿತು. ಬದುಕುವ ಸಾಮರ್ಥ್ಯವುಳ್ಳ ಕೆಲವು ಗಾಳಿಯನ್ನು ಉಸಿರಾಡಿ, ಬದುಕಲು ಯತ್ನಿಸಿ ವಿಜಯಗಳಿಸಿದವು. ಕೆಲವು ಕಾಲ ಅವು

ಸಮುದ್ರದಲ್ಲಿಯೂ, ನೆಲದ ಮೇಲೂ, ಬದುಕಿದವು, ಅನಂತರ ನೆಲದ ಮೇಲೆಯೇ ಬದುಕುವ ಸಾಮರ್ಥ್ಯ ಹೊಂದಿದವು.

ಆಮೇಲೆ ಹಲವಾರು ಬಗೆಯ ಈಜುವ, ಸರಿಯುವ, ಹಾರುವ ಜೀವಿಗಳು ಹುಟ್ಟಿಕೊಂಡವು. ಹಲ್ಲಿಯ ಜಾತಿಯ ದೊಡ್ಡ ದೊಡ್ಡ ಜಂತುಗಳು ಕಾಣಿಸಿಕೊಂಡವು. ಅನಂತರ ತನ್ನ ಮಕ್ಕಳನ್ನು ತನ್ನ ಶರೀರದ ಮೇಲೆ ಎತ್ತಿಕೊಂಡು, ಹಾಲೂಡಿಸುವ ಪ್ರಾಣಿಗಳು ತೋರಿದವು. ಕಾಲ ಕ್ರಮೇಣ ಇವು ತಮ್ಮ ಕೈಗಳನ್ನು ಉಪಯೋಗಿಸುವ ಶಕ್ತಿಯನ್ನು ಪಡೆದುಕೊಂಡವು. ಕೈ ಬಳಸಿ ಬದುಕುವ ವಿಕಸನ ಕಾಲದಲ್ಲಿ ಮೆದುಳು ಬೆಳಯಿತು. ಮಾನವ ಜನ್ಮ ತಾಳಿದ"5.

ವಿಕಾಸವಾದದ ಬೆಳೆವಣಿಗೆಯನ್ನು ಇಪ್ಪತ್ತನೇ ಶತಮಾನದ ಎ. ಐ. ಒಪೇರಿನ್, ಜೆ. ಬಿ. ಎಸ್. ಹಾಲ್ಡೇನ್ ಅವರ ಸಿದ್ಧಾಂತ, ಅಭಿಪ್ರಾಯಗಳ ಆಧಾರದಿಂದ ಸ್ಟಾನ್ಲೆಮಿಲ್ಲರ್ ಟೆರೆನಿಸ್, ಡೊಡೊನೋವ, ಮತ್ತು ಸಿಡೊರೋವ, ಪೊನ್ನಮ್ ಪೆರುಮಾ ಮತ್ತು ಸಂಗಡಿಗರು, ಜೇಮ್ಸ್ ಡೀವೆ, ವಾಟ್ಸನ್, ಕಾರ್ನ್‌ಬರ್ಗ್ ಮುಂತಾದ ವಿಜ್ಞಾನಿಗಳು ಜೀವ ಸೃಷ್ಟಿಯ ಸಂಶೋಧನೆಯನ್ನು ಮುಂದುವರೆಸಿದರು. ಇವರು ತಮ್ಮ ಶೋಧನೆಯಿಂದ ಜೀವಿಗಳಲ್ಲಿರುವ ನ್ಯೂಕ್ಲಿಕ್ ಆಮ್ಲಗಳು ಎರಡು ಆರ್.ಎನ್.ಎ. (RNA) ಡಿ.ಎನ್.ಎ.(DNA) ಗಳು ಇವು ಜೀವಿಗಳ ಸೃಷ್ಟಿಗೆ ಕಾರ್ಯಶೀಲವಾಗಿರುತ್ತವೆ ಎಂದರು. ಇದಕ್ಕೆ ಕಾರ್ನ್‌ಬರ್ಗ್ ಅವರು ಅಂತಿಮವಾಗಿ ಡಿ.ಎನ್.ಎ ಕ್ರಿಯಾಶೀಲತೆಗೆ ಕಿಣ್ವವನ್ನು ಸೇರಿಸಿದಾಗ ಡಿ.ಎನ್.ಎ ಜೀವ ಬ್ಯಾಕ್ಟೀರಿಯವನ್ನು ದಾಳಿಮಾಡಿ, ಸಂತಾನೋತ್ಪತ್ತಿಯನ್ನು ಹಾಗೂ ಜೈವಿಕ ಕಾರ್ಯವನ್ನು ನಡೆಸುತ್ತದೆಂದು ವಿವರಣೆಕೊಟ್ಟರು. ಇವರ ವಿವರಣೆಯಲ್ಲಿ ಜೀವಿ ಹೇಗೆ ಹುಟ್ಟಿತು ಮತ್ತು ಇದನ್ನು ಹೇಗೆ ಹುಟ್ಟಿಸಬಹುದು ಅಥವಾ ತಯಾರಿಸಬಹುದೆಂಬ ಮಾಹಿತಿಯನ್ನು ವಿಜ್ಞಾನ ಸ್ಪಷ್ಟವಾಗಿ ನೀಡಿದೆ. ಇಲ್ಲೆಲ್ಲ ಭೂಮಿಯಿಂದ ಆಕಾಶ ಸೂರ್ಯನವರೆಗೆ, ಸಮುದ್ರದಿಂದ ಭೂ ಬಯಲು ಪ್ರದೇಶದವರೆಗೆ ಸಾಗಿ ಬಂದ ಪ್ರಕೃತಿಯ ಈ ಭಾಗಗಳೆಲ್ಲ ಒಂದಕ್ಕೊಂದು ಅವಿನಾಭಾವ ಸಂಬಂಧದಿಂದ ಜೀವ–ಜೀವಿಗಳ ಹುಟ್ಟು ಮತ್ತು ಬೆಳೆವಣಿಗೆಗಳು ಸಹಜವಾಗಿ ವಿಕಾಸವಾಗಿ ವೃದ್ಧಿಯಾಗಿದೆ.

ಈ ಭೂಮಿ ಮೇಲೆ ನಮ್ಮ ಸಹ ಪ್ರಯಾಣಿಕರಾಗಿ ಸಂಚರಿಸುವ ಸಮಸ್ತ ಜೀವ–ಜೀವಿ ಕೋಟಿಯೂ ಒಂದೇ ಜೀವ ಜಾಲದ ಭಾಗದಲ್ಲಿವೆ. ಅಂದರೆ ಈ ಹಿಂದೆ ಹೇಳಿದಂತೆ ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ಜೀವ ಕಣಗಳಾದ ನ್ಯೂಕ್ಲಿಕ್ ಆಮ್ಲ, ಆರ್.ಎನ್.ಎ, ಡಿ.ಎನ್.ಎ, ಕಿಣ್ವಗಳ ಈ ನಾನಾ ರೀತಿಯ ಬ್ಯಾಕ್ಟೀರಿಯ, ವೈರಸ್ಸ್ ಗಳೊಂದಿಗಿನ ಹೋರಾಟದ ಜೋಡಿ ಕಾರ್ಯ ಚಟುವಟಿಕೆಗಳನ್ನೆ ರೂಪಾಂತರ ಕ್ರಿಯೆ ಎನ್ನುವುದು. ಈ ಜೀವಗಳ ಜೀವ ಶಕ್ತಿಯ ಪರಸ್ಪರ ಹೋರಾಟದ ಸಹಜ ಗುಣ ಸ್ವಭಾವದ ನಡವಳಿಕೆಗಳ ಕಾರ್ಯ ಚಟುವಟಿಕೆಗಳನ್ನೆ "ಜೀವ ಸಂಸ್ಕೃತಿ" ಎನ್ನಲಾಗಿದೆ. ಇದನ್ನೆ ಅಲ್ಲಮ ಪ್ರಭು "ಅತ್ಮಾ ಜೀವ ಸಮಯುಕ್ತಂ ಜೀವಂ ಜೀವೇನ ಭಕ್ಷಯೇತ್!" ಎಂದಿರುವುದು. ಇಂತಹ ಜೀವ ಸಂಸ್ಕೃತಿಯ ನಿರಂತರ ಕಾರ್ಯ ಶೀಲತೆಯಿಂದಾಗುವ ಪ್ರಕೃತಿಯ ಜೀವಗಳ ರೂಪಾಂತರ ಕಾರ್ಯಗಳಿಂದ ಜೀವಿಯಾಗಿ ರೂಪುಗೊಂಡು ಬೆಳವಣಿಗೆಯಾಗುತ್ತವೆ. ಈ ರೀತಿ ನಡೆಯುವ 'ಪ್ರಕೃತಿಯ ವಿಕಾಸ ಕ್ರಮದಿಂದ ಭೂಮಿ ಮೇಲೆ ನಡೆಯುವ ವಿಕಾಸ ಕ್ರಯೆ ಆಕಾಶದಲ್ಲಿರುವ ಸೂರ್ಯ–ಚಂದ್ರ ಮುಂತಾದ ಗ್ರಹ ತಾರೆಗಳ ಪ್ರಭಾವ ಪರಿಣಾಮಗಳಿಗೆ ಒಳಪಟ್ಟಿರುವ ಇಕಾಲಜಿಯ ಜೀವ ಸಂಪರ್ಕದಿಂದ ಸದಾ ನಡೆಯುತ್ತಿರುವುದು ಈ ವಿಸ್ಮಯಕಾರಿ ಬೆಳವಣಿಗೆಯಾಗಿದೆ. ಇದರಿಂದ; ಸಸ್ಯ, ಪ್ರಾಣಿ, ಪಕ್ಷಿ, ಕೀಟ ಮುಂತಾದ ವೈವಿಧ್ಯಮಯ ಜೀವಿಗಳು ಹುಟ್ಟಿಕೊಂಡು ಬೆರಗುಗೊಳಿಸುತ್ತಿವೆ. ಇವುಗಳನ್ನು ಸ್ಥೂಲವಾಗಿ ಲೆಕ್ಕಾಚಾರ ಮಾಡುವುದಾದರೆ "ಭೂಮಿಯಲ್ಲಿ ಐವತ್ತು ಲಕ್ಷಕ್ಕೂ ಹೆಚ್ಚು ಜೀವಿ ಜಾತಿಗಳಿವೆ: 4,000 ಜಾತಿ ಸಸ್ತನಿಗಳು 10,000 ಜಾತಿ ಪಕ್ಷಿಗಳು, 12,000 ಕಪ್ಪೆ ಮತ್ತು ಉರಗಗಳು; 22,000 ಜಾತಿ ಮೀನುಗಳು 230,000 ಸಸ್ಯಜಾತಿಗಳು ಹಾಗೂ 960,000 ಜಾತಿಯ ಕೀಟಗಳು ಹಾಗೂ ಇನ್ನೂ ಲಕ್ಷಾಂತರ ಜಾತಿ ಜೀವಿಗಳನ್ನು ವಿಜ್ಞಾನಿಗಳು ಇನ್ನೂ ಗುರುತಿಸಿಯೇ ಇಲ್ಲವಂತೆ! ಕೆಲವು ನಮ್ಮ ದೇಶದಲ್ಲೇ ಸುಮಾರು 15,000 ಜಾತಿಯ ಸಸ್ಯಗಳು, 65,000 ಜಾತಿಯ ಪ್ರಾಣಿಗಳೂ ಇವೆ. ಅಂದರೆ ಜಗತ್ತಿನ ಜೀವಿ ವೈವಿಧ್ಯಕ್ಕೆ ಹೋಲಿಸಿದರೆ ಶೇಕಡಾ 6 ರಷ್ಟು ಸಸ್ಯಜಾತಿಗಳು ಶೇಕಡಾ 4.3 ಪ್ರಾಣಿಗಳೂ ನಮ್ಮಲ್ಲಿವೆ. ಇನ್ನೂ ವಿಂಗಡಿಸಿದರೆ 50,000 ಜಾತಿ ಕೀಟಗಳೂ 2,546 ಜಾತಿ ಮೀನುಗಳು 1,224 ಜಾತಿಯ ಪಕ್ಷಿಗಳೂ 530 ಜಾತಿ ಉರಗಗಳೂ 205 ಜಾತಿ ಕಪ್ಪೆಗಳು 350 ಜಾತಿ ಸಸ್ತನಿಗಳು ಇವೆ"6.

ಭೂಮಿಯ ಈ ಜೀವಿಗಳ ಸಮೃದ್ಧ ವಿಕಾಸಕ್ಕೆ ಕಾರಣ. ಅದರಲ್ಲಿರುವ, ಬದಲಾಗುವ ಪರಿಸರದ ವೈವಿಧ್ಯ. ಭೂಮಿ–ಆಕಾಶಗಳ ಈ ವಾತಾವರಣದಲ್ಲಿ ಗಾಳಿ, ನೀರು, ಬೆಳಕುಗಳ ಭೂಗುಣಗಳಿಗೆ ಹೊಂದಿಕೊಂಡು ಸಸ್ಯಸಮೂಹ ಸೃಷ್ಟಿಯಾಗಿ, ಇವುಗಳಿಂದ ಪ್ರಾಣಿ, ಪಕ್ಷಿ, ಕೀಟ ಮುಂತಾದ ಜೀವಸರಪಳಿಯೇ ವಿಕಾಸವಾಗಿದೆ. ಇದರ ನಂತರ ವಿಜ್ಞಾನಿಗಳ ಪ್ರಕಾರ "ಮಾನವ ಉಗಮಗೊಂಡಿದ್ದು ಮಾತ್ರ ಇತ್ತೀಚೆಗೆ ಸುಮಾರು ಇಪ್ಪತ್ತೈದು ಲಕ್ಷ

ವರ್ಷಗಳ ಹಿಂದೆ”7 ಎಂದು ಅಭಿಪ್ರಾಯಪಡಲಾಗಿದೆ. ಈ ಎಲ್ಲ ಜೀವ–ಜೀವಿ ಸಮೂಹವನ್ನು ನಾವು ಜೀವ–ಜೀವಿ ಸಾಂಸ್ಕೃತಿಕ ಪರಿಸರವೆಂದು ಕರೆಯಬಹುದಾಗಿದೆ. ತೀರ ಇತ್ತೀಚಿನ ಸಂಶೋಧನೆಯ ಪ್ರಕಾರ ಈ ಎಲ್ಲ ಜೀವ ಉಗಮದ ಕುರುಹು ಚಂದ್ರನಲ್ಲಿದೆ ಎನ್ನಲಾಗಿದೆ. ಅಮೆರಿಕಾದ ಸಿಯಾಟಲ್‌ನಲ್ಲಿರುವ ವಾಷಿಂಗ್ಟನ್ ವಿಶ್ವವಿದ್ಯಾನಿಲಯದ ಖಗೋಳ ವಿಜ್ಞಾನಿ ಜಾನ್ ಆರ್ಮ್‌ಸ್ಟ್ರಾಂಗ್ ಮತ್ತವರ ಸಹಚರರು, ತಮ್ಮ ಸಂಶೋಧನಾಧ್ಯಯನದಿಂದ ಅಂದಾಜಿಸಿ, ಚಂದ್ರನ ಮೇಲೆ ಎಂಬತ್ತು ಲಕ್ಷಟನ್ ತೂಕದಷ್ಟು ಭೂಮಿಯ ತುಣುಕುಗಳಿವೆಯೆಂದಿದ್ದಾರೆ.

“ಭೂಮಿಯಲ್ಲಿ ಜೀವ ಹೇಗೆ ಮತ್ತು ಎಲ್ಲಿಂದ ಬಂತು ಎಂಬುದರ ಬಗ್ಗೆ ಸಾಕಷ್ಟು ವಿವಾದಗಳಿವೆ. ಆಸ್ಟ್ರೇಲಿಯಾ ದೇಶದಲ್ಲಿ ಸಿಕ್ಕ 350 ಕೋಟಿ ವರ್ಷ ಹಿಂದಿನದೆಂದು ಹೇಳಲಾದ ಶಿಲೆಗಳಲ್ಲಿ ಜೀವಕೋಶಗಳ ಆಗಮನದ ಕುರುಹು ಸಿಕ್ಕಿದೆ. ಗ್ರೀನ್‌ಲ್ಯಾಂಡ್‌ನಲ್ಲಿ ಸಿಕ್ಕ ಶಿಲೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ 380 ಕೋಟಿ ವರ್ಷಗಳ ಹಿಂದೆಯೇ ಜೀವಕೋಶಗಳು ಧರೆಗಿಳಿದು ಬಂದಿದ್ದವೆಂಬ ವಾದಕ್ಕೆ ಪುರಾವೆ ಸಿಕ್ಕಿದೆ. ಇದಕ್ಕೂ ಮುನ್ನ ಜೀವ ಹುಟ್ಟಿರಬಹುದಲ್ಲವೇ? ಭೂಮಂಡಲದ ಖಂಡಗಳು ಬೇರ್ಪಟ್ಟು ದೂರಸರಿಯಲಾರಂಭಿಸಿದಾಗ ಅಥವಾ ಭೂಸವೆತದಿಂದ ಸಾಕ್ಷ್ಯಾಧಾರಗಳೇ ನಾಶವಾಗಿರಬಹುದಲ್ಲವೇ? ಆದರೆ ಹುಟ್ಟಿದಾಗಿನಿಂದ ಚಂದ್ರನ ಸ್ಥಿತಿ ಅಷ್ಟಾಗಿ ಬದಲಾಗಿಲ್ಲ. ಕ್ಷುದ್ರಗ್ರಹ ಹಾಗೂ ಉಲ್ಕೆಗಳ ಹೊಡೆತ ಬಿಟ್ಟರೆ ಮತ್ಯಾವ ಬದಲಾವಣೆಗಳೂ ಅಲ್ಲಿ ನಡೆದಿಲ್ಲ. ಆರ್ಮ್‌ಸ್ಟ್ರಾಂಗ್ ಹೇಳುವಂತೆ ಚಂದ್ರನಲ್ಲಿ ಜೀವದ ರಾಸಾಯನಿಕ ಕುರುಹುಗಳು ಹಾಗೂ ಪಳೆಯುಳಿಕೆಗಳಲ್ಲಿ ಹುದುಗಿರಬಹುದಾದ ಬ್ಯಾಕ್ಟೀರಿಯಗಳು ಇನ್ನೂ ಉಳಿದಿರಬಹುದು. ಯೂರೋಪಿಯನ್ ಬಾಹ್ಯಾಕಾಶ ಏಜೆನ್ಸಿಯ ನೌಕೆ ಸ್ಮಾರ್ಟ್–1 ಮುಂದಿನ ವರ್ಷ ಚಂದ್ರನತ್ತ ತನ್ನ ಪಯಣ ಬೆಳೆಸಲಿದೆ. ಚಂದ್ರನಲ್ಲಿ ಇಳಿದು ವಿವಿಧ ಭಾಗಗಳನ್ನು ಚಿತ್ರೀಕರಿಸುವುದರ ಜೊತೆಗೆ ಅಲ್ಲಿ ರಾಸಾಯನಿಕ ಪರೀಕ್ಷೆಯನ್ನು ನಡೆಸಲಿದೆ. ಈ ಸಂದರ್ಭದಲ್ಲಿ ಜೀವ ಉಗಮದ ಕುರುಹುಗಳು ಸಿಗುವ ನಿರೀಕ್ಷೆ ಇದೆ”8.

ಈ ಉಲ್ಲೇಖ ಮುಂದಿನ ಸಂಶೋಧನೆಗೆ ದಾಖಲೆಯಾದರೂ; ಈಗ ಸಿಕ್ಕಿರುವ ಆಧಾರಗಳಿಂದ ಜೀವ–ಜೀವಿ– ಜೀವನದ ಸಾಂಸ್ಕೃತಿಕ ಪರಿಸರವನ್ನು ಇಲ್ಲಿ ಅಧ್ಯಯನ ಮಾಡಲು ಸಾಧ್ಯವಾಗಿದೆ. ಮೇಲಿನ ಈ ಚರ್ಚೆಯಲ್ಲಿ ಮಾನವನ ವೈಜ್ಞಾನಿಕ ಅಧ್ಯಯನದ ಮಿತಿಯಲ್ಲಿ ಸಿಕ್ಕ ಜೀವಕೋಶಗಳ ಹುಟ್ಟು, ಬೆಳೆವಣಿಗೆಯ ಅಂಕಿ ಅಂಶಗಳಿವೆ. ಈ ಸರಳ, ಸ್ಪಷ್ಟ ಮಾಹಿತಿಯ ವೈಜ್ಞಾನಿಕ ವಿವರಣೆಯಿಂದ ಜೀವ ಸಂಸ್ಕೃತಿಯ ಪರಿಸರದ ಬಗ್ಗೆ ಒಂದು ಸ್ಪಷ್ಟ ಕಲ್ಪನೆಯನ್ನು ಮೂಡಿಸಲಾಗಿದೆ. ಇದಕ್ಕೆ ಇಲ್ಲಿ ಬಳಕೆಯಾಗಿರುವ ವೈಚಾರಿಕ, ವೈಜ್ಞಾನಿಕ ಪ್ರಬಂಧ, ಲೇಖನ ಮತ್ತು ಪತ್ರಿಕೆ ಬರಹಗಳು ಕೊಡುವ ಸ್ಪಷ್ಟ ಅಂಕಿ ಅಂಶಗಳ ಮಾಹಿತಿ; ಸೃಜನಶೀಲ ಸಾಹಿತ್ಯವೆನಿಸಿದ ಕಥೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಸಿಗುವುದಿಲ್ಲ. ಹಾಗಾಗಿ ಸೃಜನಶೀಲ ಸಾಹಿತ್ಯ ಬರವಣಿಗೆಯ ಕೊರತೆಯನ್ನು ಈ ಸೃಜನೇತರ ಬರವಣಿಗೆಗಳು ಭರಿಸಿರುವುದೇ ಇಲಿಯ ಗಮನಾರ್ಹ ಅಂಶವಾಗಿದೆ.

ಮೇಲಿನ ವಿವರಗಳಲ್ಲಿ ಜೀವಕಣಗಳು (ಪರಮಾಣುಗಳು) ಸೂರ್ಯ ಮತ್ತು ಭೂಮಿಯ ನಡುವೆ ನಡೆದ ಹಲವು ರಾಸಾಯನಿಕ ಕ್ರಿಯೆಗಳಿಂದ ಜೀವಿಗಳ ಸೃಷ್ಟಿಗೆ ಕಾರಣವಾಗಿದೆ. ಇದು ಮೊದಲು ಸಮುದ್ರಗಳಲ್ಲಿ ನಡೆದು ಅಲ್ಲಿ ಸೂಕ್ಷ್ಮರೂಪಿ (ಸೈವಲ್ಯರೂಪಿ) ಪಾಚಿಗಳು ಹುಟ್ಟಿ, ಅವುಗಳಿಂದ ಹಲವು ಸಸ್ಯ, ಪ್ರಾಣಿಗಳು ಜನ್ಮತಾಳಿವೆ. ಇವೆಲ್ಲ ಮೊದಲು ನಿರಾಕಾರವಾಗಿದ್ದಂತಹವು, ಏಕಕಣ ಜೀವಿಗಳಾಗಿ ರೂಪುಗೊಂಡು ನಂತರ ಬಹುಕಣ ಜೀವಿಗಳಾಗಿ ಮಾರ್ಪಟ್ಟಿವೆ. ಇವೇ ಪ್ರಕೃತಿಯ ಬದಲಾವಣೆಗಳಿಂದ ನೀರು ಮತ್ತು ಭೂಮಿಗಳೆರಡರಲ್ಲೂ ವಾಸಿಸುವ ಹವಾಗುಣಕ್ಕೂ ಮತ್ತು ಪ್ರತ್ಯೇಕವಾಗಿಯೂ ಬದುಕುವ ವಾತಾವರಣಕ್ಕೂ ಒಗ್ಗಿಕೊಂಡವು. ಏಕಕಣ ಜೀವಿಗಳು ಬಹುಕಣ ಜೀವಿಗಳಾಗಿ ರೂಪುಗೊಂಡಾಗ ಅವು ಕ್ರಿಯಾರೂಪಿಗಳಾದವು. ಆಗ ಅವುಗಳ ದೇಹರಚನೆಯ ಭಾಗಗಳು ಚಲನೆಗೊಳಪಟ್ಟವು. ಅಲ್ಲಿಂದ ವಿಕಾಸವಾದ ಕೈ, ಕಾಲು, ತಲೆಗಳು ಆಯಾ ಜೀವಿಗಳ ಕ್ರಿಯಾಶಕ್ತಿಗನುಗುಣವಾಗಿ ಬಹುಕಣ ಜೀವಿಗಳ ಅಂಗಗಳು ರಚನೆಯಾಗಿ ವಿಕಾಸಗೊಂಡಿವೆ. ನಂತರದಲ್ಲಿ ಕೆಲವು ಪ್ರಾಣಿಗಳಿಗೆ ಮೆದುಳು ಪ್ರಬಲ ಶಕ್ತಿಯಾಗಿ ಬೆಳೆದು ಅವುಗಳಲ್ಲೇ ಕೆಲವು ಯೋಚನಾ ಶಕ್ತಿಯನ್ನು ವೃದ್ಧಿಸಿಕೊಂಡಿವೆ. ಈ ಎಲ್ಲ ಬೆಳೆವಣಿಗೆಯ ಶಕ್ತಿಯನ್ನು ಗ್ರಹಣ ಮಾಡಿಕೊಂಡು ವಿಶಿಷ್ಟ ಜ್ಞಾನಶಕ್ತಿಯನ್ನು ಪಡೆದ ಪ್ರಾಣಿ ಕಾಲ ಕ್ರಮೇಣ ಮಾನವನಾಗಿ ಜನ್ಮ ತಾಳಿದ್ದಾನೆ. ಈ ಚರಿತ್ರೆಯನ್ನು ವಿಜ್ಞಾನ ಮತ್ತು ಮಾನವಶಾಸ್ತ್ರ ಸ್ಪಷ್ಟಪಡಿಸುತ್ತವೆ. ಮಾನವನ, ದೇಹರಚನೆ, ಯೋಚನಾಶಕ್ತಿಗಳಿಂದ ಮಾತನಾಡುವುದನ್ನು ಕಲಿತ. ತನ್ನ ವಿಶಿಷ್ಟಗುಣ ಸ್ವಭಾವಗಳಿಂದ ಸಮಸ್ತ ಜೀವಕೋಟಿಗೆ ಭಿನ್ನವಾಗಿ ಗುರುತಿಸಲ್ಪಟ್ಟ. ಈ ಬೆಳವಣಿಗೆಯನ್ನೇ ಡಾರ್ವಿನ್ ತನ್ನ ವಿಕಾಸ ವಾದದಲ್ಲಿ ಸ್ಪಷ್ಟವಾಗಿ ಹೇಳುತ್ತಾನೆ.

ಮಾನವ ತನ್ನ ಈ ಭಿನ್ನ ಗುಣದ ಬೌದ್ಧಿಕ ಜ್ಞಾನದಿಂದ ಸಕಲ ಜೀವಗಣಗಳಿಗೆಲ್ಲ ನಾನೇ ಶ್ರೇಷ್ಠ. ಉಳಿದೆಲ್ಲ ಪ್ರಕೃತಿಯ ಜೀವ ನಿರ್ಜೀವ ನಿಧಿಗಳೆಲ್ಲಾ; ಕನಿಷ್ಠವೆಂಬ ಪರಿಕಲ್ಪನೆ, ರೂಢಿಗೆ ಬಂದು ಅವುಗಳನ್ನೆಲ್ಲ ತನ್ನ ಉಪಯೋಗಕ್ಕಾಗಿ ಬಳಸುವ, ಪಳಗಿಸುವ, ನಿಯಂತ್ರಿಸುವ ಪ್ರವೃತ್ತಿಗಳನ್ನು ಬೆಳಸಿಕೊಂಡಿದ್ದಾನೆ. ಮಿತಿಮೀರಿದ ಅವನ ಈ ಪ್ರವೃತ್ತಿಗಳಿಂದ ಶಾಂತಿ ಸಮಾಧಾನ ಸಿಗದಿದ್ದಾಗ ಅವುಗಳಿಂದ ಸಿಗುವ ಜೀವನ ತೃಪ್ತಿಗಾಗಿ ಸರ್ವಶ್ರೇಷ್ಠನಾದವನು ದೇವರೆಂದು ಕಲ್ಪಿಸಿಕೊಂಡು, ಅಧ್ಯಾತ್ಮ ಭಾವ ತುಂಬಿಕೊಂಡ. ಈ ಭಾವಪೂರ್ಣ ದೈವೀಶಕ್ತಿಯನ್ನು ಪ್ರಕೃತಿಯಲ್ಲೇ ಕಂಡು ಪೂಜಿಸತೊಡಗಿದ. ಇಂತಹ ಮೂಲ ಪ್ರವೃತ್ತಿಗಳೇ ಮಾನವಸಂಸ್ಕೃತಿಗೆ ನಾಂದಿಯಾಗಿವೆ. ಇವುಗಳ ಬಗ್ಗೆ ಮುಂದೆ ಪರಿಶೀಲಿಸಲಾಗಿದೆ. ಈ ಎಲ್ಲ ಮಾಹಿತಿಗಳಿಂದ ಜೀವಿಗಳ ಹುಟ್ಟು, ಬೆಳವಣಿಗೆ, ವಿಕಾಸ ಕ್ರಮಗಳನ್ನು ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗಿದೆ. ಈ ಜೀವಿಗಳ ಜೀವನ ಸಂಸ್ಕೃತಿ ಅಧ್ಯಯನದ ಉಪಯೋಗಕ್ಕಾಗಿ ಸಸ್ಯ, ಕೀಟ, ಹಕ್ಕಿ–ಪಕ್ಷಿ, ಪ್ರಾಣಿ, ಮನುಷ್ಯ ಈ ಜೀವಿಗಳ ಪರಿಸರವನ್ನು ಕ್ರಮವಾಗಿ ಪರಿಶೀಲಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ: ಸಸ್ಯಗಳ ಸಂಸ್ಕೃತಿ

1. ಸಸ್ಯಗಳು ವಿಕಾಸವಾದ ಪ್ರಾಕೃತಿಕ ಸ್ವರೂಪ:

ಜೀವ ಪರಿಸರದಲ್ಲಿ ಸಸ್ಯಗಳದ್ದೇ ಅಗ್ರಸ್ಥಾನ. ಯಾಕೆಂದರೆ ಸಸ್ಯ ಪ್ರಭೇದಗಳ ಸಂಖ್ಯೆ ಮೂರುವರೆ ಸಹಸ್ರ ಸಂಕುಲಗಳು ಲೆಕ್ಕಕ್ಕೆ ಸಿಕ್ಕಿದ್ದರೂ, ಇವುಗಳಿಗಿಂತ ಹೆಚ್ಚು ಸಸ್ಯ ಪ್ರಭೇದಗಳು ಅಜ್ಞಾತವಾಗಿಯೇ ಉಳಿದಿವೆಯೆಂದು ಸಸ್ಯ ವಿಜ್ಞಾನಿಗಳು ಭಾವಿಸಿದ್ದಾರೆ. ಆದ್ದರಿಂದ ಭೂಮಿಯ ಎಲ್ಲ ಸಸ್ಯಗಳ ಸಂಖ್ಯೆಯಂತೂ, ಸಕಲ ಪ್ರಾಣಿಗಳ ಒಟ್ಟು ಸಂಖ್ಯೆಗಿಂತ ಹೆಚ್ಚಾಗಿರುವುದಂತೂ ನಿಸ್ಸಂಶಯವಾಗಿದೆ. ಸಸ್ಯ ಪರಿಸರ ಶೈವಲ, ಶಿಲೀಂಧ್ರದಿಂದ ಹಿಡಿದು ಬೃಹತ್ ಮರಗಳವರೆಗೆ ತನ್ನ ವಿಸ್ತಾರವನ್ನು ಹೊಂದಿದೆ. ಇದರ ವೈವಿಧ್ಯ ವ್ಯಾಪಕತೆಯ ಅಧ್ಯಯನಕ್ಕೆ ಇಳಿದಾಗ ಭೂಮಿಯಲ್ಲಿ ಸಸ್ಯಗಳು ಹುಟ್ಟಿ ಬಂದದ್ದು ಯಾವಾಗ? ಇಷ್ಟೊಂದು ವಿಸ್ತಾರ ವಿಕಸನದ ಹಂತ ತಲುಪುವಲ್ಲಿ ಅವು ದಾಟಿ ಬಂದ ಪ್ರಧಾನ ಘಟ್ಟಗಳು ಯಾವುವು? ಮುಂತಾದ ಪ್ರಶ್ನೆಗಳು ಏಳುವುದು ಸಹಜ. ಆದ್ದರಿಂದಲೇ ಭೂಮಿಯಲ್ಲಿ ಸಸ್ಯಗಳ ಈವರೆಗಿನ ವಿಕಾಸದ ಹಾದಿಯನ್ನು ಪಳಿಯುಳಿಕೆಗಳ ಸಾಕ್ಷ್ಯಾಧಾರಗಳಿಂದ ವಿದ್ವಾಂಸರು ಏಳು ಪ್ರಮುಖ ಹಂತಗಳಿಂದ ಗುರುತಿಸಿದ್ದಾರೆ.

1. "ಸಸ್ಯಗಳು ಮೂಲತಃ ಉದಯಿಸಿದ್ದು ಈಗ್ಗೆ ಎರಡು ಸಾವಿರದ ಎಂಟು ನೂರು ದಶಲಕ್ಷ ವರ್ಷಗಳ ಹಿಂದೆ, ನೆಲೆಸಿಕ್ಕಲ್ಲೆಲ್ಲ ನೆಲೆಸಿ ಹರಡುತ್ತಿದ್ದ ಶೈವಲ ರೂಪಿ ಸಸ್ಯಗಳ ಪಳಯುಳಿಕೆಗಳು, ಇನ್ನೂರೆಂಬತ್ತು ಕೋಟಿ ವರ್ಷ ಹಿಂದಿನ ಶಿಲಾಸ್ತರಗಳಲ್ಲಿ ದೊರಕಿವೆ. ಅದೇ ರೂಪದ ಶೈವಲಗಳು (ಪಾಚಿ ಸಸ್ಯಗಳು) ಪಶ್ಚಿಮ ಆಸ್ಟ್ರೇಲಿಯಾದ ತೀರ ಪ್ರದೇಶಗಳಲ್ಲಿ ಈಗಲೂ ಬೆಳೆಯುತ್ತಿವೆ.
2. ಸೂರ್ಯನ ಬಿಸಿಲಿನಿಂದ ಆಹಾರ ತಯಾರಿಸಬಲ್ಲ ಸಾಮರ್ಥ್ಯ ಹೊಂದಿದ್ದ, ಎಂದರೆ 'ದ್ಯುತಿ ಸಂಶ್ಲೇಷಣಾ ಶಕ್ತಿ' ಪಡೆದಿದ್ದ, ಅತಿ ಸರಳ ಸ್ವರೂಪದ ಮೂಲ ಸಸ್ಯಗಳು ಉದ್ಭವಿಸಿದ್ದು ಈಗ್ಗೆ ಒಂದು ಸಾವಿರ ದಶಲಕ್ಷ ವರ್ಷ ಹಿಂದೆ. ಅಲ್ಲಿಂದಾಚಿನ ಎಲ್ಲ ಸಂಕೀರ್ಣ ಸಸ್ಯಗಳಿಂದಲೆ ಇದುವರೆಗಿನ ಸಸ್ಯ ಸಂಕುಲ ವಿಕಾಸಗೊಂಡಿರುವುದು.
3. ಈಗ್ಗೆ ನಾಲ್ಕು ನೂರು ದಶಲಕ್ಷ ವರ್ಷಗಳ ಹಿಂದಿನವರೆಗೂ ಇದ್ದದ್ದು ಅಂತಹ ಶೈವಲಗಳ ಸಸ್ಯಾಚ್ಛಾದನೆಯೇ. ಇಂದು 'ನೆಲ' ವಾಗಿರುವ ಬಹುಪಾಲು ಪ್ರದೇಶಗಳು ಆಗಿನ್ನೂ ಕಡಲಲ್ಲೇ ಮುಳುಗಿದ್ದು ನೆಲಸಸ್ಯ, ಯಾವುದೂ ಆಗಿನ್ನೂ ಬಂದಿರಲಿಲ್ಲ. 40 ಕೋಟಿ ವರ್ಷ ಹಿಂದಿನ "ಸೈಲೂರಿಯನ್ ಯುಗದಲ್ಲಿ" ಕಡಲು ಹಿಂದೆ ಸರಿದು ತೆರೆದು ಕೊಂಡ ನೆಲ ಪ್ರದೇಶಗಳು ಸಸ್ಯಗಳ ಹೊಸ ವಿಕಸನಕ್ಕೆ ದಾರಿ ತೋರಿದವು. ಮಣ್ಣಿನಿಂದ ಕೂಡಿದ ನೆಲ, ತೇವಾಂಶಭರಿತ ಹವೆ, ಹಿತಕರ ವಾತಾವರಣದಿಂದಾಗಿ ಸಸ್ಯಗಳು ಕಡಲಿಂದ ಹೊರಬಂದು ನೆಲದಲ್ಲಿ ನೆಲೆಗೊಳ್ಳುವ ಯತ್ನ ನಡೆಸಿದವು.
4. ಈಗ್ಗೆ 375 ರಿಂದ 345 ದಶಲಕ್ಷ ವರ್ಷಗಳ ಹಿಂದಿನ ಅವಧಿಯ "ಡಿವೋನಿಯನ್ ಯುಗ" ಸಸ್ಯ ವಿಕಾಸದ ಒಂದು ಕ್ರಾಂತಿಕಾರಿ ಕಾಲ. ಆ ಅವಧಿಯಲ್ಲಿ ಕಡಲ ಕ್ಷಾರ ಜಲದಲ್ಲೂ ಒಳನಾಡಿನ ಸಿಹಿನೀರಿನ ತಾಣಗಳಲ್ಲೂ ಶೈವಲ ಪ್ರಭೇದಗಳು ವಿಫುಲಗೊಂಡದ್ದೇ ಅಲ್ಲದೆ ಹೇರಳ ಬಗೆಯ ನೆಲ ಸಸ್ಯಗಳೂ, ಜರೀಗಿಡ ಹಾರ್ಸ್‌ಟೇಲ್, ಹಾವಸೆ ಇತ್ಯಾದಿಗಳು ಅಸ್ತಿತ್ವಕ್ಕೆ ಬಂದವು.
5. ಡಿವೋನಿಯನ್ ಯುಗದ ಅನಂತರದ "ಕಾರ್ಬಾನಿಫರಸ್ ಯುಗ" ದಲ್ಲಿ 'ಜೌಗು ಪ್ರದೇಶ'ಗಳೇ ವಿಪರೀತ ಇದ್ದವು. ಅಂಥನೆಲೆಗಳ ತುಂಬ "ಟೆರಿಡೋ ಫೈಟ್"ಗಳು ಎಂದರೆ ದೃಢವಾದ ಕಾಂಡ

ಜರೀಗಿಡದಂಥ ಎಲೆಗಳು ಮತ್ತು ದೊಡ್ಡ ಗಾತ್ರದ ಬೀಜಗಳಿಂದ ಕೂಡಿದ್ದ ಸಸ್ಯಗಳು ವಿಸ್ತಾರ ನಿಬಿಡ ಅರಣ್ಯಗಳಂತೆ ಬೆಳೆದವು.

6. ಆದರೆ "ಕಾರ್ಬಾನಿಫರಸ್ ಯುಗ" ದ ಅಂತ್ಯದಲ್ಲಿ ಭೂಮಿಯಲ್ಲಿ ಮೂಡಿದ ಪ್ರಳಯಕಾರಿ ತಳಮಳಗಳಿಂದ ಧರೆಯನ್ನು 'ಹಸಿರು ಸ್ವರ್ಗ' ದಂತಾಗಿಸಿದ್ದ ಟೆರಿಡೋ ಫೈಟ್‌ಗಳೆಲ್ಲ ಬಹುಪಾಲು ನಿರ್ನಾಮವಾದವು. ಅಂದಿನ ಆ ಸಸ್ಯರಾಶಿಯೇ ಇಂದು ನಮಗೆ ಸಿಗುತ್ತಿರುವ ಕಲ್ಲಿದ್ದಲಿನ ಮೂಲ. ಅಲ್ಲಿಂದ ಮುಂದೆ ಟೆರಿಡೋ ಫೈಟ್‌ಗಳಿಗಿಂತ ಉತ್ತಮ ಸಂತಾನ ಕ್ರಮದ ಗಟ್ಟಿಕಾಂಡದ ಎತ್ತರದ ನಿಲುವಿನ "ಜಿಮ್ನೋಸ್ಪರ್ಮ್" ಗಳು ಭೂಮಿಯನ್ನು ಆವರಿಸಿದವು. ಈಗ್ಗೆ ನೂರು ದಶಲಕ್ಷ ವರ್ಷಕ್ಕಿಂತ ಹಿಂದಿನ ನೂರೈವತ್ತು ದಶಲಕ್ಷ ವರ್ಷ ಅವಧಿಯ 'ಮಧ್ಯ ಜೀವಿಕಲ್ಪ'ದಲ್ಲಿ ಜಿಮ್ನೋಸ್ಪರ್ಮ್‌ಗಳು ಅಸೀಮ ವೈವಿಧ್ಯತೆಗಳಿಂದ ವಿಕಾಸವಾದವು.
7. ಮಧ್ಯ ಜೀವಕಲ್ಪದ ಕೊನೆಯ 'ಕ್ರಿಟೇಶಿಯಸ್ ಯುಗ' ದಲ್ಲಿ ಸಸ್ಯ ಲೋಕದಲ್ಲಿ ಹಿಂದೆಂದೂ ಇಲ್ಲದಷ್ಟು ಸಂಕೀರ್ಣ ಮಾರ್ಪಾಡುಗಳು ಮೂಡಿದವು. ಇಂದಿಗೆ ಒಂದು ನೂರು ದಶಲಕ್ಷ ವರ್ಷ ಹಿಂದಿನ ಆ ಯುಗದಲ್ಲಿ ಸಸ್ಯ ಜಗದ ಸರ್ವೋತ್ತಮ ಸೃಷ್ಟಿಗಳಾದ ಹೂ ಬಿಡುವ ಗಿಡ ಮರಗಳು ಸೃಷ್ಟಿಯಾದವು"9.

ಈ ಏಳು ಹಂತಗಳಿಂದ ಸಸ್ಯಸಂಕುಲಗಳು ವಿಕಾಸವಾದ ಪ್ರಕ್ರಿಯೆಗಳನ್ನು ವೈಜ್ಞಾನಿಕವಾಗಿ ಗುರುತಿಸಲಾಗಿದೆ. ಈ ವಿಕಾಸಕ್ಕೆ ನೂರಾರು ದಶಲಕ್ಷ ವರ್ಷಗಳ ಚರಿತ್ರೆಯಿರುವಂತೆ, ಲಕ್ಷಾಂತರ ಸಸ್ಯ ಪ್ರಭೇದಗಳು ಬೆಳವಣಿಗೆಯಾಗಿವೆ. ಭೂಮಿಯ ಮೇಲ್ಭಾಗದಲ್ಲಿ ಸೃಷ್ಟಿಯಾದ ಸಸ್ಯಸಂಪತ್ತು 'ಕಾರ್ಬಾನಿ ಪರಸ್ ಯುಗ'ದ ಭೂಮಿಯ ಪ್ರಳಯಕಾರಿ ವಿಕೋಪಗಳಿಂದ ಲಕ್ಷಾಂತರ ವರ್ಷಗಳ ಅಂತರದಿಂದ ನಿರ್ನಾಮವಾದವು. ಇವನ್ನೆಲ್ಲ ಹುದುಗಿಸಿಕೊಂಡ ಭೂಮಿ ತನ್ನ ಹೊಟ್ಟೆಯೊಳಗೆ ಇವನ್ನೆಲ್ಲ ಅರಗಿಸಿ ಕಲ್ಲಿದ್ದಲು, ಇಂಧನ, ತಾಮ್ರ, ಕಬ್ಬಿಣ, ಚಿನ್ನ, ಬೆಳ್ಳಿ ಮುಂತಾದ ಭೂಗರ್ಭ ಸಂಪತ್ತುಗಳ ಸೃಷ್ಟಿಗೆ ರೂಪ ಕೊಟ್ಟಿದೆ.

ಭೂಮಿಯ ಕೋಟ್ಯಾಂತರ ವರ್ಷಗಳಲ್ಲಿ ಜೀವ ಪರಿಸರದ ವಿಕಾಸಕ್ಕೆ ಮೂಲ ಸಮುದ್ರವೆಂಬುದು ಖಚಿತವಾಗಿರುವಂತೆ, ಅಲ್ಲಿ ಸೃಷ್ಟಿಯಾದ ಮೊದಲ ಜೀವಿ ಯಾವುದೆಂಬುದಕ್ಕೆ ಖಚಿತ ಉತ್ತರವಿಲ್ಲದಿದ್ದರೂ; ವಿಜ್ಞಾನ ಪ್ರಕೃತಿಯ ಈ ರಹಸ್ಯವನ್ನು ಶೋಧಿಸಿದೆ. ಅದರ ಪ್ರಕಾರ "ಸಮುದ್ರದಲ್ಲಿ ಮೊತ್ತ ಮೊದಲು ಕಾಣಿಸಿಕೊಂಡ ಸಸ್ಯವೆಂದರೆ ಮೃದುವಾದ ಹೊಳೆಯುವ 'ಅಲ್ಗೇ.' ಅದಕ್ಕೆ ಹೂವು ಕಾಯಿ ಇಲ್ಲದೆ ಹಸಿರು, ಕೆಂಪು, ಗೋಧಿಬಣ್ಣ, ನೀಲಿಬಣ್ಣದಿಂದ ಕೂಡಿದೆ. ಇದರಲ್ಲೆ ಸಾವಿರಾರು ಜಾತಿಯ ಅಲ್ಗೇಗಳು ಸಮುದ್ರದಲ್ಲಿವೆ"10 ಎಂದು ಸ್ಪಷ್ಟವಾಗಿ ಗುರುತಿಸಿದೆ. ಆದ್ದರಿಂದ ಈ ಆಲ್ಗೇಯಂತಹ 'ಶೈವಲ ರೂಪೀ' (ಪಾಚಿ) ಜಾತಿಯ ಸಸ್ಯಗಳಿಂದ ಜಿಮ್ನೋಸ್ಪರ್ಮ್ ಪ್ರಭೇದ ಸಸ್ಯಗಳ ವಿಕಸನದವರೆಗೆ ಬೆಳೆದು ಬಂದಿವೆ. ಇವುಗಳಿಂದ 'ಏಂಜಿಯೋಸ್ಪರ್ಮ್'ಗಳೆಂದು ಗುರುತಿಸಲಾಗುವ ಸಸ್ಯಗಳು ಕೀಟಗಳ ನೆರವಿನಿಂದ ಪರಕೀಯ ಪರಾಗ ಸ್ಪರ್ಶದ ಅತ್ಯುತ್ತಮ ಸಂತಾನ ಕ್ರಮದಿಂದ ವೈವಿಧ್ಯ ಸಸ್ಯ ಸಾಮ್ರಾಜ್ಯವಾಗಿದೆ. ಈಗಲೂ ಜಗತ್ತಿನ ಸಸ್ಯ ಪ್ರಭೇದಗಳೆಲ್ಲ ಹುಲ್ಲುಗಿಡಗಳಿಂದ ಮಹಾವೃಕ್ಷಗಳವರೆಗಿನ ಬಹುಪಾಲು ಎಲ್ಲ ಸಸ್ಯಗಳೂ ಹೂ ಬಿಡುತ್ತವೆ. ಈ ಕ್ರಿಯೆಯಿಂದ ಹೂವು, ಕಾಯಿ, ಹಣ್ಣು, ಬೀಜಗಳಾಗಿ ಸಸ್ಯ ಸಂತಾನದ ಬೆಳವಣಿಗೆ ಸ್ವಾಭಾವಿಕವಾಗಿ ಭೂಮಿಯ ಮೇಲೆ ಸಾಗಿಬಂದಿವೆ.

ವಿಸ್ಮಯಗೊಳಿಸುವ ನಾನಾ ಜಾತಿಯ ಮರಗಳು ಸಸ್ಯರಾಶಿಯ ಪ್ರತಿನಿಧಿಗಳಾಗಿ ನಿಸರ್ಗದೊಳಗೆ ಅಡಗಿವೆ. "ಸೂಕ್ಷ್ಮವಾಗಿ ನೋಡಿದರೆ ಪ್ರತಿಯೊಂದು ಮರವೂ ಒಂದು 'ವೃಕ್ಷಯಂತ್ರ' ಇಂತಹ ಒಂದು ವೃಕ್ಷಯಂತ್ರ ಸೂರ್ಯ ಕಿರಣಗಳಿಂದ ಶಕ್ತಿ ಪಡೆದು, ವಾತಾವರಣದಿಂದ ಇಂಗಾಲಾಮ್ಲ 'ಕಾರ್ಬನ್ ಡೈ ಆಕ್ಸೈಡ್' ಮತ್ತು ಭೂಮಿಯಿಂದ ನೀರನ್ನು ಹೀರಿ ತನ್ನ ಎಲೆಗಳಲ್ಲಿನ ಹಸುರಿತೆಯನ್ನು 'ಕ್ಲೋರೋಫಿಲ್'ಬಳಸಿ ಒಂದು ಕಾಳಿನ ಗಾತ್ರದಿಂದ ಇನ್ನೂರು ಅಡಿ ಎತ್ತರದ ದೈತ್ಯಾಕಾರಕ್ಕೆ ಬೆಳೆದು ನಿಲ್ಲಬಹುದು. ಕೇವಲ ಒಂದು ರೈ ಹುಲ್ಲಿನ ಬೇರನ್ನು ಹರವಿ ನೋಡಿದರೆ ಅದು 378 ಮೈಲಿ ಉದ್ದಕ್ಕೆ ಚಾಚಬಹುದಾದರೆ, ಒಂದು ಹೆಮ್ಮರ ಬೇರಿನ ಜಾಲ ಎಷ್ಟು ವ್ಯಾಪಕವಾಗಿ ಹಬ್ಬಬಹುದೆಂಬ ಕಲ್ಪನೆಗಿಂತ, ಈ ವೃಕ್ಷಯಂತ್ರದ ಸಂಕೀರ್ಣತೆ ಎಷ್ಟೆಂದು ಗ್ರಹಿಸ ಬಹುದಾಗಿದೆ.

ಈ ಬೇರಿನ ಜಾಲ ನೀರು ಮತ್ತು ಕೆಲವು ಲವಣಾಂಶಗಳನ್ನು ಹೀರುತ್ತದೆ. ವೈಜ್ಞಾನಿಕ ಪ್ರಯೋಗಗಳಿಂದ ತಿಳಿದು ಬರುವಂತೆ ಒಂದು ಬರ್ಚ್ ಮರ ಬೇಸಿಗೆಯಲ್ಲಿ ಒಂದು ದಿನದಲ್ಲಿ 3500 ಲೀಟರು ನೀರು ಹೀರುತ್ತದಂತೆ! ಹಾಗಾದರೆ ನಮ್ಮ ಕಾಡುಗಳಲ್ಲಿನ ಹೆಮ್ಮರಗಳು ಎಷ್ಟು ನೀರನ್ನು ಹೀರುತ್ತಿರಬಹುದು. ಹೀಗೆ ಹೀರಿದ ನೀರು ಲಕ್ಷಾಂತರ ಮೈಲಿ ಉದ್ದದ ನಾಳಗಳ ಮೂಲಕ ಹಾದು ನೂರಾರು ಅಡಿ ಎತ್ತರಕ್ಕೆ ಏರಿ ಎಲೆಗಳನ್ನು ಸೇರಬೇಕೆಂದರೆ ಈ ಯಂತ್ರದ ಇಂಜಿನಿಯರಿಂಗ್ ಕೌಶಲವನ್ನು ಮೆಚ್ಚಲೇಬೇಕು. ಆಹಾರ

ತಯಾರಿಸುವ ಕಿರಣ ಕ್ರಿಯೆ ನಡೆಯುವ ಎಲೆಗಳೇ ಈ ಯಂತ್ರದ ಎಂಜಿನ್ನು. ಈ ಎಂಜಿನ್ನಿನ ಕೆಲಸದಿಂದಲೇ ಮರದ ಅಂಗಗಳು ಯಾವತ್ತೂ ಸಂಚಲನೆ ಬೆಳವಣಿಗೆಗಳಿಗೆ ಶಕ್ತಿದೊರೆಯಬೇಕು"11.

ಪ್ರಕೃತಿಯ ಈ ನಿಗೂಢ ಕ್ರಿಯೆಯಲ್ಲೇ ಗಿಡ ಮರಗಳು ಬೆಳೆದು ಕಾಲಕಾಲಕ್ಕೆ ಚಿಗುರು, ಹೂವು, ಕಾಯಿ, ಹಣ್ಣುಗಳಾಗಿ ಅರಳಿ ಮತ್ತೆ ಎಲೆ ಹಣ್ಣುಗಳಾಗಿ ಉದುರುವುದು 'ನಿಸರ್ಗ ಸಂಸ್ಕೃತಿ ಚಕ್ರ' ದ ಪ್ರಕೃತಿಶೀಲ ಗುಣವಾಗಿದೆ. ಇದನ್ನೆ 'ಸಸ್ಯ ಸಂಸ್ಕೃತಿ' ಎನ್ನುವುದು. ಇದರ ರಹಸ್ಯ ನಿಯಮದ ವೈವಿಧ್ಯ ಕ್ರಿಯಾಗುಣಗಳ ವಿಸ್ಮಯಕ್ಕೆ ಮನುಷ್ಯ ಬೆರಗಾಗಿದ್ದಾನೆ. ಅದರಲ್ಲೂ ಗಂಡು ತನ್ನ ಒಡನಾಟದ ಹೆಣ್ಣನ್ನು ಕಂಡು ಅವಳ ಗುಣ, ಸ್ವಭಾವ, ರೂಪ, ಲಾವಣ್ಯ, ನಡೆ–ನುಡಿಗಳ ಆಕರ್ಷಣೆಗೆ ಮನಸೋಲುವುದು ಮತ್ತು ಹೆಣ್ಣು ಗಂಡಿನ ಗುಣ, ಸ್ವಭಾವ, ರೂಪಕ್ಕೆ ಮಾರುಹೋಗುವುದು ಇವೆಲ್ಲ ಪ್ರಕೃತಿ ನಿಯಮಗಳೇ. ಆದ್ದರಿಂದಲೇ ಮಾನವ ಹೆಣ್ಣು ಮತ್ತು ಪ್ರಕೃತಿಯ ಸಾಮ್ಯತೆಯನ್ನರಿತು ಹೆಣ್ಣನ್ನು ಪ್ರಕೃತಿಗೂ, ಪ್ರಕೃತಿಯನ್ನು ಹೆಣ್ಣಿಗೂ ಹೋಲಿಸುತ್ತಾನೆ. ಈ ಐಕ್ಯ ಪ್ರಜ್ಞೆಯುಳ್ಳ ಜನರ ಭಾವನೆಯನ್ನು ಪ್ರಕೃತಿ ಕವಿ ಕುವೆಂಪು ನಾನಾ ಜ್ಞಾನಿಗಳ ಭಿನ್ನದೃಷ್ಟಿಗಳನ್ನು ಐಕ್ಯಗೊಳಿಸಿ ನಿಸರ್ಗದ ವೈವಿಧ್ಯತೆಯನ್ನು ಏಕತೆಯ ಬ್ರಹ್ಮಮಯಿಯನ್ನಾಗಿ ಕಾಣುವ ಪರಿ.

"ಪ್ರಕೃತಿ, ಕವಿ ಪ್ರಜ್ಞೆಯನ್ನು ಮೊದಲು ಆಕರ್ಷಿಸುವುದು ತನ್ನ ವೈಭವ ಯುಕ್ತವೂ ವೈವಿಧ್ಯ ಪೂರ್ಣವೂ ಆಗಿರುವ ಸೌಂದರ್ಯದಿಂದ, ಆಕೆಯ ನಾನಾ ಭಂಗಿಯ ವರ್ಣಮಯ ನರ್ತನ ಅವನ ಚೇತನವನ್ನು ಸೆಳೆಯುತ್ತದೆ. ಕ್ರಮೇಣ ಬಹಿರ್ಮುಖವಾದ ಬಹಿರಂಗ ಸೌಂದರ್ಯದ ಮೋಹಾಕರ್ಷಣೆ ಅಂತರ್ಮುಖವಾದ ಅಂತರಂಗ ಸೌಂದರ್ಯದ ಕಡೆಗೂ ತಿರುಗಿ ಉಪಾಸನಾರೂಪವನ್ನು ತಾಳುತ್ತದೆ. ಪ್ರಕೃತಿಯ ಅದ್ಭುತ ಶಕ್ತಿ, ಅದ್ಭುತ ರಚನಾ ಕೌಶಲ, ಅನಿರ್ವಚನೀಯವಾದ ಮಹೋದ್ದೇಶ, ಅಚಿಂತ್ಯವಾದ ಪರಮ ಪುರುಷಾರ್ಥ ಇತ್ಯಾದಿಗಳ ಮನದಿಂದ ಧ್ಯಾನ ಗೋಚರವಾಗುವ ಆಕೆಯ ರೂಪ, ಆಕೆಯ ಸ್ವರೂಪ ಸತ್ಯವನ್ನೇ ಪರಿವರ್ತನಗೊಳಿಸುತ್ತದೆ. ಹೊರ ಹೊರಗೆ ಮೃಣ್ಮಯಿಯಾಗಿ ತೋರುವಳು. ವೈಜ್ಞಾನಿಕವಾದ ನೋಟಕ್ಕೆ ನಿಯಮಮಯಿಯಾಗಿ ತೋರುವಳು. ವೇದಾಂತಿಯ ದೃಷ್ಟಿಗೆ ಚಿನ್ಮಯೀ ಶಕ್ತಿಯಾಗಿ ತೋರುವಳು. ಕವಿ ಪ್ರಜ್ಞೆಗೆ ಆ ಸತ್ಯ ಮುಖಗಳಲ್ಲಿ ಯಾವುದನ್ನೂ ಅಲ್ಲಗಳೆಯದ ಮತ್ತು ಆ ಎಲ್ಲ ಸತ್ಯ ಮುಖಗಳನ್ನು ಒಳಗೊಳ್ಳುವ ಬ್ರಹ್ಮಮಯಿಯಾಗಿ ಆನಂದಮಯಿಯಾಗಿ ಗೋಚರಿಸುತ್ತಾಳೆ"12.

ಪ್ರಕೃತಿಯ ಸೌಂದರ್ಯಾನುಭವದಲ್ಲಿ ಬೆಳೆವ ಕವಿಯ ಮನಸ್ಸಿನ ಹಂತಗಳನ್ನು ವರ್ಣಿಸುವ ಕುವೆಂಪು ಸೌಂದರ್ಯ ದರ್ಶನವನ್ನು, ಸಮಕಾಲೀನ ಸಾಹಿತ್ಯದಲ್ಲಿ ಪ್ರಕೃತಿ ಚಿತ್ರಿತವಾಗಿರುವ ಹಲವು ಪರಿಗಳನ್ನು ಸೂಚಿಸುತ್ತಾರೆ. ನವೋದಯ ಸಾಹಿತ್ಯದಲ್ಲಿ ಬೇರೆಲ್ಲ ಪ್ರಕಾರಗಳಿಗಿಂತ ಪ್ರಕೃತಿ ಮತ್ತು ಅದರ ಸೌಂದರ್ಯವನ್ನೆ ಕುರಿತ ಗೀತೆಗಳು ವಿಶೇಷವಾಗಿ ರಚನೆಯಾಗಿವೆ. ಆದರೆ ಪ್ರಸ್ತುತ ಚರ್ಚೆಗೆ ಇವತ್ತಿನ ಪ್ರಕೃತಿ ಪರಿಸರದ ದುಸ್ಥಿತಿಯನ್ನೊಳಗೊಂಡ ಹಿನ್ನೆಲೆಯಲ್ಲಿ ಪರಿಸರ ತಿಳುವಳಿಕೆ, ಕಾಳಜಿಗಳನ್ನು ಸಮಾಜದ ಜನರಲ್ಲಿ ಉದ್ದೀಪನಗೊಳಿಸುವಂತಹ ಸಾಹಿತ್ಯ ಕೃತಿಗಳು ಮುಖ್ಯವಾಗಿವೆ. ಆದರೆ ನಿಸರ್ಗ ಪರಿಸರದ ಬಗ್ಗೆ ಅಧ್ಯಯನ ಮಾಡಿ, ಆ ಸಾಹಿತ್ಯ ಸಂಶೋಧನೆ ಮಾಡುವಾಗ; ಸಸ್ಯ, ಪ್ರಾಣಿ, ಪಕ್ಷಿ, ಕೀಟ, ಖನಿಜ ಮುಂತಾದ ಪ್ರಾಕೃತಿಕ ಬಿಡಿಭಾಗಗಳ ಬಗ್ಗೆ ಪ್ರತ್ಯೇಕ ಸಾಹಿತ್ಯ ಶೋಧ ನೆಡೆದಿಲ್ಲ. ಯಾಕೆಂದರೆ ವಿಜ್ಞಾನವನ್ನು ಹೊರತು ಪಡಿಸಿದರೆ; ಯಾವುದೇ ಸಾಹಿತ್ಯ, ಕಲೆ, ಸಂಸ್ಕೃತಿಗಳು ಮಾನವ ಮತ್ತು ಸಮಾಜ ಸಮುದಾಯಗಳನ್ನೊಳಗೊಳ್ಳದೆ ರಚನೆಯಾಗಿಲ್ಲ. ವಿಜ್ಞಾನ ಮಾತ್ರ ಮಾನವ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಾಕೃತಿಕ ಪರಿಸರದ ಬಿಡಿಭಾಗಗಳನ್ನು ಬಳಸಿಕೊಂಡು ಪ್ರಾಯೋಗಿಕವಾಗಿ ಅಧ್ಯಯನ ಮಾಡುತ್ತದೆ. ವಿಜ್ಞಾನದ ಈ ಶಿಸ್ತು, ಕ್ರಮಬದ್ಧತೆ ಸಾಹಿತ್ಯಾಧ್ಯಯನಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಸಾಹಿತ್ಯದಲ್ಲಿ ಬೆರೆತು ಹೋಗಿರುವ; ಸಾಮಾಜಿಕ ಪರಿಸರದೊಳಗೆ, ಪ್ರಾಕೃತಿಕ ಪರಿಸರದ ಸಸ್ಯ, ಪ್ರಾಣಿ, ಪಕ್ಷಿ, ಕೀಟ ಮುಂತಾದ ಜೀವಿಗಳನ್ನು ಪ್ರಧಾನವಾಗಿರಿಸಿಕೊಂಡು, ಸಿಕ್ಕ ಸಾಹಿತ್ಯದ ಬಿಡಿ ಭಾಗಗಳನ್ನು ಆಯ್ದು ಇಲ್ಲಿ ಪರಿಶೋಧಿಸಲಾಗಿದೆ. ಜೀವ ಪರಿಸರದಲ್ಲಿ ಸಸ್ಯ, ಕೀಟ, ಪಕ್ಷಿ, ಪ್ರಾಣಿ, ಮುಂತಾದ ಜೀವಿ ಸಂಕುಲಗಳು ಒಂದಕ್ಕೊಂದು ಪರಸ್ಪರ ಅವಲಂಬಿಗಳಾಗಿ ಸೃಷ್ಟಿಯಾಗಿರುವುದು ಗಮನಾರ್ಹ ಸಂಗತಿ. ಈ ಎಲ್ಲ ಚರ ಪ್ರಾಣಿ ಸಂಕುಲಗಳ ಉಸಿರಾಟ, ಆಹಾರ, ಮನೋಲ್ಲಾಸ ಮುಂತಾದ ಉಪಯುಕ್ತ ಜೀವನ ಪದ್ಧತಿಗೆ ಸಸ್ಯ, ಹೂವು, ಹಣ್ಣುಗಳು ಜೈವಿಕ ಪರಿಸರದಲ್ಲಿ ತುಂಬ ವಿಶಿಷ್ಟ ಸ್ಥಾನ ಪಡೆದಿವೆ. ಯಾಕೆಂದರೆ ಈ ಪ್ರಾಣಿಗಳ ಸ್ಪರ್ಶ, ರುಚಿ, ಗಂಧ, ದೃಷ್ಟಿ, ಶ್ರವಣಗಳಾದ ಪಂಚೇಂದ್ರಿಯಗಳು ಸಸ್ಯ ಪರಿಸರದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವುದೆ ಜೀವನ ದರ್ಶನ. ಈ ಅನುಭವ ಪ್ರಾಣಿ, ಪಕ್ಷಿ, ಕೀಟ ಮುಂತಾದವುಗಳ ಹಾವ, ಭಾವ, ಧ್ವನಿಗಳ ಮೂಲಕ ಅಭಿವ್ಯಕ್ತಿಯಾಗುವುದೆ ದರ್ಶನ. ಮನುಷ್ಯನಲ್ಲಿ ಅವನ ನಡೆ, ನುಡಿ, ಮಾತು, ಭಾವಗಳು ಸಮಾಜದ ಜನರೊಂದಿಗಲ್ಲದೆ, ಬರವಣಿಗೆಗಳ ಮೂಲಕವೂ ಅಭಿವ್ಯಕ್ತಿಗೊಳ್ಳುತ್ತವೆ. ಇವನ ಬರವಣಿಗೆಯ ರೂಪವೆ ಇವತ್ತಿನ ಸಾಹಿತ್ಯ ಕೃತಿಗಳು. ಇವುಗಳಲ್ಲಿ ನಾನಾ ಬಗೆಯ ಸಸ್ಯ, ಹೂವುಗಳು

ಸ್ಥಾನ ಪಡೆದಿರುವುದು ಗಮನಾರ್ಹವಾಗಿದೆ. ಹಾಗೆ ನೋಡಿದರೆ ವಿಜ್ಞಾನ ಮತ್ತು ಸಾಹಿತ್ಯದ (ವಿಜ್ಞಾನಿ–ಕವಿಗಳು) ಒಂದೇ ನಾಣ್ಯದ ಎರಡು ಮುಖಗಳಂತಿರುವುದು ವಿಶೇಷ. ವಿಜ್ಞಾನ ಜೀವ ಜಗತ್ತಿನ ಸೂಕ್ಷ್ಮಾಂಶಗಳ ಶೋಧಕ್ಕಿಳಿದರೆ, ಕವಿಗಳು ಪ್ರಕೃತಿಯಲ್ಲಿರುವ ಜೀವಿಗಳ ಮಹತ್ವಾಂಶಗಳ ಮುಖವನ್ನು ಕಲ್ಪನೆಗಳ ಮೂಲಕ ಉಪಮೆ, ಪ್ರತಿಮೆ, ರೂಪಕ, ಸಂಕೇತಗಳ ರೂಪದಲ್ಲಿ ಸತ್ಯವನ್ನು ಕಂಡು ಜನಕ್ಕೆ ತೆರೆದಿಡುತ್ತಾರೆ. ಅದು ಜೀವನದ ಪರೋಕ್ಷ ದರ್ಶನ. ಇದು ಕೇವಲ ಕಲ್ಪನೆಯಾಗದೆ, ಕಲ್ಪನೆಯೊಳಗಿನ ಸತ್ಯವಾಗಿರುತ್ತದೆ. ಹೀಗಾಗಿ ವಿಜ್ಞಾನದಂತೆ ಸಾಹಿತ್ಯವು ಸತ್ಯವನ್ನು ಸಾರುವುದಾಗಿದೆ ಎಂಬುದನ್ನು ಅದರ ಅಂತರಂಗದ ಆಳವನ್ನು ಅರಿತಾಗಲೇ ಮನವರಿಕೆಯಾಗುವುದು.

1. ಸಸ್ಯ ಸಂಕುಲಗಳ ಆದಿ ಹುಲ್ಲು; ಸಕಲ ಜೀವಿಗಳಿಗಾದ ಆಹಾರ ಮತ್ತು ರಕ್ಷಣಾ ಸಂಸ್ಕೃತಿ:

ಪ್ರಕೃತಿಯ ಸಸ್ಯ ಪರಿಸರದಲ್ಲಿ ಭೂಮಿಯ ಹಸಿರಿಗೆ ಹುಲ್ಲು ಪ್ರಧಾನ ಮತ್ತು ಮೂಲ. ಇದಿಲ್ಲದೆ ಇಡೀ ಜೀವಜಾಲವೇ ಅಸ್ತವ್ಯಸ್ತವಾಗಿ ಮನುಷ್ಯನ ಬದುಕು ಅಳಿದು ಹೋಗುತ್ತದೆ. ಯಾಕೆಂದರೆ ಬಹುತೇಕ ಪ್ರಾಣಿಗಳು ಮತ್ತು ಕೀಟಗಳು ಹುಲ್ಲನ್ನೆ ಆಶ್ರಯಿಸಿ ಬದುಕುತ್ತವೆ. ಜೀವಿಗಳ ಆಹಾರ ಸರಪಳಿಯಲ್ಲಿ ಈ ಹುಲ್ಲಿಗೆ ಶಾಖಾಹಾರಿ ಪ್ರಾಣಿಗಳಿಂದ ಮಾಂಸಹಾರಿ ಪ್ರಾಣಿಗಳವರೆಗೆ ತನ್ನದೇ ಆದ ಮಹತ್ವವಾದ ಪಾತ್ರವಿದೆ. ಅಲ್ಲದೆ ನಾಗರೀಕತೆಯ ಪ್ರಪಂಚದಲ್ಲಿ ಸರ್ವ ಮಾನವರಿಗೂ ಹುಲ್ಲಿನ ಬೀಜಗಳೇ ಪ್ರಧಾನ ಆಹಾರವಾಗಿದೆ. ಅಂದರೆ ಭತ್ತ, ಗೋಧಿ, ರಾಗಿ, ಜೋಳ, ನವಣೆ, ಸಜ್ಜೆ, ಕಬ್ಬು ಹೀಗೆ ಗರಿಕೆಯಿಂದ ಬಿದಿರಿನವರೆಗೆ ಏಕದಳ ಸಸ್ಯಜಾತಿ ಹುಲ್ಲುಗಳು ಆವರಿಸಿಕೊಂಡಿವೆ. ಈ ಹುಲ್ಲುಗಳು "ಗ್ರಾಮಿನ (Graminae) ಅಥವಾ ಪೋಯೇಸಿ(Poeccae) ಎಂಬ ಕುಟುಂಬಕ್ಕೆ ಸೇರುತ್ತವೆ. ಈ ಹುಲ್ಲಿನ ಕುಟುಂಬದಲ್ಲಿ 650 ಜಾತಿಗೆ ಸೇರಿದ ಸುಮಾರು ಹತ್ತು ಸಾವಿರ ಸಂಕುಲಗಳಿವೆ. ಇವು ಎಲ್ಲಾ ಹವಾಮಾನ, ಭೂಮಿ, ಎತ್ತರಗಳಲ್ಲಿ ಬೆಳೆಯಬಲ್ಲವು. ಹುಲ್ಲು ಬೆಳೆಯದ ಪ್ರದೇಶವೇ ಇಲ್ಲ."13 ಹಾಗಾಗಿ ಹುಲ್ಲಿನ ಹುಟ್ಟು ಮತ್ತು ಬೆಳವಣಿಗೆಯ ಗುಣ ಸ್ವಭಾವಗಳನ್ನು ಅರಿತ ಕವಿ ಹೀಗೆ ಬರೆಯುತ್ತಾರೆ.

"ಈ ಜುಲೈ ತಿಂಗಳ ಜಿಟಿ ಜಿಟಿ ಮಳೆ
ಗಟಗಟ ಕುಡಿದು ಧುತ್ತೆಂದು ಬೆಳೆದು ನಿಂತಿದೆ ಹುಲ್ಲು
ಎಲ್ಲಾದರೂ ಸ್ವಲ್ಪ ಪಡುವು ಸಿಕ್ಕರೆ ಸಾಕು
ಸಿಮೆಂಟು ಗೋಡೆಯ ಬಿರುಕು, ಟಾರು ಬೀದಿಯ ಒಡಕು
ಎಂಥ ಇಕ್ಕಟ್ಟಿನಲ್ಲು ಹೊರ ಬರುತ್ತದೆ ತುರಾಯಿ ಹಚ್ಚಿಕೊಂಡು
ಗುದ್ದ, ಮರಡಿ, ಬಯಲು, ಸ್ವಂತ ಸಾಮ್ರಾಜ್ಯ
ಹಿತ್ತಲದ ಮಾತು ಗೊತ್ತೇ ಇದೆ,
ಅಂಗಳದ ಅಂಗುಲಂಗುಲ ಕೂಡ ಅದರದೇ ಗುತ್ತಿಗೆ
ಹೂದೋಟದಲ್ಲಿ ಹೇಳಿಕಳಿಸಿದ ಹಾಗೆ ಹೊತ್ತಿಗೆ
ಮೊದಲೇ ಬಂದು ಡೇರೆ ಹೊಡೆದು ತಳವೂರುತ್ತದೆ
ನೀರೆರೆದು ಬೆಳೆಸಿದ ಹೂವಿನ ಗಿಡಕ್ಕೆಸೆದು ಸವಾಲು
ಬೀಜದ ಕಸವೋ, ಮಣ್ಣಿನ ಹಸಿವೋ
ಮುಸುಗುಡುತ್ತವೆ ದನ ಮೇದು ಹೋದ ಮೇಲೂ"14 (ಹುಲ್ಲು)

ಹುಲ್ಲಿಗೆ ಭೂಮಿಯ ಯಾವುದೇ ಸ್ಥಳ, ಕಾಲಗಳ ಕಟ್ಟುಪಾಡಿಲ್ಲ. ಯಾವಾಗೆಂದರೆ ಆವಾಗ ಎಲ್ಲೆಂದರಲ್ಲಿ ಅದಕ್ಕೆ ಸ್ವತಂತ್ರವಾದ ಹುಟ್ಟು. ಇದು ಹೊಲಗದ್ದೆ ಹೂದೋಟ ಮುಂತಾದ ಬೇಸಾಯ, ಕೈದೋಟಗಳಲ್ಲಷ್ಟೆಯಲ್ಲದೆ; ಸಿಮೆಂಟು ಗೋಡೆಬಿರುಕು, ಟಾರುಬೀದಿಯ ಒಡಕುಗಳಂತಹ ಇಕ್ಕಟ್ಟಿನಲ್ಲು ತಲೆಯೆತ್ತುತ್ತದೆಂದು ಹುಲ್ಲಿನ ವೈಶಿಷ್ಟ್ಯವನ್ನು ಕವಿ ಹೇಳಿದ್ದಾರೆ.

ಗರಿಕೆಯಿಂದ ಬಿದಿರಿನವರೆಗೆ ಇರುವ ನಾನಾ ಹುಲ್ಲು ಜಾತಿಗಳು ಮಾನವನ ಬಹುಪಯೋಗಿ ಸಸ್ಯಗಳಾಗಿ ಬಳಕೆಯಾಗುತ್ತಿವೆ. ಹುಲ್ಲು, ಪ್ರಾಣಿ, ಪಕ್ಷಿ, ಕೀಟಗಳಿಗೆ ಮಾತ್ರ ಉಪಯೋಗವಾಗದೆ ಪ್ರಕೃತಿ ಸಂರಕ್ಷಣೆಯಲ್ಲಿಯೂ ಇದರ ಪಾಲು ಪ್ರಧಾನವಾದುದ್ದಾಗಿದೆ. ಪ್ರಕೃತಿಯಲ್ಲಿ ಭೂಮಿ ತನ್ನ ಕಾಡು ಪರ್ವತಗಳಲ್ಲಿ, ಇಳಿಜಾರುಗಳಲ್ಲಿ ಮಳೆ ಬಿದ್ದಾಗ ಮಣ್ಣಿನ ಸತ್ವ, ಸಾರ, ಹರಿದು ಹೋಗದಂತೆ ಮಣ್ಣಿನ ಕಣಗಳನ್ನು ಬಂಧಿಸಿ ತಡೆದುಕೊಳ್ಳುವುದರ

ಮೂಲಕ, ಜೀವಿಗಳಿಗೆ ಅದರಲ್ಲೂ ಮಾನವನ ಸ್ಥಿರ ವ್ಯವಸಾಯಕ್ಕೆ ಯೋಗ್ಯವಾಗುವಂತೆಯೂ ಈ ಹುಲ್ಲು ರೂಪುಗೊಂಡಿದೆ. ಇದರಿಂದ ಭೂಮಿ ತನ್ನ ರಕ್ಷಣೆಯನ್ನು ತಾನೆ ಮಾಡಿಕೊಳ್ಳುವುದರೊಂದಿಗೆ ಇತರ ಜೀವಿಗಳ ರಕ್ಷಣೆಯನ್ನು ಮಾಡುತ್ತದೆ. ಭೂಮಿಯ ಈ ಹುಲ್ಲಿನ ಗುಣವು ಸಸ್ಯ ಸಂಸ್ಕೃತಿಯಲ್ಲಿ ಅಡಕವಾಗಿದೆ.

ಭೂ ಮಣ್ಣಿನ ನೀರು, ಆವಿಯಾಗಿ ಹೋಗುವುದನ್ನು ತಡೆದು ಸಂರಕ್ಷಿಸುವುದು ಭೂಮಿಯ ಗುಣಗಳಲ್ಲಿ ಒಂದು. ಅದರ ಈ ಗುಣವನ್ನು ಅರಿತ ಮಾನವ ಚಿಂತಕರು 'ಭೂಮಿತತ್ವ', 'ಜೀವತತ್ವ'ಗಳೆಂದು ಕರೆದಿದ್ದಾರೆ. ಈ ತತ್ವವನ್ನೇ ಬುದ್ಧ ಮಾನವರಿಗೆ ಬೋಧಿಸಿದ್ದು. ಮಣ್ಣಿನ ಈ ವಿಶೇಷ ಗುಣವನ್ನರಿತು ಮನುಷ್ಯ ತನ್ನ ಕೃಷಿಯಲ್ಲಿ ತೆವರಿ ಅಥವಾ ಬದುಗಳಲ್ಲಿ ಮಣ್ಣು ಗಟ್ಟಿಯಾಗಿರುವಂತೆ ಹುಲ್ಲನ್ನು ಬೆಳೆಸುತ್ತಿದ್ದಾನೆ. ಇತ್ತೀಚೆಗೆ ಒಣ ಬೇಸಾಯದ ಅಭಿವೃದ್ಧಿಯಲ್ಲಿ ಮಣ್ಣು ನೀರಿನ ರಕ್ಷಣೆಗೆ ಲಾವಂಚ ಹುಲ್ಲನ್ನು ಬೆಳೆಸುತ್ತಿದ್ದಾನೆ. ರೈತರು ಈ ಹುಲ್ಲನ್ನು ಬೆಳೆಯುವಂತೆ ಪ್ರೋತ್ಸಾಹಿಸಲು ಸರ್ಕಾರಕ್ಕೆ ವಿಶ್ವಬ್ಯಾಂಕ್‌ನಿಂದ ಅಪಾರ ಹಣ ಬರುತ್ತಿದೆ. ಆದರೆ ಪಶುಸಂಗೋಪನಾ ಇಲಾಖೆ, ಸಣ್ಣ ನೀರಾವರಿ ಇಲಾಖೆಗಳು ಪ್ರಾಮಾಣಿಕ ಪ್ರಯತ್ನಮಾಡದೆ ಕಾಡುಗಳ್ಳರ ದಂಡು ಸುಗಂಧದೆಣ್ಣೆಗೆ, ಕಳ್ಳ ಬಟ್ಟಿ ಇತ್ಯಾದಿ ಉಪಯೋಗಕ್ಕಾಗಿ ಬೆಳೆಸುವಂತೆ ವಾಮಮಾರ್ಗಕ್ಕೆ ದಾರಿ ಮಾಡಿವೆ.

ಹಿ.ಚಿ.ಬೋರಲಿಂಗಯ್ಯ ಅವರು ತಮ್ಮ 'ಗೊಂಡರ ನಾಡಿನಲ್ಲಿ ಲಾವಂಚದ ಕಿಚ್ಚು' ಲೇಖನದಲ್ಲಿ ಈ ಹುಲ್ಲಿನ ಹೆಸರಿನಲ್ಲಿ ನಡೆಯುವ ಕಾಳದಂಧೆಯನ್ನು ಹುಲ್ಲಿನ ಸಾಧಕ ಬಾಧಕಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. "ಲಾವಂಚದ ಹುಲ್ಲಿನಂತೆ ಲೆಮನ್‌ಗ್ರಾಸ್ ಕೂಡ ಸುವಾಸನೆ ಭರಿತ ಹುಲ್ಲು. ಇವು ಪ್ರಕೃತಿಯ ಹುಲ್ಲುಗಳಲ್ಲಿ ಅಪರೂಪದ ಕಾಣಿಕೆ. "ಲಾವಂಚ ಮತ್ತು ಲೆಮನ್ ಗ್ರಾಸ್ ಬೇರೆ ಬೇರೆ ಹುಲ್ಲುಗಳಾದರೂ 'ಗ್ರಾಮಿನಿ' ಎನ್ನುವ ಒಂದೇ ಕುಟುಂಬಕ್ಕೆ ಸೇರಿದವುಗಳು. ಸಸ್ಯಶಾಸ್ತ್ರದ ಪರಿಭಾಷೆಯಲ್ಲಿ ಲಾವಂಚವನ್ನು "ವೆಟಿವರಿಯ ಬಿಜನಾಯಡಿಸ್" ಎಂದೂ ಲೆಮನ್ ಗ್ರಾಸನ್ನು "ಸಿಂಬೋಪೊಗಾಸ್ ಫ್ಲೆಕ್ಸುಯೋಸಸ್" ಎಂದೂ ಕರೆಯುತ್ತಾರೆ."

ಇವೆರಡಕ್ಕೂ ಇರುವ ಪ್ರಮುಖ ವ್ಯತ್ಯಾಸ ಬೇರು ಮತ್ತು ಹುಲ್ಲಿನದು, ಲಾವಂಚದ ಬೇರು ಅತ್ಯಂತ ಸುವಾಸನಾಯುಕ್ತವಾದರೆ ಲೆಮನ್ ಗ್ರಾಸ್‌ನ ಹುಲ್ಲು ನಿಂಬೆ ರೀತಿಯ ಘಮ ಘಮ ವಾಸನೆಯುಳ್ಳದ್ದು. ಹಿಂದೆ ಲಾವಂಚದ ಬೇರಿನಲ್ಲಿ ಬೀಸಣಿಗೆ ಮಾಡುತ್ತಿದ್ದರಂತೆ. ಬೀಸಣಿಗೆಗೆ ನೀರು ಚಿಮುಕಿಸಿ ಬೀಸಿಕೊಂಡರೆ ಪನ್ನೀರಿನ ಪರಿಮಳ, ಭಾರತದ ಪಂಜಾಬ್, ಒರಿಸ್ಸಾ, ರಾಜಸ್ತಾನ, ಮತ್ತು ಪಶ್ಚಿಮ ಘಟ್ಟದ ಕೆಲವೆಡೆ ಈ ಹುಲ್ಲುಗಳು ಹಿಂದಿನಿಂದ ಇದ್ದರೂ ಇವುಗಳಿಂದ ಸುಗಂಧದ ಎಣ್ಣೆ ತೆಗೆಯಬಹುದೆಂಬ ಸತ್ಯ ಗೊತ್ತಾದದ್ದು ನಾಲ್ಕೈದು ದಶಕಗಳ ಈಚೆಗೆ. ಲಾವಂಚದ ಬೇರನ್ನು ಲೆಮನ್ ಗ್ರಾಸ್‌ನ ಹುಲ್ಲನ್ನು ಬೇಯಿಸಿ ಭಟ್ಟಿ ಇಳಿಸುವ ಮೂಲಕ ಲಾಭಕ್ಕಾಗಿ ಅತ್ಯಂತ ಸುವಾಸನೆ ಯುಕ್ತ ಎಣ್ಣೆಯನ್ನು ತೆಗೆಯುವ ಈ ಕಾಯಕ ಕೇರಳದಲ್ಲಿ ಆರಂಭವಾಗುವ ಮೂಲಕ ಈ ಹುಲ್ಲಿನ ಮಹತ್ವ, ಹೆಚ್ಚಾಯಿತು. ಈ ಎಣ್ಣೆಯನ್ನು ಪರಿಮಳ ದ್ರವ್ಯ, ಸಾಬೂನು, ಸೋಂಕುನಿವಾರಕ ಔಷಧಿ, 'ಎ' ಅನ್ನಾಂಗ ತಯಾರಿಕೆ ಹೀಗೆ ಹಲವು ವಿಧಗಳಲ್ಲಿ ಬಳಸುತ್ತಾರೆ. ಗುಡ್ಡದ ಇಳಿಜಾರುಗಳಲ್ಲಿ ಅತ್ಯಂತ ಹುಲುಸಾಗಿ ಬೆಳೆಯುವ ಈ ಹುಲ್ಲನ್ನು ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ತಂದು ನಾಟಿ ಮಾಡಿದ್ದು ಈ ಉದ್ಯಮದಲ್ಲಿ ಮತ್ತೊಂದು ತಿರುವು"15.

ಲಾವಂಚ, ಲೆಮನ್‌ಗ್ರಾಸ್ ಹುಲ್ಲನ್ನು ಮನುಷ್ಯ ತಾನು ಬಳಸಿಕೊಂಡ ಉಪಯೋಗಗಳ ಪರಿ ವಿಶಿಷ್ಟವಾದುದ್ದಾಗಿದೆ. ಈ ಹುಲ್ಲು ಕೃಷಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಗಾಗಿ ಬಳಕೆಯಾಗುತ್ತಿದ್ದದ್ದು ಬೀಸಣಿಗೆಯ ಉಪಯೋಗಕ್ಕೆ ಬಂದು, ಅಲ್ಲಿಂದ ಔಷಧಿ ಎಣ್ಣೆ, ಭಟ್ಟಿ ಇಳಿಸುವವರೆಗೆ ಬೆಳೆದಿದೆ. ಇದನ್ನು ಗಮನಿಸಿದರೆ ಯಾವುದೇ ಒಂದು ವಸ್ತು ಅಥವಾ ಜೀವದ ಉಪಯೋಗ ಅನುಭವಕ್ಕೆ ಬಂದಾಗ ಅದನ್ನು ಮನುಷ್ಯ ತನ್ನ ಅನುಭೋಗದವರೆಗೆ ಹೇಗೆ ವಿಸ್ತರಿಸಿ ಬಳಸಿಕೊಳ್ಳುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ಅನುಭೋಗದ ಹುಚ್ಚು ಹಿಡಿದ ಮನುಷ್ಯ ಒಂದರ ಭೋಗಕ್ಕಾಗಿ ಮತ್ತೊಂದರ ಹಾನಿ ಮಾಡುವುದು ಮನುಷ್ಯ ಧರ್ಮ, ಸಂಸ್ಕೃತಿಯಾಗಿದೆ. ಇಲ್ಲಿ ಯಾವ ಸಂಸ್ಕೃತಿ ಅಂದರೆ ಸಸ್ಯ, ಪ್ರಾಣಿ, ಜೀವ ಸಂಸ್ಕೃತಿ ಶ್ರೇಷ್ಠವೋ ಇಲ್ಲ ಮಾನವ ಸಂಸ್ಕೃತಿ ಶ್ರೇಷ್ಠವೋ ಎಂಬ ತಾತ್ವಿಕ ಪ್ರಶ್ನೆ ಕಾಡುತ್ತದೆ. ಈ ಪ್ರಶ್ನೆಗೆ ಉತ್ತರ ಮಾನವನಲ್ಲೆ ಇದೆ. ಅವನಿಗೆ ಪರಿವರ್ತನೆಯ ಗುಣ ಇನ್ನೂ ಬಂದಿಲ್ಲ. ಅವನ ಈ ದುರಾಸೆಯ ಗುಣಗಳು ಅವ್ಯಾಹತವಾಗಿ ಸಾಗಿ ಬಂದಿರುವುದರಿಂದ ಕಾಡು ಮತ್ತಿತರ ಜೀವ ಪರಿಸರ ನಾಶವಾಗುತ್ತಿರುವುದಕ್ಕೆ ಈ ಲೇಖನ ಇನ್ನಷ್ಟು ಮಾಹಿತಿಯೊದಗಿಸುತ್ತದೆ.

ಶ್ರೀಮಂತ ಕಳ್ಳ ಉದ್ಯಮಿಗಳ ವ್ಯವಹಾರವೆಂದರೆ ಕಾಡಿನಲ್ಲೇ ಇವರ ಉದ್ಯಮಕ್ಕೆ ಬೇಕಾಗುವ ಕೃಷಿ, ಕೈಗಾರಿಕೆಗಳೆಲ್ಲ ಸೃಷ್ಟಿಯಾಗುತ್ತವೆ. ಇಂತಹ ನೂರಾರು ಚಟುವಟಿಕೆಗಳಿಗೆ ಕಾಡೇ ಆದಿಯಾಗಿ, ಕೊನೆಗೆ ಕಾಡೇ ನಾಶವಾಗುವ ಪ್ರವೃತ್ತಿ ಸುಮಾರು ಮೂರು ನಾಲ್ಕು ಶತಮಾನಗಳಿಂದ ಅವಿರತವಾಗಿ ಸಾಗಿ ಬಂದಿದೆ. ಇದಕ್ಕೆ ಕಾಡೊಳಗೆ ಸೃಷ್ಟಿಯಾದ ಲೆಮನ್ ಗ್ರಾಸ್, ಲಾವಂಚ ಹುಲ್ಲಿನ ಕೃಷಿ ಮತ್ತು ಉದ್ಯಮದ ಬೆಳವಣಿಗೆಯ ಕಾರ್ಯದ ಮಾಹಿತಿಯೊಂದಿದೆ:

"ಪ್ಲಾಂಟೇಷನ್ ಪಕ್ಕದಲ್ಲಿಯೇ ಭಟ್ಟಿಯ ವ್ಯವಸ್ಥೆ, ಭಟ್ಟಿ ಬೇಯಿಸಲು ಮತ್ತೆ ಮರಗಳ ಬೇಟೆ. ಯಾರಪ್ಪನ ಆಸ್ತಿ? ಕೈಗೆ ಸಿಕ್ಕಿದ ಮರ ಕಡಿದು ಉಬ್ಬೆಗೆ ತುಂಬುತ್ತಾರೆ. ಸತತವಾಗಿ 48 ಗಂಟೆ ಬೇಯಿಸಿದರೆ ಲಾವಂಚದ ಬೇರಿನಿಂದ ಎಣ್ಣೆ ಒಸರುತ್ತದೆ. ಲೆಮೆನ್ ಗ್ರಾಸ್ ಹುಲ್ಲು ಎಣ್ಣೆ ಬಿಡಲು 12 ತಾಸು ಬೇಯಿಸಬೇಕು. ದಗದಗ ಉರಿಯುವ ಬೆಂಕಿಯ ಹಬೆಗೆ ಕುಲುಮೆಯೊಳಗಿನ ಬೇರು ಅಥವಾ ಹುಲ್ಲು ಎಣ್ಣೆ ಕಾರುತ್ತದೆ. ಇಂಥ ನೂರಾರು ಭಟ್ಟಿಗಳಿಗೆ ಅದೆಷ್ಟು ಉರುವಲು ಬೇಕೋ? ಉರುವಲಿಗೆ ಚಿನ್ನದ ಬೆಲೆಯಾಗುತ್ತಿರುವ ಈ ಸಂದರ್ಭದಲ್ಲಿ ಇದನ್ನು ಯಾರು ಕೇಳಬೇಕು?"16 ಎಂದು ಲೇಖಕರು ವಿಷಾದ ವ್ಯಕ್ತಪಡಿಸುತ್ತಾರೆ. ಲೆಮನ್ ಗ್ರಾಸ್ ಹುಲ್ಲಿನ ಒಂದು ಕೆ.ಜಿ. ಎಣ್ಣೆಗೆ 1300ರೂಗಳು ಇದ್ದದ್ದು ಕಂಡು, ಒಂದು ಗುಂಪು ಇದನ್ನೇ ಒಂದು ಉದ್ಯೋಗವನ್ನಾಗಿ ಮಾಡಿಕೊಂಡು, 138 ಭಟ್ಟಿಗಳನ್ನು ಒಂದೇ ಬಾರಿ ತೆರೆದು 48 ಗಂಟೆಗಳಲ್ಲಿ 138 ಲೀಟರ್ ಎಣ್ಣೆ ತೆಗೆದು ಸುಮಾರು 2 ಲಕ್ಷ ರೂಪಾಯಿ ಸಂಪಾದಿಸಲು 2 ಲಕ್ಷಕ್ಕೂ ಹೆಚ್ಚಿನ ಉರುವಲು ಬಳಸಲ್ಪಟ್ಟ ಅಂಶವನ್ನು ಗಮನಕ್ಕೆ ತರುತ್ತಾರೆ. ಈ ಎಣ್ಣೆ ತಯಾರಿಕೆಗೆ ಬೇಕಾಗುವ ಮಾನವ ಸಂಪತ್ತೇ ಗಿರಿಜನ ಕೂಲಿ ಆಳುಗಳು. ಇವರು 5 ರೂ. ದಿನಗೂಲಿ ಆಸೆಗೆ ದುಡಿಯುತ್ತಿದ್ದಾರೆ. ಆದರೆ ದುಡಿಸಿಕೊಳ್ಳುವ ಈ ಕಾಡುಗಳ್ಳರು ತಮ್ಮ ಹೆಂಡತಿ ಮಕ್ಕಳೊಂದಿಗೆ ಪಟ್ಟಣ ಪ್ರದೇಶಗಳಲ್ಲಿ ಐಷಾರಾಮ ಜೀವನ ನಡೆಸುತ್ತಿದ್ದಾರೆ. ಅಲ್ಲಿಯ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಲೇಖಕರ ಗಮನ ಸೆಳೆದಿವೆ. ಅವರು ಯಾವುದೇ ತೊಂದರೆಯಿಲ್ಲದೆ ಈ ಹುಲ್ಲಿನ ಬೆಳೆಯನ್ನು ಹಣದಾಸೆಗೆ ಎಣ್ಣೆ ತೆಗೆಯಲು ಕಾಡನ್ನು ಸುಟ್ಟು ನಾಶ ಮಾಡುವುದರ ಬಗ್ಗೆ ಆತಂಕ ಪಡುತ್ತಾರೆ.

2. ಸಸ್ಯ ಸಂಪತ್ತಿನ ಹೂ ಸಿರಿ; ಸಸ್ಯಗಳ ಸಂತಾನಾಭಿವೃದ್ಧಿ ಸಂಸ್ಕೃತಿ:

ಪ್ರಕೃತಿಯ ಎಲ್ಲ ಸಸ್ಯ ಜಾತಿಗಳೂ ಹೂ ಬಿಡುವುದು ನಿಜವಾದರೂ, ಕೆಲವು ಗಿಡಮರಗಳು ಪ್ರತಿ ವರ್ಷ ಹೂ ಬಿಡುವುದಿಲ್ಲ. ಇವುಗಳಲ್ಲಿ ಒಂದೊಂದು ಜಾತಿಯ ಮರ, ಒಂದೊಂದು ಕಾಲಾಂತರದಲ್ಲಿ ಹೂಗಟ್ಟುತ್ತದೆ. ಮರ ಗಿಡಗಳು ಹೂದುಂಬುವುದು ಸಂತಾನೋತ್ಪತ್ತಿಯ ಕ್ರಿಯೆ. ಇವು ತಮ್ಮ ಸಂತಾನೋತ್ಪತ್ತಿಯ ವಂಶಾಭಿವೃದ್ಧಿಯ ಬೀಜ ಪ್ರಸಾರಕ್ಕಾಗಿ ಗಾಳಿ, ನೀರು, ಪ್ರಾಣಿ, ಪಕ್ಷಿ, ಕೀಟ ಮುಂತಾದವುಗಳಿಗೆ ಪರಾವಲಂಬಿಗಳಾಗಿರುತ್ತವೆ. ಇದು ಪ್ರಕೃತಿಯ ವೃತ್ತದೊಳಗೆ ಆವರಿಸಿರುವ ಪರಸ್ಪರ ಬಾಂಧವ್ಯದ ಬಂಧದ ಒಂದು ಕಿರು ಪರಿಚಯ–

"ಬೂರುಗ, ಮುಳ್ಳು ಮುತ್ತುಗ (Erythrina Subrosa) ಮರಗಳ ವರ್ಣರಂಜಿತ ಹೂಗಳು ಪರಾಗ ಹರಡುವ ದೂತರಾದ ಪಕ್ಷಿ, ಪ್ರಾಣಿ, ಕೀಟಗಳನ್ನು ಆಕರ್ಷಿಸುವ ಜಾಹೀರಾತುಗಳು. ಪರಾಗ ಸ್ಪರ್ಶದ ನಂತರ ಮರಗಳು ತಳೆಯುವ ಹಣ್ಣು, ಬೀಜಗಳನ್ನು ಕಾಡಿನ ತುಂಬಾ ಹರಡಿ ಹಂಚಲು ಸಸ್ಯಗಳಿಗೆ ಕಾಲುಗಳಿಲ್ಲ ತಾನೇ? ಗೋಣಿ (Ficus Mysorensis) ಅಥವಾ ಕಾಡುತೇಗ (Dillenia Pentyna) ದಂತಹ ಮರಗಳು ಮೈ ತುಂಬ ಹಣ್ಣು ತಳೆಯುವ ರೀತಿ ಹಣ್ಣಿನ ಆಕರ್ಷಕ ಬಣ್ಣ, ರುಚಿಗಳು ನೂರಾರು ತರದ ಪಶುಪಕ್ಷಿಗಳನ್ನು ಸೆಳೆಯುತ್ತವೆ. ಕೂಳಿ, ನೇರಳೆ (Syzigium Cumini) ನೆಲ್ಲಿ (Phyllanthus emblica) ಮರಗಳು ಕಾಡಿನಲ್ಲಿ ಹಣ್ಣು ಬಿಟ್ಟಾಗ ಅಲ್ಲಿ ಕಲೆಯುವ ಸಾರಗ, ಕಡವೆ, ಹಂದಿ, ಮುಸುವ ಹಕ್ಕಿಗಳ ಸಂತೆಯ ಹೊಟ್ಟೆ ತುಂಬಿದಂತೆಯೇ, ಈ ಅರಣ್ಯ ವೃಕ್ಷಗಳ ಸಂತಾನ ಪಸರಿಸುತ್ತದೆ. ಹೀಗೆ ಬೀಜ ಪಸರಿಸಲು ಕೇವಲ ಪ್ರಾಣಿದೂತರನ್ನು ಮಾತ್ರ ಎಲ್ಲ ಸಸ್ಯಗಳೂ ನೆಚ್ಚಿಕೊಂಡಿಲ್ಲ. ಗಾಳಿಯಲ್ಲಿ ತೇಲಿ ಬೀಜ ವಿತರಣೆಯಾಗುವಂತೆ ದಿಂಡಲು ಬೀಜಗಳಿಗೆ ರೆಕ್ಕೆಗಳಿವೆ. ಬೂರುಗಕ್ಕೆ ಹತ್ತಿ ಇದೆ. ಆಕೇಶಿಯಾ ಕೋಡುಗಳು ಹಗುರವಾಗಿರುತ್ತವೆ. ಎತ್ತೇಗ (Adina Cordifolia) ದ ಬೀಜ ತೀರ ಸೂಕ್ಷ್ಮವಾಗಿದೆ. ನದಿಯಂಚಿನಲ್ಲಿ ಬೆಳೆಯುವ ಮಾವು, ನೇರಳೆಗಳು ತಮ್ಮ ಬೀಜಗಳನ್ನು ನದಿಯಲ್ಲೇ ತೇಲಿ ಬಿಡುತ್ತವೆ. ಎಲ್ಲ ಸಸ್ಯಗಳಲ್ಲೂ ಈ ಸಂತಾನೋತ್ಪತ್ತಿ ಕೇವಲ ವರ್ಷಕ್ಕೊಮ್ಮೆ ನಡೆಯುವ ಕ್ರಿಯೆಯೂ ಅಲ್ಲ. ವರ್ಷಕ್ಕೆ ಎರಡು ಬಾರಿ ಹೂ ಬಿಡುವ ಸಸ್ಯಗಳೂ ಇವೆ. ಕೆಲವು ಬಿದಿರುಗಳು (Bamboos) 30–50 ವರ್ಷಕ್ಕೆ ಒಮ್ಮೆ ಹೂ ತಳೆದರೆ, ಪಶ್ಚಿಮ ಘಟ್ಟದ ಕುರುಂಜಿಗಳು (Stroebelanthus) 3–13 ವರ್ಷಗಳಿಗೊಮ್ಮೆ ಹೂಬಿಡುತ್ತವೆ. ಪ್ರತಿ ವರ್ಷ ಹೂ ಬಿಡುವ ಸಸ್ಯಗಳಲ್ಲೂ ಎಲ್ಲ ಜಾತಿಗಳೂ ಒಂದೇ ಕಾಲದಲ್ಲಿ ಹೂ ಬಿಡುವುದಿಲ್ಲ. ಬೇರೆ ಬೇರೆ ಮರಗಳು ಪ್ರತ್ಯೇಕ ತಿಂಗಳುಗಳಲ್ಲಿ ಹೂ ತಳೆದು ಸಂತಾನ ಪಡೆಯುತ್ತವೆ"17.

ಇಲ್ಲಿ ಗಿಡ, ಮರ, ಬಳ್ಳಿಗಳು ಪ್ರಾಣಿ, ಪಕ್ಷಿ, ಕೀಟಗಳಿಂದ ಹರಡುವ ಪರಾಗದಿಂದ ಸಂತಾನೋತ್ಪತ್ತಿಯಾಗಿ ಹೂತಳೆದು ಕಾಯಿ, ಹಣ್ಣಾಗಿ ಬೀಜ ಹರಡುವುದರವರೆಗೆ ಸಸ್ಯಗಳ ಜೀವನ ನಡವಳಿಕೆಗಳೆಂದೆ ಕರೆಯುವುದಾಗಿದೆ.

ಇದನ್ನೆ ಸಸ್ಯ ಸಂಸ್ಕೃತಿಯೆಂದು ಕರೆಯುವುದು. ಮೇಲೆ ಹೇಳಿದಂತೆ ನಿಸರ್ಗದ ಈ ಎಲ್ಲ ವಿವರಗಳನ್ನು ವಿಜ್ಞಾನ ತನ್ನ ಸಂಶೋಧನೆಯಿಂದ ವಿವರಿಸಿದರೆ ಕಾಡಿನ ಜನ ಜೀವನ ಕಾಡಿನ ಒಡನಾಟದ ತಮ್ಮ ಜೀವನಾನುಭವದಿಂದ ಕಂಡುಕೊಂಡಿದೆ. ಇದಕ್ಕೆ ಇಲ್ಲಿಯ ಜನರೇ ತಿಳಿಸಿದ ಪ್ರಕೃತಿ ವಿಸ್ಮಯದ ಮಾತಿದು.

"ಜೀವ ವೈವಿಧ್ಯಕ್ಕೆ ಹೆಸರಾಗಿರುವ ಭದ್ರಾ ಅಭಯಾರಣ್ಯದ ಮುತ್ತೋಡಿ ಕಾಡಿನಲ್ಲಿ ಈಗ ಪ್ರಕೃತಿಯ ವಿಸ್ಮಯವೊಂದು ಅರಳಿ ನಿಂತಿದೆ. ಬಿದಿರಿನ ಕಾಡು ಹೂಬಿಟ್ಟು ಮಾಗಿದೆ. ರಮ್ಯಲೋಕವೇ ಸೃಷ್ಟಿಯಾಗಿದೆ. ಸೊಂಪಾಗಿ ಬೆಳೆದು ನಿಂತಿದ್ದ ಬಿದಿರುಗಳು ಈಗ ಒಣಗಿವೆ. ಕಾಡಿಗೆ ಬೆಂಕಿ ಬಿದ್ದಂತೆ ಗೋಚರಿಸುತ್ತಿದೆ. ಹೂ ಅರಳಿ ಬೀಜಗಳು ನೆಲಕ್ಕೆ ಉರುಳಿ ಮೊಳಕೆಯೊಡೆದು ಮತ್ತೆ ಸೊಂಪಾಗಿ ಬೆಳೆಯುತ್ತಿವೆ. ಮೂಲ ಮರಗಳು ಸತ್ತಿವೆ. ಬೀಜ ಚಕ್ರದ ಈ ಅಪರೂಪದ ಘಟನೆ ಮುತ್ತೋಡಿಯಲ್ಲಿ ಈಚೆಗೆ ಸುಮಾರು 35 ವರ್ಷಗಳಿಂದ ಆಗಿಲ್ಲ ಎಂದು ಊರ ಹಿರಿಯರು ತಿಳಿಸಿದ್ದಾರೆ"18.

ಇಷ್ಟೊಂದು ದೀರ್ಘಾವಧಿಗೊಮ್ಮೆ ಬಿದಿರು ಹೂ ಬಿಡುವುದನ್ನು ಕಂಡ ಆ ಜನರ ಮನಕ್ಕೆ ವಿಸ್ಮಯವಾಗಿದೆ. ಇಂತಹ ವಿಸ್ಮಯಗಳ ಶೋಧನೆಯಿಂದಾಗಿ ವಿಜ್ಞಾನ ಬಿದಿರಿಗಿಂತಲೂ ದೀರ್ಘಕಾಲಕ್ಕೊಮ್ಮೆ ಹೂದುಂಬುವ ಗಿಡಮರಗಳು ಪ್ರಕೃತಿಯಲ್ಲಿರುವುದನ್ನು ಗುರುತಿಸಿದೆ. ಇದರಿಂದ ಪ್ರಕೃತಿಯಲ್ಲಿರುವ ನಾನಾ ಜಾತಿಯ ಗಿಡ, ಮರ, ಬಳ್ಳಿಗಳಿಗೂ ಅವುಗಳದ್ದೇಯಾದ ಜೀವನ ನಡವಳಿಕೆಗಳ ಸಂಸ್ಕೃತಿ ಭಿನ್ನ ಭಿನ್ನವಾಗಿರುತ್ತವೆ ಎಂಬುದಕ್ಕೆ ಈ ಬಿದಿರು, ಮಾವು, ತುಂಬೆಗಳಂತಹ ಬೇರೆ ಬೇರೆ ಜಾತಿಯ ಸಸ್ಯವರ್ಗಗಳ ಜೀವನ ನಡವಳಿಕೆಗಳನ್ನು ಶೋಧಿಸಿದರೆ ಮನವರಿಕೆಯಾಗುತ್ತದೆ. ಮಾನವನರಿಯದ ಪ್ರಕೃತಿಯ ಈ ಯಂತ್ರ, ತಂತ್ರಗಳ ಸಂಬಂಧ ಬದ್ದತೆಯೇ ಈ ವಿಸ್ಮಯಕ್ಕೆ ಕಾರಣವಾಗಿದೆ.

ವಾಸ್ತವವಾಗಿ ಮನುಷ್ಯ ಬಣ್ಣದ ಬದುಕಿಗೆ ಮಾರುಹೋಗುತ್ತಿರುವ ಅವನ ಮನಪ್ರವೃತ್ತಿಯ ಮೂಲ ಪ್ರೇರಣೆ ಪ್ರಕೃತಿಯೆ ಆಗಿದೆ. ಹೇಗೆಂದರೆ ಪ್ರಕೃತಿಯಲ್ಲಿ ಗಿಡಮರಗಳು ಬಿಡುವ ಬಣ್ಣ ಬಣ್ಣದ ಹೂವು ಮತ್ತು ಅವುಗಳ ಸುಗಂಧಕ್ಕೆ ಮನಸೋಲದ ಮನುಷ್ಯನಿರಲಿ; ಪ್ರಾಣಿ, ಪಕ್ಷಿ, ಕೀಟಾದಿಗಳೂ ಇಲ್ಲ. ಹೂವುಗಳು ಕೇವಲ ಸೌಂದರ್ಯ, ಸುಗಂಧಕ್ಕೆ ಮಾತ್ರವಲ್ಲದೆ ಆಹಾರವಾಗಿಯೂ ಕೆಲವು ಜಾತಿಯ ಗಿಡಮರಗಳು, ಹೂವುಗಳು ಮಹತ್ವ ಪಡೆದಿವೆ. ಅಷ್ಟೆಯಲ್ಲ ಕೆಲವು ಕ್ರಿಮಿ, ಕೀಟಗಳ ಪ್ರಾಣ ಹೀರುವ ಹೂವುಗಳು ಇವೆ. ಇಂತಹ ನಾನಾ ಗುಣೋಪಯೋಗವುಳ್ಳ ಹೂವುಗಳ ಸಸ್ಯಜಾತಿಯನ್ನು ಪ್ರಕೃತಿ ಹೊಂದಿದೆ. ಈ ಹೂಗಿಡಗಳ ಪ್ರಸ್ತಾಪ ಪ್ರಾಚೀನ ಸಾಹಿತ್ಯದಿಂದ ಆಧುನಿಕ ಸಾಹಿತ್ಯದ ಕನ್ನಡ ಕಾವ್ಯಗಳವರೆಗೆ ಸಾಗಿ ಬಂದಿದೆ. ಪಂಪ ಹರಿಹರನಿಂದ ಹಿಡಿದು "ಮಧ್ಯಕಾಲದ ಶೈವ ಮತ್ತು ವೈಷ್ಣವ, ಕನ್ನಡ, ತಮಿಳು ಸಾಹಿತ್ಯದಲ್ಲಿಯೂ ಗಿಡ, ಮರ, ಹೂಗಳ ಹೆಸರುಗಳು ಸಿಗುತ್ತವೆ"19. ಈ ಎಲ್ಲ ಪ್ರಾಚೀನ ಕಾವ್ಯದ ಕವಿಗಳು ತಾವು ಕಂಡ ಕಾಡಿನ ಹೂ ಗಿಡಗಳ ಸೌಂದರ್ಯ ಮತ್ತು ಅವುಗಳ ಮಹತ್ವವನ್ನು ದಾಖಲಿಸಿದ್ದಾರೆ. ಹಾಗೆಯೇ ನಾನಾ ಜಾತಿಯ ಹೂವುಗಳು ಆಧುನಿಕ ಕಾಲದ ಈ ಸಂದರ್ಭದಲ್ಲಿ ಸಾಹಿತ್ಯ, ವಿಜ್ಞಾನ, ಸಮಾಜ, ಸಂಸ್ಕೃತಿಗಳಲ್ಲಿ ತುಂಬ ಮಹತ್ವ ಪಡೆದಿವೆ. ಈ ಅಸಂಖ್ಯ ಸಸ್ಯ ಜಾತಿಯ ಹೂವುಗಳು ಕಾಡುಗಳಲ್ಲಿ ಒಟ್ಟಿಗೆ ದೊರೆಯುತ್ತವೆ. ಹಾಗಾಗಿ ಕವಿ ಸ. ಪ. ಗಾಂವಕಾರ ಅವರು ಕಾಡಿನ ಹೂವುಗಳನ್ನು ಕಂಡಾಗಿನ ಭಾವನೆಗಳು 'ವನ ಪುಷ್ಪ' ವೆಂಬ ಕಾವ್ಯವಾಗಿದೆ. ಇದರಲ್ಲಿ ಕವಿಗೆ ಬಿಸಿಲು, ಬಾನು, ಕಾಡುಗಳೆಲ್ಲ ಹೂವುಗಳನ್ನೇ ಹೊದ್ದು ಕೊಂಡಿರುವಂತೆ ಕಂಡಿದೆ. ಬಾನು ಭೂಮಿಗಳ ಸಂಬಂಧದ ಬೆಸುಗೆಗೆ ಹೂವುಗಳನ್ನೆ ಬಳಸಿಕೊಂಡು, ಗಿರಿ ಕಾನನಗಳ ಹೂವುಗಳ ಕುರಿತು–

"ಏನಿದು ಜಗದಂಬೆಯ ಜೋಕಾಲಿಯ
ಹೂದೊಟ್ಟಿಲ ನಿಟ್ಟಿಪೆನಿಲ್ಲಿ
ಅಮಮಾ ಹಿಮಗಿರಿ ಸಾನುವ ಸೋನೆಯ
ಸೆಳೆಮಿಂಚೇಳಿಪ ಸುಳಿಯಲ್ಲಿ"20 (ವನಪುಷ್ಪ)

ಇಲ್ಲಿ ವನ ಉಯ್ಯಾಲೆಯಾಗಿ ಅದು ಹೂವಿನ ತೊಟ್ಟಿಲಾಗಿದೆ. ಗಿರಿ ಶಿಖರಗಳ ತಪ್ಪಲು ಪ್ರಕೃತಿ ಸೌಂದರ್ಯದ ತಾಣಗಳಾಗಿವೆ. ಇವೆಲ್ಲ ಮನುಷ್ಯನ ದುಃಖಗಳನ್ನು ನಿವಾರಣೆ ಮಾಡಿ ಸುಖ, ಶಾಂತಿ, ನೆಮ್ಮದಿ ಸಂತೋಷಗಳನ್ನು ತರುತ್ತವೆ. ವನ–ಪುಷ್ಪ, ಗಿರಿ–ಶಿಖರಗಳಿಂದ ಸಿಕ್ಕ ಈ ಅನುಭವ ಕವಿಯದು. ಕಾಡಿನ ಅಸಂಖ್ಯ ಹೂವುಗಳಲ್ಲಿ ಕೆಲವು ಆಕರ್ಷಣೀಯವಾಗಿದ್ದು, ಅವು ಹಲವು ಕವಿಗಳ ಭಾವನೆ, ಕಲ್ಪನೆಗಳಿಗೆ ನಾಂದಿಯಾಗಿವೆ. ಅವುಗಳಲ್ಲಿ ದತ್ತೂರಿ ಹೂವು ಒಂದು. ಇದನ್ನು ಮಾಸ್ತಿಯವರು ತಮ್ಮ ಕಾಡು ಹೂಗಳು ಪದ್ಯದಲ್ಲಿ

"ಹೊಲದಲ್ಲಿ ಹೊಂಬಣ್ಣದ ಹೊಳೆ ಹರಿಸಿ

ದತ್ತೂರಿ, ಆರಂಬದ ಕರೆ ಕರೆ
ನನ್ನವ್ವೋ ಲಲೆಯುವ ಸೋಂಬರ ಮೆಚ್ಚು
ಇಲ್ಲೆ ಇದರ ಸೋದರ ನೇಸರ ಮರಿ"21 (ಕಾಡು ಹೂಗಳು)

ಅಂದರೆ ದತ್ತೂರಿ (ಉನ್ಮತ್ತದ ಗಿಡ) ಹೊಲದ 'ಹಳ'ವಾಗಿದೆ. ಇದು ಹೊಂಬಣ್ಣದ ಹೂವಿನ ಕಾಡಗಿಡ. ಇದರ ಹೂವು ಸೋಮಾರಿ ಮನಸ್ಸಿನ ಜನರನ್ನು ಆಕರ್ಷಿಸಿ ಇಷ್ಟ ಪಡುವಂತಿದೆ. ಇದನ್ನು ಕಂಡ ಕವಿ ದತ್ತೂರಿ ಹೂವನ್ನು ಸೂರ್ಯನ ಸಹೋದರನೆನ್ನುತ್ತಾರೆ. ರೈತರಿಗೆ ಈ ಗಿಡ ಹಳವಾಗಿದ್ದಕ್ಕೆ ಇದು ತೃಣವೆನಿಸಿದೆ. ಹೀಗಿದ್ದೂ ಇದರ ರಚನೆ, ಗುಣ, ಬಳಕೆಯ ಮಹತ್ವ ಗಮನಾರ್ಹವಾಗಿದೆ. "ತುತ್ತೂರಿ ರೂಪದ ಆರೇಳಂಗುಲ ಉದ್ದದ ಬಿಳಿ ಹೂಗಳು ಅಚ್ಚ ಬಿಳಿ ಎನ್ನುವುದಕ್ಕಿಂತಲೂ ಮಾಸಲು ಬಿಳಿ ಎನ್ನಬಹುದು. ರೆಂಬೆಗಳಿಂದ ತೂಗುತ್ತವೆ. ಕಸಕುಪ್ಪೆ ಸಂಗ್ರಹವಾಗಿರುವ ಪ್ರದೇಶಗಳಲ್ಲೂ, ಮೈದಾನ ಭೂಮಿಯಲ್ಲೂ ಈ ಗಿಡದ ವಾಸ. ನಾಲ್ಕೈದಡಿ ಎತ್ತರ ಬೆಳೆಯುವ ಪೊದರು ಗಿಡ, ದೊಡ್ಡ ಎಲೆಗಳು, ಹೂ ಬಿಟ್ಟಾಗ ದೂರದಿಂದ ನೋಡಲು ಕಣ್ಣಿಗೆ ಇಂಪು, ಹತ್ತಿರ ಬಂದಾಗ ಮೂಗಿಗೆ ಗಬ್ಬು ಕಂಪು, ಕಾಯಿ ಎರಡು ಮೂರಂಗುಲ ವ್ಯಾಸದ ಚೆಂಡು ಮೈಮೇಲೆಲ್ಲ ಹಲಸಿನ ಕಾಯಿಗಿಂತಲೂ ಮೊನಚಾದ ಮುಳ್ಳು ಹೊದಿಕೆ. ಕಾಯೊಳಗೆ ನೂರಾರು ಕಪ್ಪು ಬೀಜಗಳು"22. ಮೈತುಂಬ ವಿಷ ತುಂಬಿಕೊಂಡು ಈ ಉನ್ಮತ್ತ ಗಿಡ ಹತ್ತಾರು ಬಗೆಯ 'ಆಲ್ಕಲಾಯ್ಡ್' ಎಂಬ ರಾಸಾಯನಿಕ ಸತ್ವಗಳಿಂದ ಕೂಡಿದೆ. ಈ ರಸ ಹೊರಬಂದಾಗ ಕೆಟ್ಟ ವಾಸನೆಯಿಂದ ಕೂಡಿರುತ್ತದೆ. ನಾಡ ವೈದ್ಯ ಮತ್ತು ಆಯುರ್ವೇದಗಳಲ್ಲಿ ಉನ್ಮತ್ತ ಬೀಜದಿಂದ ತಯಾರಿಸಿದ ಮದ್ದನ್ನು ಗರ್ಭಪಾತಕ್ಕೆ ಕೊಡುತ್ತಾರೆ. ಅಷ್ಟೇ ಅಲ್ಲ. ಕುಟ್ಟಿದ ಬೀಜವನ್ನು ಧೂಮಪಾನ ಮತ್ತು ಅಫೀಮು ಗಾಂಜಾಗಳಿಗೂ ಬಳಸುವುದುಂಟು. ಇದರ ಮತ್ತಿನ ರುಚಿಯುಂಡವರು ಅದರ ಗೀಳಿನಿಂದ ಬಿಡುಗಡೆಯಾಗುವುದು ಕಷ್ಟ. ಹೀಗೆ ಅಸಂಖ್ಯ ಸಸ್ಯ ಜೀವಿಗಳು ಹೂದುಂಬಿ ಅರಳಿದರೆ, ಇವುಗಳಿಂದ ಅಸಂಖ್ಯ ಕೀಟ, ಪ್ರಾಣಿ ಜೀವಿಗಳ ಬಾಳಿಗೆ ಆಧಾರವಾಗಿವೆ. ಅದೆ ಪ್ರಕೃತಿಯ ವೈಶಿಷ್ಟ್ಯ. ಇಂತಹ ಕಾಡು ಹೂವುಗಳ ಉಪಯೋಗ, ಮಹತ್ವವನ್ನು ಅರಿಯದ ಎಷ್ಟೋ ಮುಗ್ಧ ಜನ ತಿಳುವಳಿಕೆ ಹೀನರಾಗಿ ಹಲವಾರು ಕಾಡು ಹೂವುಗಳನ್ನು ಕಸಕ್ಕಿಂತ ಕೀಳಾಗಿ ಕಾಣುತ್ತಾರೆ. ಆದರೆ ಪ್ರಕೃತಿಯ ಹೂವುಗಳು ಯಾರಿಂದಲೂ ಏನನ್ನೂ ಬಯಸದೆ ತಮ್ಮ ಸೌಂದರ್ಯಕ್ಕೆ ತಾವೇ ಅರಳುತ್ತವೆ. ಇದನ್ನು ಡಿ.ವಿ.ಜಿ.

"ಅರಣ್ಯಕದ ಪುಷ್ಪಗಳ ಮೂಸುವವರಾರು ?
ಆರಿಹರು ಪತಗದುಡುಪನು ಹುಡುಕಿ ಮೆಚ್ಚಲ್ ?
ಬೇರೊಬ್ಬರೆಣಿಕೆಯಿಲ್ಲದೆ ಪ್ರಕೃತಿ ತನಗೆಂದೆ
ಸ್ವಾರಸ್ಯವೆಸಗುವಳೋ ಮಂಕುತಿಮ್ಮ"23 (ವಚನ–566)

ಇಲ್ಲಿಯ ಕಾಡು ಹೂವು ಮತ್ತು ಚಿಟ್ಟೆಗಳ ಮೇಲಿನ ಪ್ರಶ್ನೆಗಳು ಸಹಜವಾದವು. ಪ್ರಕೃತಿಯಲ್ಲಿ ಸರ್ವ ಜೀವಿಗಳ ಸೃಷ್ಟಿಯು ಒಂದು ಇನ್ನೊಂದರ ಉಪಕಾರ ಉಪಯೋಗಕ್ಕಾಗಿ ಸೃಷ್ಟಿಯಾಗುವುದು ಪ್ರಕೃತಿಯ ನಿಯಮ. ಈ ಮಾತಿಗೆ ಆಹಾರ ಸರಪಳಿ ಉಪಯೋಗಕ್ಕಾದರೆ, ಇದರಿಂದ ಆರೋಗ್ಯ (ಔಷಧಿ, ವೈದ್ಯ ಪದ್ಧತಿಗೆ ಸಹಕಾರಿಯಾಗುವ ಜೀವಿಗಳು) ಸರಪಳಿ ಏರ್ಪಡುವುದು ಉಪಕಾರ ಎನ್ನುವುದನ್ನು ಅರಿಯಬೇಕು. ಆದರೆ ಇದನ್ನರಿಯದಿರುವ ಜನರೇ ಜಾಸ್ತಿಯಾಗಿದ್ದಾರೆ. ಆದ್ದರಿಂದಲೇ ನಮ್ಮ ಜನಗಳು ತಿರಸ್ಕಾರದಿಂದ ಕಾಣುವ ಕಾಡುಹೂವುಗಳನ್ನು ಕವಿಗಳು ಪ್ರಶಂಸಿಸುತ್ತ ಪ್ರಕೃತಿಯ ನೈಜ ಸೃಷ್ಟಿ, ಸೌಂದರ್ಯ, ಮಹತ್ವವನ್ನು ಕಾವ್ಯಕಟ್ಟಿ ಸಹೃದಯ ಓದುಗರಿಗೆ ಅರಿವಿನ ತಿಳಿ ಲೇಪಿಸುವಂತೆ ಮಾಡಿದ್ದಾರೆ. ಅಂತಹ ಪದ್ಯಗಳಲ್ಲಿ ಡಿ. ಎಸ್. ಕರ್ಕಿಯವರ 'ಹಳ್ಳಿಯ ಹೂಗಳು' ಒಂದು. ಈ ಪದ್ಯ ಕಾಡು ಹೂಗಳನ್ನೆ ಹಳ್ಳಿ ಹೂಗಳೆಂದು ಕರೆದು, ಹಳ್ಳಿಯಲ್ಲಿ ಹೆಚ್ಚಾಗಿ ಸಿಗುವ ಹಲವು ಹೂಗಳ ಜೊತೆ ಕವಿ ಸಂವಾದಗೊಳಿಸುತ್ತಾರೆ.

"ಚೊಕ್ಕ ನಗೆ ತುಂಬಿರುವ
ಚಿಕ್ಕ ತುಂಬೆಯ ಹೂವೆ
ಚಿಕ್ಕೆ ನಗಬಹುದೇನು
ನಿನ್ನ ಹಾಗೆ ?
ಹಳ್ಳದಂಚಿನಲಿ ಗೊಂ
ಚಲು ಕುಣಿವ ಕಣಿಗಿಲೆಯೆ
ಯಾರು ಕುಂಚವೆಳೆಯೆ
ಬಣ್ಣ ತಳೆದೆ ಹತ್ತಿರದ ಎರೆ ಹೊಲದಿ

ಬಿರಿದ ಹತ್ತಿಯ ಹೂವೆ
ಮದುಮಗಳ ಪತ್ತಲವ
ನುಟ್ಟ ಗರತಿ ಅ
.....
ಉಂಡೆ ಪುಂಡಿಯ ಹೂವೆ ?
ಒರಟು ನಲ್ಲಿನ ನಗಿಸು
ವಂಥ ಮುಗುದೆ ಅ
ಪಚ್ಚ ಪದಕವ ಹೋಲ್ವ
ದಳ ದಳದಿ ಬಂಗಾರ
ನಗೆ ಮುಗುಳ ತೆರೆವ
ಹಾಗಲದ ಹೂವೇ?"24 (ಹಳ್ಳಿಯ ಹೂಗಳು)

ಒಂದೊಂದು ಹೂವಿಗೂ ಒಂದೊಂದು ಶೀಲಗುಣಗಳನ್ನು ತೊಡಿಸುತ್ತಾ, ಕವಿ ಕಾವ್ಯದ ಮೂಲಕವೇ ಮನುಷ್ಯರ ಹೃದಯ ಮನಸ್ಸಿಗೆ ಹೂ ಗಿಡಗಳ ಮೇಲಿನ ಪ್ರೀತಿ, ತಿಳುವಳಿಕೆಗಳನ್ನು ತುಂಬಿದ್ದಾರೆ. ಈ ಕವಿಗೆ ಹಳ್ಳದಂಚಿನಲ್ಲಿ ಹುಟ್ಟಿ ಬೆಳೆದು ಬಿಟ್ಟ ಕಣಿಗಿಲೆ ಹೂವಿನ ಬಣ್ಣ ಆಕರ್ಷಿಸಿದರೆ, ಇದೇ ಕಣಿಗಿಲೆ ಬೆಟ್ಟ ಬಂಡೆಯ ಮೇಲೆ ಹುಟ್ಟಿ, ಮರವಾಗಿ ಬಿಟ್ಟ ಹೂವನ್ನು ಕಂಡ ಜಿ. ಎಸ್. ಶಿವರುದ್ರಪ್ಪನವರಿಗೆ 'ಬಂಡೆ ಹೂ' ವಾಗಿ ಕಂಡಿದೆ.

"ಬೆಟ್ಟ ಬಂಡೆಯ ಮೇಲೆ ಕಲ್ಲೆ ಮರವಾದಂತೆ
ದೇವಗಣಗಲೆ ಮರವು ನಿಂತು ಮುಗಿಲಿಗೆ ಹೂವಿ
ನಾರತಿಯೆತ್ತುತಿದೆ?"25 (ಬಂಡೆ ಹೂವು)

ಒಂದಲ್ಲಾ ಒಂದು ತರದಲ್ಲಿ ಪ್ರತಿಯೊಬ್ಬ ಮನುಷ್ಯರಲ್ಲೂ ಗಟ್ಟಿತನ ಮತ್ತು ಮೃದುತ್ವಗಳು ಪ್ರಕೃತಿದತ್ತವಾದವೆಂಬುದನ್ನು ಹೇಳಲು ಇಲ್ಲಿ ಬಂಡೆ ಮತ್ತು ಹೂವುಗಳನ್ನು ಸಾಂಕೇತಿಕವಾಗಿ ಬಳಸಲಾಗಿದೆ. "ದೇವಗಣಗಲೆ ಮರವು ಮುಗಿಲಿಗೆ ಹೂವಿನಾರತಿಯನೆತ್ತಿದೆ". ಎನ್ನುತ್ತಾ ಹೂವಿನ ಮೃದುತ್ವ ಶೃಂಗಾರ, ಶುಭಮಂಗಳದ ಗುಣದ ಶ್ರೇಷ್ಠತೆಯನ್ನು ಹೇಳಲಾಗಿದೆ. ಬಂಡೆ ಮತ್ತು ಹೂವಿನ ಬೆಸುಗೆಯಿಂದ, ಈ ಬಂಡೆಯೇ ಅಲ್ಲಿ ಮರದ ತುದಿಯಲಿ ಹೂವಾಗಿ ಅರಳಿಹುದು' ಎಂದು ಬಂಡೆಗೂ ಹೂವಿನ ಜೀವ ತುಂಬಲಾಗಿದೆ. ಇದು ಸಸ್ಯ ಸಂಸ್ಕೃತಿಯ ಒಂದು ಭಾಗ. ಇದೇ ಕವಿ ಮಲ್ಲಿಗೆ ಹೂವನ್ನು ಕಂಡು ರಸ, ಭಾವಗಳಿಂದ ಹಾಡುತ್ತಾರೆ.

"ನೋಡು ಇದೊ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರ ಗಿಡದಿಂ
ದೆಂತು ಮೂಡಿತೊ ಬೆಳ್ಳಗೆ"26 (ಮಲ್ಲಿಗೆ)

ಮುಕ್ತಕದಂಥ ಈ ಮಾತು ವ್ಯಂಗ್ಯಾರ್ಥವನ್ನು ತುಂಬಿಕೊಂಡು ಅಶ್ಚರ್ಯಭಾವದಿಂದ ಕೂಡಿದೆ. ಮಲ್ಲಿಗೆ ಹೂವು ತನ್ನ ಚೆಲುವು, ಒಲವು, ಮುಗ್ಧ, ಮೌನದ ಬಿಳಿಯ ಬಣ್ಣದಿಂದ, ಕುಶಲ ಕಲೆಯಿಂದುದಿಸಿದೆ ಎನ್ನುತ್ತಾರೆ. ಇದು ಅದರ ಗುಣ, ಸ್ವಭಾವವಾಗಿ, ಪ್ರತಿಯೊಂದು ಸಸ್ಯ ಜೀವಿಗಳ ಪ್ರತಿ ಹಂತದ ಬೆಳವಣಿಗೆಯಲ್ಲೂ ಅವುಗಳ ಜೀವನದ ಸಾಂಸ್ಕೃತಿಕ ನಡೆ ಅವುಗಳೊಳಗೆ ಅವಿರ್ಭವಿಸಿಕೊಂಡಿದೆ. ಇದರಿಂದಾಗುವ ಮಾನವನ ಬಾಳಿನ ಪರಿಣಾಮ, ಅವನ ಬದುಕನ್ನು ಸೂಪ್ತವಾಗಿ ಹಸನುಗೊಳಿಸುತ್ತದೆ. ಮಲ್ಲಿಗೆಯ ಮೌನ ಗುಣದಿಂದಾದ ಈ ಬಾಳಿನ ಪರಿಶುದ್ಧತೆಯನ್ನು ಕಂಡ ಕವಿ ಆಶ್ಚರ್ಯಪಡುತ್ತಾರೆ.

"ಹರಿದ ಮನವನು ಹಿಡಿದು ಒಂದೆಡೆ
ನಿಲಿಸಿ ತೊಳೆದಿದೆ ಹೂವಿದು
ಚೆಲುವು ಬಾಳನು ಹಸನುಗೊಳಿಸುವ
ಅಚ್ಚರಿಯ ಪರಿ ಎಂಥದು"27 (ಮಲ್ಲಿಗೆ)

ಇಂತಹ ಅಸಂಖ್ಯ ಹೂವುಗಳಿಗೆ ಮಾಸ್ತಿ 'ಬಾಳಿರಿ ಬೆಳೆಯಿರಿ ಬಹುಬಹುಕಾಲ' ಎಂದು ಹಾರೈಸುತ್ತಾರೆ. ಈ ಹೂವುಗಳಿಂದ ಸುಖಾನಂದಗಳನ್ನು ಅನುಭವಿಸುವ 'ಆತ್ಮದ ಪುಣ್ಯ' ಸದಾ ಸಿಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಿಮ್ಮನ್ನು ನೋಡುವ ಪುಣ್ಯವನ್ನು ಕಳೆದುಕೊಳ್ಳುವುದಿಲ್ಲ ಎನ್ನುವುದು ಕವಿಯ ಆತ್ಮ ವಿಶ್ವಾಸ.

"ಬೆಳೆಯಲಿ ನಿಮ್ಮನು ನೋಡುತೆ ನಲಿವೀ
ಕಣ್ಣ ಪುಣ್ಯ ಇದನೆಂದಿಗೂ ಮಾಣೆನು"28 (ಕಾಡು ಹೂಗಳು)

ಇಲ್ಲಿ ಸೌಂದರ್ಯವನ್ನು ಸ್ಪರ್ಶಿಸಿ ಅಥವಾ ಅಧಿಕಾರದಿಂದ ಅನುಭವಿಸುವ ಸುಖಕ್ಕಿಂತ ದೃಷ್ಟಿಗಮ್ಯವಾದ ಆನಂದವೇ ಶ್ರೇಷ್ಠ, ಪುಣ್ಯ ಎಂಬ ತಿಳುವಳಿಕೆಯಿದೆ. ಇದು ಹೂವಿನೊಂದಿಗಿರುವ ಭಾವನಾತ್ಮಕ ಸಂಬಂಧ. ಹೂವುಗಳ ಶಾಂತಿಯುತವಾದ ಈ ಅಸಾಮಾನ್ಯ ಶಕ್ತಿಗೆ ಸ.ಪ. ಗಾಂವಕಾರ್ ಅವರು

"ಓಂ ಕಾರವು ತಾ ಹೂಂಕರಿಸುತಲಿದೆ
ಅಂಕೆಯು ತಪ್ಪಿದೆ ತನ್ವಿಯಲಿ
ಸಂಕಟ ಕಾಲದ ವೆಂಕಟರಮಣನ
ಸಂಕಲೆಗಳಚುತ ಸಾಸದಲಿ"29 (ವನಪುಷ್ಪ)

ಈ ಕಾವ್ಯ ಕಲ್ಪನೆ ವಿಶಿಷ್ಟವಾದದ್ದು. ಜಗತ್ತಿನ ಸರ್ವ ಸಂಗೀತಗಳಲ್ಲೆಲ್ಲ ಶ್ರೇಷ್ಠವಾದದ್ದು ಶಂಕನಾದದ ಓಂಕಾರ. ಇದು ಕೊಡುವ ಆನಂದ, ಸುಖ, ಶಾಂತಿ, ನೆಮ್ಮದಿಗಳು ಜೀವನದ ಸರ್ವ ಸುಖಗಳು. ಇಂತಹ ಓಂಕಾರವು ಪ್ರಕೃತಿಯ ವನ ಪುಷ್ಪಗಳ ಸೌಂದರ್ಯಕ್ಕೆ ಹತೋಟಿ ತಪ್ಪಿದೆ. ಅಲ್ಲದೆ ಕಷ್ಟಗಳಲ್ಲಿ ದೇವರ ಮೊರೆಹೋಗುವ ನಂಬಿಕೆ, ಸಂಪ್ರದಾಯಗಳ ಬೇಡಿಯನ್ನು ಬಿಡಿಸುವ ಸಾಹಸವನ್ನು ಈ ವನ ಪುಷ್ಪಗಳು ಮಾಡುತ್ತವೆ ಎನ್ನುವಲ್ಲಿ ಮಾನವನಿಗೆ ತನ್ನ ಜೀವನ ದರ್ಶನವನ್ನು ಕಂಡು ಕೊಳ್ಳುವ ಪ್ರಕೃತಿಯ ದರ್ಶನವಿದೆ. ಇದು ಪ್ರಕೃತಿ ಪ್ರಜ್ಞೆಯಿರುವ ಕಾವ್ಯ ಧ್ವನಿ.

3. ಮಾಂಸಹಾರಿ ಸಸ್ಯಗಳ ಆಹಾರ ಸಂಸ್ಕೃತಿ:

ಪ್ರಕೃತಿಯಲ್ಲಿ ಹೂವುಗಳ ಮಕರಂದದಂತೆ ಹೂವುಗಳು ಹಲವು ಕ್ರಿಮಿ, ಕೀಟ, ದುಂಬಿಗಳ ಜೀವಕ್ಕೆ ಪೂರಕವಾದ ಆಹಾರವಾದರೆ, ದುಂಬಿಗಳ ಜೀವ ರಕ್ಷಿಸುವ ಕೆಲವು ಹೂವುಗಳೆ ಪ್ರಾಣಹೀರುತ್ತವೆ. ಅವುಗಳಲ್ಲಿ ಪಿಚ್ಚರ್, ಡ್ರಸಿರಾ ಮುಂತಾದ ಹೂವುಗಳು ಈ ವಿಶಿಷ್ಟ ಗುಣ ಹೊಂದಿವೆ. ಇವುಗಳು ತಮ್ಮ ಸುವಾಸನೆಯಿಂದಲೇ ಕ್ರಿಮಿ ಕೀಟಗಳನ್ನು ಸೆಳೆದು ಕುಳಿತ ಕೀಟಗಳನ್ನು ಹೂವಿನ ಪೊಕಳೆಗಳಿಂದ ಅಥವಾ ಅಂಟು ದ್ರವದಿಂದ ಬಂಧಿಸಿ ಜೀವದ್ರವ ಹೀರಿ ಪ್ರಾಣ ತೆಗೆದು ಬಿಡುತ್ತವೆ. ಇವೆಲ್ಲ ಸಸ್ಯ ಸಂಸ್ಕೃತಿಯ ಕೆಲವು ಕ್ರಿಯಾಗುಣಗಳು. ಇದು ಡ್ರಸಿರಾ ಹೂವಿನ ಕ್ರಿಯೆಯನ್ನು ಕುರಿತ ಒಂದು ಪದ್ಯದ ತುಣಕಿನಿಂದ ಸ್ಪಷ್ಟವಾಗುತ್ತದೆ.

"ಅಹಂಕಾರಿ ನೊಣಗಳ
ಹಾಡು ಪಾಡು
ಬದುಕುಳಿದರೆ ತಾನೆ
ಕುಳಿತೊಡನೆ ಕೊರಳಿಡಿದು
ದಿಗ್ಬಂದಿಸಿ ರಕ್ತ ಹೀರುತ್ತದೆ
ಡ್ರಸಿರಾ ಹೂವು"30 (ಡ್ರಸಿರಾ ಹೂವು)

ಪ್ರಕೃತಿಯ ಅಸಾಮಾನ್ಯ ಜೀವ ಸೃಷ್ಟಿಗಳಲ್ಲಿ ಪ್ರಕೃತಿಯೇ ತನ್ನ ಸಮತೋಲನ ಸ್ಥಿತಿಗೆ ತನ್ನಲ್ಲೇ ಸೃಷ್ಟಿಸಿಕೊಂಡ ಜೀವಿಹಾನಿಯ ನಿಯಮಗಳಲ್ಲಿ ಡ್ರಸಿರಾ ಹೂವುಗಳಂತಹ ಗುಣವು ಒಂದು. ಇವುಗಳು 'ದುಂಬಿ, ಕೀಟ'ಗಳನ್ನು ಹಾನಿ ಮಾಡುತ್ತವೆ ಎಂಬುದನ್ನು ನಂಬುವುದು ಕಷ್ಟ. ಆದರೆ ಪ್ರಕೃತಿಯ ಸೂಕ್ಷ್ಮತೆಯನ್ನು ಕಣ್ಣು ಬಿಟ್ಟು ನೋಡಿ ಅರಿತಾಗ ಡ್ರಸಿರಾದಂತ ಹೂವುಗಳ ಮರ್ಮ ಅರ್ಥವಾಗುತ್ತದೆ. ಗಟ್ಟಿತನದಲ್ಲಿ ಮೃದುತ್ವವಿರುತ್ತದೆ ಎಂಬುದನ್ನು ಹಿಂದೆ ಪರಿಶೀಲಿಸಿದಂತೆ ಮೃದುತ್ವದಲ್ಲಿಯೂ ಗಟ್ಟಿತನದ ಕ್ರೌರ್ಯವಿರುವುದನ್ನು ಈ ಪದ್ಯ ತಿಳಿಸುತ್ತದೆ. ಮೇಲೆ ಪ್ರಸ್ತಾಪಿಸಿದ ಕವಿಗಳು ಕಂಡ ನಾನಾ ರೀತಿಯ ಹೂವುಗಳ ವಾಸನೆಯ ಕಂಪು, ಕೆಲವು ಹೂವುಗಳ

ದುರ್ಗಂಧ ಇವೆಲ್ಲಾ ಗಿಡ, ಮರ, ಬಳ್ಳಿಗಳ ಪ್ರಕೃತಿದತ್ತ ಜೀವನ ನಡವಳಿಕೆಗಳು ಇವುಗಳನ್ನೆ "ಸಸ್ಯ ಸಂಸ್ಕೃತಿ"ಯ ಗುಣ ನಡತೆಯ ಭಾಂಧವ್ಯವೆನ್ನುವುದು.

ನಿಸರ್ಗದಲ್ಲಿ ಮಾಂಸಹಾರಿ ಪ್ರಾಣಿಗಳಂತೆ ಕೆಲವು ಕೀಟ ಭಕ್ಷಕ ಸಸ್ಯಗಳು ಇರುವುದು ಆಶ್ಚರ್ಯವೆನಿಸಿದರೂ ಸತ್ಯ ಸಂಗತಿಯಾಗಿದೆ. "ಭೂಮಿಯಲ್ಲಿ ಬೇರಿಳಿಸುವ ಸಸ್ಯ ಪ್ರಾಣಿಯಂತೆ ಚಲಿಸಲಾರದು, ನಿಜ. ಆದರೆ ಚಲಿಸುವ ಪ್ರಾಣಿಯನ್ನು ಹಿಡಿದು ತಿನ್ನುವ ಅನೇಕ ಸಸ್ಯಗಳೂ ಇವೆ. ಇವೇ 'ಮಾಂಸಹಾರಿ ಸಸ್ಯಗಳು' ಇವೆಲ್ಲವೂ ಬಹುತೇಕ ಕೀಟ ವರ್ಗದ ಪ್ರಾಣಿಗಳನ್ನೇ ಹಿಡಿದು ತಿನ್ನುವುದರಿಂದ ಇವನ್ನು 'ಕೀಟ ಭಕ್ಷಕ ಸಸ್ಯಗಳು' ಎಂದು ಕರೆಯುವುದೇ ಉತ್ತಮ. ಇಡೀ ವಿಶ್ವದಲ್ಲಿ ಸುಮಾರು 450 ಕೀಟ ಭಕ್ಷಕ ಸಂಕುಲಗಳಿವೆ. ಇವುಗಳಲ್ಲಿ ಸುಮಾರು 40 ಸಂಕುಲಗಳು ನಮ್ಮ ದೇಶದ ವಿವಿದೆಡೆಗಳಲ್ಲಿ ಕಾಣಸಿಗುತ್ತವೆ"31.

ಈ ವಿವರಣೆಯನ್ನು ಗಮನಿಸಿದರೆ ಪ್ರಕೃತಿಯ ಸಮತೋಲನಕ್ಕಾಗಿ ನಿಸರ್ಗ ನಿಯಮಗಳೇ ರೂಪುಗೊಂಡು ಅವು ವಿರಾಮವಿಲ್ಲದಂತೆ ಪ್ರಕೃತಿಯಂತ್ರ ಕಾರ್ಯಶೀಲವಾಗಿರುವುದು ತಿಳಿಯುತ್ತದೆ. ಈ ಯಂತ್ರದ ತಂತ್ರವೇ ವಿಸ್ಮಯವಾದದ್ದು. ಇದಕ್ಕೆ ಸಿಕ್ಕ ಜೀವಿಗಳು ಒಂದಕ್ಕೊಂದು ಹೇಗೆ ನಿಯಂತ್ರಣಕ್ಕೊಳಪಟ್ಟಿವೆ ಎನ್ನುವುದಕ್ಕೆ ಅರಣ್ಯದ ಸಸ್ಯ, ಕೀಟ, ಪ್ರಾಣಿ ಮುಂತಾದ ಜೀವಿಗಳ ಬಂಧದ ಈ ಬೆಳವಣಿಗೆಯ ಸರಪಳಿಯೇ ಸ್ಪಷ್ಟಪಡಿಸುತ್ತದೆ.

4. ಗಿಡ–ಮರಗಳ ಔಷಧಿ ಗುಣವುಳ್ಳ ಬಹುಪಯೋಗಿ ಸಂಸ್ಕೃತಿ:

ಪ್ರಕೃತಿಯ ಗರಿಕೆಯಂತಹ ಹುಲ್ಲುಗಳಿಂದ ದೊಡ್ಡ ದೊಡ್ಡ ಮರಗಳವರೆಗಿನ ಸಸ್ಯ ಪರಿಸರವನ್ನು ಮನುಷ್ಯ ತನ್ನೆಲ್ಲ ಅವಶ್ಯಕತೆಗಳನ್ನು ಮೀರಿ ಬಳಸಿಕೊಂಡಿದ್ದಾನೆ. ಅವನಿಗೆ ಪ್ರಕೃತಿಯಲ್ಲಿ ಅನುಪಯೋಗಿ ಸಸ್ಯವೆಂಬುದು ಇಲ್ಲವೆಯಿಲ್ಲ. ಕೊನೆ ಪಕ್ಷ ಯಾವುದೇ ಉಪಯೋಗಕ್ಕೆ ಬಾರದೆಯಿದ್ದರೂ ಅದು ಒಂದಲ್ಲ ಒಂದು ಔಷಧಿಗಾಗಿ ಬಳಕೆಯಾಗುತ್ತದೆ. ಅಸಂಖ್ಯ ಸಸ್ಯ ಜಾತಿಯೊಳಗೆ ಮಾನವನಿಗೆ ಎಷ್ಟೋ ಸಸ್ಯಗಳ ಉಪಯೋಗ, ಅವುಗಳ ಮಹತ್ವ ತಿಳಿದೇ ಇಲ್ಲವೆಂಬುದು ಅತಿಶಯೋಕ್ತಿಯಲ್ಲ. ನಾವು ಪ್ರಕೃತಿ ಸೂಕ್ಷ್ಮತೆಯನ್ನು ಅದರ ರಹಸ್ಯವನ್ನು ಅರಿಯಲು ಹೋಗುವುದಿಲ್ಲ. ಯಾಕೆಂದರೆ ಅದರ ಮಹತ್ವ ಅರಿವಿಗೆ ಬರುವುದು ತಡವಾಗುವುದರಿಂದ ಮತ್ತು ಅದನ್ನು ನೋಡುವ ತಾಳ್ಮೆಯೂ ನಮಗಿಲ್ಲ ಎನ್ನುವುದಕ್ಕೆ ಕರ್ವಾಲೋ ಕಾದಂಬರಿಯ ಲೇಖಕ ತೇಜಸ್ವಿ ಮತ್ತು ಕರ್ವಾಲೋ ಅವರ ಸಂಭಾಷಣೆ ಗಮನಾರ್ಹವಾಗಿದೆ. ನಿರೂಪಕ "ಯಾಕೋ ಮಲೆನಾಡು, ವ್ಯವಸಾಯ ಎಲ್ಲ ಬೇಸರ ಬರತೊಡಗಿದೆ ಸಾರ್ ಎಂದಾಗ; ಕರ್ವಾಲೋ ಅವರು ಗೊತ್ತಾಗುತ್ತೆ, ಸ್ವಲ್ಪ ನಿಧಾನ, ಕಣ್ಣು ಬಿಟ್ಟು ನೋಡುವುದನ್ನು ಕಲೀಬೇಕು ನಾವು"32 ಎನ್ನುತ್ತಾರೆ. ಅಂದರೆ ಪ್ರಕೃತಿಯ ಸರ್ವ ಜೀವ, ನಿರ್ಜೀವಗಳ ಚಲನ ವಲನ, ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ನೋಡಿ, ಗ್ರಹಿಸಿ ತಿಳಿದು ಅರ್ಥಮಾಡಿಕೊಳ್ಳುವುದನ್ನು ಕಲಿಯಬೇಕೆಂದು ಈ ಮಾತಿನ ಅರ್ಥ. ಈ ಗುಣವಿರುವುದು ಮಂದಣ್ಣನಿಗೆ ಮಾತ್ರ ಎಂಬುದು ಕಾದಂಬರಿಯಲ್ಲಿ ಅವನ ಪಾತ್ರ ಪರಿಶೀಲನೆಯಿಂದ ತಿಳಿಯುತ್ತದೆ. ಸಾಮಾನ್ಯವಾಗಿ ಇಂತಹ ಗುಣ ಸ್ವಭಾವಗಳು ಗುಡ್ಡಗಾಡು, ಬುಡಕಟ್ಟು ಜನರಿಗೆ, ಹಳ್ಳಿ ಜನರಿಗೆ ಮತ್ತು ಪ್ರಕೃತಿ ಸಂಚಾರಿ ವಿಜ್ಞಾನಿಗಳಿಗೆ ಮಾತ್ರ ತಿಳಿಯಲು ಸಾಧ್ಯವಾಗಿದೆ. ಇದಕ್ಕೆ ಪ್ರೀತಿ, ತಾಳ್ಮೆ, ಹೆಚ್ಚಿನ ಒಡನಾಟ ಮುಖ್ಯವಾದದ್ದು. ಈ ಎಲ್ಲ ಮಾಹಿತಿಗಳನ್ನುಳ್ಳ ಮಾರ ಕಾಡಿನ ಪ್ರತಿಗಿಡ, ಮರ, ಬಳ್ಳಿಗಳನ್ನು ಅರಿತು ಅವುಗಳಿಂದಾಗುವ ಔಷಧಿಯ ಮಹತ್ವವನ್ನು ಅರಿತಿದ್ದ. ಇದನ್ನು ತೇಜಸ್ವಿ ತಮ್ಮ 'ಮೂಲಿಕೆ ಬಳ್ಳಿಯ ಸುತ್ತ' ಕತೆಯಲ್ಲಿ ಹಿಡಿದಿಟ್ಟಿದ್ದಾರೆ. ಇದರಲ್ಲಿ ಸಣ್ಣ, ಕಾಡುಬಳ್ಳಿಗಳನ್ನೆಲ್ಲ ಕಿತ್ತು ಹೊರೆ ಕಟ್ಟಿ ತಂದು ಅವುಗಳನ್ನು ದಾರದಂತೆ ನುಲಿಯುತ್ತಿದ್ದಾಗ ಒಂದು ಬೀಳನ್ನು ಕಂಡ ಮಾರ ಸಣ್ಣನನ್ನು ಬೈಯುತ್ತಾನೆ.

ಆಗ ಸಣ್ಣ ಇಂತಹ ಬೀಳು ಕಾಡಿನಲ್ಲಿ ಬೇಕಾದಷ್ಟು ಇವೆ ಎಂದೊಡನೆ, ಮಾರ ತೋರಿಸು ನಡಿ ಎಂದು ಕಾಡಿಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ನಡೆದ ಸಣ್ಣ, ಮಾರ, ಲೇಖಕರ ಸಂಭಾಷಣೆ ಮತ್ತು ಕ್ರಿಯೆಗಳ ನಿರೂಪಣೆ ಇದು.

"ಸಣ್ಣಪ್ಪ ಮಾರನಿಗೆ ಆ ಬಳ್ಳಿಯನ್ನು ತೋರಿಸಿದ ಕೂಡಲೆ ಮಾರ ಅದನ್ನು ತೆಗೆದು ಲಗುಬಗೆಯಿಂದ ಪಕ್ಕದಲ್ಲಿದ್ದ ಚಿಕ್ಕ ಮರ ಒಂದಕ್ಕೆ ಸುತ್ತಿ ಕಟ್ಟಿ ಬಿಟ್ಟ ಅ ಮಾರನ ವ್ಯವಹಾರ ನೋಡಿ ನನಗೆ ಆಶ್ಚರ್ಯ ಆಯ್ತು" ಯಾಕೋ "ಮಾರ ಆ ಬೀಳನ್ನು ಗಿಡಕ್ಕೆ ಗಂಟು ಹಾಕ್ತಿದ್ದೀಯ" ಎಂದು ಕೇಳಿದೆ.
"ಕಳ್ಮುಂಡೇದು! ಅಲ್ಲಿ ಬಿದ್ದಿರ್ಲಿ ಅಂತ" ಎಂದ
"ಯಾಕೋ ಅದೆಲ್ಲಿಗೆ ಓಡೋಗ್ತದೆ!

“ಅಯ್ಯಾ ಈ ಬೀಳಿನ ವಿಚಾರ ನಿಮಗೆ ಗೊತ್ತಿಲ್ಲ. ಇದು ಬೇಕಾದಾಗ ಬೇಕಾದೋರಿಗೆ ಸಿಗಬಾರ್ದು ಇಂತ ಒಬ್ಬ ರುಸಿ ಸಾಪ ಇದೆ. ಬೇಕೂಂತ ಹುಡುಕಿದರೆ ತಲೆ ತಪ್ಪಿಸಿಕೊಂಡು ಬಿಡ್ತದೆ. ಪ್ರಾಣ ಹೋದರೂ ಸಿಕ್ಕೋದಿಲ್ಲ. ಅದಕ್ಕೆ ಕಣ್ಣಿಗೆ ಕಂಡಾಗ ಇದನ್ನು ಹಿಡಿದು ಯಾವುದಾದರೂ ಗಿಡಕ್ಕೆ ಕಟ್ಟಿಬಿಡಬೇಕು, ಬಿದ್ದಿರು ಅಲ್ಲಿ ಅಂತ”33.

ಈ ನಾಟಿ ಔಷಧಿ ಬಗ್ಗೆ ತಿಳಿದುಕೊಂಡಿರುವ ಮಾರನಂತಹ ಹಳೆ ತಲೆಮಾರಿನ ಜನಕ್ಕೆ ವೈಜ್ಞಾನಿಕ ತಿಳುವಳಿಕೆಯಿಲ್ಲ. ಆದರೆ ಇವರು ತಾವು ತಿಳಿದುಕೊಂಡ ಪ್ರಕೃತಿಯ ಗಿಡ, ಮರ, ಪ್ರಾಣಿ, ಪಕ್ಷಿಗಳ ಬಗ್ಗೆ ಮತ್ತು ಅವುಗಳ ಮೇಲಿಟ್ಟಿರುವ ನಂಬಿಕೆಗಾಗಿ ತಮ್ಮದೇ ಕಲ್ಪಿತ ಕಟ್ಟುಕತೆಗಳನ್ನು ಆಯಾ ಜೀವ, ಸಂದರ್ಭ, ಸನ್ನಿವೇಶಗಳಿಗೆ ತಕ್ಕನಾಗಿ ಕಟ್ಟಿ ಬೆಳೆಸಿಕೊಂಡು ಬಂದಿರುವುದು ವಿಶೇಷವಾಗಿದೆ. ಮಾರ ತನ್ನ ಔಷಧಿಯ ಬಗ್ಗೆ ನೀಡಿದ ಇನ್ನೊಂದು ಸ್ವಾರಸ್ಯ ಕತೆಯಿದು.

“ಒಮ್ಮೆ ಮಾರ ಕಾಡಿಗೆ ಕಳಲೆ ಕಡಿಯಲು ಹೋಗಿದ್ದನಂತೆ. ಬಿದಿರಿನ ಸಂದಿಯೊಳಗೆ ಕೈ ಹಾಕಿ ಕಳಲೆ ಕಡಿಯುತ್ತಿರಬೇಕಾದರೆ ಕೈಗೆ ಕತ್ತಿತಾಗಿ ಬಲವಾದ ಗಾಯ ಆಯ್ತು. ರಕ್ತನಾಳವೇ ಕತ್ತರಿಸಿ ಹೋಗಿ ರಕ್ತ ಚಿಲುಮೆಯಂತೆ ನುಗ್ಗಿತು. ಪಕ್ಕದಲ್ಲಿದ್ದವರೆಲ್ಲ ಗಾಬರಿಯಾಗಿ ರಕ್ತ ಹೊರ ಚಿಮ್ಮುವುದನ್ನು ನಿಲ್ಲಿಸಲು ಯಾವುದೋ ಎಲೆ ತಂದು ಗಾಯದ ಮೇಲಿಟ್ಟು ಪಂಚೆ ಹರಿದು ಬ್ಯಾಂಡೇಜು ಮಾಡಿದರು. ಮಾರ ಗಾಯದ ಕೈ ಅಲುಗಾಡಿಸದೆ ಹಿಡಿದುಕೊಂಡು ಇಲಾಜು ಮಾಡಿಸಲು ಹುಲಿಹಂದಲು ದೊರೆ ಹತ್ತಿರ ಹೋದ. ದೊರೆ ಔಷಧಿ ಬಾಟ್ಲಿ, ಹತ್ತಿ, ಗಾಯಕ್ಕೆ ಹಾಕುವ ಪುಡಿ ಎಲೆ ರೆಡಿಮಾಡಿ ಮಾರನ ಗಾಯಕ್ಕೆ ಸುತ್ತಿದ್ದ ಬ್ಯಾಂಡೇಜ್ ಬಿಚ್ಚಿ ಗಾಯಕ್ಕೆ ಮುಚ್ಚಿದ್ದ ಎಲೆ ತೆಗೆದನಂತೆ; ಆಶ್ಚರ್ಯ! ಒಳಗೆ ಗಾಯವೂ ಇಲ್ಲ. ಗಾಯದ ಕುರುಹೂ ಇಲ್ಲ”34.

ಕೊನೆಗೆ ಆ ದೊರೆಗೆ ಆಶ್ಚರ್ಯವಾಗಿ ಮಾರನಿಗೆ ನನ್ನ ಇಡೀ ತೋಟ ಬರೆದುಕೊಡುತ್ತೇನೆ. ಈ ಎಲೆಯ ಗಿಡ ತೋರಿಸೆಂದು ಮಾರನೊಡನೆ ಕಾಡೆಲ್ಲಾ ಅಲೆದರೂ ಅವನು ಗೊತ್ತಿಲ್ಲವೆಂದು ತೋರಿಸುವುದಿಲ್ಲ. ಇದಕ್ಕೆ ಆ ಜನರು ಬೆಳೆಸಿಕೊಂಡು ಬಂದಿರುವ ಸಾಂಪ್ರದಾಯಿಕ ನಂಬಿಕೆಗಳೇ ಕಾರಣ. ಮಾರನ ಚಿಕಿತ್ಸೆಗೆ ಬಳಸಲ್ಪಟ್ಟ ಎಲೆ ಗಿಡದ ಪರಿಚಯ ‘ಹಸಿರು ಹೊನ್ನು’ ಕೃತಿಯಲ್ಲಿ ದೊರೆಯುತ್ತದೆ. ಅದರಲ್ಲಿ ಲೇಖಕರು ತಮ್ಮ ವಿದ್ಯಾರ್ಥಿನಿಗೆ ಮುಳ್ಳು ಚುಚ್ಚಿ ರಕ್ತ ಬಂದಾಗ ತಾವು ಮಾಡಿದ ಚಿಕಿತ್ಸೆ ಮತ್ತು ಔಷಧಿಗಿಡದ ವಿವರಣೆಯನ್ನು ಹೀಗೆ ಕೊಡುತ್ತಾರೆ:

“ಸಿಂಬಿಡಿಯಮ್ ಬೈಕಲರ್(Cymbidiumn Biclor)ನಮ್ಮ ಭಾಷೆಗಳಲ್ಲಿ ಇದಕ್ಕೆ ನಿರ್ದಿಷ್ಟವಾದ ಹೆಸರಿಲ್ಲ; ಮಂಗಳೂರಿನ ಕಡೆ ಮಾಲೆಹೂ ಎನ್ನುತ್ತಾರಂತೆ. ರಕ್ತ ಸ್ರಾವವನ್ನು ನಿಲ್ಲಿಸುವ ಗುಣ ಈ ಗಿಡದ ಎಲೆಗಳಲ್ಲಿದೆ”.
“ಇದನ್ನು ಯಾರು ಕಂಡು ಹಿಡಿದರು”?

“ಅಜ್ಜನ ವೈದ್ಯ ಯಾರೋ ಹೇಗೋ ಸ್ವಂತ ಅನುಭವದಿಂದ ಕಂಡು ಕೊಂಡು ತಮ್ಮ ಸಂತತಿಯಲ್ಲಿ ಮಾತ್ರ ಗುಟ್ಟಾಗಿರುವಂತೆ ಬಚ್ಚಿಟ್ಟು ಕೊಂಡಿದ್ದರು. ಈಚೆಗೆ ಅದು ಹೇಗೋ ಹೊರಕ್ಕೆ ಬಂದಿತು. ವೈದ್ಯರನ್ನೂ ವಿಜ್ಞಾನಿಗಳನ್ನು ಬೆರಗುಗೊಳಿಸಿತು. ರಕ್ತಸ್ರಾವವನ್ನು ತಡೆಯುವುದಕ್ಕೆ ನಮಗೆ ತಿಳಿದಿರುವ ಸಾಧನ ವೈಟಮಿನ್. ಕೆ. ಸಿಂಬಿಡಿಯಮ್ ಬೈಕಲರ್ ಇಂಥದೊಂದು ಅತ್ಯುತ್ತಮ ಔಷಧಿಯಾಗಿ ಒದಗಿ ಬರುವ ಸೂಚನೆಗಳಿವೆ”35

ಈ ಔಷಧಿ ಗಿಡದ ಹಸುರೆಲೆಗಳ ರಸ ಎಂತಹ ವಿಚಿತ್ರ ಗಾಯವಾಗಿದ್ದರೂ ಅದರ ರಕ್ತಸ್ರಾವವನ್ನು ನಿಲ್ಲಿಸುತ್ತದೆ. ಈ ರಸದಿಂದ ಉರಿಯಾಗಲಿ, ಬಾಧೆಯಾಗಲಿ ಆಗದೆ ಚರ್ಮ ಮತ್ತು ಮಾಂಸಖಂಡ ಮುಂತಾದ ಯಾವುದೇ ಭಾಗಕ್ಕೂ ತೊಂದರೆ ಉಂಟು ಮಾಡದಿರುವುದು ವಿಶೇಷವಾಗಿದೆ.

ಇವತ್ತಿನ ಅಲೋಪತಿ (ರಾಸಾಯನಿಕ ಔಷಧಿ) ಗಳಿಗಿಂತ ನಾಟಿ ಔಷಧಿಗಳ ಶ್ರೇಷ್ಠತೆ ಏನೆಂಬುದು ಗುರುತಿಸಲ್ಪಟ್ಟು ಬೆಳೆದು ಬಂದ ಚರಿತ್ರೆಯನ್ನು ಈ ಮಾಹಿತಿಗಳಿಂದ ಸ್ಪಷ್ಟವಾಗಿ ಗುರುತಿಸ ಬಹುದು. ಇನ್ನೊಂದು ವಿಶಿಷ್ಟ ಮರ ಅಜ್ಜಂಪಟ್ಟಿ ‘ಅಜ್ಜನಪಟ್ಟೆ’ ಆಂಟಿಯಾರಿಸ್ ಟಾಕ್ಸಿಕೇರಿಯಾ (Antiaris Taxicaria)) ಇದು ದಕ್ಷಿಣ ಭಾರತದ ಕಾಡುಗಳಲ್ಲಿ 250 ಅಡಿ ಎತ್ತರಕ್ಕೂ ಬೆಳೆಯುತ್ತದೆ. ಇದರ ಮಿತಿಯಾದ ಹಾಲು ಹೃದಯ ಸಂಬಂಧಿಯಂತಹ ಹಲವಾರು ಕಾಯಿಲೆಗಳಿಗೆ ಉಪಕಾರಿ. ಈ ಹಾಲೇ ಅತಿಯಾದರೆ ವಿಷ ಜಾಸ್ತಿಯಾಗಿ ಅಪಾಯಕಾರಿಯಾಗುತ್ತದೆ. ಆದ್ದರಿಂದಲೇ ಕಾಡು ಜನರು ಇದರ ಹಾಲನ್ನು ಈಟಿ, ಬಾಣಗಳಿಗೆ ಅದ್ದಿ ಬೇಟೆಯಾಡುತ್ತಾರೆ. ಇನ್ನು ವಿಶೇಷ ಉಪಯೋಗವೆಂದರೆ ದೊಡ್ಡ ದೊಡ್ಡ ಚೀಲಗಳನ್ನು ಬಟ್ಟೆಗಳನ್ನು ಈ ಮರದ ತೊಗಟೆಯಿಂದ ಮಾಡುತ್ತಾರೆ. ಇದರ ಹಾಲು ವಿಷಕಾರಿಯಾದ್ದರಿಂದ ಇದರ ಮೇಲೆ ಒಂದು ದಂತ ಕತೆಯೇ ಹುಟ್ಟಿಕೊಂಡಿದೆ.

“ಒಂದಾನೊಂದು ಕಾಡಿನಲ್ಲಿ ಒಬ್ಬಾನೊಬ್ಬ ರಾಜ ತನ್ನ ಟೆಗಾಗಿ ಅಜ್ಜಂಪಟ್ಟಿ ಮರದ ರಸವನ್ನು ಅಪೇಕ್ಷಿಸಿದ. ಜನ ಮರವನ್ನು ಮುಟ್ಟಲು ಹೆದರಿಕೊಂಡರು. “ಈ ಮರದ ಮೇಲೆ ಕುಳಿತುಕೊಳ್ಳುವ ಹಕ್ಕಿಗಳೂ ಮರದ ನೆರಳಿನಲ್ಲಿ ಹಾದು ಹೋಗುವ ಪ್ರಾಣಿಗಳು ಒಡನೆಯೆ ಸಾಯುತ್ತವೆ; ಆ ಪ್ರಾಣಿಗಳ ಎಲುಬುಗಳು ಮರದ ಕೆಳಗೆ

ರಾಶಿ ರಾಶಿಯಾಗಿ ಬಿದ್ದಿರುತ್ತವೆ. ಇಂಥ ಮರದ ಹತ್ತಿರ ಸುಳಿಯುವುದಕ್ಕೆ ನಮಗೆ ಹೆದರಿಕೆಯಾಗುತ್ತದೆ." ಎಂದು ಮೊರೆಯಿಟ್ಟುಕೊಂಡರಂತೆ. ರಾಜನು ಯೋಚಿಸಿ ಕೊನೆಗೆ "ನಮ್ಮ ಸೆರೆ ಮನೆಯಲ್ಲಿ ಮರಣ ಶಿಕ್ಷೆಗೊಳಗಾಗಿರುವ ಬಂಧಿಗಳಿರುವರಲ್ಲವೆ." ಅವರನ್ನು ಕಳುಹಿಸಿ ಅಜ್ಜಂಪಟ್ಟಿ ಮರವನ್ನು ಹತ್ತಿಸಿ ಹಾಲುರಸವನ್ನು ಸಂಗ್ರಹಿಸಿಕೊಂಡು ಬರತಕ್ಕದ್ದು. ಎಂದು ಆಜ್ಞೆ ಮಾಡಿದನಂತೆ"36. ಇಂತಹ ಕತೆಗಳು 17 ನೇ ಶತಮಾನದಲ್ಲಿ ಇಂಗ್ಲೀಷರು ಕಾಡಿನ ಪರಿಚಯ ಮಾಡಿಕೊಳ್ಳುತ್ತಿದ್ದಾಗ ಹುಟ್ಟಿಕೊಂಡವೆಂದು ಈ ಲೇಖಕರು ಅಭಿಪ್ರಾಯ ಪಡುತ್ತಾರೆ.

ಅಜ್ಜಂಪಟ್ಟಿಯಂತಹ ವಿಷಪೂರಿತ ಮರಗಳು ಹಲವಾರಿವೆ. ಅಂತಹ ಮರಗಳಲ್ಲಿ ಕೆಲವು ಮುಖ್ಯ ಮರಗಳನ್ನು ಹಸಿರು ಹೊನ್ನು ಕೃತಿಯಲ್ಲಿ ಬಿ. ಜಿ. ಎಲ್. ಸ್ವಾಮಿ ಅವರು ಪರಿಚಯ ಮಾಡುತ್ತಾರೆ. ಅವುಗಳಲ್ಲಿ ಎಲಿಯೊಕಾರ್ಪಸ್ (Elaeo carpus) ಇಟ್ಟಿ ಮರಗಳ ಬಗ್ಗೆ ಲೇಖಕರು ಪ್ರಸ್ತಾಪಿಸುತ್ತಾರೆ.

"ಇಟ್ಟಿ ಮರ (Stychnox nux -vomica) ದ ಅಂಗಾಂಗಗಳೆಲ್ಲ ವಿಷಮಯವೇ ಆದರೂ ಬೀಜದಲ್ಲಿ ವಿಷ ಕೇಂದ್ರೀಕೃತವಾಗಿದೆ. 1637 ನೆಯ ವರ್ಷ ..... ಇಟ್ಟಿ ಬೀಜಗಳು ಲಂಡನ್ ಹೊಕ್ಕಿದ್ದವು. ಉಪಯೋಗ ಇಲಿಗಳನ್ನು ಕೊಲ್ಲುವ ಪಾಷಾಣ. ಈ ಪಾಷಾಣದ ತೀಕ್ಷ್ಣತೆಯನ್ನು ಕುಗ್ಗಿಸಿದಾಗ ಇದು ಬಲವರ್ಧಕೌಷಧಗಳಲ್ಲಿ ಮಿಳಿತವಾಗುವ ಅತ್ಯಮೂಲ್ಯವಾದ ಸಾಮಗ್ರಿಯಾಗಬಹುದೆಂಬುದನ್ನು ಆ ಕಾಲದಲ್ಲಿ ಯಾರೂ ಅರಿತಿರಲಿಲ್ಲ..... ಈ ಬೀಜಗಳಲ್ಲಿ ವಿಪರೀತ ಕಹಿಯಾದ ಅತ್ಯಂತ ಅಪಾಯಕಾರಿಯಾದ ಎರಡು ಆಲ್ಕಲಾಯ್ಡ್‌ಗಳು ಇವೆಯೆಂಬುದು ನಮಗೆ ಮುಖ್ಯವಾದದ್ದು. ಇದಕ್ಕೆ ಬ್ರೂಸೀನ್ ಮತ್ತು ಸ್ಟ್ರಿಕ್‌ನೀಸ್ ಎಂದು ಹೆಸರು. 8,00,000 ಭಾಗ ನೀರಿಗೆ ಒಂದು ಭಾಗ ಸ್ಟ್ರಿಕನೀಸ್‌ನ್ನು ಬೆರಸಿದರೂ ಕಹಿ ರುಚಿ ಧಾರಾಳವಾಗಿಯೇ ಇರುತ್ತದೆ"37.

ಅಮಿತ ಕಹಿರುಚಿಯುಳ್ಳ ಈ ಮರದ ಅಂಗಾಂಗಗಳ ವೈವಿಧ್ಯದಿಂದ ಮಾನಸಿಕ ಕ್ರಿಯೆಯನ್ನು ಮತ್ತು ಮಾಂಸಖಂಡಗಳ ಕ್ರಿಯೆಯನ್ನು ಹೆಚ್ಚಿಸುವುದೆಂದು ತಿಳಿದು ಬಂದಿದೆ. ಇದರ ಬೀಜಗಳನ್ನು ಅಜೀರ್ಣ ಮತ್ತು ನರಸಂಬಂಧಿ ವ್ಯಾಧಿಗಳಿಗೆ ಬಳಸಲಾಗುತ್ತಿದೆ. ಹಾಗೂ ಇದು ರಕ್ತ ಚಲನಾ ವೇಗವನ್ನು ಹೆಚ್ಚಿಸುವುದೆಂಬ ಹಳೆಯ ನಂಬಿಕೆಯಿದೆ. ಮಾರ್ಫೀನ್, ಮಧ್ಯದಂತಹ ಹಲವು ಚಟಗಳ ಉದ್ರೇಕ ಸ್ಥಿತಿಯನ್ನು ಕಡಿಮೆ ಮಾಡಲು ಈ ಮರದ ಆಲ್ಕಲಾಯ್ಡ್‌ಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂಬ ಸೂಚನೆ ಕಂಡು ಬಂದು, ಸಂಶೋಧನೆ ನಡೆಯುತ್ತಿದೆ. ಜೊತೆಗೆ ಮೊಲಗಳ ಹೆಚ್ಚಳವನ್ನು ತಡೆಯಲು ಯೋಗ್ಯವಾದ ವಸ್ತುವಾದ್ದರಿಂದ ಇಟ್ಟಿ ಮರದ ಬೀಜ, 15,000 ಪೌಂಡುಗಳಷ್ಟು ಆಸ್ಟ್ರೇಲಿಯಾಕ್ಕೆ ರಪ್ತಾಗುತ್ತಿದೆ. ಇಂತಹ ಹಲವಾರು ಉಪಯುಕ್ತ ಕಾರಣಗಳಿಂದಾಗಿ ಹೆಸರಾಗಿರುವ ಈ ಮರ ಲೊಗೇನಿಯೇಸಿ ಎಂಬ ಸಂಸಾರಕ್ಕೆ ಸೇರಿದ್ದು. ಭಾರತ ಮತ್ತು ಸಿಲೋನ್ ಕಾಡುಗಳಲ್ಲಿ ಈ ಮರ ಸ್ವಾಭಾವಿಕವಾಗಿ ಬೆಳೆಯುತ್ತದೆ. ಹೀಗೆ ಎಷ್ಟೋ ವಿಷಪೂರಿತ ಹಾಲಿನ ಮರಗಳು ಪ್ರಕೃತಿಯಲ್ಲಿವೆ. ಈ ಇಟ್ಟಿ, ಅಜ್ಜಂಪಟ್ಟಿ ಮರಗಳ ಹಾಲಿನಲ್ಲಿ ವಿಷಪೂರಿತ ರಾಸಾಯನಿಕ ಅಂಶಗಳಿದ್ದರೂ, ಆ ಹಾಲು ಮಾನವನ ಆರೋಗ್ಯಕ್ಕೆ ಅನುಕೂಲವಾಗಿದೆ. ಈ ಮರಗಳ ಮೂಲಕ ನಾಟಿ ಔಷಧಿಯ ಮಹತ್ವದ ಸಂಶೋಧನಾತ್ಮಕ ವಿವರಣೆ ಇಲ್ಲಿ ವ್ಯಕ್ತವಾಗಿದೆ. ನಾಟಿ ಔಷಧಿಯ ಬಳಕೆ ತುಂಬ ಪ್ರಾಚೀನವಾದುದು. ಅಂದಿನ ನಾಟಿ ಔಷಧಿಯೇ ಇಂದಿನ ಹೊಸ ಹೊಸ ರಾಸಾಯನಿಕ ಔಷಧಿಗೆ ಅಲೋಪತಿ, ಆಯುರ್ವೇದ ಔಷಧಿಗಳ ತಯಾರಿಕೆಗೆ ಮೂಲವೆನ್ನುವುದರಲ್ಲಿ ಎರಡು ಮಾತಿಲ್ಲ. ಅಂದಿನಿಂದ ಇಂದಿಗೂ ಸಸ್ಯ ಪರಿಸರ ಕೆವಲ ಔಷಧಿಗಾಗಲಿ, ಆಹಾರಕ್ಕಾಗಲಿ ಸೀಮಿತವಾಗಿಲ್ಲ. ಅವು ಬಹುಪಯೋಗಿಯಾಗಿ ಬಳಕೆಯಾಗುತ್ತಿವೆ. ಇದನ್ನು ಬಿ.ಜಿ.ಎಲ್.ಸ್ವಾಮಿ ಅವರು ಹಸಿರು ಹೊನ್ನು ಕೃತಿಯಲ್ಲಿ ಕೊಡುವ ಎಲ್ಲ ಸಸ್ಯ ಪರಿಚಯದಲ್ಲೂ, ಔಷಧಿಗಿಡಗಳಿಂದ ಮಾನವ ನಾನಾ ರೀತಿಯ ಉಪಯೋಗಗಳನ್ನು ಕಂಡುಕೊಂಡಿರುವ ವಿವರ ನೀಡುತ್ತಾರೆ. ಉಲ್ಲೇಖಕ್ಕಾಗಿ 'ಗರುಡ ಫಲ' ಮರದ ವಿವರಣೆಯನ್ನು ಗಮನಿಸಬಹುದು.

"ಬೌದ್ಧ ಯುಗದ ಕಾಲದಿಂದ ಪ್ರಸಿದ್ಧಿಯಾಗಿರುವ ಮರ ಇದು. ಇದರ ಬೀಜಗಳನ್ನು ಅಗೆದು ತಿಂದು ರೋಗನಿವಾರಣೆ ಮಾಡಿಕೊಳ್ಳುತ್ತಿದ್ದರಂತೆ. ಕ್ರಿ.ಶ. 1595 ನೆಯ ಸುಮಾರಿಗೆ ಈ ಬೀಜದಿಂದ ಇಳಿಸಿದ ಎಣ್ಣೆಯು ಇದೇ ಬಗೆಯ ಇತರ ರೋಗಗಳಿಗೂ ಉಪಯೋಗವಾಗಿತ್ತು. ಪಾಶ್ಚಾತ್ಯರಿಗೆ 1854 ರ ವೇಳೆಗೆ ಇದರ ವೈದ್ಯಕೀಯ ಅಮೂಲ್ಯತೆ ಅರಿವಾಯಿತು. ..... ಪೂರ್ವ ಬಂಗಾಳದಲ್ಲಿಯೂ ಉತ್ತರ ಬರ್ಮಾದ ಕಾಡುಗಳಲ್ಲಿಯೂ ಬೆಳೆಯುವ ಈ ಮರದ ಹೆಸರು ಹಿಡ್ನೋಕಾರ್ಪಸ್ ಕುರಜೈ (Hydnocarpus Kurzil) ಫ್ಲಕೌರ್ಷಿಯೇಸಿ (Floucortiaceae) ಎಂಬ ಸಸ್ಯ ಸಂಸಾರಕ್ಕೆ ಸೇರಿದ್ದು. ನಮ್ಮೆದುರಿಗೆ ಈಗ ಬೆಳೆದಿದ್ದ ಮರವೂ ಇದೇ ಪ್ರಧಾನ ಜಾತಿಗೆ ಸೇರಿದ್ದಾದರೂ ಒಳಜಾತಿ ಬೇರೆ, ಹಿಡ್ನೋಕಾರ್ಪಸ್ ವೈಟಿಯಾನ್ (Hydrocarpus Wigtiana) ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಚದುರಿರುವ ಈ ಮರದ ಬೀಜಗಳಿಗೂ ಕುಷ್ಟರೋಗ ನಿವಾರಣ ಗುಣವಿದೆ. ಸೇಬಿನ ಗಾತ್ರದ ಹಣ್ಣು, ದಪ್ಪ ಕಂದು ಸಿಪ್ಪೆ. ಒಳಗೆ ಮುಕ್ಕಾಲು ಅಂಗುಲ

ಉದ್ದದ ಹತ್ತಿಪ್ಪತ್ತು ಬೀಜಗಳು ಬಿಳಿಯ ತಿರುಳಿನಲ್ಲಿ ಹುದುಗಿರುತ್ತವೆ. ಎಣ್ಣೆಯನ್ನು ನೇರವಾಗಿ ರೋಗಿಗೆ ಕೊಡುವುದರಿಂದ ವಾಸಿಯಾಗುವುದು ನಿಧಾನ, ಬಾಧೆಯೂ ಅಧಿಕ. ರಸಾಯನ ಶಾಸ್ತ್ರಜ್ಞರು ಈ ಎಣ್ಣೆಯಿಂದ ಇತ್ಯೆಲ್, ಎಸ್ಟರ್‌ಗಳೆಂಬ ಕೆಲವು ಸತ್ವಗಳನ್ನು ವಿಶ್ಲೇಷಿಸಿ ಬೇರೆಯಾಗಿಸಿದ್ದಾರೆ. ಇದರ ಪ್ರಯೋಗದಿಂದ ಕುಷ್ಠರೋಗ ಸಾಂಪ್ರದಾಯಿಕ ಪ್ರಯೋಗ ವಿಧಾನಕ್ಕಿಂತಲೂ ಬೇಗನೆ ಗುಣವಾಗುತ್ತದೆ."38

1595 ರ ಕಾಲದಲ್ಲಿ 'ಗರುಡಫಲ' ಮರದಲ್ಲಿ ಎಣ್ಣೆ ತೆಗೆಯುತ್ತಿದ್ದದ್ದು ಆ ಕಾಲದ ಸಣ್ಣ ಮತ್ತು ಗೃಹ ಕೈಗಾರಿಕೆಯ ಕೆಲಸವಾಗಿತ್ತು. ಈಗ ಇವು ದೊಡ್ಡ ದೊಡ್ಡ ಕೈಗಾರಿಕೆಗಳಾಗಿ ಮಾರ್ಪಟ್ಟು, ಗೃಹ ಕೈಗಾರಿಕೆಗಳು ನಾಶವಾಗಿವೆ. ಇದೇ ತರಹ ನಾಟಿ ಔಷಧಿಗಳು ನಾಶವಾಗಿ, ಎಲ್ಲೋ ಅಲ್ಲೊಂದು ಇಲ್ಲೊಂದು ಗುಡ್ಡಗಾಡು ಕಾಡು ಕುರುಬರಲ್ಲೊ, ಬುಡಕಟ್ಟು ಜನರಲ್ಲೊ, ಹಳ್ಳಿಗಾಡುಗಳಲ್ಲೊ ಉಸಿರಾಡುತ್ತಿವೆ. ಅಲ್ಲಿನ ಹಳೆತಲೆಮಾರಿನ ಜನರು ಕಣ್ಮರೆಯಾದರೆ ಈ ನಾಟಿ ಔಷಧಿಯೂ ಕಣ್ಮರೆಯಾದಂತೆ. ಇದನ್ನರಿತೇ ನಾಟಿ ಔಷಧಿ ಮಾಡುವ ಜನ ಮತ್ತು ಅವರ ನಾಟಿ ವೈದ್ಯ ಪದ್ಧತಿಯ ಬಗ್ಗೆ ತೇಜಸ್ವಿ ಆತಂಕ ವ್ಯಕ್ತಪಡಿಸುತ್ತಾರೆ. ಜೊತೆಗೆ ಇಂತಹ ಮರಗಳ ಸಾಂಸ್ಕೃತಿಕ ಜೀವನ ಪದ್ದತಿಯ ತಿಳುವಳಿಕೆಯು ಇವುಗಳೊಂದಿಗೆ ನಾಶವಾಗುತ್ತಿರುವುದು, ಮಾನವನ ಇನ್ನೊಂದು ರೀತಿಯ ದುರಂತವಾಗಿದೆ. ಇದು ಅವನ ಜ್ಞಾನಕ್ಕೂ ಬಂದೊದಗಿರುವ ಬಂಜೆತನವಾಗಿದೆ.

"ಮಾಸ್ತಿ ಬೈರ ಅಪ್ಪಣ್ಣ, ಮಾರ ಮುಂತಾದವರೊಡನೆಲ್ಲ ಕಾಡುತಿರುಗಿ ನಾನು ತಿಳಿದುಕೊಂಡ ಅನೇಕ ವಿಷಯಗಳಲ್ಲಿ ಗಿಡ ಮೂಲಿಕೆಗಳ ವಿಷಯಗಳೂ ಹಲವು. ಇವತ್ತು ಈ ಕಾಡುಗಳು ನಾಶವಾಗುತ್ತಿವೆ. ಇದರ ವಿಷಯ ತಿಳಿದವರೂ ಒಬ್ಬೊಬ್ಬರಾಗಿ ನಿರ್ಗಮಿಸುತ್ತಿದ್ದಾರೆ. ಇವೆರಡರಲ್ಲಿ ಯಾರೊಬ್ಬರು ಇಲ್ಲವಾದರೂ ಇನ್ನೊಂದು ನಿರುಪಯುಕ್ತವಾಗುತ್ತೆ. ಈ ವಿಷಯಗಳನ್ನಲ್ಲಲ್ಲಿ ಯಾರಿಗಾದರೂ ತಿಳಿಸುವುದು ಒಳ್ಳೆಯದೆಂದು ನನಗೆ ತವಕ. ಆದರೆ ಈ ಮೂಲಿಕೆಗಳ ಅಸಾಧಾರಣ ಗುಣಗಳ ಬಗ್ಗೆ ನನ್ನ ವೈದ್ಯ ಮಿತ್ರರೊಂದಿಗೆ ಪ್ರಸ್ತಾಪಿಸಿದಾಗೆಲ್ಲ ಅವರು ಕೋಪಿಸಿಕೊಂಡು ನನ್ನನ್ನು ಅಜ್ಞಾನಿ ಎಂದು ಜರೆದು ಜಗಳವನ್ನೇ ಆಡುತ್ತಾರೆ. ನಾಟಿವೈದ್ಯರು ಸಹ ಈ ವಿಜ್ಞಾನಿ ವೈದ್ಯರುಗಳ ಬಗ್ಗೆ ತಿರಸ್ಕಾರದ ಮಾತಾಡುತ್ತಾರೆ. ಈ ನಾಟಿವೈದ್ಯ ಬಲ್ಲವರು ಮಾರನಂತೆ ತಮ್ಮ ವೈದ್ಯಕ್ಕೆ ಅನೇಕ ಕುರುಡು ನಂಬಿಕೆಗಳನ್ನು, ಧಾರ್ಮಿಕತೆಯನ್ನು ತಳಕು ಹಾಕಿರುವುದರಿಂದ ವಿಜ್ಞಾನಿಗಳಿಗೆ ಇವರನ್ನು ಹಿಯ್ಯಾಳಿಸುವುದೂ, ಅಲ್ಲಗಳೆಯುವುದೂ ಸುಲಭವಾಗಿದೆ. ಇದರೊಡನೆ ನಾಟಿ ಮದ್ದು ತಿಳಿದ ಮಾರನಂಥವರಿಗೆ ತಮ್ಮ ಮಾತನ್ನು ಇತರರು ಗಂಭೀರವಾಗಿ ಪರಿಗಣಿಸಿ ಆಗಬೇಕಾದ್ದು ಏನೂ ಇಲ್ಲ. ತಮ್ಮ ತಿಳುವಳಿಕೆಯನ್ನು ತಮ್ಮೊಂದಿಗೆ ಗೋರಿಗೆ ತೆಗೆದುಕೊಂಡು ಹೋಗಲು ಅವರು ಎಂದೋ ತಯಾರಾಗಿದ್ದಾರೆ. ಅನೇಕರು ಅದ್ಭುತ ಔಷಧಿಗಳು ಗೊತ್ತಿದ್ದೂ ಬೇಕೆಂದೇ ಯಾರಿಗೂ ಹೇಳದೇ ಸತ್ತೇ ಹೋಗಿದ್ದಾರೆ. ಈವತ್ತಿಗೂ ಮನುಕುಲವನ್ನು ಕಾಡಿಸುತ್ತಿರುವ ಅನೇಕ ಮಾರಣಾಂತಿಕ ರೋಗಗಳಿಗೆ ಇದ್ದ ಔಷಧಿಗಳು ಹೀಗೆ ಕಣ್ಮರೆಯಾಗಿ ಅಪಾರ ನಷ್ಟವಾಗಿದೆಯೆಂದು ನಾನು ದೃಢವಾಗಿ ನಂಬಿದ್ದೇನೆ."39

ಇವತ್ತಿನ ರಾಸಾಯನಿಕ ಔಷಧಿಗೆ ಮೂಲ ನಮ್ಮ ನಾಟಿ ವೈದ್ಯವೇ. ಹೀಗಿದ್ದೂ ಇಂದು ನಾಟಿ ವೈದ್ಯ ಕಣ್ಮರೆಯಾಗುತ್ತಿರುವುದಕ್ಕೆ ಲೇಖಕರು ಆತಂಕ ವ್ಯಕ್ತಪಡಿಸುತ್ತಿರುವುದು ಸಹಜವಾಗಿದೆ. ಯಾಕೆಂದರೆ ಇಂದು ವಿಜ್ಞಾನದಿಂದ ರಾಸಾಯನಿಕ ಔಷಧಿಗಳು ಬೆಳವಣಿಗೆಯಾದಂತೆ ಮಾನವ ಮತ್ತು ಅವನ ಸಾಕು ಪ್ರಾಣಿಗಳಿಗೆ ಸಾವಿನಿಂದಲೇ ಮುಕ್ತಾಯವಾಗುವಂತಹ ಕಾಯಿಲೆಗಳು ಬಂದೊದಗಿವೆ. ಮನುಷ್ಯನಂತೂ ಕ್ಯಾನ್ಸರ್, ಏಡ್ಸ್‌ಗಳಂತ ಮಾರಕರೋಗಗಳಿಂದ ಉಸಿರುಗಟ್ಟುತ್ತಿದ್ದಾನೆ. ಇವೆಲ್ಲ ಮಾನವನೇ ತಂದುಕೊಂಡಿರುವಂತಹ ಕಾಯಿಲೆಗಳು, ಇವುಗಳಿಗೂ ನಮ್ಮ ಪ್ರಕೃತಿಯ ಗಿಡ, ಮರ, ಪ್ರಾಣಿ, ಪಕ್ಷಿಗಳಲ್ಲೇ ಔಷಧಿಯ ಪರಿಹಾರವಿದೆ. ಆದರೂ ಪ್ರಕೃತಿಯ ಈ ಜೀವರಾಶಿಯೊಳಗೆ ಶೋಧನಾ ಕಾರ್ಯ ಮಂದಗತಿಯಲ್ಲಿದೆ. ಆದರೆ ವಿಜ್ಞಾನದ ರಾಸಾಯನಿಕ ಔಷಧಿಗಳ ಶೋಧನಾ ಕಾರ್ಯ ಮಾತ್ರ ಶರವೇಗದಲ್ಲಿದೆ. ಇಂತಹ ವಿಜ್ಞಾನದ ಬೆಳವಣಿಗೆಯ ಪದ್ಯಗಳು ಬದಲಾಗದೆ ನಾಳೆಯ ಮಾನವನಿಗೆ ಅಸ್ತಿತ್ವವಿಲ್ಲ ಎಂಬುದನ್ನು ತುರ್ತಾಗಿ ಅರಿಯುವುದು ಅನಿವಾರ್ಯವಾಗಿದೆ.

ನಾಟಿವೈದ್ಯ ಪದ್ಧತಿಯಿಂದ ಮತ್ತು ಸಸ್ಯ ಪರಿಸರ ಚರ್ಚೆಗೆ ಬಂದರೆ, ನೂರಾರು ಜಾತಿಯ ಮರಗಳಲ್ಲಿ ಒಂದೊಂದು ಜಾತಿಯ ಮರವೂ ತನ್ನದೇ ಆದ ವಿಶೇಷ ಗುಣ, ಮಹತ್ವವನ್ನು ಹೊಂದಿದೆ. ಇಂತಹ ಮರಗಳು ಶತ ಶತಮಾನಗಳ ಇತಿಹಾಸವನ್ನು ಮೈಗೂಡಿಸಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಆಲ, ಅರಳಿ, ಬೇವುಗಳಂತಹ ಕೆಲವು ಪ್ರಾತಿನಿಧಿಕ ಮರಗಳನ್ನು ಕವಿಗಳು ಹೀಗೆ ಹಿಡಿದಿಡುತ್ತಾರೆ.

"ಅದೋ ಅದೋ ಆಲದ ಮರ
ನಿಂತಿದೆ ನಿರಂತರ
ಅಲ್ಲಿ ಇಲ್ಲಿ ಎಲ್ಲಿ ಎಲ್ಲಿ ಕಣ್ಣಿನ ಸುತ್ತಳತೆ ಅಲ್ಲಿ
ಅದೆ ಅದೆ ವೃಕ್ಷ ಕುಟುಂಬ ಬಾನ ಬಯಲು ನೆಲ ತುಂಬ ನಿಂತಿದೆ ನಿರಂತರ
ಖರಕರ ಪ್ರಹಾರಕೊಡ್ಡಿ ತನ್ನ ತುಂಬಿದೆಲೆಯ ತಲೆಯ
ದಶದಿಕ್ಕಿಗೆ ಚಾಚಿ ಕೈಯ ಬಾಚಿ ಬಯಸಿ ಗಾಳಿ, ಕೆಳೆಯ
ಬೀಳು ವೊಡಲ ಬೀಳದಂತೆ ಹಿಡಿಯೆ ನೆಲಕ್ಕೂರಿ ಕೈಯ
ಅಂಬೆಗಾಲ ನಿಲುವಿನಲ್ಲಿ ನಂಬಿ ನೆಚ್ಚಿ ಹುಟ್ಟುತವರ
ಮಗುವಾಗಿಹ ಮಡಿಯದ ಈ ನಿಡುಬಾಳಿನ ಮುದುಕ ಮರ"40 (ಏಷ ವೃಕ್ಷಸ್ಸನಾತನ)

ಈ ಕಾವ್ಯದಲ್ಲಿ ಆಲದ ಮರದ ಗುಣ, ಲಕ್ಷಣ, ಸ್ವರೂಪ ಇತಿಹಾಸಗಳನ್ನು ಹೇಳುತ್ತಲೇ ಅದರ ಅನನ್ಯತೆಯನ್ನು ಸಾರುತ್ತಿದ್ದಾರೆ. ಇಲ್ಲಿ ಆಲದ ಮರ ಸಾಂಕೇತಿಕವಾಗಿದೆ. ಮನುಷ್ಯನು ನಾಳೆಯ ಪೀಳಿಗೆಗೆ ಹೇಗೆ ಆಧಾರ, ರಕ್ಷಕನಾಗಿರಬೇಕು ಎಂಬ ತಿಳುವಳಿಕೆಯ ತತ್ವ ಕಾವ್ಯದ ಧ್ವನಿಯಾಗಿರುವ ಸಾಲುಗಳಿವು.

"ಈ ಹಳೆಯಾಲದ ಮರ
ಒಡೆಯದ ಸಂಸಾರ
ನಡುವೆ ಪಿತಾಮಹ ಬುಡ ತನ್ನವರನಾರನೂ ಬಿಡ
ತಬ್ಬಿದ ಬಳಗದವನೆಲ್ಲವ ತಬ್ಬಿ ಹಿಡಿದು ನಿಂತಿಹ
ರೆಂಬೆ ಕೊಂಬೆ ಕವಲು ಬಿಳಲು. ಮಕ್ಕಳು ಮಕ್ಕಳ ಮಕ್ಕಳು
ಒಂದನೊಂದು ನೆಮ್ಮಿನಿಂತ ಕೂಡು ಬದುಕಿನೊಕ್ಕಲು
ಮುದುಪಕೊಂಬೆ ಗೆಳೆಯ ಬಿಳಲು ನಿಚ್ಚ ನಬ್ಬಿನೂರೆಗೋಲು
ವಂಶಪರಂಪರೆಯ ಕಾಯ್ವ ಸಂತಾನದ ಸಾಲು.
ಆಲದ ಮರದಜ್ಜನ
ಸುತ ಸುತ ಸುತ ಸಜ್ಜನ"41 (ಏಷ ವೃಕ್ಷಸ್ಸನಾತನ)

ಆಲದ ಮರ ಬೆಳೆದಂತೆ ತನ್ನ ಸುತ್ತ ಬಿಟ್ಟ ಬಿಳಲುಗಳನ್ನು ಕುರಿತು ಸಂಸಾರ, ಮಕ್ಕಳು ಮಕ್ಕಳ ಮಕ್ಕಳು ಎಂದು ಕೌಟುಂಬಿಕ ನೆಲೆಯಲ್ಲಿ ಕಾವ್ಯ ಕ್ರಿಯೆ ಸಾಗಿರುವುದು ಗಮನಾರ್ಹವಾಗಿದೆ. 'ಕೂಡು ಬದುಕಿನೊಕ್ಕಲು' ವಂಶ ಪರಂಪರೆಯ ಕಾಯ್ವ ಸಂತಾನದ ಸಾಲು. ಎನ್ನುವ ಸಾಲುಗಳು ಮರದ ಬಗ್ಗೆ ಹೇಳುತ್ತಲೇ ಮನುಷ್ಯನ ಜೀವನ ದರ್ಶನಕ್ಕೆ ನಾಂದಿ ಮತ್ತು ಆದರ್ಶದ ಮಾದರಿಯಂತಿರುವ ನುಡಿಗಳಾಗಿವೆ. ಆಲದ ಮರ ತನ್ನೊಂದೆ ತಲೆ ಮಾರಿಗೆ ಸೀಮಿತವಾಗದೆ ಅದು ತನ್ನ ಬಿಳಲುಗಳನ್ನು ತಬ್ಬಿ ಮುಂದಿನ ಹಲವು ತಲೆಮಾರುಗಳ ಕುಟುಂಬಕ್ಕೆ ಆಧಾರ, ಶಕ್ತಿ, ರಕ್ಷಣೆಗಳನ್ನೊದಗಿಸಿದೆ. ಇದು ಬದಲಾಗಬೇಕಾಗಿರುವ ಮನುಷ್ಯನ ಗುಣ ಸ್ವಭಾವ ಪ್ರವೃತ್ತಿಗಳಿಗೆ ಮಾದರಿಯಾಗಿದೆ. ಕವಿಗೆ ಮರದಜ್ಜನ, ಸಂತಾನದಂತೆ ಈ ಸಮಾಜದ ಮಾನವನ ವಂಶವು ಸುತ ಸುತ ಸಜ್ಜನ ಪರಿಸರ ಸೃಷ್ಟಿಯಾಗಬೇಕೆಂಬ ಆಶಯವಿದೆ. ಅಲ್ಲದೆ ಸಮಾನ ಜೀವನ ತತ್ವದರ್ಶನವನ್ನು ಮರದಲ್ಲೇ ಕವಿ ಕಾಣುವುದು ಹೀಗೆ:

"ಜೀವ ವೃಕ್ಷಾದಾದಿ ಮೂಲವಿವರ ಹುಟ್ಟಿನೋಜೆ
ಅನಾದಿಯಂತ ವಿದರ ಮುಮ್ಮುಂದಿನ ಪೀಳಿಗೆ
ಸಾವಿನೊಳಗೆ ಹುದುಗಿದೆ ಈ ವಿಶ್ವ ವೃಕ್ಷದೇಳಿಗೆ !
ಜೀವ ಹೂವು ಮರೆಯಲಿಹ ನಿಮಿತ್ತ ಹಣ್ಣ ಬಾಳಿಗೆ !
ಹಣ್ಣುಗಣಿತ ವೃಕ್ಷಾಕಾದಿ, ತೋರಿ ಚೆದರಿ ಗಾಳಿಗೆ
ಅಮರತ್ವ ಆಲ ಇದೇ ಸಕಲ ಮೂಲ"41 (ಏಷ ವೃಕ್ಷಸ್ಸನಾತನ)

ಪ್ರಕೃತಿಯ ಇಡೀ ಜೀವ ವೃಕ್ಷಕ್ಕೆ ಆದಿ, ಅನಾದಿಯಾಗಿರುವ ಈ ಮರ ವಿಶ್ವವೃಕ್ಷದೇಳಿಗೆಗೆ ಅಂದರೆ ಮುಮ್ಮುಂದಿನ ಪೀಳಿಗೆಗೆ ನಾಂದಿಯಾಗಿದೆ. ಇದು "ಅಮರತ್ವದ ಆಲ ಇದೇ ಸಕಲ ಮೂಲ" ಎನ್ನುವ 'ಜೀವ ಪ್ರಜ್ಞೆ'ಯ ಈ ಕಾವ್ಯ ತತ್ವ; ಬೌದ್ಧ ತತ್ವ, ಸಂಸ್ಕೃತಿಯು ಆಗಿರುವುದು ಗಮನಾರ್ಹ ಸಂಗತಿ. ಮನುಷ್ಯ ಜೀವನದಲ್ಲಿ ಇರಬೇಕಾದ ಮೂಲಭೂತವಾದ ಈ ತತ್ವ, ಚಿಂತನೆಗಳನ್ನು ಕವಿ ಈ ಆಲದ ಮರದ ಮೂಲಕ ಪರೋಕ್ಷವಾಗಿ ಮನುಷ್ಯನಿಗೆ ತೋರಿಸಿಕೊಟ್ಟಿದ್ದಾರೆ. ಮಾನವನ ತಿಳುವಳಿಕೆ, ಜ್ಞಾನಗಳ ವೃದ್ಧಿಗೆ ಪ್ರಕೃತಿಯ ಗಿಡ ಮರಗಳನ್ನೇ, ಜ್ಞಾನದ

ಕೇಂದ್ರವಾಗಿಸಿರುವ ಕವಿಯ ದೂರದೃಷ್ಟಿಯುಳ್ಳ ಪರಿಸರ ಪ್ರಜ್ಞೆಯ ಔಚಿತ್ಯದಲ್ಲಿ ಸಸ್ಯ ಸಂಸ್ಕೃತಿ ಪರಂಪರೆಯನ್ನು ಹುದುಗಿಸಿದ್ದಾರೆ.

ಈ ಕಾವ್ಯದಲ್ಲಿ ಕವಿ ಎಂ.ವಿ. ಸೀತಾರಾಮಯ್ಯ ಅವರು 'ಬೀಜ ಮೊದಲೋ ಮರ ಮೊದಲೋ' ಎಂಬ ಸಂಕೀರ್ಣ ಪ್ರಶ್ನೆಯ ಒಗಟೊಂದನ್ನು ಬಿಡಿಸಿ ಹಣ್ಣುಗಣಿತ ವೃಕ್ಷಕಾದಿ ಅಂದರೆ ಬೀಜವೆ ವೃಕ್ಷಕ್ಕೆ ಮೊದಲೆಂಬ ವಿಜ್ಞಾನದ ದೀರ್ಘ ಶೋಧದ ಭಾಷೆಯನ್ನು ಕವಿ ಸುಂದರವಾದ ಕಾವ್ಯ ಪರಿಭಾಷೆಯಲ್ಲಿ ಕಟ್ಟಿಕೊಟ್ಟಿರುವುದು ಈ ಕಾವ್ಯದ ವಿಶೇಷ ಸಂಗತಿ. ಇದಕ್ಕೆ ಪೂರಕವಾಗಿ ಈ ಬೀಜದಿಂದ ಬೆಳೆದ ವೃಕ್ಷದ ಕತೆಯನ್ನು ಚಂದ್ರಶೇಖರ ತಾಳ್ಯ ಅವರು ಹೀಗೆ ನಿರೂಪಿಸುತ್ತಾರೆ.

"ಒಂದು ಬೀಜವಿತ್ತು
ಮೊಳಕೆ ಸಸಿಯಾಯಿತು
ಚಾಚಿ ಕೊಂಬೆಗಳ ನಭಕ್ಕೆ
ನಕ್ಷತ್ರ ಹೂ ಬಿಟ್ಟಿತು

ಕಾಯಿ ಕಮ್ಮಗೆ ಹಣ್ಣಾದವು
ಚಂದ್ರ ಸೂರ್ಯರ ಹಾಸು ಹೊಕ್ಕಲ್ಲಿ
ನೆಲಕ್ಕೆ ಬಿದ್ದು ಬೀಜ ತಾಯಿ
ಒಳಕ್ಕೆ ಆಳಕ್ಕೆ ಮೂಲಕ್ಕೆ ಬೇರಿಳಿದವು
ಕಗ್ಗತ್ತಲು ತಡಕಿ ಬೆಳಕಿನ ನೆಲೆ
ಇಲ್ಲೆ ಬಂಗಾರ ದೊರೆಯುವುದು
ಈ ಬೀಜ ಬಿದ್ದ ಕತ್ತಲಿನ ತಾವು"42 (ಒಂದು ವೃಕ್ಷದ ಕತೆ)

ಬೀಜದಿಂದ ಮೊಳಕೆಯಾಗಿ ಕೊಂಬೆ, ರೆಂಬೆ, ಬೇರುಗಳಿಂದ ಕೂಡಿದ ಮರ ಬೆಳೆದು ಹೂವು ಕಾಯಿ ಹಣ್ಣಾಗಿ ಭೂಮಿ ಆಕಾಶಗಳ ನಡುವೆ ನಿಂತು ಪ್ರಾಣಿ, ಪಕ್ಷಿ ಇತರ ಜೀವಿಗಳಿಗೆ ಆಸರೆಯಾಗಿ ಸಾರ್ಥಕಗೊಳ್ಳುವ ಗಿಡ ಮರಗಳ ಸಾಂಸ್ಕೃತಿಕ ಅಸ್ತಿತ್ವವನ್ನು ಕವಿ ಕಾವ್ಯ ಮಾಡಿದ್ದಾರೆ. ಮರವಿರುವ ಜಾಗದಲ್ಲಿ ಬಂಗಾರ ದೊರೆಯುವ ಕವಿಯ ನಂಬಿಕೆ ಗಿಡ ಮರಗಳ ತಿಳುವಳಿಕೆ ಔಚಿತ್ಯವಾದದ್ದು. ಇದಕ್ಕೆ ತೆಂಗು, ಮಾವು, ತೇಗ, ಗಂಧ, ಬೀಟೆ ಮುಂತಾದ ಬಹುಪಯೋಗಿ ಮರಗಳು ಮನುಷ್ಯನ ಬಂಗಾರದಂತ ಆಸ್ತಿ. ನಿಜವಾದರೂ ಕಾವ್ಯದಲ್ಲಿ ಇಂತಹ ಭಾವದ ಸಾಲುಗಳನ್ನು ತರುವುದು ಇವತ್ತಿನ ಪರಿಸರ ಪ್ರಜ್ಞೆ ಜಾಗೃತಿ ತರಬೇಕಾಗಿರುವ ಕಾಲದಲ್ಲಿ 'ಇಲ್ಲೆ ಬಂಗಾರ ದೊರೆಯುವುದು' ಎಂಬ ಮಾತುಗಳು ಬಂಡವಾಳಶಾಯಿ ಕಂಪನಿಗಳು ಇಂತಹ ಬಂಗಾರದಂತಹ ಕಾಡು–ಮೇಡುಗಳನ್ನು ಅರಸಿ ಮುನ್ನುಗ್ಗಿ, ಲಗ್ಗೆಯಿಡುತ್ತವೆ. ಇದರ ಪರಿಣಾಮ ಬುಡಕಟ್ಟು ಜನರ ರಕ್ಷಣೆಯಾಗಿರುವ ಈ ಗಿಡ–ಮರ ತುಂಬಿರುವ ಕಾಡುಗಳು ಕಾವ್ಯದ ಈ ಮಾತುಗಳಿಗೆ ಪ್ರೇರಣೆಯಾಗಿ ಕಾಡಿನ ವ್ಯಮೋಹವಿರುವ ಜನರಿಗೆ ಇಂತಹ ದಾರಿತೊರಿದಂತಾಗುತ್ತದೆ. ಆದ್ದರಿಂದಲೇ, ಸಾಲವೃಕ್ಷ ಮರ ಆದಿವಾಸಿ ಜನರಿಗೆ ಆಸರೆಯಾದರೆ, ಬಂಡವಾಳಶಾಹಿ ಕಂಪನಿಗಳಿಗೆ ಆಸ್ತಿಯಾಗಿವೆ. ಹೀಗಾಗಿ ಒಂದು ಗುಂಪಿಗೆ ಇದರ ಮೇಲೆ ಪೂಜ್ಯಭಾವನೆಯಾದರೆ, ಇನ್ನೊಂದು ಗುಂಪಿಗೆ ಅದನ್ನು ಕರಗಿಸುವ ಆಲೋಚನೆ. ಹೀಗೆ ಈ ಮರದ ಸಂಸ್ಕೃತಿಯನ್ನು ಕಂಡ ಕವಿ, ಇದನ್ನು ನಾನಾ ರೀತಿಯಲ್ಲಿ ಉಪಯೋಗಿಸುವ ಜನರ ಮಾತನ್ನು ಹೀಗೆ ಹೇಳುತ್ತಾರೆ:

"ಜನರೆಂದರು ಮರ
ತಂಪು ಬಿಸಲಿಗೆ ಆಸರೆ ಮಳೆಗೆ
ಕೂಲಿ ಕುಂಬಳಿಗಲೆವ ಹಾದಿ ಹೋಕರ ಬಾಳಿಗೆ
ಕೂಳು ಕುದಿಸಲು ಪುಳ್ಳೆ ಅರಸುವ
ನೋವು ಮರೆಸುವ ಹಾಡು ಹೊಸೆಯುವ
ಅಮ್ಮ ಮಕ್ಕಳ ಬೆನ್ನಿಗೆ"43 (ಸಾಲವೃಕ್ಷ)

ಇಂತಹ ಉಪಯೋಗಗಳಿಂದಲೇ ಬುಡಕಟ್ಟು, ಹಳ್ಳಿ ಜನರಿಗೆ ಅರಳಿ, ಬೇವು, ಬಿಲ್ವತ್ರೆ, ಸಾಲವೃಕ್ಷ ಮರಗಳ ಮೇಲೆ ಪ್ರೀತಿ, ಪೂಜ್ಯ ಭಾವನೆಯ ವ್ಯವಹಾರ ಸಂಸ್ಕೃತಿಯ ಈ ಭಾವನಾತ್ಮಕ ಸಂಬಂಧವನ್ನೇ ಕವಿ 'ಅಮ್ಮ ಮಕ್ಕಳ ಬೆನ್ನಿಗೆ' ಎನ್ನುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಪೂಜಾರ್ಹವಾದ ಮರಗಳಲ್ಲಿ ಪ್ರಮುಖವಾದದ್ದು ಅರಳಿ (ಅಶ್ವತ್ಥ ಮರ). ಇದನ್ನು ಕುರಿತು ಡಿ.ವಿ.ಜಿ. ಹೀಗೆನ್ನುತ್ತಾರೆ:

"ಒಂದು ಕಡೆ ಚಿಗುರುತಲಿ, ಒಂದು ಕಡೆ ಬಾಡುತಲಿ
ಕುಂದುತಿರೆ, ಕೊಂಬೆ, ಮುಂಡದಲಿ ಹಬ್ಬುತಲಿ
ಎಂದೆಂದು ಮಶ್ವತ್ಥ ಹಳೆಹೊಸದು ತಾನದಾ
ಸ್ಪಂದನವೊ ಬ್ರಹ್ಮನದು ಮಂಕುತಿಮ್ಮ"44 (ವ–561)

ಈ ಮರ ಏಕಕಾಲದಲ್ಲಿ ಬಾಡುವ ಮತ್ತು ಚಿಗುರುವ ಎರಡು ಕ್ರಿಯಾ ಗುಣವನ್ನು ಹೊಂದಿದೆ. ಇದು ಕವಿಗೆ ಹಳೆ ಹೊಸದರ ಬೆಸುಗೆಯಂತಿದೆ. ಇದನ್ನೇ ಎಂ. ವಿ. ಸೀತಾರಾಮಯ್ಯ ಅವರು "ಸಾವಿನೊಳಗೆ ಹುದುಗಿವೆ. ಈ ವಿಶ್ವವೃಕ್ಷದೇಳಿಗೆ" ಎನ್ನುವುದು. ಡಿ.ವಿ.ಜಿ.ಗೆ ಪ್ರಕೃತಿಯ ಈ ರಹಸ್ಯ ಕ್ರಿಯೆ ಬ್ರಹ್ಮನದಾಗಿ ಕಂಡಿದೆ. ಅರಳಿ ಮರದ ಮೇಲೆ ಜನರ ದೈವೀ ಭಾವನೆ ಎಂತಹದ್ದೆಂದರೆ ಅಶ್ವತ್ಥನ ಬೇರಿನಲ್ಲಿ ಬ್ರಹ್ಮನಿದ್ದಾನೆ. ಕಾಂಡದಲ್ಲಿ ವಿಷ್ಣುವಿದ್ದಾನೆ, ಎಲೆ ಎಲೆಯಲ್ಲಿಯೂ ಒಬ್ಬೊಬ್ಬ ದೇವನಿದ್ದಾನೆ. ಬುಡವು ಬ್ರಹ್ಮ ಭಾಗವಂತೆ, ಕಾಂಡವು ವಿಷ್ಣುಭಾಗವಂತೆ, ಕವಲೊಡೆದು ಎಲೆ ತಳೆದ ಸಮುಚ್ಛಯವು ರುದ್ರಭಾಗವಂತೆ"45

ಜನರ ಗಿಡ ಮರಗಳ ಮೇಲಿನ ಈ ದೈವೀ ಭಾವನೆಯೇ ಈಗಿರುವ ಎಷ್ಟೊ ದೇವರ ಕಾಡುಗಳ ಮೂಲಕ ಪರಿಸರ ರಕ್ಷಣೆಗೆ ಸಾಧ್ಯವಾಗಿದೆ. ಈ ಆಧ್ಯಾತ್ಮದ ದೈವೀಭಾವ ಮೂಲನಿವಾಸಿ ಪರಿಕಲ್ಪನೆಯು, ವೈದಿಕ ಸಂಸ್ಕೃತಿಗೆ ಪ್ರಮುಖ ಅಂಗ. ಇದು ಮಾನವ ಕೇಂದ್ರಿತ, ಜೀವ ಪ್ರಜ್ಞೆಯಾಗಿದೆ. ಹೇಗೆಂದರೆ. "ಸಾಮಾನ್ಯವಾಗಿ ನಮ್ಮ ದೇಶದ ಪ್ರತಿಯೊಂದು ಗ್ರಾಮದಲ್ಲಿಯೂ ಸ್ಥಳೀಯ ದೇವರು ಅಥವಾ ದೇವತೆಯ ಹೆಸರಿನಲ್ಲಿ ಕೆಲವು ಸಸ್ಯ, ಪ್ರಾಣಿಗಳನ್ನು ಸಂರಕ್ಷಿಸುತ್ತಾರೆ. ಹಾಗೂ ಅವುಗಳನ್ನು ಪೂಜಿಸುತ್ತಾರೆ. ಸಸ್ಯ, ಪ್ರಾಣಿಗಳುಳ್ಳ ಈ ಪೂಜನೀಯ ಸ್ಥಳಕ್ಕೆ ದೇವರ ಕಾಡು ಅಥವಾ ನಾಗವನ (Sacred groves) ಎಂದು ಕರೆಯುತ್ತಾರೆ. ಪಶ್ಚಿಮ ಘಟ್ಟಗಳು ಹಾಗೂ ನಮ್ಮ ದೇಶದ ಈಶಾನ್ಯ ರಾಜ್ಯಗಳಲ್ಲಿ ದೇವರ ಕಾಡುಗಳು ಹೆಚ್ಚು. ಯಾಕೆಂದರೆ ಅಲ್ಲಿ ಕಾಡುಗಳು ಹೆಚ್ಚು. ದೇವರ ಕಾಡುಗಳು ನಿತ್ಯಹರಿದ್ವರ್ಣ ಅರಣ್ಯ ಭಾಗಗಳು. ಆದರೆ ಬಯಲು ಸೀಮೆಯಲ್ಲಿಯ ದೇವರ ಕಾಡುಗಳಲ್ಲಿ ಜೀವ ವೈವಿಧ್ಯ ಕಡಿಮೆ. ಸ್ಥಳೀಯ ಜನರಿಗೆ ಈ ಕಾಡುಗಳು ಪೂಜನೀಯ. ಇವರು ಅವುಗಳನ್ನು ದೇವತೆಗಳ ರೂಪದಲ್ಲಿ ಪೂಜಿಸುತ್ತಾರೆ. ಈ ದೇವರ ಕಾಡುಗಳನ್ನು ತಲೆತಲಾಂತರದಿಂದ ಪೂಜಿಸುತ್ತಾ ಬಂದಿದ್ದಾರೆ. ಇಂದಿಗೂ ಕರ್ನಾಟಕದಲ್ಲಿ 66,000 ರಕ್ಷಿತ ದೇವರ ಅರಣ್ಯ ಪ್ರದೇಶಗಳಿವೆ. ಇಂತಹ ಕಾಡುಗಳಲ್ಲಿ ಅತ್ಯಂತ ವಿರಳವಾದ ಹಾಗೂ ಹೊಸ ಪ್ರಭೇದಗಳನ್ನು ಕಾಣಬಹುದು.

ದೇವರ ಕಾಡುಗಳಲ್ಲಿ ಅನೇಕ ಜೀವ ಪ್ರಭೇದಗಳು ಸಂರಕ್ಷಿತವಾಗಿವೆ. ಆದರೆ ಅವೇ ಪ್ರಭೇದಗಳು ಇತರ ಪ್ರದೇಶಗಳಲ್ಲಿ ಕಣ್ಮರೆಯಾಗುತ್ತಲಿವೆ. ಕುನ್‌ಸ್ಟೆಲೇರಿಯಾ ಕೇರಳೆನ್ಸಿಸ್ (Kunstleria Keralansis) ಎಂಬ ಸಸ್ಯವು ದೇವರ ಕಾಡುಗಳಲ್ಲಿ ಮಾತ್ರ ಉಳಿದಿದೆ. ಇದರಿಂದ ಹಲವಾರು ಜೀವ ಪ್ರಭೇದಗಳೂ ಉಳಿದು ಕೊಂಡಿವೆ. ಅಂದರೆ ದೇವರ ಕಾಡುಗಳು ಜೀವ ವೈವಿಧ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸಿವೆ. ಅವು ಕೇವಲ ಅಲ್ಲಿಯ ಪರಿಸರವನ್ನಷ್ಟೇ ರಕ್ಷಿಸುವುದಿಲ್ಲ. ಜೊತೆಗೆ ಸ್ಥಳೀಯ ಜನರಿಗೆ ಉರುವಲು, ಒಣ ಎಲೆ ಹಾಗೂ ಇತರ ಉತ್ಪನ್ನಗಳನ್ನು ಕೊಡುತ್ತವೆ"46

ಭಾರತದ ಗ್ರಾಮೀಣ ಜನರ ಈ ನಂಬಿಕೆ ಆಚರಣೆಗಳಿಂದಲೇ ಇಂದು ಅಸ್ಥಿತ್ವದಲ್ಲಿರುವ; ಜೀವ ಸಂಕುಲಗಳಾದ ಗಿಡ–ಮರ, ಪ್ರಾಣಿ–ಪಕ್ಷಿ, ಅರಣ್ಯಗಳ ರಕ್ಷಣೆಗೆ ಸಾಧ್ಯವಾಗಿದೆ. ಈ ಸಂಸ್ಕೃತಿಯನ್ನೆ ಮೂಲನಿವಾಸಿ ಭಾರತೀಯ ಬೌದ್ಧ ಸಂಸ್ಕೃತಿ ಎನ್ನುವುದು. ಇದನ್ನೆ ನಮ್ಮ ಗ್ರಾಮೀಣ ಜನಪದರು ತಿಳಿದೋ ತಿಳಿಯದೆಯೋ, ಗಿಡ–ಮರ, ಪ್ರಾಣಿ–ಪಕ್ಷಿಗಳ ಮೇಲೆ ಹಾಡು, ಕಥೆಗಳನ್ನು ಕಟ್ಟಿ ಮಕ್ಕಳಿಗೆ ಹೇಳಿ, ಈ ಜೀವಿಗಳ ಮೇಲೆ ಆಸಕ್ತಿ, ಪ್ರೀತಿ ಬೆಳೆಯಲು ಸಹಾಯಕವಾಗಿರುವುದು. ಇದನ್ನೆ ಜನಪದ ಸಂಸ್ಕೃತಿ ಎನ್ನುವುದು. ಈ ಮಾದರಿಗಳು ಜಾನಪದ ಸಾಹಿತ್ಯದಲ್ಲಿ ದಟ್ಟವಾಗಿವೆ. ಇಂತಹ ತಾತ್ವಿಕ ಚಿಂತನೆಯುಳ್ಳ ಜನಪದ ಸಾಹಿತ್ಯವನ್ನೆ ಬೌದ್ಧ ಸಾಹಿತ್ಯವೆಂದು ಕರೆಯಬಹುದಾಗಿದೆ. ಈ ಸಂದರ್ಭದಲ್ಲಿ ಪ್ರಾತಿನಿಧಿಕವಾಗಿ "ರನ್ನದ ಮರ ಚಿನ್ನದ ಗೊನೆ, ಗುದಿ ಗುದಿ ಕಾಯಿ" ಕಥೆಯ ಚರ್ಚೆ ಪ್ರಸ್ತುತ ವೆನಿಸುತ್ತದೆ.

"ಈ ಕಥಯಲ್ಲಿ ಮೈಸೂರಿನ ದೊರೆಯ ಹಿರಿಹೆಂಡತಿ ದೊಂಬರ ಸೂಳೆಯ ಮಗ ಆನೆಯ ಮಾರ್ಗದರ್ಶನದಿಂದ ಏಳೆಡೆ ಘಟಸರ್ಪವನ್ನು ಕೊಂದು, ಅದರ ರತ್ನದ ಹರಳಿನಿಂದ ದೇವಲೋಕ ಹಿಡಿದು ತನ್ನ ತಂದೆಯನ್ನು ಉಳಿಸಿಕೊಳ್ಳುವ ಸಲುವಾಗಿ ಅಲ್ಲಿದ್ದ ಐದು ದೇವಕನ್ನಿಕೆಯರಿಗೆ 'ರನ್ನದ ಮರ ಚಿನ್ನದ ಗೊನೆ ಗುದಿ ಗುದಿ ಕಾಯಿ' ಮರ ತೋರಿಸಬೇಕೆನ್ನುತ್ತಾನೆ. ಆಗ ಅವರು ಒಪ್ಪಿ ಇದ್ದಿಲ ಪುಡಿ, ಅರಿಶಿನ ಪುಡಿ, ಅಕ್ಕಿಕಾಳು, ಹಂಚೀಕಡ್ಡಿ ತರುತ್ತಾರೆ. ಅವರು "ಅಯ್ಯಾ ಮಾನವನೆ ನಾವು ಐದು ಜನಗಳನ್ನು ತುಂಡು ತುಂಡಾಗಿ ಕತ್ತರಿಸಿ ಬಿಡು. ಒಟ್ಟಿಗೆ ನಮ್ಮ ಹೆಣಗಳನ್ನೆಲ್ಲಾ ರಾಸಿಹಾಕುದ, ರಾಸಿ ಮೇಲೆ ಇದ್ದಿಲ ಪುಡಿ ಎರಚಿಬಿಡು. ಅದರ ಮೇಲೆ

ಅಕ್ಕಿಕಾಳು ಎರಚಿದರೆ ರತ್ನದ ಮರ, ಚಿನ್ನದ ಗೊನೆ, ಗುದಿ ಗುದಿ ಕಾಯಿ ನಿನಗೆ ಕಾಣುತ್ತೆ. ಹಂಚಿಕಡ್ಡಿಯಿಂದ ಮರಕ್ಕೆ ಮೂರು ಏಟು ಹೊಡಿ ತಿರುಗ ನಾವು ದೇವಕನ್ನಿಕೆಯರು ಬದುಕಿ ಬರ್ತಿವಿ"47 ಅಂತ ಹೇಳಿದರು. ಇವರು ಹೇಳಿದ ಹಾಗೆ ಕಥೆಯ ಕೊನೆಯಲ್ಲಿ ಮೈಸೂರ ದೊರೆಯ ಎದುರು ಮಾಡಿದಾಗ ದೊಂಬರ ಸೂಳೆಯ ಮಗನಿಗೆ 'ರನ್ನದ ಮರ, ಚಿನ್ನದ ಗೊನೆ, ಗುದಿ ಗುದಿ ಕಾಯಿ' ಯ ಮರ ಕಾಣಿಸುತ್ತದೆ. ಇದನ್ನು ಕಂಡ ದೊರೆ ಇವನು ನನ್ನ ಹಿರಿಯ ಮಗನೆಂದು ತಿಳಿದು ಹರ್ಷದಿಂದ ಪಟ್ಟ ಕಟ್ಟುತ್ತಾನೆ.

ಮಾಂತ್ರಿಕತೆಯೇ ಈ ಕಥೆಯ ಮುಖ್ಯ ಗುಣ. ಇಲ್ಲಿ ಹೆಣ್ಣು ಪ್ರಕೃತಿಯಾಗಿ, ಪ್ರಕೃತಿ ಹೆಣ್ಣಾದಂತೆ ದೇವಲೋಕದ ಪಂಚಕನ್ಯೆಯರು ರನ್ನದ ಮರ ಚಿನ್ನದ ಗೊನೆ ಗುದಿ ಗುದಿ ಕಾಯಿಯ ಮರವಾಗಿ ರೂಪುಗೊಳ್ಳುವುದು ಔಚಿತ್ಯಪೂರ್ಣವಾಗಿದೆ. ಕಾಲಕ್ಕನುಗುಣವಾಗಿ ಮರದ ಬದಲಾವಣೆಯಾಗುವುದು ಆ ಮರದ ಸಾಂಸ್ಕೃತಿಕ ಜೀವನ. ಈ ಗುಣ ಪ್ರಕೃತಿಯ ಸಕಲ ಮರಗಳಿಗಲ್ಲದೆ ಸಕಲ ಜೀವಗಳಿಗೂ ಅನ್ವಯವಾಗುವಂತಹದ್ದು. ಜಾನಪದರ ಕಲ್ಪನೆಯ ಈ ಮರದ ಸೃಷ್ಟಿಗೆ ಅವರು ಬಳಸುವ ವಸ್ತುಗಳು ವಿಶಿಷ್ಟವಾಗಿವೆ. ಇಲ್ಲಿ ದೇವಕನ್ನಿಕೆಯರು ಐವರನ್ನು ಕತ್ತರಿಸಿ ಆ ಹೆಣಗಳ ಮೇಲೆ ಹಾಕುವ ಇದ್ದಿಲಪುಡಿ ಕಂಟಕ, ಸಾವಿನ ಅಶುಭ ಸೂಚಕ. ನಂತರ ಅರಿಶಿಣ ಪುಡಿ, ಅಕ್ಕಿಕಾಳುಗಳನ್ನು ಹಾಕುವುದು ರೂಪಾಂತರ ಸೃಷ್ಟಿಯ ಶುಭ ಸೂಚಕವಾಗಿವೆ. ಮತ್ತೆ ಈ ಮರ ದೇವಕನ್ನಿಕೆಯರಾಗಲು ಬಳಸುವ ಹಂಚಿಕಡ್ಡಿ ರೂಪಾಂತರ ಮಾಂತ್ರಿಕ ಕ್ರಿಯೆಯ ಸಾಧನವಾಗಿ ಬಳಕೆಯಾಗಿದೆ. ಮುತ್ತು, ರತ್ನ, ಚಿನ್ನದ ಮೌಲ್ಯವನ್ನು ಜನಪದರು ತಮ್ಮ ಕಲ್ಪಿತ ಮರದಲ್ಲೆ ಕಾಣುವುದು ವಿಶೇಷ. ಈ ಮರ ರಾಜನ ಕುಟುಂಬ ಮತ್ತು ರಾಜ್ಯದ ಜನರು ನಿರ್ವಂಚನೆಯಿಂದ ಸಂತೋಷ, ಸುಭಿಕ್ಷೆಯಿಂದಿರಬೇಕೆಂಬುದರ ಸಂಕೇತ. 'ರನ್ನದ ಮರ ಚಿನ್ನದ ಗೊನೆ ಗುದಿ ಗುದಿ ಕಾಯಿ' ಮರದ ಸೃಷ್ಟಿಗೆ ರಾಜ ಮತ್ತು ಅವನ ಮಕ್ಕಳು ನಿಮಿತ್ತ ಮಾತ್ರ. ಇದಕ್ಕೆಲ್ಲ ದೊಂಬರ ಸೂಳೆಯ ಮಾರ್ಗದರ್ಶನ, ತಂತ್ರಗಳೇ ಮೂಲ. ಇಲ್ಲಿ ದೊಂಬರ ಸೂಳೆಯ ಬಂಜೆತನದಿಂದ ರಾಜ ಕುಟುಂಬದ ವಾತಾವರಣ ಬದಲಾಯಿತು. ಕಿರಿಯ ರಾಣಿ ಬಂದದ್ದು, ಅವಳಿಗಾದ ಮಕ್ಕಳು ತಮ್ಮ; ಅಣ್ಣ ತಂದ ಮರಕ್ಕೆ ಮಾಡುವ ವಂಚನೆ, ಮತ್ತು ಕಿರಿಯ ರಾಣಿ ಹಿರಿಯ ರಾಣಿಗೆ ಮಾಡುವ ಸವತಿ ಮಚ್ಚರ ಈ ಎಲ್ಲ ಹಿನ್ನೆಲೆಯ ನಿವಾರಣೆಗಾಗಿ ಸೃಷ್ಟಿಯಾದ ಮರ. ಇದು 'ರನ್ನದ ಮರ' ವಾಗಿ, ಇದರ ಹೂ ಗೊಂಚಲು ಚಿನ್ನದ ಗೊನೆಯಾಗಿ ನಂತರ ಸಮೃದ್ಧ ಫಲಗಟ್ಟಿರುವುದು 'ಗುದಿ ಗುದಿ ಕಾಯಿಯ' ಮರವಾಗಿದೆ. ಬಂಜೆತನದ ಹಿನ್ನೆಲೆಯಿರುವ ಕಥೆಗೆ, ಕತೆಗಾರರು ಈ ಮರದ ಮೂಲಕ ಸರ್ವರ ಸಂತೋಷ, ತಾಯಿ ಮಕ್ಕಳ ಸಂಬಂಧ, ಸಂತಾನಾಭಿವೃದ್ಧಿಯ ಆಶಯವನ್ನು ತುಂಬಿರುವುದು ಔಚಿತ್ಯಪೂರ್ಣವಾಗಿದೆ.

ಈ ಕಥೆಗೆ ಸಂವಾದಿ ಮತ್ತು ಮಾದರಿಯಾಗಿ ಚಂದ್ರಶೇಖರ ಕಂಬಾರರ ಕೃತಿ ಪುಷ್ಪರಾಣಿ ನಾಟಕವಿದೆ. ಇದಕ್ಕೆ 'ರನ್ನದ ಮರ ಚಿನ್ನದ ಗೊನೆ ಗುದಿಗುದಿ ಕಾಯಿ'ಯಂತಹ ಜನಪದ ಕಥೆಗಳೇ ಮೂಲ ಕಥಾ ವಸ್ತುಗಳಾಗಿವೆ. ಈ ನಾಟಕದಲ್ಲಿ ರಾಜ ವನರಕ್ಷಣೆಗಾಗಿ ಕಾಡಿಗೆ ಹೋದಾಗ ವನಪಾಲಕ ತನ್ನ ಮಗಳನ್ನು ತೋರಿಸಿ ಅವಳ ವಿಷಯ ವಿಶೇಷವನ್ನು ರಾಜನಿಗೆ ವಿವರಿಸುತ್ತಾನೆ. "ಕಾಡಿನಲ್ಲಿ ಸಿಕ್ಕ ಕೂಸನ್ನೆ ಮಗಳೆಂದು ಭಾವಿಸಿ ಸಾಕಿದೆ ಪ್ರಭು. ಆಮೇಲೆ ತಿಳಿಯಿತು ಈಕೆ ವನದೇವತೆಯ ಮಗಳೆಂದು. ಅವಳೇ ನಾಲ್ಕು ಚಿಕ್ಕ ಕಲ್ಲು ಕೊಡುತ್ತಾಳೆ. ಒಂದೊಂದನ್ನೇ ಅವಳ ಮೇಲೆ ಎಸೆಯುತ್ತಾ ಹೋದರೆ ಒಂದರಿಂದ ಮರವಾಗುತ್ತಾಳೆ. ಇನ್ನೊಂದನ್ನೆಸೆದರೆ ಹೂಬಿಡುತ್ತಾಳೆ. ಮೂರನೆಯದರಿಂದ ಹೂ ಉದುರಿಸುತ್ತಾಳೆ. ನಾಲ್ಕನೆಯ ಕಲ್ಲು ಎಸೆದರೆ ಹೀಗೆ ಪುನಃ ಹುಡುಗಿಯಾಗುತ್ತಾಳೆ."48

ಪುಷ್ಪರಾಣಿ ಹೀಗೆ ಬದಲಾವಣೆಗೊಳ್ಳುವ ಕ್ರಿಯೆ ಪ್ರಕೃತಿಯ ಋತುಮಾನಗಳ ಬದಲಾವಣೆಯದಾಗಿದೆ. ಪುಷ್ಪರಾಣಿಯ ಮೇಲೆ ಎಸೆಯಲ್ಪಡುವ ಮೂರು ಕಲ್ಲುಗಳು ವಸಂತ ಮಾಸ, ಚೈತ್ರಮಾಸ, ಮಾಘ ಮಾಸ ಋತುಗಳಲ್ಲಿ ಕ್ರಮವಾಗಿ ಗಿಡಮರಗಳು ಬೆಳೆದು ಚಿಗುರುವ, ಹೂ ಫಲಗಟ್ಟುವ ಎಲೆ, ಹೂ ಫಲಗಳುದುರುವ, ಮತ್ತೆ ವಸಂತ ಮಾಸಕ್ಕೆ ಚಿಗುರೊಡೆಯುವ ಕ್ರಿಯಾ ಸೂಚನೆಯಾಗಿವೆ. ನಾಲ್ಕನೆಯ ಕಲ್ಲು ಪ್ರಕೃತಿ ಮತ್ತು ಸ್ತ್ರೀಯರಲ್ಲಿರುವ ಸೃಷ್ಟಿಯ ಸಾಮ್ಯಗುಣದ ಸಂಕೇತವಾದಂತೆ ಹೆಣ್ಣಾದ, ಪುಷ್ಪ ರಾಣಿ ಕೊನೆಗೆ ಪ್ರಕೃತಿಯ ಮರವಾಗಿಯೂ ರೂಪುಗೊಳ್ಳುವುದು ವಿಶಿಷ್ಟವಾಗಿದೆ. ಕಾಲ ಮತ್ತು ಮರದ ಈ ಬೆಳವಣಿಗೆಯ ಕ್ರಿಯೆಯೇ ಸಸ್ಯ ಸಂಸ್ಕೃತಿ. ಸ್ತ್ರೀ ಸಂಸ್ಕೃತಿಯೂ ಆಗಿದೆ. ಈ ಪ್ರಕೃತಿ ರಕ್ಷಣೆಯು ಮಾನವ ಧರ್ಮವಾಗಬೇಕು ಎಂಬುದಕ್ಕೆ ಪುಷ್ಪರಾಣಿಯ ರಕ್ಷಕರಾಗಿ ವನಪಾಲಕ ರಾಜ, ನಾಟಕದ ಕೊನೆಗೆ ರಾಣಿ ಮತ್ತು ರಾಜ್ಯದ ಪರಿವಾರವೆ ಒಗ್ಗೂಡುವುದು ಕೃತಿಯಲ್ಲಿ ಜೀವತತ್ವಕ್ಕಿರುವ ಪೂರಕ ಬೆಳವಣಿಗೆಯಾಗಿದೆ. ಮಕ್ಕಳ ನಾಟಕವಾದ ಈ ಕೃತಿ ಪರಿಸರ ತಿಳುವಳಿಕೆಯನ್ನು ಮಕ್ಕಳಿಗೂ ಇಡೀ ಮಾನವ ಕುಲದ ಮನಸ್ಸಿಗೆ ಪರಿಣಾಮ ಬೀರಲು ಸಮರ್ಥವಾಗಿದೆ.

ಈ ರೀತಿಯ ಸಹ್ಯಾದ್ರಿ ಕಾಡು ಮತ್ತು ಕಾಂಡ್ಲವನಗಳಂತಹ ದೊಡ್ಡ ದೊಡ್ಡ ಅಡವಿಗಳಲ್ಲದೆ, ಜಗತ್ತಿನಲ್ಲಿ ಸಾವಿರಾರು ಚಿಕ್ಕ ಪುಟ್ಟ ಕಾಡುಗಳಿವೆ. ಪಶ್ಚಿಮ ಘಟ್ಟಗಳಂತು ಅಡವಿಯ ತಾಣವಾಗಿದ್ದು ಮಲೆನಾಡೆಂಬ ಹೆಸರಿನಿಂದ ಕರೆಯಲ್ಪಟ್ಟಿದೆ. "ಕಾಂಡ್ಲವನಗಳು ಉಷ್ಣವಲಯ ಹಾಗೂ ಅರೆ ಉಷ್ಣವಲಯಗಳ ಕರಾವಳಿ ಪ್ರದೇಶಗಳಲ್ಲಿ ಬೆಳೆಯುತ್ತವೆ. ನದಿ ಹಾಗೂ ಸಮುದ್ರಗಳು ಕೂಡುವ ಸ್ಥಳದಲ್ಲಿ ಮಾತ್ರ ಕಾಂಡ್ಲವನಗಳು ಬೆಳೆಯುತ್ತವೆ. ನಮ್ಮ ರಾಜ್ಯದ ಉತ್ತರ ಕನ್ನಡ ಹಾಗೂ ದಕ್ಷಿಣ ಜಿಲ್ಲೆಗಳ ಕರಾವಳಿ ಪ್ರದೇಶಗಳಲ್ಲಿ ಕಾಂಡ್ಲವನಗಳನ್ನು ಕಾಣಬಹುದು. ಪ್ರಪಂಚದಲ್ಲಿ 1671 ರಕ್ಷಿತ ಕಾಂಡ್ಲವನಗಳ ಒಟ್ಟು 154 ಲಕ್ಷ ಹೆಕ್ಟೇರ್‌ಗಳಷ್ಟು ಪ್ರದೇಶವಿದೆ. ನಮ್ಮ ದೇಶದಲ್ಲಿ 15 ಕಾಂಡ್ಲವನಗಳ ಪ್ರದೇಶಗಳಿವೆ. ಅವುಗಳೆಂದರೆ ಕೋರಿಯಾ, ಗೋದಾವರಿ ನದಿ ಮುಖಜ ಭೂಮಿ, ಕೃಷ್ಣಾ ಅಳಿವೆ, ಗೋವೆಯ ಕಡಲು, ಕಛ್‌ದ ಖಾರಿ, ಕರ್ನಾಟಕದ ಕುಂದಾಪುರ, ವೆಂಬನಾಡ್, ರತ್ನಗಿರಿ, ಮಹಾನದಿ, ನದಿಮುಖಜ ಭೂಮಿ, ಭಿತರ್ ಕನ್ನಿಕಾ, ಪಿಚಾವರಂ, ಕ್ಯಾಲಿವೇರ್, ಸುಂದರ ಬನಗಳು ಹಾಗೂ ಉತ್ತರ ಅಂಡಮಾನ್ ಮತ್ತು ನಿಕೋಬಾರ್.

ನಮ್ಮ ದೇಶದಲ್ಲಿ ಒಟ್ಟು 3.56 ಲಕ್ಷ ಹೆಕ್ಟೇರ್‌ಗಳಷ್ಟು ಕಾಂಡ್ಲವನ ಪ್ರದೇಶವಿದೆ. ನಮ್ಮ ರಾಜ್ಯದಲ್ಲಿ ಕೇವಲ 2 ಚದರ ಕಿ. ಮೀ. ಕಾಂಡ್ಲವನವಿದೆ. ಅಂಡಮಾನ್ ನಿಕೋಬಾರ್ ಪ್ರದೇಶಗಳಲ್ಲಿ 966 ಚ. ಕಿ. ಮೀ. ಕಾಂಡ್ಲವನವಿದೆ".49

ಇಷ್ಟೊಂದು ವಿಸ್ತಾರವಾದ ಅರಣ್ಯ ಪ್ರದೇಶಗಳಿರುವುದರಿಂದಲೇ ಭಾರತ ಸುಂದರ ಹಾಗೂ ಸಂಪತ್ಭರಿತ ರಾಷ್ಟ್ರವಾಗಿದೆ. ಈ ಕಾಡುಗಳು ಭೂ ಸಂರಕ್ಷಣೆಯಲ್ಲದೆ ಸಕಲ ಜೀವಿಗಳಿಗೆ ಆಶ್ರಯ ನೀಡಿ, ಮಾನವನ ಮೂಲಭೂತ ಅವಶ್ಯಕತೆಗಳಿಂದ ಸ್ವಾರ್ಥ ಆಗರ್ಭ ಶ್ರೀಮಂತಿಕೆಯ ದುರ್ಬಳಕೆಯವರೆಗೆ ನಾನಾ ರೀತಿಯ ಉಪಯೋಗಕ್ಕೆ ತೆರೆದುಕೊಂಡಿವೆ. ಆದ್ದರಿಂದಲೇ ಅರಣ್ಯವಾಸಿಯೂ ಆಗಿದ್ದ ಬುದ್ಧ ಅರಣ್ಯಗಳ ಎಲ್ಲ ಜೀವ ದಯೆಯ ಮಹತ್ವವನ್ನು ಅರಿತು ಬುದ್ದ–

"ಅರಣ್ಯವೆಂದರೆ ವಿಶಿಷ್ಟ ಜೀವಕೋಶ
ಅದು ತನಗಾಗಿ ಏನನ್ನೂ ಬೇಡದೆ
ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ
ಧಾರೆಯೆರೆಯುತ್ತದೆ ಎಲ್ಲಾ ಜೀವಿಗಳಿಗೂ ಆಶ್ರಯ ನೀಡುತ್ತದೆ.
ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ"50

ಎಂದು ಸಾರಿದ್ದಾನೆ. ಅವನು ಇಂತಹ ತತ್ವ ಚಿಂತನೆಗಳಿಂದಲೇ ಜಗತ್ತಿಗೆ ಮೊದಲ ಜೀವವಾದಿ, ಜೀವಜ್ಞಾನಿಯಾಗಿ; ಅರಣ್ಯ ಜೀವಿಗಳ ಸಂಸ್ಕೃತಿಯ ಗುಣ, ಸ್ವಭಾವಗಳ ಅಂತರಂಗವನ್ನು ತೆರೆದಿಟ್ಟಿರುವುದು ಗಮನಾರ್ಹ ಸಂಗತಿ. ಅರಣ್ಯವೆಂಬುದು ಅನನ್ಯ ಜೀವಿ ಸಂಕುಲಗಳ ಮಿಶ್ರ ಸಂಸ್ಕೃತಿಯ ಕೇಂದ್ರವಾಗಿರುತ್ತದೆ. ಅದು ಎಲ್ಲಾ ಜೀವಿಗಳ ಆರೋಗ್ಯ, ರಕ್ಷಣೆಯ ತಾಣವು ಹೌದು ಎಂಬ ಸೂಕ್ಷ್ಮತೆಯನ್ನು ಈ ಮೇಲಿನ ಬುದ್ದನ ಮಾತುಗಳ ಅಂತರಂಗದಲ್ಲಿ ಅಡಕವಾಗಿರುವುದು ವಿಶೇಷವಾಗಿದೆ. ಇವನ ಈ ಮಾತಿನ ಆಳವನ್ನು ತಿಳಿಯಲು ಬಯಸದ ಜನ ಇಂತಹ ಆದಿ ತತ್ವ, ಚಿಂತನೆಗಳನ್ನೆಲ್ಲ ಗಾಳಿಗೆ ತೂರಿ ಆಧುನಿಕ ತತ್ವ, ಚಿಂತನೆಗಳಿಗೆ ಮಾರು ಹೋಗಿ ತಮ್ಮ ತಮ್ಮ ಮೂಲಭೂತ ಅವಶ್ಯಕತೆಗಳಿಗಿಂತ ಹೆಚ್ಚಾಗಿ ಪ್ರಕೃತಿ ಸಂಪತ್ತನ್ನು ಬಳಸುತ್ತಿದ್ದಾರೆ. ಇವರು ಮತ್ತೊಬ್ಬರ ಮೂಲಭೂತ ಅವಶ್ಯಕತೆಗಳ ಬಗ್ಗೆ ಕಾಳಜಿವಹಿಸುವುದಿಲ್ಲ. ಯಾಕೆಂದರೆ ಇವರಿಗೆ ಹೆಸರು, ಅಧಿಕಾರ, ಆಸ್ತಿ, ಶ್ರೀಮಂತಿಕೆಯ ಆಸೆ, ಹಂಬಲವೇ ಪ್ರಧಾನ.

ಇಂತಹವರನ್ನು ಕಂಡು ಅರಿತು ಇವತ್ತಿನ ಸ್ಥಿತಿಯನ್ನು ಗ್ರಹಿಸಿದ್ದ ಬುದ್ಧ ಇವರಿಂದ ಪ್ರಕೃತಿಯ ಮೇಲೆ ಉಂಟಾಗುವ ಪರಿಣಾಮವನ್ನು ಗ್ರಹಿಸಿ 'ಆಸೆಯೆ ದುಃಖಕ್ಕೆ ಮೂಲ'ವೆಂದು ಹೇಳಿದ್ದಾನೆ. ಇವನ ಇಂತಹ ಹಲವಾರು ಮಾತುಗಳ ಮಹತ್ವವನ್ನು ಅರಿತ ಇದುವರೆಗಿನ ಎಲ್ಲ ತತ್ವ ಚಿಂತಕರು. ಕವಿ ವಿಮರ್ಶಕರೆಲ್ಲ 'ಮಾನವತಾವಾದಿ' ಎಂದು ಸೀಮಿತಾರ್ಥದಿಂದ ಗುರುತಿಸಿದ್ದಾರೆ. ಆದರೆ ಬುದ್ಧ ಮಾನವತಾವಾದಿಯಲ್ಲ ಅವನು ಮಹಾನ್ ಜೀವವಾದಿ, ಪರಿಸರ ವಿಜ್ಞಾನಿಯಾಗಿದ್ದಾನೆ. ಇವನ ಮಾತಿನ ಧ್ವನ್ಯರ್ಥದಂತೆ ಮಾನವನ ಆಸೆಗಳಿಂದಲೇ ನಿಸರ್ಗ ನಿಧಿಗಳೆಲ್ಲ ಬರಿದಾಗುತ್ತಿರುವುದು. ಈ ಜನರ ಬಲಿಗೊಳಪಟ್ಟ ಸಹ್ಯಾದ್ರಿ ಕಾಡುಗಳ ಬಗ್ಗೆ ತೇಜಸ್ವಿ ಹೀಗೆ ಹೇಳುತ್ತಾರೆ.

"ಕಾಡುಗಳು ಇವತ್ತು ತೆರೆದಿಟ್ಟ ಖಜಾನೆಗಳಾಗಿವೆ. ಒಂದೊಂದೇ ಮರ ಎರಡು ಮೂರು ಲಕ್ಷ ಬೆಲೆ ಬಾಳುತ್ತವೆ. ಕಲ್ಲು ಕಳ್ಳರಿಗೆ ಮರಗಳ್ಳರಿಗೆ ಗಂಧದ ಚಕ್ಕೆ ಕಳ್ಳ ಸಾಗಾಣಿಕೆ ಮಾಡುವ ಖದೀಮರಿಗೆ ಕಣ್ಣು ಹರಿಸಿದಲೆಲ್ಲಾ ಹಣ ರಾಶಿ ಬಿದ್ದಿರುವಂತೆ ಕಾಣುತ್ತದೆ. ದುಡ್ಡು ಈ ರೀತಿ ಕೋಡಿ ಬಿದ್ದಿರುವಲ್ಲೆಲ್ಲಾ ಏನೇನು ರೂಪುಗೊಳ್ಳುತ್ತದೆಯೋ ಅದೆಲ್ಲ ಸಹ್ಯಾದ್ರಿಯ ಕಾಡಿನೊಳಗೆ ಶುರುವಾಗಿದೆ. ಕಾಡು ಕಾಳದಂಧೆಗಳ ತವರು

ಮನೆಯಾಗುತ್ತದೆ. ಕಾಡಿನಿಂದ ಉತ್ಪತ್ತಿಯಾಗುತ್ತಿರುವ ಕಾಳಧನ ನಮ್ಮ ದೇಶದ ಅತ್ಯುನ್ನತ ರಾಜಕೀಯವನ್ನು ಸಹ ನಿಯಂತ್ರಿಸುತ್ತಿದೆ. ಇಲ್ಲಿ ಕಟ್ಟುವ ಅಣೆಕಟ್ಟುಗಳಾಗಲಿ, ಮುಳುಗಡೆಯಾಗುವ ಕಾಡುಗಳಾಗಲಿ, ಕಲ್ಲು ಅದಿರುಗಳನ್ನು ತೆಗೆಯುವುದಾಗಲೀ ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳಿಗೂ ರಾಜಕೀಯಕ್ಕೂ ಅಗತ್ಯವಾಗ ತೊಡಗಿದೆ. ಕಾಳವ್ಯವಹಾರಗಳ ವಿಷವೃತ್ತ ಈ ಮಟ್ಟ ತಲುಪಿದ ಮೇಲೆ ಕಾನೂನು ಮತ್ತು ನ್ಯಾಯಾಲಯಗಳು ಇದನ್ನು ವಿರೋಧಿಸಲಾರವು"51.

ಕಾಡುಗಳು ನಾಶವಾಗುತ್ತಿರುವುದರ ಹಿನ್ನೆಲೆಯನ್ನು ಕುರಿತ ಈ ವಿವರಣೆಗೆ ಪೂರಕವಾದ ಆಧಾರಗಳು ನಮ್ಮ ಸಾಹಿತ್ಯ ಕೃತಿಗಳಲ್ಲೆ ಇವೆ. ಉದಾಹರಿಸುವುದಾದರೆ ಚಿದಂಬರ ರಹಸ್ಯ ಕೃತಿಯ ಸುಲೇಮಾನ್ ಯೂಸಫ್ ಬೇರಿ ತನ್ನ ಹಣದಿಂದ; ಅರಣ್ಯ ಇಲಾಖೆ, ಸರ್ಕಾರ, ಕಾನೂನುಗಳನ್ನೆಲ್ಲ ಹುಳ ಮಾಡಿಕೊಂಡು ಕಾಡಿನ ನಾಶಕ್ಕೆ ಅಡಿಯಿಡುತ್ತಿರುವುದು ನಿರಂತರವಾಗಿರುವುದರ ದೃಶ್ಯ– "ಸುಲೇಮಾನ್ ಯೂಸಫ್ ಬೇರಿ ಕೊಂಬೆ ಕಡಿಯ ಹೊರಟವನು ಕಾಂಡಗಳನ್ನೇ ಕಡಿದ. ನೂರಾರು ವರ್ಷಗಳ ದೇಗುಲದ ಕಂಬಗಳಂಥ ಹೆಮ್ಮರಗಳು ಚೀತ್ಕಾರದೊಂದಿಗೆ ನೆಲಕ್ಕುರುಳಿದವು. ಲೋಡುಗಟ್ಟಲೆ ಮರದ ದಿಮ್ಮಿಗಳು ಕೆಸರೂರಿನ ಹಾದಿಯಲ್ಲಿ ಮಂಗಳೂರಿನ ದಿಕ್ಕು ಹಿಡಿದವು. ಕೆಸರೂರಿನ ಜನಕ್ಕೆ ವರ್ಷಾಂತ್ಯದವರೆಗೆ ಇದೊಂದು ಚಿರಪರಿಚಿತ ನೋಟ. ಅನಂತರ ಕಾಡಿನಡಿಯಲ್ಲಿ ಬೆಳೆದಿದ್ದ ಏಲಕ್ಕಿ ಗಿಡಗಳು ಎಲೆ ಬಾಡಿ ಬಿಸಿಲಿನ ಹೊಡೆತಕ್ಕೆ ಕ್ಷೀಣಿಸಿ ಬಹುಬೇಗ ನೆಲ ಹಿಡಿದವು. ಕಾಡು ನೆಲಸಮವಾದಲ್ಲಿ ಲಂಟಾನದ ಅಭೇದ್ಯ ಜಿಗ್ಗು ಕೋಟೆಗಟ್ಟಿ ಕೆಸರೂರನ್ನು ಸುತ್ತುವರಿಯಿತು"52

ಕರ್ನಾಟಕದ ಕಾಡುಗಳಿಗಂತು ಕೇರಳ, ತಮಿಳುನಾಡುಗಳಿಂದ ಬೇರೆ ಬೇರೆ ರಾಜ್ಯದ ಕಂಟ್ರಾಕ್ಟರ್‌ಗಳೇ ಲಗ್ಗೆಯಿಟ್ಟು ಹಾಳು ಮಾಡಿದ್ದಾರೆ. ಇವರು ಕಾಡುಗಳನ್ನು ನಿರ್ನಾಮ ಮಾಡುವುದರ ಜೊತೆಗೆ ಕಾಡಿನೊಳಗೆ ಜೀವನ ಮಾಡುತ್ತಿರುವ ಜನರ ಮೇಲೆ ಆಕ್ರಮಣ, ಶೋಷಣೆ ದಬ್ಬಾಳಿಕೆ ಮಾಡುತ್ತಿರುವುದು ವಿಪರ್ಯಾಸ. ಇದು ಹಿ. ಚಿ. ಬೋರಲಿಂಗಯ್ಯ ಅವರು ಚಾರ್ಮುಡಿ ಪರ್ವತಗಳಲ್ಲಿರುವ ಮಲೇಕುಡಿಯರ ಸಂಸ್ಕೃತಿ ಅಧ್ಯಯನಕ್ಕೆ ಹೋಗಿ ಬರುವಾಗ ಅವರ ಅನುಭವಕ್ಕೆ ಬಂದ ವಿವರ. "ಇದ್ದಕ್ಕಿದ್ದಂತೆ ಅಲ್ಲೊಂದು ಸ್ವಲ್ಪ ಸಮನಾದ ಜಾಗದಲ್ಲಿ ನಾಲ್ಕಾರು ಲಾರಿಗಳು ದಿಮ್ಮಿ ತುಂಬಿಕೊಂಡು ನಿಂತಿವೆ. ಆಧುನಿಕವಾದ ಒಂದು ಕಾಂಕ್ರಿಟ್ ಕಟ್ಟಡವೂ ಇದೆ. ನಾವು ಒಂದೇ ರಸ್ತೆಯಲ್ಲಿ ಹಾದು ಹೋಗುವಾಗ .... ಅಪರಾಧಿಯನ್ನು ವಿಚಾರಣೆ ನಡೆಸುವಂತೆ ಹರೀಶರನ್ನು ಪ್ರಶ್ನಿಸಲಾಗುತ್ತಿದೆ. ಅವರ ಪ್ರಶ್ನೆಯ ತಿರುಳಿಷ್ಟೇ. ಅಪ್ಪಣೆ ಪಡೆಯದೇ ನೀವು ಹೇಗೆ ಈ ಪ್ರದೇಶ ಪ್ರವೇಶಿಸಿದಿರಿ ಎಂಬುದಾಗಿತ್ತು... ...ಸಾವಿರಾರು ವರ್ಷಗಳಿಂದ ಆ ಮಣ್ಣಿನಲ್ಲಿ ಬದುಕುತ್ತಿರುವ ಮಲೆ ಕುಡಿಯರನ್ನು ನೋಡಲು ಕೇರಳದ ಬಂಡವಾಳಶಾಹಿಯ ಅಪ್ಪಣೆ ಪಡೆಯಬೇಕಂತೆಲ ಇದು ನಮ್ಮ ಪ್ರಜಾಪ್ರಭುತ್ವ"53

ಇವರ ಈ ನಿರಂಕುಶ ಪ್ರಭುತ್ವದ ವರ್ತನೆಗಳಿಗೆ ಚಕಾರವೆತ್ತದಂತೆ ನಮ್ಮ ಸರ್ಕಾರ, ಅರಣ್ಯ ಇಲಾಖೆಗಳು ಮೌನವಹಿಸಿವೆ. ಈ ಮೌನ ಅವರ ದೌರ್ಬಲ್ಯಗಳ ಕುರುಹು. ಇಂತಹ ರಾಜಕೀಯ, ಆಡಳಿತಾಧಿಕಾರಿಗಳನ್ನೇ ಮುಂದೆ ಮಾಡಿಕೊಂಡು ಊರುಗಳ್ಳರು ಕಾಡುಗಳ್ಳರಾಗಿ ಈಗ ದೇಶ, ರಾಷ್ಟ್ರಗಳ್ಳರಾಗಿ ಬೆಳೆಯುತ್ತಿದ್ದಾರೆ. ಹೀಗೆ ದಿನ ಬೆಳಗಾದರೂ ಪ್ರಕೃತಿಯ ತಾಣವಾದ ಸಹ್ಯಾದ್ರಿಯ ಪಶ್ಚಿಮ ಘಟ್ಟ ಕಾಡುಗಳ ಮೇಲೆ ನಡೆಯುವ ಅತ್ಯಾಚಾರವನ್ನು ಮೇಲಿನ ವಿವರಗಳು ಹೇಳುವ ಗದ್ಯರೂಪಕ್ಕಿಂತ ಪದ್ಯ ತನ್ನ ಪ್ರತಿಮೆ, ಸಂಕೇತ, ವಿಡಂಬನೆಗಳ ಮೂಲಕ ಹೇಳುವ ಬಗೆ–

"ಗಿರಿ ಕಂದರಗಳ ಗುಡಿಸಲೊಳಗೆ
ಕಾಡು ಸೀಮೆಯ ಹುಡುಗಿ
ಅವಳೆದೆಯ ಗೋಳಗುಮ್ಮಟದೊಳಗೆ
ಕಾಗೆ ಗೂಗೆಗಳ ಅಪಶಕುನಗಳಿಂಚರ
ಬಳಲಿ ಬಾಯಾರಿ ಬರುತ್ತಿದ್ದ ಮೂಡಲ ಸೀಮೆಯ
ಹುಡುಗ ಎದುರಾಗಿಯೇ ಬಿಟ್ಟ
ನೀರು ನೆರಳಿರದ ಜಾಗದಲಿ
ಹುಡುಗಿಯ ಹಸಿರು ಸೀರೆಯ ಸೆಳೆದು
ಅತ್ಯಾಚಾರವೆಸಗಿದಾಗಿನ
ಬೇಸಿಗೆಯ ಮಟ ಮಟ ಮಧ್ಯಾಹ್ನ"54 (ಅವಳಸ್ಥಿ ಪಂಜರದೊಳಗೆ)

ಕವಿ ಅರಣ್ಯಗಳ ಗಿಡಮರಗಳನ್ನು ಕಡಿದು ಬರಿದು ಮಾಡುವ ಮಾನವನ ಪ್ರವೃತ್ತಿಯನ್ನು ವಿಡಂಬಿಸಿದ್ದಾರೆ. ಕಾಗೆ ಗೂಗೆ ಬೇಸಿಗೆಯ ಮಟ ಮಟ ಮಧ್ಯಾಹ್ನ, ಅತ್ಯಾಚಾರ, ನೀರು ನೆರಳಿರದ ಜಾಗ, ಇವೆಲ್ಲ ಅರಣ್ಯ ನಾಶದಿಂದಾಗುತ್ತಿರುವ ಪರಿಣಾಮದ ಪ್ರಕೃತಿ ಪರಿಸರದ ವ್ಯಂಗ್ಯದ ಧ್ವನಿಗಾಗಿ ಬಳಸಿರುವ ಪ್ರತಿಮೆ, ಸಂಕೇತಗಳು.

ಮರಗಳನ್ನು ಕಡಿದವರು ಅದರ ಬುಡವನ್ನು ಬಿಡದೆ ಬೆಂಕಿಯಿಟ್ಟು ಸುಟ್ಟು ಕಾಡನ್ನು ಬಯಲು ಮಾಡುವವರನ್ನು ಕಂಡ ಕವಿ–

"ಕಾಮುಕರ ಸುಡುವ ಬಂದೂಕಿನ
ಕಣ್ಣುಗಳಿಗೆ ರಾತ್ರಿ ಕುರುಡು
ಕೊಡಲಿ ಮಚ್ಚುಗಳ್ಹಿಡಿದ ಕಾಡ ಕಾಮುಕರು
ತುಳುಕಿ ಬಳುಕಾಡುತ್ತಿದ್ದವಳ
ಸೆರಗಾಸಿ ಮಲಗಿ ಮೇಲೆದ್ದು

ರಮಿಸಿದ ಹುಡುಗಿಯ ಕೈ ಕಾಲುಗಳ ಕೊಚ್ಚಿ
ತೊಡೆ ತೋಳುಗಳ ಕೊಯ್ದು
ಅವಳಸ್ಥಿ ಪಂಜರದೊಳಗೆ
ಬೆಳಕ ಬೆಳಗಿಸಿಯೇ ಬಿಟ್ಟಾಗ
ಮತ್ತೆ ಬರಲಿಲ್ಲ ಮುಂಗಾರಿನ ಮುದುಕಿ
ಶವವಿಲ್ಲದವಳ ಸ್ಮಸಾನದೊಳಗೆ
ನೇತಾಡ ತೊಡಗಿದವು ಹಸಿರು ಬೋರ್ಡುಗಳು"55 (ಅವಳಸ್ಥಿ ಪಂಜರದೊಳಗೆ)

ಅರಣ್ಯದಿಂದ ನಾಟ ಸಾಗಿಸುವ ಕಂಟ್ರಾಕ್ಟರ್‌ಗಳ ಹಣದ ವ್ಯಾಮೋಹಕ್ಕೆ ಬಲಿಯಾದ ತಿಳುವಳಿಕೆಯಿಲ್ಲದ ಕಾಡ ಕಾಮುಕ ಜನ ಮರಗಳ ರಂಬೆ, ಕೊಂಬೆ, ಬುಡಗಳನ್ನು ಕಡಿದುರುಳಿಸುತ್ತಾರೆ. ಕಾಡ ಮರಗಳನ್ನು ಕಡಿದರೂ ಮುಂಗಾರ ಮಳೆಗೆ ಮತ್ತೆ ಚಿಗುರುತ್ತವೆ. ಆದರೆ ಚಿಗುರಲು ಬಿಡದಂತೆ ಬುಡಕ್ಕೆ ಬೆಂಕಿಯಿಟ್ಟು ಸುಡುವುದನ್ನು ಕವಿ 'ಅವಳಸ್ಥಿ ಪಂಜರದೊಳಗೆ ಬೆಳಕ ಬೆಳಗಿಸಿಯೇ ಬಿಟ್ಟಾಗ ಮತ್ತೆ ಬರಲಿಲ್ಲ ಮುಂಗಾರಿನ ಮುದುಕಿ' ಎನ್ನುತ್ತಾರೆ. ಇಂತಹ ಬಂಜರು 'ಕಾಡುಗಳು ಸ್ಮಶಾನಗಳಂತಿವೆ. ಅಲ್ಲಿ 'ನೇತಾಡ ತೊಡಗಿದವು ಹಸಿರು ಬೋರ್ಡುಗಳು' ಎನ್ನುವ ಮಾತಿನ ಮೂಲಕ ಸರ್ಕಾರ ಅರಣ್ಯ ಇಲಾಖೆಯ ವ್ಯವಸ್ಥೆಯನ್ನು ಕವಿ ವಿಡಂಬಿಸಿದ್ದಾರೆ. ಇಂತಹ ಸಂಕೇತ ಪ್ರತಿಮೆಗಳ ರೂಪಕ ಪದ್ಯಕ್ಕಲ್ಲದೆ ಗದ್ಯಕ್ಕೆ ದಕ್ಕುವುದು ವಿರಳ. ಅತ್ಯಾಚಾರ ಎಂಬುದು ಜೀವ ಜೀವಗಳ ನಡುವೆ ದ್ವೇಷ ಸೇಡು, ದುರಾಸೆಗಳಿಂದ ಒಂದು ಮತ್ತೊಂದರ ಮೇಲೆ ಕದ್ದು ನಡೆಸುವ ಬಲತ್ಕಾರದ ಆಕ್ರಮಣ. ಗಂಡು ಹೆಣ್ಣಿನ ಮೇಲೆ ನಡೆಸುವ ಅತ್ಯಾಚಾರದ ಪ್ರಕ್ರಿಯೆಯನ್ನು ಕವಿ ಕಾಡುಗಳ್ಳ ಮರಕಟುಗರು ಗಿಡ ಮರಗಳನ್ನು ಕಡಿದುರುಳಿಸುವುದಕ್ಕೆ ಹೋಲಿಸಿ ಮರದ ಅತ್ಯಾಚಾರವೆಂದು ನಿರೂಪಿಸಿರುವುದು ಮಾರ್ಮಿಕವಾಗಿದೆ. ಮಾನವನಿಂದ ಅತ್ಯಾಚಾರ, ಹಿಂಸೆಗೊಳಪಟ್ಟ ಈ ಕಾಡು ದೊಡ್ಡವರು ಮಕ್ಕಳೆಂಬ ಭೇದವನ್ನೆಣಿಸದೆ ಇಡೀ ಮಾನವ ಕುಲವನ್ನೇ ವಿರೋಧಿಸುತ್ತ ಹುಡುಗರನ್ನು ಕರೆದುಕೊಂಡು ಹೋಗದಂತೆ ಮೋಡಕ್ಕೆ ಎಚ್ಚರಿಸುತ್ತಿದೆ.ಕಾಡಿನ ಅಂತಃಕರಣದ ನುಡಿಗಳನ್ನು ಕವಿ ಕುವೆಂಪು ಅವರು 1926 ರಲ್ಲೆ ಮೋಡಣ್ಣನ ತಮ್ಮ ಕೃತಿಯಲ್ಲಿ ಕಾಡು, ಮೋಡ, ಹುಡುಗ, ಗಿರಿ, ತಾಯಿಯರ ಸಂಭಾಷಣೆ ರೂಪದಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಅದರಲ್ಲಿ ಕಾಡಿನ ನುಡಿಯ ಒಂದು ತುಣುಕು:

"ಬಿಡೊ ಬಿಡೊ ನಿನ್ನೀ ನುಣ್ಣನೆ ನುಡಿಗಳ:
ಕಡಿ ಕಡಿ ಎನ್ನುವೆ ತಂದೆಗೆ ಬುಡಗಳ!
ಬೆಂಕಿಯ ಬುಡಗಳಿಗಿಡಿಸುವನು
ಧಗ ಧಗ ಉರಿಸುವನು !
ಅಂಕೆಯೆ ಇಲ್ಲದೆ ಕಡಿಸುವನು
ಸೊಬಗನೆ ಕಡಿಸುವನು !
ಸೊಟ್ಟನೆ ಮರಗಳ ನೊಡಿಸುವನು ;
ಕಟ್ಟಿಗೆಯಂದದಿ ಸುಡಿಸುವನು!
ದಟ್ಟನೆ ಎನ್ನನು ಕಡಿ ಕಡಿದು
ಮಟ್ಟವ ಮಾಡುವರಡಿಗಡಿಗೆ.
ಕಡಿವರೆ ಹೊರತು ಬಂದವರೆಲ್ಲಾ
ನೆಡುವರನೊಬ್ಬರ ಕಾಣಲೆ ಇಲ್ಲಾ.
ಇದ್ದಿಲ ನೆವದಿಂ ಕಡಿವರು ಕೆಲರು.
ಗೆದ್ದಿಲಿಗೆನ್ನನು ಕೊಡುವರು ಕೆಲರು!
ಕದ್ದೇ ಸಾಗಿಪರೆನ್ನನು ಕೆಲರು.
ಸುದ್ದಿಯೆ ಇಲ್ಲದೆ ಕೊಲ್ಲುತಲಿಹರು!"56 (ಮೋಡಣ್ಣನ ತಮ್ಮ)

ಈ ಭಾಗ ಮೇಲೆ ಚರ್ಚಿಸಿದ ಎಲ್ಲಾ ವಿಶ್ಲೇಷಣೆಯ ವಿವರಗಳನ್ನು ಒಳಗೊಂಡ ಸರಳ, ಸ್ಪಷ್ಟ ನಿರೂಪಣೆಯಾಗಿದೆ. ಇಲ್ಲಿ ಮಾನವರ ಕಾಡಿನ ನಾಶದ ಪ್ರಕ್ರಿಯೆಗಳ ವಿವರವಿದೆ. ಈ ಜನ ಬಂದವರೆಲ್ಲ ಕಡಿಯುವವರೇ ವಿನಹ, ನೆಡುವವರೊಬ್ಬರನ್ನು ಕಾಣಲೇ ಇಲ್ಲ ಎಂದು ಕಾಡು ವಿಷಾದಿಸುತ್ತಿದೆ. ಈ ಜನರು ಎಂತಹ ಸಂಬಂಧವನ್ನೂ ಒಡೆಯ ಬಲ್ಲರೇ ಹೊರತು ಕೂಡಿಸುವವರಲ್ಲ. ಇವರು ನಮ್ಮಿಬ್ಬರ ಗೆಳೆತನವನ್ನು ಒಡೆಯುತ್ತಾರೆ ಎಂದು ಮೋಡಣ್ಣನಿಗೆ ಕಾಡು ಎಚ್ಚರಿಸುವ ಮಾತುಗಳಿವು:

"ಎಲೆ ಮೋಡಣ್ಣ, ಎಲೆ ಮೋಡಣ್ಣಾ;
ಸಾಯುತಲಿರುವೆನೋ ನೀ ನೋಡಣ್ಣಾ!
ನಾನಿರಲಿಲ್ಲಿಗೆ ಬಹೊ, ಮೋಡಣ್ಣ
ನಾನಳಿಯಲು ನೀ ಓಡುವಿಯಣ್ಣ !
ಗೆಳೆತನವೆಮ್ಮದ ಬಿಡಿಸುವರಣ್ಣ;
ತಲೆಯೊಳು ಕೆಂಡವನಿಡಿಸುವರಣ್ಣ !
ಮನುಜರು ಹೋದೆಡೆಯೆಲ್ಲಾ ಹಾಳು!
ನೀನಿವನೊಯ್ದರೆ ತಪ್ಪದೊ ಗೋಳು!
ಎಲೆ ಮೇಘಣ್ಣ, ನಡೆ ಬೇಗಣ್ಣಾ!
ಮಾತೇನಿವನೊಡನಿವ ಹುಡುಗಣ್ಣಾ"56 (ಮೋಡಣ್ಣನ ತಮ್ಮ)

ಇಲ್ಲಿ ಕಾಡು ಮತ್ತು ಮೋಡದ ನಡುವಿನ ಸ್ವಾಭಾವಿಕ ಸಂಬಂಧವನ್ನು ಮಾನವರನ್ನು ಕುರಿತ ವಿಡಂಬನೆ 'ಗೆಳೆತನವೆಮ್ಮದ ಬಿಡಿಸುವರಣ್ಣ, ತಲೆಯೊಳು ಕೆಂಡವನಿಡಿಸುವರಣ್ಣ' ಎಂಬ ಸಾಲುಗಳಲ್ಲಿದೆ. ಕಾಡು ಮತ್ತು ಮೋಡದ ಸಂಬಂಧವೇನೆಂದರೆ ಕಾಡಿದ್ದರೆ ಮೋಡಕಟ್ಟುತ್ತದೆ, ಮೋಡಕಟ್ಟಿದರೆ ಮಳೆ ಬರುತ್ತದೆ, ಮಳೆ ಬಂದರೆ ಕಾಡು ಬೆಳೆಯುತ್ತದೆ. ಹಾಗಾಗಿ, ಕಾಡು, ಮೋಡ, ಮಳೆ, ಜೀವ ಇವಕ್ಕೆಲ್ಲ ಒಂದಕ್ಕೊಂದು ಅವಿನಾಭಾವ ಸಂಬಂಧವಿದೆ. ಈ ಸಂಬಂಧವನ್ನು ಮಾನವ ಹಾಳು ಮಾಡುತ್ತಾನೆ. ಇದು ನಿನಗೂ ತಪ್ಪಿದ್ದಲ್ಲ ಎಂದು ಎಚ್ಚರಿಸುತ್ತದೆ. ಇಲ್ಲಿ ಕವಿ ಕಾಡು ಮತ್ತು ಮೋಡಗಳಿಗೆ ತಾನೆ ಆತ್ಮವಾಗಿ, ಧ್ವನಿಯಾಗಿ ಅವುಗಳ ಅಂತಃಕರಣವನ್ನು ತೆರೆದಿಟ್ಟಿರುವುದು ಔಚಿತ್ಯಪೂರ್ಣವಾಗಿದೆ.

5. ಕೀಟಗಳ ಜೀವನ ಸಂಸ್ಕೃತಿ:

"ಕಾಡಿನ ಹೆಚ್ಚಿನ ಕೀಟಗಳು ಸಸ್ಯಗಳ ವಿವಿಧ ಭಾಗಗಳನ್ನೇ ತಿಂದು ಬದುಕುತ್ತವೆ. ಅವು ಎಲೆ, ಚಿಗುರು, ಹಣ್ಣು ತಿನ್ನುವ, ಕಾಂಡ ಕೊರೆಯುವ, ರಸ ಹೀರುವ ಕೋಟ್ಯಾಂತರ ಕೀಟಗಳು ಅ ಒಂದೊಂದು ಕಂಬಳಿ ಹುಳುವೂ ದಿನವೂ ತನ್ನ ತೂಕದ ಎರಡು ಪಾಲು ಹಸಿರು ನುಂಗುವಂತಹುದು. ಈ ಹೊಟ್ಟೆಬಾಕರ ಸಂತಾನಾಭಿವೃದ್ಧಿಯ ಗತಿಯೂ ಅತಿ ತೀವ್ರ. ನಿಯಂತ್ರಣವಿಲ್ಲದೆ ಹೋದರೆ ಕೇವಲ ಒಂದು ಜತೆ ತುಂಬಿಗಳು, ವರ್ಷವೊಂದರಲ್ಲೇ 6 ಕೋಟಿ ತುಂಬಿಗಳಾಗಬಹುದು. ನೈಸರ್ಗಿಕ ಹತೋಟಿಯಿಲ್ಲದೆ ಹೋದಲ್ಲಿ ಈ ಕೀಟ ಸೈನ್ಯ ಕಾಡನ್ನು ಸಂಪೂರ್ಣ ಧ್ವಂಸ ಮಾಡುವುದು ಖಂಡಿತ. ಆದರೆ ನಿಸರ್ಗದ ವ್ಯವಸ್ಥೆಯಲ್ಲಿ ಇಂಥ ಸಸ್ಯಹಾರಿ ಕೀಟಗಳನ್ನೇ ತಿಂದು ಬದುಕುವ ಹಕ್ಕಿಗಳಿಷ್ಟಿವೆ. ಕೇವಲ ಒಂದು ಟಿಟ್ ಹಕ್ಕಿ ವರ್ಷಕ್ಕೆ ಒಂದೂವರೆ ಲಕ್ಷ ಕಂಬಳಿ ಹುಳುಗಳನ್ನು ಸಂಹರಿಸುತ್ತದಂತೆ ಅ ಹಾರುವ ಕೀಟಗಳನ್ನು ಬೇಟೆಯಾಡುವ, ಫ್ಲೈಕ್ಯಾಚರ್, ಮರದ ಕಾಂಡದೊಳಗಿನವನ್ನು ಹಿಡಿಯುವ ಮರ ಕುಟಿಗ, ತರಗೆಲೆ ಕೆದರುವ ಕಾಡುಕೋಳಿ ಇವರೆಲ್ಲಾ ಕೀಟ ಭಕ್ಷಕರೇ. ಇನ್ನು ಇತರ ಕೀಟಗಳನ್ನು ತಿಂದು ಜೀವಿಸುವ, ಕಾಡು ಹಂದಿ, ಕರಡಿ, ಗುಳ್ಳೆನರಿ, ಮುಂಗುಸಿಗಳೂ ಸಹ ನೈಸರ್ಗಿಕ ಕೀಟನಾಶಕಗಳೇ. ಇದೂ ಸಾಲದೆಂಬುದಕ್ಕೆ ಕೀಟಗಳನ್ನೇ ಬೇಟೆಯಾಡುವ ಮುಳ್ಳಿಲಿ, ಓತಿ, ಕಪ್ಪೆ, ಹಾವುಗಳೂ ಇವೆ. ಬೇಟೆಗಾರ (Predatory) ಕೀಟಗಳಾದ ಮ್ಯಾಟಿಸ್, ಕಂಚುಗಾರ (Wasp) ಮತ್ತು ಜೇಡಗಳಿವೆ. ಕೀಟಗಳನ್ನು ಹಿಡಿದು ಭಕ್ಷಿಸಿ ಲವಣಾಂಶಗಳನ್ನು ಅರಗಿಸಿಕೊಳ್ಳುವ ಸಸ್ಯಗಳೂ ಕೆಲವು ಇವೆ."57 ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ ಸನ್‌ಡ್ಯೂ (Sundew) ಅಥವಾ ಡ್ರಾಸಿರಾ, ಬೆಣೆ ಸಸ್ಯ (Bladder wort) ವೀನಸ್ ಫ್ಲೈಟ್ರಾಪ್ (Venus fly trap) ಪಿಚರ್ ಪ್ಲಾಂಟ್(Pitcher Plant)ಮುಂತಾದವು. ಈ ಕೀಟ ಭಕ್ಷಕ ಸಸ್ಯಗಳು ತಮ್ಮ ಬಣ್ಣ ಮತ್ತು ಸುವಾಸನೆಯಿಂದ ನೊಣ, ಕೀಟಗಳನ್ನು ಆಕರ್ಷಿಸಿ ಬಂಧಿಸಿ ಅವುಗಳಲ್ಲಿರುವ ಪ್ರೋಟಿನ್ ಅಂಶವನ್ನು ಈ ಸಸ್ಯಗಳು ತಮ್ಮ ಕಿಣ್ವಗಳಿಂದ ಹೀರಿಕೊಂಡು ಕೀಟ ಶೇಷವನ್ನು ಹೊರಚೆಲ್ಲುತ್ತವೆ. ಇಂತಹ ಕೀಟ ಭಕ್ಷಕ ಸಸ್ಯಗಳು ಇನ್ನೂ ಹಲವಾರಿವೆ. ಸಾಮಾನ್ಯವಾಗಿ "ಈ ಗಿಡಗಳೆಲ್ಲ ಬೆಳೆವುದು ಜೌಗು, ಉಸುಬು ಅಥವಾ ಹೂಳು ತುಂಬಿರುವ ಪ್ರದೇಶದಲ್ಲಿ. ಇದರಿಂದಾಗಿ ಭೂಮಿಯಲ್ಲಿ ಸಾರಜನಕ ಸಂಯುಕ್ತ ವಸ್ತುಗಳ ಅಭಾವವಿರುತ್ತದೆ. ಹಾಗಾಗಿ ಪ್ರೋಟಿನ್ ತಯಾರಿಕೆಗೆ ಅವು ಕೀಟಗಳನ್ನು ಅವಲಂಬಿಸಿವೆ. ಕೀಟಗಳ ದೇಹದಲ್ಲಿ ಹೆಚ್ಚು ಪ್ರೋಟಿನ್ ಅಂಶ ಇರುವುದರಿಂದ ಅವುಗಳನ್ನು ಅರಗಿಸಿಕೊಳ್ಳುವ ತಂತ್ರವನ್ನು ಈ ಸಸ್ಯಗಳು ರೂಢಿಸಿಕೊಂಡಿವೆ"58.

ಇಂತಹ ಸಸ್ಯಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿ ನೋಡಬೇಕು. ಇಲ್ಲಿರುವ ಹಕ್ಕಿ–ಪಕ್ಷಿ, ಸಸ್ಯ ಮತ್ತು ಕೀಟಗಳ ಜೀವನ ಸಂಬಂಧವೆ ವಿಶೇಷ. ಅಂದರೆ ಸಸ್ಯಗಳು ಕೂಡ ಅದರದೇಯಾದ ಸಸ್ಯ ಸಂಕುಲವನ್ನು ತಿನ್ನದೆ, ಬೇರೊಂದು ಜೀವಿಗಳ ಕೀಟಜಾತಿಯನ್ನು ಆಹಾರಕ್ಕೆ ಅವಲಂಬಿಸಿರುವುದು ಪ್ರಕೃತಿಯ ಆಹಾರ ಸರಪಳಿಯ ವೈಶಿಷ್ಟ್ಯ ಇಲ್ಲಿ ಕೀಟ ಸಂಸ್ಕೃತಿ, ಸಸ್ಯ ಸಂಸ್ಕೃತಿ ಮತ್ತು ಹಕ್ಕಿ–ಪಕ್ಷಿಗಳ ಸಂಸ್ಕೃತಿಗಳು ಒಂದಕೊಂದು ಜೊತೆಯಾಗಿ, ಆಹಾರ ಸರಪಳಿಯಲ್ಲಿ ಸೇರಿಹೋಗಿವೆ. ಅಂದರೆ ಈ ಪ್ರಕೃತಿಯಲ್ಲಿ ಏರುಪೇರುಗಳಾಗದಂತೆ, ಒಂದನ್ನು ತಿಂದು ಒಂದು ಬದುಕಲು ರೂಪುಗೊಂಡಿರುವ ಜೀವಿಗಳ ಹಾನಿ ಸಹಜ ಚಟುವಟಿಕೆಯಾಗಿ ರೂಪುಗೊಂಡಿರುವುದೇ ಗಮನಾರ್ಹ ಸಂಗತಿ.

ಕೊನೆ ಟಿಪ್ಪಣಿ

1. ಪೂರ್ಣಚಂದ್ರ ತೇಜಸ್ವಿ, ಕೆ.ಪಿ, ವಿಸ್ಮಯ(1), ಪುಟ–12
2. ಅದೇ, ಪುಟ–15
3. ಎಸ್.ಅನಂತನಾರಾಯಣ, ಎಲ್ಲೆಯರಿಯದ ಕಡಲು, ಅನು–ಪುಟ 16
4. ಎ.ನಾಗಭೂಷಣ ರಾವ್ ಸಿಂಧೆ, ಜೀವ ಜೀವನ, ಪು–8
5. ಎಸ್. ಅನಂತನಾರಯಣ, ಎಲ್ಲೆಯರಿಯದ ಕಡಲು, ಅನು–ಪು–15–16
6. ಕೆ. ಉಲ್ಲಾಸ ಕಾರಂತ, ಕಾಡು ಪ್ರಾಣಿಗಳ ಜಾಡಿನಲ್ಲಿ, ಪು–1
7. ಪುಟ್ಟಸ್ವಾಮಿ. ಕೆ, ಕೃಪಾಕರ ಸೇನಾನಿ, ಜೀವಜಾಲ, ಪು–14
8. ಹಾಲ್ದೋಡ್ಡೇರಿ ಸುದೀಂದ್ರ, ಜೀವ ಉಗಮದ ಕುರುಹು ಚಂದ್ರನಲ್ಲಿ, ಉದಯವಾಣಿ ದಿನ ಪತ್ರಿಕೆ, ಪು–8 (2002)
9. ವಾಸುದೇವ ಎಸ್, ಸಸ್ಯ ವಿಕಸನದ ಸಪ್ತಪದ, ಪ್ರಜಾವಾಣಿ ದಿನ ಪತ್ರಿಕೆ, ಸಾಪ್ತಾಹಿಕ ಪುರವಣೆ, 30ನೇ ಜನವರಿ 2000
10. ಮೂಲ: ಉದಯಮೂರ್ತಿ ಎಂ.ಎಸ್. ಅನು: ಅನಂತನಾರಾಯಣ.ಎಸ್. ಎಲ್ಲೆಯರಿಯದ ಕಡಲು, ಪು–40
11. ಕೆ. ಉಲ್ಲಾಸಕಾರಂತ, ಅರಣ್ಯ ಮತ್ತು ಸಮಾಜ, ಪು–8–9
12. ಕುವೆಂಪು, ವಿಭೂತಿಪೂಜೆ, ಪು– 27–28
13. ಕೆ. ಪುಟ್ಟಸ್ವಾಮಿ, ಕೃಪಾಕರ ಸೇನಾನಿ, ಜೀವಜಾಲ, ಪು–45
14. ರತ್ನ ಸಂಪುಟ, ಪು–48
15. ಬೋರಲಿಂಗಯ್ಯ ಹಿ.ಚಿ, ಗಿರಿಜನ ನಾಡಿಗೆ ಪಯಣ, ಪು–90–91
16. ಅದೇ, ಪು–92–93
17. ಕೆ. ಉಲ್ಲಾಸ ಕಾರಂತ, ಅರಣ್ಯ ಮತ್ತು ಸಮಾಜ, ಪು–13
18. ಮುತ್ತೋಡಿಯಲ್ಲಿ ಪ್ರಕೃತಿ ವಿಸ್ಮಯ, ಪ್ರಜಾವಾಣಿ ವಾರ್ತೆ, ದಿನ ಪತ್ರಿಕೆ, 8ನೇ ಡಿಸಂಬರ್, 2000
19. ಬಿ.ಜಿ.ಎಲ್.ಸ್ವಾಮಿ, ಸಸ್ಯಪುರಾಣ, ಪು–6
20. ರತ್ನ ಸಂಪುಟ, ಪು–3
21. ಸುವರ್ಣ ಸಂಪುಟ, ಪು–32
22. ಬಿ.ಜಿ.ಎಲ್.ಸ್ವಾಮಿ,ಹಸುರು ಹೊನ್ನು, ಪು–114
23. ಡಿ.ವಿ.ಜಿ, ಮಂಕುತಿಮ್ಮನ ಕಗ್ಗ, ಪು–130
24. ರತ್ನ ಸಂಪುಟ,ಪು–16–17
25. ಜಿ.ಎಸ್. ಶಿವರುದ್ರಪ್ಪ, ಚೆಲುವು ಒಲವು, ಪು–48
26. ಅದೇ, ಪು–1
27. ಅದೇ, ಪು–2
28. ಶ್ರೀನಿವಾಸ್, ಚೆಲುವು, ಪು–8
29. ರತ್ನ ಸಂಪುಟ, ಪು–4
30. ಮಲ್ಲು ಸಿ. ಕೊತ್ನೂರ್, ವಸುಂದರಾ, ಪು–65
31. ಕೆ.ಪುಟ್ಟಸ್ವಾಮಿ, ಕೃಪಾಕರ ಸೇನಾನಿ,ಜೀವಜಾಲ, ಪು–107–108
32. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕರ್ವಾಲೋ,ಪು–26

33. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪು–116
34. ಅದೇ, ಪು–117
35. ಬಿ.ಜಿ.ಎಲ್.ಸ್ವಾಮಿ, ಹಸಿರು ಹೊನ್ನು, ಪು–117
36. ಅದೇ, ಪು–87
37. ಅದೇ, ಪು–55
38. ಅದೇ, ಪು–52
39. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪು–117
40. 40.ಸಂ.ಜಿ.ಎಚ್. ನಾಯಕ್, ಹೊಸಗನ್ನಡ ಕವಿತೆ, ಪು–164
41. ಅದೇ, ಪು, 165
42. ಚಂದ್ರಶೇಖರ ತಾಳ್ಯ, ಸುಡುವ ಭೂಮಿ, ಪು–31
43. ಅದೇ, ಪು–24
44. ಡಿ.ವಿ.ಜಿ, ಮಂಕುತಿಮ್ಮನ ಕಗ್ಗ, ಪು–129
45. .ಬಿ.ಜಿ.ಎಲ್. ಸ್ವಾಮಿ, ಹಸಿರು ಹೊನ್ನು, ಪು–373
46. ಸಂ.ಎನ್.ಜಿ.ರಾಮಚಂದ್ರ, ಟೀಕ್‌ವರ್ಲ್ಡ್, ಪು–19, ಜನವರಿ, 2002
47. ತೀ.ನಂ.ಶಂಕರನಾರಾಯಣ, ಸಂಕೀರ್ಣ ಜಾನಪದ ಕಥೆಗಳು, ಪು–21
48. ಚಂದ್ರಶೇಖರ ಕಂಬಾರ, ಪುಷ್ಪರಾಣಿ, ಪು–13
49. ಸಂ.ಎಸ್.ಜಿ. ರಾಮಚಂದ್ರ, ಟೀಕ್‌ವರ್ಲ್ಡ್, ಪು–18, ಜನವರಿ, 2002
50. ಸಂ.ಎನ್. ರವಿಕುಮಾರ್, ಕದಳಿವನ ಕರ್ಪೂರ,ಪು–ಪುಸ್ತಕದ ಹಿಂಬದಿ
51. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಜುಗಾರಿ ಕ್ರಾಸ್, ಮುನ್ನುಡಿ
52. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪು–39
53. ಬೊರಲಿಂಗಯ್ಯ. ಹಿ.ಚಿ, ಗಿರಿಜನ ನಾಡಿಗೆ ಪಯಣ, ಪು–97
54. ಮಲ್ಲು.ಸಿ ಕೊತ್ನೂರು, ವಸುಂದರಾ, ಪು–47
55. ಅದೇ–ಪು–49
56. ಕುವೆಂಪು, ಮೋಡಣ್ಣನ ತಮ್ಮ, ಪು–8–9
57. ಉಲ್ಲಾಸ ಕಾರಂತ.ಕೆ, ಅರಣ್ಯ ಮತ್ತು ಸಮಾಜ, ಪು–14–15
58. ಪುಟ್ಟಸ್ವಾಮಿ.ಕೆ, ಕೃಪಕರ ಸೇನಾನಿ, ಜೀವಜಾಲ, ಪು–109

ಅಧ್ಯಾಯ: 3

ಕನ್ನಡ ಸಾಹಿತ್ಯದಲ್ಲಿ: ಹಕ್ಕಿ ಪಕ್ಷಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ):

1. ಹಕ್ಕಿ–ಪಕ್ಷಿಗಳ ಉಪವರ್ಗ ಜೀವಿಗಳು ವಿಕಾಸವಾದ ಪ್ರಾಕೃತಿಕ ಸಂಸ್ಕೃತಿ:

ಸಾಗರ ಸಮುದ್ರಗಳೇ ಜೀವಸೃಷ್ಟಿಯ ಮೂಲ ಸ್ಥಳವೆಂಬುದನ್ನು ಈಗಾಗಲೇ ನಾನಾ ತರದ ವೈಜ್ಞಾನಿಕ ಸಂಶೋದನೆಗಳು ಪರಿಶೀಲಿಸಿ ಆಧಾರಗಳನ್ನು ದಾಖಲಿಸಿವೆ. ಅದರಂತೆ ಆದಿ ಜೀವಿಗಳು ತುಂಬಾ ದುರ್ಬಲವಾಗಿದ್ದು, ಅವು ಶರೀರದಲ್ಲಿ ಕೊಬ್ಬಿನಿಂದ, ಚಿಪ್ಪಿನಂಥ, ಜಿಗುಟು ವಸ್ತುಗಳಿಂದ ಕೂಡಿದ್ದೊ. ಇವುಗಳ ಮುಂದಿನ ಪೀಳಿಗೆಯ ಪ್ರಾಣಿಗಳಾಗಿ ಇವತ್ತಿನ ಚೇಳು, ದುಂಬಿ, ಮುತ್ತಿನ ಚಿಪ್ಪು ಮುಂತಾದ ಸಾಗರ ಪ್ರಾಣಿಗಳು ವಿಕಸಿತಗೊಂಡಿವೆ. ಇಂತಹ ಜೀವಿಗಳಲ್ಲಿ ಬೆನ್ನೆಲುಬುಳ್ಳ ಮೀನುಗಳ ಕುಲ ಕಾಣಿಸಿಕೊಂಡು, ಅವುಗಳಲ್ಲೇ ದೊಡ್ಡದು ಚಿಕ್ಕದನ್ನು ತಿಂದು ಬದುಕುವ ಜೀವ ಪರಿಸರವು ವಿಕಸನವಾಯಿತು. ಮೀನಿನ ಬಾಲ, ರೆಕ್ಕೆಗಳ ಬೆಳವಣಿಗೆಯಿಂದ ಭೂಮಿ ಸಾಗರಗಳ ಏರುಪೇರುಗಳಿಂದ ಜೀವಿಗಳು ನೆಲ, ನೀರುಗಳೆರಡರಲ್ಲೂ ಹೊಂದಿಕೊಳ್ಳುವಂತಾಗಿವೆ. ಇವು ದೀರ್ಘಾವಧಿಯಲ್ಲಿ "ನೀರಿನಲ್ಲಿ ಈಜಾಡುವ ಮೀನಿನ ಕುಲ ನೆಲದ ಮೇಲೆ ಓಡಾಡುವ ಗೌಳಿಗಳಂಥ ಪ್ರಾಣಿಗಳ ಕುಲವಾಯಿತು"1 ಎಂದಿವೆ. ಹೀಗೆ ನೀರಿನಲ್ಲಿದ್ದ ಮೀನು ಭೂಮಿ ಪರಿಸರಕ್ಕೆ ಹೊಂದಿಕೊಂಡು ಬಾಳುತ್ತಿರುವ ಜೀವಿಗಳೇ ಹಲ್ಲಿ ಅಥವಾ ಗೌಳಿಗಳು. ಅಂತೆಯೇ ಹಾವು, ಮೊಸಳೆ, ಉಡ ಮುಂತಾದವು ಹೀಗೆ ವಿಕಾಸಗೊಂಡ ಜೀವಿಗಳಾಗಿವೆ ಎಂಬುದು ಮಾನವ ಸಂಕುಲಕ್ಕೆ ಮನವರಿಕೆಯಾಗುತ್ತಿದೆ.

ಈ ವಿಕಾಸನ ಕ್ರಿಯೆಯಿಂದ ನೀರಿನಲ್ಲಿದ್ದ ಮೀನು ಭೂಮಿ ಮೇಲಿನ ಗೌಳಿಯಾಗಿ, ಈ ಗೌಳಿ ಆಕಾಶದಲ್ಲಿ ಹಾರುವ ಪಕ್ಷಿ ಸಂಕುಲಗಳ ಉದಯಕ್ಕೆ ಮೂಲವಾಗಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಗೌಳಿಯ ದೇಹರಚನೆ, ಮೂತಿ, ದವಡೆಹಲ್ಲು ಮುಂತಾದ ಶಾರೀರಿಕ ರಚನೆಯಲ್ಲಿ ಸಾಮ್ಯವಿರುವ ಪಕ್ಷಿ ಪ್ರಾಗ್ಪಕ್ಷಿ. ಇದು 1861 ರಲ್ಲಿ ಬೆವೆರಿಯಾ ದೇಶದ ಸ್ಲೇಟುಕಲ್ಲಿನ ಗಣಿಯೊಂದರಲ್ಲಿರುವ ಅಚ್ಚಿನಲ್ಲಿ ಕಾಣಸಿಕ್ಕಿತು. "ಈ ಸಂಶೋಧನೆ ಆಗುವ ಎರಡೇ ಎರಡು ವರ್ಷಗಳ ಮೊದಲು ವಿಜ್ಞಾನಿಯಾದ ಚಾರ್ಲ್ಸ್‌ಡಾವಿರ್ನ್ ಗೌಳಿಗಳಿಂದಲೇ ಪಕ್ಷಿಗಳು ವಿಕಾಸಗೊಂಡಿರಬೇಕು ಎಂದು ಹೇಳಿದ್ದ. ಅವನ ಮಾತನ್ನು ಕೇಳಿ ನಕ್ಕವರುಂಟು. ಆದರೆ ಇಂಥ ಸಾಕ್ಷಿ ಕಣ್ಣಿಗೆ ಬೀಳುತ್ತಲೇ ಟೀಕಿಸಿದ ಪಂಡಿತರ ಬಾಯಿ ಕಟ್ಟಿತು"2.

ಪ್ರಾಗ್ಪಕ್ಷಿಗಳ ಪೂರ್ವಜರೆನಿಸುವ ಪಕ್ಷಿಜಾತಿಯ ಉರಗಗಳೆಲ್ಲ ಅನಾದಿಕಾಲದ ಸಸ್ತನಿಗಳಾಗಿದ್ದೊ. ಇವುಗಳು ವೈವಿಧ್ಯವಾದ ಆಕಾರ, ರಚನೆಗಳಿಂದ ಕೂಡಿದ್ದೊ. ಇವುಗಳಲ್ಲೇ ಕೆಲವು ಜಾತಿಯ ಪೀಳಿಗೆಗಳು ಅಳಿದು, ಮತ್ತೆ ಕೆಲವು ಜಾತಿಯ ಪೀಳಿಗೆಗಳು ಉಳಿದು ಬಂದಿರುವುದನ್ನು ಕಾಣುತ್ತೇವೆ. "ಈ ಪಕ್ಷಿಗಳನ್ನು ವರ್ಗೀಕರಿಸುವಾಗ ಅವುಗಳ ಅಂಗರಚನೆಯನ್ನು ಆಧಾರವಾಗಿಟ್ಟುಕೊಂಡು ಇಪ್ಪತ್ತೇಳರಷ್ಟು ವಿವಿಧ ಗಣ(ಾೂಸಿಹೂದಿ) ಗಳನ್ನಾಗಿ ವಿಭಾಗಿಸಿದ್ದಾರೆ. ಅವುಗಳಲ್ಲಿ ಪರಸ್ಪರ ವ್ಯತ್ಯಾಸವನ್ನು ಗುರುತಿಸಿ 8,600 ಪ್ರತ್ಯೇಕ ಜಾತಿಗಳನ್ನಾಗಿ ವಿಂಗಡಿಸಿದ್ದಾರೆ. ಇಂದು ನಮ್ಮ ಭೂಮಿಯ ಮೇಲೆ ಕಾಣಿಸುತ್ತಿರುವ ಪಕ್ಷಿ ಜಾತಿಗಳಲ್ಲಿರುವ ಲಕ್ಷಣಗಳುಳ್ಳ ಕುಲಗಳು ಒಲಿಗೊಸೀನ್ ಮತ್ತು ಮಿಯೊಸೀನ್ ಅವಧಿಗಳಲ್ಲಿ ತೊಡಗಿರಬಹುದೆನ್ನುತ್ತಾರೆ. ಇದೆಂದರೆ ಸುಮಾರು 36,18,000,000 ವರ್ಷಗಳ ಹಿಂದೆ ಅದಕ್ಕಿಂತಲೂ ಹಿಂದಿದ್ದ ಪಕ್ಷಿ ರೂಪಗಳು ಕಣ್ಮರೆಯಾಗಿವೆ.

ಈ ಕಾಲದ ಬಳಿಕ ಎಂದರೆ ಸುಮಾರು 2 ರಿಂದ 13 ಮಿಲಿಯ ವರ್ಷಗಳ ಅವಧಿಯಲ್ಲಿ, ಭೂಮಿಯ ಮೇಲೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಿ ಜಾತಿಗಳು ಕಾಣಿಸಿಕೊಂಡಿದ್ದುವಂತೆ. ಇಂದಿಗಿಂತಲೂ ಅಂದು ಇನ್ನೆಷ್ಟು ಹೆಚ್ಚು ಕುಲಗಳಿದ್ದವು. ಇಂದು ಭೂಮಿಯ ಮೇಲೆ 8,600 ಜಾತಿಗಳನ್ನು ಗುರುತಿಸಿದ್ದಾರಾದರೆ, ಅಂದು 11,600 ರಷ್ಟು ಪಕ್ಷಿ ಜಾತಿಗಳಿದ್ದುದು ತಿಳಿದು ಬಂದಿದೆ. ಈ ಅಂಕಿ ಸಂಖ್ಯೆಗಳು ಕಲ್ಪನೆಗೆ ಶರಣು ಹೋದ ಮಾತುಗಳಲ್ಲ. ಪ್ರಪಂಚದ ವಿವಿಧ ದೇಶಗಳ ಪ್ರಾಕ್‌ಶಾಸ್ತ್ರ ತಜ್ಞರು ಸಾಕ್ಷಿಗಳ ಆಧಾರದಿಂದ ತರ್ಕಿಸಿದ ವಿಷಯಗಳಿವು. ಈ ಅವಧಿಯಲ್ಲಿ ಮನುಷ್ಯ ಕುಲ ಭೂಮಿಯ ಮೇಲೆ ಇದ್ದಿರಲಿಲ್ಲ. ಇಂದಿನ ಮನುಷ್ಯರ ಪೂರ್ವಜರೆನ್ನಬಹುದಾದ ಜೀವಿಗಳು ಭೂಮಿಯ ಮೇಲೆ ಕಾಣಿಸಿ 3,000,000 ವರ್ಷಗಳಾಗಿದ್ದೀತು. ಅದಕ್ಕಿಂತಲೂ ಮೊದಲೇ ನೆಲ, ನೀರು, ವಾಯುಗಳನ್ನೆಲ್ಲ ಪಕ್ಷಿಗಳು ಗೆದ್ದು ಮೆರೆದವು ಎನ್ನಬೇಕು. ಆದರೆ ಭೂಮಿಯ ಮೇಲೆ ಮನುಷ್ಯ ಕುಲ ಕಾಣಿಸಿದ್ದೇ ಕಾಣಿಸಿದ್ದು, ಅವನ ಪಾರುಪತ್ಯ ದಿನೇ ದಿನೇ ಹೆಚ್ಚಿ, ಪಕ್ಷಿಗಳ ಪಾಲಿಗೆ ಅವನೊಬ್ಬ ಮೃತ್ಯುವಾದ. ಅವನಿಂದಾಗಿಯೇ ಕಣ್ಮರೆಯಾದ ಪಕ್ಷಿಜಾತಿಗಳು, ಹಲವಿವೆ. ಇನ್ನು, ಬಾಳಿನ ಸ್ಪರ್ಧೆಯಲ್ಲಿ ಸೋತು ಕಣ್ಮರೆಯಾದ ಪಕ್ಷಿಜಾತಿಗಳೂ ಹಲವಿವೆ"3.

ಇಷ್ಟಾದರೂ ಪ್ರಕೃತಿಯ ವೈವಿಧ್ಯ ಜೀವ ಪರಿಸರದಲ್ಲಿ ಇಂದಿಗೂ "ಸಾಗರದ ಮೀನುಗಳನ್ನು ಬಿಟ್ಟದ್ದಾದರೆ, ಉಳಿದ ಬೆನ್ನೆಲುಬುಳ್ಳ ಯಾವ ಜಾತಿಯ ಪ್ರಾಣಿಗಳಲ್ಲೂ ಹಕ್ಕಿಗಳಷ್ಟು ವೈವಿಧ್ಯವನ್ನು ಪಡೆದ ಜಾತಿಯೇ ಇಲ್ಲ ಎನ್ನಬೇಕಾಗುತ್ತದೆ. ಅವು ನೆಲವನ್ನೂ ಆಶ್ರಯಿಸಿದುವು. ನೀರನ್ನು ಆಶ್ರಯಿಸಿದುವು. ಒಂದರಿಂದ ಇನ್ನೊಂದಕ್ಕೆ ಹೋಗಲು ಕಲಿತವು. ಇವೆರಡರ ಮೇಲಿರುವ ಆಕಾಶದಲ್ಲೂ ವಿಹರಿಸಲು ಕಲಿತವು. ಹೀಗೆ ಹಾರಾಡಲು ಕಲಿತ ಅವನ್ನು ಪಕ್ಷಿ ಎನ್ನುತ್ತಾರೆ. ಪಕ್ಷಿ ಎಂದರೆ ರೆಕ್ಕೆಯುಳ್ಳದ್ದು, ರೆಕ್ಕೆಗಳ ಸಹಾಯದಿಂದ ದೇಶದಿಂದ ದೇಶಕ್ಕೆ ಹಾರುವ ಶಕ್ತಿಯೂ ಅವಕ್ಕೆ ಬಂದಿತು. ಭೂ ಖಂಡಗಳ ಒಂದು ತುದಿಯಿಂದ ಇನ್ನೊಂದು ತುದಿಗೆ ಅವು ಪಸರಿಸಿದುವು. ಭೂ ಖಂಡಗಳ ನಡುವೆ ಕಡಲು, ಸಾಗರಗಳು ಚಾಚಿಕೊಂಡಿದ್ದರೂ, ಆ ದೂರವನ್ನು ಗೆದ್ದು ಮುಂದಣ ದೇಶದಲ್ಲಿ ತಂಗಿ ತಮ್ಮ ಸಂತಾನ ಹೆಚ್ಚಿಸಿಕೊಂಡವು. ಬಯಲು, ತಪ್ಪಲು, ಬೆಟ್ಟದ ಇಳುಕಲು, ಉನ್ನತ ಶಿಖರ ಇವುಗಳೆಲ್ಲ ಕೆಲವೇ ನಿಮಿಷಗಳ ಹಾರಾಟದಿಂದ ಅವಕ್ಕೆ ಎಟುಕಿದುವು. ಇಂದು ಅವು ವಾಸಿಸದ ಪ್ರದೇಶವಿಲ್ಲ. ಎಂಟಾರ್ಟಿಕ್ ಭೂಖಂಡದ ಕಡು ಶೀತವಾದ, ಏನೂ ಬೆಳೆಯದ, ಹಿಮವಿದ್ದ ಒಂದಿಷ್ಟು ಪ್ರದೇಶವನ್ನು ಬಿಟ್ಟುದಾದರೆ ಪಕ್ಷಿಗಳು ಕಾಣಸಿಗದ ನೆಲವೇ ಇಲ್ಲ ಎನ್ನಬಹುದು. ನೆಲ, ನದಿ, ಕೊಳ, ಸರೋವರ, ಕಡಲು ತೀರ, ಅನೇಕ ಪ್ರಾಣಿಗಳ ಎಟುಕಿಗೆ ದೂರವಾದ ದ್ವೀಪಗಳು ನಡೆದು ಸೇರಲಾರದ ಬೆಟ್ಟದ ಕುಡಿಗಳು ಹಕ್ಕಿಗಳಿಗೆ ಮನೆಯಾಗುವುದು ಸಾಧ್ಯವಾಯಿತು"4.

ಈ ಎಲ್ಲ ವೈಜ್ಞಾನಿಕ ಚರಿತ್ರಾಧಾರಾಂಶಗಳ ಹಿನ್ನೆಲೆಗಳಿಂದ ಮಾದರಿಗಾಗಿ ಕೆಲವು ಹಕ್ಕಿ ಪಕ್ಷಿಗಳ ಆಹಾರ, ಆವಾಸ, ಜೀವನ ಕ್ರಮಗಳಂತ ಹಲವು ಅಂಶಗಳನ್ನು ಇಲ್ಲಿ ಪರಿಶೀಲಿಸ ಬಹುದಾಗಿದೆ. ದೈತ್ಯ ಪಕ್ಷಿಗಳಾದ ಆಫ್ರಿಕಾದ ಉಷ್ಟ್ರ ಪಕ್ಷಿ, ಆಸ್ಟ್ರೇಲಿಯಾದ ಎಮು, ಕಸೋವಾರಿ ಮತ್ತು ದಕ್ಷಿಣ ಅಮೇರಿಕದ ರೀ, ನಮ್ಮ ದೇಶದ ಗೌಜಲು ಪಕ್ಷಿಯನ್ನು ಹೋಲುವ ಟಿನ್‌ಮೌಸ್, ನ್ಯೂಜಿಲೇಂಡ್ ದೇಶದ ಕಿವಿ, ಎಂಟಾರ್ಟಿಕ ಭೂಖಂಡದಲ್ಲಿರುವ ಪೆಂಗ್ವಿನ್‌ನ ಪೂರ್ವಜ ಅಲ್ಬಾಟ್ರಾಸ್ ಮುಂತಾದ ಸಾವಿರಾರು ಪಕ್ಷಿ ಜಾತಿಗಳೆಲ್ಲ, ಪ್ರಾಚೀನ ಸಂಕುಲಗಳಾಗಿವೆ. ಇವುಗಳ ಕಾಲದಲ್ಲಿ ಒಂದಕ್ಕೊಂದು ವೈರಿ, ಅಥವಾ ದುಷ್ಟ, ಭಕ್ಷಕ ಪ್ರಾಣಿಗಳಿಲ್ಲದೆ ಇವು ಹಾರುವ ಶಕ್ತಿಯನ್ನು ಕಳೆದು ಕೊಂಡು, ಸಾಗರ ತೀರದಲ್ಲಿ ಓಡಾಡಿಕೊಂಡು ಏಡಿ ಮೀನುಗಳಂತೆ ಜಲಚರಗಳನ್ನು, ಹುಳು ಹುಪ್ಪಟೆ ಕಾಳು ಕಡ್ಡಿಗಳನ್ನು ಆಹಾರಕ್ಕಾಗಿ ತಿಂದು ಜೀವಿಸುತ್ತಿದ್ದೊ. ಅಂದೆ ಕೆಲವು ಪ್ರಕೃತಿಯ ಅಸಮತೋಲನ ಸ್ಥಿತಿಯಿಂದ ರಕ್ಷಣೆಗಾಗಿ ಮತ್ತು ಸಂತಾನಾಭಿವೃದ್ಧಿಯ ಪ್ರವೃತ್ತಿಯ ಸೂಕ್ತ ಪರಿಹಾರಕ್ಕಾಗಿ ಅರಸಿ ಒಂದು ಪ್ರದೇಶ, ದೇಶದಿಂದ ಮತ್ತೊಂದು ದೇಶ, ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದೊ. ಈ ಹಕ್ಕಿ ಪಕ್ಷಿಗಳು ಸಾಮಾನ್ಯವಾಗಿ ಗುಂಪು ಗುಂಪಾಗಿದ್ದು ಹೆಣ್ಣು ಗಂಡುಗಳು ವಂಶಾಭಿವೃದ್ಧಿಯಲ್ಲಿ ತೊಡಗಿ, ಕಡಲ ತೀರದ ಮರಗಿಡಗಳ ಪೊಟರೆ, ಕಲ್ಲು ಬಂಡೆಗಳ ಪೊಟರೆ ಮುಂತಾದ ಕಡೆ ಅವುಗಳಿಗೆ ಯೋಗ್ಯವಾದ ಸ್ಥಳಗಳಲ್ಲಿ, ರಕ್ಷಿತ ಕ್ರಮಗಳಲ್ಲಿ, ಗೂಡು ಮಾಡಿ ಮೊಟ್ಟೆಯಿಟ್ಟು ಮರಿ ಮಾಡಿ ರಕ್ಷಿಸಿ ಜೀವಿಸುತ್ತಿದ್ದೊ. ಇವುಗಳಲ್ಲಿ ಬೆಳೆದ ಅಲ್ಬಾಟ್ರಾಸಿನ ವಂಶದ ಸಂತಾನ ಪೆಂಗ್ವಿನ್ ವಿಚಿತ್ರ ಪಕ್ಷಿ. ಜಲ ಪಕ್ಷಿಯಾದ ಇದು ನೀರಿಗಿಳಿದು ಈಜಿ ಮುಳುಗಿ ಮೀನು, ಚಿಕಣಿ ಚಟ್ಟಿ (krill) ಸೀಗಡಿಗಳನ್ನು ಹಿಡಿದು ಆಹಾರ ಸಂಪಾದಿಸಿಕೊಂಡು ತಿನ್ನುತ್ತಿತ್ತು. ಇದರಲ್ಲೇ ಎಡಿಲೇ ಪೆಂಗ್ವಿನ್, ಮುಂತಾದ ಶೇವಿಗೆ ಪೆಂಗ್ವಿನ್ ಜಾತಿಗಳಿವೆ. ಇವು ಪ್ರಕೃತಿ ವಾತಾವರಣಕ್ಕನುಗುಣವಾಗಿ ವಲಸೆ, ಜೀವನ ಕ್ರಮದಲ್ಲಿ ತಮ್ಮದೇ ಆದ ಸಂಸ್ಕೃತಿಯಿಂದ ಜೀವಿಸುತ್ತಿದ್ದೊ. ಇವುಗಳ ಪ್ರಾಯದ ಪೆಂಗ್ವಿನ್ ತನ್ನ ಹಿರಿಯರ ಜೀವನ ಕ್ರಮದಿಂದ "ತನ್ನದೇ ಆದ ಬಿಲವೊಂದನ್ನು ಕೊರೆಯತೊಡಗಿತು. ತಾನು ಎಂಥ ಗೂಡನ್ನು ಕಟ್ಟಬೇಕೆಂದು ಅದಕ್ಕೆ ಹೇಳಿಕೊಟ್ಟವರಿಲ್ಲ, ಹೇಳಿ ಕೊಡಬೇಕಾದದ್ದೂ ಇಲ್ಲ. ಚಿಪ್ಪಿಗೆ ಹಕ್ಕಿಗೆ ಎಲೆಗಳನ್ನು ಹೊಲಿದು ಗೂಡು ಕಟ್ಟಲಿಕ್ಕೆ ಯಾರು ಹೇಳಿಕೊಡುತ್ತಾರೆ? ಗೀಜಗಕ್ಕೆ (ತಾಳೆಗುಬ್ಬಿ) ನಾರುಗಳಿಂದ ಬುರುಡೆಯಾಕಾರದ ಗೂಡನ್ನು ಕಟ್ಟಲು ಯಾರು ಕಲಿಸಿದ್ದಾರೆ? ಹಾಗೆಯೇ ಈ ಹಕ್ಕಿಗೆ ನೆಲದಲ್ಲಿ ಬಿಲವನ್ನು ಕೊರೆಯೆಂದು ಯಾರೂ ಹೇಳಿಲ್ಲ. ಆ ಬಿಲವನ್ನು ಈ ಹಕ್ಕಿಯೂ ಮತ್ತಷ್ಟು ಚೆನ್ನಾಗಿ ಮಾಡಬಹುದೆಂದು ಗಮನಿಸಬಹುದು"5.

ಈ ಹೆಣ್ಣು ಗಂಡು ಹಕ್ಕಿಗಳು ಕೂಡಿ ಬಾಳುವಾಗ ಹೆಣ್ಣು ಹಕ್ಕಿ "ಮೊಟ್ಟೆಯಿರಿಸಿದ ಬಳಿಕ ಗಂಡು ಹಕ್ಕಿ ಮೊದಲವಾರ ಅದಕ್ಕೆ ಕಾವು ಕೊಡುವ ಕೆಲಸವನ್ನು ವಹಿಸಿಕೊಂಡಿತು. ಹೆಣ್ಣು ಆಹಾರ ಸಂಪಾದಿಸಲು ಹೋಯಿತು. ಅದು ಮರಳಿದ ಬಳಿಕ ತಾನು ಕಾವಿಗೆ ಕುಳಿತು ಗಂಡನನ್ನು ಆಹಾರ ಸಂಪಾದಿಸಲು ಕಳುಹಿಸಿತು"6. ಹೀಗೆ ಒಂದಕ್ಕೊಂದು ಹೊಂದಾಣಿಕೆಯ ಕ್ರಮವೇ ಇವುಗಳ ಸಹ ಜೀವನ ಪದ್ಧತಿ. ಈ ಪಕ್ಷಿಗಳು ಕೊನೆಗೆ ಮಾನವನ ಆಸೆ, ಸ್ವಾರ್ಥ, ಪ್ರವೃತ್ತಿಗೆ ಬಲಿಯಾಗಿ ಚಾರಿತ್ರಿಕ ದಾಖಲೆಗಳಾಗಿ ಮಾತ್ರ ಉಳಿದಿವೆ. ಇವುಗಳಂತೆ ಮುಂದಿನ ಪೀಳಿಗೆಯ ಹಲವು ಜಾತಿಯ ನೀರ್ಕಾಗೆ, ಅನ್ಹಿಂಗ, ಹಾಲಕ್ಕಿ, ಪೆಲಿಕಾನ್, ಬಾತುಕೋಳಿ, ಹಂಸ, ವರಟೆ, ನಾರಾಯಣೆ, ಕೊಕ್ಕರೆ, ಬೆಳ್ಳಕ್ಕಿ, ಕಿರಕಂಕ, ಕೊರಕಂಚಿ ಮುಂತಾದವುಗಳಿವೆ. ಅವುಗಳ ಜೀವನಾನುಕೂಲಕ್ಕಾಗಿ ಸಾಗರ, ಸಮುದ್ರ, ನದಿ, ಕೆರೆ, ಜವುಗು ನೆಲ, ಮತ್ತು ನೀರಿಲ್ಲದಿರುವಂತಹ ಜಾಗಗಳನ್ನು ಆಶ್ರಯಿಸಿ ಅಲ್ಲೇ ಸಿಗುವ ಜಲಚರ ಜೀವಿ, ಕ್ರಿಮಿ

ಕೀಟ, ಹಣ್ಣಿನ ಬೀಜ ಮುಂತಾದ ಆಹಾರವನ್ನು ಸಂಪಾದಿಸುತ್ತವೆ. ಈ ಕಡಲ ಹಕ್ಕಿ ಪಕ್ಷಿಗಳು ಗುಂಪು ಗುಂಪಾಗಿ ಕಡಲ ಮೇಲೆ ಹಾರಾಡುತ್ತವೆ. ಈ ಎಲ್ಲಾ ಚಟುವಟಿಕೆಗಳನ್ನೆ ಈ ಹಕ್ಕಿಗಳ ಸಂಸ್ಕೃತಿ ಎಂದು ಕರೆಯಲಾಗಿರುವುದು. ಇಂತಹ ಹಕ್ಕಿಗಳನ್ನು ಕಂಡ ಕವಿ:

"ನಾವಿಕರ ಬೇಸರದ
ಪರಿಹಾರಕಿವು ವಸ್ತು
ಮುಷ್ಟಿಯಲಿ ನಗೆಗೀಡು; ಅತಿ ಭೀತುರು
ಒಂದುಗಳಿಗೆಯ ಹಿಂದೆ
ಆಗಸದ ಅರಸುತನ
ವಹಿಸಿ ವಿಹರಿಸಿದಂತ ಶ್ವೇತರು"7 (ಕಡಲ ಹಕ್ಕಿಗಳು)

ಎಂದು ಹಾಡುತ್ತಾರೆ. ಯಾಕೆಂದರೆ ಇವು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚಾರ ಶೀಲ ಹಕ್ಕಿಗಾಗಿ ಹಾರುತ್ತಲೇ ನಾವಿಕರ ಮನಸ್ಸಿನ ಶಾಂತಿಗೆ ಕಾರಣವಾಗಿವೆ. ಹೀಗಿದ್ದರೂ ಇವುಗಳ ವಾಸ ಮತ್ತು ಜೀವನ ಕ್ರಮ ಒಂದಕ್ಕೊಂದು ಭಿನ್ನವಾಗಿವೆ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿ ಜೀವಿಸುತ್ತಿರುವ ಈ ಪ್ರಾಣಿ, ಪಕ್ಷಿ, ಸಸ್ಯ ಸಂಸ್ಕೃತಿಗಳು ಪ್ರಕೃತಿ ಪರಿಸರದಲ್ಲಿ ಮಹತ್ವ ಮತ್ತು ವೈಶಿಷ್ಟ್ಯವುಳ್ಳವಾಗಿರುವುದರಿಂದ ಗಮನಸೆಳೆಯುತ್ತವೆ.

2.ಹಕ್ಕಿ–ಪಕ್ಷಿ ಉಪಜೀವಿಗಳ ಆಹಾರ, ಆವಾಸ, ಸಂತಾನೋತ್ಪತ್ತಿ..... ಚಟುವಟಿಕೆಗಳ ಸಂಸ್ಕೃತಿ:

ಹಕ್ಕಿ–ಪಕ್ಷಿ ಸಂಸ್ಕೃತಿಯ ವಿಶೇಷ ಪಕ್ಷಿಗಳಲ್ಲಿ ಮಿಂಚುಳ್ಳಿಯೂ ಒಂದು. ಇದರಲ್ಲೇ ಪ್ರಪಂಚದಲ್ಲೀಗ ಎಂಬತ್ನಾಲ್ಕು ಬಗೆಯ ಜಾತಿಗಳಿವೆ. "ಈ ಮಿಂಚುಳ್ಳಿ ಅಷ್ಟೊಂದು ಸರ್ವೇಸಾಧಾರಣವಾಗಿ ಕಾಣಸಿಗುವ ಹಕ್ಕಿಯಲ್ಲ. ಏಕೆಂದರೆ ಅದು ಪ್ರಧಾನವಾಗಿ ಜಲಚರಗಳನ್ನು ಅದರಲ್ಲೂ ಚಿಕ್ಕಪುಟ್ಟ ಪುಡಿ ಮೀನುಗಳನ್ನು ಹಿಡಿದು ತಿನ್ನುವ ಹಕ್ಕಿ, ಹಳ್ಳ ಹೊಳೆ ಕೆರೆಗಳ ಬಳಿ ಮಾತ್ರ ಇವನ್ನು ನೋಡಬಹುದು"8. ಇವು ದೊಡ್ಡ ಮೀನುಗಳನ್ನು ಹಿಡಿದರೆ ಹೊತ್ತೊಯ್ದು ಮರದ ಕೊಂಬೆಗೆ ಅದನ್ನು ಬಡಿದು, ಬಡಿದು ಸಾಯಿಸಿ ನುಂಗುತ್ತವೆ. ಬೇಸಿಗೆ ಕಾಲದಲ್ಲಿ ಕೆರೆ ಕಟ್ಟೆಗಳಲ್ಲಿ ನೀರು ಇಂಗುತ್ತಿದ್ದರೆ ಇವಕ್ಕೆ ಶಿಕಾರಿ ಸುಲಭವಾಗುತ್ತಿತ್ತು. "ಗುಂಡಿಗಳಲ್ಲಿ ಮೀನುಗಳು ಶೇಖರವಾಗುತ್ತಿದ್ದಂತೆಯೇ ಅಲ್ಲಿಗೆ ಬೆಳ್ಳಕ್ಕಿಗಳೂ, ಗದ್ದೆ ಗೊರವಗಳೂ ಹುಂಡು ಕೋಳಿಗಳೂ ಬಟ್ಟಲಲ್ಲಿಟ್ಟ ತಿಂಡಿಯಂತೆ ಸುಲಭಕ್ಕೆ ಸಿಕ್ಕುವ ಮೀನಿನ ಆಸೆಗಾಗಿ ಆಗಮಿಸುತ್ತಿದ್ದವು"9. ಹೀಗೆ ಸೀಗಡಿ ಮೀನುಗಳು ನೂರಾರು ಸಾವಿರಾರು ಜಾತಿಯ ಹಕ್ಕಿ ಪಕ್ಷಿಗಳ ಆಹಾರವಾಗಿವೆ. ಆದರೆ ಕಾಡಿನ ಮಿಂಚುಳ್ಳಿಗಳು ಮಾತ್ರ "ಪ್ರಧಾನವಾಗಿ ಹುಳು ಹುಪ್ಪಟೆಗಳನ್ನು ಹಿಡಿದು ತಿನ್ನುತ್ತವೆ. ಅನೇಕ ವೇಳೆ ಯಾವುದೇ ನದಿ, ಕೆರೆಗಳು ಸಮೀಪದಲ್ಲೆಲ್ಲೂ ಇಲ್ಲದ ಹೊಲಗಳಲ್ಲಿ ಸಾಧಾರಣವಾಗಿ ತಂತಿ, ಕಂಬಗಳ ಮೇಲೆ ಈ ಮಿಂಚುಳ್ಳಿಗಳು ಕುಳಿತಿರುವುದನ್ನು ನೋಡಬಹುದು. ಇವು ಪ್ರಧಾನವಾಗಿ ಹುಲ್ಲಿನ ಮಿಡತೆಗಳನ್ನು ಚಿಕ್ಕ ಪುಟ್ಟ ಹಾವುರಾಣಿ, ಓತಿಕ್ಯಾತ ಇಲಿಮರಿಗಳನ್ನು ಹಿಡಿದು ತಿನ್ನುತ್ತವೆ. ನೀರಿನ ಸಮೀಪದಲ್ಲಿದ್ದಾಗ ಸುಲಭಕ್ಕೆ ಸಿಕ್ಕುವ ಜಲಚರಗಳನ್ನು ಇವು ತಿನ್ನುತ್ತವೆ"10.

ಈ ಮಿಂಚುಳ್ಳಿಯ ಜೀವನ ಮತ್ತು ಆಹಾರ ಕ್ರಮವನ್ನು ಕಂಡ ಕವಿ ಕುವೆಂಪು:

/"ಎಳೆತನದಲಿ ಕೆರೆಯಂಚಿನ ಮೇಲೆ
ತಣ್ಣೀರಾಟವ ನಾನಾಡುತಲಿರೆ
ತೀರದ ಮರಗಳ ಮರೆಯಿಂದ
ಬಣ್ಣದ ಬಾಣದ ತೆರದಲಿ ಮಿಂಚಿ
ಹೊಳೆಯುವ ಮೀನನು ಕೊಕ್ಕಿನೊಳಿಟ್ಟು
ನೀ ಹಾರುತಲಿರೆ ಬೆರಗಾದೆ"11 (ಮಿಂಚುಳ್ಳಿ)

ಎನ್ನುತ್ತಾರೆ. ಆಫ್ರಿಕ, ಏಷಿಯಗಳಾದ್ಯಂತ ಸಿಗುವ ಈ ಹಕ್ಕಿ ಆಸ್ಟ್ರೇಲಿಯಾದ 'ಕೊಂಕುಬುರ್ರಾ' ಇದು ವಿಷಸರ್ಪಗಳನ್ನು ಹಿಡಿದು ಕೊಲ್ಲುತ್ತದೆ. ಹುತ್ತಗಳಲ್ಲಿ ಬಿಲ ತೋಡಿ, ಮೊಟ್ಟೆಯಿಟ್ಟು ಮರಿಮಾಡುತ್ತದೆ. ಇದಕ್ಕಿಂತ ಹೆಚ್ಚಾಗಿ ನಮ್ಮ ಕನ್ನಡ ನಾಡಿನ ಮಿಂಚುಳ್ಳಿಯ ಜೀವನ ಕ್ರಮ ಮಾನವನಿಗೂ ಆದರ್ಶವಾದುದ್ದು. ಈ ಹಕ್ಕಿಗಳು "ಗಂಡು ಹೆಣ್ಣು ಎರಡೂ ಸಾಂಸಾರಿಕ ಜವಾಬ್ದಾರಿಗಳನ್ನು ಸಮಾನವಾಗಿ ನಿರ್ವಹಿಸುತ್ತವೆ. ಎರಡೂ ಒಟ್ಟಿಗೆ ಸೇರಿ ಬಿಲ ತೋಡುತ್ತವೆ. ಒಂದು ಹಕ್ಕಿ ಕೊಕ್ಕಿನಿಂದ ಅಗೆದು ತೆಗೆದ ಮಣ್ಣನ್ನು ಬಿಲದಲ್ಲಿ ಅರ್ಧ ದೂರದವರೆಗೆ ತಳ್ಳಿ ಕೊಟ್ಟರೆ, ಇನ್ನೊಂದು ಹಕ್ಕಿ ಅದನ್ನು ಬಿಲದ ಬಾಯಿಯವರೆಗೂ ತಳ್ಳಿ ಹೊರ ಸಾಗಿಸುತ್ತದೆ. ಎರಡು ಹಕ್ಕಿಗಳು ಮೊಟ್ಟೆಯ ಮೇಲೆ ಸರದಿ ಪ್ರಕಾರ ಕಾವು ಕೂರುತ್ತವೆ. ಎರಡು ಹಕ್ಕಿಗಳು ಮರಿಗಳಿಗೆ ಮೀನು ಹಿಡಿದುತಂದು ಗುಟುಕು ಕೊಡುತ್ತವೆ"12

ಇಂತಹ ಪ್ರೀತಿ ವಾತ್ಸಲ್ಯದ ಹೊಂದಾಣಿಕೆ ಸಹಜೀವನ ಕ್ರಮವನ್ನು ಈ ಪಕ್ಷಿಗಳಿಗೆ ಹೇಳಿ ಕೊಟ್ಟವರ್ಯಾರು? ಯಾರಿಂದ ಕಲಿತೊ? ಎಂಬ ಪ್ರಶ್ನೆಗಳು ನಮ್ಮೊಳಗೆ ಮೊಳೆಯುವುದು ಸಹಜ. ಆದರೆ ಇವು ಕಲಿತದ್ದು ಮನುಷ್ಯರಿಂದಲ್ಲ ಅವುಗಳ ಪೂರ್ವಜರಿಂದ. ನಮಗೆಲ್ಲ ಪ್ರಕೃತಿಯ ತತ್ವ, ನಿಯಮಗಳು ರಹಸ್ಯವಾಗಿರುವಂತೆ ಕಂಡರೂ, ಈ ಹಕ್ಕಿ–ಪಕ್ಷಿಗಳ ಜೀವನ ಕ್ರಮದಿಂದ ಪ್ರಜ್ಞಾವಂತ ಮನಸ್ಸುಗಳಿಗೆ ಪ್ರಕೃತಿ ಧರ್ಮದ ಮೂರ್ತ ದರ್ಶನವಾಗುತ್ತದೆ. ಆದರೆ ಇದರ ಆಳಕ್ಕಿಳಿದಂತೆ ಅದರಲ್ಲಿರುವ ಸಂಕೀರ್ಣತೆ ವಿಸ್ಮಯಗೊಳಿಸುತ್ತದೆ. ಇದನ್ನು ಸರಳ ಹೇಳಿಕೆ ವ್ಯಾಖ್ಯಾನಗಳಿಂದ ಹಿಡಿದಿಡುವುದೂ ತುಂಬಾ ಸಂಕೀರ್ಣ. ಯಾಕೆಂದರೆ ಪ್ರಕೃತಿ ಜೀವಿಗಳಲ್ಲಿ ಆಹಾರ ಸರಪಳಿಯಲ್ಲಿ ಮಿಶ್ರ ಬಂಧವೇರ್ಪಡುತ್ತದೆ. ಅಂದರೆ ದೊಡ್ಡ ಮೀನಗಳು ಸಣ್ಣ ಮೀನುಗಳನ್ನು ತಿಂದರೆ, ಸಣ್ಣ ಮೀನುಗಳನ್ನು ಹಕ್ಕಿ ಪಕ್ಷಿಗಳು ತಿನ್ನುತ್ತವೆ. ಮತ್ತೆ ಕೆಲವು ಅವಲು ಮೀನು, ಬಾಳೆ ಮೀನು, ಹದ್ದಿನ ಮೀನು, ಹಾವು ಮೀನು ಮುಂತಾದವು ಮಾಂಸಹಾರಿಗಳು. ಇವು ಕೆಲವು ಹಕ್ಕಿ ಪಕ್ಷಿಗಳನ್ನು ತಿನ್ನುವುದಕ್ಕೊ, ಇಲ್ಲ ತಮ್ಮ ರಕ್ಷಣೆಗಾಗಿಯೊ ಶಿಕಾರಿ ಮಾಡುತ್ತವೆ. ಇಂತಹ ಜೀವನ ನಡವಳಿಕೆಗಳ ವೈವಿಧ್ಯಮಯ ಗುಣಗಳಿಂದಲೇ ಪ್ರಕೃತಿಯ ಸಾಂಸೃತಿಕ ವಿಸ್ಮಯವೆನ್ನುವುದು. ಈ ಮೀನುಗಳು ನೀರೊಳಗಿದ್ದುಕೊಂಡು ನೀರ ಹೊರಗಿನ ಜೀವಿಗಳನ್ನು ಬೇಟೆಯಾಡುವುದೆಂದರೆ ಇನ್ನೆಂತಹ ಜೀವಿಗಳ ಜೀವನ ಸಂಬಂಧವನ್ನು ಪ್ರಕೃತಿ ಹೆಣೆದಿದೆ ಎಂಬುದನ್ನು ಕಲ್ಪಿಸಿಕೊಳ್ಳಲಾಗದು. ಈ ಮಾತಿಗೆ ಅವಲು ಮೀನೊಂದು ಮಿಂಚುಳ್ಳಿಯ ಶಿಕಾರಿಗೆ ಸಂಚು ಮಾಡುತ್ತಿದ್ದನ್ನು ಕಂಡ ಸಂದರ್ಭವನ್ನು ತೇಜಸ್ವಿ ಹೀಗೆ ಉಲ್ಲೇಖಿಸುತ್ತಾರೆ:

"ಆ ಮೀನು ದಢಾರೆಂದು ನೀರಿನಿಂದ ಹೊರಕ್ಕೆ ನೇರವಾಗಿ ಮಿಂಚುಳ್ಳಿಯತ್ತ ಚಿಮ್ಮಿತು. ಕೇವಲ ಒಂದೇ ಒಂದು ಇಂಚಿನಲ್ಲಿ ಗುರಿತಪ್ಪಿ ಅವಲು ಮೀನು ಮಿಂಚುಳ್ಳಿಗಿಂತ ಒಂದು ಮಾರು ಮುಂದಕ್ಕೆ ಮರುಳು ದಂಡೆಯ ಮೇಲೆ ಬಿದ್ದ ಅವಲು ಮೀನು ಮುಂದೇನು ಮಾಡುತ್ತದೆಂದು ಕುತೂಹಲದಿಂದ ನೋಡುತ್ತಲೇ ಇದ್ದೆ. ಅವಲು ಮೀನು ನೀರಿನತ್ತ ಹಾವಿನ ರೀತಿ ತೆವಳಬಹುದೆಂದು ನಿರೀಕ್ಷಿಸಿದ್ದೆ. ಆದರೆ ಅದು ಹಾಗೇನೂ ಮಾಡದೆ ನೀರಿನಿಂದ ಹೊರನೆಗೆದ ರೀತಿಯಲ್ಲಿ ಮತ್ತೆ ಬಿದ್ದಲ್ಲಿಂದಲೇ ನೀರಿಗೆ ಧಡಾರನೆ ನೆಗೆದು ಕಣ್ಮರೆಯಾಯಿತು"13 ಇಲ್ಲಿ ಅವಲು ಮೀನು ಮಾಂಸಾಹಾರಿಯಾಗಿದ್ದರೂ, ಮಿಂಚುಳ್ಳಿಯನ್ನು ಆಹಾರಕ್ಕಾಗಿ ಅಥವಾ ತನ್ನ ಆಹಾರವಾದ ಚಿಕ್ಕ ಮೀನಿನ ರಕ್ಷಣೆಗಾಗಿ ಮಿಂಚುಳ್ಳಿಯ ಮೇಲೆ ಎರಗಿ ಬಿದ್ದಿರುವ ದೃಶ್ಯ ಚೇತೋಹಾರಿಯಾಗಿದೆ. ಈ ಮಿಂಚುಳ್ಳಿಯಂತೆ ಜೇನು ಕುಟುರಗಳು, ಜೇನು ಮಗರೆ ಹಕ್ಕಿಗಳು ನೆಲದಲ್ಲಿ, ಕಲ್ಲು ಕೋರೆಗಳಲ್ಲಿ ಬಿಲ ತೋಡಿ ಗೂಡು ಮಾಡುತ್ತವೆ. ಇವು ಬಯಲು ಸೀಮೆಯಲ್ಲಿ ಅಪರೂಪವಾಗಿ ಕಂಡು ಬಂದರೂ ಹಿಮಾಲಯದ ತಪ್ಪಲಿನ ಕಾಡು ಮತ್ತು ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣ ಕಾಡುಗಳಲ್ಲಿ ದಟ್ಟವಾಗಿ ಕಂಡುಬರುತ್ತವೆ.

"ಈ ಹಕ್ಕಿಗಳ ಆಹಾರ ಮುಖ್ಯವಾಗಿ ಹಾರಾಡುವ ಕ್ರಿಮಿಕೀಟಗಳು. ಇತರ ಹಕ್ಕಿಗಳು ಗುಂಪು ಕೂಡಿಕೊಂಡು ಮರಗಳೆಡೆಯಲ್ಲಿ ಕೀಟಗಳನ್ನು ಬೇಟೆಯಾಡುವಾಗ, ಅವುಗಳಿಂದ ತಪ್ಪಿಸಿ ಕೊಳ್ಳಲು ಮರಗಳಿಂದ ಹೊರಹಾರುವ ಕೀಟಗಳನ್ನು ಇವು ಹಿಡಿದು ತಿನ್ನುತ್ತಾ, ಹಕ್ಕಿಗಳ ಪರಿವಾರದೊಡನೆ ಇವೂ ಅನೇಕ ವೇಳೆ ಸಾಗುವುದನ್ನು ನೋಡಬಹುದು. ಆದರೆ ಹಾರುವ ಕೀಟಗಳನ್ನು ತಿನ್ನುವ ಹಕ್ಕಿಯಾದ್ದರಿಂದ ಜೇನು ಹಿಡಿದು ತಿನ್ನುವುದೇ ಹೆಚ್ಚು"14

ಜೇನು ಕುಟುರಗಳು ಸಾಮೂಹಿಕ ಜೀವಿಯಾಗಿ ಗೂಡುಮಾಡಿ ವಾಸಿಸಿದರೆ, ಜೇನು ಮಗರೆ ಹೆಣ್ಣು ಗಂಡು ಜೋಡಿ ಅಥವಾ ಏಕಾಂಗಿಯಾಗಿ ಜೀವಿಸುವುದು ನಮ್ಮ ಸುತ್ತ ಮುತ್ತಲ ಕಾಡು ಮತ್ತು ತೋಟಗಳಲ್ಲಿ ಕಾಣಸಿಗುತ್ತವೆ. ನಾವು ಸಾಕಿದ ಜೇನನ್ನು ಹಿಡಿದು ತಿನ್ನುತ್ತವೆ ಎಂಬ ಕ್ಷುಲ್ಲಕ ಕಾರಣಕ್ಕಾಗಿ ಬೇಟೆಯಾಡುವ ಮಾರನಂತಹ ಅವಿವೇಕಿ ಸ್ವಭಾವದವರಿಂದ ಹಿಂಸಾ ಜೀವನಕ್ಕೊಳಪಡುತ್ತಿರುವುದು ಈ ಹಕ್ಕಿಗಳ ದುರಂತ. ಸಾಗರ, ನದಿ, ಕೆರೆ, ಕಟ್ಟೆಗಳಲ್ಲೇ ಆಹಾರ, ಆವಾಸ, ಜೀವನ ಕ್ರಮವನ್ನು ಮೈಗೂಡಿಸಿಕೊಂಡಿರುವ ಹಕ್ಕಿ–ಪಕ್ಷಿ ಜೀವಿಗಳಂತೆ ಇವುಗಳಲ್ಲಿ ಕೋಳಿ ಬಳಗವು ಒಂದು. ಇದರಲ್ಲಿ ನಮ್ಮ ಸಾಕು ಕೋಳಿಗಳಿಂದ ಹಿಡಿದು ಕಾಡುಕೋಳಿ, ಗೌಜಲ ಹಕ್ಕಿ, ಲಾವುಗೆ, ನವಿಲು ಮತ್ತು ಮೆಕ್ಸಿಕೋದೇಶದ ಸೀಮೆಕೋಳಿಗಳು (Turkey) ಬರ್ಮಾ, ಚೀನಾ, ಫಿರ್ಮೋಸಾ, ನೈರುತ್ಯ ಏಷ್ಯಾ ಸುಂದರ ಕಾಡುಕೋಳಿಗಳು ಮುಂತಾದವೆಲ್ಲ ಸೇರಿ ಈ ಗುಂಪಿನಲ್ಲಿ ಇನ್ನೂರ ಐವತ್ತರಷ್ಟು ನಾನಾ ಜಾತಿಗಳಿವೆ. ಇವೆಲ್ಲ ನೆಲದಲ್ಲೇ ಓಡಾಡಿಕೊಂಡು ಹುಳು ಹುಪ್ಪಟ್ಟೆ, ಕಾಳು ಕಡ್ಡಿಗಳನ್ನು ತಿಂದು ಒಂದೊಂದು ಕ್ರಮದಲ್ಲಿ ಬದುಕುತ್ತವೆ. ನಮ್ಮ ಸುತ್ತಮುತ್ತಲ ಪರಿಸರದಲ್ಲಿ ನಾವು ನೋಡಿರುವಂತೆ "ದಾರಿಯಲ್ಲಿ ಮೇಯುತ್ತಿದ್ದ ಲಾವಿಗನ ಹಕ್ಕಿಗಳ ಗುಂಪು, ಗೌಜಲ ಹಕ್ಕಿಗಳು ನೋಡಲು ಸಿಕ್ಕಿದವು. ಸಗಣಿಗೆ ಮುತ್ತಿಕೊಂಡಿದ್ದ ಗೆದ್ದಲು ಹುಳುಗಳನ್ನು ಕಾಲಿನಿಂದ ಕೆದಕಿ ತಿನ್ನುತ್ತಿದ್ದವು"15. ಹೀಗೆ ಯಾವುದೇ ರೀತಿಯಲ್ಲಿ ಆಹಾರ ಸಂಪಾದಿಸುವ ಈ ಎಲ್ಲ ಹಕಿ–ಪಕ್ಷಿಗಳು ಆಹಾರಕ್ಕಾಗಿ ನೆಲವನ್ನು ಆಶ್ರಯಿಸಿ ಕೆಲವು ಸಂದರ್ಭದಲ್ಲಿ ಒಂಟಿಯಾಗಿಯೂ, ಕೆಲವು ಗುಂಪಾಗಿಯೂ ಇರುತ್ತವೆ. ವಿಶ್ರಾಂತಿಗಾಗಿ ಮತ್ತು ಮರಿ ಮಾಡುವುದಕ್ಕಾಗಿ ಮರಗಿಡಗಳಲ್ಲಿ ಗೂಡು ಕಟ್ಟಿ ಜೀವನ ಸಾಗಿಸುತ್ತವೆ.

ನೆಲದಲ್ಲಿ ಬಿಲಕೊರೆದು ವಾಸಿಸುವ ಮಿಂಚುಳ್ಳಿ ಜೇನು ಕುಟುಕ, ಇಲಿ, ಹೆಗ್ಗಣ ಮುಂತಾದ ಪ್ರಾಣಿ–ಪಕ್ಷಿಗಳನ್ನು ಬಿಟ್ಟರೆ, ಸಾಮಾನ್ಯವಾಗಿ ಮರಗಿಡಗಳುಳ್ಳ ಬಯಲು ಪ್ರದೇಶ ಪಶ್ಚಿಮ ಘಟ್ಟಗಳ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ವಾಸವಾಗಿರುವ ಹಕ್ಕಿ–ಪಕ್ಷಿಗಳೇ ಜಾಸ್ತಿ. ಅಂತ ಹಕ್ಕಿಗಳಲ್ಲಿ ಮಂಗಟ್ಟೆಹಕ್ಕಿ, ನೆಲ ಕುಟುಕ, ಮರ ಕುಟುಕ, ಕುಟುರಗಳು, ಪಾರಿವಾಳ ಮುಂತಾದವು. ಈ ಹಕ್ಕಿಗಳಲ್ಲಿ ಮಂಗಟ್ಟೆ ಹಕ್ಕಿ ಹಲವಾರು ಜಾತಿಗಳಿಂದ ಕೂಡಿದ್ದು, ಇದರ ಜೀವನ ಕ್ರಮವೇ ವೈಶಿಷ್ಟ್ಯಪೂರ್ಣವಾಗಿದೆ.

"ಮಂಗಟ್ಟೆ ಹಕ್ಕಿಗಳೆಲ್ಲಾ ಸಾಧಾರಣವಾಗಿ ಪೊಟರೆಗಳಲ್ಲಿ ಮೊಟ್ಟೆ ಇಟ್ಟು ಮರಿ ಮಾಡುವವು. ಆದರೆ ಮಿಂಚುಳ್ಳಿಗಳಂತೆ ಅವು ನೆಲದಲ್ಲಿ ಬಿಲ ತೋಡುವುದಿಲ್ಲ. ದೊಡ್ಡ ದೊಡ್ಡ ಮರಗಳ ಪೊಟರೆಗಳಲ್ಲಿ ಗೂಡು ಮಾಡುತ್ತವೆ. ಇಲ್ಲಿನ ಅಸಾಧಾರಣ ಅಂಶವೆಂದರೆ ಹೆಣ್ಣು ಹಕ್ಕಿ ಮರದ ಪೊಟರೆಯಲ್ಲಿ ಗೂಡು ಮಾಡಿ ಮೊಟ್ಟೆಯಿಟ್ಟ ನಂತರ ಗಂಡು ಹಕ್ಕಿ ಆ ಪೊಟರೆಯ ಬಾಯನ್ನು ಬಲವಾದ ತೆರೆ ನೇಯ್ದು ಮುಚ್ಚಿಬಿಡುತ್ತದೆ. ಆ ತೆರೆಯಲ್ಲಿ ತಾಯಿ ಹಕ್ಕಿಯ ಕೊಕ್ಕು ಮಾತ್ರ ಹೊರ ಬರುವಷ್ಟು ಕಿಂಡಿಯೊಂದನ್ನು ಮಾಡಿ ಮೊಟ್ಟೆಗಳು ಮರಿಯಾಗಿ ಹೊರಬರುವವರೆಗೂ ಗಂಡು ಹಕ್ಕಿಯೇ ಕಾವು ಕುಳಿತಿರುವ ತಾಯಿಗೆ ಗುಟುಕು ಕೊಡುತ್ತದೆ. ಆಕಸ್ಮಾತ್ ಗಂಡು ಹಕ್ಕಿ ಸತ್ತರೆ ತಾಯಿ ಹಕ್ಕಿಯೊಂದಿಗೆ ಮಂಗಟ್ಟೆ ಹಕ್ಕಿಯ ಇಡೀ ಸಂಸಾರ ಸಾಯುತ್ತದೆ. ಗೂಡಿನೊಳಗಿರುವ ತಾಯಿ ಹಕ್ಕಿ ಗಂಡು ಹಕ್ಕಿ ನೇಯ್ದಿರುವ ತೆರೆ ಹರಿದು ಹೊರಬರಲಾರದೆಂದೇನೂ ಇಲ್ಲ. ಆದರೆ ಗೂಡೊಳಗಿನ ತಾಯಿ ಹಕ್ಕಿಗೆ ಕಾವು ಕೊಡುವ ಸಮಯದಲ್ಲಿ ಪುಕ್ಕಗಳೆಲ್ಲಾ ಉದುರಿ ಹೋಗಿರುತ್ತವೆ. ಹಾರಲಾರದ ಅದು ಹೊರ ಬಂದರೂ ಸತ್ತಂತೆಯೇ"16

ಇಂತಹ ಹಕ್ಕಿ, ಪಕ್ಷಿ, ಪ್ರಾಣಿಗಳ ಜೀವನ ಪದ್ಧತಿಗಳನ್ನು ಅರಿತು ವ್ಯವಹರಿಸುವ ಪರಿಜ್ಞಾನ ಮನುಷ್ಯನಿಗಿಲ್ಲದೆಯಿದ್ದರೆ, ಭೇಟೆಯಂತೆ ಅವನ ಕ್ರೂರ ಪ್ರವೃತ್ತಿಗೆ ಸಿಕ್ಕಿ ಇಂತಹ ಹಕ್ಕಿಗಳು ಬಲಿಯಾಗಿ, ಜೀವ ಹಿಂಸೆಗೆ ಒಳಪಡುತ್ತಿವೆ. ಪ್ರಜ್ಞಾವಂತ ಜನ ಸಮುದಾಯಗಳು ಜನಸಾಮಾನ್ಯರಿಗೆ, ಅದರಲ್ಲೂ ರೈತರಿಗೆ ಪ್ರಕೃತಿಯ ಬಗ್ಗೆ, ಜೀವ ಪರಿಸರದ ಬಗ್ಗೆ ತಿಳುವಳಿಕೆ ಮೂಡಿಸುವುದು ಅವರ ಮೂಲಭೂತ ಜವಾಬ್ದಾರಿ. ಯಾಕೆಂದರೆ ಎರೆಹುಳುವನ್ನು ರೈತಮಿತ್ರ, 'ರೈತರ ಜೀವನಾಡಿ' ಎಂದೆಲ್ಲಾ ಕರೆಯುವಂತೆ ಹಕ್ಕಿ ಪಕ್ಷಿಗಳು ಹಲವಾರು ರೈತ ಮಿತ್ರವಾಗಿವೆ. ಅಂತಹ ಹಕ್ಕಿಗಳಲ್ಲಿ ಮಂಗಟ್ಟೆ ಹಕ್ಕಿಯೂ ಒಂದು.

ಆಫ್ರಿಕಾ ಖಂಡದ ಅಬಿಸೀನಿಯಾ ದೇಶದಲ್ಲಿರುವ 'ನೆಲ ಮಂಗಟ್ಟೆ ಹಕ್ಕಿ' "ಕಾಡುಗಳ ಅಂಚಿನ ಹುಲ್ಲುಗಾವಲುಗಳಲ್ಲಿ ಇದು ವಾಸಿಸುತ್ತದೆ. ಹುಲ್ಲುಗಾವಲಿನ ಮಿಡತೆಗಳು, ಹಾವುರಾಣಿ, ಓತಿಕ್ಯಾತ ಹಾವುಗಳು ಇವನ್ನೆಲ್ಲ ಹಿಡಿದು ತಿನ್ನುತ್ತದೆ. ರೈತರು ನೆಲಗಡಲೆ ಬಿತ್ತಿದಾಗ ಅದು ಗಿಡ ಕಿತ್ತು ನೆಲಗಡಲೆ ಬೀಜ ತಿನ್ನುತ್ತದೆ. ಆದರೂ ಇದು ರೈತರಿಗೆ ಉಪದ್ರವಕಾರಿಯಾದ ಅನೇಕ ಕೀಟಗಳನ್ನು ತಿನ್ನುವುದರಿಂದ ಅಬಿಸೀನಿಯಾದ ರೈತರು ಇದು ಬೆಳೆಗಳಿಗೆ ಮಾಡುವ ಹಾನಿಯನ್ನು ಸಹಿಸುತ್ತಾರೆ. ಇದು ಮುಖ್ಯವಾಗಿ ನೆಲವನ್ನೇ ಆಶ್ರಯಿಸಿರುವ ಹಕ್ಕಿಯಾದರೂ ಗೂಡು ಮಾಡಲು ಮಾತ್ರ ಇದಕ್ಕೆ ಮರದ ಪೊಟರೆ ಬೇಕು. ಅದಕ್ಕಾಗಿಯೇ ಇದು ಕಾಡಿನ ಸಮೀಪದಲ್ಲಿರುವ ಹುಲ್ಲುಗಾವಲುಗಳನ್ನು ಆಶ್ರಯಿಸಿದೆ"17.

ಬಯಲು ಪ್ರದೇಶಗಳಲ್ಲಿ ಕಾಣಸಿಗುವ ಹಕ್ಕಿಗಳಲ್ಲಿ ನೆಲಕುಟುಕ, ಮರಕುಟುಕ, ಕುಟುರುಕಗಳೆಂಬ ಪಕ್ಷಿಗಳ ಕ್ರಿಯೆಯನ್ನೇ ಪ್ರಧಾನವಾಗಿ ಗುರುತಿಸಿ ಅವುಗಳ ಆಹಾರ ಜೀವನ ಕ್ರಮ ಕ್ರಿಯೆಗಳ ಹಿನ್ನೆಲೆಯಿಂದ ಹೆಸರಿಟ್ಟಿರುವಂತೆ ಕಂಡು ಬರುತ್ತದೆ. ಈ ಹಕ್ಕಿಗಳಿಗೆ ಇಂತಹ ಹೆಸರಿಟ್ಟು ಕರೆದಿರುವುದು ಕೂಡ ಬುಡಕಟ್ಟು ಜನರೇ ಆಗಿರುವುದನ್ನು ಅಲ್ಲಗಳೆಯಲಾಗದು. ಈಗಿರುವ ಹಕ್ಕಿ–ಪಕ್ಷಿಗಳ ಹೆಸರು ವಿಜ್ಞಾನಿಗಳಿಟ್ಟಿರುವುದಲ್ಲ ಎಂಬುದು ಸ್ಪಷ್ಟ. ಹಾಗಿದ್ದ ಮೇಲೆ ನಾಡ ಹೆಸರಂತಿರುವುದನ್ನು ಗಮನಿಸದರೆ ಅರ್ಥವಾಗುತ್ತದೆ. ಬುಡಕಟ್ಟು ಮೂಲದ ಹಳ್ಳಿಯ ರೈತರಾಗಲಿ, ಕಾಡ ಜನರಾಗಲಿ ಆ ಹಕ್ಕಿಗಳ ಗುಣ, ನಡತೆ, ಸ್ವಭಾವವನ್ನು ಹತ್ತಿರದಿಂದ ಗಮನಿಸಿಯೇ; ಇಂತಹ ಹೆಸರಿಟ್ಟು ಕರೆಯುತ್ತ ಬಂದಿರುವುದನ್ನು ನಾವು ಗ್ರಹಿಸಬಹುದಾಗಿದೆ.

"ನೆಲಕುಟುಕ ಸಾಧಾರಣವಾಗಿ ಗೋಡೆಯ ಬಿರುಕುಗಳಲ್ಲಿ ಅಥವಾ ಬೆಟ್ಟಗಳ ಕಲ್ಲಿನ ಬಿರುಕುಗಳಲ್ಲಿ ಹಳೆ ಮರಗಳ ಪೊಟರೆಗಳಲ್ಲಿ ಗೂಡು ಮಾಡುತ್ತದೆ. ನಾಲ್ಕರಿಂದ ಆರು ಮೊಟ್ಟೆಗಳನ್ನಿಡುತ್ತದೆ. ಹೆಣ್ಣು ಹಕ್ಕಿ ಮಾತ್ರ ಮೊಟ್ಟೆಗಳ ಮೇಲೆ ಕಾವು ಕೂರುತ್ತದೆ. ನೆಲ ಕುಟುಕನ ಕೊಕ್ಕುಗಳೂ ಕಾಲುಗಳು ದುರ್ಬಲವಾದ್ದರಿಂದ ಇದಕ್ಕೆ ಮಿಂಚುಳ್ಳಿಯಂತೆ ನೆಲದಲ್ಲಿ ಬಿಲ ಕೊರೆಯಲಾಗಲೀ, ಮಂಗಟ್ಟೆ ಹಕ್ಕಿಯಂತೆ ಮರದಲ್ಲಿ ಪೊಟರೆಗಳನ್ನು ಮಾಡಲಾಗಲೀ ಆಗುವುದಿಲ್ಲ. ನೆಲಕುಟುಕಗಳನ್ನು ಬಯಲು ಸೀಮೆಯ ಪಟ್ಟಣಗಳ ಹೊರವಲಯದ ಬಡಾವಣೆಗಳಲ್ಲೆಲ್ಲಾ ನೋಡಬಹುದು. ಬಯಲು ಸೀಮೆಯಲ್ಲಿ ಹೇಗೆ ಮಲೆನಾಡಿನ ಮರಕುಟುಕಗಳು ಇಲ್ಲವೋ ಹಾಗೆ ಮಲೆನಾಡಿನಲ್ಲಿ ಅಯಾ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ಈ ಹಕ್ಕಿ ಅಪೂರ್ವ ವೇಗವಾಗಿ ಹಾರಲಾರದ ಈ ಹಕ್ಕಿ ದುರ್ಬಲ ರೆಕ್ಕೆಗಳನ್ನು ಪತಂಗದ ಮಾದರಿಯಲ್ಲಿ ಬೀಸುತ್ತಾ ನಿಧಾನವಾಗಿ ಹಾರುತ್ತದೆ. ಈ ಹಕ್ಕಿ ಎಂದೂ ಗುಂಪುಗಳಲ್ಲಿ ಇರುವುದಿಲ್ಲ. ಏಕಾಂಗಿಯಾಗಿ ಇಲ್ಲವೇ ಜೋಡಿಗಳಲ್ಲಿ ಮಾತ್ರ ಕಾಣಸಿಗುತ್ತದೆ"18

ಇದು ಕೀಟಾಹಾರಿ ಪ್ರಾಣಿಗಳು, ಹುಲ್ಲಿನ ಮಿಡತೆಗಳು, ದುಂಬಿ, ಓಡು ಹುಳು, ಗೆದ್ದಲುಗಳನ್ನು ಆಹಾರವನ್ನಾಗಿಸಿಕೊಂಡಿದೆ. ಹಳೆಯ ದನದ ಸೆಗಣಿಯಲ್ಲಿರುವ ಹುಳುಗಳನ್ನು ಬೆದಕಿ ತಿನ್ನುತ್ತದೆ. ಈ ಜಾತಿ ಹಕ್ಕಿಗಳಲ್ಲಿ ಮರವನ್ನಾಶ್ರಯಿಸಿರುವುದು ಮರಕುಟುಕ. "ಇದು ಸಹ್ಯಾದ್ರಿಯ ಕಾಡುಗಳಲ್ಲಿ ವಾಸಿಸುತ್ತಿರುವ ಅಸಾಧಾರಣ ಹಕ್ಕಿ ಎಂದೆನ್ನಿಸುತ್ತದೆ. ಮರ ಹತ್ತುವ ಮತ್ತು ಮರ ಕುಟುಕಿ ಅಲ್ಲಿನ ಹುಳು ಹುಪ್ಪಟೆಗಳನ್ನು ತಿಂದು ಬದುಕುವ ವಿಶಿಷ್ಟ ಜೀವನ ಕ್ರಮದಿಂದಾಗಿ ಮರ ಕುಟುಕದ ಕಾಲಿನ ಮೂಳೆಗಳೂ ಸ್ನಾಯುಗಳೂ ತುಂಬ ಮಾರ್ಪಾಡಾಗಿವೆ"19 ಜೊತೆಗೆ ಮರವನ್ನು ಕುಕ್ಕಿ ತೂತು ಮಾಡಿ ಅದರೊಳಗಿರುವ ಹುಳುಗಳನ್ನು ತನ್ನ ಕೊಕ್ಕಿಗಿಂತ ನೀಳವಾದ ನಾಲಿಗೆಯಿಂದ ಹಿಡಿದು ತಿನ್ನುತ್ತದೆ. ಇದು ಕಾಂಡ ಕೊರೆದು ಹಾಳು ಮಾಡುವ ಕೀಟ ಬಾಧೆ ರೋಗದ ಮರಗಳಿಗೆ ವರದಾನವಾಗಿದೆ. ಮತ್ತು ಮರಿ ಮಾಡುವಂತಹ ಋತುಗಳಲ್ಲಿ ಗಂಡು ಹಕ್ಕಿಗಳು ಕೊಕ್ಕಿನಿಂದ ಒಣ ಮರವನ್ನು ಕುಕ್ಕಿ ತಮಟೆ ಬಾರಿಸುವಂತೆ ಸನ್ನೆ ಮಾಡಲು ಪೈಪೋಟಿ ನಡೆಸುತ್ತವೆ. ಕಾಡಿನಲ್ಲಿ ನಡೆಯುವ ಈ ಸದ್ದು ಮರಕುಟುಕಗಳ ಪ್ರಣಯ ಸಮರದ ಆರಂಭವನ್ನು ಸೂಚಿಸುತ್ತದೆ. ಇದರ ಜೀವನದ ಹಲವು ಪ್ರವೃತ್ತಿಗಳಿಗೆ ಒಣಮರವನ್ನೇ ಆಯ್ದುಕೊಳ್ಳುವುದರಿಂದ ಒಳ್ಳೆಯ ಮರಗಳಿಗೆ ಹಾನಿ ಮಾಡುವುದಿಲ್ಲ. ಇಂತಹ ನಾನಾ ರೀತಿಯ ಜೀವ ಪ್ರೀತಿ, ಪ್ರಜ್ಞೆಯ ನಡವಳಿಕೆಯುಳ್ಳ ಈ ಮರಕುಟುಕ ಹಕ್ಕಿಗಳಿಗೆ ಈ ಜೀವನ ಸಂಸ್ಕೃತಿಯನ್ನು ಹೇಳಿಕೊಟ್ಟವರು ಯಾರು? ಇವು ಹೇಗೆ ತಮಗೆ ತಾವು ಮೈಗೂಡಿಸಿಕೊಂಡು ಬೆಳೆದು ಬಂದಿವೆ ಎಂದು ಗಮನಿಸಿದರೆ ಅಚ್ಚರಿಯಾಗುತ್ತದೆ. ಇಂತಹ ಹಕ್ಕಿ–ಪಕ್ಷಿಗಳ ಸಂಸ್ಕೃತಿಯನ್ನು ಈ ಮಾನವ ಸಂಸ್ಕೃತಿಗೆ ಹೊಲಿಸಲು ಸಾಧ್ಯವೆ? ಅವರ ಸಾಂಸ್ಕೃತಿಕ ಚಟುವಟಿಕೆಗಳೆನೆಂದರೆ, ನಿರುಪಯುಕ್ತ ಒಣಮರವೆಂದು ಜನರು, ಅರಣ್ಯ ಇಲಾಖೆಯವರು ಈ ಮರಗಳನ್ನು ಉರುವಲಿಗಾಗಿ ಸಂಗ್ರಹಿಸುತ್ತಾರೆ. ಇದರಿಂದ ಈ ಹಕ್ಕಿಗಳು ಗೂಡು ಮಾಡಿ ಜೀವನ ಮಾಡಲು ಕಾಡಲ್ಲಿ ಸೂಕ್ತ ಮರಗಳಿಲ್ಲದಾಗುತ್ತಿವೆ. ಹಾಗಾಗಿ ಮನುಷ್ಯರ ಈ ಪ್ರವೃತ್ತಿ ಮುಂದುವರಿದರೆ ಈ ಹಕ್ಕಿಗಳು ವಿರಳವಾಗುವ ಸಂಭವವಿದೆ. ಇದನ್ನೆ ಮಾನವರ ಜೀವಹಾನಿ ಸಂಸ್ಕೃತಿ ಎನ್ನುವುದು. ಇದರ ಪರಿಣಾಮವೆನೆಂದರೆ ಈ ಮರ ಕುಟುಕುಗಳಲ್ಲಿ ವಿಶಿಷ್ಟವಾದದ್ದು ಕಂದು ಬಣ್ಣದ ಮರಕುಟುಕ. ಇದು ಮಿಕ್ಕ ಹಕ್ಕಿಗಳಂತೆ ಮರದ ಪೊಟರೆಗಳಲ್ಲಿ ಗೂಡು ಮಾಡದೆ ಒಂದು ವಿಶಿಷ್ಟವಾದ ಕರಿ ಇರುವೆ ಗೂಡಿನೊಳಗೆ ಗೂಡು ಮಾಡಿ, ಮರಿ ಮಾಡುತ್ತದೆ. "ಕರಿ ಇರುವೆ ಗೂಡುಗಳನ್ನು ಇದು ಎಷ್ಟು ಅವಲಂಬಿಸಿದೆ ಎಂದರೆ, ಇರುವೆ ಗೂಡುಗಳನ್ನು ನಾಶಮಾಡಿದರೆ ಇವು ಸಂತಾನಾಭಿವೃದ್ಧಿ ಮಾಡಲಾರದೆ ನಾಶವಾಗುತ್ತವೆ. ಈಚೆಗೆ ಕಾಫಿ ತೋಟಗಳಲ್ಲಿ ವ್ಯಾಪಕವಾಗಿ ಬಳಕೆಗೆ ಬಂದಿರುವ ಕ್ರಿಮಿನಾಶಕಗಳು ಇರುವೆಗಳನ್ನು ನಾಶ ಮಾಡುತ್ತಿರುವುದರಿಂದ ಇದು ಪರೋಕ್ಷವಾಗಿ ಕಂದು ಮರಕುಟುಕಗಳನ್ನು ನಾಶಮಾಡುತ್ತಿದೆ. ಈ ಮರಕುಟುಕ ಇರುವೆ ಗೂಡುಗಳು ದೊರೆಯದಿದ್ದಾಗ ಮರದ ಮೇಲೆ ಗೂಡು ಮಾಡುವ ಗೆದ್ದಲು ಕೊಟ್ಟೆಯೊಳಗೂ ಪೊಟರೆ ಮಾಡುವುದನ್ನು ನೋಡಿದ್ದೇನೆ. ಕ್ರಿಮಿನಾಶಕಗಳಿಂದ ಮರದ ಮೇಲೆ ಗೂಡು ಮಾಡುವ ಗೆದ್ದಲುಗಳು ನಾಶವಾಗುತ್ತಿರುವುದರಿಂದ ಕಂದು ಮರಕುಟುಕ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಬೇಕಾಗಿದೆ"20. ಎಂದು ತೇಜಸ್ವಿ ಸೂಚಿಸುತ್ತಾರೆ. ಪ್ರಕೃತಿಯ ಈ ಒಂದಕ್ಕೊಂದರ ಅವಲಂಬಿತ ಜೀವಿಗಳ ಸ್ವಾಭಾವಿಕ ನಡವಳಿಕೆಗಳ ಪರಿಣಾಮಕ್ಕೆ; ಮಾನವನ ಪ್ರವೇಶದಿಂದಾಗುವ ಅವನ ನಡವಳಿಕೆಗಳಿಂದಾಗುವ ದುಷ್ಪರಿಣಾಮದಿಂದ ಎಷ್ಟೋ ಜೀವ ಸಂತತಿಗಳಿಗೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಇದನ್ನು ಮಾನವರು ಅರಿತು ನಡೆಯದಿದ್ದರೆ, ಪ್ರಕೃತಿಯ ಅಸಮತೊಲನದ ದುಷ್ಪರಿಣಾಮ ಅದರ ಅವಲಂಬಿತ ಜೀವಿಗಳ ಮೇಲೆಲ್ಲಾ ಆಗುವುದು ಗಮನಾರ್ಹ ಸಂಗತಿ.

ಕುಟುರುಕ ಹಕ್ಕಿಗಳನ್ನು ಪ್ರಪಂಚದಲ್ಲಿ ಹದಿನಾಲ್ಕು ಪ್ರಭೇದಗಳ ಎಪ್ಪತ್ತಾರು ಜಾತಿಯನ್ನಾಗಿ ಗುರುತಿಸಿದ್ದಾರೆ. ಅಮೆರಿಕಾ, ಆಫ್ರಿಕಾ, ಏಷ್ಯಾಖಂಡ ಉಷ್ಣವಲಯದ ಆಸುಪಾಸಿನ ಎಲ್ಲ ಕಾಡುಗಳಲ್ಲೂ ಇವೆ. ಇವು ತಮ್ಮ ಸಂಘಜೀವಿಗಳು ಇಲ್ಲದಿದ್ದರೂ ಗೋಣಿ, ಆಲ, ಬಸರಿ ಮುಂತಾದ ಮರಗಳ ಹಣ್ಣು ತಿನ್ನಲು ಗುಂಪುಗೂಡುತ್ತವೆ. ಹಣ್ಣುಗಳ ಜೊತೆಗೆ ಕೆಲವು ಹುಳು ಹುಪ್ಪಟೆಗಳನ್ನು ತಿನ್ನುತ್ತವೆ. ಯಾವಾಗಲೂ ಒಣಗಿ ಕುಂಬಾದ ಮರಗಳನ್ನು ಗೂಡು ಕಟ್ಟಲು ಅರಸುತ್ತವೆ. ತೇಜಸ್ವಿ ಈ ಕುಟುರುಕಗಳ ಬಗ್ಗೆ ಬರೆಯುತ್ತಾ ಈ ಹಕ್ಕಿಗಳನ್ನು ತಿನ್ನಲು ಬಂದ ಕೇರೆಹಾವನ್ನು ಈ ಹಕ್ಕಿ ಹಿಡಿದಾಗ ಆತ್ಮವಿಶ್ವಾಸ ಕಳೆದುಕೊಂಡ ಹಾವು ಕೆರೆಗೆ ಬಿದ್ದು ಪಾರಾದ ಘಟನೆಯನ್ನು ವಿವರಿಸುತ್ತಾರೆ. ಹಾಗೆಯೇ ಎಚ್.ಆರ್.ಕೃಷ್ಣಮೂರ್ತಿಯವರು 'ನಮ್ಮ ಹಕ್ಕಿಗಳು'ಪುಸ್ತಕದಲ್ಲಿ ಕಾಗೆ ಹಕ್ಕಿಗಳಿಗೂ ಜಗಳ ನಡೆಯುವುದನ್ನು ಉಲ್ಲೇಖಿಸುತ್ತಾರೆ. ತೇಜಸ್ವಿ "ಒಮ್ಮೆ ಗಿಳಿ ಮರಿಗಳನ್ನು ಪೊಟರೆಗಳಿಂದ ಹೊರತೆಗೆದು ನೋಡಲು ಕೈ ಹಾಕಿ ಅವು ತಮ್ಮ ಚೂಪಾದ ಇಕ್ಕುಳದಂಥ ಕೊಕ್ಕಿನಿಂದ ನನ್ನ ಅಂಗೈ ಚರ್ಮ ಹಿಸಿದು ಹೋಗುವಂತೆ ಕಚ್ಚಿದ್ದುವು"21 ಎನ್ನುತ್ತಾರೆ. ಇವನ್ನೆಲ್ಲ ಗಮನಿಸಿದರೆ ಪ್ರತಿ ಹಕ್ಕಿ, ಪಕ್ಷಿ, ಪ್ರಾಣಿಗಳ ದೇಹ ರಚನೆ ಅವುಗಳ ರಕ್ಷಣೆಗೆ ಪೂರಕವಾಗಿರುವುದು ಕಂಡು ಬರುತ್ತದೆ. ಈ ಸಂದರ್ಭದಲ್ಲಿ ಏಡಿ, ಆಮೆ, ಹಲ್ಲಿ, ಹಾವು

ಮುಂತಾದವುಗಳು ಅಪಾಯಕಾರಿ ಸಂದರ್ಭದಲ್ಲಿ ಮಾಡುವ ಜಾಗರೂಕ ಕ್ರಿಯೆಯನ್ನು ನೆನೆಯಬಹುದು. ಇವನ್ನೆಲ್ಲ ನೋಡಿದರೆ ಮಾನವನಂತೆ ಈ ಹಕ್ಕಿ ಪಕ್ಷಿಗಳಿಗೂ ತಮ್ಮದೇ ಆದ ಜೀವನ ಸಂಸ್ಕೃತಿಯಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಿಂದ ಇನ್ನೂ ಹೆಚ್ಚು ಸಂಶೋಧನೆಗಳು ಪ್ರಕೃತಿಯ ಜೀವಿಗಳ ಮೇಲೆ ನಡೆಯಬೇಕಾಗಿರುವುದನ್ನು ಮರೆಯಲಾಗದು.

ಮನುಷ್ಯರು ಸಾಕುವ ಪಕ್ಷಿಜಾತಿಯಲ್ಲಿ ಕೋಳಿಗಳನ್ನು ಬಿಟ್ಟರೆ ಪಾರಿವಾಳದ್ದೆ ನಂತರದ ಸ್ಥಾನ. ಇವುಗಳದ್ದು ಎಲ್ಲ ದೇಶದಲ್ಲೂ ಇರುವ ದೊಡ್ಡ ಬಳಗದಲ್ಲಿ ಹದ್ದಿನಷ್ಟು ದೊಡ್ಡ ಹಕ್ಕಿಗಳಿಂದ ಮೈನಾ ಹಕ್ಕಿಯಷ್ಟು ಚಿಕ್ಕದರವರೆಗೆ ನಾನಾ ಗಾತ್ರದ ಹಲವು ಬಣ್ಣಗಳ ಅಸಂಖ್ಯ ಜಾತಿಗಳಿವೆ. ಅವುಗಳಲ್ಲಿ ಹೆಸರಿಸುವಂತಹವುಗಳೆಂದರೆ; ಡೋ ಡೋ, ಪ್ಯಾಸೆಂಜರ್, ಸ್ಯಾಂಡ್ ಗ್ರೂಸ್, ಪಾರಿವಾಳ ಮತ್ತು ಕಾಡು ಪಾರಿವಾಳಗಳಾದ ಮನಿಯಾಡಲ ಹಕ್ಕಿ, ಚೋರೆ ಹಕ್ಕಿ, ಗುಮ್ಮಾಡಲ ಹಕ್ಕಿ ಮುಂತಾದವು. ಈ ಎಲ್ಲ ಹಕ್ಕಿಗಳು ಗುಂಪಾಗಿ ವಾಸಿಸುವ ಸಂಘ ಜೀವಿಗಳು. ಕಾಡಿನ ಹಣ್ಣುಗಳು ಮತ್ತು ದವಸ ಧಾನ್ಯಗಳು ಹಾಗೂ ಹುಲ್ಲಿನ ಬೀಜಗಳೇ ಇವುಗಳ ಪ್ರಧಾನ ಆಹಾರ. ಪ್ಯಾಸೆಂಜರ್ ಚೋರೆ ಹಕ್ಕಿಗಳು ಬಯಲು ಸೀಮೆ, ಕುರುಚಲು ಕಾಡು, ಅರೆ ಮಲೆನಾಡುಗಳಲ್ಲಿ ಕಂಡು ಬಂದರೆ ಇನ್ನು ಕೆಲವು ಮನಿಯಾಡಲ, ಗುಮ್ಮಡಲದಂತಹ ಹಕ್ಕಿಗಳು ಆಫ್ರಿಕ, ಆಗ್ನೇಯ ಏಷ್ಯಾದ ಕಾಡುಗಳಲ್ಲಿ ಕಂಡು ಬರುತ್ತವೆ. ಇವುಗಳ ಗೂಡು ಮತ್ತು ಜೀವನ ಕ್ರಮದ ಬಗ್ಗೆ ನಿರ್ದಿಷ್ಟವಾಗಿ ಗುರುತಿಸಿ ಹೇಳುವುದು ಕಷ್ಟ. ಯಾಕೆಂದರೆ ಇವು ತಿನ್ನುವ ಹಣ್ಣಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತಲೇ ಇರುವುದರಿಂದ ಸ್ಥಿರವಾಗಿ ಒಂದು ಕಡೆ ಇದ್ದು ಜೀವನ ಮಾಡುತ್ತವೆ ಎಂದು ಹೇಳುವುದು ಕಷ್ಟಸಾಧ್ಯ.

ಡೋಡೋ ಹಕ್ಕಿಯಂತೂ ಮಾರೀಷಿಯಸ್ ದ್ವೀಪ ಬಿಟ್ಟರೆ, ಇಡೀ ಪ್ರಪಂಚದಲ್ಲೆಲ್ಲೂ ಇರಲಿಲ್ಲ. ಲಕ್ಷಾಂತರ ವರ್ಷಗಳಿಂದ ವೈರಿಗಳೇ ಇಲ್ಲದೆ ರೆಕ್ಕೆಯನ್ನೇ ಕಳೆದು ಕೊಂಡು ನೆಲವನ್ನೇ ಆಶ್ರಯಿಸಿ ಬದುಕುತ್ತಿದ್ದ ಜಾಗಕ್ಕೆ ಮನುಷ್ಯ ಮೊದಲ ಬಾರಿಗೆ ಕಾಲಿಟ್ಟಾಗ ಇವು ಲಕ್ಷಾಂತರ ಸಂಖ್ಯೆಯಲ್ಲಿದ್ದವು. ಇವುಗಳ ಮಾಂಸದ ರುಚಿ ಕಂಡ ಮನುಷ್ಯ ನಿರಂತರ ಬೇಟೆಯಾಡುತ್ತಿದ್ದ. "ಮನುಷ್ಯರ ವಲಸೆಯೊಡನೆ ಅಲ್ಲಿಗೆ ಹಂದಿ, ಇಲಿ, ಹೆಗ್ಗಣಗಳೂ ಹೋದವು ಹಾರಲಾರದ ಡೋಡೋ ಹಕ್ಕಿ ನೆಲದಲ್ಲಿ ಗೂಡು ಮಾಡಿ ಮೊಟ್ಟೆ ಇಡುತ್ತಿದ್ದವು. ದೊಡ್ಡ ಹಕ್ಕಿಗಳನ್ನು ಮನುಷ್ಯರಿಗಾಗಿ ಕೊಲ್ಲುತ್ತಿದ್ದರೆ, ಹಂದಿಗಳೂ ಹೆಗ್ಗಣಗಳೂ ವೈರಿಗಳಿಲ್ಲದ ಈ ಪರಿಸರದಲ್ಲಿ ಅಸಂಖ್ಯಾತವಾಗಿ ವರ್ಧಿಸಿ, ಡೋಡೋ ಹಕ್ಕಿಯ ಮೊಟ್ಟೆಗಳನ್ನು ಮರಿಗಳನ್ನು ತಿನ್ನತೊಡಗಿದವು. ಇದರ ಪರಿಣಾಮ ಈ ಹಕ್ಕಿ ಕೆಲವೇ ದಶಕಗಳಲ್ಲಿ ಇತ್ತೀಚೆಗಷ್ಟೇ ನಿರ್ನಾಮವಾಯ್ತು. ಹೊಸ ಪ್ರಾಣಿಗಳನ್ನು ಅಪರಿಚಿತ ಪರಿಸರಕ್ಕೆ ರವಾನಿಸುವುದರ ದುಷ್ಪರಿಣಾಮಗಳಿಗೆ ಡೋಡೋ ಹಕ್ಕಿಯ ಕಥೆ ಇಂದು ಉದಾಹರಣೆಯಾಗಿದೆ"22

ಈ ಡೋಡೋ ಹಕ್ಕಿಗಿಂತ ಜಗತ್ತಿನಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿದ್ದ ಪ್ಯಾಸೆಂಜರ್ ಪಾರಿವಾಳಗಳ ವಿನಾಶದ ಕಥೆ ಅತ್ಯಂತ ದುರಂತವಾದದ್ದು. ಅದರ ದುರಂತಕ್ಕೆ ಅವುಗಳ ಸಂಘಜೀವನವೇ ಮೂಲವಾಗಿರುವಂತಿದೆ. ಗೊತ್ತುಗುರಿಯಿಲ್ಲದೆ ಆ ಕಾಲದ ರೈತರು ಈ ಹಕ್ಕಿಗಳನ್ನು ಶಿಕಾರಿ ಮಾಡುತ್ತಿದ್ದ ಪರಿಯನ್ನು ಕಂಡ ಪ್ರಕೃತಿ ಶಾಸ್ತ್ರಜ್ಞ ಆಡೋಬಾನ್ ಮಾಡುವ ವರದಿ, "ಅದೊಂದು ದಿಗ್ಭ್ರಮೆಗೊಳಿಸುವ ನೋಟ! ಈ ಹಕ್ಕಿಗಳು ಎಷ್ಟೊಂದು ಅಗಣಿತ ಸಂಖ್ಯೆಯಲ್ಲಿ ಹಾರಿ ಬರುತ್ತಿದ್ದುವೆಂದರೆ ರೈತರು ಉದ್ದುದ್ದ ದೋಟಿ ತಗೊಂಡು ಬೀಸಿಯೆ ಲಕ್ಷಾಂತರ ಹಕ್ಕಿಗಳನ್ನು ಕೊಂದರು. ಆ ಗುಂಪುಗಳು ಯಾವುದಾದರೂ ಮರದ ಮೇಲೆ ಕುಳಿತರೂ ಸಾಕು ಆ ಮರದ ಸಣ್ಣ ಸಣ್ಣ ಕೊಂಬೆಗಳೆಲ್ಲಾ ಮುರಿದು ಹೋಗುತ್ತಿದ್ದವು. ಈ ಹಕ್ಕಿಯ ಗುಂಪುಗಳು ಕುಳಿತು ಎದ್ದು ಹೋದ ಕಾಡುಗಳು ಸುಂಟರಗಾಳಿಗೆ ಸಿಕ್ಕಿ ಜರ್ಝರಿತವಾದಂತೆ ಕಾಣುತ್ತಿತ್ತು. ಆಕಾಶದತ್ತ ಯಾವ ಕಡೆಗೆ ಕಲ್ಲೆಸೆದರೂ ಹಲವಾರು ಹಕ್ಕಿಗಳು ಸತ್ತು ಬೀಳುವಷ್ಟು ದಟ್ಟವಾದ ಗುಂಪುಗಳಲ್ಲಿ ಪ್ಯಾಸೆಂಜರ್ ಪಾರಿವಾಳಗಳು ಹಾರಿಬರುತ್ತಿದ್ದವು. ಹಳ್ಳಿಯ ರೈತರೆಲ್ಲ ಕೋವಿ ತಂದು ಆಕಾಶ ದತ್ತ ಗುಂಡು ಹಾರಿಸುತ್ತಿದ್ದರು. ಆದರೆ ಆ ಹಕ್ಕಿಗಳ ರೆಕ್ಕೆ ಬಡಿತದ ಸದ್ದಿನಲ್ಲಿ ಕೋವಿಯ ಢಂಕಾರ ಸಹ ಕೇಳಿಸುತ್ತಿರಲಿಲ್ಲ. ನಾನು ಊಟ ತೀರಿಸಿ ಹೊರ ಬಂದಾಗ ಮಧ್ಯರಾತ್ರಿ, ಆದರೂ ಹಕ್ಕಿಯ ಆಗಾಧ ಗುಂಪುಗಳು ಒಂದಾದ ಮೇಲೊಂದರಂತೆ ಬರುತ್ತಲೇ ಇದ್ದವು. ರಾತ್ರಿಯೆಲ್ಲಾ ಹಾರುವ ಸದ್ದು ಮುಂದುವರಿದೇ ಇತ್ತು. ರೈತರು ಗೊತ್ತು ಗುರಿ ಇಲ್ಲದೆ ಆಕಾಶಕ್ಕೆ ಗುಂಡು ಹೊಡೆಯುತ್ತಲೇ ಇದ್ದರು. ಬೆಳಕು ಹರಿಯುವ ವೇಳೆಗೆ ಹಕ್ಕಿಗಳ ಗುಂಪುಗಳು ನಿರ್ಗಮಿಸಿದ್ದವು. ಆದರೆ ಈಗ ಹದ್ದು, ಕಾಗೆ, ಗಿಡುಗ, ನರಿ ಇತ್ಯಾದಿ ನೂರಾರು ಕಾಡುಪ್ರಾಣಿಗಳು ಅಲ್ಲೆಲ್ಲಾ ಮುತ್ತಿಕೊಂಡಿದ್ದವು. ಭೂಮಿಯೆಲ್ಲಾ ಸತ್ತ, ಸಾಯುತ್ತಿರುವ, ರೆಕ್ಕೆ ಮುರಿದು ಓಡಾಡುತ್ತಿರುವ ಪ್ಯಾಸೆಂಜರ್ ಪಾರಿವಾಳಗಳಿಂದ ತುಂಬಿ ಹೋಗಿತ್ತು. ರೈತರು ಕೈಲಾದಷ್ಟನ್ನು ಹೆರಕಿ ಹೆರಕಿ ಗುಡ್ಡೆ ಮಾಡುತ್ತಿದ್ದರು. ಆದರೆ ವಿಸ್ತಾರ ಪ್ರದೇಶದಲ್ಲಿ ಹಕ್ಕಿಗಳು ಎಷ್ಟೊಂದು ಬಿದ್ದಿದ್ದುವೆಂದರೆ ಎಲ್ಲರೂ ದಿನಗಟ್ಟಲೆ

ಹೆರಕಿದರೂ ಮುಗಿಯದಷ್ಟಿದ್ದವು. ರೈತರು ಆ ಸತ್ತ ಹಕ್ಕಿಗಳನ್ನೆಲ್ಲಾ ತಮ್ಮ ಹಂದಿಗಳಿಗೆ ಆಹಾರವಾಗಿ ಕೊಡುತ್ತಿದ್ದರು.

.....1890 ನೇ ಇಸ್ವಿ ಮಾರ್ಚ್‌ನಲ್ಲಿ ಕೊಟ್ಟ ಕೊನೆಯ ಪ್ಯಾಸೆಂಜರ್ ಹಕ್ಕಿಯನ್ನು ಶಿಕಾರಿ ಮಾಡಲಾಯ್ತು. ಸಿಂಸಿನಾಟಿ ಜೂ ನಲ್ಲಿದ್ದ ಮಾರ್ಥಾ ಎಂದು ಹೆಸರಾದ ಕೊಟ್ಟ ಕೊನೆಯ ಪ್ಯಾಸೆಂಜರ್ ಪಾರಿವಾಳ 1914 ನೇ ಇಸ್ವಿ ಸೆಪ್ಟಂಬರ್‌ನಲ್ಲಿ ಕೊನೆಯುಸಿರೆಳೆಯಿತು. ಕೆಲವೇ ದಶಕಗಳ ಹಿಂದೆ ಎಣಿಕೆಗೆ ನಿಲುಕದಷ್ಟಿದ್ದ ಪ್ಯಾಸೆಂಜರ್ ಪಾರಿವಾಳಗಳು ಈಗ ಭೂಮಂಡಲದ ಮೇಲೆ ಒಂದೂ ಇಲ್ಲ"23

ಬಯಲು ಸೀಮೆ, ಮಲೆನಾಡು ಪ್ರದೇಶಗಳಲ್ಲಿ ಕಂಡು ಬರುವ ಭಾರತದ ಗುಮ್ಮಡಲ ಹಕ್ಕಿಗಳಲ್ಲಿ ಹಸಿರು, ಬಿಳಿಯ, ಸಾದಾ ಎಂಬ ಮೂರು ಬಗೆಯ ಈ ಹಕ್ಕಿಗಳಿಗೆ ಮುಂದೆ ಭವಿಷ್ಯವಿಲ್ಲದಿರುವುದು ಕಳವಳವಾಗಿದೆ. ಯಾಕೆಂದರೆ ಕೈಗಾರಿಕೀಕರಣದ ಬೆಳವಣಿಗೆಯಿಂದ ಪಾರಿವಾಳ ಬಳಗವಾದ ಗುಮ್ಮಡಲ ಹಕ್ಕಿಗಳು ಆಹಾರಕ್ಕಾಗಿ ಅವಲಂಬಿಸಿರುವ ಹಣ್ಣಿನ ಮರಗಳನ್ನು ಮ್ಯಾಚ್‌ವುಡ್, ಪ್ಲೈವುಡ್ ಕಂಪನಿಗಳಿಗೆ ಕಡಿಯಲು ಸರಕಾರಗಳು ಪರವಾನಗಿ ನೀಡುತ್ತಿರುವುದು ಅವಿರತವಾಗಿ ಮುಂದುವರಿಯುತ್ತಿರುವುದರಿಂದಾಗಿ. "ತುಂಬಾ ವಿಶಿಷ್ಟ ಆಹಾರಗಳಿಗೆ ಹೊಂದಿಕೊಂಡು ವಿಕಾಸವಾಗಿರುವ ಈ ಹಕ್ಕಿಗಳು, ಕಾಡಿನ ಕೆಲವೇ ಮರದ ಹಣ್ಣುಗಳನ್ನು ತಿನ್ನುತ್ತವೆ. ಇವುಗಳ ಜಠರ, ಜೀರ್ಣಾಂಗಗಳು, ಕರುಳು ಎಲ್ಲ ಎಷ್ಟೊಂದು ಮಾರ್ಪಾಡಾಗಿವೆಯೆಂದರೆ ತುರ್ಚೆ, ಧೂಪ, ಉಗನಿ ಮೊದಲಾದ ಹಲಕೆಲವು ಮರಗಳು ಹೋದರೆ ಈ ಅದ್ಭುತ ಗಾತ್ರದ ಪಾರಿವಾಳಗಳು ನಿರ್ನಾಮವಾಗುತ್ತವೆ"24

ಕೋಗಿಲೆಯ ಕೊಕ್ಕು ಬಳಗದಲ್ಲಿ ನೂರ ನಲವತ್ತಾರಕ್ಕೂ ಹೆಚ್ಚು ಜಾತಿಗಳ ಅಸಂಖ್ಯ ವರ್ಣಗಳ ಹಕ್ಕಿಗಳಿವೆ. ಕೋಗಿಲೆ ಮತ್ತು ಪಶ್ಚಿಮಗೋಲಾರ್ಧದ ಕೌಬರ್ಡ್ ಈ ತೆರನ ಹಕ್ಕಿ ಜಾತಿಗಳು ಎಂಬತ್ತರಷ್ಟಿದ್ದೂ ಇವೆಲ್ಲ ಪರತಂತ್ರ ಜೀವಿಯಾಗಿವೆ. ಹಾಗೂ ಕುಕ್ಕೂ ಬಳಗದ ಹಕ್ಕಿಗಳೆಲ್ಲಾ ಪರತಂತ್ರ ಜೀವಿಗಳಲ್ಲ. ಇವುಗಳಲ್ಲಿ ಸುಮಾರು ಎಪ್ಪತ್ತೈದು ಜಾತಿ ಹಕ್ಕಿಗಳು ಗೂಡು ಕಟ್ಟಿ ಮೊಟ್ಟೆಯಿಟ್ಟು ತಮ್ಮ ಮರಿಗಳನ್ನು ತಾವೇ ಸಾಕುತ್ತವೆ. ಅವುಗಳಲ್ಲಿ ಎಲ್ಲರಿಗೂ ಗೊತ್ತಿರುವ ಕಾಗೆ, ಕೆಂಬೂತಗಳ ಜೀವನ ಕ್ರಮವೇ ಮಾದರಿ. ಒಟ್ಟಾರೆ ಈ ಹಕ್ಕಿ ಬಳಗವು ಹೆಚ್ಚು ಬಯಲು ಸೀಮೆಯಲ್ಲಿದ್ದು, ಅಂಟಾರ್ಟಿಕ್ ಭೂ ಪ್ರದೇಶವನ್ನು ಬಿಟ್ಟು ಪ್ರಪಂಚದ ಉಳಿದೆಲ್ಲಡೆ ಕಾಣಸಿಗುತ್ತವೆ. ಕಾಗೆ, ಕೆಂಬೂತ, ಕಾಜಾಣ ಮುಂತಾದವು ಎಲ್ಲಾ ಋತುವಿನಲ್ಲೂ ಕಂಡು ಬಂದರೆ, ಕೋಗಿಲೆಗಳು ಮಾತ್ರ ವಸಂತ ಋತುವಿನಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಇವುಗಳನ್ನು ಕಂಡು ಕೇಳಿದ, ಸ್ವರ, ಧ್ವನಿಗೆ ಕವಿಗಳು ಮಾರುಹೋಗಿ, ತಮ್ಮೊಳಗಿನ ನಾನಾ ತರದ ಭಾವ, ಕಲ್ಪನೆಗಳಿಂದ ಆ ಹಕ್ಕಿ ಪಕ್ಷಿಗಳನ್ನು ಹಾಡಿ ಹೊಗಳಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸ್ಮರಿಸಬಹುದು.

"ಕೊರಳೊಳಗೆ ತುಂಬಿರುವ ಸಂಗೀತರಸವನ್ನು
ಕವಿಗೆರೆದು ಮನದಳು ತಂಪುಗೊಳಿಸು
.....
ಬೆಳದಿಂಗಳಲಿ ಹೂವ ಮುಡಿದಿರುವ ಹಂಬಿನಾ
ಚೆಂದವನು ಹಾಡಿನಲೆ ತೋರು ನನಗೆ.
ಸವಿ ಹಾಡ ಮಳೆಗರೆದು ನುಣ್ಚರದ ಹೊಳೆಯಲ್ಲಿ
ತೇಲಿಸೆನ್ನನು ಮುದದಿ ಮುದ್ದು ಹಕ್ಕಿ"25 (ಹಕ್ಕಿಗೆ)

"'ಕುಹೂ ಅ ಕೂಹೂ ಅ' ಎನ್ನುತ ಹಾಡುವ
ಕಿನ್ನರ ಕಂಠದ ಕೋಗಿಲೆಯೆ
ಮಾವಿನ ತಳಿರೊಳು ದೇವತೆಯಂದದಿ
ನೀನಡಗೇನನು ಹಾಡುತಿಹೇ"26 (ಕೋಗಿಲೆ)

"ಚಿಕುಹೂ ಚಿಕುಹೂ ಚಿಕುಹೂ
ಸನ್ನೆಯವೊಲು ಮುಹುರ್ಮುಹು
ಆರೆಚ್ಚರಕೀ ತುತ್ತುರಿ
ಬಾನೊಳುಮೊಳಗುತಿವೆ?

ಎನ್ನ ಕಿವಿಯೊಳೀ ಸವಿದನಿ
ಸಿಂಪಿಸುತ್ತಿದೆ ಸೊದೆ ಸೀರ್ವನಿ
ವಿಸ್ಮೃತಿ ಗೈದಿರುವಾತ್ಮವ
ನುಜ್ಜೀವಿಪ ತೆರದೆ"27 (ಚಿಕುಹೂ)

ಈ ಭಾಗಗಳಲ್ಲಿ ಕೋಗಿಲೆಯ ಕರೆವ ಸಿರಿಯನ್ನು ಕೀರ್ತಿಸಲಾಗಿದೆ. ಕೋಗಿಲೆ ತನ್ನ ಕಂಠ ಶ್ರೀಮಂತಿಕೆಯಿಂದ ಜನರ ಹೃದಯ ಗೆದ್ದಿರುವಂತೆ, ಅದರ ಜೀವನ ಕ್ರಮದಲ್ಲಿ ಯಾರ ಮೆಚ್ಚಿಗೆಯನ್ನೂ ಗಳಿಸಿಲ್ಲ. ಕೊಕ್ಕು ಬಳಗದ ಪಕ್ಷಿಗಳಲ್ಲಿ ಆಹಾರ ಕ್ರಮದಲ್ಲಿ ಈ ಕೋಗಿಲೆ ಕಾಜಾಣಗಳು ಕ್ರಿಮಿ ಕೀಟಗಳೊಡನೆ ಹಣ್ಣು ಹಂಪಲುಗಳನ್ನು ತಿಂದರೆ, ಕಾಗೆ ಕೆಂಬೂತ ಮುಂತಾದವು ಮಾಂಸಾಹಾರಿಗಳಾಗಿ ನಾನಾ ತರಹದ ಹುಳುಗಳನ್ನು ಇಲಿ, ಓತಿಕ್ಯಾತ, ಕಪ್ಪೆ, ಹಾವುಗಳನ್ನು ಮತ್ತು ಕೆಲವು ಹಣ್ಣುಗಳನ್ನು ತಿಂದು ಜೀವಿಸುತ್ತವೆ. ಇವುಗಳೆಲ್ಲ ತಮ್ಮ ತಮ್ಮ ಜೀವನ ಕ್ರಮಕ್ಕನುಗುಣವಾಗಿ ಒಂಟಿಯಾಗಿ, ಜೊತೆಯಾಗಿ, ಗುಂಪು ಗುಂಪಾಗಿ ಕಂಡು ಬರುತ್ತವೆ. ಕಾಗೆಗಳಂತೂ ಆಹಾರ ಸಂಪಾದನೆ, ಆತ್ಮರಕ್ಷಣೆ ಸಂದರ್ಭಗಳಲ್ಲಿ ಇಡೀ ತಮ್ಮ ಬಳಗವನ್ನೇ ಕೂಗಿ ಕರೆಯುತ್ತವೆ. ಕೊಕ್ಕು ಬಳಗದ ಒಂದೊಂದು ಜಾತಿಯ ಪಕ್ಷಿಗಳು ಒಂದೊಂದು ರೀತಿಯ ಜೀವನ ಕ್ರಮವನ್ನು ಹೊಂದಿವೆ. ಇವುಗಳಲ್ಲಿ ಕೆಂಬೂತದ ಜೀವನ ಕ್ರಮದ ವಿಶೇಷವೇನೆಂದರೆ, ಅವು ಗೂಡು ಕಟ್ಟಿ ಮರಿ ಮಾಡಿರುವುದು ಇದುವರೆಗೂ ಮನುಷ್ಯನ ಕಣ್ಣಿಗೆ ಗೋಚರಿಸಿರುವುದು ದಾಖಲೆಯಾಗಲಿ, ಹೇಳಿಕೆಗಳಾಗಲಿ ಇಲ್ಲವೇಯಿಲ್ಲ. ಇವುಗಳ ಒಂದು ಉಪದ್ರವಕಾರಿ ಗುಣವೇನೆಂದರೆ, ಬೇರೆ ಹಕ್ಕಿಗಳ ಗೂಡುಗಳನ್ನು ಹುಡುಕಿ ಅಲ್ಲಿ ಸಿಕ್ಕಿದ ಮೊಟ್ಟೆ ಮರಿಗಳನ್ನು ತಿಂದು ಹಾಕುತ್ತವೆ. ಕಾಗೆಗಳು ಮೊಟ್ಟೆಯಿಟ್ಟು ಮರಿ ಮಾಡುವ ಸಂದರ್ಭದಲ್ಲಿ, ಮುಳ್ಳು ಕಡ್ಡಿಗಳನ್ನು ತಂದು ಮರಗಳಲ್ಲಿ ಗೂಡು ಮಾಡಿ ಮೊಟ್ಟೆಯಿಡುತ್ತವೆ. ಇದೇ ಸಂದರ್ಭವನ್ನು ಕಾಯುತ್ತಿದ್ದ ಕೋಗಿಲೆಗಳು ಕಾಗೆಗೆ ತಿಳಿಯದಂತೆ ಮೋಸದಿಂದ ಕಾಗೆ ಗೂಡಿನೊಳಗೆ ಮೊಟ್ಟೆಯಿಟ್ಟು ಬರುತ್ತವೆ. ಅದರ ಮೊಟ್ಟೆಗೆ ಕಾಗೆ ಕಾವು ಕೊಟ್ಟು ಮರಿ ಮಾಡಿ ಗುಟುಕು ಕೊಡುತ್ತದೆ. ಇದನ್ನೇ ಕುವೆಂಪು ಕಾಗೆ, ಕೋಗಿಲೆ, ಕಾಜಾಣಗಳ ಜೀವನ ಕ್ರಮದ ವೈವಿಧ್ಯತೆಯನ್ನು ಮತ್ತು ಕಾಜಾಣದ ಪ್ರಶಂಸೆಯನ್ನು ಕಾವ್ಯ ಮಾಡಿದ್ದಾರೆ.

"ಕೋಗಿಲೆಯಂತೆಯೆ ಬಣ್ಣವು ನಿನಗಿದೆ
ಕೋಗಿಲೆಯಿಂಚರ ಕಿಮ್ಮಡಿಯಿಂಚರ
ಕೋಗಿಲೆಗೆಲ್ಲಿದೆ ನಿನಗಿರುವಂತಹ
ಪುಕ್ಕದ ನೀಲುವ ಗರಿಯೆರಡು?
ಕೋಗಿಲೆಯಿನಿದನಿಯೊಂದೇ ಆಗಿದೆ
ನಿನ್ನದುಬಹುವಿಧವಾಗಿಹುದು
ಕೋಗಿಲೆಯಂದಡಿ ಹೆರವರ ಮನೆಯಲಿ
ಹುಟ್ಟಿದ ತಬ್ಬಲಿ ನೀನಲ್ಲ !
ಕೋಗಿಲೆಯಂದದಿ ಹೊಲಸನು ತಿನ್ನುವ
ಕಾಗೆಗೆ ನೀ ಋಣಿಯಾಗಿಲ್ಲ !
ಶೂದ್ರನೆ ಹುಟ್ಟಿಸಿ, ಶೂದ್ರನೆ ಬೆಳೆಯಿಸಿ
ಶೂದ್ರನು ಕೊಟ್ಟಾಹಾರವ ತಿಂದಿಹ
ಕೋಗಿಲೆಗೆಲ್ಲಿಯ ದ್ವಿಜತನವು?
ಕಾಗೆಯ ಮರಿಗಳ ಸಂಗದಿ ಬೆಳೆದಿಹ
ಆ ಪರ ಪುಟ್ಟನು ನಿನಗೆಣೆಯೆ?
ಬನದೆಲೆವನೆಯಲ್ಲಿ ರಿಸಿಕುವರರವೊಲು
ಜನಿಸಿದ ಪರಿಶುದ್ಧತ್ಮಾನು ನೀನಹೆ,
ಸಾಟಿಯ ನಿನಗಾ ದೇಸಿಗನು?"28 (ಕಾಜಾಣ)

ಈ ಕಾವ್ಯಗರ್ಭದಲ್ಲಿ ಜನ ಸಮಾಜಗಳ ಮನಸ್ಸು, ವ್ಯವಸ್ಥೆಗಳ ವ್ಯಂಗ್ಯವಿದೆ. ಇಲ್ಲಿ ನಾಡಿನ ಸಮಾಜ ಕಾಗೆಯನ್ನು ಶೂದ್ರನೆಂದೂ, ಕೋಗಿಲೆಯನ್ನು ದ್ವಿಜನೆಂದು ನೋಡುವ ಪ್ರವೃತ್ತಿಗೆ ಕಾಜಾಣದ ಜೀವನ ಗುಣಗಳನ್ನು ಕವಿ ಸವಾಲಾಗಿ ಕಟ್ಟಿಕೊಡುತ್ತಾರೆ. ಇವರು ಹೀಗೆ ಮಾಡುತ್ತಲೇ 'ಕೋಗಿಲೆ ಗೆಲ್ಲಿಯ ದ್ವಿಜತನವು,? ಎಂದು ಪ್ರಶ್ನಿಸಿ ಕೋಗಿಲೆಯಂತೆ ಕಾಗೆಗೆ ನೀ ಋಣಿಯಾಗಿಲ್ಲ? ಎಂದು ಕೋಗಿಲೆ ರೂಪದ ದ್ವಿಜರನ್ನು ಜರಿಯುತ್ತಾರೆ. ಇವರ ಹುಟ್ಟು, ಬೆಳವಣಿಗೆಗೆ ಅನ್ನ ಕೊಡುವ ಕಾಗೆ ರೂಪದ ಶೂದ್ರರ ಮಹತ್ವವನ್ನು

ಸುಪ್ತವಾಗಿರಿಸಿ ಸರ್ವ ಸಮ್ಮತ ಪರಿಶುದ್ಧಾತ್ಮದ ಸ್ವಾವಲಂಬಿ ಜನರಾದ ಕಾಜಾಣದ ಜೀವನವನ್ನು ಪ್ರಶಂಶಿಸುತ್ತಾರೆ. ವಾಸ್ತವವಾಗಿ ಪ್ರಕೃತಿಯಲ್ಲಿ ಶ್ರೇಷ್ಠ ಕನಿಷ್ಠವೆಂದಾಗಲಿ, ದ್ವಿಜ ಶೂದ್ರತ್ವವೆಂಬ ಯಾವುದೇ ತಾರತಮ್ಯ ತತ್ವವಿಲ್ಲ. ಇಲ್ಲಿ ಕಾಗೆ, ಕೋಗಿಲೆ, ಕಾಜಾಣ, ಗಿಳಿ, ಪಾರಿವಾಳಗಳಾಗಲಿ ಎಲ್ಲವೂ ಒಂದೇ. ಇವು ಪ್ರಕೃತಿಯ ಜೀವ ತತ್ವದೊಳಗಿನ ಒಂದೊಂದು ಸಮಾನ ಜೀವಿಗಳು ಇದನ್ನೇ ಕವಿ 'ಬನದೆಲೆವನೆಯಲಿ ರಿಸಿ ಕುವರರವೊಲು ಜನಿಸಿದ ಪರಿಶುದ್ಧಾತ್ಮನು ನೀನಹೆ' ಎಂದು ಸಾಂಕೇತಿಕವಾಗಿ ಕಾಜಾಣದ ಕಡೆ ದೃಷ್ಟಿ ಹರಿಸಿ ಸರ್ವಜೀವಿಗಳನ್ನು ಒಂದೇ ಜೀವತತ್ವದೊಳಗೆ ಸೇರಿಸಿ, ಅಲ್ಲಿಂದಲೇ ಉದಯಿಸಿ ವಿಕಾಸವಾಗಲೆಂದು ಸೂಚಿಸಿರುವುದು. ಆದರೆ 'ಸಾಟಿಯೇ ನಿನಗಾ ದೇಸಿಗನು,? ಎಂದು ಕಾಜಾಣವನ್ನು ಶ್ರೇಷ್ಠಗೊಳಿಸಿ ಕೋಗಿಲೆಯನ್ನು ಹೀಯಾಳಿಸಿರುವುದು ಜೀವ ಪರಿಸರಕ್ಕೆ ಯುಕ್ತವಾಗಿಲ್ಲ. ಈ ಶ್ರೇಣಿಕೃತ ಭಾವವೇ ಕೆಳಸ್ತರದ ವಿನಾಶಕ್ಕೆ ಕಾರಣವಾಗಿದೆ. ಆದ್ದರಿಂದಲೇ ಕೋಗಿಲೆಗಳೊಂದಿಗೆ ಮನುಜ ಬೆಳೆಸಿಕೊಂಡಿದ್ದ ಅಂದಿನ ಭಾವನಾತ್ಮಕವಾದ ಮಾನಸಿಕ ಸಂಬಂಧ ಇಂದು ದೂರವಾಗಿದೆ. ಇವತ್ತು ಮನುಷ್ಯನ ಮುಂದೆ ಎಲ್ಲ ಜೀವಿಗಳೂ ತೃಣ. ಹಾಗಾಗಿ ಕೋಗಿಲೆಯೇನು ಇವನ ಪ್ರೀತಿಗೆ ಹಿಂದಿನಿಂದಲೂ ಪಾತ್ರವಾಗಿದ್ದ ನವಿಲು, ಗಿಳಿ, ಪಾರಿವಾಳ ಮುಂತಾದ ಪಕ್ಷಿಗಳು ಮತ್ತು ಪ್ರಾಣಿಗಳು ಮಾನವನ ಪ್ರೀತಿ, ರಕ್ಷಣೆಗಳಿಂದ ವಂಚಿತವಾಗಿ ನಶಿಸುತ್ತಿವೆ. ಈ ಆತಂಕದಿಂದ ಇಂದು ಕೋಗಿಲೆಗೊದಗಿರುವ ದುಸ್ಥಿತಿಯನ್ನು ಕಂಡು, ಮತ್ತೆ ಅದನ್ನು ಅರಸುತ್ತಾ ಹೊರಟಿರುವ ಸಂಭಾಷಣೆಯ ರೂಪದ ವ್ಯಂಗ್ಯಾತ್ಮಕ ದೃಶ್ಯದ ಅಭಿವ್ಯಕ್ತಿ ಇಲ್ಲಿದೆ.

"ಎಲೆ ಕೋಗಿಲೆ ಹಾಡು
ಬಲ್ಲೆಯಾ ಅದರ ಜಾಡು
ದಂಡೆ ಮೇಲೊಂದು ಹೊಸ ಬಿದಿರು ಮನೆ
ಕಟ್ಟುವವಸರ ಒಲೆಯೂಡುವವಸರ
ಅಡುಗೆಯವಸರ, ಬಸಿರ ಮಗು ಕೇಳುವವಸರ
ಕಂಡೆಯಾ ಕೋಗಿಲೆ
ಕಂಡಿಯೊಳಗಿಂದಲೆ
ಈ ಕೂಗು ಅಸರಂತ
ಆಗ ಕೇಳಿದವರಿಗೆಲ್ಲೆ
ಈಗ ಕೇಳುವ ನನಗೆ ಮುಂದೆಲ್ಲೆ
ಜಗುಲಿಗೆ ಸುಸ್ತು ಕೈಕಾಲು
.....
ಕೋಗಿಲೆ, ಕೋಗಿಲೆ
ತುಂಡಾದ ಎಳೆ,
ನಾನು
ಬರಲೆ"29 (ಕೊನೆ ಕೋಗಿಲೆ)

ಕೋಗಿಲೆಯ ಜಾಡು ಮತ್ತು ಹಾಡನ್ನು ಹುಡುಕ ಹೊರಟ ನಿರೂಪಕನಿಗೆ ಎಲ್ಲಿಯೂ ಗೋಚರಿಸದಿದ್ದಾಗ, ಇನ್ನು ಮುಂದಿನ ಪೀಳಿಗೆಗೆಲ್ಲಿ ಈ ಕೋಗಿಲೆ ಎಂದು ಚಕಿತರಾಗಿ ಹಂಬಲ ದಿಂದ ಹೊರಟು "ಜಗಲಿಗೆ ಸುಸ್ತು ಕೈ ಕಾಲು'ಎಂಬ ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಆದರೂ ಅವರು ಕೋಗಿಲೆ ಮುಂದಿನ ಮಕ್ಕಳಿಗೆ ಕೇವಲ ಹಾಡುಗಳಲ್ಲಿ ಮತ್ತು ಚಿತ್ರ ಪಟಗಳಲ್ಲಿ ಮಾತ್ರ ಉಳಿಯುವ ಮುನ್ಸೂಚನೆಯನ್ನರಿತು, ಅದರ ಸಂಬಂಧದ ಬಂಧದ ಬೆಸುಗೆಗಾಗಿ ಹಂಬಲಿಸಿ 'ಕೋಗಿಲೆ ಕೋಗಿಲೆ ತುಂಡಾದ ಎಳೆ ನಾನು ಬರಲೆ' ಎಂದು ಚಡಪಡಿಸುತ್ತಿರುವುದು ಮಾರ್ಮಿಕವಾಗಿದೆ.

ಹಕ್ಕಿಗಳಲ್ಲಿ ತುಂಬ ವಿಶಿಷ್ಟವಾದವು ಅಂಬರದ ಹಕ್ಕಿಗಳು. ಇವುಗಳಲ್ಲೇ ನಾಲ್ಕೈದು ಬಗೆಗಳಿದ್ದು ಬಯಲುಸೀಮೆ ಮತ್ತು ಮಲೆನಾಡುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಈ ಹಕ್ಕಿಗಳು ಮನುಷ್ಯನ ಕೈಗೆ ಸುಲಭವಾಗಿ ಸಿಗದಂತೆ ದೊಡ್ಡ ದೊಡ್ಡ ಮೋರಿ ತೂಬುಗಳಲ್ಲಿ, ದೊಡ್ಡ ದೊಡ್ಡ ಸೇತುವೆಗಳಡಿಯಲ್ಲಿ ಮತ್ತು ಎತ್ತರವಾದ ಚರ್ಚು, ದೇವಸ್ಥಾನಗಳ ಛಾವಣಿಗಳಲ್ಲಿ ಸಾಮೂಹಿಕವಾಗಿ ಗೂಡು ಕಟ್ಟಿ ವಾಸಿಸುತ್ತವೆ. ಇವುಗಳಲ್ಲೇ ಇನ್ನೊಂದು ಉಪಜಾತಿ 'ಮರದ ಅಂಬರದ ಹಕ್ಕಿ'. ಇದು ಮರದ ಕೊಂಬೆಗಳಲ್ಲಿ ಗೂಡುಮಾಡಿ ವಾಸಿಸುವುದರಿಂದ ಈ ಹೆಸರು ರೂಢಿಗೆ ಬಂದಿರಬೇಕು. ಗೂಡು ಮಾಡಲು ಪಾಚಿ, ಗಾಳಿಯಲ್ಲಿ ತೇಲಾಡುವ ಕಸಕಡ್ಡಿ ಮುಂತಾದವನ್ನು ತಂದು ಅವುಗಳಿಗೆ ತನ್ನ ಗೋಂದಿನಂತ ಎಂಜಲನ್ನು ಬೆರೆಸಿ ಕೊಂಬೆಗೆ ಅಂಟಿಸುತ್ತದೆ.

ಮೊಟ್ಟೆಗಳನ್ನು ಆ ಕೊಂಬೆಯ ಗೂಡಿಗೆ ಅದೇ ರೀತಿ ಅಂಟಿಸಿ, ತುಂಬ ರಕ್ಷಣೆಯೊದಗಿಸಿ ಮರಿ ಮಾಡುತ್ತದೆ. ಭಾರತದಿಂದ ಸಾಲೋಮನ್ ದ್ವೀಪಗಳವರೆಗೂ ಕಂಡು ಬರುವ ಈ ಎಲ್ಲ ಅಂಬರದ ಹಕ್ಕಿಗಳು ತಿನ್ನುವ ಆಹಾರ, ಹಾರಾಡುವ ಕ್ರಿಮಿ ಕೀಟಗಳು. ಇವು ತಮ್ಮ ಮರಿಗಳಿಗೆ ಗುಟುಕು ಕೊಡುವಾಗ ತಾವು ಹಿಡಿದ ಕೀಟಗಳನ್ನು ತಮ್ಮ ಜೊಲ್ಲಿನೊಡನೆ ಬೆರೆಸಿ ತಿನ್ನಿಸುತ್ತವೆ. ಈ ಹಕ್ಕಿಗಳ ಜೀವನವೇ ವಿಶೇಷ. ಇವು ಹೆಚ್ಚು ಕಾಲ ಆಕಾಶದಲ್ಲಿ ಕ್ಷಿಪಣಿಗಳಷ್ಟು ವೇಗದಲ್ಲಿ ಹಾರಾಡುತ್ತವೆ. ಜೊತೆಗೆ ಯೋಗ್ಯವಾದ ರೆಕ್ಕೆ ಮತ್ತು ಶಕ್ತಿ, ದೇಹರಚನೆಯನ್ನು ಈ ಹಕ್ಕಿಗಳು ಹೊಂದಿವೆ. ಇವುಗಳನ್ನು ಕಂಡ ಕವಿ ಕುವೆಂಪು:

"ಜ್ಯೋತ್ಸ್ನೆ ತುಂಬಿ ತುಳುಕಿ ಹರಿಯೆ
ಸ್ನಿಗ್ಧ ಶರತ್ಕಾಲದಿ
ಮುಗಿಲು ರಂಗವಲ್ಲಿ ಬರೆಯೆ
ವ್ಯೋಮ ಪಟದ ನೀಲದಿ
ವಿಯತ್ತಳದಿ ಮೌನ ಮುದ್ರೆ
ಜಗನ್ಮುಕದಿ ಶಾಂತ ನಿದ್ರೆ
ಮೆರೆಯೆ ಕೂಗಿ ಕರೆವೆ ನೀನು,
ಮುದ್ದು ಜೊನ್ನವಕ್ಕಿಯೆ
ಮೇಲೆ ನೋಡೆ ಬರಿಯ ಬಾನು,
ಕಾಣೆ ನೀನು ಹಕ್ಕಿಯೆ"30 (ತೇನೆ ಹಕ್ಕಿ)

ಎಂದು ಈ ಕಾವ್ಯದಲ್ಲಿ ಶರತ್ಕಾಲದ ಬೆಳದಿಂಗಳ ಹಕ್ಕಿ, ತೇನ ಹಕ್ಕಿ ಎಂದೆಲ್ಲ ಕರೆಯುತ್ತಾರೆ. ಬಾನೆತ್ತರದಲ್ಲಿ ಕಣ್ಣಿಗೆ ಕಾಣದಂತೆ ಹಾರುವ ಈ ಪುಟ್ಟ ಹಕ್ಕಿ ಗುಂಪು ಗುಂಪಾಗಿ ಹಾರುತ್ತಲೇ ಒಂದು ದಿನಕ್ಕೆ ನಲ್ವತ್ತು ಸಾವಿರ ಕೀಟಗಳನ್ನು ಹಿಡಿದು ತಿನ್ನುತ್ತವೆಂದು ವಿಜ್ಞಾನಿಗಳು ಶೋಧಿಸಿ ಲೆಕ್ಕ ಮಾಡಿದ್ದಾರೆ. ಈ ಹಕ್ಕಿಗಳು ಬೇಸಿಗೆ ಬಂದಾಗ ಯುರೋಪಿನಲ್ಲಿ ಮೊಟ್ಟೆಯಿಟ್ಟು ಮರಿಮಾಡಲೆಂದು ವಲಸೆ ಹೋದರೆ, ಚಳಿಗಾಲಕ್ಕೆ ಆಫ್ರಿಕ ಖಂಡಕ್ಕೆ ಸಾವಿರಾರು ಮೈಲಿದೂರ ನಿರಂತರ ಪ್ರಯಾಣ ಮಾಡುತ್ತವೆ. ಇಂತಹ ವಿಶಿಷ್ಟ ಹಕ್ಕಿಗಳ ಜೀವನ ಕ್ರಮವನ್ನು ಕಂಡು ಕೊಂಡ ಗ್ರಾಮೀಣ ಜನರ ನಂಬಿಕೆ, ಕಥೆಗಳನ್ನು ಕುರಿತು ತೇಜಸ್ವಿ ಹೀಗೆ ಹೇಳುತ್ತಾರೆ.

"ಈ ಹಕ್ಕಿಗಳ ಊಟ, ತಿಂಡಿ, ನೀರು ಕುಡಿಯುವುದು, ವಿಶ್ರಾಂತಿ, ಕೊನೆಗೆ ನಿದ್ರೆ ಸಹ ಆಕಾಶದಲ್ಲೇ ಮಾಡುತ್ತವೆ ಎಂದು ಜನ ನಂಬಿದ್ದಾರೆ. ಹಾಗಿದ್ದರೆ ಗಂಡು ಹೆಣ್ಣು ಕೂಡುವುದು ಮೊಟ್ಟೆ ಮರಿ ಇತ್ಯಾದಿಗಳು? ಇದೂ ಸಹಾ ಆಕಾಶದಲ್ಲೇ ನಡೆಯುತ್ತದೆನ್ನುತ್ತಾರೆ. ಈ ಹಕ್ಕಿಗಳು ಆಕಾಶದಲ್ಲಿ ಅತ್ಯಂತ ಎತ್ತರಕ್ಕೆ ಹಾರಿ ಅಲ್ಲಿ ಆಕಾಶದಲ್ಲೇ ಮೊಟ್ಟೆ ಇಡುತ್ತವೆಂದೂ, ಅವು ಎಷ್ಟೆತ್ತರ ದಲ್ಲಿ ಮೊಟ್ಟೆ ಇಡುತ್ತವೆಂದರೆ; ಮೊಟ್ಟೆ ಅಲ್ಲಿಂದ ಬೀಳುತ್ತಾ, ನೆಲ ತಲುಪುವುದರೊಳಗೆ ಅದು ಮರಿಯಾಗಿ, ಮರಿ ಇನ್ನೇನು ನೆಲಕ್ಕೆ ಅಪ್ಪಳಿಸಬೇಕೆನ್ನುವಷ್ಟರಲ್ಲಿ, ರೆಕ್ಕೆ ಬಿಚ್ಚಿ ಹಾರಿ ಆಗಸದ ತಂದೆ ತಾಯಿಗಳನ್ನು ಸೇರಿಕೊಳ್ಳುತ್ತವೆಂದೂ ಹೇಳುತ್ತಾರೆ. ಆದರೆ ಈ ದಂತ ಕಥೆಗಳ ಅಚ್ಚರಿಯ ಅಂಶವೆಂದರೆ; ಈಚೆಗೆ ಪಕ್ಷಿಶಾಸ್ತ್ರಜ್ಞರು ಇವು ಆಕಾಶದಲ್ಲೇ ಮೊಟ್ಟೆ ಇಟ್ಟು ಮರಿ ಮಾಡುತ್ತವೆಂಬುದೊಂದನ್ನು ಬಿಟ್ಟು ಮಿಕ್ಕಿದ್ದೆಲ್ಲಾ ನಿಜ ಎಂದು ಪತ್ತೆ ಮಾಡಿದ್ದಾರೆ. ರಾತ್ರಿಯೆಲ್ಲಾ ಆಕಾಶದಲ್ಲಿ ತೇಲಿಕೊಂಡೇ ನಿದ್ದೆ ಮಾಡುವ ಈ ಅಂಬರದ ಹಕ್ಕಿಗಳು ಆಕಾಶದಲ್ಲೇ ಹೆಣ್ಣು ಗಂಡು ಕೂಡುವುದೂ ನಿಜ ಎಂದು ಪತ್ತೆ ಮಾಡಿದ್ದಾರೆ. ಆದ್ದರಿಂದ ಈ ಹಕ್ಕಿಗಳಿಗೆ ಅಂಬರದ ಹಕ್ಕಿಗಳೆಂದು ಕರೆಯುವುದು ಅನ್ವರ್ಥ ನಾಮವೇ ಸರಿ".31

ಈ ಹಕ್ಕಿಗಳು ಭೂಮಿಯಿಂದ ಆಕಾಶಕ್ಕೂ, ಆಕಾಶದಿಂದ ಭೂಮಿಗೂ ಹಾರುತ್ತಾ ಮತ್ತು ಇವೆರಡರ ನಡುವೆ ಇದ್ದು ಬಾಳುವ ಅವುಗಳ ಜೀವನ ಪದ್ಧತಿಯನ್ನು ಕವಿ ಕಂಡದ್ದು ಹೀಗೆ:

"ತ್ಯಾಗಿಯಂತೆ ನೆಲವನುಳಿಯೆ
ಮಮತೆ ಮರಿಯ ಗೂಡಿದು,
ಭೋಗಿಯಂತೆ ನಭವ ಹಳಿಯೆ
ಸಿರಿಯ ತವರು ಬೀಡಿದು!
ಹಗಲಿನಲ್ಲಿ ನೆಲಕ್ಕೆ ಸೇರಿ

ಇರುಳಿನಲ್ಲಿ ಬಾನ್ಗೆ ಹಾರಿ
ಬಿಸಿಲು ತಂಪುಗಳನು ಮೀರಿ
ಸಮತೆಯಿಂದ ನಡೆವುದಂ
ಕಲಿಸು ನನಗೆ ಮೊದಲು ಕೊನೆಗೆ
ನೆಲ ಬಾನ್ಗಳ ಪಡೆವುದಂ!"32 (ತೇನ ಹಕ್ಕಿ)

ಈ ಪುಟ್ಟ ಹಕ್ಕಿಯ ಜೀವನವೇ ಮನುಷ್ಯನ ಬದುಕಿಗೆ ಒಂದು ಆದರ್ಶ, ಮಾದರಿ ಎಂಬುದು ನಿರ್ವಿವಾದ. ಆದ್ದರಿಂದಲೇ ಕವಿ ಇದರ ವಿಶಿಷ್ಟ ಜೀವನ ಕ್ರಮಕ್ಕೆ ಆಕರ್ಷಿತರಾಗಿ ಆ ಜೀವನವನ್ನು ಬಯಸಿ 'ಸಮತೆಯಿಂದ ನಡೆವುದಂ ಕಲಿಸು ನನಗೆ ಮೊದಲು ಕೊನೆಗೆ ನೆಲಬಾನ್ಗಳ ಪಡೆವುದಂ' ಎನ್ನುತ್ತಾರೆ. ಈ ಅಪರೂಪದ ಹಕ್ಕಿಯ ದುರಂತಕ್ಕೆ ಚೀನಾ ಮತ್ತು ಆಗ್ನೇಯ ಏಷ್ಯಾದ ಎಲ್ಲ ದೇಶಗಳ ಜನರು ಇದು ವಾಸಿಸಲೆಂದು ತನ್ನ ಜೊಲ್ಲಿನಿಂದ ಕಟ್ಟಿರುವ ಗೂಡನ್ನು 'ಹಕ್ಕಿಗೂಡಿನ ಸೂಪ್' ಎಂಬ ವಿಶೇಷ ಆಹಾರಕ್ಕಾಗಿ ಕಿತ್ತು ದೊಡ್ಡ ದೊಡ್ಡ ಹೋಟೆಲ್‌ಗಳಿಗೆ ಮಾರಾಟ ಮಾಡುತ್ತಾರೆ. ಇದರ ವಿವರಣಾತ್ಮಕ ಮಾಹಿತಿಯುಳ್ಳ ತುಣುಕು:

"ಆಗ್ನೇಯ ಏಷ್ಯಾ ದೇಶಗಳಲ್ಲಿ ಈ ಹಕ್ಕಿಗಳು ಪರ್ವತದ ದೊಡ್ಡ ದೊಡ್ಡ ಗುಹೆಗಳ ಛಾವಣಿಯಲ್ಲಿ ಗೂಡು ಮಾಡುತ್ತವೆ. ಇವು ಲಕ್ಷಾಂತರ ಅಂಬರದ ಹಕ್ಕಿಗಳು ಅನೇಕ ಶತಮಾನಗಳಿಂದ ಗೂಡು ಕಟ್ಟುತ್ತಿರುವುದು ಗುಹೆಗಳಲ್ಲಿ. ಇಲ್ಲಿ ಗೂಡನ್ನು ಸಂಗ್ರಹಿಸಿ ಮಾರಾಟ ಮಾಡುವವರಿಗೆ ಒಂದೊಂದು ಗುಹೆಯನ್ನೂ ಹರಾಜು ಹಾಕಲಾಗುತ್ತದೆ. ಐನೂರು ಕೆ. ಜಿ. ತೂಗಲು ನಲ್ವತ್ತು ಸಾವಿರ ಗೂಡುಗಳು ಬೇಕಾಗುತ್ತವೆ. ಐನೂರು ಕೆ. ಜಿ. ಗೂಡುಗಳಿಗೆ ಮಾರುಕಟ್ಟೆಯಲ್ಲಿ ನಲ್ವತ್ತು ಸಾವಿರ ಡಾಲರು ಬೆಲೆಯಾಗುತ್ತದೆ. ಎಂದರೆ ಒಂದು ಗೂಡು ಒಂದು ಡಾಲರ್ ಬೆಲೆ ಬಾಳುತ್ತದೆನ್ನಬಹುದು. ಒಬ್ಬರಿಗೆ ಒಂದು ಊಟಕ್ಕೆ ಒಂದು ಗೂಡು ಸಾಕಾಗುತ್ತದೆ. ಚೈನೀ ಮಾದರಿಯ ಊಟ ಈಗ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಜನಪ್ರಿಯವಾಗುತ್ತಿರುವುದರಿಂದ ಅಂಬರದ ಹಕ್ಕಿಗಳ ಗೂಡುಗಳಿಗೂ ಬೆಲೆ ಏರುತ್ತಿದೆ. ಗೂಡುಗಳನ್ನು ಸಂಗ್ರಹಿಸುವ ಭರದಲ್ಲಿ ಲಕ್ಷಾಂತರ ಮರಿಗಳನ್ನು, ಮೊಟ್ಟೆಗಳನ್ನೂ, ನಾಶ ಮಾಡುವುದರಿಂದ ಹಕ್ಕಿ ಗೂಡಿನ ಸಾರನ್ನೇ ಹೋಟೆಲುಗಳಿಂದ ನಿಷೇಧಿಸಬೇಕೆಂದು ಯೂರೋಪಿನಲ್ಲಿ ಆಂದೋಲನಗಳು ನಡೆಯುತ್ತಿವೆ. ತಮ್ಮ ಚಿತ್ರ ವಿಚಿತ್ರ ನಾಲಿಗೆಯ ತೆವಲುಗಳಿಗೆ ಪ್ರಖ್ಯಾತರಾಗಿರುವ ಚೀನೀಯರ ಶತ ಶತಮಾನಗಳ ಅಭ್ಯಾಸವನ್ನು ಬಿಡಿಸುವುದು ಅಷ್ಟು ಸುಲಭವಲ್ಲ"33.

ಹಕ್ಕಿ ಪಕ್ಷಿಗಳಲ್ಲಿ ಮಾನವನಿಗೆ ತುಂಬ ಪ್ರಿಯವಾದ ಹಕ್ಕಿಗಳಲ್ಲಿ ಗಿಳಿಯೂ ಒಂದು. ಇದರಲ್ಲೂ ಹಲವಾರು ಜಾತಿಗಳಿವೆ. ಇವೆಲ್ಲ ಮಲೆನಾಡು ಬಯಲು ಸೀಮೆಗಳಲ್ಲಿ ಹೆಚ್ಚಾಗಿ ವಾಸ ಮಾಡುತ್ತವೆ. ಹಣ್ಣು, ಹಂಪಲು, ಕಾಳು ಕಡ್ಡಿಗಳನ್ನು ತಿಂದು ಒಂಟಿಯಾಗಿಯೂ, ಹೆಣ್ಣು ಗಂಡುಗಳು ಜೊತೆಯಾಗಿಯೂ, ಕೆಲವೊಮ್ಮೆ ಇವು ಗುಂಪಾಗಿಯೂ ಇರುವುದನ್ನು ಕಾಣುತ್ತೇವೆ. ಹೆಣ್ಣು ಗಿಳಿ ಮಾತ್ರ ಮೊಟ್ಟೆಯಿಟ್ಟು, ಮರಿ ಮಾಡಿ, ಅವು ಬಲಿಯುವವರೆಗೂ ರಕ್ಷಿಸಿ ಪೋಷಿಸುತ್ತದೆ. ಇವೆಲ್ಲ ಗಿಡ ಮರಗಳಲ್ಲೇ ಗೂಡು ಕಟ್ಟಿ ವಾಸಿಸುವುದು ಸಾಮಾನ್ಯವಾಗಿದೆ. ಹಲವಾರು ಹಕ್ಕಿ ಪಕ್ಷಿಗಳ ವಿಶೇಷ ಬಣ್ಣಗಳಲ್ಲಿ ಗಿಳಿಯದು ಒಂದು. ಇದನ್ನು ಕಂಡು ಹಾಡಿ ಹೊಗಳದ ಕವಿಗಳು ವಿರಳ. ಬೇಂದ್ರೆ ಹಿಂಡನಗಲಿ ಒಂಟಿಯಾಗಿ ಕುಳಿತ ಗಿಣಿಯನ್ನು ಕಂಡು:

"ಪಚ್ಚ ಪಯರಿನ ನಾಡ! ಅಚ್ಚು
ಅಚ್ಚ ಒತ್ತಿದ ಮೈಯ ಸಿರಿಯೇ
ಹಣ್ಣ ಮಲಿತು ಬಲಿತ! ನಿನ್ನ
ಸಣ್ಣ ಚುಂಚಿನ ಕೆಂಚ ಸೊಬಗ
ಮರ ಮರಕೊಂದು ಮಾತ! ಕಲಿಸಿ
ಮರವಟ್ಟೀನ ಮಾತಿನ ಜಾಣೆ
ಹಿಂಡನಗಲಿ ಬಂದೆ! ಇಲ್ಲಿ
ಕಂಡ ಕಡಿಗೆ ಬಾಯಿ ಬಿಡುವೆ!"34 (ಮಲ್ಲಾಡದ ಗಿಣಿಯೆ)

ಎಂದು ಗಿಣಿಯ ಆಹಾರ ಮತ್ತು ಜೀವನ ಸ್ವಭಾವವನ್ನು ಸ್ಥೂಲವಾಗಿ ಈ ಸಾಲುಗಳಲ್ಲಿ ಹಿಡಿದಿಟ್ಟಿದ್ದಾರೆ. ಇದರ ಬಣ್ಣದ ರೂಪವನ್ನು ಕಂಡ ಕವಿ.

"ಕೆಂಪು ಕೊಕ್ಕಿನ ಗಿಣಿಯೆ
ಹಸಿರು ಮೈಯಿನ ಗಿಣಿಯೆ
ಗಿಣಿಯೆ, ಖಣಿಯೆ ನೆಲದ ಒಡವೆ
ಎಲ್ಲಿದ್ದೇ ಎಲ್ಲಿಂದ ಎಲ್ಲಿಗೇ ಬಂದೆ"35 (ಗಿಣಿಗೆ)

ಎಂದು ಆಶ್ಚರ್ಯದಿಂದ ಕೇಳುತ್ತಾರೆ. ಸಾಮಾನ್ಯವಾಗಿ ಮನುಷ್ಯ ಸಾಕುವ ಪ್ರಾಣಿ ಮತ್ತು ಹಕ್ಕಿ–ಪಕ್ಷಿಗಳಲ್ಲಿ ಗಿಣಿಯೂ ಒಂದು. ಇದರ ವಿಶೇಷವೇನೆಂದರೆ; ಸಾಕುವಾಗ ಇವನ ಮಾತು, ವ್ಯವಹಾರಗಳೊಡನೆ ಬೆರೆತು, ತನ್ನ ಸೂಕ್ಷ್ಮತೆ ಚುರುಕುತನದ ಗುಣಗಳಿಂದ ಅವನ ಮಾತುಗಳನ್ನು ಅರ್ಥಮಾಡಿಕೊಂಡು ಅನುಕರಿಸಿ ಮಾತನಾಡಬಲ್ಲದು. ಆದ್ದರಿಂದಲೇ, ಈ ಗಿಣಿಯನ್ನು ಹಿಡಿದು ಬಂಧಿಸಿ ಪಂಜರದಲ್ಲಿಟ್ಟು ಸಾಕಿ ಇದನ್ನು ತನ್ನ ಸ್ವಾರ್ಥ ವ್ಯವಹಾರಗಳಿಗೆ ಬಳಸಿಕೊಂಡಿದ್ದಾನೆ. ಇದಕ್ಕೆಲ್ಲ ಸಾಹಿತ್ಯಿಕ ಮತ್ತು ಚಾರಿತ್ರಿಕ ಆಧಾರಗಳಲ್ಲಿ ಗಿಣಿಶಾಸ್ತ್ರ ಮತ್ತು ಪ್ರೇಮಪತ್ರ, ರಾಜಪತ್ರಗಳನ್ನು ರವಾನಿಸಿ ಸಂಬಂಧ ಬೆಳೆಸಿದ್ದು, ಮಹಾರಾಣಿಯರ ಸಂಗಾತಿಗಳಾಗಿದ್ದು, ಮುಂತಾದ ಗಿಣಿಯ ಪಾತ್ರಗಳನ್ನು ನೆನೆಯಬಹುದು. ಗಿಣಿ ಜನರೊಡನೆ ಹಡಗಿನ ಆಳುಗಳ ನಡುವೆ ಸಂವಾದದಿಂದ ವ್ಯವಹರಿಸುತ್ತಿದ್ದ ಒಂದು ದೃಶ್ಯ:

"ಹಡಗಿನ ಆಳುಗಳು ಉಗ್ರಾಣಕ್ಕೆ ಬಂದರೆ ಅದು ಪೀಟ್ ಮಾವನ ಧ್ವನಿಯನ್ನು ಅನುಕರಿಸಿ,
"ಬನ್ನಿ ಮಕ್ಕಳೇ, ಅದನ್ನು ತುಳಿಯಿರಿ ಹುಡುಗರೇ, ಹೂಂ ಕೆಲಸಕ್ಕೆ ತೊಡಗಿ" ಎಂದೆಲ್ಲ ನುಡಿಯುತ್ತಿತ್ತು.
ಆ ಮಾತನ್ನು ಕೇಳಿದ ಒಬ್ಬ ಆಳು "ನೋಡು ಇದೆಲ್ಲ ನಿನ್ನ ಯೋಗ್ಯತೆಗೆ ಮೀರಿದ ಮಾತು" ಎಂದ.
ಅದಕ್ಕೆ ಗಿಳಿ ಬೇಸರಗೊಂಡಂತೆ" ನಿನ್ನ ಅಜ್ಜಿಯ ಸಾವು" ಎಂದಿತು.
ಅಲ್ಲಿ ನಿಂತಿದ್ದ ಒಬ್ಬ ಆಳು ಡಬ್ಬಿಗಳನ್ನು ತುಂಬಿಸಿದ ಒಂದು ತೊಟ್ಟಿಯನ್ನು ಎತ್ತಿ ಇದರಲ್ಲೇನಿದೆ?" ಎಂದು ಹತ್ತಿರದವನೊಡನೆ ಕೇಳಿದ.
"ಬಾಳೆ ಹಣ್ಣಿನ ಎಣ್ಣೆ" ಎಂದಿತು ಗಿಳಿ
ಅವರಿಬ್ಬರೂ ನಕ್ಕರು. ಅವರಲ್ಲಿ ಒಬ್ಬ ಮುಷ್ಟಿ ಬಿಗಿದು. ಗಿಳಿಯ ಹತ್ತಿರ ಕೊಂಡೊಯ್ದು ಅದನ್ನು ಹೊಡೆಯುವವನಂತೆ
ಇದರಲ್ಲೇನಿದೆ ಹೇಳು" ಎಂದ.
"ಬೇಯಿಸಿದ ಬಟಾಣಿ" ಎಂದು ಚೀರಿತು ಗಿಳಿ
"ಈ ಉತ್ತರ ಚಿಂತೆಯಿಲ್ಲ ನೋಡು ನಿನ್ನ ಹತ್ತಿರ ಮರ್ಯಾದೆಯಿಂದ ಪ್ರಶ್ನೆ ಕೇಳಿದರೆ ಮರ್ಯಾದೆಯಿಂದಲೇ ಉತ್ತರಕೊಡಬೇಕು,
ತಿಳಿಯಿತೇ ಎಂದು ನಗುತ್ತ ತಿಳಿಸಿದ"36.

ಗಿಳಿಯ ಈ ಮಾತು ಮತ್ತು ನಡವಳಿಕೆಗಳು ಪೀಟ್ ಮಾವನಿಂದ ಕರೆಯಲ್ಪಟ್ಟಿವೆಯೇ ಹೊರತು ಸ್ವಾಭಾವಿಕವಾಗಿ ಬಂದವಲ್ಲ. ಇಂತಹ ಹಕ್ಕಿ, ಪಕ್ಷಿ, ಗಿಡ, ಮರಗಳ ಭಾಷೆಯಿಂದ ಸ್ವಾಭಾವಿಕವಾಗಿ ಅವುಗಳೊಡನೆ ಮಾತನಾಡಿ ವ್ಯವಹರಿಸುವ ಜನ ತುಂಬ ವಿರಳ. ಇದ್ದರೆ ಅವರು ಮೂಲನಿವಾಸಿ, ಬುಡಕಟ್ಟು, ಕಾಡುಜನರು. ಇವರ ಒಂದು ಪ್ರಾತಿನಿಧಿಕ ಪಾತ್ರವಿರುವುದು ಚಂದ್ರಶೇಖರ ಕಂಬಾರರ ಪುಷ್ಪರಾಣಿ ನಾಟಕದಲ್ಲಿ. ಇದರ ನಾಯಕಿ ಪಾತ್ರ 'ಪುಷ್ಪರಾಣಿ'. ಇವಳು ಮಹಾರಾಜನ ಜೊತೆಗೂಡಿ ಉದ್ಯಾನವನದಲ್ಲಿ ಹಕ್ಕಿ ಪಕ್ಷಿಗಳೊಡನೆ ಸಹಜವಾಗಿ ಸಂವಾದ ಮಾಡುವ ಒಂದು ತುಣುಕು.

"ಪುಷ್ಪರಾಣಿ: ಯಾಕೆ ಹಾಗೆ ಹೇಳುತ್ತಿರುವೆ?
ಪಂಚರಂಗಿ: (ಕೂಗುತ್ತದೆ)
ಪುಷ್ಪರಾಣಿ: ಅರಮನೆಯ ಸೆರೆಮನೆಯಲ್ಲಿದ್ದಳಂತೆ. ಅಕ್ಕನ ಬಗ್ಗೆ ನನ್ನಲ್ಲಿ ತಕರಾರು ಹೇಳುತ್ತಿದ್ದಾಳೆ.
ಪಂಚರಂಗಿ: (ಕೂಗುತ್ತದೆ)
ಪುಷ್ಪರಾಣಿ: ಇನ್ನು ಮೇಲೆ ಯಾರನ್ನೂ ಸೆರೆಯಲ್ಲಿಡಬಾರದಂತೆ. ಹಾಗಂತ ನಿಮ್ಮಲ್ಲಿ ವಿನಂತಿಯಂತೆ.
ಮಹಾರಾಜ: ವಿನಂತಿಯಲ್ಲ, ಆಜ್ಞೆಯಾಗಿ ಸ್ವೀಕರಿಸಿದ್ದೇನೆಂದು ಹೇಳು ದೇವಿ.

ಪುಷ್ಪರಾಣಿ: ಪ್ರಭು ಅಲ್ಲಿ ನೋಡಿ ಹುಣಸೇ ಮರ ಅಷ್ಟು ದೂರ ಇದ್ದರೂ ಇಲ್ಲಿ ನನ್ನ ಬಾಯಲ್ಲಿ ನೀರೂರುತ್ತಿದೆ ಬನ್ನಿ. ಅಲ್ಲಿರೋ ತಿಳಿ ಹಸಿರೇ ಕರೆಯುತ್ತಿದೆ. (ಹೋಗುವರು)

ಪುಷ್ಪರಾಣಿ: ಲೇ ತಿಳಿ ಹಸಿರೇ ಒಬ್ಬಳೇ ಕೂತ್ಕೊಂಡು ಏನು ಮಾಡ್ತಾ ಇದ್ದೀಯಾ

ಗಿಳಿ: (ಕೂಗುತ್ತದೆ).

ಪುಷ್ಪರಾಣಿ: ನನಗೊಂದು ಹಣ್ಣು ಎಸೀತಿಯಾ?

ಕೋಗಿಲೆ: (ಕೂಗುತ್ತದೆ).

ಪುಷ್ಪರಾಣಿ: ಪ್ರಭು ಇದು ನನ್ನ ಗೆಳತಿ ತಿಳಿಹಸಿರೆ ಹುಣಸೇ ಹಣ್ಣು ತಿನ್ನೋದಕ್ಕೆ ಇಲ್ಲಿ ತನಕ ಬಂದಿದೆ. ನಿಮಗೆ ಅಭಿನಂದನೆ ಹೇಳುತ್ತಿದ್ದಾಳೆ.

ಮಹಾರಾಜ: ಅಭಿನಂದನೆ ಯಾಕಾಗಿ? ಹೇಳ್ತಾ ಇದ್ದಾಳೆ ಗಿಳಿ: (ಕೂಗುತ್ತದೆ ಪುಷ್ಪರಾಣಿ ನಾಚಿ ಮುಖ ಮುಚ್ಚಿಕೊಳ್ಳುತ್ತಾಳೆ)

ಮಹಾರಾಜ: ದೇವಿ ಗಿಳಿ ಏನು ಹೇಳಿತು?

ಪುಷ್ಪರಾಣಿ: ಹೋಗಿ ಪ್ರಭು ನನಗೆ ನಾಚಿಕೆ.

ಮಹಾರಾಜ: ವಿಷಯವೇನೆಂಬುದೇ ತಿಳಿಯಲಿಲ್ಲವಲ್ಲ.

ಪುಷ್ಪರಾಣಿ: (ನಾಚಿಕೆಯಿಂದ) ಪ್ರಭು ನೀವು ಕೆಲವೆ ತಿಂಗಳಲ್ಲಿ ಯುವ ರಾಜನ ತಂದೆಯಾಗುತ್ತೀರಂತೆ.

ಮಹಾರಾಜ: ಹೌದೆ? ನನಗೆ ಯಾಕೆ ಹೇಳಲಿಲ್ಲ ನೀನು?

ಪುಷ್ಪರಾಣಿ: ನನಗೂ ಗೊತ್ತಿರಲಿಲ್ಲ. ಗಿಳಿ ಹೇಳಿದ್ದರಿಂದಲೇ ಗೊತ್ತಾಯಿತು"37.

ಈ ಸಂವಾದದಲ್ಲಿ ಮುಖ್ಯವಾಗಿ ಪ್ರಕೃತಿಯ ರಹಸ್ಯಗಳಲ್ಲಿ ಒಂದಾದ ಸೃಷ್ಟಿಯ ಗುಟ್ಟು ಮೊದಲು ಈ ಪ್ರಾಣಿ ಪಕ್ಷಿಗಳಿಗೆ ತಿಳಿದಿರುತ್ತದೆ ಎಂಬ ಸತ್ಯವನ್ನು ಗಿಳಿ ಪ್ರಕೃತಿಯ ಸಂಕೇತವಾದ ಪುಷ್ಪರಾಣಿಗೆ ಮಹಾರಾಜರು ಯುವರಾಜನ ತಂದೆಯಾಗುತ್ತಾರೆಂದು ಹೇಳಿದ ಮಾತಿನಿಂದ ಸ್ಪಷ್ಟವಾಗುತ್ತದೆ. ಸೃಷ್ಟಿಯ ಗುಟ್ಟುಗಳಂತೆ ವಿನಾಶದ ಗುಟ್ಟು ಸಹ ಪ್ರಾಣಿ ಪಕ್ಷಿಗಳಿಗೆ ಮೊದಲೇ ತಿಳಿಯುತ್ತದೆ. ಭೂಕಂಪವಾಗುವ, ಪ್ರವಾಹ ಬರುವ ಸಂದರ್ಭಗಳಿಗೆ ಮುನ್ನ ಅಲ್ಲಿ ವಾಸಿಸುವ ಆಮೆ, ಕಪ್ಪೆ, ಮುಂತಾದ ಜೀವಿಗಳಿಗೆ ಪ್ರಕೃತಿ, ಭೂಮಿಯ ಸೂಕ್ಷ್ಮ ಏರುಪೇರುಗಳಿಂದಲೇ ತಿಳಿಯುತ್ತದೆ ಎಂಬುದನ್ನು ವಿಜ್ಞಾನ ಸ್ಪಷ್ಟಪಡಿಸಿದೆ. ಇದು ಪ್ರಕೃತಿಯ ಅಂತರಂಗದಲ್ಲಿ ನೆಲಸಿರುವ ಅವಿನಾಭಾವ ಸಂಬಂಧವೇ ಈ ಜೀವಿಗಳಿಗಿರುವ ವಿಶೇಷ ಜ್ಞಾನ ಬಂಧವೂ ಆಗಿರುವುದನ್ನು ಗಮನಿಸಬೇಕು. ಈ ಭಾಗದಲ್ಲಿ ಪುಷ್ಪರಾಣಿ ಹುಣಸೆ ಮರದ ಮೇಲೆ ಕುಳಿತ 'ತಿಳಿಹಸಿರು' ಗಿಳಿಯನ್ನು ರಾಜನಿಗೆ ಪರಿಚಯಿಸಿ ಹುಣಸೆಹಣ್ಣು ತಿನ್ನೋದಕ್ಕೆ ಇಲ್ಲಿ ತನಕ ಬಂದಿದೆ. ಎನ್ನುವುದರಲ್ಲಿ ಗಿಣಿಯ ಆಹಾರವಾದ ಹಣ್ಣುಗಳು ಯಾವುದೆಂದು ತಿಳಿಯುತ್ತದೆ. ಇಂತಹ ಮುಗ್ಧ, ಸಾಧು, ಶುದ್ಧ, ತಿಳಿ ಮನಸ್ಸಿನ ಹಕ್ಕಿಗಳನ್ನು ಮಹಾರಾಣಿ ಸೆರೆಯಲ್ಲಿಟ್ಟಿದ್ದನ್ನು ಗಿಳಿ ಪುಷ್ಪರಾಣಿಗೆ ದೂರು ಹೇಳುವುದನ್ನು ಗಮನಿಸಿದರೆ, ಸ್ವತಂತ್ರ ಜೀವಿಗಳಾದ ಈ ಹಕ್ಕಿ ಪಕ್ಷಿಗಳಿಗೆ ಪಂಜರದ ಬಂಧನ ಮತ್ತು ಅವುಗಳ ಜೀವ ಹಿಂಸೆಯ ಬದುಕಿನಿಂದ ಪಾರಾಗುವ ಹಂಬಲದ ಅಭಿವ್ಯಕ್ತಿಯಿದೆ. ಇಂತಹ ಬಂಧನದ ಹಕ್ಕಿಗಳ ಜೀವನ ಹಿಂಸೆಯನ್ನು ಮನಗಂಡ ಕವಿ ಬಂಧನದ ಹಕ್ಕಿಯ ಆಸೆಯನ್ನು ಹೀಗೆ ಹಿಡಿದಿಡುತ್ತಾರೆ.

"ನನ್ನ ಹಾರಲು ಬಿಡಿ
ಅಳೆಯಲು ಮರುಭೂಮಿ
ಹರಿದ್ವರ್ಣ ಕಾಡು
ಜೀವಕ್ಕೆ ಒಂದು ತುತ್ತು ಪ್ರೀತಿ
ಒಂದು ಗುಟುಕು ನೀತಿ
ಗೂಡು ಕಟ್ಟಲೊಂದು ಮರ
ಜೊತೆ ಉಳಿಸಿಡಿ"38 (ಬಂದಿ ಹಕ್ಕಿಯ ಆಸೆ)

ಹಕ್ಕಿ, ಮರುಭೂಮಿ, ಕಾಡೆನ್ನದೆ ಎಲ್ಲೆಂದರಲ್ಲಿ ಹಾರುವ ಸ್ವಾತಂತ್ರ್ಯವನ್ನು ಅದರ ಜೀವಕ್ಕೆ ಪ್ರೀತಿ, ನೀತಿಯನ್ನು; ವಾಸಕ್ಕೊಂದು ಮರವನ್ನು ಉಳಿಸಲು ಮಾನವರನ್ನು ಕೋರುತ್ತಿರುವುದು ವಿಷಾದನೀಯ. ಹಕ್ಕಿ ತನ್ನದೂ ಆದ ಪ್ರಕೃತಿಯೊಳಗೆ ತನ್ನ ಇರುವಿಕೆಯ ಮೂಲಭೂತ ಅಗತ್ಯ ಸೌಲಭ್ಯವನ್ನು ಮತ್ತೊಂದು ಜೀವದಿಂದ ಕೇಳಿ ಪಡೆಯುವ ಸ್ಥಿತಿಗೆ ಬಂದಿರುವುದು ಅದರ ಜೀವನ ದುರಂತ. ಪ್ರಕೃತಿಯ ಸರ್ವಜೀವಿಗಳ

ಮೇಲೆ ಮಾನವನು ಪ್ರಬಲ ಹಿಡಿತ ಸಾಧಿಸಿರುವುದರಿಂದ ಹಕ್ಕಿಯ ಈ ಅಸಹಾಯಕ ಕೋರಿಕೆಯ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಮಾನವ ತನ್ನ ಸ್ವಹಿತಕ್ಕಾಗಿ ಪ್ರಾಣಿ ಪಕ್ಷಿ ಮತ್ತಿತ್ತರ ಜೀವಿಗಳು ವಾಸ ಮಾಡುವ ಕಾಡಿನ ಮರಗಳನ್ನು ಕಡಿದುರುಳಿಸುತ್ತಿರುವುದೇ ಕಾರಣ. ಈ ಕೆಲಸ ಮಾಡುತ್ತಿರುವವನು 'ಮಸಿಸಾಬು' ಎಂದು ತಿಳಿದ ತೇಜಸ್ವಿ ಅವನು ಕಡಿದ ಮರದ ಬಳಿಗೆ ಹೋಗಿ ಮಸಿಸಾಬುನನ್ನು ಆ ಡೊಗರು ಬಿದ್ದ ಮರಗಳೊಳಗೆ ಯಾವಾದರೂ ಕಾಡು ಪ್ರಾಣಿಯ ಮರಿಗಳು ಸಿಕ್ಕಿದುವೆ? ಎಂದು ಪ್ರಶ್ನಿಸಿದಾಗ

"ನೀವು ನನಗೆ ಮೊದಲೇ ಒಂದು ಮಾತು ಹೇಳಬಾರ್ದಿತ್ತಾ ಆ ಡೊಗರು ಬಿದ್ದ ಮರಗಳೊಳಗೆ ನಿಮಗೆ ಈ ಕಾಡಿನ ಯಾವ ಪ್ರಾಣಿ ಮರಿಗಳು ಬೇಕು? ಅವೆಲ್ಲಾ ಇದ್ದವು. ಕಬ್ಬೆಕ್ಕು, ಮುಂಗುಸಿ, ಹಾರುಬೆಕ್ಕು, ಗಿಳಿ ಇನ್ನು ಯಾವ್ಯಾವೋ ತರಂತರದ ಹಕ್ಕಿ–ಪ್ರಾಣಿ ಮರಿಗಳಿದ್ದವು".39

ಎಂದು ಹೇಳಿದ. ಇಂತಹ ಮಾನವರ ಕೆಲವು ವೃತ್ತಿಗಳಿಂದಲೇ; ಪ್ರಕೃತಿಯ ಜೀವ ಸಮೂಹದ ಜೀವನ ಅಸ್ತಿತ್ವಕ್ಕೆ ಧಕ್ಕೆಯುಂಟಾಗಿರುವುದು. ಆದ್ದರಿಂದಲೇ ಹಕ್ಕಿ ಮಾನವನಲ್ಲಿ ವಿನಯ ತುಂಬಿದ ಕೋರಿಕೆಯಿಟ್ಟಿದೆ. ಇದು ಜೀವಿಗಳ ನಡವಳಿಕೆಗಳ ಸಾಂಸ್ಕೃತಿಕ ಪ್ರವೃತ್ತಿಯಾಗಿದೆ. ವಾಸ್ತವವಾಗಿ ಒಂದು ಜೀವ ಮತ್ತೊಂದು ಜೀವದಿಂದ ಸಹಾಯ ಉಪಕಾರ ಪಡೆದರೆ; ಅದಕ್ಕೆ ಕೃತಜ್ಞತೆ ಸಲ್ಲಿಸುವುದು ಜೀವ ಧರ್ಮ. ಆದರೆ ಮಾನವಧರ್ಮ ಇದಕ್ಕೆ ತದ್ವಿರುದ್ಧವಾದುದ್ದು. ಇವನಿಗೆ ಪ್ರಕೃತಿಯ ಪ್ರಾಣಿ–ಪಕ್ಷಿಗಳ ಸಹಾಯ ಉಪಕಾರವನ್ನು ಆಪೇಕ್ಷಿಸುತ್ತಾನೆಯೇ ಹೊರತು; ಅವುಗಳಿಗೆ ಏನನ್ನೂ ಕೊಡಲಾರ, ಉಳಿಸಲಾರ. ಏನನ್ನೂ ಕೊಡುವುದು

"ಮಹಾರಾಜ: ದೇವಿ, ನಿನ್ನ ನಮ್ಮ ಮಗುವಿನ ಜೀವ ಕಾಪಾಡಿದ ಈ ಪಕ್ಷಿಗಳಿಗೆ ಹ್ಯಾಗೆ ಕೃತಜ್ಞತೆ ಹೇಳಲಿ!
ಪುಷ್ಪರಾಣಿ: ಅವುಗಳ ಪಾಡಿಗೆ ಅವನ್ನು ಬಿಟ್ಟು ಬಿಡಿ ಪ್ರಭು ನೀವು ಅರಣ್ಯನಾಶ ಮಾಡದೆ ಹೋದರೆ
ಸಾಕು ನಿಮಗೂ ಅವು ಕೃತಜ್ಞವಾಗಿರುತ್ತವೆ"40.

ಬೇಡ ಮಸಿಸಾಬುವಿನಂತೆ ದುಷ್ಕೃತ್ಯಕ್ಕಿಳಿಯದಿದ್ದರೆ ಸಾಕೆಂಬುದೇ ಕಾಡು ಪ್ರಾಣಿಗಳ ಅಪೇಕ್ಷೆ. ಇಂತಹ ಆಪೇಕ್ಷೆಗೆ ಮನ್ನಣೆ ಕೊಟ್ಟ ಮಹಾರಾಜ ತನ್ನ ಜೀವ ಪ್ರಜ್ಞೆಯಿಂದ ಪುಷ್ಪರಾಣಿಯನ್ನು ಕೇಳುವ ಮಾತಿದು.

ಇದು ಜೀವ ಜೀವಗಳ ನಡುವಿನ ಜೀವನವನ್ನು ಅರಿತು ಬಾಳುವ ಜೀವ ಪ್ರಜ್ಞೆಯುಳ್ಳದ್ದಾಗಿದೆ. ಇದನ್ನೇ ಬೌದ್ಧ ತತ್ವವೆನ್ನುವುದು. ಇಲ್ಲಿಯ ರಾಜನ ತಿಳುವಳಿಕೆ ಇವತ್ತಿನ ನಮ್ಮ ಸರ್ಕಾರ, ಬಂಡವಾಳಶಾಹಿ, ಅಧಿಕಾರಶಾಹಿ ಮತ್ತು ಜನಸಾಮಾನ್ಯರದ್ದಾದರೆ, ಜೀವ ಜೀವಗಳ ನಡುವಿನ ಸಾಮರಸ್ಯ ಬದುಕಿನ 'ಜೀವ ಧರ್ಮ'ವೇ ಉದಯವಾಗುತ್ತದೆ. ಇದು ಈ ಶತಮಾನದ ವಿಶ್ವಧರ್ಮವಾದರೆ, ಇಂದಿನ ಪರಿಸರ ಸಮಸ್ಯೆಗೊಂದು ಪರಿಹಾರ. ಇವೆಲ್ಲ ಬುದ್ಧನ ಜೀವನ ಮಾರ್ಗದ ತಾತ್ವಿಕತೆಯೊಳಗೆ ಅಡಗಿವೆ. ಆದ್ದರಿಂದಲೇ ಜಗಮೆಚ್ಚುವ ಧಮ್ಮ, ಬುದ್ಧನ ಜೀವನ ಮಾರ್ಗ. ಅದೇ ಈ ಯುಗದ ಸಮಸ್ಯೆಗಳ ಪರಿಹಾರ ಮಾರ್ಗ.

"ಜೀವ ಧರ್ಮವೆಂಬುದು ಭೂಮಿತತ್ವ. ಇದಕ್ಕೆ ಸೇರದ ಜೀವಗಣಗಳು ಪ್ರಕೃತಿಯಲ್ಲಿಲ್ಲ. ಆದ್ದರಿಂದಲೇ ಎಲ್ಲ ಜೀವಕ್ಕೂ ಮೂಲ ಜೀವಂತ ಭೂಮಿ ಎಂದರಿತ ವಿಜ್ಞಾನಿಯೊಬ್ಬ 'ಜೀವನದ ಮಾಸು ಮಣ್ಣು' ಎಂದು ಬರೆದ. ನಿಜವಾಗಿಯೂ ಈ ಗ್ರಹದ ಮೇಲೆ ಬದುಕಿರುವ ಬಹುಮಟ್ಟಿಗೆ ಎಲ್ಲ ವಸ್ತುಗಳನ್ನು ಭೂಮಿಯೇ ಸಾಕುತ್ತದೆ. ಹಾಗಾಗಿ ಪೂರ್ವಿಕರಿಗೆ, ಭೂಮಿತಾಯಿ ನಿಜವಾದ ವೈಜ್ಞಾನಿಕ ವಿಚಾರವಾಗಿತ್ತು. ಇದು ಕಂಡಂತೆಯೇ ಜೀವಿಗಳಿಂದ ಮಣ್ಣು ಎಷ್ಟೊಂದು ತುಂಬಿ ತುಳುಕಾಡುತ್ತಿತ್ತೆಂದರೆ; ಲೈಂಗಿಕ ಸಂತಾನೋತ್ಪತ್ತಿಗೆ ಅವಕಾಶವಿಲ್ಲದೆಯೇ ಜೀವ ತನಗೆ ತಾನೇ ಹುಟ್ಟುವ ಜಾಗವೆಂದು ಗ್ರೀಕರು ತಿಳಿದಿದ್ದರು. 'ತಾಪದ ಪ್ರಭಾವದಿಂದ 'ಬಂಕೆ ಮಣ್ಣಿ'ನಿಂದಲೇ ಜೀವ ಹುಟ್ಟುವುದನ್ನು ನೋಡಬಹುದೆಂದು ಗ್ರೀಕ್‌ನವನಾದ ತೇಲ್ಸ್ ತನ್ನ ವಿದ್ಯಾರ್ಥಿಗಳಿಗೆ ಹೇಳಿದ್ದ'. ಸುಮಾರು 2500 ವರುಷಗಳ ಹಿಂದಿನ ಇತರ ಬರಹಗಾರರು ಜೀವದ ಹುಟ್ಟು ಕೆಸರು ಮಣ್ಣಿನಿಂದಲೋ ಕಾದ ಭೂಮಿಯಿಂದಲೋ ಆಗುವುದೆಂದಿದ್ದರು"41. ಇಂತಹ ಮಹತ್ವವಾದ ಚರಿತ್ರೆ, ಹಿನ್ನಲೆಯುಳ್ಳ ಸರ್ವ ಜೀವಗಣಗಳ ಆದಿ, ಅಂತ್ಯಗಳ ಮೂಲವಾದ ಈ ಜೀವಂತ ಭೂಮಿ; ಇಂದು ಮಾನವನ ನಾನಾ ಬಗೆಯ ಭೋಗದಿಂದ ವಿಕೃತಗೊಂಡಿದೆ.

ಈ ಭೂಮಿ ಮೇಲಿನ ಸಸ್ಯ, ಪ್ರಾಣಿ, ಪಕ್ಷಿ ಮುಂತಾದ ಜೀವ ಪರಿಸರಗಳ ಇದುವರೆಗಿನ ಚರ್ಚೆಯಿಂದ ಸ್ಪಷ್ಟವಾಗಿ ಗೋಚರಿಸುವುದಿಷ್ಟು. ಪರಿಸರ ವಿನಾಶಕ್ಕೆ ಪ್ರಕೃತಿಯ ಮೇಲೆ ಮಾನವನ ನಿಯಂತ್ರಣ ಶಕ್ತಿ ಕ್ರಮೇಣ ಬೆಳೆದು ಬಂದಿರುವುದೇ ಆಗಿದೆ. ಇದಕ್ಕೆ ಅವನ ಗುಣ, ಸ್ವಭಾವ, ಚಿಂತನೆಗಳಿಂದಾಗುವ ಕ್ರಿಯಾರೂಪಿ ಪ್ರವೃತ್ತಿಗಳೇ ಮೂಲವಾಗಿವೆ. ಇವತ್ತಿನ ಪರಿಸರ ಸಮಸ್ಯೆಗೆ ಈ ಮಾನವನ ನಡವಳಿಕೆಗಳ ಪರಿವರ್ತನೆಯಲ್ಲದೆ ಬೇರೆ ಮಾರ್ಗವಿಲ್ಲ. ಈ ಮಾರ್ಗವೇ ಜೀವ ಪ್ರಜ್ಞೆಯುಳ್ಳ ಮಾನವನ ಪ್ರಜ್ಞಾಪೂರ್ಣ ಪ್ರವೃತ್ತಿ. ಇದರ ವಿಕಾಸವೇ ನಾಳಿನ ಜೀವ ಪರಿಸರದ ಜೀವಂತಿಕೆಯ ತಾಯಿ ಬೇರು.

ಮೇಲಿನ ಪರಿಶೀಲನೆಯಿಂದ ಹಕ್ಕಿ–ಪಕ್ಷಿ ಮತ್ತಿತರ ಜೀವ ಸಮೂಹಗಳ ವಾಸಸ್ಥಾನ, ಆಹಾರ, ಸಂತಾನೋತ್ಪತ್ತಿ ಮುಂತಾದ ಜೀವನ ಕ್ರಮಗಳಿದ್ದು; ಅವುಗಳ ಸಂಸ್ಕೃತಿಯ ಅಧ್ಯಯನದ ಪ್ರಾಮುಖ್ಯತೆ ಎದ್ದು ಕಾಣುತ್ತದೆ. ಹಾಗಾಗಿ ಪರಿಸರ ಅಧ್ಯಯನದ ಸ್ಪಷ್ಟತೆಗೆ ಇಂದು ಗಿಡ ಮರ, ಪ್ರಾಣಿ, ಪಕ್ಷಿ ಮತ್ತಿತರ ಜೀವಿಗಳ ಸಂಸ್ಕೃತಿಯನ್ನು ಕುರಿತ ಸಾಹಿತ್ಯ ಬೆಳವಣಿಗೆ ಮತ್ತು ಅದರ ಅಧ್ಯಯನದ ಗುರಿ ಮುಖ್ಯವಾದದ್ದಾಗಿದೆ. ಇದಿಲ್ಲದೆ ಅಂದರೆ ಪೂರ್ಣ ಪರಿಸರ ಜ್ಞಾನವಿಲ್ಲದೆ ಈ ಸಮಾಜದ ಜನಕ್ಕೆ ಪರಿಸರ ತಿಳುವಳಿಕೆ ನೀಡುತ್ತೇನೆ ಎನ್ನುವುದು ಅರ್ಥಹೀನವಾದುದ್ದು. ಈ ಕೊರತೆಯನ್ನು ಕವಿ, ಲೇಖಕರು, ವಿಮರ್ಶಕರು ತಮ್ಮ ಸಾಹಿತ್ಯ, ವಿಮರ್ಶೆಗಳ ಮೂಲಕ ಜನ ಸಾಮಾನ್ಯರವರೆಗೆ ತಲುಪುವಂತೆ ನೋಡಿಕೊಳ್ಳುವುದು ಸೂಕ್ತ.

ತುಂಬ ವಿರಳವಾಗಿರುವ ಪ್ರಾಣಿ, ಪಕ್ಷಿಗಳ ಸಂಸ್ಕೃತಿ ಕನ್ನಡ ಸಾಹಿತ್ಯದಲ್ಲಿ ಇದ್ದೂ ಇಲ್ಲದಂತಿದೆ. ಯಾಕೆಂದರೆ ಅದನ್ನು ಪ್ರಾಣಿ, ಪಕ್ಷಿ, ಸಸ್ಯ ಸಂಸ್ಕೃತಿಯೆಂದು ಗುರುತಿಸದೆ ಕೇವಲ ಈ ಜೀವಿಗಳ ನಡವಳಿಕೆಯ ಗುಣ ಸ್ವಭಾವವೆಂದು ಪರಿಚಯಿಸಿದ್ದಾರೆ. ಇಂತಹ ಸಾಹಿತ್ಯ ತೇಜಸ್ವಿ, ಕುವೆಂಪು, ಕಾರಂತ, ಕಂಬಾರ ಮುಂತಾದವರ ಕೃತಿಗಳಲ್ಲಿದೆ. ಇದು ಮೇಲೆ ಚರ್ಚಿಸಲಾಗಿರುವ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. ಒಂದು ಜಾತಿಯ ಹಕ್ಕಿ ಆಕಾಶದಲ್ಲೇ ಹಾರಾಡಿಕೊಂಡು ನಿದ್ರೆ, ಆಹಾರ ಸಂತಾನೋತ್ಪತ್ತಿ ಮಾಡುತ್ತ ಜೀವನ ಸಾಗಿಸುವ ಹಕ್ಕಿಗಳನ್ನು ಆಕಾಶ ಬಗರೆ (ಅಂಬರದ ಹಕ್ಕಿ) ಗಳೆಂದು ಕರೆಯಲ್ಪಟ್ಟಿದ್ದರೆ ಕುವೆಂಪು ಅದನ್ನು (ಜ್ಯೋತ್ಸ್ನೆ) ಎಂದಿದ್ದಾರೆ. ಇದೊಂದು ವಿಶಿಷ್ಟ ಮಾದರಿ ಸಂಸ್ಕೃತಿಯ ಹಕ್ಕಿ. ಹಾಗೆಯೇ ಮಿಂಚುಳ್ಳಿ ಜೇನು ಕುಟಿರ, ಗಿಣಿ, ಕೋಗಿಲೆ ಮುಂತಾದ ನಾನಾ ರೀತಿಯ ಹಕ್ಕಿ–ಪಕ್ಷಿಗಳ ಜೀವನ ನಡವಳಿಕೆಗಳ ಸಂಸ್ಕೃತಿ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿವೆ. ಆದರೆ ಅವುಗಳದ್ದೇ ಆದ ಜೀವನ ಸಂಸ್ಕೃತಿ ಇದೆ ಎಂದಾಗಲೀ; ಆ ಸಂಸ್ಕೃತಿಯ ಜ್ಞಾನ, ತಿಳುವಳಿಕೆಗಳು ಮನುಷ್ಯನ ಜೀವನಕ್ಕೆ ಬೇಕಾದ ಪ್ರಾಮುಖ್ಯತೆ, ಮಹತ್ವದ ಬಗ್ಗೆಯಾಗಲಿ ಹೇಳಲಾಗಿಲ್ಲ. ಹೀಗೆ ಹೇಳಬೇಕಾಗಿರುವುದು ಮುಂದಿನ ಸಾಹಿತ್ಯ, ವಿಮರ್ಶೆಗಳು ಮಾಡಬೇಕಾಗಿರುವ ಗುರುತರವಾದ ಕೆಲಸವೆನಿಸಿದೆ.

ಕೊನೆ ಟಿಪ್ಪಣಿ

1. ಶಿವರಾಮ ಕಾರಂತ ಕೆ, ಹಿರಿಕಿರಿಯ ಹಕ್ಕಿಗಳು, ಪುಟ–3
2. ಅದೇ, ಪು–5
3. ಅದೇ, ಪು–6–7
4. ಅದೇ, ಪು–9
5. ಶಿವರಾಮ ಕಾರಂತ.ಕೆ, ಎಂದೂ ಇಲ್ಲದ ಹಕ್ಕಿ, ಪು–41–42
6. ಅದೇ, ಪು–44
7. ನಿಸಾರ್ ಅಹಮದ್,ಕೆ.ಎಸ್. ಪ್ರಾತಿನಿಧಿಕ ಕವನಗಳು, ಪು–301
8. ಪೂರ್ಣಚಂದ್ರ ತೇಜಸ್ವಿ, ಕೆ.ಪಿ, ಮಿಂಚುಳ್ಳಿ, ಪು–8
9. ಅದೇ, ಪು–10
10. ಅದೇ, ಪು–11
11. ಕುವೆಂಪು, ನವಿಲು, ಪು–22
12. ಪೂರ್ಣಚಂದ್ರ ತೇಜಸ್ವಿ, ಕೆ.ಪಿ, ಮಿಂಚುಳ್ಳಿ, ಪು–13
13. ಅದೇ, ಪು–21
14. ಅದೇ, ಪು–34
15. ವೆಂಕಟಯ್ಯ ಜಿ, ಬನದ ಸೆರಗು, ಪು–49–50
16. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಮಿಂಚುಳ್ಳಿ, ಪು–26–27
17. ಅದೇ, ಪು–29
18. ಅದೇ, ಪು–48
19. ಅದೇ, ಪು–61
20. ಅದೇ, ಪು–69
21. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಪರಿಸರದ ಕಥೆ, ಪು–10
22. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಮಿಂಚುಳ್ಳಿ, ಪು–81

23. ಅದೇ, ಪು–83–84
24. ಅದೇ, ಪು–99–100
25. ಸುವರ್ಣ ಸಂಪುಟ, ಪ್ರಸಾರಾಂಗ, ಮೈ.ವಿ.ವಿ., ಪು–407–408
26. ಕುವೆಂಪು, ಕೊಳಲು, ಪು–92
27. ನಾಯಕ ಜಿ.ಎಚ್. ಹೊಸಗನ್ನಡ ಕವಿತೆ, ಪು–44
28. ಕುವೆಂಪು, ನವಿಲು, ಪು–48
29. ಚಂದ್ರಶೇಖರ ತಾಳ್ಯ, ಸುಡುವ ಭೂಮಿ, ಪು–54–55
30. ಕುಂಪು, ನವಿಲು, ಪು–64
31. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಕನ್ನಡ ನಾಡಿನ ಹಕ್ಕಿಗಳು (ಮಿಂಚುಳ್ಳಿ), ಪು–128
32. ಕುವೆಂಪು, ನವಿಲು, ಪು–65
33. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಕನ್ನಡ ನಾಡಿನ ಹಕ್ಕಿಗಳು (ಮಿಂಚುಳ್ಳಿ), ಪು–132
34. ಸಂ: ನಾಯಕ ಜಿ.ಎಚ್, ಹೊಸಗನ್ನಡ ಕವಿತೆ, ಪು–73
35. ಚಂದ್ರಶೇಖರ್ ತಾಳ್ಯ, ಸುಡುವ ಭೂಮಿ, ಪು–51
36. ಶಿವರಾಮ ಕಾರಂತ ಕೆ, ಎಂದೆಂದೂ ಇಲ್ಲದ ಹಕ್ಕಿ, ಪು–64–65
37. ಚಂದ್ರಶೇಖರ ಕಂಬಾರ, ಪುಷ್ಪರಾಣಿ, ಪು–33–34
38. ಬಂಜಗೆರೆ ಜಯಪ್ರಕಾಶ, ಮಹೂವಾ, ಪು–13
39. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಕನ್ನಡ ನಾಡಿನ ಹಕ್ಕಿಗಳು (ಮಿಂಚುಳ್ಳಿ), ಪು–30
40. ಚಂದ್ರಶೇಖರ ಕಂಬಾರ, ಪುಷ್ಪರಾಣಿ, ಪು–61
41. ಅನು: ಶಿವಪ್ಪ ಡಿ.ಎಸ್, ಜೀವಂತ ಭೂಮಿ, ಪು–9

ಅಧ್ಯಾಯ: 4

ಕನ್ನಡ ಸಾಹಿತ್ಯದಲ್ಲಿ: ಪ್ರಾಣಿ ವರ್ಗಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ):

1. ಪ್ರಾಣಿ ಜೀವಿ ಸಂಕುಲಗಳು ವಿಕಾಸವಾದ ಪ್ರಾಕೃತಿಕ ಸಂಸ್ಕೃತಿ:

ಜೀವ ಪರಿಸರದಲ್ಲಿ ಸಸ್ಯ, ಪ್ರಾಣಿ, ಪಕ್ಷಿ, ಕೀಟ ಮುಂತಾದ ಜೀವಿಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಬೇರೆ ಬೇರೆ ನೋಡಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಇವೆಲ್ಲಾ ಒಂದೆ ಜೀವಸಂಕುಲಗಳ ಎಳೆಯಿಂದ ಬೇರೆ ಬೇರೆ ರೂಪಾಂತರಗೊಂಡು ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಆದರೂ ನೂರಾರು ಮಿಲಿಯನ್ ವರ್ಷಗಳ ಕಾಲಾವಧಿಯಲ್ಲಿ ಕಾಲದಿಂದ ಕಾಲಕ್ಕೆ ರೂಪಾಂತರಗೊಳ್ಳುತ್ತ ಬಂದ ಈ ಜೀವ ವಿಕಾಸವನ್ನು ನಾವು ಹೀಗೆ ಗ್ರಹಿಸಿಕೊಳ್ಳ ಬಹುದು.

"ಕೆಲವು ಜೀವಕೋಶಗಳು ಹರಿತ್ತುಗಳನ್ನು ನಿರ್ಮಿಸಿಕೊಂಡು ಫೋಟೋ ಸಿಂಥೆಸಿಸ್ ಕ್ರಿಯೆಯಿಂದ ತಮ್ಮ ಆಹಾರವನ್ನು ತಾವೇ ತಯ್ಯಾರು ಮಾಡಿಕೊಳ್ಳತೊಡಗಿದವು. ಈ ಕ್ರಿಯೆಯಲ್ಲಿಯೇ ಇವು ಕೆಲವು ಉಚ್ಚಿಷ್ಟಗಳನ್ನೂ ವಾತಾವರಣಕ್ಕೆ ಬಿಡಗಡೆ ಮಾಡಿದವು. ಅವುಗಳಲ್ಲಿ ಒಂದು ಆಮ್ಲಜನಕ ಎನ್ನುವ ಅನಿಲ. ಈ ಅನಿಲ ಆಗಿನ ಜೀವಕೋಶಗಳಿಗೆ ವಿಷಕಾರಕವಾಗಿದ್ದರೂ, ಜೀವೋದಯದ ಅನಂತರ ಸುಮಾರು ನೂರು ಕೋಟಿ ವರ್ಷಗಳ ಅವಧಿಯಲ್ಲಿ ಆಮ್ಲಜನಕವನ್ನೇ ಉಪಯೋಗಿಸಿ ಬದುಕುವ ಜೀವಕೋಶಗಳು ತಯ್ಯಾರಾದವು. ಇವು ಆಮ್ಲಜನಕವನ್ನು ನೀರಿನಿಂದ ಹೀರಿ, ಸಸ್ಯಾಣುಗಳಿಗೆ ಅಗತ್ಯವಾದ ಇಂಗಾಲವನ್ನು ಬಿಡುಗಡೆ ಮಾಡುತ್ತಿದ್ದವು. ಹೀಗಾಗಿ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಪರಸ್ಪರ ಅವಲಂಬನೆ ಜೀವ ಮೂಲದಿಂದಲೇ ಆರಂಭವಾಯಿತು. ಈ ರೀತಿಯಲ್ಲಾದ ಜೀವಿಗಳ ವಿಕಾಸವನ್ನು ಈ ಕಾರಣದಿಂದಲೇ ಪ್ರಾಣಿಗಳ ಮತ್ತು ಸಸ್ಯಗಳ ವಿಕಾಸವೆಂದು ಬೇರೆ ಬೇರೆಯಾಗಿ ನೋಡಲು ಸಾಧ್ಯವೇ ಇಲ್ಲವೆನ್ನುವುದು.

ಸೃಷ್ಟಿಯ ಆದಿಯ ಪ್ರಾಕೃತದ ಸಮುದ್ರದಲ್ಲಿ ಸೂರ್ಯನ ಕಿರಣಗಳನ್ನು ಉಪಯೋಗಿಸಿ ಆಹಾರೋತ್ಪಾದನೆ ಮಾಡುವ ಪಾಚಿಯ ಭೀಕರ ಕಾಡುಗಳು ಇವುಗಳ ನಡುವೆ ಆಕ್ಟೋಪಸ್ ಸೀಗಡಿಗಳಂತೆ ಮೂಳೆಗಳಿಲ್ಲದ ಮೃದ್ವಸ್ಥಿ ಜೀವಿಗಳ ಸಮುದಾಯಗಳು ಇದ್ದುವು. ಇವು ಹೆಚ್ಚಾಗಿ ಈಗಿನ ಜೆಲ್ಲಿಮೀನುಗಳನ್ನು, ಸ್ಪಾಂಜ್‌ಗಳನ್ನೂ, ಕೋರಲ್ ಮತ್ತು ಜಲಕೀಟಗಳನ್ನು ಹೋಲುತ್ತಿದ್ದವು."1

ಈ ಜೀವ ಪರಿಸರದ ವಿಕಾಸಕ್ಕೆ ಐದಾರು ಮಿಲಿಯನ್ ವರ್ಷಗಳಿಂದ ಭೂಮಿ ಮೇಲೆ ಹಲವಾರು ಯುಗಗಳೇ ಸಾಗಿ ಬಂದಿವೆ. ಅವುಗಳನ್ನೆಲ್ಲ ಕ್ರಮವಾಗಿ ಹೀಗೆ ವಿಭಾಗಿಸಲಾಗಿದೆ. ಕೇಂಬ್ರೇನ್ ಯುಗ ಆರಂಭದ ಸಾಗರದಲ್ಲಿ ಜೀವರೂಪಗಳು ಉದಯಿಸಿದ ಕಾಲ. ನಂತರ ಅರ್ಡೋವೀಸಿಯನ್ ಯುಗದಲ್ಲಿ ಪ್ರಧಾನ ಬದಲಾವಣೆಗಳು ಕಂಡುಬಂದಿಲ್ಲ. ಇದಾದ ಮೇಲೆ ಬಂದ ಸೆಲೂರಿಯನ್ ಯುಗದಲ್ಲಿ ಸಾಗರ ಜೀವಿಗಳಲ್ಲಿ ಕ್ರಾಂತಿಕಾರಕ ಮಾರ್ಪಾಡುಗಳಾದುದನ್ನು ಕಾಣಬಹುದು. ಈ ಯುಗದ ಕೊನೆಯ ಹೊತ್ತಿಗೆ ಪ್ರಾಣಿಗಳ ಅವತಾರ ಪ್ರಧಾನ ಬದಲಾವಣೆಯಾಗಿ, ನೀರಿನೊಳಗಿದ್ದ ಸಸ್ಯಗಳಲ್ಲಿ ಕೆಲವು ಸಾಗರ ತೀರದಲ್ಲಿಯೂ ಸಹ ಬೆಳೆಯಲಾರಂಬಿಸಿರುವುದು ಕಂಡುಬರುತ್ತದೆ. ಸೆಲೂರಿಯನ್ ಯುಗ ಮುಗಿದು ಡೆವೋನಿಯನ್ ಯುಗ ಆರಂಭದ ಹೊತ್ತಿಗೆ ಇಡೀ ಭೂಮಿಯ ಮೇಲೆ ಅಲ್ಲೋಲಕಲ್ಲೋಲಗಳಾಗಿ ಬೆಟ್ಟ ಗುಡ್ಡಗಳು ರೂಪುಗೊಂಡಿವೆ. ಸಮುದ್ರವು ಹಲವಾರು ಕಡೆ ನುಗ್ಗಿ ಭೂಮಿಯ ಮೇಲ್ಭಾಗವೆಲ್ಲ ಆಗಾಧ ಪರಿವರ್ತನೆಗೊಳಪಟ್ಟು, ಸಮುದ್ರದ ನಾನಾ ರೀತಿಯ ಗೊಬ್ಬರದ ಮಣ್ಣೆಲ್ಲ ಹೊರ ಬಂದು, ಅದು ಗಾಳಿ ಬೆಳಕಿಗೆ ಸಿಕ್ಕ ಸಸ್ಯ, ಪ್ರಾಣಿ ಸಮುದಾಯಗಳ ವಿಕಾಸಕ್ಕೆ ಅಪಾರ ಅವಕಾಶವುಂಟಾಗಿದೆ. ಈ ಡಿವೋನಿಯನ್ ಯುಗ ಮುಗಿಯುವುದರೊಳಗೆ ಬೀಜ ಪ್ರಸಾರದಿಂದ ಸಂತಾನಾಭಿವೃದ್ಧಿ ಮಾಡುವ ವೃಕ್ಷ ಸಂಕುಲಗಳು ಮತ್ತು ನಾನಾ ರೀತಿಯ ಮೀನುಗಳು ರೂಪುಗೊಂಡಿರಲು ಸಾಧ್ಯವಾಗಿದೆ.

"ಜೀವ ವಿಕಾಸದಲ್ಲಿ ಪ್ರಾಣಿ ಸಂಕುಲಗಳು ಭೂಮಿಯ ಮೇಲೆ ಮನುಷ್ಯನವರೆಗೂ ವಿಕಾಸವಾಗಲು ನಿಜಕ್ಕೂ ಕಾರಣವಾದವು ಈ ಮೀನುಗಳೇ. ಈ ಮೀನುಗಳ ಅನಂತರ ಈಗಿನ ಕಪ್ಪೆಗಳಂತೆ ಕಿಶೋರಾವಸ್ಥೆಯನ್ನು ನೀರಿನ ಒಳಗೂ, ಪ್ರೌಢಾವಸ್ಥೆಯನ್ನು ನೆಲದ ಮೇಲೂ ಕಳೆಯ ಬಲ್ಲ ಆಂಫೀಬಿಯನ್ ಕಶೇರುಕಗಳು ಉದ್ಭವಿಸಿದವು"2. ಅಷ್ಟರಲ್ಲಿ ಕಾರ್ಬಾನ್ತಿಪೊರಸ್ ಯುಗ ಪ್ರಾರಂಭವಾಗಿತ್ತು. ಈ ಯುಗದಲ್ಲಿ ಸಾಗರದ ಚಿಕ್ಕ ಲಂಗ್‌ಫಿಷ್ ಬೃಹದ್ಗಾತ್ರದ ಮಹೋರಗಗಳಾಗಿ ರೂಪುಗೊಂಡವು. ಆ ಮಹೋರಗಗಳೇ ಡೈನೊಸಾರ್,

ಟೈರಾನೋಸಾರಸ್, ಅರ್ನಿತೋಮೈಮಸ್, ಇಕ್ತಿಯೋಸಾರಸ್, ಮುಂತಾದವು. ನಂತರ ಬಂದ ಮೆಸೋಸೋಯಿಕ ಯುಗದಲ್ಲಿ ಈ ಮಹೋರಗಗಳೆಲ್ಲ ನಿರ್ನಾಮವಾಗಿದ್ದೊ. ಈ ಯುಗ ಅಂತ್ಯಗೊಂಡು ಕೆನೋಸೋಯಿಕ್ ಯುಗ ಆರಂಭವಾಗುವಷ್ಟರಲ್ಲಿ ಬೃಹದಾಕಾರದ ಸರಿಸೃಪಗಳೆಲ್ಲ ಮಾಯವಾಗಿ ಭೂಮಂಡಲ ಸಸ್ತನಿ ಪ್ರಾಣಿಗಳ ವಿಕಾಸಕ್ಕೆ ರೂಪುಗೊಂಡಿತ್ತು. ಇಲ್ಲಿಯ ಆರು ಯುಗಗಳನ್ನು ಸಂಕ್ಷಿಪ್ತವಾಗಿ ಕೆಳಕಂಡಂತೆ ಗುರುತಿಸಲಾಗಿದೆ.

"ಅಂದಿನಿಂದ ಇಂದಿನವರೆಗಿನ ಅವಧಿಯನ್ನು ಮೂರು ಕಲ್ಪಗಳಾಗಿ ವಿಭಜಿಸಲಾಗಿದೆ. ಸುಮಾರು 6 ಶತಕೋಟಿ ವರ್ಷಗಳಿಂದ 270 ಕೋಟಿ ವರ್ಷದವರೆಗಿನ ಅವಧಿಯನ್ನು ಆದಿಜೀವಕಲ್ಪ. 270 ಕೋಟಿ ವರ್ಷದಿಂದ 135 ಕೋಟಿ ವರ್ಷದವರೆಗಿನ ಅವಧಿಯನ್ನು ಮಧ್ಯಜೀವಕಲ್ಪ ಎಂದು, ಅಲ್ಲಿಂದೀಚಿನ ಅವಧಿಯನ್ನು ಆಧುನಿಕ ಜೀವಕಲ್ಪವೆಂದು ಕರೆಯಲಾಗಿದೆ"3.

ಈ ಜೀವ ವಿಕಾಸದ ಬೆಳಣಿಗೆಯಲ್ಲಿ ಅಸಾಮಾನ್ಯ ಬದಲಾವಣೆಯಾಗಿರುವುದು, 'ಮಧ್ಯಜೀವಕಲ್ಪದಲ್ಲಿ.' ಆದಿ ಜೀವಕಲ್ಪದಿಂದ ಆಧುನಿಕ ಜೀವ ಕಲ್ಪದೊಳಗಿನ ಮೇಲ್ಕಂಡ ಆರು ಯುಗಗಳ ಆರಂಭ, ವಿಕಾಸ, ಅವಸಾನಗಳೆಲ್ಲ ಪ್ರಕೃತಿ ವಿಕೋಪದಿಂದ ಎಂಬುದು ನಿರ್ವಿವಾದ. ಯಾಕೆಂದರೆ ಈ ಯಾವ ಯುಗದಲ್ಲೂ ಮಾನವ ಪ್ರಾಣಿಯಿಲ್ಲ. ಭೂಮಿ ಮೇಲೆ ಇವನು ಉಗಮಗೊಂಡಿರುವುದು ಇತ್ತೀಚೆಗೆ. ಅಂದರೆ ಆಧುನಿಕ ಜೀವ ಕಲ್ಪದ ಕೆನೋಸೋಯಿಕ್ ಯುಗದ ನಂತರ. ಹೀಗಿದ್ದ ಮೇಲೆ ಭೂಮಿಯ ಈ ಜೀವ ಕಲ್ಪಗಳಲ್ಲಿ ನಡೆದ ಪ್ರಕೃತಿಯ ವಿಕೋಪಕ್ಕೆ ಮತ್ತು ಅದರ ಪರಿಣಾಮದಿಂದಾದ ಸರ್ವಜೀವಿಗಳ ನಾಮಾವಶೇಷಕ್ಕೆ ಕಾರಣವೇನೆಂಬುದಕ್ಕೆ ವಿಜ್ಞಾನದಿಂದ ಇನ್ನೂ ಸ್ಪಷ್ಟ ಉತ್ತರವಿಲ್ಲ. ಆದರೂ ಅವಿರತ ಶೋಧನೆಯಿಂದಾಗಿ "ಪ್ರತಿ ಇಪ್ಪತ್ತಾರು ಮಿಲಿಯ ವರ್ಷಗಳಿಗೊಮ್ಮೆ ಇಡೀ ಭೂ ಮಂಡಲದ ಜೀವ ರಾಶಿಗಳಲ್ಲಿ ಬಹುಪಾಲು ನಾಮಾವಶೇಷಗೊಂಡು ಪುನರುದ್ಭವಿಸಿರುವುದನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಭೂಮಂಡಲದ ಮೇಲೆ ಆಗಿಂದಾಗ್ಗೆ ನಡೆದಿರುವ ವಿನಾಶ ಮತ್ತು ಸೃಷ್ಟಿಯ ಆವರ್ತನ ಕ್ರಿಯೆ ಮಹೋರಗಗಳ ಅಂತರ್ಧಾನವನ್ನು ಇನ್ನೂ ರಹಸ್ಯಮಯವಾಗಿಸಿದೆ. ಇದಕ್ಕೆ ಉತ್ತರ ಪತ್ತೆಯಾದಾಗ, ಅದು ಕೇವಲ ಮಹೋರಗಗಳ ಹಣೆಬರಹವನ್ನು ಮಾತ್ರ ಪ್ರತಿನಿಧಿಸದೆ ಮಾನವನ ನಾಳಿನ ಭವಿಷ್ಯವನ್ನು ಹೇಳಬಹುದೇನೋ."4

ಯಾಕೆಂದರೆ ಈಗಿನ ಆಧುನಿಕ ಯುಗ ಮೇಲಿನೆಲ್ಲ ಯುಗಗಳಿಂದ ಭಿನ್ನವಾದುದ್ದು. ಮಧ್ಯ ಜೀವಕಲ್ಪ ಕಾಲದಲ್ಲಿದ್ದ ಡೈನೋಸಾರ್, ಇಕ್ತಿಯೋಸಾರಸ್ ಮುಂತಾದ ಮಹೋರಗಗಳ ಮತ್ತೊಂದು ರೂಪದಲ್ಲಿ ಈಗ ಮಾನವನಿದ್ದಾನೆ. ಆಗ ಇಡೀ ಭೂಮಂಡಲವನ್ನು ಮಹೋರಗಗಳು ಆಕ್ರಮಿಸಿ ಆಳರಸರಾಗಿದ್ದ ಸ್ಥಾನವನ್ನು ಮಾನವ ತನ್ನ ಜ್ಞಾನ, ಸಾಧನೆಗಳಿಂದ ಪ್ರಕೃತಿಯನ್ನೇ ಮಣಿಸಿ ಆಕ್ರಮಿಸಿದ್ದಾನೆ. ಇದು ಮಧ್ಯ ಜೀವಕಲ್ಪ ಕಾಲದ ಬದಲಾದ ರೂಪವೆಂದು ಹೇಳಬಹುದಾಗಿದೆ. ಹಾಗಾಗಿ ಮಾನವ ಈ ಕಾಲದ ವಿಶಿಷ್ಟ ಪ್ರಾಣಿ. ಇವನಿಂದ ಇವನಿಗೆಯೇನು ಇಡೀ ಪ್ರಕೃತಿಯ ಜೀವ ಸಂಕುಲಕ್ಕೆ ನಾಳಿನ ಭವಿಷ್ಯವೇ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಆದರೂ ಮಾನವನ ಈ ಎಲ್ಲ ಕ್ರೌರ್ಯ, ಹಿಂಸೆಗಳನ್ನು ತಡೆದು ಕೊಂಡಿರುವ ತಾಳ್ಮೆ ಭೂಮಿಯದು. ಇದರ ಮೇಲೆ ಸಸ್ಯ ಸಂಕುಲಗಳಲ್ಲದೆ "ಏಕ ಕಣ ಜೀವಿಗಳಾದ 'ಪೋಟೋಜೋವಾ'ದಿಂದ ಹಿಡಿದು ಮನುಷ್ಯನವರೆಗೆ ವ್ಯಾಪಿಸಿರುವ ಹನ್ನೊಂದು ಮಿಲಿಯನ್ ಪ್ರಾಣಿ ಸಂಕುಲಗಳನ್ನು ಈ ಭೂಮಿ ಪೋಷಿಸುತ್ತಿದೆ."5 ಹಾಗಾಗಿ ಹನ್ನೊಂದು ಮಿಲಿಯನ್ ಪ್ರಾಣಿ ಸಂಕುಲಗಳೇನು? ಲಕ್ಷಾಂತರ ಪಕ್ಷಿ, ಕೀಟ ಮುಂತಾದ ಸಣ್ಣ ಪುಟ್ಟ ಚರ ಪ್ರಾಣಿ ಹಾಗೂ ಸಸ್ಯ ಸಂಕುಲವು ಸೇರಿ, ಸರ್ವ ಜೀವಗಳ ಹುಟ್ಟು ಮತ್ತು ಬೆಳವಣಿಗೆಯ ವಿಕಾಸ ಪ್ರಕ್ರಿಯೆಗಳಲ್ಲಿ ಅವಿನಾಭಾವ ಸಂಬಂಧವಿರುವುದನ್ನು ವೈಜ್ಞಾನಿಕ ಸಾಹಿತ್ಯ ಕೃತಿಗಳು ಮೇಲಿನ ಈ ಎಲ್ಲ ವೈಜ್ಞಾನಿಕ ವಿವರಣೆ ವಿಶ್ಲೇಷಣೆಗಳಿಂದ ಖಚಿತಪಡಿಸುತ್ತವೆ. ಈ ಪ್ರಾಣಿಗಳ ಆಹಾರ, ಗುಣ, ಸ್ವಭಾವ, ಮುಂತಾದ ಜೀವನ ಕ್ರಮವನ್ನು ಸಾಹಿತ್ಯ ಹೇಗೆ ಚಿತ್ರಿಸಿದೆ ಎನ್ನುವುದೇ ಇಲ್ಲಿಯ ಗಮನಾರ್ಹ ಸಂಗತಿಯಾಗಿದೆ.

2.ಪ್ರಾಣಿ ಸಂಕುಲದ ಉಪಜೀವಿಗಳ ಆಹಾರ, ಆವಾಸ, ಅವಸಾನ ಜೀವನ ಸಂಸ್ಕೃತಿಗಳು:

ವನ್ಯ ಜೀವಿಗಳೆಲ್ಲ ಬೆಟ್ಟಗುಡ್ಡ, ಕಾಡು, ನದಿ, ಸಮುದ್ರ, ಬಯಲು ಪ್ರದೇಶ ಮುಂತಾದ ಭೂ ಪ್ರದೇಶಗಳಲ್ಲಿ ತಮ್ಮ ತಮ್ಮ ರಕ್ಷಣೆಗೆ ಯೋಗ್ಯವಾದ ಸ್ಥಳಗಳಲ್ಲಿ ವಾಸವಾಗಿರುತ್ತವೆ. ಮುಖ್ಯವಾಗಿ ಅರಣ್ಯ ಪ್ರದೇಶದ ವೈವಿಧ್ಯಮಯ ವನ್ಯಜೀವಿಗಳ ಆವಾಸವನ್ನು ಸ್ಥೂಲವಾಗಿ ಮೂರು ರೀತಿಯಲ್ಲಿ ವಿಂಗಡಿಸಬಹುದು. 1. ಸದಾ ಹಸಿರು ಕಾಡುಗಳು 2. ಎಲೆಯುದುರುವ ಕಾಡುಗಳು 3. ಮುಳ್ಳುಗಿಡಗಳು ಅಥವಾ ಕುರುಚಲು ಕಾಡುಗಳು.

ಕಾಡಿರಲಿ, ಸಾಗರವಿರಲಿ, ಅಥವಾ ಬಯಲು ಪ್ರದೇಶವಿರಲಿ ಇಲ್ಲೆಲ್ಲ ವಾಸಿಸುವ ಜೀವಿಗಳನ್ನೂ ಒಟ್ಟಾರೆಯಾಗಿ ಹೀಗೆ ಹೇಳಬಹುದು. "ಒಂದು ಜೀವಿ ವಾಸವಾಗಿರುವ ನೈಸರ್ಗಿಕ ಪ್ರದೇಶವನ್ನು ಅದರ ಆವಾಸ (Habitat)) ಎಂದು ಕರೆಯಲಾಗುತ್ತದೆ. ಗೆದ್ದಲು, ಎರೆಹುಳುಗಳ ಆವಾಸ, ಮಣ್ಣು, ಆಮೆ, ಮೀನು, ಮೊಸಳೆಗಳು, ನದಿ, ಸರೋವರ, ಸಮುದ್ರಗಳಲ್ಲಿ ವಾಸಿಸುತ್ತವೆ. ಹಕ್ಕಿಗಳು ಮರಗಿಡ ಪೊಟರೆಗಳಲ್ಲಿ ಗೂಡುಕಟ್ಟಿ ವಾಸಿಸುತ್ತವೆ. ಕಾಡು ಮೃಗಗಳ ಆವಾಸ ದಟ್ಟಕಾಡುಗಳು.

ಒಂದೇ ಆವಾಸದಲ್ಲಿ ಹಲವು ಗುಂಪುಗಳಿಗೆ ಸೇರಿದ ಜೀವಿಗಳು ವಾಸವಾಗಿರಬಹುದು. ಉದಾಹರಣೆಗೆ ದಟ್ಟ ಕಾಡುಗಳಲ್ಲಿ ಆನೆ, ಹುಲಿಗಳಲ್ಲದೆ ಅಳಿಲು, ನರಿ, ಮಂಗ, ಮೊಲ, ಕಾಡುಕೋಳಿ, ಕಾಡುಕೋಣಗಳು ವಾಸವಾಗಿರುತ್ತವೆ. ಮರಗಳ ಮೇಲೆ ಪಕ್ಷಿಗಳ ಜೊತೆಗೆ ಅಳಿಲು, ಬಾವಲಿ, ಕೀಟ ಮೊದಲಾದ ಪ್ರಾಣಿಗಳು ಜೀವಿಸುತ್ತವೆ. ನೀರಿನಲ್ಲಿ ಕೀಟಗಳು ಏಡಿ, ಆಮೆ, ಮೀನು, ಸೀಗಡಿ ಮೊದಲಾದ ಪ್ರಾಣಿಗಳು ವಾಸಿಸುತ್ತವೆ. ಒಂದು ಪ್ರದೇಶದಲ್ಲಿ ಕಂಡು ಬರುವ ಸಸ್ಯ ಮತ್ತು ಪ್ರಾಣಿ ಸಮುದಾಯವೇ ಜೀವಿ ಸಮುದಾಯ (Biological Community)."5

ಈ ಎಲ್ಲ ವನ್ಯ ಜೀವಿಗಳು ತಮ್ಮ ತಮ್ಮ ಆವಾಸ, ರಕ್ಷಣೆ, ಆಹಾರ ಮುಂತಾದ ಜೀವನ ಕ್ರಮಗಳಲ್ಲೆಲ್ಲ ಒಂದಕ್ಕೊಂದು ಸಹಜೀವನ ಪದ್ಧತಿಯನ್ನು ರೂಢಿಸಿಕೊಂಡಿವೆ. ಈ ರೂಢಿ ನಿಸರ್ಗ ಪಥದ್ದು. ಈ ಪ್ರಾಣಿಗಳ ಜೀವನ ಕೂಡಿ ಬಾಳುವ ಸಮುದಾಯ ಜೀವನ. ಇದನ್ನೇ 'ಜೀವ ಸಮುದಾಯ ಜೀವನ' ಎನ್ನುವುದು. ಇಂತಹ ನಾನಾ ಜೀವಿಗಳ ಹಲವು ಜೀವನ ಕ್ರಮಗಳ ಅಧ್ಯಯನದ ಉದ್ದೇಶವಿದ್ದರೂ, ಸಾಮಾನ್ಯ ವಿಶ್ಲೇಷಣೆಯಡಿ ಕೆಲವು ಪ್ರಾಣಿಗಳ ವಿಷಯ ಪ್ರಸ್ತಾಪಗೊಂಡಿವೆ. ಅವುಗಳಲ್ಲಿ ವಾನರಗಳು, ಮಾರ್ಜಾಲಗಳು, ಮುಂಗುಸಿ ಮತ್ತು ವಿಸಲ್‌ಗಳು ಕತ್ತೆ ಕಿರುಬ ಮತ್ತು ನಾಯಿಯ ಬಳಗ, ಕರಡಿ, ಆನೆ, ಹುಲಿಗಳಂತಹ ದೊಡ್ಡ ಮತ್ತು ಚಿಕ್ಕ ಪುಟ್ಟ ಅನೇಕ ಸಸ್ಯಾಹಾರಿ, ಮಾಂಸಾಹಾರಿ ಪ್ರಾಣಿಗಳ ವಿಷಯವಿಲ್ಲಿ ಗ್ರಾಸವಾಗಿದೆ.

'ಮಂಗನಿಂದ ಮಾನವ' ಎನ್ನುವ ಡಾರ್ವಿನ್ನನ ವಿಕಾಸವಾದ ಜಗತ್ತಿನಾದ್ಯಂತ ಕ್ರಾಂತಿಯನ್ನುಂಟು ಮಾಡಿದ್ದು ಇತಿಹಾಸ. ಈಗ ಈ ವಿಷಯದ ಚರ್ಚೆ ಅಪ್ರಸ್ತುತವಾದರೂ, ಮಾನವನವರೆಗಿನ ಪ್ರಾಣಿಗಳ ಬಗ್ಗೆ ಮಾತನಾಡಬೇಕಾಗಿದೆ. ಹಾಗಾಗಿ ವಾನರ ಜಾತಿಯ ಪ್ರಾಣಿಗಳೇ ವಿಶೇಷವಾದವು. ಅವುಗಳಲ್ಲಿ ಕೋತಿ, ಸಿಂಗಲೀಕ, ಬುಕ್ಕ, ಕರಿಮುಚ್ಚ, ಕಾಡುಪಾಪ ಮುಂತಾದವು. ಇವುಗಳ "ಅಂಗರಚನೆಯು ಮರಗಳಲ್ಲಿ ಬದುಕಿ ಬಹುತೇಕ ಸಸ್ಯಾಹಾರವನ್ನೇ ಅವಲಂಬಿಸಿರುವುದಕ್ಕೆ ಯುಕ್ತವಾಗಿದೆ. ಕಾಡುಪಾಪನ ಹೊರತಾಗಿ ಉಳಿದವೆಲ್ಲ ಹಗಲು ಸಂಚಾರಿಗಳು. ಈ ವಾನರಗಳು ಸಣ್ಣಪುಟ್ಟ ಜಂತುಗಳನ್ನು ಕೆಲವೊಮ್ಮೆ ಬೇಟೆಯಾಡಿದರೂ, ಬಹುಪಾಲು ಸಸ್ಯಾಹಾರವನ್ನೇ ಅವಲಂಬಿಸಿರುತ್ತವೆ. ವಿವಿಧ ರೀತಿಯ ಕೂಗುಗಳಿಂದ ಸಂಭಾಷಣೆ ನಡೆಸುವ ವಾನರಗಳು ಸಂಘಜೀವಿಗಳಾಗಿ ಮರಿಗಳ ಪಾಲನೆ ಮಾಡುತ್ತವೆ ಮತ್ತು ಬೇಟೆಗಾರ ಪ್ರಾಣಿಗಳಿಂದ ರಕ್ಷಣೆ ಪಡೆಯುತ್ತವೆ"6 ಪ್ರಾಣಿಗಳ ಈ ನಡವಳಿಕೆಗಳನ್ನೆ 'ಪ್ರಾಣಿ ಸಂಸ್ಕೃತಿ' ಎನ್ನುವುದು. ಇವು ಕಾಡು ಮೇಡು, ಹಳ್ಳಿ, ಪಟ್ಟಣವೆನ್ನದೆ ಎಲ್ಲ ವಿಧದ ಆವಾಸಗಳಲ್ಲೂ ಜೀವಿಸುತ್ತವೆ. ಹಣ್ಣು, ಕಾಯಿ, ಎಲೆ, ಚಿಗುರು, ಕೀಟಾದಿಗಳನ್ನು ಅರಸುತ್ತ ಸುಮಾರು ಹತ್ತರಿಂದ ಹದಿನೈದು ವರ್ಷಗಳ ಕಾಲ ಬದುಕಿರುತ್ತವೆ. ಸಿಂಗಲೀಕಗಳಂತಹ ವಾನರಗಳು ಕಳ್ಳಬೇಟೆಯಿಂದ ನಿರ್ನಾಮವಾದರೆ, ಕರಿಮುಚ್ಚಗಳು ಕಾಮಪ್ರಚೋದನೆಗೆ ಮತ್ತು ಕಾಡು ಪಾಪಗಳ ಕಣ್ಣು ಸಂಜೀವಿನಿ ಎಂಬ ಕ್ರೂರ ಮೂಢನಂಬಿಕೆಗಳಿಂದ ನಾಶವಾಗುತ್ತಿವೆ.

ಮಾರ್ಜಾಲ ಪ್ರಾಣಿಗಳು ಎಲೆಯುದುರುವ ಕಾಡು ಮತ್ತು ಕುರುಚಲು ಕಾಡುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಹುಲಿ, ಸಿಂಹ, ಚಿರತೆಗಳಂತಹ ದೊಡ್ಡ ಪ್ರಾಣಿಗಳಿಂದ ಮನೆ ಬೆಕ್ಕಿನಂತಹ ಚಿಕ್ಕ ಗಾತ್ರದ ಕಾಡು ಬೆಕ್ಕುಗಳವರೆಗೆ ಇರುವ ಈ ಭಿನ್ನ ಪ್ರಾಣಿಗಳನ್ನು ಒಟ್ಟಿಗೆ 'ಬೆಕ್ಕಿನ ಬಳಗ' ಎನ್ನಬಹುದು. ಚಿಟ್ಟೆಹುಲಿ, ಸಿಂಹ, ಚಿರತೆ, ಕಿರುಬ ಮುಂತಾದವು ಕುರುಚಲು ಕಾಡು ಮತ್ತು ಬಂಡೆಗಳಿರುವ ಗುಡ್ಡಗಾಡುಗಳಲ್ಲಿ ಹೆಚ್ಚಾಗಿ ವಾಸವಾಗಿರುತ್ತವೆ. "ಇವು ಸಂಪೂರ್ಣ ಮಾಂಸಾಹಾರಿಗಳು. ಮಾರ್ಜಾಲಗಳಿಗೆ ಬೇಟೆಯನ್ನು ಹೊಂಚುಹಾಕಿ, ಹಿಡಿದು ತಿನ್ನಲು ಯುಕ್ತವಾದ ಹಲ್ಲು, ಉಗುರುಗಳಿವೆ, ಅವುಗಳ ಕಣ್ಣು, ಅತಿಸೂಕ್ಷ್ಮ. ಕಿವಿ ಬಲು ಚುರುಕು. ಅಂಗರಚನೆ, ಚಟುವಟಿಕೆ, ಬೇಟೆಯ ಬದುಕಿಗೆ ಹೇಳಿ ಮಾಡಿಸಿದಂಥವು. ಸ್ವಭಾವ ಜೀವನ ಕ್ರಮದಲ್ಲಿ ಒಂಟಿತನಕ್ಕೆ ಪ್ರಾಧಾನ್ಯ. ಬೇಟೆ ವಿದ್ಯೆ ಕಲಿತು ಪರಿಣತಿಗಳಿಸುವ ತನಕ ತಾಯಿಯ ಮೇಲೆ ಮರಿಗಳ ಅವಲಂಬನೆ ಜಾಸ್ತಿ."7 ಮಾನವನ ಪ್ರಜ್ಞಾಹೀನ ದುರಾಲೋಚನೆಗಳಿಂದಾಗಿ ಅರಣ್ಯನಾಶ, ಸಸ್ಯಾಹಾರಿ ಪ್ರಾಣಿಗಳ ಬೇಟೆ ಮತ್ತು ವಿಷ ಪ್ರಾಶನಗಳಿಂದ ಈ ಹುಲಿ, ಚಿರತೆಗಳಂತಹ ಪ್ರಾಣಿಗಳು ತುಂಬ ಇಳಿಮುಖವಾಗಿವೆ. ಇವುಗಳ ಜೀವಿತಾವಧಿ ಸುಮಾರು ಇಪ್ಪತ್ತು ವರ್ಷಗಳಿರಬಹುದು.

ಈ ದೊಡ್ಡ ಪ್ರಾಣಿಗಳಲ್ಲದೆ ಬೆಕ್ಕು, ಕಂದು ಚುಕ್ಕೆ ಬೆಕ್ಕು, ಕಬ್ಬೆಕ್ಕು ಮುಂತಾದ ಚಿಕ್ಕ ಮಾರ್ಜಾಲಗಳು ಮಲೆನಾಡು ಬಯಲು ಸೀಮೆಗಳೆರಡರಲ್ಲೂ ಕಂಡು ಬರುತ್ತವೆ. ಮೊಲ, ಬರ್ಕ, ಕಾಡುಕೋಳಿ, ಇಲಿ, ಓತಿ, ಪಕ್ಷಿಗಳು ಇವುಗಳಿಗೆ ಆಹಾರವಾದಂತೆ ಕೆಲವು ಪಪ್ಪಾಯಿ, ಕಾಫಿ, ಈಚಲು ಹಣ್ಣುಗಳನ್ನು ತಿನ್ನುತ್ತವೆ. ಮರ ಪೊಟರೆ, ಬಂಡೆ ಕೆಳಗೆ, ಕಟ್ಟಡಗಳ ಸೂರುಗಳಲ್ಲಿ ವಾಸಿಸುತ್ತ ಏಕಾಂಗಿಯಾಗಿ ಸಂಚರಿಸಿ ಜೀವಿಸುತ್ತವೆ. ಕಬ್ಬೆಕ್ಕುಗಳಂತೂ ಸುಗಂಧ ದ್ರವ್ಯ ಉತ್ಪಾದಿಸುವ ಗ್ರಂಥಿಗಳಿಂದ ಕೂಡಿದ್ದು, ನೆಲದಲ್ಲಿ ಬಿಲ ಕೊರೆಯುವ ಸಾಮರ್ಥ್ಯಹೊಂದಿವೆ. ಹೊಲ, ಗದ್ದೆ, ಕುರುಚಲು ಕಾಡುಗಳಲ್ಲಿದ್ದು; ಇಲಿ, ಹೆಗ್ಗಣ, ಹಾವು, ಹಕ್ಕಿಗಳನ್ನು ಬೇಟೆಯಾಡಿಕೊಂಡು ಎಂಟರಿಂದ ಹತ್ತು ವರ್ಷಗಳ ಅವಧಿಯವರೆಗೆ ಬದುಕಿರುತ್ತವೆ. ಇವುಗಳಲ್ಲೆ ಹಲವು ಜಾತಿಯ ಮುಂಗುಸಿಗಳು ಕಂಡು ಬರುವುದೇ ಈ ಸಂತತಿಗಳ ವಿಶೇಷ. ಈ ಪ್ರಾಣಿಗಳ ಇಂತಹ ಆವಾಸ, ಜೀವನ ಕ್ರಮಗಳ ಆಧಾರದ ಮೇಲೆಯೆ ಆವುಗಳ ಜೀವನ ಸಂಸ್ಕೃತಿಯೆಂದು ಗುರುತಿಸಲಾಗಿದೆ.

ಮುಂಗುಸಿಗಿಂತ ಭಿನ್ನವಾದ ಇನ್ನೊಂದು ಜಾತಿಯ ಶಕ್ತಿಯುತ ಪ್ರಾಣಿ ಉಡ. ಇದು ಮುಂಗುಸಿ ವಾಸಿಸುವ ಭೂ ಪ್ರದೇಶಗಳಲ್ಲೇ ವಾಸಿಸುತ್ತದೆ. ಇದನ್ನು ಕಂಡ ತೇಜಸ್ವಿ ಮಾನಿಟರ್ ಎಂದು ಕರೆದು "ಅನೇಕ ಮಿಲಿಯ ವರ್ಷಗಳ ಹಿಂದೆ ಇಡೀ ಭೂಮಂಡಲವನ್ನು ಈ ಜಾತಿಯ ಬೃಹದ್ಗಾತ್ರದ ಮಹೋರಗಗಳು ತುಂಬಿದ್ದವೆಂಬುದನ್ನು ಓದಿದ್ದ ನನಗೆ ಆವತ್ತು ಅವುಗಳ ಪ್ರತಿನಿಧಿಯನ್ನೇ ನೋಡಿದಷ್ಟು ಸಂತೋಷವಾಯ್ತು."8 ಎನ್ನುತ್ತಾರೆ. ಇವರು ಪ್ರಾಣಿ ಪಕ್ಷಿಗಳ ಅಧ್ಯಯನ ಮತ್ತು ಜೀವನಾನುಭವಗಳಿಂದ ಕಂಡುಕೊಂಡು ಪ್ರಕೃತಿಯ ಜೀವಿಗಳ ಜೀವನ ವಿಷಯಗಳನ್ನು ಸಾಹಿತ್ಯಾತ್ಮಕವಾಗಿ ತಮ್ಮ ಕಥೆ, ಕಾದಂಬರಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಉಡುವಿನ ಆಹಾರ ಜೀವನ ಕ್ರಮವನ್ನು ತಿಳಿಸಲು ತೇಜಸ್ವಿ ಬಳಸಿಕೊಂಡ ಸಾಹಿತ್ಯ ಶೈಲಿ, ವಿಷಯವನ್ನೊಳಗೊಂಡ ಒಂದು ತುಣುಕು.

"ಹಕ್ಕಿಗಳ ಮೊಟ್ಟೆ ಕದಿಯುತ್ತಿದ್ದ ಈ ಉಡ ಕದಿಯುತ್ತಿದ್ದಾಗಲೇ ಕಣ್ಣಿಗೆ ಬಿತ್ತು. ತಾಯಿ ಹಕ್ಕಿಯ ಚೀರಾಟವನ್ನು ದೂರದಿಂದಲೇ ಗಮನಿಸಿದ್ದ ನಾನು ಏನೋ ಆನಾಹುತ ಸಂಭವಿಸಿದೆ ಎಂದು ಕೊಂಡೇ ಅಲ್ಲಿಗೆ ಬಂದಿದ್ದೆ. ನನ್ನನ್ನು ನೋಡಿದ್ದೇ ತಡ ಆ ಉಡ ಹಕ್ಕಿಗೂಡಿದ್ದ ಗಿಡದ ಮೇಲಿಂದ ದೊಪ್ಪನೆ ಕೆಳಕ್ಕೆ ನೆಗೆದು ಸದ್ದು ಮಾಡುತ್ತಾ ಓಡಿಹೋಯ್ತು. ಆಗಲೇ ಅದಕ್ಕೆ ನಾನು ಮಾನೀಟರ್ ಎಂದು ಹೆಸರಿಟ್ಟಿದ್ದು.

ಈ ಮಾನೀಟರ್‌ನ ಆಹಾರ ಹಕ್ಕಿಗಳ ಮೊಟ್ಟೆ, ಮರಿಗಳಲ್ಲದೆ ಹುಳ ಹುಪ್ಪಟೆ ಗೆದ್ದಲು ಇತ್ಯಾದಿ. ಇರುವೆ ಇತ್ಯಾದಿಗಳೂ ಇರಬಹುದು. ಇವುಗಳಿಗಾಗಿಯೇ ಇದು ನಾವು ಗುಡಿಸಿ ರಾಶಿ ಮಾಡಿದ ತರಗೆಲೆಗಳನ್ನು ಕೆದಕಿ ಚೆಲ್ಲಾಪಿಲ್ಲಿ ಮಾಡುತ್ತಿದ್ದುದು."9

ಇಂತಹ ಆಹಾರ ಕ್ರಮದ ಉಡುವಿನ ಅಸಾಮಾನ್ಯ ಶಕ್ತಿ, ಹಿಡಿತದ ಬಗ್ಗೆ ಮಾರ ಉಡು ಮರಹತ್ತಿದಾಗ ಲೇಖಕರಿಗೆ "ಇನ್ನು ಅದನ್ನು ಇಳಿಸಕಾಗಲ್ಲ ಬಿಡಿ, ಏನಿದ್ರು ಮರ ಕಡಿದೇ ಅದನ್ನು ಬೀಳಿಸಬೇಕು". ..... ಉಡವ ಹಿಡ್ತಿ ಅಂತ ಗಾದೆ ಮಾತು ಕೇಳಿಲ್ವಾ ನೀವು? ಅದರ ಪ್ರಾಣ ಹೋದ್ರು ಅದು ಹಿಡ್ತ ಬಿಡೊಲ್ಲ."10 ಎನ್ನುತ್ತಾನೆ. ಈ ಮಾತುಗಳು ಉಡದ ವಿಶಿಷ್ಟ ಗುಣ ಸ್ವಭಾವಗಳಿಗೆ ಪುಷ್ಟಿ ನೀಡುವಲ್ಲಿ ಗಮನಾರ್ಹವಾಗಿವೆ. ಇವುಗಳ ಅವಸಾನಕ್ಕೆ ಮಾರನಂತ ಜನರಷ್ಟೆಯಲ್ಲ ಅದಕ್ಕೊಂದು ಚರಿತ್ರೆಯೇ ಇರುವುದನ್ನು ಲೇಖಕರು ಹೀಗೆ ನಿರೂಪಿಸುತ್ತಾರೆ.

"ಮಾರ ಉಡುವನ್ನು ತಿನ್ನುತ್ತಾರೆಂದೂ, ಅದರ ಮಾಂಸ ಪ್ರಪಂಚದಲ್ಲೇ ಸರ್ವಶ್ರೇಷ್ಠ ವಾದುದೆಂದು, ಹಿಂದೆ ಕಾಫಿ ತೋಟ ಮಾಡಿಕೊಂಡಿದ್ದ ಯುರೋಪಿಯನ್ ದೊರೆಗಳು ಸಹ ಅದನ್ನು ತಿನ್ನುತ್ತಿದ್ದರೆಂದೂ ಬಾಯಲ್ಲಿ ಎಂಜಲು ತುಂಬಿಕೊಂಡು ಹೊಗಳಿದ್ದ."11 ಜೊತೆಗೆ ಆಯುರ್ವೇದ ಔಷಧಿಗಾಗಿ ಇದರ ಎಣ್ಣೆ ತೆಗೆಯಲು ಬೇಟೆಯಾಡುತ್ತಾರೆ.

ವೀಸಲ್ ಕುಟುಂಬಕ್ಕೆ ಭಿನ್ನ ಜಾತಿಯ ನೀರು ನಾಯಿಗಳು. ಮರನಾಯಿಗಳು, ತರಕರಡಿ ಮುಂತಾದ ಪ್ರಾಣಿಗಳು ಸೇರುತ್ತವೆ. ನೀರು ನಾಯಿಗಳು ಬೆಟ್ಟಗುಡ್ಡಗಾಡುಗಳಲ್ಲಿ ಹರಿಯುವ ನದಿ ತೊರೆಗಳಲ್ಲಿ ವಾಸವಾಗಿದ್ದು ಜಲಚರಗಳಲ್ಲದೆ ಬಾತು, ನೀರುಹಕ್ಕಿಗಳನ್ನು ಬೇಟೆಯಾಡುತ್ತವೆ. ಇವು ಸಂಘಜೀವಿಯಾದರೆ, ಮರನಾಯಿಗಳು ಒಂಟಿಯಾಗಿ ಬೇಟೆಯಾಡುತ್ತವೆ. ಮರಗಳ ಕೊಂಬೆಯಲ್ಲಿ ಕುಳಿತ ಹಕ್ಕಿ, ಅಳಿಲು ಮುಂತಾದವುಗಳಲ್ಲದೆ ಹೆಜ್ಜೇನು ತಟ್ಟೆ, ಹೂವುಗಳ ಮಧು ಇವೆಲ್ಲ ಮರನಾಯಿ ಆಹಾರ. ಕೆಲವೊಮ್ಮೆ ಕಾಡುಕೋಳಿ, ಮೊಲಗಳನ್ನು ಬೇಟೆಯಾಡುವುದುಂಟು. ಹೀಗೆ ಇವುಗಳ ಜೀವನ ಕ್ರಮ ಒಂದೊಂದು ಪ್ರಾಣಿಯದು ಒಂದೊಂದು ರೀತಿ. ತರಕರಡಿ ಬಯಲು ಸೀಮೆಯ ಒಣಪ್ರದೇಶಗಳಲ್ಲಿ ಮಾತ್ರ ಕಂಡು ಬರುವ ಇದು ಚಿಕ್ಕ ಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ಪ್ರಾಣಿ ಬಿಲಗಳಲ್ಲಿ ವಾಸಿಸುತ್ತದೆ. ಇದರ ಜೀವನ ಕ್ರಮ ನಿಗೂಢವಾದಂತೆ ಇದು ಕಂಡು

ಬರುವುದು ಅಪರೂಪ. ಯಾಕೆಂದರೆ ಮಾನವನ ಬೇಟೆಗೆ, ದುಷ್ಟ ಮೃಗಗಳ ಬೇಟೆಗೆ ಬಲಿಯಾಗಿ ಇವೆಲ್ಲ ಈಗ ಪುಸ್ತಕದಲ್ಲಿ ಮಾತ್ರ ಉಳಿದಿವೆ. ಇವುಗಳ ಜೀವಿತಾವಧಿ ಕೂಡ ಎಂಟರಿಂದ ಹನ್ನೆರಡು ವರ್ಷ ಮಾತ್ರ.

ಕತ್ತೆ, ಕಿರುಬ, ನರಿ, ತೋಳ, ನಾಯಿ ಬಳಗಗಳೆಲ್ಲ ಬಯಲು ಸೀಮೆ, ಮುಳ್ಳುಗಾಡು ಬಂಡೆಗಳ ಮರೆಯಲ್ಲಿ ವಾಸ ಮಾಡುತ್ತವೆ. ಇವು ಆಡು, ಕುರಿ, ಕೋಳಿ, ಚಿಗರೆ ಮುಂತಾದ ಬಲಹೀನವಾದ ಮತ್ತು ಸತ್ತ ಪ್ರಾಣಿಗಳನ್ನು ತಿಂದು ಬದುಕಿ, ಸಂಘ ಜೀವಿಗಳಾಗಿ ಹೆಣ್ಣು ಗಂಡು ಜೊತೆಯಾಗಿರುತ್ತವೆ. ಕತ್ತೆ, ಕಿರುಬ, ನರಿ ಮರಿಗಳ ಪೋಷಣೆ ಈ ಹೆಣ್ಣು ಪ್ರಾಣಿಗಳದ್ದೇ. ಆದರೆ ನಾಯಿ, ತೋಳಗಳದ್ದೂ ಅನ್ಯೋನ್ಯ ಕೌಟುಂಬಿಕ ಜೀವನ ಕ್ರಮ. ಮರಿಗಳ ಪಾಲನೆ ಹೆಣ್ಣು ಗಂಡುಗಳೆರಡು ಸೇರಿ ನಿರ್ವಹಿಸುತ್ತವೆ. ಇವುಗಳ ಆವಾಸ ಸ್ಥಳಗಳನ್ನು ಮಾನವ ಕೃಷಿ ಭೂಮಿಯನ್ನಾಗಿ ಮಾಡಿ ಕಲ್ಲು ಬಂಡೆಗಳು ಇಲ್ಲದೆ ಮಾನವನೆ ಬೇಟೆಯಾಡಿ ನಾಶವಾಗುತ್ತಿವೆ. ಇವುಗಳ ಕಾಲಾವಧಿಯು ಹತ್ತರಿಂದ ಹದಿನೈದು ವರ್ಷ ಮಾತ್ರ.

ಕರಡಿಯಲ್ಲಿ ಮೂರು ನಾಲ್ಕು ಜಾತಿಗಳಿವೆ. ಇದು ಎಲ್ಲತರದ ಆವಾಸ ಸ್ಥಾನಗಳಲ್ಲಿ ಹೊಂದಿಕೊಂಡು ಬದುಕುತ್ತದೆ. ಇದಕ್ಕೆ ಘ್ರಾಣಶಕ್ತಿ ತೀವ್ರವಾಗಿದ್ದರೂ, ದೃಷ್ಠಿ ಮತ್ತು ಶ್ರವಣ ಶಕ್ತಿ ತೀರ ಮಂದ. ಆಹಾರ ಮತ್ತು ಜೀವನ ಕ್ರಮಗಳಿಗೆ ಕರಡಿಗಳು ಎಲ್ಲ ರೀತಿಯಲ್ಲೂ ಸನ್ನದ್ಧವಾಗಿವೆ. ಇವು ಆಹಾರಕ್ಕಾಗಿ ಹಣ್ಣು, ಗೆಡ್ಡೆ, ಕಾಯಿ, ಹೂವು, ಜೇನು ಮುಂತಾದವನ್ನು ವಾಸನೆಯಿಂದಲೇ ಅರಸುತ್ತವೆ. ಹುತ್ತಗಳೊಳಗಿನ ಗೆದ್ದಲು ಹುಳುಗಳನ್ನು ಅಗೆದು ತಿನ್ನಬಲ್ಲವು. ಆಕಸ್ಮಾತ್ ಸಿಕ್ಕ ಚಿಕ್ಕ ಪ್ರಾಣಿಗಳನ್ನು ಕೊಂದು ತಿನ್ನುವಂತಹ ಶಕ್ತಿ ಮತ್ತು ತುಟಿ, ಹಲ್ಲು, ಬಾಯಿ ಹಾಗೂ ದೇಹ ರಚನೆಯನ್ನು ಹೊಂದಿವೆ. ಹಾಗಾಗಿ ಕರಡಿಗಳು ಸಸ್ಯಾಹಾರಿಗಳಾಗಿರುವಂತೆ ಮಾಂಸಾಹಾರಿಗಳೂ ಆಗಿವೆ. ಇವು ಮರಿಗಳ ರಕ್ಷಣೆಗೆ ಉಗ್ರ ಸ್ವರೂಪ ತಾಳುವುದುಂಟು. ಕಾಡು ಪ್ರಾಣಿಗಳ ಬೇಟೆಯಿಂದ ತಕ್ಕಮಟ್ಟಿಗೆ ಸುರಕ್ಷಿತವಾದರೂ ಮಾನವನಿಂದ ಇದಕ್ಕೆ ರಕ್ಷಣೆಯಿಲ್ಲ. ಪ್ರಕೃತಿಯಲ್ಲಿ ಹತ್ತರಿಂದ ಹನ್ನೆರಡು ವರ್ಷ ಮಾತ್ರ ಜೀವಿಸಬಲ್ಲದು. ಈ ಎಲ್ಲ ಹಂತಗಳು ಕರಡಿಯ ಜೀವನ ಸಂಸ್ಕೃತಿಯ ಗುಣ, ಸ್ವಭಾವವನ್ನೊಳಗೊಂಡ ದಿನಚರಿಯಾಗಿದೆ.

ಆನೆ, ಕಾಟಿಯ ಕೆಲವು ಜಾತಿಗಳು ಮತ್ತು ಜಿಂಕೆ ಜಾತಿಗಳಲ್ಲಿ ಸಾರಗ, ಕಡವೆ, ಬರ್ಕ, ಚಿಗರೆ, ಹುಲ್ಲೆ, ಕಾಡು ಮರಿ, ಬೆಟ್ಟಾಡು, ಮರವಿ, ಎರಳೆ ಮುಂತಾದವು ಅಪ್ಪಟ ಸಸ್ಯಾಹಾರಿಗಳು. ಆನೆ, ಕಾಟಿ ಜಾತಿಗಳು ಹುಲ್ಲು, ಎಳೆಬಿದಿರು, ಬಾಳೆ, ಮರಗಳ ರೆಂಬೆ ಕೊಂಬೆಗಳನ್ನು ತಿಂದು ಬದುಕುತ್ತವೆ. ಗಂಡಾನೆ ಮತ್ತು ಕಾಟಿಗೂಳಿಗಳು ಒಂಟಿಯಾಗಿದ್ದರೂ ಬೆದೆಗೆ ಬಂದಾಗ ಹೆಣ್ಣುಗಳನ್ನು ಅರಸಿ ಗುಂಪುಗೂಡುತ್ತವೆ. ಆಹಾರಕ್ಕೆ ಗುಂಪಾಗಿದ್ದರೂ ಮರಿಗಳ ರಕ್ಷಣೆ, ಪೋಷಣೆ ಹೆಣ್ಣುಗಳದ್ದೆ. ಅಭಯಾರಣ್ಯಗಳಲ್ಲಿ ಆವಾಸವಾಗಿರುವ ಇವು ಹದಿನೆಂಟರಿಂದ ಇಪ್ಪತ್ತು ವರ್ಷ ಜೀವಿಸಿರುತ್ತವೆ. ಈ ಪ್ರಾಣಿಗಳ ಜೀವನ ಕ್ರಮವನ್ನೆ 'ಪ್ರಾಣಿ ಸಂಸ್ಕೃತಿ' ಎಂಬುದನ್ನು ಈಗಾಗಲೆ ಮೇಲೆ ಹೇಳಿದ್ದೇನೆ. ಆದರೆ ಬೆಲೆಬಾಳುವ ಇವುಗಳ ದಂತಕ್ಕಾಗಿ ಮಾನವ ಬೇಟೆಯಾಡಿ ಕೊಲ್ಲುತ್ತಿದ್ದಾನೆ ಎನ್ನುವುದು ವಿಶಾದನೀಯ ಸಂಗತಿ.

ಜಿಂಕೆ ಜಾತಿಯ ಪ್ರಾಣಿಗಳಲ್ಲಿ ಸೌಂದರ್ಯಕ್ಕೆ ಹೆಸರುವಾಸಿಗಳಾಗಿ, ಎಲೆಯುದುರುವ ಕಾಡು ಮತ್ತು ಮುಳ್ಳುಗಾಡು, ಬಯಲು ಸೀಮೆಗಳಲ್ಲಿ ಆವಾಸವಾಗಿವೆ. ಇವು ಹುಲ್ಲು, ಎಲೆ, ಚಿಗುರು, ಕಾಯಿ, ಹಣ್ಣು ಮುಂತಾದ ಆಹಾರಗಳನ್ನು ಅರಸಿ ಗುಂಪು ಗುಂಪಾಗಿ ಸಂಚರಿಸುತ್ತವೆ. ತಮ್ಮ ವೈರಿಗಳ ರಕ್ಷಣೆಯಿಂದ ಮಕ್ಕಳನ್ನು ಪೋಷಿಸುವಲ್ಲಿ ಹೆಣ್ಣು ಜಿಂಕೆಗಳು ಕಾಳಜಿ ವಹಿಸುತ್ತವೆ. ಎಂಟು ಹತ್ತು ವರ್ಷ ಬದುಕಿರುವ ಇವು ಮಾನವ ಮತ್ತು ದುಷ್ಟ ಪ್ರಾಣಿಗಳ ಬೇಟೆಯಿಂದ ತಪ್ಪಿಸಿ ಕೊಂಡು ತಮ್ಮ ಜೀವಿತಾವಧಿಯನ್ನು ಪೂರ್ಣಗೊಳಿಸುವುದು ದುಸ್ಸಾಧ್ಯವಾಗಿದೆ.

ಇಂತಹ ಪ್ರಾಣಿಗಳಲ್ಲದೆ ಹಾವು ಕಪ್ಪೆಗಳಂತಹ ಉಭಯವಾಸಿ ಮತ್ತು ಮೀನು, ಮೊಸಳೆಗಳಂತಹ ಜಲಚರ ಪ್ರಾಣಿಗಳು ತಮ್ಮ ತಮ್ಮ ಆಹಾರ, ಆವಾಸ, ಜೀವನವನ್ನು ವಾತಾರಣದ ಪರಿಸರಕ್ಕೆ ಅನುಗುಣವಾಗಿ ಹೊಂದಿಸಿಕೊಂಡಿವೆ. ಇವುಗಳ ವಿಷಯದ ಬಗ್ಗೆ ತಕ್ಕಮಟ್ಟಿಗೆ ಪ್ರಾಣಿಶಾಸ್ತ್ರವನ್ನು ಬಿಟ್ಟರೆ ಬೇರೆಲ್ಲೂ ದೊರೆಯುವುದಿಲ್ಲ. ಆದರೆ ಈಗೀಗ ತೇಜಸ್ವಿಯಂತಹ ಲೇಖಕರು ಪ್ರಕೃತಿಯ ಪ್ರಾಣಿಗಳನ್ನೆಲ್ಲ ಸಾಹಿತ್ಯದ ಮುಖ್ಯ ವಿಷಯ ವಸ್ತುವನ್ನಾಗಿ ಚಿತ್ರಿಸುತ್ತಿರುವುದರಿಂದ ಸಾಹಿತ್ಯ ತನ್ನ ಅನನ್ಯತೆಯಿಂದ ಅರಳುತ್ತಿದೆ. ಕಪ್ಪೆ ಹಾವಿಗೆ, ಹಾವು ಕೆಂಬೂತಕ್ಕೆ ಆಹಾರವಾಗುವ ಪರಿಯನ್ನು ಕಂಡ ತೇಜಸ್ವಿ, ಕಥೆಗಳ ರೂಪದಲ್ಲಿ ಕಟ್ಟಿಕೊಡುವ ಬಗೆ ಇದು:

"ನೀರು ಹಾವೊಂದು ದೊಡ್ಡ ಡೊಂಗರು ಕಪ್ಪೆಯನ್ನು ಹಿಡಿದು ನುಂಗಲು ಪ್ರಯಾಸಪಡುತ್ತಿತ್ತು. ತನ್ನ ಬಾಯಿಯ ಉದ್ದಗಲಗಳ ಪರಿವೆ ಇಲ್ಲದ ಆ ಹಾವು ಸುಮಾರು ಒಂದು ಕೆ.ಜಿ ತೂಕದ ಈ ಧಡಿಯ ಕಪ್ಪೆಯನ್ನು ಹಿಡಿದಿತ್ತು. ಕಪ್ಪೆ ಗಾಳಿಯನ್ನು ನುಂಗಿ ಹೊಟ್ಟೆಯನ್ನು ಫುಟ್‌ಬಾಲ್ ರೀತಿ ಊದಿಸಿ ನೀರು ಹಾವು ಅದನ್ನು ನುಂಗಲಸಾಧ್ಯವಾಗುವಂತೆ ಮಾಡಿ ಅಯ್ಯೋಯ್ಯೋ ಎಂದು ಒಂದೇ ಸಮ ಕೂಗುತ್ತಿತ್ತು"12

"ಕಪ್ಪೆಯನ್ನು ಸಾಹಸದಿಂದ ನುಂಗಿ ಸುಧಾರಿಸಿಕೊಳ್ಳುತ್ತಿದ್ದ ಹಾವು ಈಗ ನಿಸ್ಸಹಾಯಕವಾಗಿ ಕೆಂಬೂತಗಳ ಕೈಗೆ ಸಿಕ್ಕಿಕೊಂಡಿತು. ಹೊಟ್ಟೆಯೊಳಗಿನ ತುತ್ತೆ ಈಗ ಅದಕ್ಕೆ ಪ್ರಾಣಕ್ಕೆ ಕುತ್ತಾಯ್ತು. ಕೆಂಬೂತಗಳನ್ನು ನೋಡುತ್ತಲೂ ತನ್ನೆಲ್ಲಾ ಶಕ್ತಿಯನ್ನೂ ಕ್ರೋಢೀಕರಿಸಿ ಹಳ್ಳದ ಕಡೆಗೆ ತೆವಳಿ ತಪ್ಪಿಸಿಕೊಳ್ಳಲು ಹಾವು ಪ್ರಯತ್ನಿಸಿತು. ಆದರೆ ಹೊಟ್ಟೆಯೊಳಗೆ ಮೂಟೆಯಂತೆ ಕುಳಿತಿದ್ದ ಕಪ್ಪೆ ದೆಸೆಯಿಂದ ಅದಕ್ಕೆ ಒಂದು ಇಂಚು ಮುಂದೆ ಹೋಗಲಾಗಲಿಲ್ಲ. ಕೊನೆಗೆ ಕೆಂಬೂತಗಳತ್ತ ಕುತ್ತಿಗೆ ಅಲ್ಲಾಡಿಸಿ ಕಚ್ಚುವ ಹಾಗೆ ನಟಿಸಿತು. ಆದರೆ ಕೆಂಬೂತಗಳು ಇವ್ಯಾವುದಕ್ಕೂ ಸೊಪ್ಪು ಹಾಕಲಿಲ್ಲ.

ಆದರೆ ಕೆಂಬೂತಗಳೇನು ಹಾವನ್ನು ಕುಕ್ಕಿ ಕೊಲ್ಲುವ ತೊಂದರೆ ತಕೊಳ್ಳಲಿಲ್ಲ ಅದರ ಬದಲು ಮುಂದುವರಿಯಲಾರದೆ ಸಿಕ್ಕಿಬಿದ್ದಿದ್ದ ಹಾವಿನ ಬಾಲದ ಬಳಿಗೆ ಹೋಗಿ ಚೂರು ಚೂರನ್ನೇ ಚಕ್ಕುಲಿ ಕೋಡುಬಳೆ ಮುರಿದು ತಿನ್ನುವಂತೆ ತುಂಡು ತುಂಡು ಮಾಡಿ ತಿನ್ನಲಾರಂಭಿಸಿದವು. ಬಾಲ ಕತ್ತರಿಸುತ್ತಿದ್ದ ನೋವಿಗೋ ಸಿಟ್ಟಿಗೋ ಹಾವು ತನ್ನೆದುರಿದ್ದ ಕಲ್ಲು ಕಡ್ಡಿಗಳನ್ನೆಲ್ಲಾ ಕಚ್ಚುತ್ತಿತ್ತು. ಆದರೆ ಕೆಂಬೂತಗಳು ಇವ್ಯಾವುದನ್ನು ಪರಿಗಣಿಸದೆ ಬಾಲದ ಬಳಿ ಭೋಜನ ಮುಂದುವರಿಸಿದವು."13

ಇಂತಹ ಆಹಾರ ಸರಪಳಿಯಂತೆ ಪ್ರಾಣಿಗಳ ಬೇಟೆ, ಬೇಟೆಗೆ ಸಿಕ್ಕುವ ಪ್ರಾಣಿಗಳು ತಮ್ಮ ರಕ್ಷಣೆಗಾಗಿ ಜಾಗೃತವಾಗುವ ಅಂಗ ರಚನೆ, ಮತ್ತು ಅವುಗಳ ಕಾರ್ಯ, ಭಿನ್ನರೂಪದ ವಿಶಿಷ್ಟ ರೀತಿಯ ಗುಣ ಸ್ವಭಾವ, ಜೀವನ ಕ್ರಮ, ಮುಂತಾದವುಗಳನ್ನು ತೇಜಸ್ವಿ ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಅಡಕಗೊಳಿಸಿದ್ದಾರೆ. ಇವೆಲ್ಲ ಪ್ರಾಣಿ ಸಂಸ್ಕೃತಿಯ ಉಲ್ಲೇಖಗಳು. ಹಾಗಾಗಿ ಕನ್ನಡ ಸಾಹಿತ್ಯಕ್ಕೆ ಇವರು ವಿಶಿಷ್ಟ ಮಾದರಿಯ ಲೇಖಕರಾಗಿದ್ದಾರೆ.

ಪ್ರಕೃತಿಯಲ್ಲಿ ಆಹಾರ ಸರಪಳಿಯೇ ಸಂಕೀರ್ಣವಾದುದ್ದು. ಈ ಸರಪಳಿಯ ಕೊಂಡಿಗಳಾಗಿ ಬೆಳೆದಿರುವ ಆಹಾರ ಕ್ರಮವಿದು. ಸಸ್ಯ, ಕೀಟ, ಕಪ್ಪೆ, ಹಾವು, ಹದ್ದು, ಗರುಡಪಕ್ಷಿ, ಕಬ್ಬೆಕ್ಕು, ಕೆನ್ನಾಯಿ.....ಚಿರತೆ, ಹುಲಿ..... ಪ್ರಾಣಿಗಳ ಈ ಆಹಾರ ಸರಪಳಿಯಲ್ಲಿ ಹುಲಿ ಮೇಲ್‌ಸ್ಥರದಲ್ಲಿದ್ದು ಅದು ಪ್ರಾಣಿ ರಾಜನೆಂಬ ಬಿರುದಿಗೆ ಪಾತ್ರವಾಗಿದೆ. ಜೊತೆಗೆ ಆಹಾರ ಕ್ರಮ ಒಂದೇ ಸ್ಥರದಲ್ಲಿ ರೂಪುಗೊಳ್ಳದೆ, ಒಂದೇ ಕೇಂದ್ರವುಳ್ಳ ಹಲವು ಮಾದರಿಯಲ್ಲಿ ಜೀವಿಗಳ ಆಹಾರ ಕ್ರಮ ರೂಪುಗೊಂಡಿರುವುದನ್ನು ವಿಶೇಷವಾಗಿ ಗಮನಿಸಬೇಕು. ಯಾಕೆಂದರೆ ಒಂದೇ ತರದ ಪ್ರಾಣಿಗಳು ಸಸ್ಯಹಾರಿ, ಮಾಂಸಾಹಾರಿಗಳೂ ಆಗಿರುವಂತೆ ಕೆಲವು ಪ್ರಾಣಿಗಳು ಕೇವಲ ಸಸ್ಯಗಳನ್ನು ತಿಂದರೆ ಇನ್ನು ಕೆಲವು ಮಾಂಸಾಹಾರಿಗಳೇ ಆಗಿವೆ. ಆದ್ದರಿಂದ ಕವಲೊಡೆದ ಆಹಾರ ಸರಪಳಿಯಾಗಿ ರೂಪುಗೊಂಡಿದೆ. ಇದರಲ್ಲಿ ಭೂಚರ, ವಾಯುಚರ, ಜಲಚರ ಪ್ರಾಣಿಗಳಾದ ಸರ್ವಜೀವಿಗಳು ಸೇರಲ್ಪಟ್ಟಿವೆ. ಈ ಎಲ್ಲ ಪ್ರಾಣಿ ಸಂಕುಲಗಳ ವಾಸಸ್ಥಳ, ಆಹಾರ, ಜೀವನ ಕ್ರಮ ಇವೆಲ್ಲ ಪ್ರಾಣಿಗಳ ಜೀವನ ಸಂಸ್ಕೃತಿಯೇ ಆಗಿದೆ. ಈ ಮಾನವೇತರ ಜೀವ ಸಂಸ್ಕೃತಿಗೆ ಲಗ್ಗೆ ಹಾಕಿದ ಮಾನವ ಅವುಗಳ ಸ್ವತಂತ್ರ ಬದುಕನ್ನು ಭಂಗಗೊಳಿಸಿದ್ದಾನೆ. ಆದ್ದರಿಂದಲೇ ಇವನು ತನ್ನ ಸಂಸ್ಕೃತಿಯನ್ನು ಹೊರತುಪಡಿಸಿ, ಉಳಿದ ಜೀವಿಗಳ ಜೀವನ ಸಂಸ್ಕೃತಿ ಇದೆ ಎಂಬುದನ್ನು ಪರಿಗಣಿಸಿಯೇ ಇಲ್ಲ. ಇಲ್ಲಿ ಮಾನವನ ಜೀವನಾನುಭವಕ್ಕೆ ಪ್ರಕೃತಿಯ ಎಲ್ಲ ಜೀವಿಗಳು ದಕ್ಕುತ್ತವೆ. ಇವನ ಆ ಅನುಭವವೇ ಸಾಹಿತ್ಯ ಕೃತಿಗಳಲ್ಲಿರುವುದು. ಈ ಯಾವ ಸಾಹಿತ್ಯವೂ ಪ್ರಮುಖವಾಗಿ ಸಸ್ಯ, ಪ್ರಾಣಿ, ಪಕ್ಷಿ, ಮುಂತಾದ ಜೀವ ಸಂಸ್ಕೃತಿಯ ಸವಿವರ, ಚರ್ಚೆ. ವಿಶ್ಲೇಷಣೆಗಳನ್ನು ಮಾಡಲು ಸಾಧ್ಯವಾಗಿಲ್ಲ. ಅದ್ದರಿಂದಲೇ ಜೀವ ಸಂಸ್ಕೃತಿಯ ಪರಿಸರದ ಬಗ್ಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ಮೇಲೆ ಪರಿಶೀಲಿಸಲಾಗಿದೆ. ಇಂತಹ ಮಾತು ಎಷ್ಟೆ ಸತ್ಯವಾಗಿದ್ದರೂ, ಅದಕ್ಕೆ ಪೂರಕ ಪರಿವರ್ತನೆಯ ನಡವಳಿಕೆಯ ಕಾರ್ಯವನ್ನು ಮಾತ್ರ ಮಾಡಲಾಗದಿರುವುದು ವಿಪರ್ಯಾಸ ಸಂಗತಿ. ಇಂತಹ ಸಂಸ್ಕೃತಿಯ ಸಂಬಂಧದ ಸಂಕೀರ್ಣತೆಗೆ ಅಲ್ಲಮಪ್ರಭುವಿನ ವ್ಯಾಖ್ಯಾನವಿದು:

"ಜೀವನ ತಪ್ಪಿಸಿ ಜೀವಿಸಬಾರದಾರಿಗೆಯೂ
ಅಹಿಂಸಾ ಪರಮೋ ಧರ್ಮ ಎಂಬ ಶ್ರಾವಕರ ನಾನಾರನೂ ಕಾಣೆ
ಪೃಥ್ವೀ ಬೀಜಂ ತಥಾ ಮಾಂಸಂ ಆಪ್ ದ್ರವ್ಯಂ ಸುರಾಮಯಂ
ಆತ್ಮಾ ಜೀವ ಸಮಯುಕ್ತಂ ಜೀವಂ ಜೀವೇನ ಭಕ್ಷಯೇತ್!
ಇಂತೆಂದುದಾಗಿ ಲಿಂಗಾರ್ಪಿತ ಶುದ್ಧಂ
ಮಿಕ್ಕುದು ಜೀವಮಯ ಗುಹೇಶ್ವರ."14

ಈ ಮಾತು ಇಡೀ ಜೀವಿಗಳ ಜೀವನ ಸಂಸ್ಕೃತಿ, ಧರ್ಮ, ಗುಣವನ್ನೆಲ್ಲ ಒಳಗೊಂಡಿದೆ. ಪ್ರಕೃತಿ ಧರ್ಮದಲ್ಲಿ ಒಂದನ್ನು ತಿಂದು ಒಂದು ಬದುಕುವುದೇ ಸ್ವಾಭಾವಿಕ ಗುಣ. ಇದೇ ಭೂಮಿ ಮೇಲಿನ ಜೀವಿಗಳ ಜೀವನ ಸಂಸ್ಕೃತಿ. ಅಹಿಂಸಾ ಪರಮೋಧರ್ಮ ಎಂಬ ಮಾತು ಪ್ರಕೃತಿಯ ಯಾವ ಜೀವಕ್ಕೂ ಒಗ್ಗಲಾರದು. ಹೀಗಿರುವುದೆ ಜೀವಿಗಳ ಜೀವನ ಧರ್ಮ. ಇದರಿಂದಲೇ ಭೂಮಿ ಜೀವಿಗಳ ಜೀವನಕ್ಕೆ ಬೇಕಾಗುವ ಬೀಜ,

ಮಾಂಸ, ದ್ರವ್ಯಂಶಗಳ ಅಮೃತ ತುಂಬಿಕೊಂಡು ಜೀವಮಯವಾಗಿದೆ ಎಂಬುದು ಅಲ್ಲಮನ ಸ್ಪಷ್ಟ ನಿಲುವು. ಇಂತಹ ಪ್ರಾಣಿಗಳ ಗುಣ, ಸ್ವಭಾವ ನಡುವಳಿಕೆಯ ಜೀವನ ಕ್ರಮಗಳು, ಅಧ್ಯಯನಕಾರರ ಮತ್ತು ಓದುಗರ ಗಮನ ಸೆಳೆಯುತ್ತವೆ.

3, ಪ್ರಾಣಿಗಳ ಗುಣ ಸ್ವಭಾವ ನಡವಳಿಕೆಗಳು:

ಕಾಡು ಪ್ರಾಣಿ, ಪಕ್ಷಿ, ಕೀಟ ಮುಂತಾದ ಭೂಚರ, ಮೀನು ಮೊಸಳೆ ಮುಂತಾದ ಜಲಚರ ಪ್ರಕೃತಿ ಜೀವಿಗಳು ಮಾನವನ ಪೂರ್ವ ಜೀವಿಗಳು. ಇವುಗಳಿಗೆ ತಮ್ಮದೇ ಆದ ನಿಸರ್ಗಸಂಸ್ಕೃತಿ, ಜೀವನ, ಇತಿಹಾಸಗಳಿವೆ. ಇವುಗಳನ್ನೆಲ್ಲ ಮಾನವ ತನ್ನ ಚಿಂತನಶಕ್ತಿ, ಜ್ಞಾನ, ಭಾಷೆ ಮುಂತಾದ ವೈಶಿಷ್ಟ್ಯ ಗುಣಗಳ ಮೂಕ ಜೀವಿಗಳ ಸಂಸ್ಕೃತಿಯನ್ನು ದಕ್ಕಿಸಿಕೊಂಡ. ನಂತರ ಅವುಗಳ ಸಂಸ್ಕೃತಿಗೆ ಇವರ ಗುಣ ಬಣ್ಣವನ್ನು ಲೇಪಿಸಿ ಒಬ್ಬರಿಂದೊಬ್ಬರಿಗೆ ಬಿತ್ತುತ್ತ ಬಂದು ಕೊನೆಗೆ ಮಾನವ ಸಂಸ್ಕೃತಿಯನ್ನಾಗಿ ಮಾಡಿಕೊಂಡು ಅದನ್ನು ಧಾರ್ಮಿಕ ಚೌಕಟ್ಟಿನಲ್ಲಿಟ್ಟರು. ಇದರ ರಕ್ಷಣೆಗಾಗಿ ಧರ್ಮಪ್ರವರ್ತಕರು 'ಧರ್ಮೋರಕ್ಷತಿಃ ರಕ್ಷತಃ' ಧರ್ಮವನ್ನು ಯಾರು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ ಎಂಬ ಮಾನವ ಕೇಂದ್ರಿತ ತತ್ವ, ಮಂತ್ರ ಕವಚವನ್ನು ತೊಡಿಸಿದ್ದಾರೆ. ಆದಿ ಮಾನವನಿಂದ ಆಧುನಿಕ ಮಾನವನವರೆಗೆ ಅವನ ಹುಟ್ಟು, ಬೆಳವಣಿಗೆ, ಭಾಷೆ, ಸಂಸ್ಕೃತಿ ಮುಂತಾದವನ್ನೆಲ್ಲಾ ಶೋಧಿಸುತ್ತಾ ಹೋದರೆ ಇದೆಲ್ಲ ಸ್ಪಷ್ಟವಾಗುತ್ತದೆ. ಮಾನವ ತನ್ನ ಭಾಷೆಯನ್ನು ಹರಿಯುವ ನೀರಿನಿಂದ, ಪ್ರಾಣಿ ಪಕ್ಷಿಗಳ ಧ್ವನಿಯಿಂದ ಅನುಕರಿಸಿ ಕಲಿತಿದ್ದಾನೆ ಎಂದು ಭಾಷಾ ವಿಜ್ಞಾನದ ಅನುಕರಣ ತರಹದ ಸಿದ್ಧಾಂತ ಹೇಳುತ್ತದೆ. ಇದೇ ಮನುಷ್ಯ, ಪ್ರಕೃತಿಯ ಜೀವ ತತ್ವಾಂಶಗಳುಳ್ಳ 'ಜೀವ ಸಂಸ್ಕೃತಿ' ಯನ್ನು ಕಲಿತು ಮಾರ್ಪಡಿಸಿಕೊಂಡು ಮಾನವಕೇಂದ್ರಿತ 'ಮಾನವ ಸಂಸ್ಕೃತಿ' ಯನ್ನಾಗಿ ಮಾಡಿಕೊಂಡು ಅದರಿಂದ ಮಾನವತತ್ವ, ಮಾವನಧರ್ಮ, ಮಾನವೀಯತೆ ಹೀಗೆ ಏನೆಲ್ಲ ಕರೆದು ಎಲ್ಲವನ್ನು ಮಾನವಮಯ ಮಾಡಿಕೊಂಡಿದ್ದಾನೆ. ಆದರೆ ಈ ಮಾನವಮಯಕ್ಕೆ ಸಂಪೂರ್ಣ ಒಗ್ಗದ ಜನಪದರು, ಬುಡಕಟ್ಟು ಜನರು ಪ್ರಕೃತಿಯ ಜೀವ ಸಂಸ್ಕೃತಿಯನ್ನು ಅವರ ಆಚರಣೆ, ಸಂಪ್ರದಾಯ ನಡವಳಿಕೆಗಳ ಮೂಲಕ ಇನ್ನೂ ಉಳಿಸಿಕೊಂಡಿದ್ದಾರೆ.

ಒಟ್ಟಾರೆಯಾಗಿ ಮೂಲತಃ ಮಾನವ ಪ್ರಕೃತಿ, ಪ್ರಾಣಿಗಳಿಂದ ಅವನೆಲ್ಲ ಗುಣಗಳನ್ನು ಕಲಿತ್ತಿದ್ದಾನೆಯೇ ಹೊರತು, ಇವನಿಂದ ಪ್ರಾಣಿಗಳು ಕಲಿತಿರುವ ಗುಣಗಳು ಯಾವುದೂ ಇಲ್ಲ. ಇದ್ದರೆ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳಲು ಆ ಪ್ರಾಣಿಗಳಿಗೆ ಹಿಂಸೆ, ಶಿಕ್ಷೆ, ಒತ್ತಡಗಳನ್ನು ಹೇರಿ ಕಲಿಸಿರುವವಾಗಿವೆ. ಈ ಎಲ್ಲ ಮಾತಿಗೆ ಪ್ರಾಣಿಗಳ ಸ್ವಾಭಾವಿಕ ಗುಣ ಸ್ವಭಾವಗಳು ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಕೆಲವು ಮಾದರಿಗಳನ್ನು ಗಮನಿಸಲಾಗಿದೆ. ವಾಸ್ತವವಾಗಿ ಮಾನವನ ಸಾಕು ಪ್ರಾಣಿಗಳು ಪ್ರಜ್ಞಾವಂತಿಕೆಯ ಸೂಕ್ಷ್ಮಗ್ರಹಿಕೆಯುಳ್ಳವಾಗಿರುವುದು ಸಾಮಾನ್ಯ. ಅವುಗಳಲ್ಲಿ ನಾಯಿ ವಿಶಿಷ್ಟವಾದದ್ದು. ಇಂತಹ ನಾಯಿ 'ಕಿವಿ' ಯನ್ನು ಕುರಿತು ಹೇಳಿದ ತೇಜಸ್ವಿಯವರ ಮಾತಿದು.

"ಕಿವಿ ನನ್ನ ಬಳಿ ಇದ್ದ ಒಂದು ಸ್ಪಾನಿಯಲ್ ಜಾತಿಯ ಬಿಳಿಯ ನಾಯಿ. ಮನೆ ಕಾಯುವುದರಿಂದ ಹಿಡಿದು ಶಿಕಾರಿಯವರೆಗೆ ಎಲ್ಲದರಲ್ಲೂ ಅದ್ವಿತೀಯನಾಗಿದ್ದ. ಅದರ ಗುಣ ಬುದ್ಧಿವಂತಿಕೆಗಳನ್ನು ನೋಡಿ ಅನೇಕ ಬಾರಿ ನಾನು ಆಶ್ಚರ್ಯಪಡುತ್ತಿದ್ದೆ. ಕೇವಲ ಜಾನಪದ ಗೀತೆಗಳಲ್ಲಿ ದಂತ ಕತೆಗಳಲ್ಲಿ ಮಾತ್ರ ಆ ರೀತಿಯ ನಾಯಿ ಇರುತ್ತದೆಂದು ಕೇಳಿದ್ದೆ. ಕಿವಿಯನ್ನು ಸಾಕಿದ ಆನಂತರ ಅದನ್ನು ಸಾಕ್ಷಾತ್ತಾಗಿ ನೋಡಿದಂತಾಗಿತ್ತು"15 ಲೇಖಕರು ಕಿವಿಯನ್ನು 'ಮನೆ ಕಾಯುವುದರಿಂದ ಶಿಕಾರಿಯವರೆಗೆ ಅದ್ವಿತೀಯನಾಗಿದ್ದ', ಎನ್ನುವ ಮಾತಿಗೆ ಅವರ ಕಥೆ, ಕಾದಂಬರಿಗಳಲ್ಲಿ ಬರುವ ಕಿವಿಯ ಜಾಣ್ಮೆ, ಚುರುಕುತನ, ಸಾಹಸ, ಸಾಧನೆಗಳ ಕ್ರಿಯಾ ಚಟುವಟಿಕೆಗಳೇ ಸಾಕ್ಷಿಯಾಗಿವೆ. ಇದೇ ನಾಯಿಯನ್ನು ಸಮಾಜವಾದ ಮತ್ತು ಕಮ್ಯುನಿಷ್ಟ್ಧೋರಣೆಯನ್ನು ನಿರೂಪಿಸಲು ಬಳಸಿಕೊಂಡಿದ್ದಾರೆ. ಅದರ ತುಣುಕು.

"ಕಿವಿ ಮನುಷ್ಯರನ್ನು ಕಂಡರೆ ಅಷ್ಟೊಂದೇನೂ ಗಲಾಟೆ ಮಾಡುತ್ತಿರಲಿಲ್ಲ. ಅದೂ ನಾಗರಿಕ ಉಡುಪಿನಲ್ಲಿ ಯಾರಾದರೂ ಬಂದರೆ ಸುಮ್ಮನೆ ಗುರುಗುಟ್ಟುತ್ತಿತ್ತೇ ವಿನಃ ತುಂಬಾ ಗಲಾಟೆ ಮಾಡುತ್ತಿರಲಿಲ್ಲ. ಅದಕ್ಕೆ ಕಳ್ಳರಿಗೂ ಸುಳ್ಳರಿಗೂ, ಒಳ್ಳೆಯವರಿಗೂ ವ್ಯತ್ಯಾಸ ಗೊತ್ತಿತ್ತೋ, ಇಲ್ಲವೋ ಸಂಶಯ. ಆದರೆ ಬಡವರಿಗೂ, ಶ್ರೀಮಂತರಿಗೂ ಇರುವ ವ್ಯತ್ಯಾಸ ಅದಕ್ಕೆ ಚೆನ್ನಾಗಿ ಗೊತ್ತಿತ್ತು. ಸೂಟು ಪ್ಯಾಂಟು ಹಾಕಿಕೊಂಡು, ಕಾರಿನಲ್ಲಿ ಬಂದು ಇಳಿಯುವವರನ್ನು ಕಂಡರೆ ಸುಮ್ಮನೆ ಗುರುಗುಟ್ಟಿ ಅಸಹನೆ ಪ್ರದರ್ಶಿಸುತ್ತಿತ್ತು. ಆದರೆ ಕೊಂಚ ಮಾಸಲಾದ ಅಥವಾ ಹರಿದ ಬಟ್ಟೆಗಳನ್ನು ಹಾಕಿಕೊಂಡು, ಸರಿಯಾಗಿ ತಲೆಬಾಚದೆ ಕೂದಲು ಕೆದರಿಕೊಂಡು, ಚಪ್ಪಲಿ ಮೆಟ್ಟಿಕೊಂಡು ಒಟ್ಟಿನಲ್ಲಿ ಬಡವರಂತೆ ತೋರಿಸಿಕೊಳ್ಳುವವರನ್ನು ಕಂಡಕೂಡಲೇ ರೋಷಾವೇಶದಿಂದ ಆತ ನಮ್ಮ

ಮನೆ ಬಳಿ ಬಂದುದೇ ಮಹಾಪರಾಧವೆನ್ನುವಂತೆ ಬೆನ್ನ ಮೇಲಿನ ಕೂದಲು ನಿಮಿರಿಸಿಕೊಂಡು ತನ್ನ ಕರಾಳ ದಂತ ಪಂಕ್ತಿಗಳನ್ನು ಪ್ರದರ್ಶಿಸುತ್ತಾ, ಹೆದರಿ ಬಂದವನು ಓಡಿ ಹೋಗುವಂತೆ ಅಬ್ಬರಿಸಿ ಕೂಗುತ್ತಿತ್ತು"16 ನಾಯಿಯ ಈ ಭಿನ್ನ ವರ್ತನೆಯಲ್ಲೆ ಸಮಾಜ ಶ್ರೀಮಂತರ ಪರ ಇರುವುದು ಸ್ಪಷ್ಟವಾಗುತ್ತದೆ. ಇವರಿಗೆ ಇರುವ ಸ್ಥಾನ, ಮಾನ, ಗೌರವ, ಬಡವರಿಗಿಲ್ಲ ಎಂಬ ವಿಡಂಬನೆ ನಾಯಿಯ ವರ್ತನೆಯಲ್ಲಿದೆ. ಇದರ ವರ್ತನೆ ಸಮಾಜದ ಜನರ, ಗುಣ ಸ್ವಭಾವಗಳ ಅನುಕರಣೆಯ ಅಭಿವ್ಯಕ್ತಿಯಾಗಿದೆಯೇ ವಿನಃ ನಾಯಿಯ ಸ್ವಾಭಾವಿಕ ಗುಣವಲ್ಲ. ಇದ್ದರೆ ಅದು 'ಕಿವಿ' ಯ ವಿಶೇಷ ಗುಣ. ಯಾಕೆಂದರೆ ಇವತ್ತಿಗೂ ನಾಯಿ ಇರುವ ಮನೆಗಳಿಗೆ ಅಪರಿಚಿತರು ಯಾವ ಉಡುಪಿನಲ್ಲಿ ಯಾರೇ ಹೋದರೂ ಗುರುಗುಟ್ಟುತ್ತಾ ತನ್ನ ಅಸಹನೆ ಪ್ರದರ್ಶಿಸುವುದು ಸಾಮಾನ್ಯ. ಅಂದರೆ ಬಡವ ಶ್ರೀಮಂತರಿಬ್ಬರ ಮೇಲೂ ಅನುಮಾನಪಟ್ಟು ಬೊಗಳುತ್ತದೆ. ಇದು ನಾಯಿಯ ನಿಯತ್ತಿನ ಮತ್ತು ತನ್ನ ಒಡೆಯ ಕೊಟ್ಟ ಜವಬ್ದಾರಿಗೆ ಬದ್ದನಾಗಿ ಉಂಡ ಮನೆಗೆರಡು ಬಗೆಯದೆ ವರ್ತಿಸುವ ಪ್ರಾಮಾಣಿಕ ನಿಷ್ಠೆ ಮತ್ತು ಪ್ರೀತಿಯ ಸಂಕೇತ ಕ್ರಿಯೆ ಎಂಬುದನ್ನು ಮರೆಯಬಾರದು.

ಲೇಖಕರು ಶಿಕಾರಿಯಲ್ಲೂ ಅದ್ವಿತೀಯನಾಗಿದ್ದ ಕಿವಿ, ಎಂದು ಹೇಳುವ ಮಾತಿಗೆ ಕಿವಿಯ ಸಂಗಾತಿ ಪ್ಯಾರನ ಮಾತು ಉಲ್ಲೇಖನಿಯ "ನೋಡಿದ್ರಾ ಸಮೀ, ಅ ಜೇನು ಕಂಡ್ರೆ ಹೇಳು ಅಂತ ಹೇಳಿದ್ರಲ್ಲಾ ಅ ಕಿವಿನೇ ಕಂಡು ಹಿಡಿದನಲ್ಲ ಈಗ ನೋಡಿದರಾ ಹೆಂಗೈತೆ ಇವನ ಬುದ್ದಿ"17 ಕಿವಿಯ ಸೂಕ್ಷತೆಯ ಜೊತೆಗೆ ಅದರ ಘ್ರಾಣಶಕ್ತಿಯ ತೀವ್ರತೆಯಿಂದಾಗಿ ಬೇಟೆಯಲ್ಲಿ ಅದ್ವಿತೀಯನಾಗಲು ಸಾಧ್ಯವಾಗಿದೆ. ಇಂತಹ ಹಲವು ಗುಣಗಳ ಜೊತೆಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕೃತಿಯ ಗುತ್ತಿಯ ನಾಯಿ, 'ಹುಲಿಯ'ನಲ್ಲಿ ಭಾವ ಪೂರ್ಣ ಜ್ಞಾನ ಶಕ್ತಿಯೂ ಇದೆ. ಇವೆರಡೂ ಮೇಳೈಸಿದ ವಿಶಿಷ್ಟ ಪಾತ್ರವಾಗಿ ಹುಲಿಯ ಚಿತ್ರಿಸಲ್ಪಟ್ಟಿದೆ.

ಹುಲಿಯನಿಗೆ ಗುತ್ತಿಯಾಗಲಿ, ತಿಮ್ಮಿಯಾಗಲಿ, ಮುಕುಂದಯ್ಯನಾಗಲಿ ಇವರೆಲ್ಲರೂ ಒಂದೇ. ಇದಕ್ಕೆ ಇವರ ಬಡವ, ಶ್ರೀಮಂತಿಕೆಯ ವ್ಯತ್ಯಾಸ ತಿಳಿಯದೆ ಇವರೆಲ್ಲರಿಗೂ ತನ್ನ ಭಾವಪೂರ್ಣವಾದ ಸ್ನೇಹ ಪ್ರೀತಿಯನ್ನು ಧಾರೆಯೆರೆಯುತ್ತಿತ್ತು. ಇಂತಹ ಒಂದು ಸಂದರ್ಭ ಮತ್ತು ಸನ್ನಿವೇಶದ ದೃಶ್ಯ ಕಾಡಿನಲ್ಲಿ ಹುಲಿಯ ಮತ್ತು ಮುಕುಂದಯ್ಯರ ಆಕಸ್ಮಿಕ ಭೇಟಿಯಿಂದ ಸಾಬೀತಾಗುತ್ತದೆ. ಇದನ್ನು ಲೇಖಕರು ತಮ್ಮ ಮಾತಿನಲ್ಲೇ ಕಟ್ಟಿ ಕೊಡುತ್ತಾರೆ.

"ಮುಕುಂದಯ್ಯ ಸಿಂಬಾವಿ ಗುತ್ತಿಯ ನಾಯಿ ಹುಲಿಯನ ಹೆಸರು ಹಿಡಿದು ಕರೆದೊಡೆನೆಯೇ ತನ್ನ ರೋಷವನ್ನೆಲ್ಲ ತೆಕ್ಕನೆ ತ್ಯಜಿಸಿ ತಟಕ್ಕನೆ ಸಂತೋಷಕ್ಕೆ ಮುಗ್ಗರಿಸಿದಂತೆ ಮುನ್ನುಗ್ಗಿ ಹಳು ಮುರಿಯುವಂತೆ ನೆಸೆ ನೆಸೆದು ಬಂದು 'ಹಚೀ ಹಚೀ' ಹುಲಿಯಾ ಎಂದು ಗದರಿಸುತ್ತಿದ್ದರೂ ಲೆಕ್ಕಿಸದೆ ಮುಕುಂದಯ್ಯನ ಎದೆಯವರೆಗೂ ತನ್ನ ಮುಂಗಾಲುಹಾಕಿ ಹಿಂಗಾಲ ಮೇಲೆ ನಿಂತು ಕುಂಯಿಗುಡುತ್ತಾ ತನ್ನ ಮೂತಿಯಿಂದ ಅವನ ಮುಖದವರೆಗೂ ಬಾಗಿ ಅವನ ಬಾಯನ್ನೇ ನೆಕ್ಕಿಬಿಟ್ಟಿದ್ದು ಅ ಮುಕುಂದಯ್ಯ ಆ ದೈತ್ಯಗಾತ್ರದ ಬಲಿಷ್ಠ ಪ್ರಾಣಿಯ ಸ್ನೇಹಾಘಾತಕ್ಕೆ ಸ್ವಲ್ಪ ತತ್ತರಿಸಿಯೆ ನಿಲ್ಲಬೇಕಾಯಿತು.

ಮುಕುಂದಯ್ಯನಿಗೂ ಹುಲಿಯನಿಗೂ ಇದ್ದ ಪರಸ್ಪರ ಪರಿಚಯ ಇಂದು ನಿನ್ನೆಯದ್ದಾಗಿರಲಿಲ್ಲ. ಹುಲಿಯ ತನ್ನ ಮರಿಯತನವನ್ನು ದಾಟಿ ಬೇಟೆಗಾರರೊಡನೆ ಕಾಡಿಗೆ ಹೋಗಲು ಪ್ರಾರಂಭ ಮಾಡಿದಾಗಲೆ ಅದರ ಶಕ್ತಿ, ಯುಕ್ತಿ, ಧೈರ್ಯ, ವೇಗ, ಬುದ್ದಿವಂತಿಕೆ ಇವುಗಳ ವಿಚಾರವಾಗಿ ಕಥೆ ಕಥೆಗಳೇ ಹಳ್ಳಿಯಿಂದ ಹಳ್ಳಿಗೆ ಹಬ್ಬಿಬಿಟ್ಟಿತ್ತು"18

ಈ ಪ್ರಚಾರದಿಂದಾಗಿ ಮುಕುಂದಯ್ಯನೊಡನೆ ಕಾಡಿಗೆ ಬೇಟೆಗೆ ಹೋಗಿ ಹಸಲರ ಭರ್ಜಿಯಿಂದ ಏಟು ತಿಂದು, ಶುಶ್ರೂಷೆಗಾಗಿ ಕೋಣೂರಿನಲ್ಲೆ ಉಳಿದಾಗ, ಅರಳಿದ ಇವರಿಬ್ಬರ ಸ್ನೇಹ ಬಂಧ ಗುತ್ತಿಯಿಂದ ಹುಲಿಯನನ್ನು ಕೊಂಡುಕೊಳ್ಳುವ ಮಟ್ಟಕ್ಕೆ ಮುಕುಂದಯ್ಯ ಉನ್ಮಾದಗೊಳ್ಳುತ್ತಾನೆ. ಆದರೆ ಹುಲಿಯೊಡನೆಯ ಗುತ್ತಿಯ ಸ್ನೇಹ, ಪ್ರೀತಿ, ಸಂಬಂಧದ ಬೆಳದಿಂಗಳ ಬೆಳಕಿನ ಮುಂದೆ ಮುಕುಂದಯ್ಯನ ಸ್ವಾರ್ಥ, ಪ್ರೀತಿಗಳು ಕೊಳ್ಳಿಯ ಬೆಳಕಾಗಿ ಕರಿಯುತ್ತವೆ. ಆದ್ದರಿಂದಲೇ ಮುಕುಂದಯ್ಯ ಹುಲಿಯನ ಕೊರಳು ಬಿಚ್ಚಿದಾಗ, ಗುತ್ತಿ ಹೋದ ದಾರಿ ಹಿಡಿದು "ಗುತ್ತಿ ಖಿನ್ನಮನವಾಗಿ ಲಕ್ಕುಂದದ ಹತ್ತಿರ ಹಳ್ಳಿ ದಾಟುತ್ತಿದ್ದಾಗ ಹಿಂದಕ್ಕೆ ಸದ್ದಾಗಿ ತಿರುಗಿ ನೋಡುವುದರಲ್ಲಿಯೆ ಹುಲಿಯ ಅವನ ಮೈಮೇಲೆ ನೆಗೆದಾಡುತ್ತಿತ್ತಂತೆ."19

ಇಂತಹ ಗುಣ ಸ್ವಭಾವಗಳಿಂದಾಗಿಯೇ ನಾಯಿಯ ನಿಯತ್ತು ಮನುಷ್ಯನಿಗಿಲ್ಲ. ಹೀಗಾಗಿ ಇಲ್ಲಿ ಗುತ್ತಿಯಷ್ಟೆ ಹುಲಿಯ ಭಾವನಾ ಜೀವಿಯಾಗಿ ಸೂಕ್ಷ್ಮ ಮತಿಯಾಗಿದೆ. ಈ ಸಮಾನ ಹೃದಯ ಮನಸ್ಸಿನ ಜೋಡಿ ಜೀವಿಗಳು ಹುಲಿಯ ಮತ್ತು ಗುತ್ತಿ ಸಿಂಭಾವಿಗೆ ಮರಳಲು ಹೊಳೆ ದಾಟುವ ಸಂದರ್ಭ ಬಂದಾಗ ದೋಣಿ ಪಯಣಕ್ಕೆ ನಾಯಿ ತಿರಸ್ಕಾರಗೊಂಡು ಒಡೆದ ಈ ಜೋಡಿ ನಾಯಿ ಹೊಳೆಯಲ್ಲಿ, ಗುತ್ತಿ ದೋಣಿಯಲ್ಲಿದ್ದು ಪರಸ್ಪರ ಸಾವು ಬದುಕಿನ ಹೋರಾಟ ಮಾಡುತ್ತಿರುವ ದೃಶ್ಯ ಎಂತಹವರ ಹೃದಯವನ್ನೂ ಕಲಕಿಬಿಡುತ್ತವೆ. ಆ ಹೋರಾಟದಲ್ಲಿ

ಹುಲಿಯ ಸಾವಿನಲ್ಲಿ ಹೃದಯ ಗೆದ್ದರೆ, ಗುತ್ತಿ ಹೃದಯವಿದ್ದೂ ಜೀವಂತ ಶವವಾಗುತ್ತಾನೆ. ಇದೇ ಈ ಜೋಡಿಯ ದುರಂತ. ಇದಕ್ಕೆ ಅಸಹಾಯಕ ಗುತ್ತಿ ಮತ್ತು ನಾಯಿಯರ ಮೇಲೆ ಸ್ವಾರ್ಥ ಮನುಷ್ಯರ ಅಹಂ ಮತ್ತು ಪ್ರಾಣ ಭೀತಿಯ ಪ್ರಬಲ ನಂಬಿಕೆಗಳು ಕಾರಣವಾಗುತ್ತವೆ. ಆದರೂ ಗುತ್ತಿ ಮತ್ತು ಹುಲಿಯರ ಹೃದಯ ಮನಸ್ಸುಗಳ, ಅವಿನಾಭಾವ ಸಂಬಂಧ ಅಜರಾಮರವಾಗಿದೆ. ಆದ್ದರಿಂದ ಗುತ್ತಿಯನ್ನು ಲೇಖಕರು 'ನಾಯಿಗುತ್ತಿ' ಎಂದು ಕರೆದಿರುವುದು ಔಚಿತ್ಯವಾಗಿದೆ.

ಪ್ರಾಣಿಗಳ ಜೊತೆ ಮನುಷ್ಯ ಪ್ರೀತಿ ಮತ್ತು ಹೃದಯವಂತ ನಡವಳಿಕೆಗಳಿಂದ ಸ್ಪಂದಿಸಿದರೆ ಅವನಿಗಿಂತ ಹೆಚ್ಚಿನ ಹೃದಯಶೀಲ ಪ್ರತಿಕ್ರಿಯೆ ನೀಡಬಲ್ಲವು ಎಂಬ ಪ್ರಾಣಿಗಳ ಮೇಲಿನ ಕಥೆಗಳು ನಮಗೆ ಜನಪದ ಸಾಹಿತ್ಯದಲ್ಲಿ ದಟ್ಟವಾಗಿವೆ. ಅವುಗಳಲ್ಲಿ ಸಂದರ್ಭಕ್ಕನುಗುಣವಾಗಿ 'ಒಂದು ಕಂಬದ ಮೇಲೆ ಏಳು ಉಪ್ಪರಿಗೆಗಳು' ಎಂಬ ಜಾನಪದ ಕಥೆಯನ್ನು ವಿಶ್ಲೇಷಿಸಲಾಗಿದೆ. ಇದರ ಸ್ಥೂಲ ಸಾರ ಇಂತಿದೆ:

ಒಂದು ಪಟ್ಟಣದ ದನ ಕಾದುಕೊಂಡಿದ್ದ ಗಂಡ ಹೆಂಡತಿಯರಿಬ್ಬರಿಗೆ ಒಬ್ಬ ಮಗನಿದ್ದ. ಇವನು ತಂದೆಯನ್ನು ಕಳೆದುಕೊಂಡು ತಾನು ದೊಡ್ಡವನಾದ ಮೇಲೆ ದನಕಾಯುವುದನ್ನು ನಿರಾಕರಿಸುತ್ತಾನೆ. ಇವನ ಜೀವನ ಸಾಗಿಸಲು ಏನಾದರೂ ವೃತ್ತಿ ಮಾಡಲೆಂದು ತಾಯಿ ತಾನು ಕೂಡಿಟ್ಟ ಮೂರುನೂರು ರೂಗಳಿಂದ ಏನಾದರೂ ವ್ಯಾಪಾರ ಮಾಡಲೆಂದು ಬಯಸುತ್ತಾಳೆ. ಹಾಗಾಗಿ ಸಂತೆಗೆ ಹೋಗುವ ವರ್ತಕರ ಜೊತೆ ತನ್ನ ಮಗನನ್ನು ಸೇರಿಸಿ ಮೂರು ಬಾರಿ ನೂರು ರೂಗಳನ್ನು ಕೊಟ್ಟು ಕ್ರಮವಾಗಿ ದಿನಸಿ, ಬಟ್ಟೆ, ಕರುವನ್ನು ತರಲು ಕಳುಹಿಸಿಕೊಡುತ್ತಾಳೆ. ಆದರೆ ಈ ಹುಡುಗ ಮೂರು ಬಾರಿಯೂ ಕ್ರಮವಾಗಿ ಬೆಕ್ಕು, ನಾಯಿ, ಹಾವುಗಳನ್ನು ತರುತ್ತಾನೆ. ಅದರಿಂದ ಎಲ್ಲರೊಡನೆ ಬೈಸಿಕೊಂಡರೂ, ತಾನು ತಂದ ಪ್ರಾಣಿಗಳೊಡನೆ ಆಟ ಆಡಿಕೊಂಡು ಕಾಲ ಕಳೆಯುತ್ತಾನೆ. ಒಂದು ದಿನ ಹಾವನ್ನು ಆಡಿಸಲು ಬಾರದ ಈ ಹುಡುಗನಿಂದ ತಪ್ಪಿಸಿಕೊಂಡ ಹಾವು ತನ್ನ ರತ್ನದ ಮಣಿಯನ್ನು ಕೊಟ್ಟು ಅದರಿಂದ ಉಪ್ಪರಿಗೆ, ಮೇಲಿನ ಉಪ್ಪರಿಗೆ, ಮನೆ ತುಂಬ ಮುತ್ತು ರತ್ನಗಳನ್ನು ಹೊಂದಿ ರಾಜನ ಮಗಳನ್ನು ಮದುವೆಯಾಗುತ್ತಾನೆ. ಆ ಹುಡುಗ ಮತ್ತು ಅವನ ತಾಯಿ, ನಾಯಿ ಆಮೇಲೆ, ಬೆಕ್ಕುಗಳೆಲ್ಲ ಸುಖವಾಗಿರುವಂತೆ ಮಾಡುತ್ತದೆ. ಹೀಗೆ ಕಾಲ ಕಳೆದಂತೆ ರಾಜನ ಮಗಳ ಗುರು ಸನ್ಯಾಸಿಯ ಕುತಂತ್ರದಿಂದ ಇವಳು ತನ್ನ ಗಂಡನಾದ ಈ ಹುಡುಗನಿಂದ ನಾಗೇಂದ್ರ ಕೊಟ್ಟ ರತ್ನದ ಹರಳನ್ನು ಪಡೆದು, ಸನ್ಯಾಸಿ ಜೊತೆ ಗೂಡಿ ಅದರಿಂದ ಹಾಲು ಸಮುದ್ರ, ಮೇಲು ಸಮುದ್ರ, ಕೀಳು ಸಮುದ್ರದಲ್ಲಿ ಒಂದು ಕಂಬದ ಮೇಲೆ ಏಳು ಉಪ್ಪರಿಗೆ ಮನೆ ಪಡೆದು ಕಾಲ ಸಾಗಿಸುತ್ತಾರೆ. ಈ ತಂತ್ರವರಿಯದ ರಾಜ ಬೀದಿಪಾಲಾದ ಹುಡುಗನನ್ನೇ ಮೋಸಗಾರನೆಂದು ತಿಳಿದು ಜೈಲಿಗೆ ಹಾಕಿಸುತ್ತಾನೆ. ಎಷ್ಟು ದಿನಗಳಾದರೂ ಬಾರದಿದ್ದ ಮಗನ ಬಗ್ಗೆ ಚಿಂತಿಸುತ್ತಿದ್ದ ತಾಯಿಯನ್ನು ಸಮಾಧಾನಪಡಿಸಿ, ಬೆಕ್ಕು ಮತ್ತು ನಾಯಿಗಳು ನಮ್ಮಣ್ಣನನ್ನು ಹುಡುಕಿ ತರುತ್ತೇವೆಂದು ಭರವಸೆ ನೀಡಿ ಹೊರಡುತ್ತವೆ. ಹೋಗುವ ದಾರಿಯಲ್ಲಿ ಇವು ತಮ್ಮ ಅಣ್ಣನನ್ನು ಹುಡುಕಿ ಕಂಡು, ಮೋಸಮಾಡಿದ ಸನ್ಯಾಸಿಯ ದಾರಿ ಹಿಡಿದು ದಾರಿ ಮಧ್ಯದಲ್ಲಿ ಇಲಿ ಮತ್ತು ಏಡಿಯ ಸ್ನೇಹ ಮಾಡಿ ಅವುಗಳ ಸಹಾಯದಿಂದ ಸನ್ಯಾಸಿಯಲ್ಲಿದ್ದ ರತ್ನದ ಹರಳನ್ನು ಪಡೆದು ಆ ಹುಡುಗನಿಗೆ ಕೊಡುತ್ತವೆ. ಆಗ ಅವನು ಉಪ್ಪರಿಗೆ ಮನೆ ಮತ್ತು ಆ ಸನ್ಯಾಸಿ ನನ್ನ ಕೈಗೆ ಸಿಗಲೆಂದು ಆ ರತ್ನದ ಹರಳಿಂದ ಪಡೆಯುತ್ತಾನೆ. ಆಗ ರಾಜ ಮೋಸದ ಸನ್ಯಾಸಿಯನ್ನು ಸುಡಿಸಿ, ಮಗಳನ್ನು ಮತ್ತೆ ಆ ಹುಡುಗನಿಗೆ ಮದುವೆ ಮಾಡುತ್ತಾನೆ. ಆಮೇಲೆ ಹುಡುಗ, ರಾಜನ ಮಗಳು, ತಾಯಿ, ಬೆಕ್ಕು, ನಾಯಿಗಳೆಲ್ಲ ಸುಖವಾಗಿರುತ್ತಾರೆ.

ಈ ಕಥೆಯಲ್ಲಿ ಮಾನವನ ನಡವಳಿಕೆಗಳಿಗೂ, ಪ್ರಾಣಿಗಳ ಗುಣ ನಡುವಳಿಕೆಗಳಿಗೂ, ಇರುವ ವ್ಯತ್ಯಾಸದ ಸ್ಪಷ್ಟತೆಯಿದೆ. ಹಾಗೂ ಪ್ರಾಣಿಗಳ ಮೇಲಿನ ಹುಡುಗನ ಪ್ರೀತಿ, ಕಾಳಜಿ ಸಹಜೀವನಗಳಿಗೆ ಅವುಗಳು ಪ್ರತಿಯಾಗಿ ನೀಡಿದ ಸಹಾಯ, ನಿಷ್ಠೆ, ಕಾಳಜಿ, ಪ್ರಾಮಾಣಿಕತೆಗಾಗಿ ಮಾಡಿದ ಸಾಹಸ ಅಸಾಮಾನ್ಯವಾದುದ್ದು. ಮಾನವ ಪಾತ್ರಗಳಾದ ತಾಯಿ, ರಾಜ, ರಾಜನ ಮಗಳು ಸನ್ಯಾಸಿ ಮತ್ತು ಬೆಕ್ಕು, ನಾಯಿ, ಹಾವುಗಳನ್ನು ಮಾರಾಟ ಮಾಡಿದ ಜನರ ವರ್ತನೆಗಳೆಲ್ಲ ಮಾನವ ಕೇಂದ್ರಿತ, ಅವಕಾಶವಾದಿತನ ಹಾಗೂ ಸ್ವಾರ್ಥ ಪ್ರಧಾನವಾಗಿವೆ. ಆದರೆ ಹುಡುಗ ನಿಸ್ವಾರ್ಥಿಯಾಗಿ ನಾಯಿ ಬೆಕ್ಕುಗಳ ಪ್ರೀತಿಗೆ ಪಾತ್ರನಾಗುತ್ತಾನೆ. ಇವನ ತಾಯಿ ಮಾತ್ರ 'ಪ್ರಾಣಿಗಳಿಂದ ಏನು ಉಪಯೋಗ, ಹಣವನ್ನೆಲ್ಲ ಹಾಳು ಮಾಡಿದನಲ್ಲ' ಎಂದು ದುಃಖ ಮಾಡುತ್ತಿದ್ದಾಗ ಮಗ "ಅಮ್ಮಾ ನೀನು ಸುಮ್ಮನೆ ಒಂದೇ ಸಮ ದುಃಖ ಮಾಡ್ತೀಯ ನಮ್ಮನ್ನು ಕೆಡಿಸುವ ಪ್ರಾಣಿ ಯಾವುದಮ್ಮ"20 ಎಂದು ಪ್ರಶ್ನಿಸುತ್ತಾನೆ.

ಈ ಮಾತಿನ ಹಿಂದೆ ಆ ಹುಡುಗನ ಪ್ರಾಣಿಗಳ ಮೇಲಿನ ನಂಬಿಕೆ, ಆತ್ಮವಿಶ್ವಾಸ, ಪ್ರೀತಿ, ವ್ಯಕ್ತವಾಗುತ್ತವೆ. ಆದ್ದರಿಂದಲೇ ಇವನು ಪ್ರಾಣಿಗಳ ಮನಸ್ಸನ್ನು ಗೆಲ್ಲಲು ಸಾಧ್ಯವಾಗಿದೆ. ಇದೇ ಆ ಹುಡುಗನ ಬುದ್ಧ ಗುಣ. ಈ ಕಥೆಯಲ್ಲಿ ಸ್ವಾರ್ಥ ಜನರ ಹಿಂಸೆಗೆ ಸಿಕ್ಕಿಕೊಂಡ ಪ್ರಾಣಿಗಳ ಬಿಡುಗಡೆಗೆ ಕಾರಣನಾದದ್ದನ್ನು ಹಾವು ಹುಡುಗನನ್ನು

ಹತ್ತಿರ ಕರೆದು ಹೇಳಿ, ತನ್ನ ರತ್ನದ ಹರಳನ್ನು ನೀಡಿ ಅವನ ಸುಖದ ದಾರಿ ತೋರುವ ಕಥೆಯ ನಿರೂಪಣೆ ಹೀಗಿದೆ:

"ಅಪ್ಪಾ ಹುಡುಗ ಆ ಹಾವಾಡಿಗ ನನ್ನ ಹಲ್ಲು ಮುರಿದ, ನನ್ನ ಬಾಲ ಎತ್ತಿ ಹಿಡಿದು ಬಂಡೆಗೆ ಹೊಡೆದು ಮಯ್ಯಾಗಳ ಎಮಕೆಯೆಲ್ಲ ಮುರಿದು ಹಾಕಿದ. ಅವನಿಂದ ಬಿಡಿಸಿದವನು ನೀನೇ ಅಲ್ಲವೇ? ಬಾರಪ್ಪ ನನ್ನ ಹತ್ತಿರ. ನನಗೆ ನೀನು ಉಪಕಾರ ಮಾಡಿದ್ದೀಯೇ ನಾನೇನು ನಿನಗೆ ತೊಂದರೆ ಮಾಡೋದಿಲ್ಲ. ಏನು ಹೆದರಿಕೆ ಬೇಡ ಬಾರಪ್ಪ ನನ್ನ ಹತ್ತಿರ ಅಂತ ನಾಗೇಂದ್ರ ಪ್ರೀತಿಯಿಂದ ಕರೆದ. ಆಗ ಹುಡುಗ ನಾಗೇಂದ್ರನ ಹತ್ತಿರಕ್ಕೆ ಹೋದ. ಆಗ ನಾಗೇಂದ್ರ "ಪ್ರೇಮದಿಂದ ಅಪ್ಪಾ ಮಗನೆ, ನನ್ನ ಹಣೇಲಿ ಒಂದು ರತ್ನದ ಹರಳಿದೆ ಅದನ್ನು ನಿನಗೆ ಕೊಡ್ತೀನಿ. ನಿನ್ನ ತಾಯಿ ಹತ್ತಿರವಾಗಲಿ, ನಿನ್ನ ಹತ್ತಿರವಾಗಲಿ ಈ ರತ್ನದ ಹರಳು ಇದೆ ಅಂತ ಯಾರ ಕೂಟೆಯೂ ಹೇಳಬೇಡ", ಅಂತ ಹೇಳಿ ಆ ಹುಡುಗನಿಗೆ ರತ್ನದ ಹರಳನ್ನು ಕೊಟ್ಟ. "ಈ ರತ್ನದ ಹರಳನ್ನು ತೆಗೆದುಕೊಂಡು ಹೋಗಿ ಒಂದು ಸೊಪ್ಪಿನ ಗುಡಿಸಲಲ್ಲಿ ಇಟ್ಟುಕೊಂಡು ಅದನ್ನು ಕುಂಕುಮ, ಅರಿಶಿನ, ಹೂವು, ಹಣ್ಣಿನಿಂದ ಪೂಜೆ ಮಾಡಿದರೆ ಆ ಗುಡಿಸಲು ಗಾರೆ ಗಚ್ಚಿನ ಮನೆಯಾಗುವುದು. ನಿನಗೆ ಕುಬೇರನಂಥ ಐಶ್ವರ್ಯ ಬರುವುದು"21 ಅಂತ ನಾಗೇಂದ್ರ ಹುಡುಗನಿಗೆ ಹೇಳಿದ.

ಇದರಿಂದ ಹಾವು ದುಷ್ಟ ಪ್ರಾಣಿ ಎಂದು ತಿಳಿದಿರುವ ಮಾನವನದೇ ಕೆಟ್ಟ ತಿಳುವಳಿಕೆ ಎಂಬುದು ಸ್ಪಷ್ಟವಾದಂತೆ ಅದರ ನಡವಳಿಕೆ, ಸಹಾಯಶೀಲ, ಹೃದಯವಂತ, ಗುಣಗಳಿಂದ ಮಾನವ ಈಗ ಪಟ್ಟಿಮಾಡುವ ಒಳ್ಳೆಯ ಗುಣಗಳ ಮೂಲ ಪ್ರಾಣಿಗಳೇ ಎಂಬುದರಲ್ಲಿ ಸತ್ಯವಿದೆ. ಈ ಕಥೆಯ ಹೊರಗಿನ ರೂಪ ಸತ್ಯಕ್ಕೆ ದೂರವಾದ ಕಲ್ಪನೆಯಾದರೂ, ಆಂತರ್ಯದಲ್ಲಿ ತಿಳುವಳಿಕೆಯ ತಾತ್ವಿಕಾಂಶಗಳಿವೆ. ನಾಗೇಂದ್ರ ಕೊಡುವ ರತ್ನ ಅದರ ಒಳ್ಳೆಯ ಹೃದಯ, ಮನಸ್ಸು, ನಡವಳಿಕೆಗಳ ಜೀವನ ತತ್ವ. ಇವನ್ನು ಸೊಪ್ಪಿನ ಗುಡಿಸಲಲ್ಲಿರುವ ಮನುಷ್ಯನು ತನ್ನ ಜೀವನದಲ್ಲಿ ರೂಢಿಸಿಕೊಂಡು ಆಚರಣೆಗೆ ತಂದರೆ, ಅವನು ಕುಬೇರನಂತೆ ಧನೈಶ್ವರ್ಯವಂತನಷ್ಟೇ ಆಗದೆ, ಮನೈಶ್ವರ್ಯವಂತನೂ, ಹೃದಯ ಶ್ರೀಮಂತನೂ ಆಗುತ್ತಾನೆ. ಈ ಶ್ರೀಮಂತಿಕೆಯ ಶುಭ ಸೂಚಕಗಳು ಕುಂಕುಮ, ಅರಿಶಿನ, ಹೂವು, ಹಣ್ಣುಗಳಾಗಿವೆ. ಪೂಜೆ ಹೃದಯ ಶ್ರೀಮಂತಿಕೆ ಪಡೆಯದ ಕ್ರಿಯೆಯಾಗಿದೆ. ಇಂತಹ ಹಾವು ಮತ್ತು ಹುಡುಗನ ಗುಣ ನಡವಳಿಕೆಗೆ ಪೂರಕವಾಗಿ ತೇಜಸ್ವಿಯವರ 'ಅಕ್ಕಮ್ಮ ಹೇಳಿದ ಕಥೆಯ' ಮಂಜಮ್ಮ ಮತ್ತು ಜಿಂಕೆಯ ಪಾತ್ರಗಳಿವೆ. ಇವುಗಳ ಸ್ವಭಾವ, ಕ್ರಿಯೆ ಮತ್ತು ಪರಿಣಾಮಗಳನ್ನು ಅಕ್ಕಮ್ಮ ಲೇಖಕರಿಗೆ ಹೀಗೆ ವಿವರಿಸುತ್ತಾಳೆ. "ತಾಯಿ ಜಿಂಕೆ ಹೋಗ್ತಾ ಒಂದೇ ಒಂದು ಸಾರಿ ಮಂಜಮ್ಮನ ಕಡೆ ತಿರುಗಿ ನೋಡ್ತು. ಅಯ್ಯ, ನಂಗೆ ಚೆನ್ನಾಗಿ ಗೊತ್ತಾಯ್ತು ಏನೋ ಹೇಳಿ ಹೋಗ್ತಿದೆ ಅಂತ. ಆದರೆ ಏನು ಅಂತ ಅವತ್ತು ಗೊತ್ತಾಗಲಿಲ್ಲ. ಈವತ್ತು ಗೊತ್ತಾಗ್ತಿದೆ ನೋಡಿ. ಆಮೇಲಿಂದ ಸಿದ್ದೇಗೌಡರ ಮನೆಯೋರು ಮುಟ್ಟಿದ್ದೆಲ್ಲಾ ಚಿನ್ನ ಬಿತ್ತಿದ್ದೆಲ್ಲಾ ಬಂಗಾರ."22

ಅಕ್ಕಮ್ಮ ಜಿಂಕೆಯ ಪ್ರೀತಿ, ಆಶೀರ್ವಾದವನ್ನು ನೆನೆಯುತ್ತ, ಮಂಜಮ್ಮನೊಡನಿದ್ದು ಅವಳು ಬಳಸಿಕೊಂಡ ಪ್ರಾಣಿಗಳ ಮೇಲಿನ ಪ್ರೀತಿ, ಜೀವನಾನುಭವ, ಸಂಬಂಧದ ತಿಳುವಳಿಕೆಗಳಿಂದ ಸಿದ್ದೇಗೌಡರ ಮನೆಯ ಶ್ರೀಮಂತಿಕೆಯನ್ನು ಹೀಗೆ ವಿಶ್ಲೇಷಿಸುತ್ತಾಳೆ. "ಕೆಲಸ ಅಲ್ರಯ್ಯ ಅವರ ಮನೇನ ಉದ್ಧಾರ ಮಾಡಿದ್ದು ಆ ಆಕೆ ಮನಸ್ಸು ಇದೆಯಲ್ಲಾ ಅದು ಚಿನ್ನದಂತಾ ಮನಸ್ಸು. ಇದೆ ಮುದ್ರೆ ಮನೆ ಕಾಡಿಂದ ಒಂದು ಜಿಂಕೆ ಬಂದು ಮಂಜಮ್ಮನ ಮನಸ್ಸು ನೋಡಿ ಹರಸಿ ಹೋಯ್ತು! ಅವತ್ತಿನಿಂದ ನೋಡಿ ಅವರ ನಸೀಬೇ ಬದ್ಲಾಸಿಹೊಯ್ತು. ಬರೇ ರಟ್ಟೆ ಮುರಿಯೋ ಹಂಗೆ ಗೆಯ್ದರೆ ಏನು ಬಂತಯ್ಯ? ಮನಸ್ಸು ಬೆಳೆಯದಿಲ್ಲದಿದ್ರೆ."23

ಅಕ್ಕಮ್ಮನ ಈ ಮಾತಿನಲ್ಲಿ ಹಾವು ಮತ್ತು ಜಿಂಕೆಯಂಥ ಪ್ರಾಣಿಗಳಿಂದ ಸುಖೀ ಜೀವನದ ಆಶೀರ್ವಾದ, ಪ್ರೀತಿ ಹುಡುಗ ಮತ್ತು ಮಂಜಮ್ಮನಂತಹವರ ಒಳ್ಳೆಯ ಮನಸ್ಸೇ ಮುಖ್ಯ. ಇಂತಹ ಕಥೆಗಳನ್ನು ಕಟ್ಟಿಕೊಟ್ಟ ತೇಜಸ್ವಿಯವರ ಕಥಾಸಾಹಿತ್ಯ ಬೌದ್ಧ ಮೀಮಾಂಸೆಯ ತತ್ವದಿಂದಲೇ ಅರಳಿದೆ ಎಂಬುದು ಜಿಂಕೆಯಂತಹ ಪ್ರಾಣಿಗಳ ಪಾತ್ರಗಳಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ಜೀವ ಪ್ರಜ್ಞೆಗೆ ಪರಿಸರ ತಿಳುವಳಿಕೆಗೆ ಇಂತಹ ಒಳ್ಳೆಯ ಜೀವ ಧರ್ಮವನ್ನು ಪ್ರಾಣಿಗಳಿಂದಲೇ, ನೋಡಿ ಮಾನವ ಕಲಿಯಬೇಕಾಗಿದೆ ಎನ್ನುವುದು ಜಾನಪದ ಕಥೆಯ ನಾಯಿ ಮತ್ತು ಬೆಕ್ಕುಗಳು ರತ್ನದ ಹರಳನ್ನು ಹುಡುಕಿ ತಂದ ಶ್ರಮ, ಶ್ರದ್ಧೆ, ಸಾಧನೆಯಿಂದ ತಿಳಿಯುತ್ತದೆ. ಇಲ್ಲಿ ಹುಡುಗ, ಬೆಕ್ಕು, ನಾಯಿ, ಇಲಿ, ಏಡಿ ಎಲ್ಲರೂ ಒಂದಕ್ಕೊಂದು ಮಾಡಿದ ಸಹಾಯ ಸಹಕಾರ, ಹೊಂದಾಣಿಕೆಯ ನಡವಳಿಕೆಗಳು ಬೆರಗುಗೊಳಿಸುತ್ತವೆ. ಬೆಕ್ಕು ನಾಯಿಗೆ ಹಸಿದಿದ್ದಾನೆ ಎಂದು ಹೋಳಿಗೆ ಗಂಟನ್ನು ತಂದುಕೊಟ್ಟಿದ್ದು, ಜೈಲಿನಲ್ಲಿದ್ದ ಹುಡುಗ, 'ತಮ್ಮ ಅಣ್ಣನ' ಸ್ಥಿತಿಗತಿಗಳನ್ನು ವಿಚಾರಿಸಿ ನೀರು ಮತ್ತು ಎಲೆಯಡಿಕೆ ಸುಣ್ಣವಿದ್ದ ಅಚ್ಚೇರನ್ನು ತಂದುಕೊಟ್ಟಿದ್ದು ಮತ್ತು ನಾಯಿ ಬೆಕ್ಕನ್ನು ತನ್ನ ತಲೆಯ ಮೇಲೆ ಕೂರಿಸಿಕೊಂಡು ಸಮುದ್ರಗಳನ್ನು ಈಜಿ ದಡಸೇರಿದ್ದು, ಇವುಗಳು ಇಲಿ ಮತ್ತು ಏಡಿಯ ಸ್ನೇಹದಿಂದ ರತ್ನದ ಹರಳನ್ನು ತಂದ ಈ ಪ್ರಸಂಗಗಳು

ಪ್ರಾಣಿಗಳ ಮನೋವಿಜ್ಞಾನದ ಅಧ್ಯಯನಕ್ಕೆ ಬೆಳಕುಚೆಲ್ಲುತ್ತವೆ. ಹಾಗೂ ಸನ್ಯಾಸಿಯೊಡನೆ ರಾಜಕುಮಾರಿಯನ್ನು ಸಾಯಿಸಲು ಎಳೆದೊಯ್ದ ರಾಜನಿಗೆ ನಾಯಿ ಬೆಕ್ಕುಗಳು ಸೇರಿ ಕೊಂಡು, "ನಮ್ಮಕ್ಕನನ್ನು ಬಿಟ್ಟುಬಿಡು ಎಲ್ಲಾ ಮೋಸಾ ಮಾಡಿದ್ದು ಆ ಗುರು"24 ಎಂದು ಹೇಳಿ ಬಿಡುತ್ತವೆ.

ಪ್ರಾಣಿಗಳ ಈ ಮಾತು ನಡವಳಿಕೆಗಳು ಮಾನವನ ಆತ್ಮಾವಲೋಕನಕ್ಕೆ ಕನ್ನಡಿ ಹಿಡಿಯುತ್ತವೆ. ಸಾಮಾನ್ಯವಾಗಿ ಪ್ರಾಣಿ ಸಾಹಿತ್ಯದ ಮೂಲ ಬೇರು ಜಾನಪದ ಸಾಹಿತ್ಯದಲ್ಲಿ ಇರುವುದು ಸ್ಪಷ್ಟವಾಗಿದೆ. ಇಲ್ಲೆಲ್ಲಾ ಅಸಹಜವಾದ ಕ್ರಿಯೆಗಳು ಈ ಪ್ರಾಣಿಗಳಲ್ಲಿದ್ದರೂ ಅವಕ್ಕೂ ಜೀವ ಮತ್ತು ಮನಸ್ಸು ಇದೆ ಎಂಬ ಪ್ರಕೃತಿ ಸತ್ಯವನ್ನು ಕಂಡುಕೊಂಡ ಜನ ಮಾನವ ರೂಪಿ ನಾಯಿ, ಬೆಕ್ಕುಗಳನ್ನಾಗಿ ಕಂಡು ಕಟ್ಟಿರುವ ಈ ಕಥೆಗಳೆಲ್ಲ ಜನಪದ ಕವಿ, ಕವಯಿತ್ರಿಯರ ಪ್ರಾಣಿ ತಿಳುವಳಿಕೆಯ ಜೀವ ಪ್ರಜ್ಞೆ ಅಚ್ಚರಿಯುಂಟುಮಾಡುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಾಣಿಗಳ ಸತ್ಯ, ನಿಷ್ಠೆ ಪ್ರಾಮಾಣಿಕತೆಗೆ ಮತ್ತು ಇವುಗಳ ಮನಸ್ಸಿನ ಅಧ್ಯಯನಕ್ಕೆ ಪೂರಕ ಆಧಾರವಾಗಿ 'ಗೋವಿನ ಹಾಡು' ಕಾವ್ಯವಿದೆ. ಇದರಲ್ಲಿ ದುಷ್ಟ ವ್ಯಾಘ್ರನಾದ ಹುಲಿ ಹಸಿದು ಪುಣ್ಯಕೋಟಿ ಹಸುವನ್ನು ತಿನ್ನಲು ಬಂದಾಗ ಇವೆರಡರ ಸಂಭಾಷಣೆಯನ್ನು ಕವಿ ಹೀಗೆ ನಿರೂಪಿಸುತ್ತಾನೆ.

"ಒಂದು ಬಿನ್ನಹ ಹುಲಿಯ ರಾಯನೆ !
ಕಂದನೈದನೆ ಮನೆಯ ಒಳಗೆ !
ಒಂದು ನಿಮಿಷದಿ ಮೊಲೆಯ ಕೊಟ್ಟು !
ಬಂದು ನಾನಿಲ್ಲಿ ನಿಲ್ಲುವೆ
ಹಸಿದ ವೇಳೆಗೆ ಸಿಕ್ಕಿದೊಡವೆಯ !
ವಶವ ಮಾಡಿ ಕೊಳ್ಳದೀಗ !
ನುಸುಳಿ ಹೋದರೆ ನೀನು ಬರುವೆಯ !
ಸಹನಾಯಿತೀಗೆಂದಿತು
ಮೂರು ಮೂರ್ತಿಗಳಾಣೆ ಬರುವೆನು !
ಸೂರ್ಯ ಚಂದ್ರಮರಾಣೆ ಬರುವೆನು !
ಧಾರುಣೀ ದೇವಿಯಾಣೆ ಬರುವೆನು !
ಎಂದು ಭಾಷೆಯ ಮಾಡಿತು"25 (ಗೋವಿನ ಹಾಡು)

ಇಲ್ಲಿ ಪುಣ್ಯಕೋಟಿ ಹಸು ಅಡವಿಯ ಹುಲ್ಲು ನೀರುಗಳಿಂದ ಸಸ್ಯಾಹಾರಿಯಾದರೆ, ಹುಲಿಗೆ ಅಡವಿಯ ಪ್ರಾಣಿಗಳೇ ಮಾಂಸಾಹಾರ. ಹಾಗಾಗಿ ಈ ಹಸು ಸಾಕು ಪ್ರಾಣಿಯಾದರೂ ಅಡವಿಯ ಆಹಾರ, ಸಂಚಾರಗಳಿಂದ ಅದು ಹುಲಿಗೆ ಕಾಡು ಪ್ರಾಣಿಯಾಗಿ ಕಂಡಿದೆ. ಜೊತೆಗೆ ತನ್ನ ಮುದಿತನದ ನಿಶ್ಯಕ್ತತೆಯಿಂದ ತನ್ನ ಹಸಿವನ್ನಿಂಗಿಸಿಕೊಳ್ಳಲು ದನಗಳನ್ನೇ ಅವಲಂಬಿಸಿದೆ. ಇದು ಹುಲಿಗೆ ಅನಿವಾರ್ಯವೇ ಹೊರತು, ಉದ್ದೇಶಿತವಲ್ಲ. ಯಾಕೆಂದರೆ ಹುಲಿ ಸಸ್ಯಾಹಾರಿಯಾಗಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಹಸು ವಿಪತ್ತಿನಂಚಿನಲ್ಲಿದ್ದು, ಅದೇ ಸಮಯದಲ್ಲಿ ತನ್ನ ಕರು ಮತ್ತು ಹುಲಿಯ ಹಸಿವಿನ ಬಗ್ಗೆ ಚಿಂತಿಸಿ, ಕರುವಿನ ಹಸಿವು ಮತ್ತು ಪ್ರೀತಿ ಮಮಕಾರಗಳಿಗೆ ಮೊದಲ ಪ್ರಾಶಸ್ತ್ಯ ನೀಡಿ, ಹುಲಿಗೆ ಭಾಷೆಯನಿತ್ತು ಅನುಮತಿ ಪಡೆದದ್ದು, ತಾಯಿಯಾದ ಹಸು ಹೃದಯಕ್ಕೆ ಸಾಧ್ಯವಾಗಿದೆ. ಈ ಗುಣವನ್ನೇ ಬೌದ್ಧ ತತ್ವವೆನ್ನುವುದು. ಏಕೆಂದರೆ ಬುದ್ಧ ಕಾಡಿನಲ್ಲಿ, ಬೋಧಿ ವೃಕ್ಷದಡಿ ಜ್ಞಾನಕ್ಕೆ ಕುಳಿತಾಗ ಕಾಡಿನ ಪ್ರಾಣಿ, ಪಕ್ಷಿ, ಕೀಟಾದಿಗಳು ಸಹ ನಿಶ್ಶಬ್ದವಾಗಿದ್ದು ಅವನ ಜ್ಞಾನಕ್ಕೆ ಸಹಕರಿಸುತ್ತಿದ್ದವಂತೆ ಎಂಬ ತ್ರಿಪಿಟಕದ ಮಾತು ಇಲ್ಲಿ ನೆನಪಾಗುತ್ತದೆ.

ಪುಣ್ಯ ಕೋಟಿಯ ಕಂದ ಹೋಗಬೇಡವೆಂದು ಬೇಡಿದರೂ, ಅದರ ಬಳಗವೆಲ್ಲ ನಿನ್ನ ಜೊತೆ ನಾವು ಬರುತ್ತೇವೆಂದು ಹೊರಟರೂ ಹಸು ಒಪ್ಪದೆ ಹುಲಿಗೆ ಆಹಾರವಾಗಲು ಒಂದೇ ಬರುತ್ತದೆ. ಈ ಸಾತ್ವಿಕ ಗುಣವನ್ನು 'ಪ್ರಾಣಿ ಸಂಸ್ಕೃತಿ' ನೆಲೆಯಿಂದ ಗ್ರಹಿಸಬೇಕೇ ವಿನಃ 'ಮಾನವ ಸಂಸ್ಕೃತಿ' ನೆಲೆಯಿಂದಲ್ಲ. ಹಸುವಿಗೆ ಮತ್ತೊಂದು ಜೀವಿಯ ಹಸಿವನ್ನು ಇಂಗಿಸುವುದೇ ಅದರ ಮುಖ್ಯ ಧರ್ಮವಾಗಿದೆ. ಅದ್ದರಿಂದಲೇ ಕರುವಿಗೆ ಹಾಲುಣಿಸಿ ಹುಲಿಗೆ ಆಹಾರವಾಗಲು ಬಂದಿರುವುದು. ಇದೇ ಪ್ರಾಣಿಧರ್ಮ, ಜೀವ ಧರ್ಮ. ಇದರಿಂದಲೇ ಅದರ ಸಂತೋಷ, ಮುಕ್ತಿ. ಈ ಸಂದರ್ಭವನ್ನು ಅರವಿಂಸದ ಮಾಲಗತ್ತಿಯವರು "ಇಲ್ಲಿ ಕೊಟ್ಟ ಮಾತಿಗೆ ತಪ್ಪದೆ ನಡೆಯುವ ಗೋವು, ಕ್ರೂರಪ್ರಾಣಿ ಪರಿವರ್ತನೆಗೊಳ್ಳುವ ಬಗೆ ಇವೆಲ್ಲ ಅಹಿಂಸಾವಾದವನ್ನು ಮುಂದಿಡುತ್ತವೆ"26 ಎಂದಿರುವುದು ಔಚಿತ್ಯವಾಗಿದೆ. ಹಾಗಾಗಿ ಪುಣ್ಯಕೋಟಿಗೆ ಸಾವಿನ ಭಯವಿಲ್ಲ. ಇಂತಹ ಸತ್ಯ ಪ್ರಾಮಾಣಿಕತೆಯ ಹಸುವನ್ನು ಕಂಡು ಬೆಚ್ಚಿದ ಹುಲಿ 'ಎನ್ನ ಒಡ ಹುಟ್ಟಕ್ಕ ನೀನು, ನಿನ್ನ ತಿಂದು ನಾನೇನ ಪಡೆವೆನು' ಎಂದು ಹೇಳಿ ಪಶ್ಚಾತ್ತಾಪದಿಂದ ಆತ್ಮಹತ್ಯೆಗೆ ಮುಂದಾಗುತ್ತದೆ.

"ಮುನ್ನ ನೂರು ಗೋವು ಕೊಂದ !
ಅನ್ಯಕಾರಿ ಪಾಪಿ ನಾನು !
ಇನ್ನು ಇರಿಸಲು ಏಕೆ ಪ್ರಾಣವ !
ಬಿಡುವೆನಿಂದು ಪೇಳಿತು"27 (ಗೋವಿನ ಹಾಡು)

ದುಷ್ಟ ಪ್ರಾಣಿಯಾದ ಹುಲಿ ಪಶ್ಚಾತಾಪದಿಂದ ಪರಿವರ್ತನೆಗೊಂಡು ಪುಣ್ಯಕೋಟಿಗಿಂತಲೂ ಶ್ರೇಷ್ಠವಾಗಿದೆ. ಆದರೆ ಪಾಪ ಪ್ರಜ್ಞೆಯಿಂದ ನೊಂದ ಹೃದಯ ಆತ್ಮಹತ್ಯೆಯನ್ನೇ ಆಯ್ಕೆ ಮಾಡಿಕೊಂಡದ್ದು ದುರಂತ. ದುಷ್ಟರೂ ಪರಿವರ್ತನೆಯಿಂದ ಶುದ್ಧ ಹೃದಯ, ಮನಸುಳ್ಳ ಶಿಷ್ಟ ಪ್ರಾಣಿಯಾಗುತ್ತಾರೆ ಎನ್ನುವುದಕ್ಕೆ ಹುಲಿ ಮಾದರಿಯಾಗಿದೆ. ಇಲ್ಲಿ ಬುದ್ಧನಿಂದ ಪರಿವರ್ತನೆಯಾದ ಅಂಗುಲಿಮಾಲನ ಕಥೆ ನೆನಪಾಗುತ್ತದೆ. ಇನ್ನೊಂದು ಅಂಶವೆಂದರೆ ಹುಲಿ ಹಸುವಿನ ಮೇಲೆ ನಂಬಿಕೆಯಿಟ್ಟು, ಕರುವಿನಲ್ಲಿಗೆ ಹೋಗಿ ಬರಲು ಅನುಮತಿ ಕೊಟ್ಟಿದ್ದು ವಿಶೇಷ. ಇದು ಕೂಡ ಒಬ್ಬರನ್ನೊಬ್ಬರು ನಂಬಿ ಬಾಳುವ ಪ್ರಾಣಿಗಳ ಗುಣ. ಇವುಗಳಿಂದಲೇ ಮಾನವನಿಗೆ ಆದರ್ಶ, ಸ್ಫೂರ್ತಿ, ಪ್ರೇರಣೆಯಾಗುವ ಈ ತಾತ್ವಿಕ ಗುಣಗಳೇ ಸಾತ್ವಿಕ ಮೌಲ್ಯಗಳು. ಇವುಗಳನ್ನು ಕಾವ್ಯ ಪ್ರಾಣಿಗಳ ವ್ಯಕ್ತಿತ್ವ ಮತ್ತು ಜೀವ ಪರಿಸರಗಳ ಮೂಲಕ ಕಟ್ಟಿಕೊಡುತ್ತದೆ. ಹಾಗಾಗಿ ಇಲ್ಲಿ ಕವಿಯ ತಿಳಿವಳಿಕೆ, ಜ್ಞಾನ ಔಚಿತ್ಯವಾದುದ್ದಾಗಿದೆ.

ಈ ಗೋವಿನ ಹಾಡು ಕಾವ್ಯದಲ್ಲಿ ಕವಿ ಪುಣ್ಯ ಕೋಟಿ ಗೋವಿನ ಗುಣ ಸ್ವಭಾವಗಳನ್ನು ಕಲ್ಪಿಸಿದಂತೆ ಡಾ.ಅರವಿಂದ ಮಾಲಗತ್ತಿ ಅವರ ಶ್ರೀಚಂಡಾಲ ಸ್ವರ್ಗಾರೋಹಣಂ ಕಾವ್ಯದಲ್ಲಿ ಒಂದು ತುಣುಕಿದೆ. ಇದರಲ್ಲಿ ಸತ್ಯವ್ರತ ಸ್ವರ್ಗಕ್ಕೆ ಹೋಗಲು ಅರ್ಹನಲ್ಲ ಎಂಬುದಕ್ಕೆ ವಸಿಷ್ಠ ಗುರುತಿಸಿರುವ ಅಪರಾಧಗಳಲ್ಲಿ ಸತ್ಯವ್ರತ ಗೋವನ್ನು ಕೊಂದು ಉಣಬಡಿಸಿದ್ದು ಒಂದು. ಇದನ್ನು ಸತ್ಯವ್ರತ ನನ್ನದು ಅಪರಾಧವಲ್ಲ, ನಾನು ಮಾಡಿದ್ದು ಪುಣ್ಯಕಾರ್ಯವೆಂದು ಸಮರ್ಥನೆ ನೀಡುತ್ತಾನೆ. ಅದಕ್ಕೆ ಕವಿ ಹೀಗೆ ಆಧಾರ ಒದಗಿಸುತ್ತಾರೆ.

"ಒರ್ವಾವಿನಿಂ ಪಲರ ಬದುಂಕುವೊಡೆ
ಈಗೀಂದೀಗಳೆನ್ನಂ ಬಲಿಗೈ. ಇದು ಪುಣ್ಯಕಾರ್ಯಂ ಅ
ಬರಗಾಲದೊಳ ವಿಪ್ರನೂ ಸ್ವಾನಮಂ ಭಕ್ಷಿಪುದು ಸಹ್ಯಂ
ಸಾವಗೋವಂ ಹತಗೈಯ್ವುದು ಪಾಪಮಲ್ತು
ನೀನೆನ್ನಂ ಬಲಿಗೈದು ಬಾಧಿತರಂ ರಕ್ಷಿಸು
ಎನ್ನಂ ಸಗ್ಗಕೆ ಕಳುಹಿಸೈ ಎಂದು ಕಕ್ಕುಸಿರಂಬಿಡುತೆ
ನಯನದೊಳ ನುಡಿದುದಿಂದಿಗೂ ಎದೆಯಂ ಘಾಸಿಗೊಳಿಸುವುದೈ
ನರಕ ಬಂದೊಡೆ ಬರ್ಕೆ ಸ್ವರ್ಗ ಬಾರದಿರ್ದೊಡೆ ಪೋಕೆ
ಪುರಜನ ಪರಿವಾರಂಗಳ್ ಬದುಂಕುಳಿಯಲಿ"28 (ಶ್ರೀ ಚಂಡಾಲ ಸ್ವರ್ಗಾರೋಹಣಂ)

ಎಂದು ಗೋವು ಸತ್ಯವ್ರತನಿಗೆ ಹೇಳುವ ಮಾತು ಎಂತಹವರನ್ನೂ ಮೂಖ ವಿಸ್ಮಿತರನ್ನಾಗಿಸುತ್ತದೆ. ಈ ಗೋವು ಬರಗಾಲದಿಂದ ಆಹಾರವಿಲ್ಲದೆ ಸಾವುನೋವುಗಳಿಂದ ನರಳುತ್ತಿರುವ ಪುರ ಜನರಿಗೆ ತನ್ನನ್ನು ಕಡಿದು ಉಣಬಡಿಸು. ನನ್ನ ಮಾಂಸದಿಂದ ಜನರ ಹಸಿವು ಪರಿಹಾರವಾಗಿ ಅವರ ಜೀವ ಉಳಿಯುವುದಾದರೆ, ಅದಕ್ಕಿಂತ ಪುಣ್ಯಕಾರ್ಯ ಯಾವುದು ಎಂದು ತೀರ್ಮಾನಿಸಿ ತೆಗೆದುಕೊಳ್ಳುವ ಜೀವದಾನದ ತ್ಯಾಗ ಅಪೂರ್ವವಾದದ್ದು. ಇದನ್ನೇ ಜೀವದಯೆ, ಜೀವಧರ್ಮ ಎನ್ನುವುದು. ಇಂತಹ ಗುಣ ನಿಜವಾಗಿಯೂ ಪ್ರಾಣಿಗಳಲ್ಲಿದೆಯೇ ? ಇದ್ದರೆ ಅದೇ ಮಾನವನಲ್ಲಿ ಏಕಿಲ್ಲ ? ಕವಿಗಳು ಕೇವಲ ಊಹೆ ಮೇಲೆ ಕಟ್ಟಿದ ಕಥೆಗಳೇ ಇವು ? ಎಂಬ ಅನುಮಾನ ಓದುಗನಲ್ಲಿ ಕಾಡುವುದು ಸಹಜ. ಆದರೂ ಇವುಗಳು ಮಾನವನ ಗುಣ ನಡತೆಗೆ ಸಾಂಕೇತಿಕಗಳೆಂದು ಗ್ರಹಿಸಬೇಕು. ಆದರೆ ಮಾನವ ಈ ಗುಣದ ಪ್ರಾಣಿಗಳನ್ನು ಮೂಕ ಪ್ರಾಣಿಗಳೆಂದು ಕರೆದು ಅವುಗಳ ಈ ಗುಣ, ನಡತೆಯನ್ನು ಗೌಣಗೊಳಿಸಿದ್ದಾನೆ. ಗೋವಿನ ಈ ಸತ್ಯ ಮಾತುಗಳ ನಡೆತೆ, ನಂಬಿಕೆಯ ಗುಣಗಳೇ ಅದರ ಸಂಸ್ಕೃತಿ ಎಂಬುದನ್ನು ಮನಗಾಣಬೇಕು. ಹಸುವಿರಲಿ ಜಗತ್ತಿನ ಯಾವುದೇ ಪ್ರಾಣಿಯನ್ನು ಮಾನವ ತಿನ್ನಬೇಕೆನಿಸಿದರೆ, ಅದರ ಅಂಗಾಂಗಗಳನ್ನು ಪಡೆಯಬೇಕೆನಿಸಿದರೆ ಅದನ್ನು ಕೊಲ್ಲುತ್ತಾನೆ. ಅದನ್ನು ಬೇಡವೆಂದು ತಡೆಯುವ ಶಕ್ತಿಯಾಗಲಿ, ಗುಣ ಸ್ವಭಾವವಾಗಲಿ ಯಾವ ಪ್ರಾಣಿಗೂ ಇಲ್ಲಾ. ಮಾನವ ಮಾಡುವ ಹಿಂಸಾತ್ಮಕ ಕಾರ್ಯಗಳನ್ನು ಅವು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲಾಗದಿದ್ದಾಗ ಸ್ವಿಕರಿ ಬಲಿಯಾಗುತ್ತವೆ. ಅದೇ ತರಹ ಈ ಗೋವು ತನ್ನ ಸಾವನ್ನು ಸ್ವೀಕರಿಸಿ, ಅದಕ್ಕೊಂದು ತಾತ್ವಿಕತೆಯನ್ನು ಕಟ್ಟಿಕೊಳ್ಳುತ್ತಿದೆ. ಇದು ಕವಿಯ ಬೌದ್ಧಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಅಂದರೆ ಕವಿ ದಲಿತ, ದುರ್ಬಲ ಜನರ ನಡವಳಿಕೆಗೆ ಈ ಗೋವನ್ನು ಹೋಲಿಸುತ್ತಾ, ಕವಿ ಕಲ್ಪಿಸಿ ಈ ಕಾವ್ಯದಲ್ಲಿ ಅನಾವರಣಗೊಳಿಸಿರುವುದು ಗಮನಾರ್ಹವಾಗಿದೆ.

ಇದುವರೆಗೂ ಪ್ರಸ್ತಾಪಿಸಿದ ಬೆಕ್ಕು, ನಾಯಿ, ಹಸು, ಹುಲಿಗಳಂತಹ ದೊಡ್ಡ ಪ್ರಾಣಿಗಳೊಂದು ರೀತಿಯಲ್ಲಿ ಮನುಷ್ಯನಿಗೆ ಆದರ್ಶವಾಗುವಂತೆ; ಇರುವೆ, ಸೆಗಣಿ ಹುಳುಗಳಂತ ಸಣ್ಣ ಪುಟ್ಟ ಹುಳುಗಳು ಅವನಿಗೆ ಸ್ಫೂರ್ತಿ ಪ್ರೇರಣೆಯಾಗಿರುವುದನ್ನು ಮರೆಯುವಂತಿಲ್ಲ. ಹಾಗಾಗಿ ಓಡು ಹುಳುವಿನ ಧೈರ್ಯ, ಸಾಹಸವನ್ನು ಕುರಿತು ಕುವೆಂಪು ಚಿತ್ರಿಸಿರುವ ಪ್ರಸಂಗವಿಲ್ಲಿ ಪ್ರಸ್ತುತ.

"ಒಂದು ಸೆಗಣಿ ಮುದ್ದೆಯಿಂದ ಒಂದು ಓಡುಹುಳು ಸಣ್ಣದೊಂದು ಉಂಡೆಯನ್ನು ರಚಿಸಿ ಅದನ್ನು ಹಿಂದು ಮುಂದಾಗಿ ತನ್ನ ಹಿಂಗಾಲುಗಳಿಂದ ಬಾಚಿಕೊಂಡು ಹೋಗುತ್ತಿತ್ತು. ಅತ್ಯಮೂಲ್ಯವಾದ ಪದಾರ್ಥವನ್ನು ಅತಿ ಪ್ರಯಾಸದಿಂದ ಸಾಗಿಸುವ ಸಾಹಸದಲ್ಲಿ ತೊಡಗಿದಂತಿತ್ತು ಅದರ ದೃಢ ಪ್ರಯತ್ನ. ಆ ಉಂಡೆ ಒಂದು ಸಣ್ಣ ದಿಬ್ಬವನ್ನು ಹತ್ತಿ ಅದರ ನೆತ್ತಿಗೆ ಬಂದೊಡನೆ ಮತ್ತೆ ಕೆಳಕ್ಕುರುಳಿತು. ಓಡುಹುಳು ಮತ್ತೆ ಅದನ್ನು ಬಳಿಸಾರಿ ತನ್ನ ಹಿಂಗಾಲುಗಳಿಂದ ತಬ್ಬಿ ಹಿಡಿದು ದಬ್ಬತೊಡಗಿತು. ಹೀಗೆ ಒಂದೆರಡು ಗೇಣು ಹೋಗುವುದರೊಳಗಾಗಿ ನಾನಾ ಅಡಚಣೆಗಳಿಗೆ ಒಳಗಾದರೂ ಧೃತಿಗೆಡದೆ ನಿರಾಶವಾಗದೆ, ಕೀನಿಸಿಕೊಳ್ಳದೆ ಪ್ರಶಾಂತವಾಗಿಯೇ ತನ್ನ ಕೆಲಸವನ್ನು ಸಾಗಿಸುತ್ತಿತ್ತು"29

ಓಡು ಹುಳುವಿನ ಈ ಕ್ರಿಯಾ ಗುಣವನ್ನು ಹೀಗೆ ನಿರೂಪಿಸಿದ ಕುವೆಂಪು ಈ ಹುಳುವಿನ ಹೋರಾಟದ ದೃಡತೆಯನ್ನು ಗುತ್ತಿಯ ಮುಂದಿನ ಕಾರ್ಯಕ್ಕೆ ಪ್ರೇರಣೆಯೊದಗಿಸುತ್ತಾರೆ. ಗುತ್ತಿ, ತಿಮ್ಮಿಯ ಬಗ್ಗೆ ಯೋಚಿಸುತ್ತ ಕಲ್ಲಿನ ಮೇಲೆ ಕುಳಿತಿದ್ದಾಗ ಈ ಓಡು ಹುಳುವಿನ ಸಾಹಸ ದೃಶ್ಯವನ್ನು ನೋಡುತ್ತಾನೆ. ಇದರಿಂದ ಗುತ್ತಿಯ ಮನಸ್ಸಿಗೆ ತನ್ನಕಷ್ಟ ಸುಖಗಳನ್ನು ಎದುರಿಸಲು ಧೈರ್ಯ ಸಾಹಸಗಳಿಂದ ಮುನ್ನಡೆಯಲು ದೃಢತೆಯನ್ನು ತಾಳಿ ಬದುಕಿನ ತತ್ವಗಳನ್ನು ಅರಿಯಲು ಸಾಧ್ಯವಾಗುತ್ತದೆ. ಓಡು ಹುಳುವಿನಿಂದ ಚೇತರಿಸಿಕೊಂಡ ಗುತ್ತಿಯ ಚೇತನ ತಿಮ್ಮಿಯನ್ನು ಅಪಹರಿಸಿ ಪಡೆಯುವ ಕಾರ್ಯದಲ್ಲಿ ಮುಂದೆ ಯಶಸ್ವಿಯಾಗುತ್ತಾನೆ. ಕಾದಂಬರಿಯಲ್ಲಿ ಎಲ್ಲಿಯೂ ಮನುಷ್ಯರಿಂದ ಧೈರ್ಯ, ಸ್ಫೂರ್ತಿ, ಪ್ರೇರಣೆ ಪಡೆದು ತಾನು ಕಾರ್ಯಸಾಧನೆ ಮಾಡಿರುವುದು ಸಿಕ್ಕುವುದಿಲ್ಲ. ಹಾಗಾಗಿ ಗುತ್ತಿ ಒಂದು ಓಡು ಹುಳುವಿನ ಪ್ರೇರಣೆ, ಪ್ರಭಾವಗಳಿಂದ ಮಾಡಿದ ಸಾಧನೆ ಪ್ರಕೃತಿ ಜೀವಿಗಳಿಂದ ಪಡೆದ ಜೀವನ ದರ್ಶನವಾಗಿದೆ. ಇದು ಮಾನವ ಕ್ಷುಲ್ಲಕವೆಂದು ತಿಳಿದು ತಿರಸ್ಕರಿಸುವ ಜೀವಿಗಳಿಂದ ಪಡೆದ ಬಾಳ್ವೆಯ ಕೊಡುಗೆ.

ಇಂತಹ ಜೀವಿಗಳು ಪ್ರಕೃತಿಯಲ್ಲಿ ಎಷ್ಟಿಲ್ಲ? ಜೇಡರ ಹುಳು, ಇರುವೆ ಮುಂತಾದ ಪ್ರಾಣಿಗಳೆಲ್ಲ ತಮ್ಮ ತಮ್ಮ ಕೆಲಸ ಕಾರ್ಯಗಳ ಶ್ರದ್ಧೆ, ಒಗ್ಗಟ್ಟು ಹೊಂದಾಣಿಕೆಗಳಿಂದ ಸಾಗಿಸುವ ಜೀವನ ಪ್ರವೃತ್ತಿಯ ಸಹಜೀವನ ತತ್ವವನ್ನು ನಿರ್ಲಿಪ್ತತೆಯಿಂದ ನಿಶ್ಶಬ್ಧವಾಗಿ ಪ್ರಕಟಗೊಳಿಸುತ್ತವೆ. ಪ್ರಕೃತಿ ಪ್ರಾಣಿಗಳ ಈ ಸೂಕ್ಷ್ಮತೆ ಮತ್ತು ರಹಸ್ಯದ ಕಡೆ ಮಾನವನ ಪಂಚೇಂದ್ರೀಯಗಳು ಮತ್ತು ಜ್ಞಾನೇಂದ್ರಿಯಗಳು ಅವನ ನಾಳೆಯ ಭವಿಷ್ಯ ಪ್ರಜ್ಞೆಯಿಂದ ತೆರೆದು ಕೊಳ್ಳದೆ ಹೋದರೆ, ಇವತ್ತಿನ ಜೀವಿಗಳ ಮತ್ತು ಸಂಸ್ಕೃತಿಗಳ ಭೇದ ಭಾವದ ಅಸಮಾನತೆಯ ಸಮಸ್ಯೆಗಳ ಜಾಗೃತಿಯಿಂದ ನಿಯಂತ್ರಣಕ್ಕೊಳಪಡದೆ ಹೋದರೆ, ಯಾವ ಜೀವಿಗಳ ಜೀವನವೂ ಅರಳದು. ಮಾನವನ ಹಿಂಸಾವಾದಿ ಚಟುವಟಿಕೆಗಳ ಸಂಸ್ಕೃತಿ ಪರಿಶೀಲನೆಗೊಳಪಟ್ಟು ಪರಿವರ್ತನೆಯಾಗದಿದ್ದರೆ ಮುಂದಿನ ಮಾನವ ಜೀವನದ ಪ್ರಾಕೃತಿಕ, ಸಾಮಾಜಿಕ, ಆಧುನಿಕ, ವಿಜ್ಞಾನ–ತಂತ್ರಜ್ಞಾನಗಳ ಸಮಸ್ಯೆಗಳಿಗೆ ಪರಿಹಾರ ಸಿಗಲಾರದು. ಹಾಗಾಗಿ ಮಾನವನ ಸ್ವಾರ್ಥ, ದುರಾಸೆಯ ಚಟುವಟಿಕೆಗಳ ಸಂಸ್ಕೃತಿಯಿಂದ ಸಂಭವಿಸುತ್ತಿರುವ ಹಾನಿಗಳನ್ನು ಉಲ್ಲೇಖಕ್ಕಾಗಿ ಇಲ್ಲಿ ನೀಡಲಾಗಿದೆ.

2.ಮಾನವನ ಸ್ವಾರ್ಥಪ್ರವೃತ್ತಿಯ ಗುಣ, ಕಾರ್ಯಗಳಿಂದ ಜೀವಹಾನಿ ಸಂಸ್ಕೃತಿ:

ಪ್ರಾಣಿಗಳ ಈ ಸೂಕ್ಷ್ಮತೆ, ಚುರುಕುತನ, ಶಕ್ತಿ, ಸಾಮರ್ಥ್ಯಗಳು ಮಾನವನ ಗ್ರಹಿಕೆಗೆ ಸಿಕ್ಕಮೇಲೆ ಅವುಗಳ ಉಪಯೋಗವನ್ನು ಇವನು ಬೇರೆ ಬೇರೆ ರೀತಿಯಲ್ಲಿ ತನ್ನ ಉಪಯೋಗಗಳಿಗೆ ಅನುಗುಣವಾಗಿ ಬಳಸಿಕೊಂಡು ಪಳಗಿಸಿದ್ದಾನೆ. ಇದನ್ನು ಬೇಟೆ, ಆಟ, ಜೂಜು ಮುಂತಾದ ಮಾನವ ಕ್ರಿಯೆಗಳಿಂದ ಗಮನಿಸಬಹುದು. ಈ ಪ್ರವೃತ್ತಿಯಿಂದ ಇವನು ತಮ್ಮ ತಮ್ಮವರಲ್ಲೇ ವೈಷಮ್ಯ ಬೆಳೆಸುವ ಕಾರ್ಯ, ಕರ್ಮಗಳನ್ನುದ ಹಿಂಸೆ, ಶಿಕ್ಷೆಗಳಿಂದ ಮಾತು ಮತ್ತು ಚಿಂತನಾ ಹೀನ ಪ್ರಾಣಿಗಳಿಗೆ ಬಿತ್ತಿ, ಬೆಳೆಸಿ, ಪ್ರಾಣಿ ಪ್ರಾಣಿಗಳ ನಡುವೆ ಕ್ರೌರ್ಯ, ಹಿಂಸೆಗಳನ್ನು ಪ್ರಚೋದಿಸಿ ಕೆಲವು ಪ್ರಾಣಿಗಳ ನಾಶಕ್ಕೆ ಕಾರಣನಾಗಿದ್ದಾನೆ.

ಸಾಕು ಪ್ರಾಣಿಗಳನ್ನಂತೂ ಪ್ರೀತಿ, ಕಾಳಜಿಯಿಂದ ಸಾಕುವುದು ಸಾಮಾನ್ಯ. ಆ ಸಂದರ್ಭದಲ್ಲಿ ಪ್ರಾಣಿಗಳ ಜೊತೆ ವರ್ತಿಸುವ ಶುದ್ಧಗುಣಗಳು ಮಾನವೀಯವಾದವು ಎನ್ನುವುದು ರೂಢಿ. ಆದರೆ ಅದರೊಳಗೆ ಸುಪ್ತವಾಗಿರುವ ಸ್ವಾರ್ಥದ ಕ್ರೌರ್ಯ, ಹಿಂಸೆಗಳು ಗೋಚರಿಸುವುದಿಲ್ಲ. ಇದು ಮಾನವ ಕೇಂದ್ರಿತ ಪ್ರಜ್ಞೆಯ ತಂತ್ರ.

ಈ ತಂತ್ರಕ್ಕೆ ಬಲಿಯಾಗುವ ಪ್ರಾಣಿಗಳ ಪ್ರಸಂಗ ಹಲವಾರಿವೆ. ಅವುಗಳಲ್ಲಿ ಕುವೆಂಪು ಅವರ ಕಥನ ಕವನದ 'ಡೂಲಿ' ನಾಯಿಯನ್ನು ಪ್ರಸ್ತಾಪಿಸಬಹುದು.

ಮಲೆಗಳಲ್ಲಿ ಮದುಮಗಳು ಕೃತಿಯ ಗುತ್ತಿ ಮತ್ತು ಹುಲಿಯನಂತೆ ಕುವೆಂಪು ಅವರ ಕಥನ ಕವನಗಳು ಕೃತಿಯ ಡೂಲಿ ಕವನದ ತಿಮ್ಮ ಮತ್ತು ಡೂಲಿಯ ಪಾತ್ರಗಳಿವೆ. ಇವು ಬೇಟೆಗಾಗಿ ರೂಪುಗೊಂಡು ಅದರಲ್ಲೇ ಕೀರ್ತಿ ಪಡೆದು, ಒಬ್ಬರಿಗೊಬ್ಬರು ಸಮಾನರಾಗಿ ಬೆಳೆಸಿಕೊಂಡ ಪ್ರವೃತ್ತಿಯನ್ನು ಕವಿ 'ಬೇಟೆಗಾರರಿಬ್ಬರಿಂತು ಬೇಟೆಯಾಡುತ್ತಿದ್ದರು' ಎನ್ನುತ್ತಾರೆ. ಕೊನೆಗೆ ಇದರಲ್ಲೇ ನಾಯಿ ಡೂಲಿ ದುರಂತಕ್ಕಿಡಾದದ್ದನ್ನು ಕವಿ ಹೀಗೆ ನಿರೂಪಿಸುತ್ತಾರೆ.

"ನಾಯಿ ಹಂದಿ ತಡೆಯಿತೆಂದು ತಿಮ್ಮ ನುಗ್ಗಿ ನಡೆದ ಮುಂದೆ
ಬಂದೆ ಬಂತು ಮಾರಿ ಹಂದಿ ಹೂಂಕರಿಸುತ್ತ ಕೋರೆ ಮರೆಸು !
ಅದರ ಹಿಂದೆ ಡೂಲಿ ಬಗುಳಿ ಹಾರಿ ಬಂತು ಮಿಂಚಿನಂತೆ !
ತಿಮ್ಮನೊಡನೆ ಕೋವಿಯೆತ್ತಿ ಗುರಿಯ ಗುಂಡು ಹೊಡೆದನು.!
ಮುಗ್ಗರಿಸುತ ಹಂದಿ ಬಿತ್ತು ಅ ಡೂಲಿ ಕೂಗುತಾಚೆ ಬಿತ್ತು !
ತಿಮ್ಮ ಮುಂದೆಯೋಡಿ ನೋಡೆ ನಾಯಿಯಳುತ ಹೊರಳುತ್ತಿತ್ತು !
ಹಂದಿಯೊಡಲ ದಾಟಿ ಗುಂಡು ನಾಯಿಯೊಡಲ ಭೇದಿಸಿತ್ತು !
ತಿಮ್ಮನ ಕಡೆ ನೋಡುತೊರಲಿ ಡೂಲಿ ಕಣ್ಣ ಮುಚ್ಚಿತು"30 (ಡೂಲಿ)

ಡೂಲಿಯ ಈ ದುರಂತಕ್ಕೆ ತಿಮ್ಮನ ಮಾಂಸಾಹಾರ ರುಚಿಯ ಚಟದ ಸ್ವಾರ್ಥ ಸ್ವಭಾವಕ್ಕೆ ನಾಯಿಯನ್ನು ಬಳಸಿಕೊಂಡದ್ದು; ಅದರೊಡನೆ ತನ್ನ ಪ್ರೀತಿ, ಸ್ನೇಹದ ಬಾಂಧವ್ಯ ಬೆಳೆಸಿಕೊಂಡು ಬೆಳೆದ ಪ್ರವೃತ್ತಿಯ ಪರಿಣಾಮವೇ ಡೂಲಿಗೆ ಸಾವು ತಂತು. ತಿಮ್ಮನಿಗೆ ತನ್ನ ನಾಯಿಯ ಪರಿಜ್ಞಾನವಿಲ್ಲದೆ ಬೇಟೆ ಹಂದಿಯ ಮೇಲೆ ಮಾತ್ರ ಅವನ ಜ್ಞಾನವಿದ್ದು, ಒಂದೇ ಗುಂಡಿಗೆ ಎರಡೂ ಬಲಿಯಾಗಬೇಕಾಯಿತು. ಇಂತಹ ಬೇಟೆಗಾರರ ವೃತ್ತಿ ತಪಸ್ಸಿನಂತಿರುವುದರಿಂದಲೇ, ಅವರಿಗೆ ತಮ್ಮ ಬೇಟೆ ಪ್ರಾಣಿಗಳ ಮೇಲೆ ಮಾತ್ರ ಎಚ್ಚರ, ಪರಿಜ್ಞಾನವಿದ್ದು, ಉಳಿದ ಜನಜೀವನ ಮತ್ತು ಪರಿಸರ ಶೂನ್ಯವಾಗಿರುತ್ತದೆ. ಈ ಸ್ಥಿತಿಯಿಂದ ಆಘಾತ ಉಂಟಾದಾಗ ಆಕಸ್ಮಿಕವೆಂದು ಜಾರಿಕೊಳ್ಳುವುದು ಕೂಡ ಮಾನವನ ಸಹಜ ಸ್ವಭಾವ. ಈ ಮಾತಿಗೆ ತಿಮ್ಮ 'ಡೂಲಿ' ಯನ್ನು ಕೊಂದಿದ್ದು 'ನಾಗಿ' ಪದ್ಯದ ತಂದೆ ಮಗಳು 'ನಾಗಿ' ಯನ್ನು ಕೊಂದಿದ್ದು ಮತ್ತು 'ಮರಸು ಬೇಟೆ' ಪದ್ಯದ ತಂದೆ ತನ್ನ ಮಗನ ಮೇಲೆ ಕೋವಿ ಗುರಿಯಿಟ್ಟಿದ್ದು ಮುಂತಾದವು ಗಮನಾರ್ಹವಾಗಿವೆ.

ಇವನ್ನೆಲ್ಲ ಗಮನಿಸಿದರೆ ಮೋಸದಿಂದ ಮನುಷ್ಯ ಜೀವಹಾನಿ ಮಾಡುವುದೇ ಬೇಟೆಯಾಗಿದೆ. ಈ ಕ್ರಿಯೆ ಆದಿ ಮಾನವನಿಂದ, ಆಧುನಿಕ ಮಾನವನವರೆಗೆ ಬೆಳೆದುಬಂದಿದೆ. ಇದಕ್ಕೆ ಆಧಾರಗಳು ರಾಮಾಯಣ, ಮಹಾಭಾರತಗಳ ಕಾಲದಿಂದಲೂ ದೊರೆಯುತ್ತವೆ. ಅದರಲ್ಲೂ ರಾಮಾಯಣ ಹುಟ್ಟಿದ್ದೇ ಬೇಟೆಯಿಂದ. ಯಾಕೆಂದರೆ ವಾಲ್ಮೀಕಿ ಸೂರ್ಯನಿಗೆ ನಮಸ್ಕಾರ ಮಾಡುತ್ತಿದ್ದಾಗ ಬೇಡನ ಬಾಣಕ್ಕೆ ಬಲಿಯಾದ ಹಕ್ಕಿಯೊಂದು ಅಲ್ಲಿ ಬೀಳುತ್ತದೆ. ಅದನ್ನು ವಾಲ್ಮೀಕಿ ಹಿಡಿದುಕೊಂಡು "ಮಾಃನಿಷಾದಃ" ಎಂದದ್ದು. ಅವನ ಈ ಉದ್ಗಾರದ ನುಡಿಯೇ ಕೊನೆಗೆ ರಾಮಾಯಣ ಸೃಷ್ಟಿಗೆ ಕಾರಣವಾಯಿತು ಎನ್ನುವ ಮಾತಿದೆ. ಇದು ನಿಜವೋ ಸುಳ್ಳೋ ತಿಳಿಯದು. ಆದರೆ ಬೇಟೆ ಪ್ರವೃತ್ತಿ ರೂಢಿಯಲ್ಲಿದ್ದ ಕಾಲದ ದಾಖಲೆ ಗ್ರಂಥವಾಗಿ ನಮ್ಮೆದುರು ರಾಮಾಯಣವಿರುವುದು ಸತ್ಯ. ಹಾಗಾಗಿ ಅಂದಿನಿಂದ ಇಂದಿನವರೆಗೂ ಮನುಷ್ಯ ಹಲವಾರು ತಂತ್ರ ಮತ್ತು ಮಾರ್ಗೋಪಾಯಗಳನ್ನು ಬಳಸುತ್ತಲೇ ಅವನು ಬೇಟೆಯನ್ನು ವಿನೋದಕ್ಕಾಗಿ, ತನ್ನ ರಕ್ಷಣೆಗಾಗಿ, ಮಾಂಸರುಚಿಯ ವ್ಯಾಮೋಹಕ್ಕಾಗಿ, ಮತ್ತು ಇದರಿಂದ ಬೇಟೆಯನ್ನೇ ಚಟವನ್ನಾಗಿ ಮಾಡಿಕೊಂಡು, ಈ ಪ್ರವೃತ್ತಿಯನ್ನೇ ಶ್ರೇಷ್ಠವೆಂದು ಬಗೆದು ಅದನ್ನೇ ಪೌರುಷಕ್ಕೆ, ಹೆಸರು, ಕೀರ್ತಿ ಪಡೆಯುವುದಕ್ಕಾಗಿ ರೂಢಿಸಿಕೊಂಡಿದ್ದಾನೆ. ಹೀಗೆ ನಾನಾ ರೀತಿಯಲ್ಲಿ ತನ್ನ ಸ್ವಸುಖಕ್ಕಾಗಿ ಬೇಟೆಯಂಥ ಹಿಂಸಾ ಪ್ರವೃತ್ತಿಯನ್ನು ನಡೆಸುತ್ತಲೇ ಬಂದಿರುವುದನ್ನು ಸಾಹಿತ್ಯ ದಾಖಲಿಸುತ್ತದೆ. ಇದರ ಆಯ್ದ ಕೆಲವು ತುಣುಕುಗಳನ್ನು ಮೇಲಿನ ಮಾತುಗಳಿಗೆ ಪೂರಕವಾಗಿ ಉಲ್ಲೇಖಿಸುವುದಾದರೆ ವಿನೋದಕ್ಕಾಗಿ ಮಾಡುವ ಬೇಟೆ ಮಾನವರ ಸಂತೋಷಕ್ಕಾಗಿ, ಕಾಲಹರಣಕ್ಕಾಗಿ ಮಾಡುವ ಕ್ರಿಯೆ. ಇಂತಹ ಒಂದು ಸನ್ನಿವೇಶವನ್ನು ಕುವೆಂಪು ಕಾನೂರು ಹೆಗ್ಗಡತಿ ಕೃತಿಯಲ್ಲಿ 'ಪುಟ್ಟಣ್ಣನ ಕಣಿ ಹಂದಿಯ ಬೇಟೆ' ಪ್ರಸಂಗದಲ್ಲಿ ತರುತ್ತಾರೆ. ಇದು ಭೂಮಿ ಹುಣ್ಣಿಮೆ ಹಬ್ಬದ ಹಿಂದಿನ ದಿನ ನಡೆಯುತ್ತದೆ. ಅಂದರೆ ಈ ಕಳಮೆಶ್ರೀಯ ಪೂಜೆಗೆ ಅಗತ್ಯವಾದ ಸಸ್ಯಾಹಾರ, ಮಾಂಸಾಹಾರಗಳನ್ನು ಕಾಡಿಗೆ ಹೋಗಿ ವಿನೋದ ರೀತಿಯಲ್ಲಿ ಕಾಲ ಕಳೆದು ತರುವುದು ರೂಢಿ. ಹಾಗಾಗಿ ಈ ಹಬ್ಬದ ಸಂದರ್ಭದಲ್ಲಿ ಹೂವಯ್ಯ, ರಾಮಯ್ಯ, ವಾಸು, ಪುಟ್ಟಣ್ಣ ಮುಂತಾದವರೆಲ್ಲ ಕಾಡಿಗೆ ಹೋಗಿದ್ದಾಗ, ಇದ್ದಕ್ಕಿದ್ದಂತೆ ಮುಳ್ಳು ಹಂದಿಯ ತಲೆ ಅದರ ವಾಸದ ಗುಹೆಯ

ಬಾಯಲ್ಲಿ ಕಾಣಿಸಿಕೊಂಡಿತು. ಆಗ "ಮಿಂಚಿನ ವೇಗದಿಂದ ಪುಟ್ಟಣ್ಣ ಎಡಗೈಯಿಂದ ಹಂದಿಯ ತಲೆಯನ್ನು ಬಲವಾಗಿ ಒತ್ತಿ ಹಿಡಿದುಕೊಂಡು, ಬಲಗೈಯಿಂದ ತನ್ನ ಕೋವಿಯ ಚೀಲದಲ್ಲಿದ್ದ ಬಾಕುವನ್ನು ಈಚೆಗೆಳೆದುಕೊಂಡು, ಹಂದಿಯ ತಲೆಯನ್ನು ಕಚ ಕಚ ಕಚನೆ ಕೊಚ್ಚ ತೊಡಗಿದನು. .....ಒಡೆದು ಚೂರು ಚೂರಾದ ಅದರ ತಲೋಡಿನಿಂದ ಕೋಡಿ ಹರಿಯುತ್ತಿದ್ದ ರಕ್ತ ಮಿಶ್ರಿತವಾದ ಬಿಳಿಯ ಮೆದುಳು ಬೀಭತ್ಸವಾಗಿ ತೋರತೊಡಗಿತು. ಆದರೂ ಪುಟ್ಟಣ್ಣನ ದೈತ್ಯಾವೇಶ ಇಳಿಯಲಿಲ್ಲ. ಬಾಕುವಿನಿಂದ ಕಣ್ಣುಬಳೆ, ಕಿವಿ, ನೆತ್ತಿ, ಮೂತಿ, ಬಾಯಿ ಇವುಗಳನ್ನು ಹುಲ್ಲು ಕೊಚ್ಚುವಂತೆ ಕೊಚ್ಚುತ್ತಿದ್ದನು"31

ಮನುಷ್ಯ ತನ್ನ ಸಂತೋಷಕ್ಕಾಗಿ ಪ್ರಾಣಿಗಳನ್ನು ಇಷ್ಟೊಂದು ಕ್ರೌರ್ಯ, ಹಿಂಸೆಗಳಿಂದ ಬೇಟೆಯಾಡುವ ಭೀಕರವಾದ ಕೃತ್ಯ ಮತ್ತೊಂದಿಲ್ಲ. ಇಂತಹ ಬೇಟೆಯ ವಿನೋದಕ್ಕಾಗಿ ರಾಜ, ಮಂತ್ರಿ ಮತ್ತು ಅವರ ಸೈನ್ಯ ಪರಿವಾರದವರು ಕಾಡಿಗೆ ಹೋಗುವಂತ ದೃಶ್ಯಗಳು 'ಹರಿಶ್ಚಂದ್ರ ಕಾವ್ಯ' ದಂಥ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಕಾಣುತ್ತೇವೆ. ಇದರಿಂದ ರೂಢಿ, ಸಂಪ್ರದಾಯಗಳಿಂದ ಈ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿರುವುದು ವೇದ್ಯವಾಗುತ್ತದೆ. ಜೊತೆಗೆ ಜನರನ್ನು ಮತ್ತು ಅವರ ಸಾಕುಪ್ರಾಣಿಗಳನ್ನು ಆನೆ, ಹುಲಿ, ಚಿರತೆ, ಮುಂತಾದ ಕಾಡು ಮೃಗಗಳಿಂದ ರಕ್ಷಿಸುವ ಜವಾಬ್ದಾರಿ ಹಿಂದೆ ರಾಜನದಾಗಿತ್ತು. ಈಗ ಧೈರ್ಯ, ಶಕ್ತಿ, ಸಾಮರ್ಥ್ಯ ಜಾಣತನವುಳ್ಳ ಯಾರಾದರೂ ಮಾಡುತ್ತಾರೆ. ಇಂತಹ ರಕ್ಷಣೆಯ ಬೇಟೆಗೆ ಕಾರಣ ಕಾಡೆಲ್ಲ ನಾಡಾಗಿ ಪರಿವರ್ತನೆಯಾಗುತ್ತಿರುವುದರಿಂದ ಇದರಿಂದಾಗಿ ಕಾಡು ಮೃಗಗಳು ದಿಕ್ಕಾಪಾಲಾಗಿ ಆಶ್ರಯ ಹುಡುಕಿ ಊರು ಸೇರಿ ಊರಿನ ಹೊಲಗದ್ದೆ ತೋಟಗಳ ಬೆಳೆಯನ್ನು ಆಹಾರಕ್ಕಾಗಿ ಕೆಲವು ನಾಶಮಾಡಿದರೆ, ಇನ್ನು ಕೆಲವು ಸಾಕು ಪ್ರಾಣಿಗಳನ್ನು ಮತ್ತು ಜನರನ್ನು ಬಲಿ ತೆಗೆದುಕೊಳ್ಳುತ್ತಿವೆ. ಇವುಗಳ ಭಯದಿಂದ ತಮ್ಮ ರಕ್ಷಣೆಗಾಗಿ ಜನ ಬೇಟೆಯಾಡುವುದನ್ನು ಬೆಳೆಸಿಕೊಂಡು ಬಂದಿದ್ದಾರೆ. ಈ ಮಾತಿಗೆ ಸಂಭಾಷಣೆ ರೂಪದ ಬೆಟ್ಟದ ಜೀವ ಕಾದಂಬರಿಯ ತುಣುಕಿನ ಈ ಮಾತು ಉಲ್ಲೇಖನೀಯವಾದದ್ದು.

"ಅದೊಂದು ಹುಲಿಯನ್ನು ಹುಡುಕಿ ಕೊಲ್ಲಿಸದೆ ಹೋದರೆ, ಹಟ್ಟಿಯೊಳಗಿನ ದನಗಳೊಂದೂ ಉಳಿಯುವ ಹಾಗಿಲ್ಲ. ಅದೇನು ದೊಡ್ಡ ಕೆಲಸ, ಹುಲಿಯನ್ನು ಒಂದೇ ಗುಂಡಿಗೆ ಹಾರಿಸಿ ಬಿಡುವ ಎಂದನಪ್ಪ". .
ಮಾಡುವವನಂತೆ. ಆ ಬಾವನೊಬ್ಬನೇ ಆರೋ, ಎಂಟೋ ಹುಲಿಗಳನ್ನು ಫೈಸಲು ಮಾಡಿದ್ದಾನಂತಲ್ಲ!" ಕಳೆದ ತಿಂಗಳಲ್ಲಿ ಒಂದು ಅಡ್ಡ ಬಲಿಪ್ಪಬನೋ 'ಬೇಗಂಪಲ್ಲಿ' ಯೋ! ಒಬ್ಬ ಗೌಡನ ತೋಳನ್ನು ಕಚ್ಚಿ ಹರಿದು ಬಿಟ್ಟಿತಲ್ಲ. ಅವನು ಬಚಾವಾದದ್ದು ದೊಡ್ಡದು. ಅಂದರೆ ನೋಡಿ, ಅದಕ್ಕೆ ಬೇಟೆಯಲ್ಲಿ ಒಂದೆರಡು ಗಾಯವಾಯಿತು ಎಂದರೆ, ಮುಂದೆ ಅದನ್ನು ಕೊಲ್ಲುವ ತನಕವೂ, ಊರವರು ಜೀವವನ್ನು ಮುಷ್ಠಿಯಲ್ಲಿ ಹಿಡಿದುಕೊಂಡೇ ತಿರುಗಾಡಬೇಕು".

"ಅಷ್ಟು ಹೆದರಿಕೆಯಲ್ಲವೆ ನಿಮ್ಮಲ್ಲಿ"

"ಅದೊಂದರದ್ದೇ ಅಂದರೇನು! ಆನೆಗಳ ಲೂಟಿ ಕಡಿಮೆಯಿದೆಯೇ! ಆನೆಯ ಹಿಂಡು ಬಂದು ನುಗ್ಗಿದರೆ ಅಡಿಕೆ ತೋಟ ಒಂದು ರಾತ್ರಿಯಲ್ಲಿಯೇ ನೆಲಸಮ"32

ಕಾಡು ಬಯಲಾಗುತ್ತಿರುವ ಪ್ರದೇಶಗಳಲೆಲ್ಲ ಇಂತಹ ಪ್ರಾಣಿಗಳ ಕಾಟ ಇವತ್ತಿಗೂ ದಟ್ಟವಾಗಿದೆ. ಈ ವಾತಾವರಣ ಹೊಂದಿರುವ ತಾಳವಾಡಿ, ನಾಗಲೂರು, ಲಕ್ಕವಳ್ಳಿ ಮುಂತಾದ ಊರುಗಳಿವೆ. ಇಲ್ಲಿ ಹುಗ್ಸ್ ಮತ್ತು ಅಂಡರ್ಸನ್ ಅವರು ನರಭಕ್ಷಕ ಹುಲಿಯನ್ನು ಬೇಟೆಯಾಡಿದ ಪ್ರಸಂಗಗಳು ಗಮನಾರ್ಹವಾಗಿವೆ. ಕೆನೆತ್ ಅಂಡರ್ಸನ್ ಅವರು ತಾವು ಬೇಟೆಯಾಡಿದ ಹುಲಿಯನ್ನು ಪರೀಕ್ಷಿಸಿ ಅದರ ಸ್ಥಿತಿಗತಿಗಳನ್ನು ಕುರಿತು ಹೀಗೆ ಹೇಳುತ್ತಾರೆ.

"ಹುಲಿ ಸತ್ತ ಮೇಲೆ ಪರೀಕ್ಷಿಸಿದಾಗ ಅದೊಂದು ವಯಸ್ಸಾದ ಹುಲಿ ಎಂದು ಗೊತ್ತಾಯ್ತು. ಕಾಡಿನ ಪ್ರಾಣಿಗಳನ್ನು ಕೊಲ್ಲಲಸಮರ್ಥವಾದ ಈ ಹುಲಿ ಗತ್ಯಂತರವಿಲ್ಲದೆ ದನಗಳನ್ನು ಹಿಡಿಯಲಾರಂಭಿಸಿತ್ತು. ಅಲ್ಲಿಂದ ಮುಂದೆ ನರಭಕ್ಷಕನಾಗಲು ಅದಕ್ಕೆ ಬಹಳ ದಿನ ಬೇಕಾಗಲಿಲ್ಲ"33

ಹುಲಿಯ ಮೂಲ ಆಹಾರ ಕಾಡು ಪ್ರಾಣಿಗಳೇ. ಅವು ಸಿಗದಿದ್ದಾಗ, ಇದರ ಹಸಿವಿನ ಪರಿಹಾರ ಮಾರ್ಗಕ್ಕಾಗಿ ಮನುಷ್ಯನನ್ನು ತಿನ್ನುತ್ತದೆ. ಹೀಗಿದ್ದರೂ ಮನುಷ್ಯನ ಮಾಂಸ ರುಚಿಯಿಂದಾಗಿ ನರಭಕ್ಷಕನಾಗಿದೆ ಎನ್ನುವ ವಾಡಿಕೆ. ಆದರೆ ರುಚಿಯನ್ನು ಅರಸಿ ಬೇಟೆಯಾಡುವ ಪ್ರಾಣಿಗಳು ತುಂಬಾ ವಿರಳ. ಇವುಗಳಿಗೆ ಮನುಷ್ಯನ ಮಾಂಸದ ಮೇಲೆ ವಿಶೇಷವಾದ ಒಲವಿದ್ದರೆ ಮನುಷ್ಯನಿಗೆ ಹಲವಾರು ಪ್ರಾಣಿ, ಪಕ್ಷಿ ಮಾಂಸದ ಮೇಲೆ ವಿಶೇಷ ಆಸಕ್ತಿ. ಆದ್ದರಿಂದಲೇ ಇವನು ಕೇವಲ ಮಾಂಸಕ್ಕಾಗಿ ಬೇಟೆಯಾಡುವ ಸಂದರ್ಭ ಪ್ರಸಂಗಗಳು ಇವತ್ತಿಗೂ ಮಾನವ ಸಮುದಾಯದೊಳಗಿವೆ. ಅವುಗಳಲ್ಲಿರುವ ಜನರ ಪಾತ್ರಗಳಾಗಿ 'ಕರ್ವಾಲೊ' ಕಾದಂಬರಿಯ 'ಬಿರಿಯಾನಿ ಕರಿಯಪ್ಪ'ನನ್ನು ಪರಿಸರದ ಕಥೆಗಳು ಕೃತಿಯ ಮಾರನನ್ನು ಮತ್ತು 'ಅಕ್ಕಮ್ಮ ಹೇಳಿದ ಕಥೆ'ಯಲ್ಲಿ

ಬರುವ ಜಿಂಕೆಯ ಬೇಟೆಗಾರರು ಹಾಗೂ 'ಕಾನೂರು ಹೆಗ್ಗಡತಿ' ಕೃತಿಯ ಬೇಲರ ಬೈರನ ಮಗ ಗಂಗ ಅವನ ತಾಯಿ ಸೇಸಿ, ಗಾಡಿಯಾಳು ನಿಂಗನ ಮಗ ಪುಟ್ಟ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಇವರೆಲ್ಲ ಒಬ್ಬೊಬ್ಬರು ಒಂದೊಂದು ಜಾತಿಯ ಕಾಡುಪ್ರಾಣಿ, ಪಕ್ಷಿಗಳನ್ನು, ಕಡಿ, ಕೊಲ್ಲು, ಹಿಡಿ ಎಂಬ ಶಿಕಾರಿಯಿಂದ ಮಾಂಸ ಭಕ್ಷಣೆಯ ರುಚಿ ಕಂಡವರು. ಇಂತಹ ಘಟನೆಗಳೆ ಮಾನವನ ಆಹಾರ ಸಂಸ್ಕೃತಿಯ ಮಾನವ ನಡವಳಿಕೆಗಳು.

ಹೀಗೆ ನಾನಾ ತರದ ಪ್ರಾಣಿಮಾಂಸದ ರುಚಿ ಹಿಡಿದ ಜನರು ಅವುಗಳ ಬೇಟೆಯನ್ನೇ ಚಟವನ್ನಾಗಿ ಮಾಡಿಕೊಂಡಿದ್ದಾರೆ. ಇವರ ಗುಣ ಸ್ವಭಾವಗಳ ಪ್ರತಿನಿಧಿಗಳಾಗಿ ಬಿರಿಯಾನಿ ಕರಿಯಪ್ಪ ಮತ್ತು 'ಕಾನೂರು ಹೆಗ್ಗಡತಿ' ಯ ಕೃಷ್ಣಪ್ಪ, ಜಾಕಿ ಮುಂತಾದ ಪಾತ್ರಗಳಿವೆ. ಯಾವುದೇ ಚಟಕ್ಕೆ ಮಾರುಹೋದವರು ಕೊನೆಗೆ ಅದರಲ್ಲೇ ಅವರ ಮೃತ್ಯು ಅಡಗಿರುತ್ತದೆ ಎನ್ನುವುದಕ್ಕೆ ಹುಲಿ ಬೇಟೆಗೆ ಹೋದ ಕೃಷ್ಣಪ್ಪ ಹುಲಿಯಿಂದಲೇ ಸಾವು ಕಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಜನರು ಇಂತಹ ಬೇಟೆಯ ಪ್ರವೃತ್ತಿಯನ್ನೇ ತಮ್ಮ ಪೌರುಷಕ್ಕೆ, ಕೀರ್ತಿ, ಪ್ರತಿಷ್ಠೆಗಾಗಿ ಬಳಸಿಕೊಳ್ಳುತ್ತಾರೆ ಎನ್ನುವುದನ್ನು ಕುವೆಂಪು ತಮ್ಮ ಕಾದಂಬರಿಗಳಲ್ಲಿ ಬರುವ ಕೃಷ್ಣಪ್ಪ, ದೊಡ್ಡಣ್ಣ ಹೆಗ್ಗಡೆ ಪಾತ್ರಗಳ ಮೂಲಕ ಕಟ್ಟಿಕೊಡುತ್ತಾರೆ. ಕೃಷ್ಣಪ್ಪನನ್ನು ಅವನ ತಂದೆ ನಪುಂಸಕ, ಹೇಡಿ, ಹೆಂಗಸು ಎಂದೆಲ್ಲ ಹೀಯಾಳಿಸಿದ್ದಕ್ಕಾಗಿ ಅವನು ತನ್ನ ಧೈರ್ಯ, ಶಕ್ತಿ, ಸಾಮರ್ಥ್ಯದ ಪೌರುಷವನ್ನು ಸಾಬೀತು ಮಾಡುವ ಸಲುವಾಗಿ ಹುಲಿ ಬೇಟೆಯನ್ನು ಆಯ್ಕೆ ಮಾಡಿಕೊಂಡು ಹುಲಿಯೊಂದಿಗೆ ಸಾವನ್ನಪ್ಪುತ್ತಾನೆ. ಮಲೆಗಳಲ್ಲಿ ಮದುಮಗಳು ಕೃತಿಯ ದೊಡ್ಡಣ್ಣ ಹೆಗ್ಗಡೆ ಭಾವ ರಂಗಪ್ಪಗೌಡರೊಂದಿಗೆ ಪಂಥ ಕಟ್ಟಿ, ತಾಯಿ ಹುಲಿಯನ್ನು ಕೊಂದು ಅದರ ಮರಿಗಳನ್ನು ಮನೆಗೆ ತಂದು, ತಮ್ಮ ಧೈರ್ಯ, ಸಾಹಸವನ್ನು ಸಾಬೀತು ಮಾಡಿ ಗೆದ್ದದ್ದರ ಪ್ರತೀಕವಾಗಿ ಅವರ ತಂಗಿಯನ್ನು ಕೇಳಿ ಮದುವೆಯಾಗುತ್ತಾರೆ.

ಇದೇ ತರಹ ಕುಡಿಯರ ಕೂಸು ಕಾದಂಬರಿಯ ಕರಿಯ ತನ್ನ ಗುರಿಗಾರಿಕೆಗಾಗಿ ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡಿ ಪ್ರತಿಷ್ಠೆಗಳಿಸಿ, ಆ ಮೂಲಕ ಪ್ರಾಣಿಗಳ ಮೇಲೆ ಸ್ವಾಧೀನ ಸಾಧಿಸಿ ಗುರಿಗಾರಿಕೆ ಪಡೆಯುತ್ತಾನೆ. ಇದನ್ನು ನಿರೂಪಿಸಲು ಲೇಖಕರು ಮೊದಲಿಗೆ ಅಜ್ಜ ಕೆಂಚನಿಂದ ಕರಿಯನಿಗೆ ಬಾಲ್ಯದಿಂದಲೂ ಪ್ರಕೃತಿಯ ಪ್ರಾಣಿ, ಗಿಡ, ಮರ, ಪರಿಸರವನ್ನು ಪರಿಚಯಿಸಿ ಅವುಗಳ ಮೇಲೆ ಪ್ರೀತಿ, ಆಸಕ್ತಿ ತುಂಬಿಸುತ್ತಾರೆ. ಬೆಳೆಯುತ್ತಾ ಬೆಳೆಯುತ್ತಾ ಗುರಿಗಾರಿಕೆಗೆ ಕರಿಯನ ಸ್ಪರ್ಧಾಳು ತುಕ್ರನಾಗುತ್ತಾನೆ. ಇವನಿಗಿಂತ ಕರಿಯ ಬಲಶಾಲಿ, ಧೈರ್ಯಶಾಲಿ, ಸಾಹಸಿ ಎಂದು ತೋರಿಸಲು ಅವನಿಂದ ಕರಡಿ, ಚಿರತೆ, ಹುಲಿ ಮುಂತಾದ ಪ್ರಾಣಿಗಳನ್ನು ಕೊಲ್ಲಿಸುತ್ತಾರೆ. ಹಾಗಾಗಿ ಇಲ್ಲಿ ಪ್ರಾಣಿ, ಪ್ರೀತಿ, ಜೀವಪರ ಧೋರಣೆಗಿಂತ ಮಾನವ ಕೇಂದ್ರಿತವಾದ ಕರಿಯನ ಪರ ಧೋರಣೆಯೇ ಪ್ರಧಾನವಾಗಿದೆ. ಇದನ್ನು ಕೃತಿಯುದ್ದಕ್ಕೂ ಕಾಣುತ್ತೇವೆ. ಹೇಗೆಂದರೆ ಪ್ರಾಣಿ ಪಕ್ಷಿಗಳ ಮೇಲೆ ಪ್ರೀತಿ, ಕಾಳಜಿಯನ್ನು ಬೆಳೆಸಿಕೊಂಡ ಕರಿಯ ಜಿಂಕೆಯ ಅಂದ ಚಂದಕ್ಕೆ ಆಕರ್ಷಿತನಾಗಿ ಉಳಿಲಿಗೆ ಸಿಕ್ಕ ಹರಿಣಿ ಮರಿಯನ್ನು ಹಿಡಿದು ರಕ್ಷಿಸಿ ಅದನ್ನು ಸಾಕಬೇಕೆಂದು ಬಯಸುತ್ತಾನೆ. ಆದರೆ ಅದು ಕೊನೆಗೂ ತುಕ್ರನ ಸ್ವಾಹವಾದಾಗ ಅವನಿಗೆ ಕರಡಿ ಹಿಡಿಯುವ ಬಯಕೆ ಮೊಳೆಯುತ್ತದೆ. ನಂತರದಲ್ಲಿ ಬೋನಿಗೆ ಸಿಕ್ಕ ಮರಿ ಕರಡಿಯನ್ನು ಹಿಡಿದು ಬೂದನಿಂದ ತಾಯಿ ಕರಡಿಯನ್ನು ಕೊಲ್ಲಿಸುತ್ತಾನೆ. ಹೀಗೆ ಕರಿಯನ ಮನಸ್ಸಿಗೆ ಕ್ರಮ ಕ್ರಮವಾಗಿ ಚಿಕ್ಕ ಪ್ರಾಣಿಗಳಿಂದ ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವಂತಹ ಪ್ರೇರಣೆ ದೊರೆಯುತ್ತದೆ. ಆದ್ದರಿಂದಲೇ "ಹುಲಿ ಹಿಡಿದರೇನು? ಕಾಟಿ ಹಿಡಿದರೇನು? ಆನೆಯನ್ನೇ ಹಿಡಿದರೇನು? ಎಂಬುದೇ ಅವನ ಮನದ ಚಪಲ." ಈ ಚಪಲದಿಂದಲೇ ಕರಿಯ ಬೆಟ್ಟದಂಚಿನ ಕಾಡ್ಗಿಚ್ಚನ್ನು ಕಂಡು "ಹೀಗೆ ಬೆಂಕಿ ಬೀಳುವಾಗ ಕಾಡಿನಲ್ಲಿರುವ ಆನೆಗಳೇನು ಮಾಡುತ್ತವೆ? ಕಾಟಿಗಳೆಲ್ಲಿಗೆ ಹೋಗುತ್ತವೆ? ಹುಲಿ ಎಲ್ಲಿಗೆ ಹೋದೀತು? ಎಂಬ ಲೆಕ್ಕ ಅವನದು"34

ಈ ಲೆಕ್ಕಾಚಾರ ಪ್ರಾಣಿಗಳ ಮೇಲಿನ ಕರುಣೆ, ಪ್ರೀತಿಯ ಭಾವನೆಯದ್ದಲ್ಲ, ಇವು ನನಗೆ ಸಿಗದಂತೆ ನಾಶವಾದರೆ, ಅಥವಾ ಎಲ್ಲೆಲ್ಲೋ, ಹೋದರೆ ಎಂಬ ಆತಂಕ ಭಾವದ್ದಾಗಿದೆ. ಲೇಖಕರು ಈ ಆತಂಕ ನಿವಾರಣೆಗೆ ಪೂರಕವಾಗಿ ಕಥೆ ನಿರೂಪಿಸಿದ್ದಾರೆ. ಹಾಗಾಗಿಯೇ ಮುಂದೆ ಬಟ್ಯಗೌಡನ ಬಯಲಿಗೆ ಬಂದ ಹುಲಿಯನ್ನು ಹೊಡೆಯಲು ಅವನ ಕೋರಿಕೆಯನ್ನು ಮನ್ನಿಸಿದ ಕರಿಯ ಅವನೊಡಗೂಡಿ ಬಟ್ಯನದೇನು ತನ್ನದೆ ಬಯಲಿನ ರಕ್ಷಣೆಗೆ ಮುಂದೆ ಬರುತ್ತಾನೆ. ಅವನು ಎತ್ತಿನ ಶವದ ಹತ್ತಿರ ಬಂದ ಹುಲಿಯನ್ನು ನೋಡಿ ಎಲ್ಲ ರೀತಿಯೂ ಜಾಗೃತಿಗೊಂಡು ಮಲೆರಾಯನನ್ನು ಸ್ಮರಿಸಿ ಹುಲಿಗೆ ಗುಂಡುಹಾರಿಸಿದ. ಆ ಏಟಿಗೆ ಹಾರಿ ಬಿದ್ದ ಹುಲಿಯ ಕೈ ಕಾಲುಗಳನ್ನು ಕರಿಯ ತಂದಿದ್ದ ಕತ್ತಿಯಿಂದ ಕತ್ತರಿಸಿ ಅದರ ಹೊಟ್ಟೆಗೆ ಚುಚ್ಚಿ ಚುಚ್ಚಿ ಸಾಯಿಸುತ್ತಾನೆ. ಇದರಿಂದ ಕರಿಯನ ವೀರ ಸಾಹಸದ ಸಾಧನೆ ಊರ ತುಂಬ ಹರಡಿ, ಊರ ಜನ ಕೊಂಡಾಡಿ ಇವನ ಈ ಸಾಧನೆಗೆ ಮತ್ತಷ್ಟು ಪ್ರೇರಣೆ ಸಿಕ್ಕಂತಾಗುತ್ತದೆ. ಈ ಹುಲಿ ಬೇಟೆಯಿಂದ ಇದನ್ನೇ ಒಂದು ಪ್ರವೃತ್ತಿಯನ್ನಾಗಿ

ಬೆಳೆಸಿಕೊಂಡ ಕರಿಯನ ಬೇಟೆಯ ಸಾಧನೆಯನ್ನು ಲೇಖಕರು ಹೇಳಿ ಚಿರತೆ ಕೊಂದ ಒಂದು ಘಟನೆಯನ್ನು ಹೀಗೆ ನಿರೂಪಿಸುತ್ತಾರೆ.

"ಚಿರತೆ, ಹುಲಿಗಳ ಬೇಟೆಗೆ ತನ್ನ ಹಳೆಯ ಕ್ರಮದಲ್ಲಿ ಹೊಂಚು ಹಾಕುತ್ತಾನೆ. ಆ ಒಂದು ವರ್ಷವೇ ಮೂರು ಮೂರು ಚಿರತೆಗಳನ್ನು ಹೊಡೆದ ಕೀರ್ತಿ ಅವನಿಗೆ ಬಂದಿತು. ಒಮ್ಮೆ ಈತ ತನ್ನ ತಾವಿಗೆ ಸಮನಾದ ಮುಚ್ಚು ಮರೆಯನ್ನು ಮಾಡಿಕೊಳ್ಳುವ ಮೊದಲೇ ಚಿರತೆ ಅವನಿರುವ ತಾವನ್ನು ಕಂಡಿತು. ..... ಚಿರತೆ ಅವನ ಮೇಲೆಯೇ ನೆಗೆಯಿತು. ಈತ ಕೈ ಬೀಸಿದ ಪೆಟ್ಟಿಗೆ ಚಿರತೆ ಗಾಯಗೊಂಡು ಕೆಳಕ್ಕೆ ಬಿದ್ದರೂ, ಅದು ಬಿದ್ದ ಭರಕ್ಕೆ ಇವನನ್ನು ಕೆಳಕ್ಕುರುಳಿಸಿತು. ಒಂದೆರಡು ನಿಮಿಷಗಳ ಕಾಲ ಈತ ಚಿರತೆಯೊಡನೆ ಮಾಡಿದ ಹೋರಾಟ, ಯಾರಿಗೂ ಕೀರ್ತಿ ತರಬೇಕು. ಚಿರತೆಯೇನೋ ಸತ್ತಿತ್ತು..... ಆ ಘಟನೆಯಾದ ಮೇಲಂತೂ ಕರಿಯನ ಮನಸ್ಸಿನಲ್ಲಿ ತನ್ನ ಬೇಟೆಗೆ, ಆನೆ ವಾಹನವಾಗಬೇಕೆಂಬ ಆಸೆ ಹುಟ್ಟಿತು. ಆದರೆ ತನಗೆ ಆನೆ ಹಿಡಿದು ಪಳಗಿಸಲು ಬಂದೀತೆ ಎಂಬ ವಿಚಾರ ಮಾತ್ರ ಅವನಿಗೆ ತಿಳಿಯದು. ಯಾವುದೇ ಒಂದು ವಿಚಿತ್ರ ವಿಧಿ ಅವನ ಈ ಆಸೆಯನ್ನು ಸಹ ಪೂರೈಸಿತೆಂದು ಆತ ಎಣಿಸಿರಲಿಲ್ಲ"35

ಮೇಲಿನ ಈ ವಿವರಗಳಿಂದ ಗುರಿಕಾರತ್ವದ ಗದ್ದುಗೆಗೇರುವ ಕರಿಯನ ಗುರಿ ಪ್ರಾಣಿ ಹಿಂಸೆಗಳಿಂದ ಸಿದ್ದಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಲೇಖಕರು ವಿಚಿತ್ರ ವಿಧಿಯಿಂದ ಅವನ ಆಸೆ ಪೂರೈಸಿತೆಂದು, ಮುಂದೆ ಕರಿಯ ಆನೆ ಹಿಡಿದು ಪಳಗಿಸಿ ಸುಬ್ರಹ್ಮಣ್ಯಕ್ಕೆ ಆನೆ ಸವಾರಿ ಮಾಡಿ ನಾಯಕತ್ವ ಸಾಮರ್ಥ್ಯವನ್ನು ಸಾಬೀತು ಪಡಿಸಿ ಗುರಿಕಾರತ್ವ ಕೊಡಿಸುವ ಕ್ರಮಕ್ಕೆ ಧಕ್ಕೆಯುಂಟು ಮಾಡಿದ್ದಾರೆ. ಯಾಕೆಂದರೆ ವಿಧಿ ಪ್ರವೇಶವಾಗಿ ಕರಿಯನ ಸ್ವಸಾಧನೆ ಗೌಣವಾಗುತ್ತದೆ.

ಒಟ್ಟಾರೆ ಕೃತಿಯಲ್ಲಿ ಕರಿಯ ಪ್ರಾಣಿ ಪ್ರೀತಿಯನ್ನು ಮಾಡುತ್ತಲೇ, ಸ್ವ ಪ್ರತಿಷ್ಠೆಗಾಗಿ ಪ್ರಾಣಿ ಹಿಂಸೆ, ಕ್ರೌರ್ಯಗಳು ನಡೆಯುತ್ತಿರುವುದನ್ನು ಮಾನವೀಯತೆಯೊಳಗಿನ ಕ್ರೌರ್ಯ ಸುಪ್ತವಾಗಿರುವುದನ್ನು ಕಾಣಬಹುದು. ಯಾಕೆಂದರೆ ಕರಿಯ ಕರಡಿ ಜಿಂಕೆಗಳನ್ನು ಪ್ರೀತಿಸುತ್ತಲೇ ಹುಲಿ ಚಿರತೆಗಳನ್ನು ಕೊಲ್ಲುತ್ತಾನೆ. ಹಾಗಾಗಿ ಕರಿಯನದಿರಲಿ ಲೇಖಕರ ಪರಿಸರ ತಿಳುವಳಿಕೆ ಏನೆಂಬುದು ಕೃತಿಯಲ್ಲಿ ಸ್ಪಷ್ಟವಾಗುವುದಿಲ್ಲ.

ಹೀಗೆ ಜನರು ಬಲಿಷ್ಟ ಕಾಡು ಪ್ರಾಣಿಗಳನ್ನು ಬೇಟೆ ಮುಖಾಂತರ ಹಿಡಿದೋ ಅಥವಾ ಕೊಂದೋ ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಕ್ರಮ ಒಂದು ರೀತಿಯದಾಗಿದೆ. ಸಾಕು ಪ್ರಾಣಿಗಳಲ್ಲಿ ಸಾಮಾನ್ಯ ಗಂಡು ಪ್ರಾಣಿಗಳು ಇವುಗಳ ನಡುವೆ ಕಾಳಗ ನಡೆಸಿ, ಸೋಲು ಗೆಲುವಿನ ಜೂಜು ಕಟ್ಟಿ, ತಮ್ಮ ಪ್ರಾಣಿಗಳ ಗೆಲುವಿನಲ್ಲಿ ಪ್ರತಿಷ್ಠೆ, ಘನತೆ, ಗೌರವವನ್ನು ಕಂಡು ಕೊಳ್ಳುವ ರೂಢಿ ಸಮಾಜದೊಳಗೆ ಚಾಲ್ತಿಯಲ್ಲಿರುವುದು ಇನ್ನೊಂದು ರೀತಿ. ಇದನ್ನು ಜೂಜಾಟವೆಂದೇ ಕರೆಯುತ್ತಾರೆ. ಇದರಲ್ಲಿ ಭಾಗಿಯಾಗುವ, ಕೆಲವು ಬಲಿಯಾಗುವ ಪ್ರಾಣಿಗಳು ಇವೆ. ಅವುಗಳಲ್ಲಿ ಟಗರು, ಹೋತ, ನಾಯಿ, ಎತ್ತು, ಕೋಣ, ಕುದುರೆ, ಕೋಳಿ ಹುಂಜ, ಪಾರಿವಾಳ, ಗಿಳಿ ಮುಂತಾದವು. ಇವುಗಳ ಶಕ್ತಿ, ಮತ್ತು ಚಾಣಾಕ್ಷತೆ ಗಮನಿಸಿ ಕೆಲವನ್ನು ಜೂಜಿಗಾಗಿ ಸಾಕುತ್ತಾರೆ. ಕುದುರೆಗಳನ್ನು ಕಾಳಗಕ್ಕೆ ಬಿಡದೆ ರೇಸ್‌ಗಾಗಿ ಸಾಕಿ ಜೂಜು ಕಟ್ಟುತ್ತಾರೆ. ಇದರಲ್ಲಿ ಯಾವುದೇ ಪ್ರಾಣಿಯ ಸೋಲಿನ ಹಿಂದೆ ಅದರ ಒಡೆಯನ ಸೋಲು ಇರುತ್ತದೆ. ಇದರಿಂದ ಪ್ರಾಣಿಗಿಂತ ಒಡೆಯರಲ್ಲಿ ಮಾನಾಪಮಾನಗಳ ಮಾನಸಿಕ ದೌರ್ಬಲ್ಯಗಳಿದ್ದು, ಅವುಗಳ ಹಿಡಿತ ಸಾಧಿಸಲಾರದವರು ಸೋತ ಪ್ರಾಣಿಗಳನ್ನು ಕೊಂದುಬಿಡುತ್ತಾರೆ. ಗೆದ್ದ ಪ್ರಾಣಿ ಮತ್ತು ಒಡೆಯರ ಕೀರ್ತಿ, ಪ್ರತಿಷ್ಠೆ, ಗೌರವ, ಸಂಪತ್ತು ಜಾಸ್ತಿಯಾಗುತ್ತದೆ. ಆದ್ದರಿಂದಲೇ ಇಂತಹ ಪ್ರವೃತ್ತಿಗಳನ್ನು ಮನುಷ್ಯ ಬೆಳೆಸಿಕೊಂಡು ಬಂದಿರುವುದು.

ಇವಲ್ಲದೆ ಮಾನವನ ಮೂಢನಂಬಿಕೆಗಳಿಂದಲೂ ಪ್ರಕೃತಿಯ ಜೀವಹಾನಿ ಆಗುತ್ತಿರುವುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಈ ಜನರು ಒಳ್ಳೆಯ ಮತ್ತು ಶುಭ ಕಾರ್ಯಗಳಿಗೆ ಪ್ರವೇಶಿಸುವಾಗ ಹಾವು, ಬೆಕ್ಕು, ಗೂಬೆ, ಕಾಗೆ, ಹಲ್ಲಿ ಮುಂತಾದ ಪ್ರಾಣಿಗಳ ದರ್ಶನವಾಗಲಿ, ಧ್ವನಿಯನ್ನಾಗಲಿ ನೋಡಿ, ಕೇಳಿದರೆ ಅಪಶಕುನವೆಂಬ ನಂಬಿಕೆ ಭಾರತೀಯರಲ್ಲಿದೆ. ಇದು ಮಾನವ ಕೇಂದ್ರಿತ ನಂಬಿಕೆಯಲ್ಲದೆ ಮತ್ತೇನು? ಇದರಿಂದ ಪ್ರಾಣಿ ಪಕ್ಷಿಗಳ ಓಡಾಟ ಧ್ವನಿಗಳಿಗೂ ಸ್ವಾತಂತ್ರ್ಯವಿಲ್ಲದಂತಾಗಿ ಅವು ಬಲಿಯಾಗುತ್ತಿರುವುದಕ್ಕೆ ಕಾನೂರು ಹೆಗ್ಗಡತಿ ಕೃತಿಯ ಒಂದು ಪ್ರಸಂಗ ಇಲ್ಲಿ ಪ್ರಸ್ತಾಪಾರ್ಹವಾಗಿದೆ.

ಚಂದ್ರಯ್ಯಗೌಡರು ತೆಂಗಿನ ಮರದ ಮೇಲೆ ಕಾಗೆಯೊಂದು ಕುಳಿತು ಕಾಗರೆಯುತ್ತಿದ್ದನ್ನು ಕಂಡು ಸಿಟ್ಟಾಗಿ ಅಪಶಕುನ ಕೂಗ್ತದೆ ಎಂದು ಕೋವಿಯಿಂದ ಹೊಡೆದುರುಳಿಸಿದಂತೆ "ಕೆಲಸಕ್ಕೆ ಬಾರದ ಬಂಜೆ ಮರ ಇದ್ದೇನು ಹೋದ್ರೇನು?"37 ಎಂದು ತೆಂಗಿನ ಮರವನ್ನು ಕಡಿಸುತ್ತಾರೆ. ಗೌಡರು ಕೊಂದ ಕಾಗೆಯನ್ನು ನಾಯಿ ಡೂಲಿ ಕಚ್ಚಿ ತಂದು ಹಾಕಿದ್ದರಿಂದ ಮುದ್ದಿಸಿ ಅದರೊಡನೆ ಒಳ್ಳೆಯ ಸ್ನೇಹ ಬೆಳೆಸಿ ನಾಯಿಗೆ ಸ್ನಾನ ಮಾಡಿಸಲು ಮುಂದಾಗುತ್ತಾರೆ. ಈ ಸ್ವಾರ್ಥ ಮಾನವೀಯ ಪ್ರೀತಿಯ ಸ್ನಾನಕ್ಕೆ ನಾಯಿ ಬಾರದಿದ್ದಕ್ಕೆ ಉದ್ವೇಗದಿಂದ "ಹೇಳಿದ

ಮಾತು ಕೇಳದಿದ್ದ ಪ್ರಾಣಿ ಬದುಕಿರಬಾರದು"38 ಎಂದು ಕೊಲ್ಲುವ ಮನಸ್ಸಿನಲ್ಲಿ ಅಡಗಿರುವ ಕ್ರೌರ್ಯ, ವಿಸ್ಮಯವನ್ನುಂಟು ಮಾಡುತ್ತದೆ. ಹಾಗೂ ಚಂದ್ರಯ್ಯಗೌಡರು ಅವರ ಅಡಿಯಾಳಾಗಿ ಮನುಷ್ಯರನ್ನಿರಲಿ ಪ್ರಾಣಿಗಳನ್ನೂ ತಮ್ಮ ಹಿಡಿತದಲ್ಲಿರಬೇಕೆಂದು ಬಯಸುವುದು ದರ್ಪದ, ಅಜ್ಞಾನದ ಪರಮಾವಧಿ ತಾನೆ?

ಮನುಷ್ಯರು ಮೇಲ್ಕಂಡಂತೆ ನಾನಾ ರೀತಿಯಲ್ಲಿ ಕಾಡು ಪ್ರಾಣಿಗಳನ್ನು ಬೇಟೆಯಾಡಿಕೊಂಡು ಬಂದಂತೆ, ಕಾಡಿನ ಹಕ್ಕಿ ಪಕ್ಷಿಗಳು ಮತ್ತು ಜಲಚರಗಳನ್ನು ಬೇಟೆಯಾಡುತ್ತಾ ಬಂದಿರುವುದು ಈ ಸಮಾಜದೊಳಗೆ ಇವತ್ತಿಗೂ ಕ್ರಿಯಾತ್ಮಕ ಸಾಕ್ಷಿಗಳಿವೆ. ಅವನ್ನೆಲ್ಲ ಇಲ್ಲಿ ದಾಖಲಿಸಲು ಕಷ್ಟ ಸಾಧ್ಯವಾದ್ದರಿಂದ ಸಾಹಿತ್ಯದೊಳಗೆ ಸಿಕ್ಕ ಕೆಲವು ಮಾಹಿತಿಗಳನ್ನು ಹೆಕ್ಕಿ ತೆಗೆದು ವಿಶ್ಲೇಷಿಸಲಾಗಿದೆ.

ಮನುಷ್ಯರ ಮಾನಸಿಕ ದೌರ್ಬಲ್ಯ ಪ್ರಾಣಿ ಪಕ್ಷಿಗಳನ್ನು ಹಿಂಸಿಸುವ, ಕೊಲ್ಲುವ ಸ್ಥಿತಿಗೆ ಹೋಗುತ್ತದೆ ಎನ್ನುವುದಕ್ಕೆ ಚಂದ್ರಯ್ಯಗೌಡರಂತೆ ಪುಷ್ಪರಾಣಿ ನಾಟಕದ ಮಹಾರಾಣಿ ಪಾತ್ರವಿದೆ. ಮಕ್ಕಳಿಲ್ಲದ ಬಂಜೆತನವೇ ಮಹಾರಾಣಿಯ ಮನಸ್ಸನ್ನು ವಿಕೃತಗೊಳಿಸಿದೆ. ಇದು ರಾಜ ಪುಷ್ಪರಾಣಿಯನ್ನು ವಿವಾಹವಾಗಿ ಕರೆತಂದಾಗ ವಿಕಾರಗೊಂಡ ಮನಸ್ಥಿತಿ ಗಿಳಿಗಿಡುಗನ ಆಟದಿಂದ ವ್ಯಕ್ತವಾಗುತ್ತದೆ.
ಹೇಗೆಂದರೆ "ಕಾಡಿನ ಥರಾವರಿ ಹಕ್ಕಿ ಪಕ್ಷಿಗಳನ್ನು ಹಿಡಿಸಿ ಅವುಗಳನ್ನು ಕೆಳಗಡೆಯಿಂದ ಹಾರಿಬಿಟ್ಟು ಅರಮನೆ ಮ್ಯಾಲಿಂದ ಗಿಡುಗನನ್ನು ಬಿಡೋದು. ಗಿಡುಗ ಪುಟ್ಟ ಪುಟ್ಟ ಹಕ್ಕಿಗಳ ಮ್ಯಾಲೆ ಎರಗಿ, ಕೊಕ್ಕಿನಿಂದ ಕುಕ್ಕಿ ಸೊಕ್ಕಿನ ಬೇಟೆ ಆಡುತ್ತಿದ್ದರೆ ಮಹಾರಾಣಿ ಹಾ ಅಂತ ಆನಂದ ಪಡುತ್ತಿದ್ದಳು"39

ಇಂತಹ ಮಾಹಿತಿಗಳಿಂದ ಮನುಷ್ಯ ತಾನು ಬಯಸಿದ ಸುಖ, ಸಂಪತ್ತು ಸಿಗದಿದ್ದಾಗ ತನಗಿಂತ ದುರ್ಬಲರಾದ ಮನುಷ್ಯರಿರಬಹುದು ಅಥವಾ ಪ್ರಾಣಿ ಪಕ್ಷಿಗಳ್ಯಾವೇ ಆಗಿರಲಿ ಅವುಗಳನ್ನು ಹಿಂಸಿಸುವ ಅಥವಾ ಕೊಲ್ಲುವ ಮುಖಾಂತರ ಅವರ ಮನಸ್ಸಿನ ಅಸಹಾಯಕತೆಯ ಉದ್ವೇಗದ ಸ್ಥಿತಿ ಸ್ಫೋಟಗೊಳ್ಳುತ್ತವೆಂಬುದು ಸ್ಪಷ್ಟವಾಗುತ್ತದೆ. ಯಾವುದೇ ಪ್ರಾಣಿ, ಪಕ್ಷಿಯಾಗಲಿ ಮನುಷ್ಯನೊಡನೆ ಸ್ನೇಹ, ಪ್ರೀತಿ, ವಿಶ್ವಾಸ, ಸಲಿಗೆಗಳನ್ನು ಬೆಳೆಸಿಕೊಂಡರೆ ಈ ಗುಣಗಳೇ ಅವುಗಳ ನಾಶಕ್ಕೆ ಮೂಲ ಎಂಬ ಸತ್ಯವನ್ನು ತೇಜಸ್ವಿಯವರ 'ನಾ ಕೊಂದ ಹಕ್ಕಿ' ಕಥೆ ಸಾರುತ್ತದೆ. ಇದರಲ್ಲಿ ಗದ್ದೆ ಗೊರವ ಹಕ್ಕಿಗೆ ಲೇಖಕರು ತಮ್ಮ ಗುಣಕ್ಕೆ ಬಿದ್ದ ನಿಷ್ಪ್ರಯೋಜಕ ಪುಡಿ ಮೀನೊಂದನ್ನು ಆ ಹಕ್ಕಿಗೆ ಎಸೆದಿದ್ದರಿಂದ ಅವರೊಡನೆ ಬೆಳೆಸಿಕೊಂಡ ನಂಬಿಕೆ ಸ್ನೇಹ ಅವರು ಎಸೆಯುತ್ತಿದ್ದ ಎರೆಹುಳು, ಸಿಗಡಿ, ಪುಡಿಮೀನುಗಳನ್ನು ತಿನ್ನುತ್ತ ಸಾಗಿ ಬಂದು ಗಟ್ಟಿಗೊಳಿಸಿಕೊಂಡಿತು. ಕೊನೆಗೆ ಅವರು ಏನೇ ಎಸೆದರೂ ಹುಡುಕಿ ತಿನ್ನುವುದನ್ನು ಬೆಳೆಸಿಕೊಂಡ ಪ್ರವೃತ್ತಿಯ ಪರಿಣಾಮವೇ ರಘು ಸೀಗಡಿ ಚುಚ್ಚಿದ್ದ ಗಾಳವನ್ನು ಮರೆತು ಎಸೆದು ಹೋದದ್ದನ್ನು ಹುಡುಕಿ ತಿಂದು ಆ ಹಕ್ಕಿ ಪ್ರಾಣ ಬಿಡುವಂತಾಗಿದ್ದು.

ಇದರಿಂದ ತುಂಬ ಮನನೊಂದ ಲೇಖಕರು "ಕಾಡಿನ ಪಶು ಪಕ್ಷಿಗಳೊಡನೆ ನನ್ನ ಅನೇಕ ಅನುಭವಗಳ ಹಿನ್ನೆಲೆಯಲ್ಲಿ ಮನುಷ್ಯನೊಡನೆ ಸ್ನೇಹ ಅವಕ್ಕೆ ಖಂಡಿತ ಅಪಾಯಕಾರಿ ಎಂದು ತಿಳಿದಿದೆ. ಅದಕ್ಕೆ ನಾನು ನನ್ನ ಮಿತ್ರರಿಗೆಲ್ಲ 'ಈ ರೀತಿ ಮನುಷ್ಯರ ಗೆಳೆತನ ಹಕ್ಕಿಗೆ ಖಂಡಿತ ಅಪಾಯಕಾರಿ. ನಾವು ಏನಾದರೂ ಮಾಡಿ ಅದು ಮಾನವರನ್ನು ಕಂಡರೆ ಹೆದರುವಂತೆ ಮಾಡಬೇಕು. ಇದೇ ರೀತಿ ಇದು ಇನ್ನು ಯಾರಾದರೂ ಮೀನು ಹಿಡಿಯುವವರ ಬಳಿಗೆ ಸ್ನೇಹಪೂರ್ವಕವಾಗಿ ಹೋದರೆ ಅವರು ಖಂಡಿತ ಅದನ್ನು ಕೊಲ್ಲುತ್ತಾರೆ"40 ಎನ್ನುವ ಮಾತು ನೈಜವಾದುದ್ದಾಗಿದೆ. ಈ ಮಾತಿಗೆ ಆಧಾರವಾಗಿ ಕಥೆಯಲ್ಲಿ ಹಕ್ಕಿ ದುರಂತ ಸಾವಿಗೀಡಾಗುತ್ತದೆ. ಇದರ ಸಾವಿನ ಮೂಲ ಕಾರಣವನ್ನರಿತ ಲೇಖಕರ ಮಾತು ಇಲ್ಲಿ ಮುಖ್ಯ.

"ಇಷ್ಟೆಲ್ಲ ಪ್ರೀತಿ ಕಾಳಜಿಗಳನ್ನು ತೋರಿಸಿದ ಆ ಹಕ್ಕಿಯ ಮರಣಕ್ಕೆ ನಾವೇ ಕಾರಣರಾಗಿದ್ದಂತೂ ಧಾರುಣವಾದ ದುರಂತ. ಮನುಷ್ಯನ ಸ್ನೇಹ ವಿಶ್ವಾಸಗಳು ಕಾಡಿನ ಪ್ರಾಣಿಗಳಿಗೆ ಕ್ರೌರ್ಯ ದ್ರೋಹಗಳಷ್ಟೇ ಅಪಾಯಕಾರಿ ಎನ್ನುವುದು ಇದರಿಂದ ಚೆನ್ನಾಗಿ ತಿಳಿಯುತ್ತದೆ"41

ಇಂತಹ ಆಕಸ್ಮಿಕ ದುರಂತಗಳಿಂದ ಎಷ್ಟೋ ಹಕ್ಕಿ ಪಕ್ಷಿಗಳು ಸಾವನ್ನಪ್ಪಿವೆ. ಅವುಗಳಲ್ಲಿ ಅಪರೂಪದ ಪಕ್ಷಿ ಸಂತತಿಗಳು ಮನುಷ್ಯನ ಸ್ವಾರ್ಥ ಮನೋದೌರ್ಬಲ್ಯಗಳಂತೆ ಅಜ್ಞಾನದಿಂದಲೂ ನಾಶವಾಗಿರುವುದನ್ನು ತೇಜಸ್ವಿಯವರು ತಮ್ಮ ಮಲಬಾರ್ ಟ್ರೋಜನ್ ಕಥೆ ಯ ಮೂಲಕ ಕಟ್ಟಿಕೊಡುತ್ತಾರೆ. ಅದರಲ್ಲಿ ಹರೀಶ್ ಕಂಡು ವರ್ಣಿಸಿದ ಹಕ್ಕಿಯನ್ನು ಪಶ್ಚಿಮ ಘಟ್ಟಗಳು ಮತ್ತು ಸಹ್ಯಾದ್ರಿ ಪರ್ವತಗಳಲ್ಲಿಯೂ ನೋಡದಿದ್ದ ಲೇಖಕರು ಒಂದು ದಿನ ತಮ್ಮ ತೋಟದಲ್ಲೇ ನೋಡಿ ವಿಸ್ಮಿತರಾಗುತ್ತಾರೆ. ಇದರ ಹೆಸರು ಕುಲದ ಚರಿತ್ರೆಗಾಗಿ ಹುಡುಕಾಡುತ್ತಾರೆ. ಸಲೀಂ ಅಲಿಯವರ 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್' ಪುಸ್ತಕದಲ್ಲೂ ಸಿಗದಿದ್ದಾಗ ಆಶ್ಚರ್ಯಗೊಂಡು ಕೊನೆಗೆ ಗ್ರೀಸ್ಮೆಕ್ ರವರ ಪಕ್ಷಿಗಳ ವಿಶ್ವಕೋಶದಿಂದ 'ಮಲಬಾರ್ ಟ್ರೋಜನ್ ಹಕ್ಕಿ' ಎಂದು ಅದರ ಜಾತಕ ಕುಲಗಳೆಲ್ಲ ಸಿಕ್ಕಿ ಪಶ್ಚಿಮ ಘಟ್ಟದಲ್ಲಿ ಕಂಡ ಅಪರೂಪದ ಹಕ್ಕಿ ಎಂದು ತಿಳಿಯುತ್ತದೆ. ಈ ಹಕ್ಕಿಯು ಗುಂಡಿಗೆ ಬಲಿಯಾದದ್ದಕ್ಕೆ ತೇಜಸ್ವಿ ಕಥೆ ರೂಪ ಕೊಟ್ಟು ಹೇಳಿದ್ದು ಹೀಗೆ, "ಕೆಲವು ದಿನಗಳಿಂದ ಹೆಣ್ಣು

ಹಕ್ಕಿ ಮಾತ್ರ ಕಾಣಸಿಗುತ್ತಿದ್ದುದರಿಂದ ಗಂಡು ಹಕ್ಕಿ ಎಲ್ಲಿ ಹೋಯ್ತೆಂದು ಹುಡುಕಾಡುತ್ತಿದ್ದಾಗ ಅದನ್ನು ನಮ್ಮೂರಿನ ರಾಮಯ್ಯ ಕೊಂದು ಹಾಕಿದನೆಂದು ನಮ್ಮ ರೈಟರು ಕೃಷ್ಣಪ್ಪ ಹೇಳಿದರು. ರಾಮಯ್ಯ ದುಬಾರಿ ದುಡ್ಡು ಕೊಟ್ಟು ಹೊಸ ಕೇಪಿನ ಕೋವಿ ತಂದಿದ್ದನಂತೆ. ಎಲ್ಲರಿಗೂ ತೋರಿಸಿ ತಾರೀಫು ಮಾಡುತ್ತಿರಬೇಕಾದರೆ ಕೇಪಿನ ಕೋವಿಗೆ ಮದ್ದು ತುಂಬಿದ್ದ ರಾಮಯ್ಯ ಈ ಕೋವಿಯ ಗುರಿ ನೋಡಲು ಕಾಗೆಯೋ ಗುಬ್ಬಿಯೋ ಕಾಣಸಿಗುತ್ತದೆಯೇಲ ಎಂದು ನೋಡಿದಾಗ ಪ್ರಜ್ವಲಿಸುವ ಉಲ್ಕೆಯಂತೆ ಹಾರಿ ಬಂದ ಟ್ರೋಜನ್ ಕಣ್ಣಿಗೆ ಬಿತ್ತು. ರಾಮಯ್ಯ ಗುರಿ ಇಟ್ಟು ಗುಂಡು ಹಾರಿಸಿದ. ಢಮಾರೆಂದ ಕೂಡಲೇ ಹಕ್ಕಿ ತರಗೆಲೆಯಂತೆ ಉದುರಿ ನೆಲಕ್ಕೆ ಬಿತ್ತು. ಎಲ್ಲರೂ ಕೋವಿಯ ಗುರಿಯನ್ನು ಹೊಗಳಿ, ಅಷ್ಟು ಹಣ ಕೊಟ್ಟಿದ್ದು ಸಾರ್ಥಕ ಎಂದು ಮನೆಗೆ ಹೋದರು. ಪೊದೆಯೊಳಗೆ ಉರುಳಿ ಬಿದ್ದ ಹಕ್ಕಿಯನ್ನು ಇಣುಕಿ ಸಹ ನೋಡಲಿಲ್ಲ"42

ಈ ಸ್ಥಿತಿ ಟ್ರೋಜನ್ ಹಕ್ಕಿಯದಷ್ಟೇ ಅಲ್ಲದ ಮೈನಾ, ಟರ್ನ್, ಪೆಂಗ್ವಿನ್, ಡೋ ಡೋ ಅಂತಹ ಸಾವಿರಾರು ಜಾತಿಯ ಹಕ್ಕಿ, ಪಕ್ಷಿ ಸಂಕುಲಗಳದ್ದು. ಇವೆಲ್ಲ ಇಂತಹ ಎಷ್ಟೋರೀತಿಯ ಕಾರಣಗಳಿಂದ ನಾಮಾವಶೇಷವಾಗಿವೆ, ಆಗುತ್ತಿವೆ ಎನ್ನುವುದರ ಮಾದರಿ ಇದಾಗಿದೆ. ಇಂತಹ ಹಕ್ಕಿ, ಪಕ್ಷಿಗಳ ಜೀವನವನ್ನು ಕಸಕ್ಕಿಂತಲೂ ಕಡೆಯಾಗಿ ಕಾಣುವ ರಾಮಯ್ಯನಂತಹ ಜನರಿಂದ ಇಡೀ ಜನಜೀವನವು ಕೊಚ್ಚೆಯಾಗುತ್ತಿದೆ. ಜೊತೆಗೆ ಅರಿವಿಗೆ ಬರದಂತೆ ಜೀವ ಸಮೂಹವೇ ಕೊಳೆಯುತ್ತಿದೆ. ಆದ್ದರಿಂದಲೆ ಇವತ್ತಿನ ಪರಿಸರ ಸಮಸ್ಯೆಗಳು ಉಲ್ಬಣಗೊಳ್ಳುತ್ತಿರುವುದು. ಈ ರಾಮಯ್ಯನಂತಹ ಸ್ವಾರ್ಥ, ಸುಖ, ಖುಶಿಯ ಪ್ರವೃತ್ತಿಗಳಿಗೆ ಹಕ್ಕಿ, ಪಕ್ಷಿಗಳು ಸಿಕ್ಕಿ ಚಡಪಡಿಸುತ್ತಿರುವ ದಾರುಣಸ್ಥಿತಿಯನ್ನು ಕಂಡ ಕವಿ ಕುಶಾಲ ಬರಗೂರು ಅವರು ಕಟ್ಟಿದ ಭಾಗವಿದು.

"ಹಕ್ಕಿಯೊಳಗೆ ಹದ್ದು ಕೂತು
ಹಗಲೆ ಕತ್ತಲಾಗುವವರೆಗೆ
ಮುಗಿಲ ಬಯಲಲ್ಲಿ ಹಾರಾಡುತ್ತದೆ
ಹದ್ದು ಒಳಗೊಳಗೆ
ಹೃದಯವನ್ನು ಕುಕ್ಕಿ
ನೆತ್ತರನ್ನು ಹೀರಿದಾಗ
ರೆಕ್ಕೆ ಬತ್ತಿದ ಹಕ್ಕಿ ತತ್ತರಿಸಿ ತೂರಾಡುವಾಗ
ಬಂದೂಕದ ಗುಂಡು ತಾಕಿ
ದೇಹವೆಲ್ಲಾ ಬಿಡಿ ಬಿಡಿಯಾಗಿ ನೆಲಕಚ್ಚಿದಾಗ
ಗಹಗಹಿಸಿ ಹದ್ದು ನಗುತ್ತದೆ"43 (ಹದ್ದು)

ಈ ಕಾವ್ಯದ ಹದ್ದು ಮೋಸ, ತಂತ್ರಗಳುಳ್ಳ ಮಾನವನ ಮನಸ್ಸುಗಳ ಸಂಕೇತ. ಮನಸ್ಸು ಯಾವಾಗ ಎಲ್ಲಿಗಾದರೂ ಪ್ರವೇಶಿಸಬಹುದು. ಇದು ಗಾಳಿ ಬೆಳಕಿಗಿಂತಲೂ ವೇಗವಾದದ್ದು. ಹಾಗಾಗಿ ಕವಿ 'ಹಕ್ಕಿಯೊಳಗೆ ಹದ್ದು ಕೂತು' ಎಂದು ಹಕ್ಕಿಯೊಳಗೆ ಮಾನವನ ಮನಸ್ಸನ್ನು ಹದ್ದಾಗಿ ಹುದುಗಿಸಿರುವುದು ವಿಶಿಷ್ಟ ಕಲ್ಪನೆಯಾಗಿದೆ. ಹದ್ದು ತನ್ನ ಮೋಸದ ಜಾಲಗಳಿಂದ ಹಗಲು ಕತ್ತಲಾಗುವವರೆಗೆ ಸಂಚು ಮಾಡಿ ಬಂದೂಕದ ಗುಂಡಿನಿಂದ ಹಕ್ಕಿಯ ಪ್ರಾಣ ಹೀರುತ್ತದೆ. ಅಂದರೆ ಇಲ್ಲಿ ಹದ್ದು ಮತ್ತು ಬಂದೂಕದ ಗುಂಡಿನ ಸಂಬಂಧ ಮಾನವನ ಮನಸ್ಸು ಮತ್ತು ಅವನ ಕ್ರಿಯೆಗಳ ಅವಿನಾಭಾವ ಸಂಬಂಧವಾಗಿದೆ.

ಇಂಥ ಮನಸ್ಸು, ಕ್ರಿಯೆಯುಳ್ಳವರು ಡೂಲಿ ನಾಯಿ ಕೊಂದ ತಿಮ್ಮ, ಟ್ರೋಜನ್ ಹಕ್ಕಿ ಕೊಂದ ರಾಮಯ್ಯನಂತಹ ಬೇಟೆಗಾರರಾಗಿರುತ್ತಾರೆ. ಬೇಟೆ ಬಿದ್ದಾಗ ತನ್ನ ಸಂಚಿನ ಗುರಿ ಫಲಿಸಿತೆಂದು ಹದ್ದು ಗಹಗಹಿಸಿ ನಗುವುದು ಹಿಂಸೆ, ಕ್ರೌರ್ಯಗಳ ಅಟ್ಟಹಾಸದ ನಗುವಾಗಿದೆ. ಇದರಿಂದ ಮನನೊಂದ ಕವಿ ಚಂದ್ರಶೇಖರ ತಾಳ್ಯ ಅವರು

"ನೀನೇ ಕೊಂದ ಹಕ್ಕಿ ಇದು
ತಗೋ ಇದರ ರೆಕ್ಕೆಯನ್ನು
ತಗೋ ಇದರ ಪುಕ್ಕವನ್ನು
ಮಾಂಸ ಬೆಂದ ಬೂದಿಯನ್ನು"44 (ನೀ ಕೊಂದ ಹಕ್ಕಿ ಇದು)

ಎಂದು ರಾಮಯ್ಯ ಹಕ್ಕಿ ಕೊಂದಂತಹ ದೃಶ್ಯವನ್ನೇ ಓದುಗರ ಎದುರು ತಂದು ನಿಲ್ಲಿಸುತ್ತಾರೆ. ಕವಿ ತಮ್ಮ ಒಡಲ ವೇದನೆಯಿಂದ ಬೇಟೆಗಾರ ಮನಪ್ರವೃತ್ತಿಯುಳ್ಳ ಇಡೀ ಮಾನವ ಸಮುದಾಯಕ್ಕೆ ಸತ್ತ ಹಕ್ಕಿಯ ಬಿಡಿಭಾಗಗಳನ್ನು ಹಂಚುತ್ತಿರುವ ಈ ದೃಶ್ಯ ಹೃದಯವನ್ನು ಚುಚ್ಚುವಂತಿದೆ.

ಆಧುನಿಕ ಜನ ಸಮುದಾಯಗಳು ಮಾಡುತ್ತಿರುವ ಕೆಲಸ ಕಾರ್ಯಗಳು ಇಡೀ ಜೀವ ಸಮುದಾಯವನ್ನೇ ಹೇಗೆ ಬಲಿತೆಗೆದು ಕೊಳ್ಳುತ್ತಿವೆ ಎಂಬುದನ್ನು, ಒಂದು ಹಕ್ಕಿ ಸಾವಿನ ಮೂಲಕ ಕವಿ ಅಭಿವ್ಯಕ್ತಿಸುತ್ತಿದ್ದಾರೆ. ಇವರು ಹಕ್ಕಿಯ ಸಾವಿಗೆ ಮೂಲ ಸಾಮಗ್ರಿಗಳನ್ನೊದಗಿಸಿದ ಸಮುದಾಯಕ್ಕೆ

"ಕನಸುಗಳಿದ್ದವು. ಅದೇನೋ ನಿಜ ನಿನಗೆ
ಅದಕ್ಕೇ ಕಟ್ಟಿದೆ ಹಕ್ಕಿ ರೆಕ್ಕೆಗೆ
ಯಂತ್ರಗಳ, ತಂತ್ರಗಳ, ಗಾಳಿ ಗೋಪುರಗಳ
ಹಾರಿ ಬಿಟ್ಟೆ ಆಕಾಶದೆಡೆಗೆ"45 (ನೀ ಕೊಂದ ಹಕ್ಕಿ ಇದು)

ಎನ್ನುತ್ತಾರೆ. ಇಲ್ಲಿಯ ಕನಸುಗಳು ಮನಸ್ಸಿನ ಕ್ರಿಯೆಯ ಜಾಡು. ಈ ಜಾಡು ಹಿಡಿದು ಹೊರಟಿರುವುದು ಅವನು ದಿಗಂತಗಾಮಿಯಾಗಲು ಅದರ ಮೆಟ್ಟಿಲುಗಳೇ ಯಂತ್ರ, ತಂತ್ರಗಳು. ಯಂತ್ರ ವೈಜ್ಞಾನಿಕ ಬೆಳೆವಣಿಗೆಯಾದರೆ, ತಂತ್ರಗಳು ಬೌದ್ಧಿಕ ಜ್ಞಾನದ ಬೆಳೆವಣಿಗೆ. ಈ ಎರಡು ಶಕ್ತಿಗಳನ್ನು ಬಳಸಿ ಇಂತಹ ಪ್ರಾಣಿ ಪಕ್ಷಿಗಳ ಶಕ್ತಿಯನ್ನು ಪಡೆದು ಅವುಗಳ ಜೀವ ಜೀವನದ ಬಗ್ಗೆ ಯೋಚಿಸದೆ, ಅವುಗಳಿಗೆ ಅರಿಯದಂತೆ ಅವುಗಳ ಅವಸಾನಕ್ಕೆ ದಾರಿ ಮಾಡಿದ್ದಾನೆ. ಇದನ್ನರಿಯದ ಹಕ್ಕಿ ಅವನು ಕಟ್ಟಿದ ಯಂತ್ರ ತಂತ್ರಗಳನ್ನು ಹೊತ್ತು ಅದರಲ್ಲಿ ತನ್ನ ಸಾವು ಇರುವುದನ್ನು ಅರಿಯದೆ ಆಕಾಶದೆಡೆಗೆ ಹಾರಿದೆ. ಇದನ್ನೇ ಹಕ್ಕಿಯೊಳಗೆ ಹದ್ದು ಕೂತು ಮುಗಿಲ ಬಯಲಲಿ ಹಾರಾಡುತ್ತದೆ ಎಂದಿದ್ದು. ಈ ಹಕ್ಕಿಯ ಸಂಚಾರದಿಂದ ಭೂಮಿ ಆಕಾಶಗಳಲ್ಲಿ ಏನೆಲ್ಲ ಬದಲಾವಣೆಯಾಗಿದೆ. ಈ ಬದಲಾವಣೆ ಯಾರಿಗಾಗಿ? ಯಾಕಾಗಿ? ಎಂದರೆ ಮನುಷ್ಯರಿಗಾಗಿ, ಅವರ ಸುಖಕ್ಕಾಗಿ ಆದ್ದರಿಂದಲೇ ಪರಿಸರದಲ್ಲಿ ಏನೆಲ್ಲಾ ಅನಾಹುತಗಳಾಗುತ್ತಿರುವುದು. ತಾನು ರಕ್ಷಣೆ ಪಡೆದು ತೆಪ್ಪದ ಮೇಲೆ ನಿಂತು ದಿಗಂತಗಾಮಿಯಾಗುತ್ತಿದ್ದಾನೆ. ಇವನಿಗೆ ಪ್ರಕೃತಿಯಲ್ಲಿ ನಾನು ಒಂಟಿಯಾಗಿರಲಾರೆ ಎಂಬ ಪ್ರಜ್ಞೆಯಿಲ್ಲದೆ ತೆಪ್ಪದ ಮೇಲಿದ್ದು, ಸುರಕ್ಷಿತನಾಗಿದ್ದೇನೆಂದು ತಿಳಿಯುವುದು ಅವನ ಭ್ರಮೆ. ಇವನಿಂದ ಕೊನೆಗೂ ಹಕ್ಕಿ ನೆಲಕ್ಕುರುಳಿದ್ದು ದುರಂತ, ಇಂತಹ ಚಾಣಾಕ್ಷಮತಿ ಮನುಷ್ಯನನ್ನು ಕವಿ 'ದಿಗಂತಗಾಮಿ ನೆಲ ಮರೆತ ಕಲಿ ಎನ್ನುತ್ತಾರೆ. ಇಲ್ಲೆಲ್ಲ ಕವಿಯ ಖಗೋಳ, ಭೂಗೋಳಗಳ ವೈಜ್ಞಾನಿಕ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಯ ಬನಿ ಕಾವ್ಯದಲ್ಲಿ ಮಡುಗಟ್ಟಿರುವುದನ್ನು ಕಾಣುತ್ತೇವೆ. ನೆಲ ಮರೆತು ದಿಗಂತಗಾಮಿಯಾದವನಿಗೆ ಮತ್ತೆ ಭೂಮಿ ಮೇಲೆ ಅಸ್ತಿತ್ವವಿಲ್ಲವೆನ್ನುವುದು 'ತೆಪ್ಪಗಳ ಮೇಲಿದ್ದೆ' ಎನ್ನುವ ಪದ ಧ್ವನಿಸುತ್ತದೆ. ನಮಗೆ ಜೀವಕೊಟ್ಟು ರಕ್ಷಣೆ ನೀಡಿದ ಭೂಮಿ ನಮ್ಮ ಜೀವವೆಂಬ ಪ್ರಜ್ಞೆಯಿಲ್ಲದವನು ನಿರ್ಜೀವಿ ಎಂಬ ಸಾರ ಈ ಕಾವ್ಯದಲ್ಲಿದೆ. ಹಾಗೂ ಜೀವ ಪ್ರಜ್ಞೆಯಿಲ್ಲದೆ ಹಕ್ಕಿ ನೆಲಕ್ಕುರುಳ ಬೇಕಾದದ್ದೇ ಕಾವ್ಯದ ಪ್ರಧಾನ ವಸ್ತು. ನೆಲಕ್ಕುರುಳಿದ ಹಕ್ಕಿ ಪದರ ಪದರನೆ ಒದರಾಡುವುದನ್ನು ಕಂಡ ಕವಿ ಕುಶಾಲ ಬರಗೂರು ಅವರು

"ತಲೆಕಾಲುರೆಕ್ಕೆ ಮತ್ತೆ ಸೇರಿ
ಹಕ್ಕಿಯಾಗಿ ಮುಗಿಲಿಗೆ ಹಾರುವಾಸೆ
ವರ್ತಮಾನದ ಅರ್ಥ ತಿಳಿಯದ ಹಕ್ಕಿಗೆ
ಇನ್ನೇನು ಕಾದಿದಿಯೋ
ಹದ್ದಿನ ಹುನಾರು"46 (ಹದ್ದು)

ಎನ್ನುತ್ತಾರೆ. ಇವರು ಹಕ್ಕಿಯ ಸಾವಿನಲ್ಲೂ ಜೀವ ತುಂಬಲು ಬಯಸಿ 'ತಲೆ ಕಾಲು ರೆಕ್ಕೆ ಮತ್ತೆ ಸೇರಿ ಹಕ್ಕಿಯಾಗಿ ಮುಗಿಲಿಗೆ ಹಾರುವಾಸೆ' ಎನ್ನುವುದು ಮಾರ್ಮಿಕವಾಗಿದ್ದರೂ ಅದರಲ್ಲಿ ವ್ಯಂಗ್ಯವಿದೆ. ಯಾಕೆಂದರೆ ವರ್ತಮಾನ ಹದ್ದಿನ ತಂತ್ರವನ್ನು ಹಕ್ಕಿ ಇನ್ನು ತಿಳಿಯದೆ ಹೋದರೆ ಅದಕ್ಕೆ 'ಇನ್ನೇನು ಕಾದಿದಿಯೋ ಹದ್ದಿನ ಹುನಾರು' ಎಂದು ಆತಂಕ ಪಡುತ್ತಾರೆ. ಹೀಗೆ ಈ ಪದ್ಯ ವರ್ತಮಾನದ ಜನರ ಮನಸ್ಸು, ಕ್ರಿಯೆ, ಪ್ರವೃತ್ತಿಗಳನ್ನು ವಿಡಂಬಿಸಿರುವುದು ಔಚಿತ್ಯಪೂರ್ಣವಾಗಿದೆ.

ಹೀಗೆ ಆದಿಮಾನವನಿಂದ ಆಧುನಿಕ ಮಾನವನವರೆಗೆ ಬೆಳೆದು ಬಂದ ಪ್ರವೃತ್ತಿ ಇಂದು ವೈಜ್ಞಾನಿಕ ಬೆಳೆವಣಿಗೆಯಿಂದಾಗಿ ರಾಸಯನಿಕ ಔಷಧಿಗಳನ್ನು ತಯಾರಿಸಿ ಯಂತ್ರಗಳು ಸದ್ದಿಲ್ಲದೆ ಇಡೀ ಜೀವಸಂಕುಲವನ್ನೇ ನಾಶಮಾಡುತ್ತಿರುವ ಯಂತ್ರಬೇಟೆಯವರೆಗೆ ಬೇಟೆಯ ನಾನಾ ರೂಪಗಳು ಇಲ್ಲಿ ಪ್ರಸ್ತಾಪಗೊಂಡಿವೆ. ಆದರೆ ಇಲ್ಲಿ ಪ್ರಸ್ತಾಪಿತವಾದ ಇಷ್ಟೇ ಕಾರಣಗಳಿಂದ ಜೀವಹಾನಿಯಾಗುತ್ತಿಲ್ಲ. ಇಂತಹ ಎಷ್ಟೋ ನೂರಾರು ಕಾರಣಗಳಿಂದ ಜೀವ ಸಂಕುಲ ನಾಮಾವಶೇಷವಾಗುತ್ತಿವೆ. ಅವನ್ನೆಲ್ಲ ಇಲ್ಲಿ ದಾಖಲಿಸುವುದು ಕಷ್ಟ. ಆದರೆ ಈ ಎಲ್ಲ ಮಾನವಕೇಂದ್ರಿತ ಬೇಟೆಯ ಪ್ರವೃತ್ತಿಗಳ ಮೂಲವನ್ನೇ ಪ್ರಶ್ನಿಸಿ ಜೀವರಕ್ಷಣೆಯ ದಾರಿ ಯಾವುದೆಂದು ತೋರಿಸಿಕೊಟ್ಟ ಗೌತಮನ ಜೀವನ ಮಾರ್ಗ ಮಾನವ ಕುಲಕ್ಕೆ ಒಂದು ಆದರ್ಶ. ಇದು ಚಿತ್ರಿತವಾಗಿರುವ ಜಲ ನಾಟಕದ 3ನೇ ಅಂಕದ ದೃಶ್ಯಗಳ ಬೇಟೆಯ ವಿವಾದವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ನಾಟಕದಲ್ಲಿ "ಶಾಕ್ಯರು ತಮ್ಮ ಸಂಪ್ರದಾಯದಂತೆ ವರ್ಷಕ್ಕೊಮ್ಮೆ ಆಚರಿಸುವ 'ವಸುಮಂಗಳ' ಎಂಬ ಹಬ್ಬದ ಹಿಂದಿನ ದಿನ, ಅವರಲ್ಲಿ ರಾಜನಿರಲಿ ಸಾಮಾನ್ಯ ಪ್ರಜೆಯೇ ಇರಲಿ ಪ್ರತಿಯೊಬ್ಬರು ಆ ದಿನ ನೇಗಿಲು ಹಿಡಿದು ಭೂಮಿಯನ್ನು ಉಳಬೇಕು. ಗೌತಮನಂತೂ ಸದಾ ರೈತರು, ಕಾರ್ಮಿಕರೊಡನೇ ಇರುತ್ತಿದ್ದವನಾಗಿ ಈ ದಿನವೂ ತನ್ನ ಸುತ್ತಲ ರೈತರೆಲ್ಲ ಅಂದಿನ ಕೆಲಸಗಳನ್ನೆಲ್ಲ ಮುಗಿಸಿ ಒಂದು ಬೃಹತ್ ಬೇವಿನ ಮರದ ಕೆಳಗೆ ಕುಳಿತರು. ಅವನೊಡನೆ ಮಾನವ ಸಂಬಂಧ, ವನ್ಯ ಪ್ರಾಣಿಗಳು, ಅವುಗಳ ಸ್ವಭಾವಗಳು ಆಗಾಗ ಉದ್ಭವಿಸುವ ಭೂಕಂಪಗಳು, ಆಗ ಪಕ್ಷಿಗಳ ಪಾತ್ರಗಳು, ಜಲಕ್ಕೂ ಜೀವಕ್ಕೂ ಇರುವ ಪ್ರಾಕೃತಿಕ ಸಂಬಂಧಗಳು ಮುಂತಾದ ಪ್ರಕೃತಿ ವ್ಯಾಪಾರದ ರಹಸ್ಯಗಳನ್ನು ರೈತರು ಗೌತಮನೊಡನೆ ಚರ್ಚಿಸುವರು"47. ಅದರಂತೆ ಈ ಹಬ್ಬದ ಅಂಗವಾಗಿ ನಡೆಯುವ ಆಟಗಳ ಚರ್ಚೆಯಲ್ಲಿ ರಣತುಂಗ ಕ್ಷತ್ರಿಯರ ಪ್ರಿಯವಾದ ಬೇಟೆ ಆಟವೇ ಮೊದಲು ನಡೆಯಬೇಕೆಂದು ಪ್ರತಿಪಾದಿಸುತ್ತಾನೆ. ಆಗ ಗೌತಮ ಅದಕ್ಕೆ ಒಪ್ಪದಿದ್ದಾಗ ಒಬ್ಬರಿಗೊಬ್ಬರು ಸಂವಾದಕ್ಕಿಳಿದದ್ದು ಹೀಗೆ.

"ರಣತುಂಗ: ಕ್ಷತ್ರಿಯರಿಗೆ ತುಂಬಾ ಪ್ರಿಯವಾದ ಬೇಟೆ ಆಡೋ ಕ್ರೀಡೆ ಮೊದಲೇ ಆಡ್ಬೇಕು ಯಾಕೆಂದ್ರೆ ಬಾಣ ಪ್ರಯೋಗ ಮಾಡಿ ಗುರಿ ಸಾಧಿಸೋ ಕ್ರೀಡೆ ಬಾರಿ ಮುಖ್ಯ.

ಗೌತಮ: ಆದರೆ ನಾನಿದನ್ ಒಪ್ಪೋದಿಲ್ಲ. ನೀವು ಬೇಟೆ ಆಡೋದು ಅಂದ್ರೆ ಯಾರ್ ಮೇಲೆ ಗುರಿ ಇಡೋದು?

ರಣತುಂಗ: ಇನ್ಯಾರ ಮೇಲೆ? ಪ್ರಾಣಿಗಳ ಮೇಲೆ, ಪಕ್ಷಿಗಳ ಮೇಲೆ .....

ಗೌತಮ: ಆದರೆ ನೀವ್ ಬೇಟೆ ಆಡೋ ಕೇವಲ ಆಟಕ್ಕೆ ಆ ಮಾತಿಲ್ಲದ ಮೂಕ ಪ್ರಾಣಿ ಪಕ್ಷಿಗಳ ಪ್ರಾಣ ಯಾಕ್ ತೆಗೀಬೇಕು?

ರಣತುಂಗ: ಮತ್ತೇನ್ ಮಾಡೋದು ಲ ಗುರಿ ಇಡೋದ್ ಕಲಿಯೋಕೆ ಮನುಷ್ಯರ ಪ್ರಾಣ ತೆಗೀಲಿಕ್ಕಾಗತ್ಯೇ?

ಗೌತಮ: ಯಾರ ಪ್ರಾಣಾನ್ ಯಾರೂ ತೆಗೀಬೇಕಾಗಿಲ್ಲ. ಆದರೆ ಬಾಣ ಪ್ರಯೋಗ ಮಾಡಿ ಗುರಿ ಇಡೋದನ್ ಕಲಿಯಲಿಕ್ಕೆ ಬೇರೆ ವಿಧಾನ್‌ಗಳಿವೆ. ಒಂದು ಮಣ್ಣಿನ ಮೂರ್ತಿ ಮಾಡಿಟ್‌ಕೊಂಡು ಗುರಿ ಸಾಧನೆ ಕಲಿಯಬಹುದಲ್ಲ?

ರಣತುಂಗ: ಆದರೆ ಪ್ರಾಣಿ ಪಕ್ಷಿಗಳನ್ನು ಬೇಟೆ ಆಡದೆ ಹೋಗೋದು ಕ್ಷತ್ರಿಯ ಧರ್ಮಕ್ಕೆ ಅವಮಾನ ಅಲ್ವೇ?

ಗೌತಮ: ಬೇಟೆ ನಿಮಗೆ ಮಾನ ಅವ್‌ಮಾನದ್ ಪ್ರಶ್ನೆ. ಆದರೆ ಮುಗ್ಧ ಪ್ರಾಣಿಗಳಿಗೆ ಬದುಕು ಸಾವಿನ ಪ್ರಶ್ನೆ. ಈ ಬಗ್ಗೆ ಹೊಸ ಪೀಳಿಗೆಗ್ ಸೇರಿದ ನಿನ್ನಂಥವರಾದ್ರೂ ಕೊಂಚ ಬೇರೆಥರ ಯೋಚಿಸೋದ್ ಬೇಡವೇ?"ಇಲ್ಲೆಲ್ಲ ರಣತುಂಗ ಮಾನವ ಕೇಂದ್ರಿತ ನೆಲೆಯಿಂದ ವಾದಿಸಿದರೆ, ಗೌತಮ ಜೀವ ಕೇಂದ್ರಿತ ಚಿಂತನೆಯಿಂದ ವಾದಿಸುತ್ತಾನೆ. ಇವರಿಬ್ಬರ ಜ್ಞಾನ ಮತ್ತು ಚಿಂತನೆಗಳ ವೈರುಧ್ಯದ ಸ್ಪಷ್ಟತೆಯಿಲ್ಲಿದೆ. ಹೀಗೆ ಮರದಡಿ ಚರ್ಚಿಸುತ್ತಿದ್ದಾಗ ಬಾಣ ನಾಟಿದ ಪಕ್ಷಿಯೊಂದು ನೆಲಕ್ಕೆ ಬಿದ್ದು ಒದ್ದಾಡುವುದು. "ಅದನ್ನು ಕೈಗೆತ್ತಿಕೊಂಡ ಗೌತಮನು, ಅದರ ರೆಕ್ಕೆಗೆ ನಾಟಿದ ಬಾಣವನ್ನು ಮೆಲ್ಲಗೆ ತೆಗೆದು ಹಾಕಿ, ತಕ್ಷಣವೇ ತನಗೆ ಗೊತ್ತಿರುವ ಹಸಿ ಗಿಡ ಮೂಲಿಕೆಗಳ ರಸವನ್ನು ಹಿಂಡಿ ಅದರ ಗಾಯಕ್ಕೆ ಲೇಪಿಸಿ, ಬಲಗೈ ಬೊಗಸೆಯಲ್ಲಿ ನೀರು ತೆಗೆದು ಅದಕ್ಕೆ ನೀರುಣಿಸಿ, ಎದೆಗವಚಿಕೊಂಡು ಅದಕ್ಕೆ ತನ್ನ ದೇಹದ ಶಾಖವನ್ನು ಕೊಡುವನು"48

ಗೌತಮನ ಈ ವರ್ತನೆಗೂ, ಮೊದಲೇ ಪ್ರಸ್ತಾಪಿಸಿದಂತೆ ಬೇಟೆ ಹಕ್ಕಿಯನ್ನು ಹಿಡಿದು ಮಾನಿಷಾದವೆಂದು ವಿಷಾದಿಸಿದ ವಾಲ್ಮೀಕಿಯ ವರ್ತನೆಗೂ ಸಾಮ್ಯವಿದೆ. ಇವೆಲ್ಲ ಜೀವರಕ್ಷಣೆಯ ಮೂಲ ಧರ್ಮದ ನೀತಿ ತತ್ವವನ್ನು ಎತ್ತಿಹಿಡಿಯುತ್ತವೆ. ಈ ಹಕ್ಕಿ ಬೇಟೆಯಾಡಿದ ದೇವದತ್ತ ಅದನ್ನು ಹುಡುಕುತ್ತ ಚರ್ಚೆ ನಡೆಯುತ್ತಿದ್ದಲ್ಲಿಗೆ ಬಂದು ಗೌತಮ ತೋರಿದ ಹಕ್ಕಿಯನ್ನು ಕಂಡು ಹೌದು ಇದು ನನ್ನ ಬೇಟೆ ನನಗೆ ಕೊಡು ಅಂತ ಕೇಳುತ್ತಾನೆ. ಆಗ

"ಗೌತಮ: ಬೇಟೆ ನಿನ್ನದಿರ್ಬೌದು ಆದರೆ ಪಕ್ಷಿಯೂ ನಿನ್ನದಲ್ಲ. ಆ ಪಕ್ಷಿಯೊಳಗಿರೋ ಪ್ರಾಣ ಪಕ್ಷಿಯೂನಿನ್ನದಲ್ಲ.

ದೇವದತ್ತ: ಆದ್ರೆ ನಿನ್ನ ಈ ವಾದ ಬೇಟೆ ನಿಯಮಕ್ಕೆ ವಿರುದ್ಧ.

ಗೌತಮ: ಬೇಟೆ ನಿಯಮ ಅ ಯಾರು ಈ ಬೇಟೆ ನಿಯಮ ಮಾಡಿಟ್ಟವ್ರೋ? ಆ ಬೇಟೆ ನಿಯಮ ನಿನ್ನದಿರ್‌ಬಹುದು ಆದರೆ ಪ್ರಕೃತಿ ನಿಯಮ ಪ್ರಾಣಿಗಳಿಗಿದೆ ಪಕ್ಷಿಗಳಿಗಿದೆ, ನಿನ್ನಂತೇನೇ ಬದುಕೋ ಹಕ್ಕು ಅವುಗಳಿಗೂ ಇದೆ.

ದೇವದತ್ತ: ಬೇಟೆ ಮೇಲೆ ಬೇಟೆಯಾಡಿದವನ ಹಕ್ಕಿದೆ ಅನ್ನೋದೆ ಕ್ಷತ್ರಿಯ ಧರ್ಮ.

ಗೌತಮ: ಆದ್ರೆ ಜೀವರಕ್ಷಣೆ ಮಾಡಿದವನು ಮಾತ್ರ ಜೀವ ಮಿತ್ರನಾಗುತ್ತಾನೆ. ಜೀವಹತ್ಯೆ ಮಾಡಿದವ್ನು ಜೀವ ಶತೃವಾಗ್ತಾನೆ .....

ದೇವದತ್ತ: ಆಕಾಶದಲ್ಲಿ ಹಾರಾಡೋ ಪಕ್ಷಿ ನಿನ್ನದೆಂಗಾಗ್ತದೆ?
ಗೌತಮ: ನಾನದಕ್ಕೆ ಜೀವ ಕೊಟ್ಟಿದ್ದೀನಿ.
ದೇವದತ್ತ: ಆದರೆ ನಾನದರ ಜೀವ ತೆಗಿದಿದ್ದೀನಿ.
ಗೌತಮ: ಸುಳ್ಳು, ಅದರ ಜೀವ ನೀ ತೆಗೆದಿಲ್ಲ, ಅದಿನ್ನು ಬದುಕಿದೆ. ಆದ್ ಸರಿ, ಜೀವ ಕೊಡೋಕೆ ಸಾಧ್ಯವಿಲ್ಲದವನಿಗೆ ಜೀವ ತೆಗಿಯೋ ಹಕ್ಕೆಲ್ಲಿದೆ"49

ಈ ಸಂಭಾಷಣೆಯಲ್ಲಿ ಸರ್ವಜೀವಿಗಳಿಗೂ ಪ್ರಕೃತಿ ನಿಯಮ ಒಂದೆಯಾಗಿದ್ದು ಅದರಲ್ಲಿ ಜೀವತತ್ವವಿದೆ, ಇದನ್ನು ಅನುಸರಿಸುವುದು ಶಾಕ್ಯರ ನೀತಿ, ಇದಕ್ಕೆ ವಿರುದ್ಧವಾದದ್ದು ಬೇಟೆ ನೀತಿ ಎಂಬ ಹಲವಾರು ಅಂಶಗಳು ಇದರಲ್ಲಿ ಅಡಗಿವೆ. ಅವುಗಳಲ್ಲಿ ಗೌತಮನು ಎತ್ತಿರುವ ಹಲವು ಪ್ರಶ್ನೆಗಳಂತೆ 'ಜೀವ ಕೊಡೋಕೆ ಸಾಧ್ಯವಿಲ್ಲದವನಿಗೆ ಜೀವತೆಗಿಯೋ ಹಕ್ಕೆಲ್ಲಿದೆ?' ಎಂದಿರುವುದು ದೇವದತ್ತನಿಗೆ ಮಾತ್ರವಾಗದೆ, ಇದುವರೆಗಿನ ಜೀವಹಾನಿಗೆ ಕಾರಣರಾದವರಿಗೆಲ್ಲ ಮೂಲಭೂತವಾದ ಪ್ರಶ್ನೆಯಾಗಿದೆ. ಇದರಿಂದ ಮಾನವ ಕೇಂದ್ರಿತ ಪ್ರವೃತ್ತಿಗಳನ್ನು ಗೌತಮ ಆಗಲೇ ಒಡೆದು ಜೀವಕೇಂದ್ರಿತ ನೆಲೆಯ ಧರ್ಮ ನಿರ್ಮಾಣದ ತಳಹದಿ ಹಾಕಿರುವುದರ ಚರಿತ್ರೆಯಿರುವುದು ವೇದ್ಯವಾಗುತ್ತದೆ. ದೇವದತ್ತ ಮತ್ತು ಗೌತಮರ ಈ ವಿವಾದ ಒಂದು ಪಕ್ಷಿಯದಾದರೂ, ಇದೊಂದು ಜೀವದ ಪ್ರಶ್ನೆ ಎಂದು ರೈತ ಕಾರ್ಮಿಕ ರೊಬ್ಬರು ಇವರ ವಿವಾದದ ಇತ್ಯರ್ಥಕ್ಕೆ ಭರತವ್ಯಾಸರಲ್ಲಿಗೆ ಹೋಗಲು ಸಲಹೆಯನ್ನಿತ್ತಾಗ, ಎಲ್ಲರೂ ಒಪ್ಪಿ ಅವರ ಆಶ್ರಮಕ್ಕೆ ಹೋಗುತ್ತಾರೆ. ಅಲ್ಲಿ ಪಕ್ಷಿಯನ್ನು ಹಿಡಿದ ಗೌತಮನನ್ನು ಭರತರು ಕಂಡು:

"ಭರತ ವ್ಯಾಸ: ಗೌತಮ ಆ ಪಕ್ಷೀನ ಕೈಯಲ್ಲೇಕೆ ಹಿಡ್ಕೊಂಡಿದ್ದೀಯ .....
ಗೌತಮ: ಪಕ್ಷೀ ಜೀವರಕ್ಷಣೆ ಮಾಡೋ ಅವಕಾಶ ನನಗುಂಟಾಯಿತು ಗುರುಗಳೇ .....
ಭರತ ವ್ಯಾಸ: ಗೌತಮ ನೀನು ತುಂಬಾ ಒಳ್ಳೇ ಕೆಲಸವನ್ನೇ ಮಾಡಿದೀಯಾ. ಜೀವರಕ್ಷಣೆ ಮಾನವನ ಪ್ರಥಮ ಕರ್ತವ್ಯ ಅನ್ನೋದನ್ನ ತೋರಿಸಿ ಕೊಟ್ಟಿದ್ದಿಯಾ ನೀನ್ ಮಾಡಿರೋ ಈ ಜೀವರಕ್ಷಣೆ, ಅನ್ಯರಿಗೊಂದು ಶ್ರೇಷ್ಠ ಮೇಲ್ಪಂಕ್ತಿ ಆಗ್ಬೇಕು. ನಮಗೆ ತುಂಬಾ ಸಂತೋಷವಾಗಿದೆ"50.

ಎಂದು ಪ್ರಶಂಸಿಸುತ್ತಾರೆ. ವಿವಾದದ ಇತ್ಯರ್ಥಕ್ಕಾಗಿ ಹೋದವರೆಲ್ಲರ ಮಾತನ್ನು ಆಲಿಸಿದ ಭರತ ವ್ಯಾಸರು ತಮ್ಮ ಅಂತಿಮ ತೀರ್ಮಾನ ನೀಡುತ್ತಾ "ನಿಮಗೆ ಯಾವ ಕೆಡುಕನ್ನು ಮಾಡ್ದೇ ಇರೋ ಈ ಮುಗ್ಧ ಪ್ರಾಣಿ ಪಕ್ಷಿಗಳನ್ನೆಲ್ಲ, ಬೇಟೆ ಹೆಸರಿನಲ್ಲಿ ಯಾಕ್ ಕೊಲ್ ಬೇಕು?. ಇಷ್ಟಕ್ಕೂ ಪ್ರಾಣಿಗಳನ್ನು ಕೊಂದೇ ಗುರಿ ಸಾಧನೆ ಕಲೀಬೇಕು ಅಂತ ಎಲ್ಲಿ ಹೇಳಿದೆಲ. ಆದ್ರಿಂದ ಈ ಪಕ್ಷಿ ಜೀವರಕ್ಷಣೆ ಮಾಡೋ ಮೂಲಕ ಜೀವ ರಕ್ಷಣೆ ಮಾನವನ ಪ್ರಥಮ ಕರ್ತವ್ಯ ಅಂಬೊ ಶಾಕ್ಯರ ನೀತಿ ಸಂಹಿತೆ ಅನುಷ್ಠಾನಕ್ಕೆ ಗೌತಮ ಒಂದು ಮೇಲ್ಪಂಕ್ತಿ ಹಾಕಿದಾನೆ ಅಂಬೋದನ್ನು ನೀವೆಲ್ರೂ ತಿಳ್ಕೋಬೇಕು"51

ಇಲ್ಲಿ ಲೇಖಕರು ಜೀವ ರಕ್ಷಣೆ ಮಾನವರ ಮೂಲಭೂತ ಕರ್ತವ್ಯವೆಂಬುದನ್ನು ಭರತ ವ್ಯಾಸರೊಡನೆ ಗೌತಮನ ಪಕ್ಷಿ ರಕ್ಷಣೆಯ ವಾದವನ್ನು ಎತ್ತಿಹಿಡಿಸಿ ಇಡೀ ಮನುಕುಲಕ್ಕೆ ಸಾರಿರುವುದು ಗಮನಾರ್ಹವಾಗಿದೆ. ಇಂತಹ ಜೀವ ಕೇಂದ್ರಿತ ತಾತ್ವಿಕ ವಿಚಾರಗಳನ್ನು ಬಿತ್ತುವ ಸಾಹಿತ್ಯ ಕೃತಿಗಳನ್ನೇ 'ಬೌದ್ಧ ಸಾಹಿತ್ಯ ಮೀಮಾಂಸೆ' ಎನ್ನುವುದು. ಹಾಗಾಗಿ ಈ ಜಲ ನಾಟಕವು ಮೇಲಿನ ಈ ಎಲ್ಲ ಚರ್ಚೆಯಿಂದ ಮಾನವನ ಸ್ವಾರ್ಥ ಪ್ರವೃತ್ತಿಗಳ ಗುಣ, ಸ್ವಭಾವ, ನಡವಳಿಕೆಗಳು ಮತ್ತು ಅವನ ಅಜ್ಞಾನದಿಂದ ಪ್ರಾಣಿ, ಪಕ್ಷಿ ಮುಂತಾದ ಜೀವಹಾನಿಯಾದಂತೆ, ಪ್ರಕೃತಿಯು ವಿಕೃತಿಯಾಗಿ ಇವತ್ತಿನ ಪರಿಸರ ಸಮಸ್ಯೆಗೆ ಮೂಲಕಾರಣವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಕಾರಣವನ್ನರಿತ ಗೌತಮ ತನ್ನ ಅನುಭವ, ಜ್ಞಾನಗಳಿಂದ ಪರಿಹಾರಕ್ಕಾಗಿ ಮಾನವನ ಸ್ವಾರ್ಥ ಪ್ರವೃತ್ತಿ ಸ್ವಭಾವಗಳನ್ನು ಬದಲಾಯಿಸಲು, ತಾನೇ ಮಾಡಿ ತೋರಿದ ದಾರಿ ಜೀವಕೇಂದ್ರೀತವಾದದ್ದು. ಇದನ್ನು ಎತ್ತಿ ಹಿಡಿದ ಭರತವ್ಯಾಸರು ಗೌತಮನ ಈ ಮಾರ್ಗ ಇಂದಿನ ಮತ್ತು ಮುಂದಿನ ಪೀಳಿಗೆಯ ಜನಕ್ಕೆ ದಾರಿದೀಪವಾಗಿ ಆದರ್ಶವಾಗಬೇಕೆಂಬುದನ್ನು ಸೂಚ್ಯವಾಗಿ ಹೇಳುತ್ತಾ, ಪರಿಸರ ಸಮಸ್ಯೆಗೆ ಒಂದು ಆಶಾ ಕಿರಣವನ್ನು ಹೊರಹಾಕಿದ್ದಾರೆ. ಈ ಎಲ್ಲಾ ಆಧಾರಗಳಿಂದ ಮಾನವನ ಜೀವನಕ್ಕೆ, ಪ್ರಾಣಿಗಳ ಜೀವನ ಸಂಸ್ಕೃತಿ ಮತ್ತು ಅವುಗಳ ರಕ್ಷಣೆಗಳ ಮಹತ್ವವನ್ನು ಅರಿತು ಮುನ್ನಡೆಯಬೇಕೆಂಬುದು ಇಂತಹ ಅಧ್ಯಯನಗಳಿಂದ ಮನಗಾಣ ಬೇಕಾಗಿದೆ.

ಕೊನೆ ಟಿಪ್ಪಣಿ

1. ಪೂರ್ಣಚಂದ್ರ ತೇಜಸ್ವಿ, ಕೆ.ಪಿ,ವಿಸ್ಮಯ–1, ಪುಟ–25–26

2. ಅದೇ, ಪು–28
3. ಪುಟ್ಟಸ್ವಾಮಿ. ಕೆ, ಕೃಪಾಕರ ಸೇನಾನಿ, ಜೀವಜಾಲ, ಪು–156
4. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ವಿಸ್ಮಯ–2, ಪು–5
5. ಪುಟ್ಟಸ್ವಾಮಿ.ಕೆ, ಕೃಪಾಕರ ಸೇನಾನಿ, ಜೀವಜಾಲ, ಪು–15
6. ಶಿವರಾಮಯ್ಯ ಪಿ, ನಮ್ಮ ಪರಿಸರ, ಪು–11
7. ಉಲ್ಲಾಸ ಕಾರಂತ ಕೆ, ಕಾಡು ಪ್ರಾಣಿಗಳ ಜಾಡಿನಲ್ಲಿ, ಪು–7
8. ಅದೇ,ಪು–10
9. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಪರಿಸರದ ಕಥೆ, ಪು–12
10. ಅದೇ,ಪು–13
11. ಅದೇ, ಪು–11
12. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಪರಿಸರದ ಕಥೆ, ಪು– 96–97
13. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಏರೋಪ್ಲೇನ್ ಚಿಟ್ಟೆ ಮತ್ತಿತರ ಕಥೆಗಳು, ಪು–35
14. ಚಂದ್ರಶೇಖರ ನಂಗಲಿ. ಏ, ಕಾಡು ಮತ್ತು ತೋಪು, ಪು–78
15. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಕರ್ವಾಲೊ, ಪು–31
16. ಅದೇ, ಪು–25
17. ಅದೇ, ಪು–33
18. ಕುವೆಂಪು, ಮಲೆಗಳಲ್ಲಿ ಮದುಮಗಳು, ಪು–133
19. ಅದೇ, ಪು–136
20. ಸಂ: ಶಂಕರನಾರಾಯಣ ತೀ.ನಂ, ಸಂಕೀರ್ಣ ಜನಪದ ಕಥೆಗಳು, ಪು–132
21. ಅದೇ, ಪು–135
22. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಏರೋಪ್ಲೇನ್ ಚಿಟ್ಟೆ ಮತ್ತಿತರೆ ಕಥೆಗಳು, ಪು–63
23. ಅದೇ, ಪು–61
24. ಸಂ: ಶಂಕರನಾರಾಯಣ,ತೀ.ನಂ, ಸಂಕೀರ್ಣ ಜನಪದ ಕಥೆಗಳು, ಪು–148
25. ನಾಗಭೂಷಣ ಸ್ವಾಮಿ ಓ.ಎಲ್, ನಮ್ಮ ಕನ್ನಡ ಕಾವ್ಯ, ಪು–117
26. ಅರವಿಂದ ಮಾಲಗತ್ತಿ, ಪುರಾಣ ಜಾನಪದ ಮತ್ತು ದೇಸಿವಾದ, ಪು–156
27. ನಾಗಭೂಷಣ ಸ್ವಾಮಿ ಓ.ಎಲ್, ನಮ್ಮ ಕನ್ನಡ ಕಾವ್ಯ, ಪು–120
28. ಅರವಿಂದ ಮಾಲಗತ್ತಿ, ಶ್ರೀ ಚಂಡಾಲ ಸ್ವರ್ಗಾರೋಹಣಂ, ಪು–56
29. ಕುವೆಂಪು, ಮಲೆಗಳಲ್ಲಿ ಮದುಮಗಳು, ಪು–53
30. ಕುವೆಂಪು, ಕಥನ ಕವನಗಳು, ಪು–20
31. ಕುವೆಂಪು, ಕಾನೂರು ಹೆಗ್ಗಡಿತಿ, ಪು–397
32. ಶಿವರಾಮ ಕಾರಂತ ಕೆ, ಬೆಟ್ಟದ ಜೀವ, ಪು–14–16
33. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಕಾಡಿನ ಕಥೆಗಳು 2, ಪು–96
34. ಶಿವರಾಮ ಕಾರಂತ ಕೆ, ಕುಡಿಯರ ಕೂಸು, ಪು–114
35. ಅದೇ, ಪು–300
36. ಶಿವರಾಮ ಕಾರಂತ ಕೆ, ಕುಡಿಯರ ಕೂಸು, ಪು–310–311
37. ಕುವೆಂಪು, ಕಾನೂರು ಹೆಗ್ಗಡತಿ, ಪು–379
38. ಚಂದ್ರಶೇಖರ ಕಂಬಾರ, ಪುಷ್ಪರಾಣಿ, ಪು–19
39. ಪೂರ್ಣಚಂದ್ರ ತೇಜಸ್ವಿ ಕೆ.ಪಿ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಪು–85
40. ಅದೇ, ಪು–85
41. ಅದೇ, ಪು–76
42. ಕೃಷ್ಣ ಎಸ್, ದರಿದ್ರರ ಮಾಕ್ಸ್‌ಕಾರ್ಡ್ ಸಾಹಿತ್ಯ, ಪು–4
43. ಚಂದ್ರಶೇಖರ ತಾಳ್ಯ, ಸುಡುವ ಭೂಮಿ, ಪು–79
44. ಅದೇ,ಪು–79
45. ಕೃಷ್ಣ. ಎಸ್, ದರಿದ್ರರ ಮಾಕ್ಸ್‌ಕಾರ್ಡ್ ಸಾಹಿತ್ಯ, ಪು–4
46. ಮನಜ, ಜಲ, ಪು–51
47. ಅದೇ, ಪು–57–58
48. ಅದೇ, ಪು–61
49. ಅದೇ, ಪು–62–65
50. ಅದೇ, ಪು–98
51. ಅದೇ, ಪು–7

ಅಧ್ಯಾಯ 5

ಕನ್ನಡ ಸಾಹಿತ್ಯ: ಪ್ರಕೃತಿ: ಭೂಮಿ–ಮಾನವ ಗುಣ ಧರ್ಮಗಳು:

1. ಪ್ರಕೃತಿ ಭೂಮಿಯ ಹುಟ್ಟು ಮತ್ತು ವಿಕಾಸವಾದ ಸಂಸ್ಕೃತಿಗಳು:

ಭೂಮಿಯ ಹುಟ್ಟು ಮತ್ತು ಬೆಳವಣಿಗೆಯ ಮೂಲಣುಗಳ ಬಗ್ಗೆ ಈಗಾಗಲೇ ಆರಂಭದ ಅಧ್ಯಾಯದಲ್ಲೇ ಪರಿಶೀಲಿಸಲಾಗಿದೆ. ಇಲ್ಲಿ ಭೂಮಿ–ಪ್ರಕೃತಿ–ಮನುಷ್ಯರ ಗುಣ ಧರ್ಮಗಳ ಸಾಂಸ್ಕೃತಿಕ ಪರಿಶೀಲನೆಯೇ ಪ್ರಧಾನವಾಗಿದೆ. ಭೂಮಿಯ ಋತುಚಕ್ರದ ಕ್ರಿಯಾಶೀಲತೆಯಿಂದಾಗುವ ಆಕರ್ಷಣೀಯ ಮತ್ತು ವಿಸ್ಮಯಕಾರಿ ಬದಲಾವಣೆಗಳಿಗೆ ಬೆರಗಾದ ಭಾರತೀಯ ಮನಸ್ಸುಗಳು ವೇದಗಳ ಕಾಲದಿಂದಲೇ, ಭೂಮಿಯ ಬಗ್ಗೆ ಚಿಂತಿಸಿವೆ. "ಋಗ್ವೇದದಲ್ಲಿ 'ದ್ಯಾವಾ ಪೃಥಿವೀ' ಎಂಬ ದೇವತಾ ಜೋಡಿಯನ್ನು ಸ್ಮರಿಸಲಾಗಿದೆ. 'ಪೃಥಿವಿ' ಪದದ ಮೂಲ 'ಪೃಥ್ ' ಅಂದರೆ ವಿಸ್ತರಿಸುವುದು ಎಂದರ್ಥ"1. ಈ ವಿಶಾಲಾರ್ಥವುಳ್ಳ ಭೂಮಿ ಸಕಲ ಭೂತ ಜಗತ್ತಿಗೆ ಅನ್ನ, ಆಶ್ರಯ ರಕ್ಷಣೆ ನೀಡುವ ಮಹಾ ಸ್ತ್ರೀ, ಮಹಾತಾಯಿಯಾಗಿದ್ದಾಳೆ. ಹಾಗೆಯೇ ಸರ್ವ ಭೂತ ಜಾತಗಳ ಹಿತಕ್ಕಾಗಿ ದ್ಯಾವಾ ಪೃಥ್ವಿಗಳನ್ನು ಸೃಷ್ಟಿಸಿರುವ ಉಲ್ಲೇಖ ಋಗ್ವೇದದಲ್ಲಿದೆ. ಇದನ್ನು ವಿಶ್ಲೇಷಿಸಿರುವ ಭಾರತೀಯ ಶಾಸ್ತ್ರಜ್ಞ ಜಾನೈನ್ ಮಿಲ್ಲರ್‌ನ ಪ್ರಕಾರ "ಈ ದ್ಯಾವಾ ಪೃಥಿವಿಯ ಸಂಯೋಗದಲ್ಲಿ ..... ಎಲ್ಲ ಸೃಷ್ಟಿಯ ವಿಕಾಸದ ಮೂಲ ಅಗತ್ಯತೆಯಾದ ದ್ರವ್ಯ ಮತ್ತು ಚೈತನ್ಯದ ಮಿಲನವನ್ನು ಪೃಥಿವಿಯು ಮೂಲ ದ್ರವ್ಯದ ಸಂಕೇತ. ದ್ಯಾವ ಶುದ್ಧ ಚೈತನ್ಯ ಸಂಕೇತ..... ಈ ದ್ರವ್ಯ (Matter) ಮತ್ತು ಚೈತನ್ಯ(Spirit) ದ ಪ್ರತೀಕಗಳೇ ಮುಂದೆ ಸಾಂಖ್ಯ ತತ್ವಜ್ಞಾನದಲ್ಲಿ ಕೂಡಾ ಪ್ರಕೃತಿ ಮತ್ತು ಪುರುಷ ಪರಿಕಲ್ಪನೆಗಳಾಗಿ ರೂಪುಗೊಂಡವು"2 ಮುಂದೆ 'ಪೃಥ್ವಿ' ಯನ್ನು 'ಪ್ರಕೃತಿ' ಎಂದು 'ದ್ಯಾವಾ' ವನ್ನು ಪುರುಷವೆಂದು ಕರೆಯಲಾಗಿದೆ. ಮಾತೃ ಪ್ರಧಾನ ಸಮಾಜದಿಂದ ಪಿತೃ ಪ್ರಧಾನ ಸಮಾಜ ಪ್ರಬಲವಾದಂದಿನಿಂದಲೂ ಭಾರತೀಯ ತತ್ವ, ಚಿಂತನೆ, ಪುರಾಣಗಳೆಲ್ಲ ಪುರುಷ ಪ್ರಧಾನವಾಗಿ ನಿರೂಪಿಸಿಲ್ಪಟ್ಟವು. ಈ ಹಿನ್ನೆಲೆಯಲ್ಲಿ ಜನಪದರೂ ಭೂಮಿಯನ್ನು ಪುರುಷ ಪರಿಕಲ್ಪನೆಯಲ್ಲಿ ಕಂಡಿರುವುದುಂಟು.

"ಭಾರತೀಯ ಪುರಾಣಗಳ ಪ್ರಕಾರ ಕೃಷಿಯ ಮೂಲ ಪುರುಷ ಪೃಥುವೈನ. ಪೃಥುವೈನ ವೇನರಾಜನ ಮಗ. ವೇನನು ನಾಸ್ತಿಕನಾಗಿದ್ದ. ಈತನ ಕಾಲದಲ್ಲಿ ಭೂಮಿ ಬಂಜೆಯಾಗಿತ್ತು. ವೇನನು ಪ್ರಜಾಹಿತರಕ್ಷಕನಾಗಿರಲಿಲ್ಲ. ಇದರಿಂದ ರೊಚ್ಚಿಗೆದ್ದ ಪ್ರಜೆಗಳು ವೇನನ ಶರೀರವನ್ನು ಮಥಿಸಿ ಪೃಥವನ್ನು ಹುಟ್ಟಿಸಿದರು. ಪೃಥುವು ಪ್ರಜಾಪಾಲಕನಾಗಿದ್ದ. ಆಸ್ತಿಕನಾಗಿದ್ದ. ದೈವಭಕ್ತನಾಗಿದ್ದರಿಂದ ಈತನು ವೇನಕಾಲದಲ್ಲಿದ್ದ ಬೀಜಗಳೆಲ್ಲವನ್ನು ನುಂಗಿ, ಬಂಜೆಯಾಗಿದ್ದ ಭೂಮಿಯಿಂದ ಬೀಜಗಳನ್ನು ಹೊರತೆಗೆದು ಜನರಿಗೆ ಸುಖವನ್ನು ನೀಡಿದ. ಅಂದಿನಿಂದ ಭೂಮಿಗೆ ಪೃಥುವಿ ಎಂದು ಹೆಸರು ಬಂತು"3 ಎಂದು ಡಾ. ವೀರೇಶ ಬಡಿಗೇರ ಅವರು ತಮ್ಮ ಅಡಿಗಲ್ಲು ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಆರ್ಯ ಮೂಲದ ಈ ಕಥೆಯಲ್ಲಿ ಪೃಥವು ಭೂಮಿ, ಪ್ರಕೃತಿಯ ಸಂಕೇತವಾಗಿದ್ದು, ಇವನನ್ನೇ ಕೃಷಿ ಪ್ರಾಧಾನ್ಯತೆಯಿಂದ ಗುರುತಿಸಲಾಗಿದೆ. ಆದರೂ ಇಂತಹ ಪುರಾಣಕಲ್ಪನೆ ಜನಸಮುದಾಯದಲ್ಲಿ ಮಾನ್ಯತೆ ಗಳಿಸದೆ, ಎಲ್ಲೋ ಒಂದು ಸಮುದಾಯದಲ್ಲಿ ಮಾತ್ರ ಉಳಿದು ಗೌಣವಾಗಿರುವುದಕ್ಕೆ ಹೆಣ್ಣಿನ ಪರಿಕಲ್ಪನೆಯಲ್ಲೇ ಭೂಮಿಯ ತತ್ವ, ಚಿಂತನೆಗಳು ಪ್ರಧಾನ ಜನಮನ್ನಣೆ ಗಳಿಸಿರುವುದು.

ಭಾರತೀಯ ಚಿಂತನೆಗೆ ಸಿಕ್ಕ ಭೂಮಿಯ ತತ್ವಾಂಶಗಳೆಂದರೆ; ಇವಳು ಇಡೀ ಜಗತ್ತಿಗೆ ತಾಯಿಯಾಗಿದ್ದು, ತನ್ನ ಪ್ರೀತಿ ವಾತ್ಸಲ್ಯದಿಂದ ಸಕಲ ಜೀವಗಣಗಳ ಸೃಷ್ಟಿ, ರಕ್ಷಣೆ, ಪೋಷಣೆಯ ಕರ್ತವ್ಯವನ್ನು ಹೊತ್ತಿದ್ದಾಳೆ. ಈ ಭೂಮಿ ತತ್ವದ ಮೂಲ ಕ್ಷಮೆ, ಸಹನೆ, ಪ್ರೀತಿಗಳಾಗಿದ್ದು, ಇವು ಜೀವ ತತ್ವದ ಭೂಮಿ ಧರ್ಮವೂ ಆಗಿವೆ. ಜೀವಗಣಗಳ ಮೇಲಿನ ಭೂಮಿಯ ಈ ಎಲ್ಲ ಗುಣಗಳಿಂದ ಜಗತ್ತಿನ ಸಮೃದ್ಧಿಗೆ, ಸೃಷ್ಟಿಗೆ, ರಕ್ಷಣೆಗೆ ಸಂಕೇತವಾಗಿದ್ದಾಳೆ. ಆದ್ದರಿಂದಲೇ ಮನುಷ್ಯ ಭೂಮಿ, ತಾಯಿ, ಕರುಣಾಮಯಿ, ಜೀವದ ಒಡಲು, ಪ್ರೇಮದ ಮಡಿಲು ಹೀಗೆ ನಾನಾ ತರ ಕರೆದು ಇವಳನ್ನು ಸ್ತ್ರೀಯ ಜೀವನದ ಗುಣ ಸ್ವಭಾವಗಳಿಂದ ಗುರುತಿಸಿರುವುದು. ಇಂತಹ ಜೀವನ ಕ್ರಮದ ಗುಣವುಳ್ಳ ಭೂಮಿ ತನ್ನ ಒಡಲಿನ ಜೀವಿಗಳನ್ನು ಹಿಂಸಿಸುವ, ಕೊಲ್ಲುವ ಅತ್ಯಂತ ಭಯಾನಕ ರೂಪಧಾರಣಿಯೂ ಆಗಿದ್ದಾಳೆ. ಇವಳನ್ನು ವೈದಿಕ ಸಾಹಿತ್ಯ 'ನಿರ್ಋತಿ' ಎಂದು ಕರೆದಿರುವ ಒಂದು ಮಂತ್ರ ಹೀಗಿದೆ: .

"ನಿರ್ಋತಿ ಕಬ್ಬಿಣದ ಸಂಕೋಲೆಗಳಿಂದ
ಬಂಧಿಸುತ್ತಾಳೆ ಈ ಭಯರೂಪಿ ದೇವತೆಯ
ಬಾಯೊಳಕ್ಕೆ ಇದನ್ನು ಅರ್ಪಿಸುತ್ತಿದ್ದೇನೆ ... ಈ
ಸಂಕೋಲೆಗಳನ್ನು ಕಳಚಲಿ ಎಂದು ಜನ ನಿನ್ನನ್ನು
ಭೂಮಿ ಎಂದು ಕರೆಯುತ್ತಾರೆ. ನೀನು ನಿರ್ಋತಿ
ಎಂದು ನನಗೆ ಗೊತ್ತು. ಈ ನಿರ್ಋತಿಯೇ ಭೂಮಿ.
ಭ್ರಷ್ಟರಾದವರನ್ನು ಈ ಭೂಮಿ ಕೊಳೆಸುತ್ತದೆ"4

ಈ ಮಂತ್ರ ಪ್ರಕೃತಿ ಭೂಮಿ ಮತ್ತು ಮಾನವರ ನಡುವಿನ ಸಂಬಂಧದ ಪರಿಗಣನೆಯಿಂದ ರಚನೆಯಾಗಿದೆ. ಭೂಮಿಗೆ ಮಾನವ ಮಾಡುವ ಪಾಪ ಕೃತ್ಯ, ಭ್ರಷ್ಟತನ, ಮೋಸ ವ್ಯವಹಾರದಿಂದಾಗಿ ಅವನನ್ನು ಅಂದರೆ ಭ್ರಷ್ಟರಾದವರನ್ನು ಈ ಭೂಮಿ ಕೊಳೆಸುತ್ತದೆ ಎಂದು ವ್ಯಾಖ್ಯಾನಿಸುತ್ತದೆ. ಹಾಗೆ ನೋಡಿದರೆ ಭೂಕಂಪ, ಚಂಡಮಾರುತಗಳಿಂದ ಸಾವನ್ನಪ್ಪಿದ ಜನರೆಲ್ಲ ಭ್ರಷ್ಟರಾಗಿರಲಿಲ್ಲ. ಯಾರೋ ಮಾಡಿದ ಭೂಮಿಯ ವಿಧ್ವಂಸಕ ಕೃತ್ಯದಿಂದ ಪ್ರಕೃತಿ ಭೂಮಿಯ ಸಮತೋಲನ ಸ್ಥಿತಿಗೆ ಭಂಗ ಬಂದು ಅಮಾಯಕ ಜನರನ್ನು ಪ್ರಕೃತಿ ಬಲಿ ತೆಗೆದುಕೊಳ್ಳುತ್ತದೆ. ಹಾಗಾಗಿ ಪ್ರಕೃತಿಗೆ ಇವನು ಭ್ರಷ್ಟ, ಇವನು ನಿಷ್ಪ ಎಂಬ ಆಯ್ಕೆ ತಿಳಿಯದು. ಆದ್ದರಿಂದಲೇ ಭೂಮಿಗೆ ಯಾರೋ ಎಲ್ಲೋ ಮಾಡುವ ಒಳ್ಳೆಯ ಅಥವಾ ಕೆಟ್ಟ ಪ್ರವೃತ್ತಿಯ ಪರಿಣಾಮಗಳು ಎಲ್ಲೋ ಯಾರ್ಯಾರ ಮೇಲೋ ಉಂಟಾಗುತ್ತವೆ. ಈ ದೃಷ್ಟಿಯಿಂದ ನೋಡಿದರೆ ಇಂದು ಭೂಮಿ ಪ್ರಕೃತಿಗೆ ಮಾನವ ಮಾಡುವ ಒಳ್ಳೆಯ ಕೆಲಸಗಳಿಗಿಂತ ಕೆಟ್ಟ, ವಿಕೃತ ಕೆಲಸಗಳೇ ಜಾಸ್ತಿಯಾಗಿ; ಅದು ನಿರ್ಋತಿಯಾಗಿ ರೂಪುಗೊಳ್ಳಲು ಸಾಧ್ಯವಾಗಿದೆ. ಭೂಮಿಯ ಇಂತಹ ರೌದ್ರರೂಪದಿಂದ ಜೀವಿಗಳ ಮಾರಣಹೋಮವೇ ನಡೆಯುತ್ತಿದೆ. ಆದ್ದರಿಂದ ಈ ಮಂತ್ರ ಹೇಳುವ ಭ್ರಷ್ಟರಾದವರನ್ನು ಮಾತ್ರ ಭೂಮಿ ಕೊಳೆಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಅರಿಯಬೇಕು. ಸಾವಿನಲ್ಲೂ ತಾರತಮ್ಯ ಮಾಡದ ಭೂಮಿಯ 'ನಿರ್ಋತಿ. ಗುಣ ಅದರ ತತ್ವ, ಗುಣ, ಸ್ವಭಾವಗಳಲ್ಲಿ ಒಂದು. ಭೂಮಿಯ ಬದುಕಿನ ವಿಕಾಸ ಪಥದ ಋತುಮಾನಗಳಲ್ಲಿ ಉಂಟಾಗುವ ಅಡಚಣೆಗಳಿಂದ ಅದರ ಮೇಲೆ ಹಿಂಸೆಗಳು ಸಂಭವಿಸುತ್ತವೆ.

ಭೂಮಿಗೆ ವಿನಾಶಕಾರೀ ಗುಣವೂ ಸ್ವಾಭಾವಿಕವಾದದ್ದು. ಅದು ಹಿಂಸೆ ದೀರ್ಘಕಾಲಕ್ಕೊಮ್ಮೆ ಹೊರಹೊಮ್ಮುವಂತಹದ್ದಾಗಿತ್ತು. ಆದರೆ ಈಗ ಅಂದರೆ ಇಪ್ಪತ್ತನೇ ಶತಮಾನದಿಂದ ಭೂಕಂಪ, ಚಂಡಮಾರುತ, ಬರಗಾಲ ಮುಂತಾದ ಪ್ರಕೃತಿ ವಿಕೋಪಗಳು ಅಗಾಗ್ಗೆ ಸಂಭವಿಸುತ್ತಿರುವುದನ್ನು ಗಮನಿಸಿದರೆ ಇಷ್ಟಂತೂ ಸ್ಪಷ್ಟ. ಅಂದಿಗಿಂತ ಇಂದು ಜನಸಂಖ್ಯೆ ಜಾಸ್ತಿಯಾಗಿ ಈ ಜನರ ಅನುಭೋಗ, ಮನೋವೃತ್ತಿ, ಹಿಂಸಾವೃತ್ತಿಗಳು ಭೂಮಿಗೆ ಜಾಸ್ತಿಯಾಗಿ ವಿಕೃತಗೊಂಡು ಅದರ ಅಸಮತೋಲನ ಸ್ಥಿತಿಯಿಂದ ದೀರ್ಘಕಾಲದಿಂದ ಅಲ್ಪಕಾಲಕ್ಕೆ ಸಂಭವಿಸುವ ವಿನಾಶಕಾರೀ ಗುಣ ಮೈಗೂಡಿಸಿಕೊಂಡಿರುವುದು ಒಂದಂಶವಾಗಿದೆ. ಹೀಗೆ ಭೂಮಿ ಹಿಂಸೆ ಮತ್ತು ಪ್ರೀತಿ ತತ್ವಗಳುಳ್ಳ ಅದರ ಮೂಲಭೂತ ಸ್ಥಿತಿಯಿಂದಾಗಿ ಧಾರುಣ ತತ್ವಕ್ಕೆ, ಪೋಷಿಸುವ ತತ್ವಕ್ಕೆ ಅನುಗುಣವಾಗಿ ಅದು ಚಲನಶೀಲವಾಗಿದೆ.

ಈ ದ್ಯಾವಾ ಪೃಥಿವೀಯ ಗುಣ ತತ್ವಗಳನ್ನು ಜಗತ್ತಿನ ಬಹುಪಾಲು ಪ್ರಾಚೀನ ನಾಗರೀಕತೆಯುಳ್ಳ ಎಲ್ಲ ದೇಶಗಳು ಅಲ್ಲಿಯ ಧರ್ಮ, ಪುರಾಣ, ಸಂಸ್ಕೃತಿಗಳು ಗಂಡು, ಹೆಣ್ಣು ದ್ರವ್ಯ ಚೈತನ್ಯ, ಪ್ರೀತಿ, ಹಿಂಸೆ ಮುಂತಾದ ಅಂಶಗಳಿಂದ ಭೂಮಿ ಮತ್ತು ಪ್ರಕೃತಿಯನ್ನು ಅಭಿವ್ಯಕ್ತಿಸಿ ವಿಶ್ಲೇಷಿಸುತ್ತವೆ. ಇಂತಹ ಪ್ರಕೃತಿ ಮತ್ತು ಭೂಮಿಯೊಡನೆ ಮಾನವನ ವಿಭಿನ್ನ ಜೀವನ ಕ್ರಮಗಳು ಬಿಡಿಸಲಾರದ ಬಂಧವಾಗಿ ಜಗತ್ತಿನಲ್ಲಿ ರೂಪುಗೊಂಡಿವೆ. ವಿಶಿಷ್ಟ ಶಕ್ತಿಯ ಪರಿಪೂರ್ಣ ಬದುಕುಳ್ಳ ಭೂಮಿಯನ್ನು ಧರಣಿ, ವಸುಂಧರೆ, ಅನ್ನಪೂರ್ಣೆ ಮುಂತಾದ ಮಾತೃ ಭಾವದ ನಾಮಪದಗಳಿಂದ ಸ್ತ್ರೀ ದೇವತೆಯನ್ನಾಗಿ ಕಂಡು ಆರಾಧಿಸುವ, ಪೂಜಿಸುವ ಮಾನವ ಸಂಸ್ಕೃತಿ ಬೆಳೆದು ಬಂದಿದೆ. ಮೂಲತಃ ಮಾನವ ಜೀವನ ಅಪರಿಪೂರ್ಣವಾದುದ್ದರಿಂದ ಅವನ ಆಸೆ, ಆಮಿಷಗಳ ಈಡೇರಿಕೆಗಾಗಿ ಪ್ರಕೃತಿ ಭೂಮಿಯನ್ನು ತನ್ನ ಭೋಗಕ್ಕೆ ಇರುವುದೆಂದು ನಂಬಿ ಅವನ ಮೂಲಭೂತ ಅಗತ್ಯಕ್ಕಿಂತ ಮೀರಿ ಭೂನಿಧಿಗಳನ್ನು ಬಳಸಿಕೊಂಡು ಅದನ್ನು ಹಿಂಸೆಗೊಳಪಡಿಸುತ್ತಿದ್ದಾನೆ. ಇದನ್ನು ಹಿಂಸೆ ಎಂದರಿಯದೆ, ಇದೇ ಜೀವನವೆಂಬ ಭ್ರಮೆಗೊಳಪಟ್ಟಿರುವುದು ಅವನ ದುರಂತವಾಗಿದೆ. ಮುಖ್ಯವಾಗಿ ಭೂಮಿ, ಪ್ರಕೃತಿ, ಜೀವವರ್ಗ 'ಮನುಷ್ಯ' ಇವುಗಳು ಒಂದೊಂದೂ ಕೂಡ ಒಂದೊಂದು ಮೌಲ್ಯಭರಿತವಾಗಿವೆ. ಇವುಗಳಲ್ಲಿ ಭೂಮಿ, ಪ್ರಕೃತಿಗಳು ಸ್ವತಂತ್ರವಾದ ಸ್ಥಿತಿಯುಳ್ಳವು. ಆದರೆ ಜೀವವರ್ಗಕ್ಕೆ ಅದರಲ್ಲೂ ಮನುಷ್ಯನಿಗೆ ಸ್ವತಂತ್ರವಾದ ಅಸ್ಥಿತ್ವವಿಲ್ಲದೆ, ಭೂಮಿಯನ್ನು ಅವಲಂಬಿಸಿರುವುದರಿಂದ, ಈ ಅವಲಂಬನೆಯ ಕ್ರಮದಲ್ಲಿ ಅವನು ಪ್ರಕೃತಿಯ ಎಲ್ಲ ನಿಯಮಗಳನ್ನು ಮೀರಿದಂತೆಲ್ಲಾ ಭೂಮಿ, ಪ್ರಕೃತಿ, ಜೀವವರ್ಗಗಳ ಸ್ಥಿತಿಗೆ ಕುಂದುಂಟಾಗುತ್ತದೆ. ಇಂತಹ

ಸಂಕೀರ್ಣ ಸಂಬಂಧದ ಬಾಂಧವ್ಯದಲ್ಲಿ "ಕತ್ತಲೆಯಿಲ್ಲದೆ ಬೆಳಕಿಲ್ಲ, ಬೆಳಕಿಲ್ಲದೆ ಕತ್ತಲೆಯಿಲ್ಲ ಕತ್ತಲು ಬೆಳಕಿನ ಬಾಂಧವ್ಯವಿಲ್ಲದೆ ಭೂಮಿ ತತ್ವವಿಲ್ಲ. ಬೆವರು ಬುದ್ಧಿ ಭಾವಗಳನ್ನು ಬಿಟ್ಟು ಬದುಕಿಲ್ಲ"5 ವೆಂಬುದು ಈ ಮೂರು ವಿಷಯ ತತ್ವಗಳ ಸಾರ. ಈ ವಿಷಯ, ವಿಚಾರಗಳ ಬಗ್ಗೆ ಆಧುನಿಕ ಕನ್ನಡ ಕಾವ್ಯ ಚಿಂತಿಸಿ, ಚರ್ಚಿಸಿರುವಂತೆ ಉಳಿದ ಸಾಹಿತ್ಯ ಪ್ರಕಾರಗಳಲ್ಲಿ ಕಂಡು ಬರುವುದು ತುಂಬಾ ವಿರಳ. ಆದ್ದರಿಂದ ಇಲ್ಲಿ ಮುಖ್ಯವಾಗಿ ಕಾವ್ಯವನ್ನೇ ಬಳಸಿಕೊಂಡು ಅಲ್ಲಿಯ ಪ್ರಾತಿನಿಧಿಕ ಕವಿಗಳ ಕಾವ್ಯವನ್ನು ಮಾತ್ರ ಚರ್ಚೆಗೊಳಪಡಿಸಲಾಗಿದೆ.

2.ಭೂಮಿ–ಪ್ರಕೃತಿಯ ಮಾನವನ ಆರಾಧಾನ ಭಾವ:

ಪ್ರಾಚೀನ ಕಾಲದಿಂದಲೂ ನಮ್ಮ ಕನ್ನಡ ಕಾವ್ಯ ಪರಂಪರೆಯಲ್ಲಿ ಈ ನಾಡು, ಸಂಸ್ಕೃತಿಯ ಜನ ಭೂಮಿ, ಪ್ರಕೃತಿಯ ಮೇಲೆ ಪ್ರೀತಿ, ಗೌರವ, ಕಾಳಜಿ, ಕಳಕಳಿಯನ್ನು ಹೊಂದಿದ್ದರೆಂಬುದು ದಟ್ಟವಾಗಿದೆ. ಅಲ್ಲದೆ ಪೂರ್ವ ಕಾಲದಿಂದಲೂ ಜನ ಭೂಮಿಯನ್ನು ಆರಾಧಿಸಿ ಪೂಜಿಸುತ್ತಿದ್ದರೆಂಬುದಕ್ಕೆ ಹಲವಾರು ಶಾಸನಗಳು ಉಲ್ಲೇಖಿಸುತ್ತವೆ. ಹೀಗೆ ಭಾರತೀಯ ಸಂಸ್ಕೃತಿಯಲ್ಲಿ ಬೆಳೆದು ಬಂದಿರುವ ಭಾರತೀಯ ಮನಸ್ಸನ್ನು ಪಂಪ, ರನ್ನ, ನಾಗವರ್ಮ, ನಾಗಚಂದ್ರ, ಕುಮಾರವ್ಯಾಸ ಮುಂತಾದ ಪ್ರಾಚೀನ ಕವಿಗಳಿಂದ ಆಧುನಿಕ ಕವಿ ಕುವೆಂಪುವರೆಗಿನ ಈ ಕವಿ ಪರಂಪರೆ ತಮ್ಮ ಮಹಾಕಾವ್ಯಗಳಲ್ಲಿ ದಾಖಲಿಸುತ್ತಾ ಬಂದಿದ್ದಾರೆ. ಮಹಾಕಾವ್ಯಗಳ ಸಂಪ್ರದಾಯದ ಅಷ್ಟಾದಶವರ್ಣನೆಗಳಲ್ಲಿ ಪ್ರಕೃತಿ ವರ್ಣನೆಯೂ ಒಂದಾಗಿದ್ದು; ಅದರಲ್ಲಿ ಭೂಮಿ ಮೇಲಿನ ಸಸ್ಯ ಮತ್ತು ಪ್ರಾಣಿ ಪರಿಸರ ಋತುಮಾನ ಇವುಗಳೊಡನೆ ಮಾನವನ ಸಂಬಂಧ ಮತ್ತು ಸಂಸ್ಕೃತಿಗಳನ್ನು ಚಿತ್ರಿಸಲಾಗಿದೆ. ಅವುಗಳಲ್ಲಿ ಪಂಪ ಭಾರತದ ಖಾಂಡವವನ ದಹನ ಪ್ರಸಂಗ, ವೈಶಂಪಾಯನ ಸರೋವರದ ಸಿರಿಗನ್ನಡಿ ಮತ್ತು ನಾಗವರ್ಮನ ಕಾದಂಬರಿ ಕಾವ್ಯದ ಅಚ್ಚೋದ ಸರೋವರದ ವರ್ಣನೆ, ಹಲವಾರು ಬೇಟೆ ಪ್ರಸಂಗಗಳು ಮುಂತಾದ ಪ್ರಾಚೀನ ಕಾವ್ಯಗಳ ಪ್ರಕೃತಿ ವರ್ಣನೆಗಳನ್ನು ನೆನೆಯಬಹುದು. ಆ ಕಾಲದಿಂದಲೂ ಜನ ಪ್ರಕೃತಿ, ಭೂಮಿಯನ್ನು ಕಂಡು ಎಷ್ಟು ಭಾವ ಪರವಶರಾಗಿರುತ್ತಿದ್ದರೆಂಬುದಕ್ಕೆ ಈ ಸಾಲುಗಳು ಸಾಕ್ಷಿಯಾಗಿವೆ.

"ಸಮುದ್ರವಸನೇ ಪೃಥ್ವಿ ಪರ್ವತ ಸ್ತನ ಮಂಡಲೆ!
ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶ ಕ್ಷಮಸ್ವಮೇ"6

ಅಮ್ಮ! ಭೂಮಿ ತಾಯಿ ನಿನ್ನನ್ನು ತುಳಿಯುತ್ತಿರುವ ನನಗೆ ನಿನ್ನ ಕ್ಷಮೆಯಿರಲೆಂದು ಪ್ರಾರ್ಥಿಸುವ ಈ ಮಾತು ಅನುಷ್ಟುಭ್ ಛಂದಸ್ಸಿನ ಈ ಸಂಸ್ಕೃತ ಶ್ಲೋಕ 13–14ನೇ ಶತಮಾನದ ನಂದಿಕೇಶ್ವರನ ಅಭಿನಯ ದರ್ಪಣ ಕೃತಿಯಲ್ಲಿ ಬಳಕೆಯಾಗಿದೆ. ಅದರಲ್ಲಿ ನರ್ತಕಿಯರು ನೃತ್ಯ ಮಾಡುವಾಗ ಸಭಾವಂದನೆ ಮಾಡುತ್ತಾ ಭೂಮಿಗೆ ನಮಸ್ಕರಿಸಿ ಹೇಳುವ ಮಾತು. ಹಾಗೆಯೇ ಆ ಕಾಲದಲ್ಲಿಯ ಜನ ಬೆಳಿಗ್ಗೆ ಎದ್ದು ಭೂಮಿ ಮೇಲೆ ಕಾಲಿಡುವಾಗ ಹೇಳುತ್ತಿದ್ದ ಮಾತಿನ ಒಂದು ಸಂಸ್ಕೃತ ಶ್ಲೋಕವಿದು. ಇದನ್ನು ನಂದಿಕೇಶ್ವರ ತನ್ನ ಕೃತಿಗೆ ಸಂದರ್ಭೋಚಿತವಾಗಿ ಬಳಸಿಕೊಂಡಿದ್ದಾನೆ ನಿಜ. ಆದರೆ ಇದಕ್ಕೂ ಮುಂಚಿತವಾಗಿಯೇ ನಮ್ಮ ಜನಪದರು ಮುಂಜಾನೆ ಎದ್ದು ಭೂಸ್ಪರ್ಶದೊಂದಿಗೆ ತನ್ನ ಕೆಲಸಮಾಡುವಾಗ:

"ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಾಲಿ!
ಎಳ್ಳು ಜೀರಿಗೆ ಬೆಳೆಯೋಳ॥ ಭೂಮಿ ತಾಯಿ॥
ಎದ್ದೊಂದು ಗಳಿಗೆ ನೆನೆದೇನು॥ "7

ಈ ಮಾತಿನ ಭಾವ, ಧ್ವನಿ, ಅರ್ಥಗಳ ಸ್ಪರ್ಶಕ್ಕೆ ಹೋಲಿಕೆಯಾಗದು. ಆದರೂ ಈ ಎರಡು ಮಾತುಗಳು ಅಂದಿನ ಜನರ ಭೂಮಿ ಮೇಲಿನ ಪರಮಾವಧಿ ಭಕ್ತಿ, ಗೌರವ ಪ್ರೀತಿಗಳನ್ನು ಸೂಚಿಸುತ್ತದೆ. ಈ ಸಂಸ್ಕೃತ ಶ್ಲೋಕದ ಭಾವಪೂರ್ಣ ಮಾತನ್ನು ಶಿವರಾಮಯ್ಯ ಅವರು "ಇದು ತುಂಬಾ ಭಾವನಾತ್ಮಕವಾಗಿ ಕಂಡರೂ ವಾಸ್ತವವಾಗಿ ಸತ್ಯವೇ ಆಗಿದೆ. ಈ ಮಟ್ಟಿನ 'ಪರಿಸರ ಪ್ರಜ್ಞೆ' ಇದ್ದರೆ ಮಾತ್ರ ಭವಿಷ್ಯದಲ್ಲಿ ಮನುಕುಲವು ಈ ಭೂಮಿಯ ಮೇಲೆ ಬದುಕಿ ಬಾಳಲು ಸಾಧ್ಯ"8 ಎನ್ನುತ್ತಾರೆ. ಆದರೆ ಮೇಲಿನ ಈ ಸಾಲುಗಳಲ್ಲಿ ಅಂದಿನ ಭಾರತೀಯರ ಭೂಮಿ ಮೇಲಿನ ಭಕ್ತಿ, ಗೌರವ, ಪ್ರೀತಿಯ ಭಾವನಾತ್ಮಕ ಜೀವನ ಸಂವೇದನೆ ಇದೆ. ಅದನ್ನು ಇವತ್ತಿನ 'ಪರಿಸರ ಪ್ರಜ್ಞೆ' ಯಿಂದಾಗಲಿ, ಮಾನವನ ಸಾಂಸ್ಕೃತಿಕ ಪ್ರಜ್ಞೆಯಿಂದಾಗಲಿ ಗುರುತಿಸುವುದು ಯುಕ್ತವಲ್ಲ. ಏಕೆಂದರೆ ಇದು ಇಪ್ಪತ್ತನೇ ಶತಮಾನದ ಪರಿಕಲ್ಪನೆ. ಇದರ ಬಗ್ಗೆ ಆರಂಭದಲ್ಲೇ ಚರ್ಚಿಸಲಾಗಿದೆ.

ಭೂಮಿ ತಾಯಿಗೆ ಪಪಾದಸ್ಪರ್ಶ ಕ್ಷಮಸ್ವಮೇಪ ಎಂದು ತಾನು ತಿರುಗಾಡುವುದಕ್ಕೂ ಜನರು ನಿರ್ಬಂಧ ಹೇರಿಕೊಂಡು ಕ್ಷಮೆ ಕೇಳುವುದು ಕೂಡ ಪ್ರಕೃತಿ ವಿರೋಧ ಧೋರಣೆಯುಳ್ಳದ್ದು. ಏಕೆಂದರೆ ಭೂಮಿ ಮೇಲೆ ತಿರುಗಾಡದೆ ಯಾವುದೇ ಜೀವಿಯೂ ಸಾಮಾನ್ಯ ಜೀವನವಿರಲಾರದು. ಇದ್ದರೆ ಅದು ತನ್ನನ್ನೇ ತಾನು ಹಿಂಸಿಸಿಕೊಂಡಂತೆ. ಇದನ್ನೂ ಪ್ರಕೃತಿ ವಿರೋಧಿಸುವುದಲ್ಲದೆದ ಮನುಷ್ಯ ತನ್ನ ಸಾಮಾನ್ಯ ಜೀವನಕ್ಕೆ ಅಗತ್ಯವಾದ

ಪ್ರಕೃತಿ ಸಂಪತ್ತನ್ನು ಬಳಸದೆ, ಉದ್ದೇಶಿತ, ದುರಾಸೆಗಳಿಂದ ಪ್ರಕೃತಿ ನಿಯಮವನ್ನು ಉಲ್ಲಂಘಿಸಿ ದುಂದುವ್ಯಯ ಮಾಡುವುದನ್ನು ಪ್ರಕೃತಿ ವಿರೋಧಿಸುತ್ತದೆ. ಹಾಗಾಗಿ ಪ್ರಕೃತಿ ಭೂಮಿಯೊಡನೆ ಪ್ರಜ್ಞಾಪೂರ್ವಕವಾಗಿ, ತಿಳುವಳಿಕೆಯಿಂದ ನಡೆದುಕೊಳ್ಳುವ ಅಗತ್ಯ ಕ್ರಮದ ಗುಣ ಸ್ವಭಾವದ ನಡವಳಿಕೆಗಳನ್ನು 'ಪರಿಸರ ಪ್ರಜ್ಞೆ,' ಅಥವಾ 'ಭೂಮಿ ಸಂಸ್ಕೃತಿ' ಎನ್ನಲಾಗಿದೆ.

ಹತ್ತನೇ ಶತಮಾನದ ಪಂಪ ಮತ್ತು ಪಂಪಪೂರ್ವ ಸಾಹಿತ್ಯದಿಂದ ಇಪ್ಪತ್ತನೇ ಶತಮಾನದ ಕುವೆಂಪು ಮತ್ತು ಅವರ ಮುಂದಿನ ಇವತ್ತಿನ ಸಾಹಿತ್ಯಕೃತಿಗಳವರೆಗೂ ಈ ನಾಡಿನ ಸಂಸ್ಕೃತಿ, ಮಣ್ಣಿನ ಸತ್ವ ಗುಣಗಳು ಬೇರೆ ಬೇರೆ ಭಾವ, ರೂಢಿ ಆಚರಣೆಗಳಿಂದ ಸಾಗಿ ಬಂದಿವೆ. ಇವನ್ನು ಆಧುನಿಕ ಕನ್ನಡ ಸಾಹಿತ್ಯ ಭೂಮಿಯ ತತ್ವ, ಗುಣ, ಸ್ವಭಾವಗಳನ್ನೇ ವಸ್ತುವನ್ನಾಗಿ ಮಾಡಿಕೊಂಡು ಆಯಾ ಸಾಮಾಜಿಕ ಸಂದರ್ಭಗಳಿಗನುಗುಣವಾಗಿ ಬಳಸಿಕೊಂಡು ಚಿತ್ರಿಸಿದೆ. ಪಾಶ್ಚಾತ್ಯ ರೊಮ್ಯಾಂಟಿಕ್ ಸಾಹಿತ್ಯದಿಂದ ಭೂಮಿ, ಪ್ರಕೃತಿ ಒಂದು ವಸ್ತುವಾಗಿ ಕನ್ನಡ ನವೋದಯ ಸಾಹಿತ್ಯಕ್ಕೆ ಬಂದಾಗ, ಅತ್ಯಂತ ಶಕ್ತಿಶಾಲಿಯಾದ ಸ್ವದೇಶಿ ವಸ್ತು, ಸಂಸ್ಕೃತಿ, ಸಾಹಿತ್ಯವಾಗಿ ಅವತರಿಸಿತು. ಇದು ಭಾರತೀಯ ಮನಸ್ಸಿನ ಚಾರಿತ್ರಿಕ ದರ್ಶನದ ಅಖಂಡ ಸ್ವರೂಪವನ್ನು ತುಂಬಾ ಪರಿಣಾಮಕಾರಿಯಾಗಿ ಹೇಳುತ್ತದೆ.

ಈ ಕನ್ನಡ ಕವಿಗಳಿಗೆ ಭೂಮಿ ಪ್ರಕೃತಿಯ ಸೌಂದರ್ಯಸಿರಿಯಾಗಿ ಕಂಡ ಹಲವು ಭಾವ, ರೂಪ, ಆಚರಣೆಯ ದರ್ಶನಗಳು ಗಮನಾರ್ಹವಾಗಿವೆ. ಬೇಂದ್ರೆ ತಮ್ಮ ಅಡ್ಡಿ ಆತಂಕಗಳ ನೋವುಗಳನ್ನೆಲ್ಲ ಮೀರಿ ಸಂತೋಷ, ಸಂಭ್ರಮ, ಆದರ್ಶ, ಪ್ರೇಮದ ಬದುಕನ್ನು ಸಿರಿವಂತ ಭೂಮಿಯ ದರ್ಶನದಲ್ಲಿ ಕಾಣುವ ನಾದಲೀಲೆ ಕವನದ ಸಾಲುಗಳಿವು:

"ಕೋಲು ಸಖೀ, ಚಂದ್ರ ಮುಖೀ ಕೋಲೆ ನಾದಲೀಲೆ
ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ
ತರಳ ಎರಳೆ, ಚಿಗುರ ಚಿಗುರೆ, ಹೂವು ಹೂವು ಹುಲ್ಲೆ"9 (ನಾದಲೀಲೆ)

ಚಿಗುರೆ, ಎರಳೆ, ಹುಲ್ಲೆಗಳೆಲ್ಲ ಮುಗ್ಧತೆ ವಿಸ್ಮಯ, ಉಲ್ಲಾಸಗಳ ಪ್ರತೀಕ. ಇಲ್ಲಿ ಸುಂದರ ಜೀವಗಳ ಒಡನಾಟ ಮತ್ತು ಸಂಭ್ರಮದ ಧ್ವನಿಯಿದೆ. ಈ ಸಂಭ್ರಮ ಉತ್ಕಟ ಪ್ರೇಮದ ಪ್ರಣಯದಲ್ಲಿ ಉನ್ಮಾದಗೊಳ್ಳುವ ದರ್ಶನವಿದು–

"ಗಿರಿಶಿಖರದಿ ಶಿಖೆಯನೆತ್ತಿ ಶಿಖಿಯ ಕೇಕೆ ಕರೆವುದು
ಮೋಡ ಬಂತು ಮಿಂಚತಂತು ಗುಡುಗು ಮಳೆಯು ಬರುವುದು
ಜಗವೆಲ್ಲವು ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೇ
ಸಖಿ ಸಂಮುಖ ತಲ್ಲೀನತೆಯಲಿ ಏಕಾಕಿ"10 (ನೃತ್ಯಯಜ್ಞ)

ನವಿಲುಗಳಿಗೆ ಪ್ರಣಯೋನ್ಮಾದದ ತಲ್ಲೀನತೆಯಲ್ಲಿ ಹೊರಜಗತ್ತಿನ ಪರಿವೇ ಇಲ್ಲದಂತೆ ಲೀನವಾಗಿರುವ ಪ್ರಣಯದ ಮೂರ್ತರೂಪದಲ್ಲಿ ಪ್ರಕೃತಿಯಿದೆ. ಇದರಲ್ಲಿ ಜಡವೆಂಬುದೇ ಇಲ್ಲ. ಎಲ್ಲವೂ ಚೈತನ್ಯಶೀಲವಾದುದ್ದು. ಈ ಪರಿಕಲ್ಪನೆಯುಳ್ಳ ಕುವೆಂಪು ಕವನಗಳಿವು; "ಹನಿಯನು ನಾನು ಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ
ನನ್ನಡಿ ಸೋಂಕಿಹ ಈ ಹುಲ್ಲು
ಇನಿಯನ ತುಟಿ ಸೋಂಕನೆ ಸವಿಯುತ್ತಿದೆ
ಪ್ರೀತಿಯ ಮುತ್ತಿಗೆ ಹಾತೊರೆಯುತ್ತಿದೆ
ಚೇತನ ಮೂರ್ತಿಯೆ ಆ ಕಲ್ಲು
ತೆಗೆ ಜಡವೆಂಬುದೆ ಬರಿ ಸುಳ್ಳು"11 (ಶರತ್ಕಾಲದ ಸೂರ್ಯೋದಯದಲಿ)

"ನೋಡುತಿಹೆ ನೋಟದೊಳೆ ಅದು ಆ ದಿಗಂತದೆಡೆ
ಪೂರ್ವದಿಕ್ಕುರಿಯುತಿದೆ ಸ್ಥೂಲ ಜಡ ಜಗವೆಲ್ಲ
ಧ್ಯಾನ ದೃಷ್ಟಿಗೆ ಭಾವ ವಿನ್ಯಾಸದಂದಲಿ
ವೇದ್ಯವಾಗುತಿದೆ ಕವಿ ದರ್ಶನಕೆ ಜಡವಿಲ್ಲ
ಜಡವೆಂಬುದೆಲ್ಲ ಚೇತನದ ನಟನೆಯ ಲೀಲೆ"12 (ರಸಾನುಭೂತಿ)

ಇಲ್ಲಿ ಜೀವ ಜಡಗಳ ಭೇದವನ್ನು ನಿರಾಕರಿಸಿ ಇವುಗಳಲ್ಲಿ ನಡೆಯುವ ವೈಜ್ಞಾನಿಕ ಕ್ರಿಯಾ ಸ್ವರೂಪವನ್ನು ಕುವೆಂಪು ಎತ್ತಿ ಹಿಡಿಯುತ್ತಾರೆ. ಈ ಕ್ರಿಯೆಗೆ ಪ್ರೀತಿ ಮುಖ್ಯ. ಪ್ರೀತಿ ಎಲ್ಲವನ್ನೂ

ಸೃಜನಶೀಲಗೊಳಿಸುತ್ತದೆ. ಇದರ ಮೂಲಕ ಕವಿ ಪ್ರಕೃತಿಯಲ್ಲಿ ಭೂಮಿಯ ಹರ್ಷ ಸಿರಿಯನ್ನು ಕಾಣುತ್ತಾರೆ. ಭೂಮಿಯ ಈ ಸಿರಿಗೆ ಅದರ ಚೈತನ್ಯಶೀಲವಾದ ಸೃಷ್ಟಿ, ವಿಕಾಸದ ಚಲನಶೀಲ ದಿನಚರಿ ಗುಣವೇ ಕಾರಣ. ಇಂತಹ ಭೂಮಿಯ ಗರ್ಭದಿಂದ ಸೃಜಿಸುವ ಜೀವಿಗಳ ಬೆಳವಣಿಗೆಗೆ ಒಳ್ಳೆಯ ಸತ್ವ, ಶಕ್ತಿಯನ್ನು ನೀಡಲೆಂದು ಗ್ರಾಮೀಣ ಜನರು ಇದನ್ನು ಗರ್ಭಧರಿಸಿದ ತಮ್ಮ ಹೆಣ್ಣು ಮಗಳೆಂದು ತಿಳಿದು ಸಾಂಪ್ರದಾಯಿಕ ಆರೈಕೆ ಮಾಡುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಮತ್ತು ಭೂಮಿ ಒಂದೇ. ಹೆಣ್ಣು ಗರ್ಭಧರಿಸಿದಾಗ ಅವಳ ಹೆರಿಗೆ ಆರೋಗ್ಯದಿಂದ ಸರಾಗವಾಗಿ ಆಗಲೆಂದು ಆಕೆಯ ಮಾನಸಿಕ, ದೈಹಿಕವಾದ ಸಮಸ್ಯೆಗಳನ್ನು ನಿಭಾಯಿಸಿಕೊಂಡು ಸೃಷ್ಟಿಗೆ ಸಿದ್ದಗೊಳ್ಳಲೆಂದು ನಾನಾ ತರಹ ಆರೈಕೆ ಮಾಡುತ್ತಾರೆ. ಇದೇ ಸಂವೇದನೆಯಿಂದ ಉತ್ತರ ಕರ್ನಾಟಕ, ಮಲೆನಾಡು ಮುಂತಾದ ಪ್ರದೇಶಗಳ ರೈತಾಪಿ ಜನರು ಭೂಮಿಯನ್ನು ಇವತ್ತಿಗೂ ಆರೈಕೆ ಮಾಡುವುದನ್ನು ಗಮನಿಸಬಹುದು. ಈ ಸಂಪ್ರದಾಯದ ಆಚರಣೆಯನ್ನು ಕವಿ ಬೆಟಗೇರಿ ಕೃಷ್ಣಶರ್ಮ ಅವರ ಸೀಗಿ ಹುಣ್ಣಿವಿ ಪದ್ಯ ಪ್ರತಿಬಿಂಬಿಸುತ್ತದೆ.

"ಅನ್ನ ಕುಮಾರನ ಬಸುರಿಯಾದಳೌ ನಮ್ಮ ಭೂಮಿದೇವಿ
ಬಯಕಿಯ ಊಟ ಉಣಿಸಬೇಕ ಬಂದೈತಿ ಸೀಗಿ ಹುಣಿವಿ!"13 (ಸೀಗಿ ಹುಣ್ಣಿವಿ)

ಅನ್ನಕುಮಾರನ ಬಸುರಿತನ ಭೂಮಿಯದಾಗಿರುವಂತೆ ಬೆಳೆಗಳದು ಮತ್ತು ಹೆಣ್ಣಿನದೂ ಆಗಿದೆ. ಇವುಗಳ ಬಯಕೆಯ ಊಟ ಉಣ್ಣಿಸುವ ಸಮಯ ಪಸೀಗಿ ಹುಣ್ಣಿವಿಪ ಋತುಮಾನಕ್ಕನುಗುಣವಾಗಿ ಬಸಿರಾಗುವ ಸಂಕ್ರಮಣ ಕಾಲ. ಆಗ ಭೂಮಿತಾಯಿಯ ಬಯಕೆಯ ಊಟವೆಂದು ನಾನಾತರದ ಅಡಿಗೆ ಮಾಡಿ ಹೊಲಕ್ಕೆ ತೆಗೆದುಕೊಂಡು ಹೋಗಿ ಎಡೆಹಿಡಿದು ಪೂಜೆಮಾಡುತ್ತಾರೆ. ಹೆಣ್ಣಿಗಾಗಲಿ, ಭೂಮಿಗಾಗಲಿ ಮಾಡುವ ಈ ಆರೈಕೆ ಹಲವು ಬಂಧು ಬಳಗ, ಊರುಕೇರಿಗಳೆಲ್ಲ ಸೇರಿ ಅವರ ಹರ್ಷ, ಪ್ರೀತಿ ಹಾರೈಕೆಗಳನ್ನು ಧಾರೆಯೆರೆಯುವ ಕಾರ್ಯ. ಇದನ್ನು ಪ್ರಕೃತಿಯ ಪ್ರತಿಮೆಗಳಲ್ಲೇ ಅಭಿವ್ಯಕ್ತಿಗೊಳಿಸಿದ ಸಾಲುಗಳಿವು.

"ಗಿರಿಜಿ ಗಂಗಿ ಸಂಗಾಯಿ ಶಾಂತಿಯರ ಕರ ಕರದೊಯ್ಯೋಣ
ನೆರಿಯ ಹೊಲದ ನಾಗವ್ವ ಭಾಗಿರತಿ ಕೆಂಪಿನ ಕರಿಯೋಣ
ಹಿರಿಯರು ಬರಲೀ ಕಿರಿಯರು ಬರಲೀ ಎಲ್ಲರು ಬೆರಿಯೋಣ
ಭೂಮಿತಾಯಿ ಜೋಡಿ ನಾವೆಲ್ಲರು ಕೂಡಿ ಉಂಡರೆಷ್ಟು ಸವಿ ಸವಿ"14 (ಸೀಗಿ ಹುಣ್ಣಿ)

ಪ್ರಕೃತಿಯ ಭಾಗಗಳಾದ ಬೆಟ್ಟ ಗುಡ್ಡ, ಗಿರಿ ಪರ್ವತ, ನದಿ ಕೆರೆಗಳನ್ನು ಗಿರಿಜಿ, ಗಂಗಿ, ಶಾಂತಿ, ಭಾಗಿರತಿ ಮುಂತಾದ ಸ್ತ್ರೀ ಗೆಳತಿಯರ ಹೆಸರುಗಳಿಂದ ಒಟ್ಟಿಗೆ ಸೇರಿಸಿ ಭೇದಭಾವವಿಲ್ಲದೆ ಸೌಹಾರ್ದತೆಯ ಬಾಂಧವ್ಯಕ್ಕಾಗಿ ಸುಖ ಶಾಂತಿಗಾಗಿ ಮಾಡುವ ಆಚರಣೆಯಿದು. ಇದನ್ನು ಕವಿ 'ಭೂಮಿ ತಾಯಿ ಜೋಡಿ ನಾವೆಲ್ಲರು ಕೂಡಿ ಉಂಡರೆಷ್ಟು ಸವಿ ಸವಿ' ಎಂದು ಕೂಡಿ ಬಾಳಿದರೆ ಸ್ವರ್ಗ ಸುಖವೆಂಬ ಭಾವಾರ್ಥದ ಧ್ವನಿ ತುಂಬಿದ್ದಾರೆ. ಇಂತಹ ಭೂಮಿ ಗರ್ಭದ ಫಲವಂತಿಕೆಯ ಪೂಜೆ ಜೀವ ಜೀವನದ ಧಾರಣ ಶಕ್ತಿಯ ಮತ್ತು ಜಗತ್ತಿನ ಸರ್ವ ಸಮೃದ್ಧತೆಯ ಆಶಯವನ್ನು ಹೊಂದಿದೆ. ರಕ್ಷಕ ತತ್ವದ ಸಂಕೇತವಾದ ಈ ಭೂಮಿ ಕ್ರಿಯಾಶೀಲವಾದಾಗ ಇಡೀ ವಿಶ್ವವೇ ಹೊಸ ರೋಮಾಂಚನದ ಅನುಭವದಿಂದ ಬಿರಿಯುತ್ತದೆ. ಅಂತಹ ಒಂದು ಸುಂದರ ಸವಿಗೆ ಜೀವ ಸಂಗಮವಾಗುವ ದೈವೀ ರೂಪಕವಿಲ್ಲಿದೆ;

"ಮೂರು ಸಪ್ತಾಕದಾಚೆ ಮೊಳೆತ ನನೆದನಿಯಿಂದ
ಜೀವ ಮಂಡಲವು ಪರಿಪೂರ್ಣವಾದಂತೆ
ದೇವ ಕೇಂದ್ರದಿ ಕದಿರುತ್ತಿದ್ದ ಆಶೀರ್ವಾದ
ಫಲಿಪ ಸುಮ ಸಮಯ ಅವತೀರ್ಣವಾದಂತೆ
ಮೂಡಲಿನ ಕಡಲಿನಲ್ಲಿ ಅಲ್ಲೋಲ ಕಲ್ಲೋಲ
ಮಂತ್ರ ಪುಷ್ಪದ ವೇದ ಘೋಷವಾದಂತೆ
ವಿಶ್ವ ಮಾತೆಯ ಪ್ರಾರ್ಥ್ನೆಯ ಕೇಳಿ ಶಾಂತಿ ಸಾ
ಗರದ ಬಸಿರಲ್ಲಿ ಸಂತೋಷವಾದಂತೆ
ಕೃಷ್ಣವರ್ಣದ ವಾಸುದೇವ ಬೀರಿದ ಬೆಳಕು
ಘನ ನೀಲ ಗಗನದಲಿ ಸೋಸಿ ಬಂದಂತೆ
ನೀಲ ಘನ ವೃಷ್ಟಿಯನ್ನುಂಡಾ ವಸುಂಧರೆಯು
ಹಸಿರಿನಲಿ ಕಾಮನನೆ ಹಡೆದು ತಂದಂತೆ1"15 (ಸುದರ್ಶನದಲ್ಲಿ)

ಈ ವಸುಂಧರೆಗೆ ತನ್ನ ಸಮಸ್ತ ಸತ್ವವನ್ನು ತನ್ನ ಮಕ್ಕಳ ಬೆಳವಣಿಗೆಗೆ ಅವರ ಅಭ್ಯುದಯಕ್ಕೆ ಧಾರೆಯೆರೆಯುವ ಆಸೆ. ಆದ್ದರಿಂದಲೇ ಇವಳು ಇಡೀ ವಿಶ್ವದ ಮನುಕುಲ ವಿಕಾಸದ ಹೊಣೆ ಹೊತ್ತಂತಿದ್ದಾಳೆ. ಇಡೀ ಭೂ ಪರಿಧಿಯೇ ಸೃಷ್ಟಿಯಿಂದ ಜೀವ ತತ್ವವುಳ್ಳ ತಾಯಿ ಗುಣವನ್ನು ಧಾರಣ ಮಾಡಿಕೊಂಡು ಹಡೆದಿದ್ದಾಳೆ.

"ಮೈಯೆಲ್ಲ ಹೆರಿಗೆ ಮನೆ ಮಸಣ, ಇವಳಿಗೆ, ಸ್ವರತಿ, ಸಂಪ್ರೀತೆ;
ಹುಲಿ, ಚಿರತೆ, ಆನೆ, ಹಸು, ಆಡು, ಕೋಡಗ, ಕತ್ತೆ;
ಮಾವು, ನೇರಳೆ, ಹಲಸು, ಜಾಲಿ, ಜಾಜಿ
ಇವು ಇವಳ ಸಹಜ ಸಂತಾನ"16 (ಭೂಮಿಗೀತ)

ಭೂಮಿಗೆ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಸ್ವಾಭಾವಿಕ ಹೆರಿಗೆಯಾಗಿದೆ. ಇದರಲ್ಲಿ ನಡೆಯುವ ಹುಟ್ಟು ಸಾವುಗಳು ಏಕಕಾಲದ ಕ್ರಿಯೆಗಳಾಗಿದ್ದು, ಇವು ಒಂದೇ ನಾಣ್ಯದ ಎರಡು ಮುಖಗಳು. ಇದನ್ನೇ ಕವಿ 'ಮೈಯೆಲ್ಲ ಹೆರಿಗೆ ಮನೆ ಮಸಣ ಇವಳಿಗೆ' ಎನ್ನುವುದು. ಸಸ್ಯ ಪ್ರಾಣಿ ಮುಂತಾದ ಜೀವ ಸಂತತಿಗಳನ್ನು ಎಲ್ಲೆಂದರಲ್ಲಿ ಒಟ್ಟಿಗೆ ಸೃಷ್ಟಿಸುವ ನಿಸರ್ಗ ನಿಯಮಿತ ಭೂಮಿ ಸ್ವರತಿ ಸಂಪ್ರೀತೆ ಎನಿಸಿದ್ದಾಳೆ. ಇವಳಿಂದ ಜನಿಸಿದ ನದಿ, ಬೆಟ್ಟ, ಗುಡ್ಡ, ಕಾಡುಗಳನ್ನು ಕೆ. ಎಸ್. ನರಸಿಂಹ ಸ್ವಾಮಿಯವರು ಶಿಲೆಗೆ ಹೂವಿನ ವಂಕಿ ಪದ್ಯದಲ್ಲಿ;

"ನದಿಗಳೆಲ್ಲ ನಿನ್ನೆದೆ ಹಾಲು
ಬೆಟ್ಟ ಸಾಲು ನಿನ್ನ ಹೆಗಲು
ಹಗಲು ನೀನು ನಗಲು
ಇರುಳು ನಿನ್ನ ನೆರಳು
ಹಸಿರುಡುಗೆ ಮುಗಿಲಿನೊಡವೆ"17 (ಶಿಲೆಗೆ ಹೂವಿನ ವಂಕಿ)

ಎಂದು ಭೂಮಿತಾಯಿಯ ಅಂಗಗಳಿಂದ ಇಡೀ ಪ್ರಕೃತಿ ಪರಿಸರವನ್ನು ಕಾಣುತ್ತಾರೆ. ಭೂಮಿಗೂ ಭೂಮಿ ಮೇಲಿನ ಸಸ್ಯ ಪ್ರಾಣಿ ಮುಂತಾದ ಸರ್ವಜೀವನಿಧಿಗೂ ಅವಿನಾಭಾವ ಸಂಬಂಧ. ಈ ವೈವಿಧ್ಯ ಜೀವನ ಪರಿಸರದ ನಾನಾ ಹಂತದ ರೂಪಗಳಿಂದ ಇದರ ಸಿರಿ ಸಂಪತ್ತಿನಿಂದ ಭೂಮಿಯ ಮೌಲ್ಯ ಹೆಚ್ಚಿದೆ. ಭೂಮಿ ಪ್ರಕೃತಿ ಪರಿಸರಕ್ಕೆ ತಾಯಿಯಾಗಿ ತನ್ನ ಸತ್ವಶೀಲ ಗುಣ ತತ್ವಗಳನ್ನು ಧಾರೆಯೆರೆದು ಜನರಲ್ಲಿ ಅದರ ಕೀರ್ತಿ, ಪ್ರೀತಿ ಹೆಚ್ಚಿಸಿದೆ. ಹಾಗಾಗಿ ಈ ಪ್ರಕೃತಿಯಲ್ಲಿರುವ ಅನನ್ಯ ಮೂರ್ತ ಮತ್ತು ಅಮೂರ್ತ ಗುಣ, ರೂಪಗಳುಳ್ಳ ಈ ಮಹಾನ್ ಶಕ್ತಿಯನ್ನು ದೇವರೆಂದು, ತಾಯಿಯೆಂದು ಇವಳ ಮಕ್ಕಳು ನಾವೆಂದು ಬಗೆದು ಪ್ರಕೃತಿಯನ್ನು ಆರಾಧಿಸಿ, ಪ್ರೀತಿಸಿ, ಗೌರವಿಸುವ ಭಾವ ಜೀವಿಗಳು ಮಾನವರು.

3. **ಪ್ರಕೃತಿಯೊಂದಿಗೆ ಮಾನವನ ತಾದಾತ್ಮ್ಯದ ದೈವಿಭಾವಗಳು:**

ಮಾನವ ಕುಲ ಆಕಾಶ ಭೂಮಿಯನ್ನೊಳಗೊಂಡ ಪ್ರಕೃತಿಯ ಜೀವ ಪರಿಸರದೊಡನೆ ಮೂಲತಃ ತಾದಾತ್ಮ್ಯ ಭಾವ ಸಂಬಂಧದಿಂದ ಬೆಳೆಯುತ್ತಾರೆ. ಮಾನವ ತಾನು ಬೆಳೆಯುತ್ತಾ ಹೋದಂತೆ ಎಷ್ಟೋ ಜನರಲ್ಲಿ ನಾನಾ ಆಸೆ, ಆಮಿಷಗಳ ಬೆಳವಣಿಗೆಗಳಿಂದ ಪ್ರಕೃತಿಯ ಈ ಸಂಬಂಧದಿಂದ ದೂರವಾಗುತ್ತಾ ಸಾಗುತ್ತಾರೆ. ಆದರೂ ಬಹುಪಾಲು ಜನ ಪ್ರಕೃತಿಯ ಆ ಸೌಂದರ್ಯವನ್ನು ದೈವೀಭಾವದಿಂದ ಕಂಡು ಅನುಭವಿಸುತ್ತಾ ಆನಂದಪಡುತ್ತಾರೆ. ಅಂತಹ ಭಾವಾನುಭಾವದ ಕವಿಗಳು ಕಂಡ ಪ್ರಕೃತಿಯ ದೃಶ್ಯಗಳ ಕೆಲವು ಸಾಲುಗಳಿವೆ. ಅವುಗಳಲ್ಲಿ ಕವಿ ಕುವೆಂಪು ಈ ಪ್ರಕೃತಿಯ ಸೂರ್ಯೋದಯ. ಚಂದ್ರೋದಯವನ್ನು ಕಂಡು ಭಾವ ಪರವಶರಾಗಿ ದೈವೀಕರಿಸಿದ ಪ್ರಕೃತಿ ದರ್ಶನದ ತುಣುಕಿದು;

"ಆನಂದಮಯ ಈ ಜಗ ಹೃದಯ
ಏತಕೆ ಭಯ ಲ ಮಾಣೊ
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ
ಬಿಸಿಲಿದು ಬರಿ ಬಿಸಿಲಲ್ಲವೊ
ಸೂರ್ಯನ ಕೃಪೆ ಕಾಣೊ

ಸೂರ್ಯನು ಬರಿ ರವಿಯಲ್ಲವೊ
ಆ ಭ್ರಾಂತಿಯ ಮಾಣೊ
ರವಿವದನವೆ ಶಿವಸದನವೊ
ಬರಿ ಕಣ್ಣದು ಮಣ್ಣೊ
ಶಿವನಲ್ಲದೆ ಸೌಂದರ್ಯವು
ಶಿವ ಮುಖದ ಕಣ್ಣೊ"18 (ಆನಂದಮಯ ಈ ಜಗ ಹೃದಯ)

ಈ ಕವನದ ದೃಷ್ಟಿಗೂ ಹತ್ತೊಂಬತ್ತನೆ ಶತಮಾನದ ಇಂಗ್ಲೀಷ್ ರೊಮ್ಯಾಂಟಿಕ್ ಸಾಹಿತ್ಯದ ಕವಿಗಳು ಪ್ರಕೃತಿಯನ್ನು ದೈವೀಕರಿಸಿ ನೋಡುತ್ತಿದ್ದ ದೃಷ್ಟಿಗೂ ಸಾಮ್ಯವಿದೆ. ಇದು ನವೋದಯ ಸಾಹಿತ್ಯ ಪ್ರಕೃತಿಯನ್ನು ನೋಡುತ್ತಿದ್ದ ದೃಷ್ಟಿ ಧೋರಣೆಯ ಒಂದು ಮುಖ. ಕವಿ ಪ್ರಕೃತಿ ಸೌಂದರ್ಯಕ್ಕೆ ಶಿವನೆ ಕಾರಣ. ಅವನಿಲ್ಲದೆ ಸೌಂದರ್ಯವಿಲ್ಲ. ಸೌಂದರ್ಯವೇ ಶಿವನೆಂದು ಮತ್ತೊಂದು ದೈವೀಶಕ್ತಿಯನ್ನು ಸಾಕ್ಷಾತ್ಕರಿಸುತ್ತಾರೆ. ಶಿವನ ಸಾಕ್ಷಾತ್ಕಾರವನ್ನು ಸೂರ್ಯನಲ್ಲಿ ಕಾಣುವ ಕವಿ ಓದುಗರನ್ನು ಬಾ ಪಾಲ್ಗುಣ ರವಿ ದರ್ಶನಕೆ ಕವನದಲ್ಲಿ ಆಹ್ವಾನಿಸುತ್ತಾರೆ.

"ಶಿವ ಮಂದಿರ ಸಮ ವನಸುಂದರ ಸಮ ಶೃಂಗಾರದ ಗಿರಿ ಶೃಂಗಕೆ
ಬಾ ಪಾಲ್ಗುಣ ರವಿ ದರ್ಶನಕೆ
ಕುಂಕುಮ ಧೂಳಿಯ ದಿಕ್ತಟ ವೇದಿಯೊಳೋಕುಳಿಯಲಿ ಮಿಂದೇಳುವನು
ಕೋಟಿ ವಿಹಂಗಮ ಮಂಗಲರವ ರಸನೈವೇದ್ಯಕೆ ಮುದ ತಾಳುವನು
ಚಿನ್ನದ ಚೆಂಡನೆ ಮೂಡುವನು. ಹೊನ್ನನೆ ಹೊಯ್ ನೀರ್ ನೀಡುವನು
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆ ಹರಿಯಿಸಿ ರವಿ ದಯ ಮಾಡುವನು"19
(ಬಾ ಪಾಲ್ಗುಣ ರವಿ ದರ್ಶನಕೆ)

ಇಲ್ಲಿ ದೇವರು ಮತ್ತು ಪ್ರಕೃತಿ ಸೌಂದರ್ಯಕೆ ಭಿನ್ನತೆಯಿಲ್ಲದೆ ಧಾರ್ಮಿಕ ಪರಿಭಾಷೆಯಲ್ಲೇ ಕಾವ್ಯ ಸಾಗುತ್ತದೆ. ಭೂಮಿಯ ಸೃಷ್ಟಿ ಕ್ರಿಯೆಗೆ ಸೂರ್ಯನ ಆಗಮನವೇ ಕಾರಣವೆಂಬ ವೈಜ್ಞಾನಿಕಾಂಶವನ್ನು ಕವನ ಪ್ರಕಟಿಸುತ್ತದೆ. ಇದರಿಂದ ಕನ್ನಡ ನವೋದಯ ಕಾವ್ಯ ಧರ್ಮ ಮತ್ತು ವಿಜ್ಞಾನಿಗಳ ಸಾಮರಸ್ಯದ ವೈಶಿಷ್ಟ್ಯ ವ್ಯಕ್ತವಾಗುತ್ತದೆ. ಇದೇ ಸೂರ್ಯೋದಯದ ಬೆಳಗು ಬೇಂದ್ರೆಯವರ ಕಲ್ಪನೆಗೆ ಸಿಕ್ಕಿದ್ದು ಹೀಗೆ;

"ಮೂಡಲ ಮನೆಯ ಮುತ್ತಿನ ನೀರಿನ
ಎರಕುವ ಹೊಯ್ದಾ
ನುಣ್ಣನ್ನೆರಕುವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತು ಜಗವೆಲ್ಲ ತೊಯ್ದಾ"20 (ಬೆಳಗು)

ಇಲ್ಲಿಯ ಬೆಳಗು ಪ್ರಕೃತಿಯ ಮತ್ತು ಮಾನವ ಜೀವನದ ವಿಕಾಸಕ್ಕೆ ನಾಂದಿಯಾಗಿದೆ. ವಿಕಾಸದ ಹಂತದಲ್ಲಿ ಬರುವ ನಾನಾ ತರಹ ಭೇದಗಳೆಲ್ಲ ಮಾಯವಾಗಿ ನಾಡ ಜನವೇ ಸಂತೋಷವನ್ನುಣ್ಣುತ್ತಿದೆ. "ಮೂಡಣ
ಕಣಿವೆಯ ಹಿಮದವಕುಂಠನ
ರವಿಕರ ಸ್ಪರ್ಶಕೆ ಜಾರುತಿದೆ,
ನಾಡದೊ, ಹಿಗ್ಗುತ ನಾಚುತ ಮೆಲ್ಲನೆ
ಮೈಸಿರಿಯನು ತಾ ತೋರುತಿದೆ."21 (ಯದುಗಿರಿಯ ಮೌನ ವಿಕಾಸ)

ಪ್ರಕೃತಿಯ ಮೈಸಿರಿಯ ದರ್ಶನದಲ್ಲಿ ಮಾನವನ ಜೀವನ ದರ್ಶನವಿದೆ. ಹಾಗಾಗಿ ನಿಸರ್ಗ ಮತ್ತು ನಾಡು ಇವೆರಡರ ಆನಂದವೇ ಸ್ವರ್ಗ,ಸುಖ. ಇದು ನಮ್ಮ ಭಾವ. ಈ ಪ್ರಕೃತಿ ಭಾವದೊಡನೆ ಮೇಳೈಸಿದಾಗ ಸಿಗುವ ಆನಂದಾನುಭವ. ಈ ಅನುಭವವನ್ನೇ ಕುವೆಂಪು ಕಾವ್ಯದಲ್ಲಿ ತುಂಬಿದ್ದಾರೆ.

"ಪ್ರಾತಃ ಕಾಲದ ಹೊಂಬಿಸಿಲಲ್ಲಿ
ಸ್ವರ್ಗವೆ ಭೂಮಿಗೆ ಇಳಿದಿದೆ ಇಲ್ಲಿ;
ಕಂಗಳೆ ತೇಲಿವೆ ಬಣ್ಣದ ಕಡಲಲಿ
ಕೆಂಪಾಗಿಹ ನೆತ್ತರು ನನ್ನೊಡಲಲಿ
ಕಣ್ಣೀಂಟುವ ಬಣ್ಣವನೇ ತಾಳಿ
ಮಿನುಮಿಂಚುತ್ತಿದೆ ಕಣ್ಣನೆ ಹೋಲಿ"22 (ಹೂವು ದೇವರು)

ಈ ಕವಿಯ ನೇತ್ರ, ನೆತ್ತರು, ಹೃದಯಗಳೆಲ್ಲ ಬೆಳಗಿನ ಮೋಡದ ಬಣ್ಣ ಬಿಸಿಲಿನಲ್ಲಿ ಲೀನವಾಗಿವೆ. ಇದನ್ನೇ ಕವಿಯ ತಾದಾತ್ಮ್ಯ ಭಾವವೆನ್ನುವುದು. ಪ್ರಕೃತಿಯ ಸೊಬಗನ್ನು ಹೀಗೆ ಬಣ್ಣಿಸುವುದರಿಂದಲೇ ಜನರಲ್ಲಿ ಅವರ ಬಗ್ಗೆ ಪ್ರೀತಿ, ಆನಂದ, ಶಾಂತಿ ಹೊಂದಲು ಸಾಧ್ಯ. ಇಂತಹ ಕಾವ್ಯಗಳ ಮೂಲಕ ಕುವೆಂಪು ಜನಗಳಿಗೆ ಧರ್ಮಗಳು ಅಧ್ಯಾತ್ಮದಿಂದ ನೀಡುವ ಶಾಂತಿ ನೆಮ್ಮದಿಗಿಂತ 'ಪ್ರಕೃತಿ ಧರ್ಮ' ನೀಡುವ ಹರ್ಷ, ಆನಂದ, ಸ್ಫೂರ್ತಿ, ಸುಖಶಾಂತಿಗಳು ಶ್ರೇಷ್ಠವಾದವೆಂಬ ತಾತ್ವಿಕ ನಿಲುವು ತಾಳುತ್ತಾರೆ. ಇದಕ್ಕೆ ಅವರ ಪ್ರಕೃತಿ ಬಗೆಗಿನ ಕವನಗಳೆಲ್ಲ ಪುಷ್ಟಿ ನೀಡುತ್ತವೆ. ಅಂತಹ ಕವನಗಳಲ್ಲಿ ಹಸಿರು ಪದ್ಯವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

"ಹಸುರಾಗಸ, ಹಸುರು, ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮೇಲೆ ಹಸುರು ಕಣಿವೆ,
ಹಸುರು ಸಂಜೆಯೀ ಬಿಸಿಲೂ
.....
.....
ಹಸುರತ್ತಲ್ ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ ಅ"23 (ಹಸುರು)

ಈ ಪದ್ಯ ಪ್ರಕೃತಿಯ ಪರಿಪೂರ್ಣ ತತ್ವದ ಅನುಭವವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ಕವಿಯ ಈ ಚಿತ್ರಣದಲ್ಲಿ ಧರ್ಮ ವಿರೋಧಿ ನಿಲುವು ಮತ್ತು ವೈಚಾರಿಕ, ವೈಜ್ಞಾನಿಕ ತಿಳಿವಳಿಕೆಯ ಮಹತ್ವವಾದ ಪ್ರಕೃತಿ ತತ್ವ ವ್ಯಕ್ತವಾಗಿದೆ. ಪ್ರಕೃತಿಯ ಹಸಿರಿನಿಂದ ಕವಿಯ ಆತ್ಮವು ಹಸಿರಾಗಿರುವುದರಲ್ಲಿ ಪ್ರಕೃತಿ ಪ್ರಜ್ಞೆ ಘನೀಕರಣವಾಗಿದೆ.

ಭೂಮಿಯ ಈ ಪ್ರಕೃತಿ ಸೊಬಗನ್ನು ಕಂಡ ಕವಿ ಕೆ. ಎಸ್. ನಿಸಾರ್ ಅಹಮದ್ ಅವರು ನಿತ್ಯೋತ್ಸವವೆಂದು ಕರೆದು ಆ ಉತ್ಸವದ ವೈಭವವನ್ನು ಕಾವ್ಯದಲ್ಲಿ ಪ್ರತಿಬಿಂಬಿಸುತ್ತಾರೆ.

"ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯಹರಿದ್ವರ್ಣ ವನದ ತೇಗ, ಗಂಧ, ತರುಗಳಲ್ಲಿ.
ನಿತ್ಯೋತ್ಸವ, ತಾಯಿ ನಿತ್ಯೋತ್ಸವ ನಿನಗೆ"24 (ನಿತ್ಯೋತ್ಸವ)

ಪ್ರಕೃತಿಯ ನದಿ, ಸಾಗರ, ಗಿರಿ, ಪರ್ವತ, ಕಾಡುಗಳು ಭೂಮಿ ತಾಯಿಯ ಉತ್ಸವಕ್ಕಾಗಿ ನಿಂತ ಕಲ್ಪನೆ ಈ ಕವಿಯದು. ಇಂತಹ ಭೂಮಿಯ ಮೈಸಿರಿಯನ್ನು ಬೇಂದ್ರೆ ಅವರು ಶ್ರಾವಣ ಕವನದಲ್ಲಿ ಬಣ್ಣಿಸುತ್ತಾರೆ.

"ಹಸಿರುಟ್ಟ ಬಸುರಿಯ ಹಾಂಗ ಅ
ನೆಲಾ ಹೊಲಾ ಹ್ಯಾಂಗ ಅ
ಅರಿಸಿಣ ಒಡೆಧಾಂಗ ಅ
ಹೊಮ್ಮುತಾವ ಬಂಗಾರ ಚಿಮ್ಮುತಾವ
ವ.....

ನಾಡೆಲ್ಲ ಏರಿಯ ವಾರಿ
ಹರಿತಾವ ಝರಿ ಅ
ಹಾಲಿನ ತೊರಿ ಅ
ಈಗ ಯಾಕ ನೆಲಕೆಲ್ಲ ಕುಡಿಸಲಾಕ
ಶ್ರಾವಣ ಬಂತು"25 (ಶ್ರಾವಣ)

ಭೂಮಿ ಮತ್ತು ನಾಡಿನ ಸಂಭ್ರಮ ಕಾಲ ಶ್ರಾವಣ ಮಾಸ. ಇದು ತಾಯಿ ಮಕ್ಕಳು ಹಸಿರುಗೊಳ್ಳುವ ಉಸಿರಿನ ಸಂಕೇತ. ಈ ತಾಯಿಯ ಋತುಮಾನಗಳ ಚಲನೆಯಿಂದ ಧರಿಸಿದ ಇನ್ನೊಂದು ರೂಪವನ್ನು ಕವಿ ಶ್ರಾವಣ ವೈಭವದಲ್ಲಿ ತರುತ್ತಾರೆ.

"ಹೂವ ಹಡಲಿಗೆಯನು ಹೊತ್ತ
ಭೂಮಿ ತಾಯಿ ಜೋಗಿತಿ
ಮೈ ತುಂಬಿ ಕುಣಿಯಿತಿಹಳ
ನಂತ ಕಾಲವೀಗತಿ
ಎಷ್ಟು ಹೋಲಿಕೆಯನು ಕೊಟ್ಟು
ಹೊಗಳಿಮನವು ತಣಿಯದು ಅ
ರೂಪಗಳಿಗೆ ಚಿತ್ರಗಳಿಗೆ
ಉಪಮೆಗಳಿಗೆ ಗಣಿಯಿದು"26 (ಶ್ರಾವಣ ವೈಭವ)

ಈ ಸಮೃದ್ಧ ಸಿರಿಯನ್ನು ಭೂಮಿ ತಾಯಿ ತನ್ನ ಯೋಗ, ತಪಸ್ಸಿನಿಂದ ಪಡೆದಿದ್ದಾಳೆಂದು ಕವಿ ಪಜೋಗಿತಿಪ ಎನ್ನುವುದು ಔಚಿತ್ಯವಾಗಿದೆ. ಇಂತಹ ಅನನ್ಯ ಸಾಧನೆ, ಸಿದ್ಧಿಯ ರೂಪ ಧಾರಣೆಯನ್ನು ಕುವೆಂಪು ನಾನಾ ಹೆಸರುಗಳಿಂದ ಗುರುತಿಸಿ 'ಕಲಾ ಸುಂದರಿ' ಎಂದು ಕರೆಯುತ್ತಾರೆ. ಆಕೆಯ ಕುಶಲ ಕಲೆಯ ಐಸಿರಿಗೆ ಮಾರುಹೋದ ಕವಿಯ ಮನಸ್ಸು;

"ಅಮಿತ ವೇಷಧಾರಿಣಿ ಅ
ಕಲೆಗೆ ತವರು, ಸಿರಿಗೆ ಬಿತ್ತು
ಸೊಬಗಿಗೆ ನೆಲೆ ನಿನ್ನ ಮುತ್ತು
ಸೊನ್ನೆಯಿಂದೆ ಜಗವ ತಂದೆ
ಓ ಋತ ಅಧಿಕಾರಿಣಿ"27 (ಕಲಾಸುಂದರಿ)

ಎಂದು ಘೋಷಿಸುತ್ತದೆ. ಈ ಕಾವ್ಯ ಜೀವ ವೈವಿಧ್ಯಗಳ ಸೃಷ್ಟಿ ವಿಕಾಸಕ್ಕೆ ಋತು, ಋತುಮಾನಗಳಿಗೆಲ್ಲ ಭೂಮಿ, ಸೂರ್ಯರು, ಮೂಲವೆಂಬ ವೈಜ್ಞಾನಿಕ ಸತ್ಯವನ್ನು ಸಾರುತ್ತಿದೆ.

ಇಂತಹ ಕನ್ನಡ ನವೋದಯ ಕಾವ್ಯಕ್ಕೆ ಪ್ರೇರಣೆ ಇಂಗ್ಲೀಷ್ ರೊಮ್ಯಾಂಟಿಕ್ ಸಾಹಿತ್ಯ. ಇದು ವೈಚಾರಿಕ ವಿರೋಧಿ ನಿಲುವಿನಿಂದ ಬಂದು, ಧರ್ಮ ಮತ್ತು ವೈಚಾರಿಕತೆಗಳ ಹೆಣಿಗೆಯಿಂದ ಪ್ರಕೃತಿ ದರ್ಶನವನ್ನು ಪ್ರತಿಪಾದಿಸುತ್ತದೆ. ಆದರೆ ಕನ್ನಡ ನವೋದಯ ಕಾವ್ಯ ಧರ್ಮ, ವೈಚಾರಿಕತೆ ವಿಜ್ಞಾನಗಳ ಘರ್ಷಣೆಯಲ್ಲಿ ಅವುಗಳ ಸಾಮರಸ್ಯವನ್ನು ಸೂಚಿಸುತ್ತದೆ. ಇನ್ನೊಂದು ಕಡೆ ಧರ್ಮದ ನೆಲೆಯನ್ನು ನಾಶ ಮಾಡಿ ವಿಕಾಸ ಕ್ರಿಯೆಯನ್ನು, ವಿಜ್ಞಾನ, ಆಧುನಿಕತೆ, ನಾಗರೀಕತೆಗಳ ಪ್ರಸ್ತುತತೆಯನ್ನು ಎತ್ತಿ ಹಿಡಿಯುತ್ತದೆ. ಈ ಮಾತಿಗೆ ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯ ಕೊನೆಯ ಪದ್ಯ ಸ್ಪಷ್ಟತೆ ನೀಡುತ್ತದೆ.

"ಉದಯಿಸುತಿದೆ ನೂತನ ಯುಗ ದೇವತೆ
ಮಿಥ್ಯೆಯ ಮೌಢ್ಯತೆಯನು ಸೀಳಿ;
ಜ್ಞಾನದ ವಿಜ್ಞಾನದ ಮತಿ ಖಡ್ಗದಿ
ಮೈದೋರುವಳೈ ನವಕಾಳಿ!
ಕೆಚ್ಚಿನ ನೆಚ್ಚಿನ ತನುಮನ ಪಟುತೆಯ
ಸಂಪಾದಿಸಿ ಓ ಮೇಲೇಳಿ;
ಕಣ್ದೆರೆಯಿರಿ ನವಕಾಂತಿಗೆ ಶಾಂತಿಗೆ,
ಓ ಕ್ರಾಂತಿಯ ಪುತ್ರರೆ ಬಾಳಿ!"28 (ಕಾನೂರು ಹೆಗ್ಗಡತಿ)

ನವೋದಯ ಕಾವ್ಯ ಇಂತಹ ವೈಚಾರಿಕ, ವೈಜ್ಞಾನಿಕ ಕ್ರಾಂತಿಗೆ ಪ್ರೇರಣೆ ನೀಡಿದ್ದರಿಂದಲೇ ಕರ್ನಾಟಕದಲ್ಲಿ ಧರ್ಮದ ನೆಲೆಗಳು ಸೀಮಿತಗೊಂಡು ಕ್ರಮೇಣವಾಗಿ ವಿಜ್ಞಾನವೇ ಪ್ರಬಲ ಧರ್ಮವಾಗಿ ಬೇರೂರುತ್ತಿರುವುದು ಹಲವಾರು ಅಧ್ಯಯನಗಳಿಂದ ತಿಳಿಯುತ್ತದೆ.

4. ಪ್ರಕೃತಿಯ ಜೀವಿಗಳ ಮೇಲೆ ಮಾನವನ ಕ್ರೌರ್ಯ ಸಂಸ್ಕೃತಿ:

ಮನುಷ್ಯ ಮನುಷ್ಯರ ನಡುವೆ ನಡೆಯುವ ದ್ವೇಷ, ಸೇಡುಗಳ ಪರಿಣಾಮದ ಪ್ರಯೋಗವನ್ನು ಮನುಷ್ಯ ಗಿಡ ಮರ, ಪ್ರಾಣಿ, ಪಕ್ಷಿಗಳ ಮೇಲೆ ನಡೆಸುವುದು ಹಾಸ್ಯಾಸ್ಪದವಾದದ್ದು. ಇದನ್ನೇ ಪ್ರಕೃತಿಯ ಮರಗಳ ಮೇಲಿನ ಅತ್ಯಾಚಾರವೆನ್ನುವುದು. ಇಂತಹ ಒಂದು ಸಂದರ್ಭ ಕಾನೂರು ಹೆಗ್ಗಡತಿ ಕೃತಿಯಲ್ಲಿ ಘಟಿಸುತ್ತದೆ. ಅಲ್ಲಿ ಸಿಂಗಪ್ಪ ಗೌಡರು ಚಂದ್ರಯ್ಯಗೌಡರ ಮೇಲಿನ ಅಸೂಯೆ, ಸೇಡಿನಿಂದ, ಅವರ ಹಕ್ಕಿನಲ್ಲೆ ಇದ್ದ ಮರಗಳ ಮೇಲೆ ತಮ್ಮ ಮಗ ಕೃಷ್ಣಪ್ಪ ಕಲಿಸ್ತರ ಜಾಕಿ, ಹತ್ತಿಪ್ಪತ್ತು ಆಳುಗಳನ್ನು ಬಿಟ್ಟು ನಾಟ ಕಡಿಸುತ್ತಾರೆ. ಇದು 'ಅತ್ತೆ ಮ್ಯಾಗಳ ಸಿಟ್ಟು ಕೊತ್ತಿ ಮ್ಯಾಲೆ' ಎನ್ನುವಂತೆ ಸಿಂಗಪ್ಪಗೌಡರ ಕಾರ್ಯ. ಇಂತಹ ನಾಟ ಕಡಿಯುವ ದೃಶ್ಯಗಳು, ಪ್ರಸಂಗಗಳು ಸಾಹಿತ್ಯ ಕೃತಿಗಳಲ್ಲಿ ಅಲ್ಲಲ್ಲಿ ದೊರೆಯುತ್ತವೆ. ಕೆಲವು ಲೇಖನಗಳನ್ನು ಬಿಟ್ಟರೆ, ಕುವೆಂಪು ತೇಜಸ್ವಿಯವರ ಕತೆ, ಕಾದಂಬರಿಗಳಲ್ಲಿ ಇಂತಹ ಪ್ರಸಂಗಗಳು ದಟ್ಟವಾಗಿವೆ. ಮಾನವನ ಈ ಪ್ರವೃತ್ತಿಗಳಿಂದ ಬಯಲಾದ ಕಾಡಿನ ಒಂಟಿ ಮೋಟು ಮರದ ವೇದನೆಯನ್ನು ಗ್ರಹಿಸಿದ ಕವಿಯ ಮಾತು.

"ತುಂಬು ವಸಂತದ ಒಂಟಿ ಮರ ದೊಡ್ಡ ಕಣ್ಣೀರಿನ ಹನಿಯನ್ನು
ಉದುರಿಸಿತುದ ಆ ಮರ ಸೋತ ನನ್ನ ದೇಹದ ಮೇಲೆ ಒಮ್ಮೆ ನೆರಳು ಹಿಡಿಯಿತು
ಎಂದಾದರೊಮ್ಮೆ ಮರದ ಅಂಗಗಳ ಮೇಲೆ ಹೂಗಳು ಅರಳುವುವು
ಮರದ ಮೈಯನ್ನು ಕಡಿಯುವ ಕಟುಕನ ಕೈ ಕತ್ತರಿಸಬೇಕು ನನ್ನ ದೇಶ"29

ಮಾನವನಂತೆ ಅಡವಿಯ ಸಂಘ ಪರಿಸರದಲ್ಲಿ ಬೆಳೆಯುವ ಗಿಡ ಮರಗಳ ಒಂಟಿತನದ ನೋವಿನ, ದುಃಖದ ಕಲ್ಪನೆ ಹೃದಯ ಸ್ಪರ್ಶಿಯಾಗಿದೆ. ಮರ ಕಣ್ಣೀರಿಡುತ್ತಿದ್ದರೂ ಸೋತ ಕವಿಯ ದೇಹಕ್ಕೆ ನೆರಳಾಗಿದೆ, ಇದೇ ಪ್ರಕೃತಿಯ ಗುಣ. ಇಂತಹ ಮರ ಕಣ್ಣೀರಿಡುತ್ತಿರುವುದರ ಹಿನ್ನೆಲೆ ತಿಳಿಯದೆ, ಅದರ ನೋವಿನೊಡನೆ ಸ್ಪಂದಿಸದಿದ್ದರೆ ಮಾನವನ ದುರಂತ ದೂರವಿಲ್ಲ. ಈ ತಿಳುವಳಿಕೆಯಿಂದಲೇ ಕವಿ 'ಮರ ಕಡಿಯುವವನ ಕೈ ಕತ್ತರಿಸಬೇಕು ನನ್ನ ದೇಶ' ಎನ್ನುವುದು. ಇದು ಜೀವಿಗಳ ದುರಂತದ ಹಿಂದಿನ ಪ್ರಜ್ಞಾವಂತರ ಆತಂಕ, ರೋಷದ ಧ್ವನಿ. ಗಿಡಮರ, ಪ್ರಾಣಿ ಪಕ್ಷಿಗಳನ್ನು ಹಿಂಸೆ, ನಾಶಗೊಳಿಸುತ್ತಿರುವ ಮನುಷ್ಯ ಜಗತ್ತಿನ ವಿನಾಶಕ್ಕೆ ದಾರಿ ಮಾಡಿದ್ದಾನೆ. ಇವನು ಸೃಷ್ಟಿಸಿರುವ ಸಮಸ್ಯೆ ತುಂಬ ಸಂಕೀರ್ಣವಾದದ್ದು. ಇದರ ವಿರುದ್ಧ ಕವಿ 'ಕಟುಕನ ಕೈ ಕತ್ತರಿಸಬೇಕು' 'ನನ್ನ ದೇಶ' ಎನ್ನುವ ಆವೇಶ ಭರಿತ ಮಾತು ಕ್ಷಣ ಮಾತ್ರದ್ದು. ಇದು ಜನರಲ್ಲಿ ಪ್ರಚೋದನೆಯುಂಟು ಮಾಡಬಲ್ಲದೇ ಹೊರತು ಸಾರ್ವಕಾಲಿಕ, ಸರ್ವರ ಸಮಸ್ಯೆಗೆ ಪರಿಹಾರದ ಧ್ವನಿಯಾಗಲಾರದು. ಆದರೆ ಅದು ಸರ್ವರ ಅಂತಃಕರಣವನ್ನು ಕಲಕಿ ಅವರವರ ಮನ ಪರಿವರ್ತನೆಯಾಗಿ, ತಿಳುವಳಿಕೆಯಿಂದ ಜೀವನ ಪ್ರವೃತ್ತಿ, ನಡವಳಿಕೆಗಳನ್ನು ತಿದ್ದಿಕೊಂಡು ಬಾಳುವುದು ದೀರ್ಘ ಪರಿಹಾರವಾಗಬಲ್ಲದು.

ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನಲ್ಲೂ ಕಠಿಣ ಮತ್ತು ಮೃದುತ್ವದ ಗುಣಗಳು ಸುಪ್ತವಾಗಿರುತ್ತವೆ. ಇವುಗಳಲ್ಲಿ ಯಾವುದು ಬಾಹ್ಯವಾಗಿ ಪ್ರಬಲವಾಗಿರುತ್ತದೊ ಆ ಗುಣದಿಂದ ಆ ವ್ಯಕ್ತಿಯನ್ನು ಅಳೆದು ಗುರುತಿಸುವುದೊಂದು ಸಾಮಾನ್ಯ. ಇನ್ನೊಂದು ಸುಪ್ತವಾಗಿಸುತ್ತದೆ. ಇದು ವ್ಯಕ್ತಿಯಲ್ಲಿ ತಡವಾಗಿ ಗುರುತಿಸಲ್ಪಟ್ಟರೂ ಶ್ರೇಷ್ಠವಾದುದ್ದಾಗಿರುತ್ತದೆ. ಇಂತಹ ಹಲವಾರು ಅಂಶಗಳನ್ನು ಮುಂದಿನ 'ಒಂದು ವೃಕ್ಷ' ಕಥೆಯ ಚರ್ಚೆಯಿಂದ ಗ್ರಹಿಸಬಹುದು. ಮೇಲಿನ ಮಾತಿಗೆ ಕಥೆಯಲ್ಲಿ ಪೂರ್ವದ ಆ ಮನೆಯ ಹಸಿರು ಕಿಟಕಿಯಲ್ಲಿ ಕುಳಿತ ಹುಡುಗಿಯ ಪಾತ್ರ ನಿದರ್ಶನವಾಗಿದೆ.ಹೆಣ್ಣು ಮೂಲತಃ ಸೌಮ್ಯ, ಮೃದು ಸ್ವಭಾವಿ, ಸೃಷ್ಟಿಶೀಲೆ, ಸುಂದರಿ, ಮುಂತಾದ ವಿಶೇಷಣಗಳಿಂದ ಗುರುತಿಸಲ್ಪಡುತ್ತಾಳೆ. ಇದಕ್ಕೆ ಪೂರಕವಾಗಿ ಲೇಖಕರು ಹಸಿರು ಕಿಟಕಿ, ಹೂ ಮುಡಿದ ಚಿಕ್ಕ ಜಡೆ,

ಕಪ್ಪಾದ ಕಣ್ಣುಗಳು, ಇಳಿಬಿಟ್ಟ ಪ್ರಾಕ್ ಮುಂತಾದ ಸೂಚನೆ ಸಂಕೇತಗಳಿಂದ ಹುಡುಗಿಯ ಬಾಹ್ಯ ಪ್ರಕೃತಿಯಿಂದ ಗುರುತಿಸಿ ಪರಿಚಯಿಸುತ್ತಾರೆ. ಇವಳ ಒಳ್ಳೆಯ ಮತ್ತು ಕೆಟ್ಟ ಗುಣ ಸ್ವಭಾವಗಳನ್ನು ಪ್ರತಿಮೆ, ಸಂಕೇತಗಳ ಮೂಲಕವೇ ಪರಿಚಯಿಸುತ್ತಾರೆ. ಇವಳು ಸ್ವಾಭಾವಿಕ ಸುಂದರಿಯಾಗದೆ, ಸಾಂಕೇತಿಕವಾದ ಬಾಹ್ಯ

ಸುಂದರಿ. ಹಾಗಾಗಿಯೇ ಇವರ ಮನಸ್ಸು ಹೃದಯಗಳು ದುಷ್ಟ ಮತ್ತು ಕಠಿಣವಾದವು ಎಂಬುದಕ್ಕೆ ಇವಳ ಬಗ್ಗೆ ಮರದ ಗ್ರಹಿಕೆಯ ಜೊತೆಗೆ ನಿರೂಪಕರ ಮತ್ತು ಹುಡುಗಿಯ ಮಾತುಗಳು ಆಧಾರವಾಗಿವೆ.

"…….ಆತಂಕದ ಜೊತೆಗೆ ವಿಫುಲ ತಿರಸ್ಕಾರ ಆಕೆಯತ್ತ ಹರಿದು ಬರುತ್ತಿತ್ತು. ಬಹುಶಃ ಆಕೆ ಕಿಟಕಿ ಬಳಿ ಕುಳಿತೇ ಸಮಾಚಾರ ಹರಡಿದ್ದಾಳೆ. ಇದು ದುಷ್ಟ ಮರ, ದುರಾಚಾರಿ, ಇದನ್ನು ಮೊದಲು ತೊಲಗಿಸಿ ಬಿಡಬೇಕು.ಇದನ್ನು ಕತ್ತರಿಸಿ ಹಾಕಬೇಕು, ಸುಟ್ಟು ಬಿಡಬೇಕು, ಬುಡ ಸಮೇತ ಕಿತ್ತು ಬಿಸುಡಬೇಕು. ಬಿಳಿಯ ಹೂವನ್ನು ಸುತ್ತಿದ್ದ ಜಡೆಯನ್ನು ಅಲ್ಲಾಡಿಸುತ್ತಾ ಕಿಟಿಕಿಯ ಬಳಿ ಕುಳಿತಿದ್ದ ಆ ಹುಡುಗಿ ನುಡಿದಳು "ಯಾರಿಗ್ಗೊತ್ತು, ಈ ಮರದಿಂದ ಯಾರ್ಯಾರಿಗೆ ಏನೇನು ವಿಪತ್ತು ಬರುತ್ತೋ "30

ಈ ಹುಡುಗಿ ತನ್ನಲ್ಲಿರುವ ದುಷ್ಟ, ಕ್ರೂರ ಗುಣ ಸ್ವಭಾವವನ್ನು ಅವಳು ಆ ಮರದಲ್ಲಿಯೂ ಋಣಾತ್ಮಕವಾಗಿಯೇ ಕಂಡು ಆರೋಪಿಸುವುದರಲ್ಲಿ ವ್ಯಂಗ್ಯವಿದೆ. ಇದರಿಂದ ಅವಳ ಮನಸ್ಸಿನ ಸೂಕ್ಷ್ಮತೆಯನ್ನು ಮರ ಮತ್ತು ನಿರೂಪಕರು ಗ್ರಹಿಸಿ ಅರ್ಥೈಸಿಕೊಂಡದ್ದು ನಿಜವಾಗಿದೆ. ಇವರ ಗ್ರಹಿಕೆಗೆ ತಕ್ಕಂತೆ ಹುಡುಗಿಯ ಪಾತ್ರ ಸ್ವಭಾವ ಬೆಳೆಯುತ್ತದೆ. "ಪೂರ್ವ ದಿಕ್ಕಿನ ಕಿಟಕಿಯಲ್ಲಿ ಕುಳಿತುಕೊಳ್ಳುವ ಆಕೆ ಸುಮ್ಮನಿರಲಿಲ್ಲ. ಆಕೆ ಹಲ್ಲು ಕಚ್ಚಿ ಯಾರಾದರೂ ಸಹಾಯ ಮಾಡಲಿ ಬಿಡಲಿ ತಾನಂತೂ ಕೊಡಲಿ ತೆಗೆದುಕೊಂಡು ಅದನ್ನು ಕಡಿದು ಹಾಕುತ್ತೇನೆಂದು ಪ್ರತಿಜ್ಞೆ ಮಾಡಿದಳು. ಇದನ್ನು ಕೇಳಿದ ವೃಕ್ಷಕ್ಕೆ ನೋವಾಯಿತು. ಅದು ಮನಸ್ಸಿನಲ್ಲೇ ನಕ್ಕಿತು. ಅದರ ಮನಸ್ಸು ಆ ಪೂರ್ವದ ಕಿಟಕಿಯ ಹುಡುಗಿಯನ್ನು ಕರೆದು ಮಾತನಾಡಲು ಸೂಚಿಸಿತು. 'ನಿನ್ನ ಜಡೆಯಲ್ಲಿ ಹೂ ಮಾಲೆ ಶೋಭಿಸುತ್ತದೆ, ಕಣ್ಣಿನಲ್ಲಿ ಕಪ್ಪು ಹಣೆಯಲ್ಲಿ ಕುಂಕುಮ ಬೊಟ್ಟು ಸಹ ಸುಂದರವಾಗಿ ಕಾಣಿಸುತ್ತದೆ. ನಿನ್ನ ಕೈಯ ಬೆರಳುಗಳು ಚಂಪಾ ಪುಷ್ಪದಂತೆ ಸುಂದರವಾಗಿವೆ. ಇಷ್ಟು ಸುಂದರ ಮೃದುವಾದ ಬೆರಳುಗಳಲ್ಲಿ ಕೊಡಲಿ ಹಿಡಿಯಲು ಸಾಧ್ಯವೇ?"31

ಇಲ್ಲಿ ನಿರೂಪಕರು ಶುಭ ಸೂಚಕಗಳನ್ನು ಕಟ್ಟುತ್ತಲೇ ದುರಂತದ ಸೂಚನೆಯ ಮುನ್ನುಡಿಯಿಡುತ್ತಾರೆ. ಸೌಂದರ್ಯದಲ್ಲಿ ಮೃದುತ್ವವಿರುತ್ತದೆ. ಅವರಲ್ಲಿ ಕ್ರೌರ್ಯವಿರುವುದಿಲ್ಲ ಎಂಬುದು ಭಾರತೀಯ ಸಂಸ್ಕೃತಿ, ಮನಸ್ಸಿನ ನಂಬಿಕೆ. ಈ ನಂಬಿಕೆಯನ್ನು ಸುಳ್ಳು ಮಾಡುವಂತೆ ಈ ಹುಡುಗಿಯ ಪಾತ್ರ ಬೆಳೆದಿದೆ. ಇದೇ ಈ ಕಾಲದ ಪ್ರಕೃತಿಗೆ ಬಂದೊದಗಿರುವ ದುರಂತ. ಜೊತೆಗೆ ಯಾವುದೇ ಜೀವಿಗಳ, ವ್ಯಕ್ತಿ, ವಸ್ತು, ಕ್ರಿಯೆಗಳು ಕೇವಲ ಋಣಾತ್ಮಕ ಗ್ರಹಿಕೆಯ ಚಿಂತನೆಗಳೇ ಹೊರತು, ಅವುಗಳು ಧನಾತ್ಮಕ ಕ್ರಿಯೆಯ ಚಿಂತನಾಶೀಲ ಗುಣಗಳಲ್ಲ. ಆದ್ದರಿಂದ ಹೆಚ್ಚು ದುಷ್ಪರಿಣಾಮಗಳಾಗುತ್ತಿವೆ. ಅವೇ ಆ ಹುಡುಗಿ ಮತ್ತು ಮರಗಳ ನಡುವಿನ ಚಿಂತನೆ ಮತ್ತು ಪರಿಣಾಮಗಳ ಕ್ರಿಯಾರೂಪಿ ಕಥೆ ಯಾಗಿ ಹೆಣೆಯಲ್ಪಟ್ಟಿರುವುದು. ಈ ಹುಡುಗಿಗೆ ವಿರುದ್ಧವಾದ ಗುಣ ಸ್ವಭಾವದ ಹುಡುಗನ ಪಾತ್ರ ಹೆಣೆಯಲ್ಪಟ್ಟಿದೆ. ಇವನು ಪಶ್ಚಿಮದ ಮನೆಯ ಕೆಂಪು ಕಿಟಕಿಯ ಬಳಿ ಕುಳಿತು ತನ್ನನ್ನೇ ನೋಡುತ್ತಿರುವುದನ್ನು ಕಂಡ ಈ ಮರ ಕಂಪಿಸುತ್ತದೆ. ಹಾಗೆಯೇ ಸಂತೋಷಪಡುತ್ತದೆ. ಅದನ್ನು ನಿರೂಪಕರು ಹೀಗೆ ಹಿಡಿದಿಡುತ್ತಾರೆ.

"ಆತನ ಕಣ್ಣುಗಳು ಬಹಳ ಚಂದವಾಗಿದ್ದವು. ಆತನ ಕಣ್ಣುಗಳಲ್ಲಿ ಭಯ, ಆತಂಕ, ತಿರಸ್ಕಾರ, ವಿದ್ವೇಷ ಒಂದೂ ಕಾಣಿಸುತ್ತಿರಲಿಲ್ಲ. ಸ್ನೇಹ, ಮಮತೆ, ಪ್ರೇಮ ಹಾಗೂ ಸಹಾನುಭೂತಿಗಳು ಇದ್ದವು. ಇದನ್ನು ಕಂಡು ವೃಕ್ಷ ಸ್ಥಂಬಿತಗೊಂಡಿತು. ಏತಕ್ಕೆಂದರೆ ಕೊಂಚ ದಿನಗಳ ಹಿಂದೆ ಆ ಕಣ್ಣುಗಳು ಅಶಾಂತವಾಗಿದ್ದವು. ಅವುಗಳಲ್ಲಿ ಚಂಚಲತೆ ಇತ್ತು. ಸಿಕ್ಕದ್ದು ಧರಿಸಿ ಯಾವ ಹೊತ್ತಿನಲ್ಲಿ ಅಂದರೆ ಆ ಹೊತ್ತಿನಲ್ಲಿ ಆ ಮರದ ಬಳಿಗೆ ಬಂದು ಬಿಡುತ್ತಿದ್ದ. ಕೊಂಬೆಗೆ ಕಲ್ಲು ಎಸೆಯುತ್ತಿದ್ದ. ಎಲೆಗಳ ಮರೆಯಲ್ಲಿರುತ್ತಿದ್ದ ಹಕ್ಕಿಗೂಡುಗಳನ್ನು ಹುಡುಕಿ ಒಡೆದು ಹಾಕುತ್ತಿದ್ದ. ಕೊಂಬೆಗೆ ಉಯ್ಯಾಲೆ ಕಟ್ಟಿ ಆಡುತ್ತಿದ್ದ ಆ ಹುಡುಗ ಈಗ ಸಭ್ಯನಾಗಿ, ಗಂಭೀರನಾಗಿದ್ದಾನೆ. ಸುಂದರನೂ ಆಗಿದ್ದಾನೆ. ಮಲ್ ಮಲ್ ಪಂಚೆ ಕೊನೆಯನ್ನು ಸುತ್ತಿ ಹಿಡಿದು ಎರಡು ಕೈಗಳನ್ನು ಗಲ್ಲದ ಮೇಲಿರಿಸಿಕೊಂಡು ಕಿಟಕಿಯ ಸನಿಹದಲ್ಲಿರಿಸಿರುವ ಟೇಬಲ್ ಬಳಿ ಕುಳಿತು ಕೊಂಡು ಮರವನ್ನೇ ತೀಕ್ಷ್ಣ ದೃಷ್ಟಿಯಿಂದ ನೋಡುತ್ತಿರುತ್ತಾನೆ. ಹೀಗೆ ಯೋಚಿಸುತ್ತಾ ಟೇಬಲ್ ಮೇಲಿರುವ ಹೂದಾನಿಯಿಂದ ಒಂದು ಗುಲಾಬಿಯನ್ನು ಕೈಲಿ ಹಿಡಿದು ಸುಗಂಧವನ್ನು ಆಘ್ರಾಣಿಸುತ್ತಾನೆ. ಮನದ ಭಾವನೆಗಳೊಡನೆ ಹೂವಿನ ಸುಗಂಧವನ್ನು ವಿಚಿತ್ರ ರೀತಿಯಲ್ಲಿ ಮೇಳೈಸುತ್ತಾನೆ"32.

ವೃಕ್ಷ ಹುಡುಗ ಹುಡುಗಿಯರ ಹಾವ ಭಾವಗಳನ್ನು ನೋಡಿಯೇ ಅವರನ್ನು ಅರ್ಥಮಾಡಿಕೊಳ್ಳುತ್ತಿದೆ. ಲೇಖಕರ ಈ ನಿರೂಪಣೆಯಲ್ಲಿ ಹುಡುಗನು ಬಾಲ್ಯದಲ್ಲಿ ಕೊಡುತ್ತಿದ್ದ ಹಿಂಸೆಗಿಂತ ಹುಡುಗಿಯ ಯೌವನವಸ್ಥೆಯ ಕಾಲದ ಮನ ಪ್ರವೃತ್ತಿಯ ಹಿಂಸೆ ಮರಕ್ಕೆ ಕಠಿಣವಾಗಿದೆ. ಹುಡುಗಿಯ ಕಣ್ಣಿನ ಕಪ್ಪು, ಹಣೆಯ ಕುಂಕುಮ ಬೊಟ್ಟು, ಜಡೆಗೆ ಹೂವು, ಪ್ರಾಕ್‌ನ ನರಿಗೆ, ಕೈಬೆರಳುಗಳ ಬಾಹ್ಯ ಕೃತಕ ಸೌಂದರ್ಯಕ್ಕೆ ಮರ ಆತಂಕ, ಭಯಪಟ್ಟರೆ, ಹುಡುಗನ ಸ್ನೇಹ, ಮಮತೆ, ಪ್ರೇಮ, ಸಹಾನುಭೂತಿಗಳುಳ್ಳ ಹೃದಯಾಂತರ್ಯದ ಸೌಂದರ್ಯದಿಂದ ಆ

ಹುಡುಗನ ಕಣ್ಣುಗಳು ಸೌಂದರ್ಯವಾಗಿ ಕಂಡ ಮರಕ್ಕೆ ಶಾಂತಿ, ನೆಮ್ಮದಿಗಳಿಂದ ಸಂತೋಷವಾಗುತ್ತದೆ. ಹುಡುಗ ಮಲ್ ಮಲ್ ಪಂಚೆಯ ಕೊನೆ ಹಿಡಿದು ಕೈಗಲ್ಲದ ಮೇಲಿರಿಸಿಕೊಂಡು ಕೂರುವುದು, ಟೇಬಲ್ ಮೇಲಿನ ಹೂದಾನಿಯ ಗುಲಾಬಿ ಸುಗಂಧವನ್ನು ಆಘ್ರಾಣಿಸುವುದು, ಇವೆಲ್ಲ ಅವನ ಮನಸ್ಸಿನ ಸಂಕೀರ್ಣ ಸ್ಥಿತಿಯ ಸಂಕೇತಗಳಾಗಿ ಇವು ನಾನಾರ್ಥ ಸ್ಫುರಿಸುತ್ತವೆ.ಈ ಎರಡು ವೈರುಧ್ಯ ಮನಸ್ಸು ಗುರಿಗಳಿಂದ ವೃಕ್ಷದಡಿ ಹುಡುಗಿಯ ಕೊಡಲಿಯಿಂದ, ಹುಡುಗ ಲಾಠಿಯಿಂದ ಬಂದು ಸಂಧಿಸಿ ಮುಖಾಮುಖಿ ಸಂವಾದಕ್ಕಿಳಿಯುತ್ತಾರೆ. ಇದರಿಂದ ಸುಪ್ತವಾಗಿದ್ದ ಹುಡುಗಿಯ ಮೃದುತ್ವ ಗುಣ ಪರಿವರ್ತನೆಯಿಂದ ಅನಾವರಣಗೊಳ್ಳುತ್ತದೆ. ಇದು ಕಾವ್ಯ ಧ್ವನಿಯಾಗಿ ಚಿತ್ರಿತಗೊಂಡಿದೆ. ಅದರ ತುಣುಕಿದು:

"ಸೀರೆ ಸುತ್ತಿದ್ದ ಹುಡುಗಿಯ ತುಟಿಗಳ ಮಧ್ಯೆ ಕಿರುನಗೆ ಅರಳಿತು. ಪಶ್ಚಿಮದ ಕಿಟಿಕಿಯ ಹುಡುಗನ ಮೂಳೆ ಮೃದುವಾದವು. ನಿಶ್ಯಬ್ದ. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತಾ ನಿಂತರು. ಅವರಿಬ್ಬರೂ ಎಷ್ಟು ಹತ್ತಿರ ನಿಂತಿದ್ದರೆಂದರೆ, ಆ ನಿಬಿಡ ಅಂಧಕಾರದಲ್ಲೂ ಒಬ್ಬರ ಮುಖ ಇನ್ನೊಬ್ಬರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಒಬ್ಬರ ಉಸಿರು ಇನ್ನೊಬ್ಬರಿಗೆ ಕೇಳಿಸುತ್ತಿತ್ತು.

"ಕೈಯಲ್ಲಿ ಕೊಡಲಿ ಏಕೆ?"

"ಮರವನ್ನು ಕಡಿದು ಹಾಕುತ್ತೇನೆ."

"ಏನು ಉಪಯೋಗ?"

"ಈ ಮರ ಒಂದು ಪಿಶಾಚಿ"

"ಈ ಮರ ಒಂದು ದೇವತೆ"

"ಪಿಶಾಚಿಯನ್ನು ದೇವರೆನ್ನುವವನು ನಿಜವಾಗಿ ಮೂರ್ಖ"

"ದೇವತೆಯನ್ನು ಯಾರು ಪಿಶಾಚಿಯ ದೃಷ್ಟಿಯಿಂದ ನೋಡುತ್ತಾರೋ, ಅವರು ಪಿಶಾಚಿಗಳು. ಅವರ ಮನಸ್ಸಿನಲ್ಲಿ ಪಾಪ ತುಂಬಿದೆ. ಅವರ ಮನಸ್ಸಿನಲ್ಲಿ ದ್ವೇಷವಿದೆ, ಅದಕ್ಕೆ ಅವರು ಬಿಳುಪನ್ನು ಕಪ್ಪೆಂದು ತಿಳಿಯುವುದು. ಎದುರಿಗೆ ಬೆಳಕಿದ್ದರೂ ಅವರ ಕಣ್ಣೆದುರಿಗೆ ಅಂಧಕಾರವೇ ಕಾಣಿಸುತ್ತದೆ."

"ಅಂದರೆ ಈ ಪ್ರಪಂಚದಲ್ಲಿ ಅಂಧಕಾರವೇ ಇಲ್ಲವೇ? ಕಪ್ಪು ಏನು ಅಲ್ಲವೇ?"

"ಅಲ್ಲ"

"ಇದು ಹೇಗೆ ಸಾಧ್ಯ?"

ಆಕೆಯ ಕೈಯಲಿದ್ದ ಕೊಡಲಿ ಬಿದ್ದು ಹೋಯಿತು. ಆಕೆ ಯೋಚಿಸತೊಡಗಿದಳು. ಮರಕ್ಕೆ ಸಂತೋಷವಾಯಿತು, ಮರ ನೋಡಿತು. ಒಬ್ಬಳು ಕೊಡಲಿ ಎಸೆದಿದ್ದೆ ತಡ ಇನ್ನೊಬ್ಬ ಲಾಠಿಯನ್ನು ಎಸೆದ.

"ಇದು ಹೇಗೆ ಸಾಧ್ಯ?"

ಯೋಚಿಸುತ್ತಾ ಯೋಚಿಸುತ್ತಾ ಪೂರ್ವದ ಆ ಹುಡುಗಿ ತಲೆಯನ್ನು ಎತ್ತಿ ಎಲೆಗಳ ಮರೆಯಲ್ಲಿ ಜಗಮಗಿಸುತ್ತಿದ್ದ ತಾರೆಗಳನ್ನು ನಿರುಕಿಸಿದಳು. ಅನಂತರ ತುಟಿಗಳ ಮಧ್ಯೆ ಈ ಮಾತುಗಳು ಉರುಳಿ ಬಂದವು. "ಎಲ್ಲವೂ ಸುಂದರ, ಯಾವುದೂ ಕಪ್ಪಿಲ್ಲ, ಎಲ್ಲೂ ಅಂಧಕಾರವಿಲ್ಲ, ಹೀಗಿರಲೂ ಸಾಧ್ಯವೇ?"

"ಅಂತರ್ಯದ ಪ್ರಕಾಶ ಜಾಗೃತಗೊಂಡಾಗ ಎಲ್ಲವೂ ಹೀಗೆ ಆಗುತ್ತದೆ."

"ಅದು ಎಂತಹ ಪ್ರಕಾಶ?"

"ಪ್ರೇಮ"

ಹುಡುಗಿಯ ಕಣ್ಣಿನ ರೆಪ್ಪೆಗಳು ಪಟ ಪಟ ಹೊಡೆದುಕೊಂಡವು. ಆಕೆ ನೀಳ ಉಸಿರನ್ನು ತೆಗೆದುಕೊಂಡಳು ಅವಳ ಕೊರಳು ಉಬ್ಬಿ ಬಂತು. ಸ್ವರ ಗದ್ಗದಿತವಾಯಿತು.

"ನನ್ನಲ್ಲಿ ಪ್ರೇಮ ಎಂದೂ ಹೋಗುವುದಿಲ್ಲವೇ?"

"ಈ ಅಭ್ಯಾಸವನ್ನು ಮಾಡಬೇಕು. ಅದನ್ನು ರೂಢಿಸಿಕೊಳ್ಳಬೇಕುಪಪ.

ಹುಡುಗ ಬಹಳ ಸುಂದರವಾಗಿ ಮುಗುಳ್ನಕ್ಕು ನುಡಿದ "ಪ್ರೇಮಿಸುವುದನ್ನು ಕಲಿಯಬೇಕು."

"ನೀನು ನನಗೆ ಕಲಿಸು"

ಮರ ಕಣ್ಣುಗಳನ್ನು ಮುಚ್ಚಿಕೊಂಡಿತು. ಅದಕ್ಕೆ ನಿದ್ದೆ ಬರುತ್ತಿತ್ತು. ಮರ ನಿದ್ದೆ ಹೋಯಿತು."33

ಹುಡುಗ ಹುಡುಗಿಯ ಈ ಸಂವಾದದಲ್ಲಿ ಕಠಿಣ ಮೃದುತ್ವಗಳು ಐಕ್ಯವಾಗಿ, ಮೃದುತ್ವದ ಕಾವು ಜಾಸ್ತಿಯಾಗಿ ಕಠಿಣತ್ವ ಕರಗಿ ಹುಡುಗಿಯ ಮನಸ್ಸಿನ ಹೂ ಅರಳಿದೆ. ಇದು ಆಂತರ್ಯದ ಪ್ರಕಾಶ ಇದೇ 'ಪ್ರೇಮ'. ಈ ಪ್ರೇಮವನ್ನೇ ಪರಿಸರ ತಿಳುವಳಿಕೆ, ಜ್ಞಾನವೆನ್ನುವುದು. ಇದೇ ಧನಾತ್ಮಕ ಚಿಂತನೆಯ ಗುಣ. ಇಲ್ಲಿ ಬಳಕೆಯಾಗಿರುವ 'ಕೊಡಲಿ' ಹಿಂಸೆ, ಕ್ರೌರ್ಯದ ಸಂಕೇತವಾದರೆ, 'ಲಾಠಿ' ಈ ಹಿಂಸೆ, ಕ್ರೌರ್ಯಕ್ಕೆ ಪ್ರತಿಯಾಗಿ ಅದರ

ದಮನ, ಶಿಕ್ಷೆಯ ಸಂಕೇತವಾಗಿ ಬಳಕೆಯಾಗಿದೆ. ಹುಡುಗ ಹುಡುಗಿಯರಿಬ್ಬರ ಭೇಟಿ, ನೋಟಗಳಿಂದ ಅವರ ದೈಹಿಕ, ಮಾನಸಿಕ ಬದಲಾವಣೆಗಳಾಗುತ್ತವೆ. ಈ ಬದಲಾವಣೆ ಎಷ್ಟು ನಿರ್ಮಲವಾದದ್ದೆಂದರೆ, ಅಂಧಕಾರದಲ್ಲೂ ಒಬ್ಬರ ಮುಖ ಇನ್ನೊಬ್ಬರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಒಬ್ಬರ ಉಸಿರು ಇನ್ನೊಬ್ಬರಿಗೆ ಕೇಳಿಸುತ್ತಿತ್ತು. ಇದರಿಂದ ಒಬ್ಬರಿಗೊಬ್ಬರು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಇದರ ಪ್ರತಿಫಲವಾಗಿ ಕೊಡಲಿ ಮತ್ತು ಲಾಠಿಗಳು ಸೋತು ನೆಲಕಚ್ಚಿವೆ.

ಯಾವುದೇ ಸಮಸ್ಯೆಗೆ ಹಿಂಸೆ, ಕ್ರೌರ್ಯದಂತ ಮಾನವ ಪ್ರವೃತ್ತಿಗಳು ಪರಿಹಾರವಾಗಲಾರವು. ಇದಕ್ಕೆ ಬದಲಾಗಿ ಒಬ್ಬರಿಗೊಬ್ಬರ ನಡುವೆ ಪ್ರೀತಿ ಸಹಬಾಳ್ವೆ ಮತ್ತು ತಿಳುವಳಿಕೆ, ಜ್ಞಾನದರಿವಿನ ಹೊಂದಾಣಿಕೆಯ ಆಂತರ್ಯದ ಬೆಳಣಿಗೆಗಳಿಂದ ಮಾತ್ರ ಸಾಧ್ಯ. ಇದು ಪರಿಸರದ ಸಮಸ್ಯೆಯೇನು, ಜಗತ್ತಿನ ಸರ್ವ ಸಮಸ್ಯೆಗಳಿಗೂ ಮುಲಭೂತವಾದ ಏಕೈಕ ಮಾರ್ಗದರ್ಶನದ ಬೆಳಕಾಗಿದೆ. ಈ ಕಥೆಯಲ್ಲಿ ಸ್ನೇಹ, ಪ್ರೀತಿ, ಮಮತೆಗಳ ಸಹಬಾಳ್ವೆಯೇ ಜೀವ ಧರ್ಮ. ಇದೇ ಜೀವನ ತತ್ವ ಎಂಬ ಚಿಂತನೆ ಅಡಕವಾಗಿದೆ. ಇದನ್ನೇ ಬೌದ್ಧ ಮೀಮಾಂಸೆ ಎನ್ನುವುದು. ಈ ಅಂಶಗಳು ಧರ್ಮಶಾಸ್ತ್ರ, ತತ್ವಶಾಸ್ತ್ರ ಮತ್ತು ಸಾಹಿತ್ಯ–ಕಲೆಗಳಲ್ಲಿ, ಕಲ್ಪನೆ, ಭಾವನೆ, ಚಿಂತನೆಗಳ ಮೂಲಕ ದರ್ಶನ ನೀಡುತ್ತವೆಯೇ ಹೊರತು, ವಿಜ್ಞಾನದ ಮಾಹಿತಿಗಳಲ್ಲಿ ಅದರ ಸಂಶೋಧನಾ ಬರಹಗಳಲ್ಲಿ ಕಾಣದೊರೆಯುವುದಿಲ್ಲ. ವಿಜ್ಞಾನದ ಕ್ಷೇತ್ರ ಕಲ್ಪನೆ ಮತ್ತು ಭಾವಹೀನವಾಗಿ ಸತ್ಯಾಧಾರ, ಮಾಹಿತಿಗಳ ಮೂಲಕ ಜ್ಞಾನ, ಚಿಂತನೆಗಳನ್ನು ಅರಳಿಸುತ್ತದೆ. ಈ ಅಂಶವನ್ನು ಇದುವರೆಗಿನ ಚರ್ಚೆಯಿಂದ ತಿಳಿಯಲಾಗಿದೆ.

ಈ ಸಸ್ಯ ಪರಿಸರದ ಪರಿಶೀಲನೆಯಲ್ಲಿ ಸಸ್ಯಗಳ ಹುಟ್ಟು ಬೆಳವಣಿಗೆಗೆ ವೈಜ್ಞಾನಿಕ ಬರವಣಿಗೆಗಳು ಕೊಡುವ ಮಾಹಿತಿಯಂತೆ ಸಾಹಿತ್ಯದಲ್ಲಿ ದೊರೆಯುವುದಿಲ್ಲ. ಹಾಗಾಗಿ ಎಲ್ಲ ಜೀವ ಪರಿಸರದ ಮೂಲ ಹುಟ್ಟಿಗೆ ವೈಜ್ಞಾನಿಕ ಮಾಹಿತಿ ಆಧಾರಗಳ ಮೇಲೆ ವಿಶ್ಲೇಷಿಸಿ, ಪ್ರಾಕೃತಿಕ ಪರಿಸರ ವಿಭಿನ್ನರೀತಿಯಲ್ಲಿ ವಿಕಾಸವಾದ ಬಗೆಯನ್ನು ಸಾಹಿತ್ಯ ಆಧಾರದ ಮೂಲಕ ಕಂಡು ಕೊಳ್ಳಲಾಗಿದೆ. ಇದರಲ್ಲಿ ಬೆಳೆದು ಬಂದಿರುವ ಈ ಜೀವ ಪರಿಸರದಲ್ಲಿ ವಿನಾಶದ ವಿಕಾಸ ಕ್ರಮವೆ ಪ್ರಧಾನವಾಗಿರುವುದನ್ನು ಮತ್ತು ಅವಸಾನವಾಗುತ್ತಿರುವ ಜೀವ ಪರಿಸರದ ಉಳಿವಿಗಾಗಿ ಪರ್ಯಾಯ ಜ್ಞಾನ ಮಾರ್ಗವನ್ನು ಇಂತಹ ಸಾಹಿತ್ಯ ಆಧಾರಗಳ ಮೂಲಕ ಕಂಡುಕೊಳ್ಳಲಾಗಿದೆ.

ಈ ಆಧುನಿಕತೆ, ವೈಜ್ಞಾನಿಕತೆ, ವೈಚಾರಿಕತೆಗಳ ಪ್ರಚೋದನೆಯಿಂದ ಸಮಾಜ, ಸರ್ಕಾರಗಳು ಪ್ರಗತಿಯ ಪಥದಲ್ಲಿ ಚಲಿಸತೊಡಗಿದವು. ಇವುಗಳ ಬೆಳವಣಿಗೆಯ ಪ್ರವೃತ್ತಿ ಕ್ರಮೇಣವಾಗಿ ಸಾಗುತ್ತ ಬಂದು, ಭೂಮಿಯ ಸರ್ವ ಜೀವ, ನಿರ್ಜೀವ ನಿಧಿಗಳನ್ನೆಲ್ಲ ಆಕ್ರಮಣ ಮಾಡಿ ಅದರ ಮೇಲೆ ಅತ್ಯಾಚಾರ, ಹಿಂಸೆ, ಕ್ರೌರ್ಯವನ್ನೆಸಗುವ ಸ್ವಾರ್ಥ ಪ್ರವೃತ್ತಿಯುಳ್ಳವರ ದಿನಚರಿಯವರೆಗೆ ತಲುಪಿದೆ. ಈ ಜನ, ಸರ್ಕಾರಗಳ ಚಟುವಟಿಕೆಗಳನ್ನು ಕವಿ ಅರವಿಂದ ಮಾಲಗತ್ತಿ ಅವರು ತಮ್ಮ ಭೂಮಿಗೆ ಹಾಕಿದ ಟೋಪಿ ಕವನದಲ್ಲಿ ಪ್ರಕಟಿಸುತ್ತಾರೆ.

“ಅಲ್ಲಿ ಗುಳು ಗುಳು, ಇಲ್ಲಿ ಗುಳು ಗುಳು
ಹಳ್ಳಿಯಿಂದ ದಿಲ್ಲಿಯವರೆಗೂ
ಜಣ್ ಜಣಾ ಜಣ್ ಜಣಾ
ಮನೆಗಳೆಲ್ಲ ಮೆಹತಾ
ಇಲ್ಲೆಲ್ಲೋ ಜಂತಿಗಳಿವೆ
ಹುಟ್ಟುವ ಮೊಳಕೆಗೂ ಸೂತಕ
ಚಿಗುರೊಡೆವ ಸಸಿಗೂ ರೋಗ
8 21 12 ಯಾವುದು ಸಿಂಪಡಿಸಿದರೂ
ಬದುಕಿಗೆ ಅರ್ಥವೇ ಸಿಗುತ್ತಿಲ್ಲ
ಜಂತುಗಳ ವಿಳಾಸವೂ ಇಲ್ಲ
ಹಸಿರು ಹಣ್ಣಾಗಿ, ಹಣ್ಣು ಹುಣ್ಣಾಗಿ
ಇತ್ತ ಕೀವೂ ಆಗದೆ, ಅತ್ತ ಕರಗಿಯೂ ಹೋಗದೆ
ಗಂಟುಗಟ್ಟುತ್ತಿವೆ”34 (ಭೂಮಿಗೆ ಹಾಕಿದ ಟೋಪಿ)

ಈ ಕಾವ್ಯದಲ್ಲಿ ಮಾನವರು ಸೃಷ್ಟಿ ಮಾಡಿಕೊಂಡ ವ್ಯವಸ್ಥೆಯೊಳಗೆ ಸಿಕ್ಕಿ ಕೊಂಡು ಚಡಪಡಿಸುತ್ತಿರುವ ರೈತ ಮತ್ತು ಭೂಮಿಯ ಸ್ಥಿತಿಗತಿಗಳು ಗೋಚರಿಸುತ್ತವೆ. ಮಾರುಕಟ್ಟೆಯಲ್ಲಿ ರೈತನಿಗಾಗುವ ನಿರಾಸೆ, ಅಸಹಾಯಕತೆಗಳಿಗೆ ಹಳ್ಳಿಯಿಂದ ದಿಲ್ಲಿಯವರೆಗೂ ಎಲ್ಲೆಂದರಲ್ಲಿ ಹೊಗೆಯಾಡುತ್ತಿರುವ ಸಮಾಜ, ಸರ್ಕಾರಗಳ, ರಾಜಕೀಯ, ಮೋಸ, ಕುತಂತ್ರಗಳ ದಲ್ಲಾಳಿ ವ್ಯವಸ್ಥೆಗಳ ರಹಸ್ಯ ವ್ಯವಹಾರಗಳ ಸಂಚೇ ಕಾರಣ. ಇದನ್ನೇ ಕವಿ

ಇಲ್ಲೆಲ್ಲೋ ಜಂತುಗಳಿವೆ, ಹುಟ್ಟುವ ಮೊಳಕೆಗೂ ಸೂತಕ, ಚಿಗುರೊಡೆವ ಸಸಿಗೂ ರೋಗ, 18 21 12 ಯಾವುದು ಸಿಂಪಡಿಸಿದರೂ ಬದುಕಿಗೆ ಅರ್ಥವೇ ಸಿಗುತ್ತಿಲ್ಲವೆಂದು ಕೃಷಿ ಭಾಷೆಯ ಶೈಲಿಯಲ್ಲೇ ಹೇಳುವುದು ಮಾರ್ಮಿಕವಾಗಿದೆ.

ಇಂತಹ ವ್ಯವಸ್ಥೆಯಿಂದ ರೈತ ಮರದ ನೆರಳಿಂದ ಕೊಡೆಯ ನೆರಳಿಗೆ ಹೋಗುತ್ತಿರುವುದು ವಿಶಾಲತೆಯಿಂದ ಸಂಕುಚಿತತೆಗೆ ಸಾಗುವ ಅವನ ತ್ರಿಶಂಕು ಸ್ಥಿತಿಯ ರೂಪಕ. ಈ ಕಾವ್ಯ ಸಾಮಾಜಿಕ ಪರಿಸರದ ಮಾಲಿನ್ಯತೆಯನ್ನೇ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಈ ಮಲಿನತೆಯ ಮೂಲವನ್ನು ಮೊದಲ ನಾಲ್ಕು ಸಾಲುಗಳೇ ನಿರೂಪಿಸುತ್ತವೆ. ಇದರಲ್ಲಿರುವ ಗುಳುಗುಳು, ಜಣ್ ಜಣಾ ಮೆಹತಾ ಪದಗಳೇ ಹಣದ ವ್ಯಾಮೋಹವುಳ್ಳ ಜನರ ಕ್ರಿಯೆಯನ್ನು ಸೂಚಿಸುತ್ತವೆ. ಈ ಕೆಲಸ ಮಾಡುವವರು ದಿಲ್ಲಿಯಿಂದ ಹಳ್ಳಿಯಲ್ಲಿರುವ ರಾಜಕಾರಿಣಿಗಳು, ದಿವಾನನಿಂದ ಜವಾನನವರೆಗಿರುವ ಅಧಿಕಾರಿ ಆಡಳಿತವರ್ಗ ಮುಂತಾದವರು. ಇವರು ಪಡೆವ ಲಂಚ, ಸಾರ್ವಜನಿಕ ಹಣದಲ್ಲಿ ಮಾಡುವ ಮೋಸ, ಭ್ರಷ್ಟಾಚಾರಗಳಿಂದ ಸಂಪಾದಿಸಿದ ಹಣದ ಫಲವೇ ಮನೆಗಳೆಲ್ಲ ಮೆಹತಾವಾಗಿರುವುದು. ಕಾರ್ಬನ್ ಡೈ ಆಕ್ಸೈಡ್ ನಂತಹ ಈ ವ್ಯವಸ್ಥೆಗಳೇ ಪ್ರಕೃತಿ ಭೂ ಪರಿಸರವನ್ನು ಹಾಳು ಮಾಡುತ್ತಿವೆ. ಈ ವ್ಯವಸ್ಥೆಗಳನ್ನು ಸೃಷ್ಟಿ ಮಾಡಿದ ಜನರೇ ಇಡೀ ದೇಶ, ಸಮಾಜ, ಸಂಸ್ಕೃತಿಗಳನ್ನೆಲ್ಲ ಹುಣ್ಣು ಮಾಡಿ, ಅದು ಇತ್ತ ಕೀವೂ ಆಗದೆ, ಅತ್ತ ಕರಗಿಯೂ ಯೋಗದೆ, ಗಂಟುಗಟ್ಟಿಸುತ್ತಿರುವ ಮಾನವನ ಆಕ್ರಮಣಕಾರಿ ಚಟುವಟಿಕೆಗಳೆ ಪ್ರಕೃತಿಯ ಅತ್ಯಾಚಾರ ಸಂಸ್ಕೃತಿಗಳಾಗಿವೆ. ಇಂತಹ ಕೆಲಸ ಮಾಡುತ್ತಿರುವ ಆಧುನಿಕತೆಯ ಕಾರ್ಯಗಳು ಪ್ರಕೃತಿ ಭೂ ಪರಿಸರವನ್ನೇ ನಾಶಮಾಡುತ್ತಿರುವುದನ್ನು ಕವನ ಪ್ರಕಟಪಡಿಸುತ್ತದೆ.

"ಹರಿವ ನೀರಿಗೂ ಬೆಳೆವ ಬೆಳೆಗೂ
ಕಾಲು ಕಟ್ಟಿದರು
ಭೂಮಿಗೆ ಟೋಪಿ ಹಾಕಿದರು
.....
ಹಳೆಯ ಬಂಧ ಬಿಕ್ಕಟ್ಟಾಗಿ
ಹೊಸ ಬಂಧ ಮುಳುವಾಗಿ
ಓಡುತ್ತಿದೆ ರಥ' ಪಥ'ವಿಲ್ಲದೆ
ಎದ್ದರೆ ನವಾಬ ಬಿದ್ದರೆ ಫಕೀರ"35 (ಭೂಮಿಗೆ ಹಾಕಿದ ಟೋಪಿ)

ಆಧುನಿಕತೆಯ ವಿಜ್ಞಾನ ತಂತ್ರಜ್ಞಾನಗಳು ನದಿ ನೀರಿಗೆ ಅಣೆಕಟ್ಟೆಗಳನ್ನು ಕಟ್ಟಿ ಬಹುರೂಪತೆಯ ದೇಶೀ ತಳಿಗಳನ್ನು ಮೆಟ್ಟಿ, ಏಕರೂಪತೆಯ ಹೈಬ್ರಿಡ್ ತಳಿಗಳನ್ನು ರೂಢಿಗೆ ತಂದು, ಪ್ರಕೃತಿಯ ಸ್ವಾತಂತ್ರ್ಯ ಸೃಷ್ಟಿ ನಿಯಮಿತ ತಳಿಗಳನ್ನು ಕಸಿದುಕೊಂಡಿವೆ. ಇದರ ಸೂತ್ರದಾರರೇ ಸರ್ಕಾರ, ಅಧಿಕಾರಿಗಳು, ಬಹು ರಾಷ್ಟ್ರೀಯ ಕಂಪನಿಗಳು, ವಿಜ್ಞಾನಿಗಳು. ಇವರು ವ್ಯವಸಾಯ ಮತ್ತು ಗ್ರಾಮ ಪ್ರಧಾನವಾದ ಈ ಭಾರತ ದೇಶಕ್ಕೆ ಇವುಗಳ ಅಭಿವೃದ್ಧಿಗೆ ಪೂರಕವಾದ ಪ್ರಬಲ ಯೋಜನೆ ವಿಜ್ಞಾನ ತಂತ್ರಜ್ಞಾನಗಳನ್ನು ಬಳಸದೆ, ಬಂಡವಾಳಶಾಹಿ ಪರಧೋರಣೆ ತಾಳಿವೆ. ಇವರು ಏನೇ ಮಾಡಿದರೂ ಕೊನೆಗೆ ಭೂಮಿಗೆ ಮುಳುವಾಗಿರುವ ಧೋರಣೆಯನ್ನು ಕವಿ ಭೂಮಿಗೆ ಟೋಪಿ ಹಾಕಿದರು ಎನ್ನುತ್ತಾರೆ. ಈ ಹೊಸ ಬಂಧದ ಪರಿಣಾಮ ರೈತ ಮತ್ತು ಕೆಳವರ್ಗದ ಸಮಾಜಕ್ಕೆ ಮುಳುವಾಗಿದೆ. ಓಡುತ್ತಿರುವ ರಥ'ದಲ್ಲಿ ದೊರೆತನ ಮತ್ತು ಬಡತನಗಳು ಜೊತೆಯಾಗಿ ಬೆಂಬತ್ತಿವೆ. ಇದರಲ್ಲಿ ಒಬ್ಬರ ಮನೆ ಮುರಿದು ಇನ್ನೊಬ್ಬರು ಮನೆ ಕಟ್ಟಿಕೊಳ್ಳುವುದಾಗಿದೆ. ಈ ಪ್ರಗತಿಯ ಪಥದಲ್ಲಿ ಆಧುನಿಕತೆಯ ಗುಟ್ಟಿದೆ. ಈ ಗುಟ್ಟಿನಲ್ಲಿ ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರದ ಸಂಕೀರ್ಣ ಸಂಬಂಧದ ಬೆಸುಗೆಯಿದೆ. ಇಂತಹ ಪರಿಸರದ ಸೂಕ್ಷ್ಮ ವಿಚಾರಗಳನ್ನು ಈ ಪದ್ಯ ಸೂಚ್ಯವಾಗಿ ಹೊರಹಾಕುವುದು ಗಮನಾರ್ಹವಾಗಿದೆ.

ಮೂಲತಃ ಮನುಷ್ಯನ ಪ್ರಗತಿಯ ಪಥದಲ್ಲಿ ಪ್ರಕೃತಿಯ ಜೀವ ವಿರೋಧಿ ನೀತಿಯಿದೆ. ಆದ್ದರಿಂದಲೇ ಭೂಮಿ ಮೇಲೆ ಅಭಿವೃದ್ಧಿಯ ಹೆಸರಲ್ಲಿ ನಡೆಸುವ ಮನುಷ್ಯನ ಕೃತ್ಯಗಳೆಲ್ಲ ಹಿಂಸೆಯಿಂದ ಕೂಡಿವೆ. ಇವನ ಪ್ರಗತಿಗೆ ಮೊದಲ ಬಲಿ ಭೂಮಿ, ಈ ಪ್ರಕೃತಿ ಭೂಮಿ ತಾಯಿಯನ್ನು ಮನುಷ್ಯ ತನ್ನ ಆಟದ ವಸ್ತುವಿನಂತೆ ಬಳಸಿಕೊಂಡು ಆ ಆಟದಿಂದ ಆನಂದದ ಜಯ ಪಡೆದು ಅದರ ಮತ್ತಿನಲ್ಲೇ ತನ್ನ ದೊಡ್ಡತನವನ್ನು ಪ್ರಕಟಿಸುವ ಕವಿತೆ ಸಪ್ತಮಾಸಗಳ ತೇರು ಇದರ ಸಾಲುಗಳಿವು;

"ಕಪ್ಪನೆಯ ಮಣ್ಣಲ್ಲಿ ಕಪ್ಪೊನ್ನು ಹರಿದಾಡಿ
ವಜ್ರಕಾಯದ ಕವಚ ಮೆಟ್ಟಿ
ನಡುಮನೆಗೆ ಬಂಟವಾದವಳು
ಐದು ಹೆಳ್ಳೆಗಳ ಮೀಟಿ
ಕುಂಕುಮವ ಸೀಟಿ
ಬರಬಿರಿದ ಭೂಮಾತೆ
ನಾನವಳ ಹೆಗಲ ಮೇಲೆ
ದೊಡ್ಡವ ನಾನು ನಿನಗಿಂತ
ನೋಡವ್ವ ಎಷ್ಟೆತ್ತರ"36 (ಸಪ್ತಮಾಸಗಳ ತೇರು)

ಇಲ್ಲಿ ಕವಿ ಮಾಲಗತ್ತಿ ಅವರು ತಮ್ಮ ತಾಯಿಯ ವೀರತ್ವದ ಜೀವನ ಮಹತ್ವವನ್ನು ಭೂಮಿತಾಯಿಗೆ ಹೋಲಿಸಿ ಪ್ರತಿಮೆಗಳ ಮೂಲಕ ನಿರೂಪಿಸಿದ್ದಾರೆ. ಭೂಮಿಯೊಳಗಿರುವ ಕಬ್ಬಿಣದ ಅದಿರಿನಂತೆ ತಾಯಿಯ ದೇಹ ಮನಸ್ಸುಗಳು ಕಬ್ಬಿಣದಂತೆ ಗಟ್ಟಿಯಾಗಿವೆ. ಇವಳು ವಜ್ರಕಾಯದ ಕವಚವುಳ್ಳ ಭೂಮಿಯಲ್ಲಿ ದುಡಿದು ದುಡಿದೂ ತನ್ನ ಶ್ರಮದ ಬೆವರಿನಿಂದ ಕುಂಕುಮವೇ ಅಳಿಸಿ ಹೋಗಿದೆ. ಹಾಗೆಯೇ ಈ ಮಾತಲ್ಲಿ ಮುತ್ತೈದೆ ತನವನ್ನು ಕಳೆದುಕೊಂಡದ್ದು ಸೂಚ್ಯವಾಗಿದೆ. ಆದರೂ ಧೃತಿಗೆಡದ ಭೂಮಿಗುಣದ ತಾಯಿ ತನ್ನ ಶ್ರಮದಿಂದ ಮಕ್ಕಳನ್ನು ಸಾಕಿ ಸಲಹಿ ಪೋಷಿಸಿದ್ದಾಳೆ.

ಇವಳ ರಕ್ಷಣೆ ಪ್ರೀತಿಯಲ್ಲೇ ಬೆಳೆದ ಮಗು ತಾಯಿಯ ಹೆಗಲ ಮೇಲೆ ಕುಳಿತು ದೊಡ್ಡವ ನಾನು ನಿನಗಿಂತ. ನೋಡವ್ವ, ಎಷ್ಟೆತ್ತರ ಎಂದು ತನ್ನ ದೊಡ್ಡತನವನ್ನು ಪ್ರದರ್ಶಿಸುತ್ತಿರುವ ಮಗನ ಬುದ್ಧಿ ಭಾವಗಳು ವಿಡಂಬನಾತ್ಮಕವಾಗಿವೆ. ಈ ತಾಯಿ ಮಗನ ಸಂಬಂಧವೇ ಇವತ್ತಿನ ಭೂಮಿ ಮತ್ತು ಮಾನವರ ಸಂಬಂಧವಾಗಿದೆ. ಹಾಗೆಯೇ ಮನುಷ್ಯ ಭೂಮಿಗಿಂತ ಶ್ರೇಷ್ಠ, ಸಾಧಕನಂತಾಗಿ, ಆಧುನಿಕತೆಯ ವಿಜ್ಞಾನ ತಂತ್ರಜ್ಞಾನಗಳನ್ನು ಭೂಮಿಯ ಮೇಲೆ ಬಳಕೆಮಾಡುತ್ತಾ ದೊಡ್ಡವನಾಗಿ ಮೆರೆಯುತ್ತಿದ್ದಾನೆ. ಇವನ ಈ ಅಹಂ ಕ್ರಿಯೆ ಮಿತಿ ಮೀರಿ ಭೂಮಿತಾಯಿ ನಿಟ್ಟುಸಿರು ಬಿಡುತ್ತಿದ್ದಾಳೆ.

"ಅತ್ತೇ ಅತ್ತಳು ಭೂಮಿಯೇ ಬಾಯ್ದೆರೆದಂತೆ
ಸುಡುವ ಕಂಬನಿಗೆ ಕಡಲ ಮೀನು ಕುದ್ದವು
ಗರಿದೆಗೆದ ನವಿಲು ನಲಿಯದೆ ಬಾಡಿತು
ಹೇಗೆ ಅಳಿಯಲಿ ಅವಳ ನಿಟ್ಟುಸಿರ ಧಾರೆಗಳ"37 (ಸಪ್ತಮಾಸಗಳ ತೇರು)

ಕವಿ ತನ್ನ ತಾಯಿಯ ಮತ್ತು ಭೂಮಿಯ ಮನದ ಅಂತರಾಳದ ದುಃಖವನ್ನು ಮನಮಿಡಿಯುವಂತೆ ಚಿತ್ರಿಸಿದ್ದಾರೆ. ಹಿಂಸೆಗಳಿಂದ ತತ್ತರಿಸುತ್ತಿರುವ ಭೂಮಿಯ ತಲ್ಲಣವನ್ನು ಬೇಂದ್ರೆಯ ಚಿಗರಿಗಂಗಳ ಚೆಲುವಿ ಕವನ ತೆರೆದಿಡುತ್ತದೆ.

"ಬ್ಯಾಟೆ ನಾಯೊದರ್ಯಾವೋ
ಹಸು ಜೀವ ಬೆದರ್ಯಾವೋ
ಗಳಗಳನೆ ಗಿಡದೆಲಿ ಉದರ್ಯಾವೋ
ಗೆಣಿಯಾ ಉದರ್ಯಾಮ್ಮ
ದಿನ್ನಿ ಮಡ್ಡಿ ಗುಡ್ಡ ಅದರ್ಯಾವ
ಅದನೆ ತಾ ಕಂಡು ನೊಂದಾಳೊ
ಬೆಂದಾಳೊ
ಅಂದಾಳೊ
ಇದು ಎಂದಾ ಜೀವದ ಬ್ಯಾಟಿ ಹಾಡೇ ಹಗಲು"38 (ಚಿಗರಿಗಂಗಳ ಚೆಲುವ)

ಮನುಷ್ಯರೇ ಇಲ್ಲಿಯ ಬ್ಯಾಟೆ ನಾಯಿಗಳು. ಭೂಮಿ ಮೇಲೆ ಇವರು ಮಾಡುವ ಬೇಟೆಗೆ ಗಿಡ ಮರ, ಪ್ರಾಣಿ ಪಕ್ಷಿ, ಬೆಟ್ಟ ಗುಡ್ಡಗಳೆಲ್ಲ ಸಿಕ್ಕಿ ಚಡಪಡಿಸುತ್ತಿವೆ. ಭೂಮಿ ತಾಯಿ ತನ್ನ ದೇಹದ ಮೇಲಿನ ಈ ಜೀವ ಹಿಂಸೆಗೆ ನೊಂದು ಬೆಂದಿದ್ದಾಳೆ. ಯಾಕೆಂದರೆ ಭೂಮಿಯ ಖನಿಜ ಮತ್ತು ಸಸ್ಯ ಪ್ರಾಣಿ ಸಂಪತ್ತುಗಳೆಲ್ಲ ಕದ್ದು ಮುಚ್ಚಿ ರಾತ್ರಿ ದರೋಡೆಯಾಗುತ್ತಿಲ್ಲದ ಇವೆಲ್ಲ ಜೀವ ಹಿಂಸೆಯ ಹಗಲು ದರೋಡೆಗಳೇ ಆಗಿವೆ. ಇಂತಹ ನಿರ್ಭಯ ಬೇಟೆಯನ್ನು ಕಂಡ ಭೂಮಿತಾಯಿ ನೊಂದು ಬೆಂದು ಹತಾಶೆಗೊಂಡಿದ್ದಾಳೆ. ಭವಿಷ್ಯದ ಪ್ರಜ್ಞೆಯಿಲ್ಲದ

ಬೇಟೆಗಾರರಿಗೆ ಬಲಿಯಾಗುತ್ತಿರುವ ಇವಳ ದುಸ್ಥಿತಿಯನ್ನು ಕವಿ ಮಲ್ಲು. ಸಿ. ಕೊತ್ನೂರ್ ಅವರು ತಮ್ಮ ಪವಸುಂಧರಾಪ ಕವನದಲ್ಲಿ ಪ್ರಕಟಿಸುತ್ತಾರೆ.

"ಕೋಟಿ ಮಕ್ಕಳ ಹಡೆದು ಕೊಡಲಿಗೆ ಬಲಿ ಕೊಟ್ಟದ್ದು ಸಾಕು
ನೀನು ಈ ಮಣ್ಣ ಹೆಣ್ಣಾಗಿ ಬಂಜೆಯಾದುದು ಸರಿ
ನಿನ್ನ ಗರ್ಭವೀಗ ರಾಜಸ್ಥಾನ ಅದೂ ಸರಿ
ಜಪಾನಿನತ್ತಿತ್ತ ಕ್ಯಾಕರಿಸಿ ಉಗಿದು
ಬೊಂಬೆ ಮನೆಗಳ ಸುಟ್ಟಿದ್ದೂ ಸಿರಿ"39 (ವಸುಂಧರಾ)

ಈ ಚರಣದಲ್ಲಿ ಕವಿ ಭೂಮಿ ಬಂಜೆಯಾದ ಚರಿತ್ರೆಯನ್ನು ನಿರೂಪಿಸುತ್ತಿದ್ದಾನೆ. ಜಪಾನ್ ತಾನು ವಿಜ್ಞಾನ ತಂತ್ರಜ್ಞಾನಗಳಿಂದ ಸೃಷ್ಟಿಸಿದ ಅಣುಬಾಂಬನ್ನು ಬಳಸಿ ಹಿರೋಷಿಮಾ, ನಾಗಸಾಕಿಗಳನ್ನು ಸುಟ್ಟು ಇಡೀ ಜೀವ ಜಗತ್ತನ್ನೇ ತಲ್ಲಣಗೊಳಿಸಿತು. ಇಷ್ಟೇ ಅಲ್ಲ ಈ ವಿಜ್ಞಾನ ತಂತ್ರಜ್ಞಾನಗಳು ಮಾಡುವ ಮಾನವನ ಆಡಂಬರದ ವಸ್ತುಗಳ ಪಟ್ಟಿಯನ್ನು ಕಾವ್ಯ ಹಿಡಿದಿಡುವುದು ಹೀಗೆ;

"ಈ ವೀರರು ಬಿಟ್ಟ ನಿರ್ವೀರ್ಯ ವೀರ್ಯದಲ್ಲಿ
ಮೈದಳೆವ ಮಗು ಯಾವುದು ಗೊತ್ತೇ ಲ
ಪ್ಲಾಸ್ಟಿಕ್ಕು ಚರ್ಮ ಕಬ್ಬಿಣದ ಮೂಳೆ
ಸಿಮೆಂಟು ಕಾಂಕ್ರಿಟ್ಟು ಮಜ್ಜೆಯ ಮಗು
ಹೆದರಬೇಡಾ ತಾಯೇ ನೀನು ಹಡೆವ
ಉಕ್ಕಿನೆದೆಯ ಮಕ್ಕಳಿಗೆ ಉಣಿಸು
ಎದೆಯಾಳದಲ್ಲಿರುವ ಪೆಟ್ರೋಲ್
ಡಿಸೆಲ್‌ನ ಹಾಲು"40 (ವಸುಂಧರಾ)

ನಿರ್ವೀರ್ಯರು ಸೃಷ್ಟಿಸಿದ ಪ್ಲಾಸ್ಟಿಕ್ಕು ಮತ್ತು ಸಿಮೆಂಟ್ ಕಾಂಕ್ರಿಟ್‌ನ ವಸ್ತು ಮತ್ತು ಆಕೃತಿಗಳು ಇವುಗಳಿಂದ ಭೂಮಿ ವಿಕೃತಿಗೊಂಡಿದೆ. ಆದರೂ ಇದರ ಎದೆಯಾಳದಲ್ಲಿರುವ ಇಂಧನಗಳನ್ನು ಬಗೆದು ತೆಗೆಯುವ ಈ ಮಕ್ಕಳ ಕೃತ್ಯಕ್ಕೆ ಕವಿ ವ್ಯಂಗ್ಯವಾಗಿ 'ಉಣ್ಣಿಸು ಎದೆಯಾಳದಲ್ಲಿರುವ ಪೆಟ್ರೋಲ್ ಡೀಸೆಲ್ ಹಾಲು' ಎನ್ನುವುದು ವ್ಯಂಗ್ಯವಾಗಿದೆ. ಭೂಮಿ ಮೇಲೆ ಇಂತಹ ಅತ್ಯಾಚಾರ ನಡೆಸುವ ಮಾನವ ಸರ್ಕಾರ, ಬಂಡವಾಳಶಾಹಿ ಮತ್ತು ವಿಜ್ಞಾನಿಗಳ ಆಕ್ರಮಣಶೀಲ ಸಂಶೋಧನೆ ಯೋಜನೆಯ ಪ್ರವೃತ್ತಿಗಳನ್ನು ಗ್ರಹಿಸಿ ಕವಿ. ಎನ್. ಮಹೇಶ್ ಅವರು ಈ ಜನರ ಚಟುವಟಿಕೆಗಳ ಗುಟ್ಟನ್ನು ತಮ್ಮ ಪರಿಸರ ಗೀತೆ ಕವನದಲ್ಲಿ ಪ್ರಕಟಪಡಿಸುತ್ತಾರೆ.

"ತಂತ್ರಜ್ಞಾನದ ಮಂತ್ರ ಹೇಳಿ!
ಕಾಡು ಕಡಿದು ಊರು ಮಾಡಿ
ಭೂಮಿತಾಯಿಯ ಬಸುರಿನಲ್ಲಿ
ಕೊಳ್ಳಿಯಿಟ್ಟ ಕಳ್ಳ ಮನುಜರು
ಅವರು ಸುಳ್ಳುಗಾರ ಸ್ವಾರ್ಥ ಮನುಜರು"41 (ಪರಿಸರ ಗೀತೆ)

ಇಂತಹ ಹಲವಾರು ಪ್ರವೃತ್ತಿಯ ಜನರು ಭೂಮಿಯ ಆಳ, ಅಗಲಗಳನ್ನೆಲ್ಲ ಅಳೆದು ಅಗೆದು, ಕಡಿದು, ತೆಗೆದು ಬರಿದು ಮಾಡಿದ್ದಾರೆ. ಅನನ್ಯ ಶಕ್ತಿಯ ಸಮೃದ್ಧ ತಾಣವಾದ ಈ ಭೂಮಿಯೊಡನೆ ಈ ಮಾನವನೆಸಗುವ ಪಾಪಕೃತ್ಯಗಳಿಂದ ಈ ಜಗತ್ತಿನ ಅಸ್ತಿತ್ವದ ಬಗ್ಗೆ ಚಿಂತಿಸುವ ಡಿ. ವಿ. ಜಿ. ಯವರ ವಚನವಿದು.

"ಧರಣಿಯೌತಣದಿಂದ ನರನ ಮನಸ್ಸಿಗೆ ವಿಕೃತಿ!
ನರನ ಕೃತ್ಯಂಗಳಿಂ ಧರಣಿಗಂ ವಿಕೃತಿ
ಪರಿಣಾಮವ ನ್ಯೋನ್ಯವಿಂತು ಸಂತತಮಿರಲು!
ಸ್ಥಿರತೆ ಲೋಕಕ್ಕೆಂತು? ಮರುಳ ಮುನಿಯ"42 (ಮರುಳ ಮುನಿಯನ ಕಗ್ಗ)

ಇದರಲ್ಲಿ ಭೂಮಿ ಮತ್ತು ಮನುಷ್ಯರ ನಡುವಿನ ಕ್ರಿಯಾ ಧರ್ಮಗಳ ಚರಿತ್ರೆಯಿದೆ. ಮನುಷ್ಯರಿಗೆ ಭೂಮಿ ನೀಡುವ ಔತಣಕ್ಕೆ ಪ್ರತಿಕ್ರಿಯೆಯಾಗಿ ಅವನು ಕೃತಜ್ಞತಾ ಭಾವ ತೋರದೆ ತನ್ನ 'ಉಂಡಮನೆಗೆರಡು ಬಗೆವ ಗುಣ' ದಿಂದ ಅದಕ್ಕೆ ಹಿಂಸಾ ಕೃತ್ಯಗಳನ್ನು ನೀಡುತ್ತಾ ಬಂದಿದ್ದಾನೆ. ಇದೇ ಇವತ್ತಿನ 'ಮಾನವ ಧರ್ಮ'. ಆದರೆ ಭೂಮಿ ಯಾರಿಂದಲೂ ಏನ್ನನ್ನೂ ಬಯಸದೆ ತನ್ನಲ್ಲಿರುವುದನ್ನೇ ಧಾರೆಯೆರೆವ ಪರಿಶುದ್ಧಾತ್ಮಕವಾದ ಗುಣ 'ಜೀವ ಧರ್ಮ' ವನ್ನು ಹೊಂದಿದೆ. ಭೂಮಿ ಮತ್ತು ಮನುಷ್ಯರ ನಡುವಿನ ವಿರೋಧ ಗುಣಗಳಿಂದ ಲೋಕದ ಸ್ಥಿರತೆ ಯಾವಾಗ? ಎಂಬ ಪ್ರಶ್ನೆ ಡಿ.ವಿ.ಜಿ. ಅವರನ್ನು ಕಾಡಿದೆ. ಆದರೆ ಈ ಪ್ರಶ್ನೆಗೆ ಸಮಯ ಮಿತಿಯ

ಉತ್ತರವಿಲ್ಲ. ಇದ್ದರೆ ಅದು ಜೀವ ಜೀವಗಳ ನಡುವೆ ಮಾನವ ತನ್ನ ಸಾಮರಸ್ಯದ ಬದುಕನ್ನು ಬಾಳಿ ಸಾಧಿಸಿ ತೋರಿಸಿದಾಗ ಸಿಗಬಹುದು. ಯಾಕೆಂದರೆ ಇದುವರೆಗೂ ಸಾಗಿ ಬಂದಿರುವುದರಲ್ಲಿ ಮನುಷ್ಯ ನಿರ್ಜೀವಿ, ಏಕೋಪಯೋಗಿ, ವಿನಾಶಕಾರಿ ವಸ್ತುಗಳನ್ನು ನಿರ್ಮಿಸಿ ಭೂಮಿಯ ವಾತಾವರಣಕ್ಕೆ ಮಾರಕವಾಗುವಂತ ವಿಷಕಾರಕಗಳನ್ನು ಬಿಟ್ಟಿರುವುದೇ ಆಗಿದೆ. ಇದರಿಂದ ಇಡೀ ಭೂಮಂಡಲದ ಪ್ರಕೃತಿಯೇ ಬಂಜೆಯಾಗುತ್ತಿದೆ. ಈ ಪರಿಣಾಮದಿಂದಲೇ ಪ್ರಕೃತಿ ವಿಕೋಪಗಳು ಆಗಾಗ್ಗೆ ಸಂಭವಿಸುತ್ತಿವೆ. ಪ್ರಕೃತಿಯ ಈ ಉಗ್ರರೂಪಗಳನ್ನು ಈ ಮುಂದೆ ಗಮನಿಸಲಾಗಿದೆ.

5. ಭೂಮಿಯ ತಾಳ್ಮೆ ಮತ್ತು ರೌದ್ರ ರೂಪಿ ದ್ವಿಮುಖ ಸಂಸ್ಕೃತಿ:

ಭೂಮಿ ತಾಳ್ಮೆಯ, ಸಮೃದ್ಧತೆಯ ಸಂಕೇತವಾಗಿದೆ. ಇಂತಹ ಭೂಮಿಯೂ ತನ್ನ ಸಹನೆಯನ್ನು ಕಳೆದುಕೊಂಡಾಗ ಅದರ ಸಮೃದ್ಧತೆಯನ್ನು ಬರಿದು ಮಾಡಿಕೊಳ್ಳುವಂತೆ ಭಯಾನಕ ರೂಪದಲ್ಲಿ ರೌದ್ರಾವತಾರ ತಾಳುತ್ತದೆ. ಈ ದ್ವಿಗುಣತ್ವದ ಮಾತೃ ಹೃದಯವನ್ನು ಕೆ.ಎಸ್.ನ ಅವರು–

"ಜ್ವಾಲಾಮುಖಿ ಚಂದ್ರಸುಖೀ
ಸೂರ್ಯ ಪ್ರಿಯೆ ರುದ್ರ ಸಖಿ
ಜಗನ್ಮಾಯೇ ಇವಳು ತಾಯೇ? ಮಣ್ಣ ಹರಡಿ ಮಲಗಿರುವಳು;
ಗಳಿಗೆಯಲ್ಲಿ ರಾಜ್ಯ ಎದ್ದು ರಾಜ್ಯ ಬಿದ್ದು ಹೊರಳುತಿರಲು,
ನೋಡಲಾರನೀ ಮಸಣದ ಚೆಲುವನೆಂದು ಮರುಗಿ ಬಾನು,
"ಆರಿಲನೆಳೆದು ಕಣ್ಣ ಮುಚ್ಚಿ ಒಣಗಿ ಬಿಕೋ ಎನ್ನುತಿಹುದು.
ಇರುವುದೆಲ್ಲ ಇದ್ದಂತೆಯೆ ಎನುವ ಅನಾಸಕ್ತಿಯಿಂದ
ಇರುವುದೆಲ್ಲ ಸತ್ತಂತೆಯೆ ಎನುವ ಮಹಾ ಪ್ರೀತಿಯಿಂದ
ಪ್ರಳಯೋತ್ತರ ಸುಖ ಸಪ್ಪನೀಲ ತರುಚ್ಛಾಯೆಯಲ್ಲಿ
ಹೆಣ ಭಾರಕೆ ಹೆಡೆಯೆತೆತ್ತು
ಮಾತಾಡದೆ ಎಲ್ಲ ಹೊತ್ತು"43 (ಭೂಮಿಗೀತ)

ಎಂದು ಕವಿ ಭೂಮಿಯ ಗುಣ ಸ್ವಭಾವಗಳನ್ನು ತೆರೆದಿಡುತ್ತಿದ್ದಾರೆ. ಭೂಮಿ ತನ್ನ ಜೀವ ನಿಧಿಯಲ್ಲಿ ಇದ್ದಂತೆ ಇರಬೇಕೆಂದು ಬಯಸುವುದಿಲ್ಲ. ಅದು ಸೃಷ್ಟಿ, ಸ್ಥಿತಿ, ಲಯವಾಗುವ ಪರಿವರ್ತನಾಶೀಲ ಕ್ರಿಯೆಯನ್ನು ಬಯಸುತ್ತದೆ. ಅದಕ್ಕೆ ಸತ್ತರೂ ಪ್ರೀತಿ. ಏಕೆಂದರೆ ಸೃಷ್ಟಿಯ ಚಲನಶೀಲ ಕ್ರಿಯೆಗೆ ಸಾವು ಅನಿವಾರ್ಯ. ಹಾಗಾಗಿ ಭೂಮಿಯಲ್ಲಿ ಹಿಂಸೆ ಒಂದು ಮೂಲಗುಣವಾಗಿದೆ. ಇದರಲ್ಲಿ ನಡೆಯುವ ಎಲ್ಲ ಕಾರ್ಯ ಕಾರಣ ಸಂಬಂಧವನ್ನು ಭೂಮಿಯೇ ಹೊತ್ತು ನಿಂತಿದೆ ಎಂಬ ನಿಲುವು ಕವಿಯದು. ಇವರು ಕಾವ್ಯದಲ್ಲಿ ಮುಂದೆ ಭೂಮಿಯ ಸ್ವಗತದಿಂದ ನಿರೂಪಿಸುತ್ತಾರೆ.

"ಇಲ್ಲಿ ನಡೆವುದೊಂದಕ್ಕೂ ನನಗೂ ಸಂಬಂಧವಿಲ್ಲ
ಈ ಬಾಳಿನ ಚೆಲುವಿನಿಂದ ನನಗೇನಾನಂದವಿಲ್ಲ
ಗುಡಿಗೋಪುರ ರಾಜ್ಯ ಕಾವ್ಯ ಶಾಸ್ತ್ರಜ್ಞರು ಬರಲಿ ಮುಂದೆ
ಮೇರೆ ಮೀರಿ ಮುಂಬರಿದರೆ ಅಪ್ಪಳಿಸುವೆನುವಳೀಕೆ"43 (ಭೂಮಿಗೀತ)

ಪ್ರಕೃತಿಯಲ್ಲಿ ನಡೆಯುವ ಸುಖ ದುಃಖಗಳ ಕಾರ್ಯ, ಕಾರಣ, ಸಂಬಂಧವನ್ನು ಹೊಂದಿರುವ ಭೂಮಿ ಇದ್ದೂ ಇಲ್ಲದಂತಿರುವ ಗುಣ. ಅದು ನನಗೆ ಸಂಬಂಧವಿಲ್ಲ, ನನಗೇನಾನಂದವಿಲ್ಲ, ಎಂದು ಕೊಳ್ಳುವುದರೊಳಗೆ ಎಲ್ಲವೂ ಇರುವುದು ಸೂಚ್ಯವಾಗಿದೆ. ಇದೇ ಭೂಮಿಯ ಸೌಜನ್ಯ ಶೀಲ ಗುಣ. ಇದು ಎಲ್ಲರ ಬೆಳವಣಿಗೆಯನ್ನು ಬಯಸಿದಂತೆಯೇ. ಯಾರನ್ನೂ, ಯಾವುದನ್ನೂ ಹದ್ದು ಮೀರಿ ಹೋಗಲು ಬಿಡುವುದಿಲ್ಲವೆಂಬ ಖಚಿತತೆಯಿಂದ ಮೇರೆ ಮೀರಿ ಮುಂಬರಿದರೆ ಅಪ್ಪಳಿಸುವೆನು ಎಂದು ಎಚ್ಚರಿಸುತ್ತದೆ. ಇದನ್ನರಿಯದೆ ಮನುಷ್ಯ ತನ್ನ ಮಿತಿ ಮೀರಿದ ಬಯಕೆ, ಬಳಕೆಯ ಚಟುವಟಿಕೆಗಳಲ್ಲೇ ತಲ್ಲೀನವಾಗಿದ್ದಾನೆ. ಇದರ ಪರಿಣಾಮವೇ ಭೂಮಿಯ ಹಿಂಸಾ ಚಟುವಟಿಕೆಗೆ ಕಾರಣ. ಈ ಪರಿಸರದ ವಾತಾವರಣದಿಂದ ಕಂಗೆಟ್ಟ ಭೂಮಿಯ ಸ್ವರೂಪ, ಸ್ಥಿತಿಯನ್ನು ಕವಿ 'ಅನ್ನಪೂರ್ಣಗೆ' ಕವನದಲ್ಲಿ ತರುತ್ತಾರೆ.

"ನೆಲದೇವಿಯೆ ಉಸ್ಸೆನುವಳು
ಕಂಗೆಟ್ಟಿತು ಕಾಲ
ಹನಿಯಿಲ್ಲದ ಪಾಳ್ಮಗಿಲಿನ
ಸುಡುಗಾಡದು ಬಾನು.
ನೀರಿಂಗಿದ ಕೆರೆಯಂಗಳ
ಉಸಿರಿಲ್ಲದ 'ನಾನು'
ನಿಡುಸುಯ್ಲಿನ ಗುಡಿಗೋಪುರ
ಕಂಬನಿಯಭಿಷೇಕ
ಬೆಂದೊಡಲಿನ ಆರ್ತಸ್ವರ
ಬಾಳು ಸಾವು ಏಕ"44 (ಅನ್ನಪೂರ್ಣಗೆ)

ಇಲ್ಲಿ ಕವಿಯ ಉಸಿರು ಭೂಮಿಯ ಉಸಿರನ್ನೇ ಅವಲಂಬಿಸಿದೆ. ಮಾನವನ ಬಾಳು ಮತ್ತು ಸಾವು ಭೂಮಿಯ ಒಂದೇ ಬೇರಿನ ಎರಡು ಕವಲುಗಳು. ಇದನ್ನೇ ಹಿಂಸೆ ಮತ್ತು ಪ್ರೀತಿಗಳು ಪ್ರಕೃತಿ ತತ್ವದ ಎರಡು ಗುಣಗಳೆನ್ನುವುದು. ಇವ್ಯಾವೂ ಒಂದನ್ನುಳಿದು ಒಂದಿಲ್ಲ. ಆದ್ದರಿಂದಲೇ ಭೂಮಿಯ ಈ ಪ್ರಕೃತಿ ತತ್ವವನ್ನು ಕುವೆಂಪು ಪಾಂಚಜನ್ಯ ಕೃತಿಯ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ.

"ಇಂದು ವದನೆ ಕುಂದರವದನೆ ಪ್ರಕೃತಿ ರೂಪಸಿಯಾಗಿ ತೋರಿದರೂ ಒಮ್ಮೊಮ್ಮೆ ರಕ್ತನಖಿ ರಕ್ತಮುಖಿ ಪ್ರಕೃತಿ ರಾಕ್ಷಸಿಯಾಗಿ ತೋರುತ್ತಾಳೆ. ಚೈತನ್ಯವನ ರಾಜಿಯನ್ನು ನೋಡಿದಾಗ ಪ್ರಕೃತಿಯು ರೂಪಸಿ ಎನಿಸುತ್ತದೆ; ದಾವಾಗ್ನಿಯನ್ನು ಕಂಡಾಗ ಆಕೆಯು ರಾಕ್ಷಸಿಯಂತೆ ಕಾಣುತ್ತಾಳೆ. ಕೆಂದುಟಿ, ಹೂಗೆನ್ನೆ, ಮುಗುಳನಗೆ, ಮುಂಗುರುಳು ಇನಿಗಣ್ಣುಗಳಿಂದ ಮನಮೋಹಿಸುವ ಮುದ್ದು ಮೊಗವನ್ನು ನೋಡಿದಾಗ ಪ್ರಕೃತಿಯು ಲಲಿತೆಯಾಗುತ್ತಾಳೆ..... ಸೃಷ್ಟಿಯಲ್ಲಿ ರುದ್ರವೂ ರಮಣೀಯವೂ ಮಿಳಿತವಾಗಿದೆ. ಆದ್ದರಿಂದಲೇ ನಿಜವಾದ ಕಲಾವಿದನಿಗೆ ಸೌಂದರ್ಯದಂತೆ ಕ್ರೌರ್ಯವೂ ಆರಾಧನೆಯ ದೇವತೆಯೇ. ಯಾವುದನ್ನು ಬಿಟ್ಟು ಯಾವುದನ್ನು ಹಿಡಿದರೂ ಪೂರ್ಣಸತ್ಯವಾಗುವುದಿಲ್ಲ."45 ಈ ಮಾತಿನಂತೆ ಪ್ರಕೃತಿ ಲಲಿತ ರಮಣೀಯ ಅನನ್ಯ ಶಕ್ತಿಯು ಒಮ್ಮೊಮ್ಮೆ ಅಸಹಾಯಕ ಸ್ಥಿತಿಗೊಯ್ದು ಸೌಮ್ಯಗುಣವಾಗಿ ಮಾರ್ಪಡುತ್ತದೆ. ಈ ಶಕ್ತಿಯೂ ತುಳುಕಿದರೆ ಭೂಮಿ ರಕ್ತಮುಖಿಯಾಗಿ ರೌದ್ರವತಾರ ತಾಳಿ ಪ್ರಕೃತಿಯೇ ಅಲ್ಲೋಲ ಕಲ್ಲೋಲವಾಗುತ್ತದೆ. ಇಂತಹ ಭಯಾನಕ ದೃಶ್ಯವನ್ನು ಕವಿ ಬೇಂದ್ರೆಯವರ ಅನುವಾದಿತ ಕವನ ಪರೌದ್ರಿಪ ಕಟ್ಟಿಕೊಡುತ್ತದೆ.

"ಮರಕಿತ್ತಿವೆ ಬುಡ ತಳು
ಹಾದಿ ಉಡುಗೆ ಝಳ,ಝಳ್ಳು
ಕಡಲು ಕುಣಿಯೆ ಗೊಂದಣ್ಣು
ತೆರೆಮುರಿನೊರೆಧಂಧಣ್ಣು
ಮಬ್ಬೆ ಮಳೆಯು ನಾಡಿಗೆ
ಮುಗಿಲಿನಂಚು ಕಾಡಿಗೆ
ಸಾವು ಹೊಂಚು, ಅಯ್ಯೋ ಮಿಂಚು
ಕಣ್ತೆರೆದೆಡೆ ಸುತ್ತಿಗೊಂಡ
ಲಕ್ಷಗೋಟಿ ರೂಪಗೊಂಡ
ಸಾವಿನಿಂದ ಮುತ್ತುತ್ತು
ಕಷ್ಟನಷ್ಟ ಬಿತ್ತುತ್ತು
ಹಿಗ್ಗುಗೊಂಡು ಹುಚ್ಚೆದ್ದು
ಕುಣಿವ ತಾಯಿ ಬಾ ಅ
ಪರೌದ್ರಿಪ ನಿನ್ನ ಹೆಸರು

ಮೃತ್ಯು ನಿನ್ನ ಉಸಿರು
ನಿನ್ನ ಒಂದು ನಡೆ ಅಡಿ
ಜಗವ ಮಾಡೆ ಪುಡಿ ಪುಡಿ
ಪ್ರಳಯಂಕರಿ ಓ ಕಾಳೀ
ಬಾ ತಾಯಿಯೆ ಬಾ ಅ"46 (ರೌದ್ರಿ)

ಈ ಕವನದ ವಿಶ್ಲೇಷಣೆಗೆ ಇಪ್ಪತ್ತನೇ ಶತಮಾನ ಮತ್ತು ಅದಕ್ಕೂ ಹಿಂದೆ ಜಗತ್ತಿನಾದ್ಯಂತ ಸಂಭವಿಸಿದ ಹಲವು ಭೂಕಂಪ, ಚಂಡಮಾರುತಗಳಲ್ಲಿ ಲಕ್ಷಾಂತರ ಪ್ರಕೃತಿ ಜೀವಿಗಳ ಮತ್ತು ಮಾನವ ಸಂಪತ್ತಿನ ಹಾನಿಯಾಗಿರುವುದೇ ಸಾಕ್ಷಿಯಾಗಿದೆ. ಉದಾಹರಣೆಗಾಗಿ ನವೆಂಬರ್ 14, 1999 ರಂದು ತುರ್ಕಿಯ ವಾಯುವ್ಯ ಭಾಗದಲ್ಲಿ ನವೆಂಬರ್ 30, 1999 ರಂದು ಈಶಾನ್ಯ ಚೀನಾದ ಲಿಯೋನಿಂಗ್ ಪ್ರಾಂತದಲ್ಲಿ ಮತ್ತು ಡಿಸಂಬರ್ 12, 1999ರಂದು ಪಶ್ಚಿಮ ಆಲೀರಿಯಾದಲ್ಲಿ ಸಂಭವಿಸಿದ ಭೂಕಂಪಗಳಲ್ಲಿ ಸಾವಿರಾರು ಜೀವಹಾನಿಯಾಗಿರುವುದನ್ನು ಪ್ರಜಾವಾಣಿ ಪತ್ರಿಕೆ ಪ್ರಕಟಿಸಿದೆ. ಇವಲ್ಲದೆ ಅಕ್ಟೋಬರ್ 29, 1999 ರಂದು ಈ ಶತಮಾನ ಕಂಡ ಒರಿಸ್ಸಾದ ಭೀಕರ ಚಂಡಮಾರುತ ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿದೆ. ಇದರ ಬಗ್ಗೆ ಪ್ರಜಾನುಡಿ ಸಾಪ್ತಾಹಿಕ ಪುರವಣಿಗೆ ಕೇಶವ ಮುಳಗಿಯವರು ಬರೆದ ಪಉಲ್ಕೆಯ ರಾಜ್ಯದಲ್ಲಿ ನಿಸರ್ಗದ ಪ್ರಳಯ ನೃತ್ಯಪ ವೆಂಬ ಲೇಖನದ ತುಣುಕೊಂದು ಇಲ್ಲಿ ಉಲ್ಲೇಖನೀಯ.

"1942 ರಿಂದ ಈವರೆಗೆ ಕನಿಷ್ಠ ಐದು ಬಾರಿ ಚಂಡಮಾರುತಗಳಿಗೆ ತುತ್ತಾಗಿರುವ ಓರಿಸ್ಸಾ ರಾಜ್ಯ ಈ ನಿಸರ್ಗ ವಿಕೋಪಗಳಲ್ಲಿ ಸುಮಾರು ಐದು ಲಕ್ಷ ಜನರನ್ನು ಕಳೆದುಕೊಂಡಿದೆ. 1999 ರ ಅಕ್ಟೋಬರ್ 29 ಸತತ ಮಳೆ ಬಿರುಗಾಳಿಗೆ ಸಿಕ್ಕ ಮರಗಿಡಗಳುದ ಬುಡಮೇಲಾದವು. ಬಂದರು ನಗರ, ಪರದೀಪ, ಬಾಲ್‌ಸೋರ್, ಜಾಜಪುರ, ಜಗತ್‌ಸಿಂಗ್‌ಪುರ್, ಕಟಕ್, ಗಂಜಾಂ, ಖುರ್ದಾ, ಭದ್ರಕ್, ಕೇಂದ್ರಪಾರ್ ಹೀಗೆ 11 ಜಿಲ್ಲೆಗಳ ಮಾನವ ನಿರ್ಮಿತ ಹಳ್ಳಿಗಳು ಮನೆಮಾರು, ರಸ್ತೆಗಳು ನೀರಿನಲ್ಲಿ ಕರಗಿದವು. ಮನುಷ್ಯರು ಜಾನುವಾರುಗಳು ಜಲಸಮಾಧಿಯಾದರು. ಕರಾವಳಿಯಿಂದ 190 ಕಿ. ಮೀ. ದೂರದಲ್ಲಿರುವ ಭುವನೇಶ್ವರದಲ್ಲಿ ಒಂದೇ ದಿನ 426 ಮಿ. ಮೀ. ಮಳೆ ಸುರಿದು ನಗರ ನೀರಿನಲ್ಲಿ ಮುಳುಗಿತು. ಸಾರಿಗೆ ರೈಲು ಸಂಚಾರ ಸ್ಥಗಿತಗೊಂಡವು. ಪ್ರಳಯ ಚಂಡಮಾರುತ ಒಟ್ಟು 480 ಕಿ. ಮೀ. ಉದ್ದಕ್ಕೂ ತನ್ನ ಬಾಹುಗಳನ್ನು ಚಾಚಿತ್ತು. ಸುಮಾರು 75 ಲಕ್ಷಜನ ಮನೆ, ಬಂಧು ಬಳಗವನ್ನು ಕಳೆದುಕೊಂಡು ಅಕ್ಷರಶಃ ಅನಾಥರಾಗಿದ್ದರು. ಸಾವಿರಾರು ಜನ ಕಾಣೆಯಾಗಿದ್ದಾರೆ. ಅಷ್ಟೇ ಜನ ಜಲಸಮಾಧಿಯಾಗಿದ್ದರು. ಲಕ್ಷಾಂತರ ಜಾನುವಾರುಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದವು. ಅದು ದುಸ್ವಪ್ನದ ಆರಂಭ ಮಾತ್ರವಾಗಿತ್ತು"47

ಇಂತಹ ಪ್ರಕೃತಿ ವಿಕೋಪದಿಂದ ಲಕ್ಷಾಂತರ, ಕೋಟ್ಯಾಂತರ ಜೀವಹಾನಿಗಳಾಗಿರುವುದು ನಮ್ಮ ಕಣ್ಮುಂದೆ ಇದೆ. ಈ ಭೂಮಿ ಅತಿವೃಷ್ಟಿಯಿಂದ ರೌದ್ರಾವತಾರಗೊಂಡು ತಾಂಡವವನ್ನಾಡುತ್ತಿರುವುದನ್ನು ಕವಿ 'ಹಿಗ್ಗುಗೊಂಡು ಹುಚ್ಚೆದ್ದು ಕುಣಿವ ತಾಯಿ', ಪ್ರಳಯಂಕಾರಿ ಓ ಕಾಳೀ' ಎನ್ನುತ್ತಾರೆ. ಕೊನೆಗೆ 'ಬಾ ತಾಯಿಯೆ ಬಾ' ಎನ್ನುವ ಭಾವದಲ್ಲಿ ರೌದ್ರಿ, ಕಾಳಿ ಅವತಾರಗಳನ್ನು ಬಿಟ್ಟು ಮತ್ತೆ ನಮ್ಮ ಮೊದಲ 'ತಾಯಿಯಾಗೆ ಬಾ' ಎಂಬ ಹಂಬಲದ ವಿನಯವಿದೆ. ಇದನ್ನೇ ಕುವೆಂಪು 'ನಿಜವಾದ ಕಲಾವಿದನಿಗೆ ಸೌಂದರ್ಯದಂತೆ ಕ್ರೌರ್ಯವೂ ಆರಾಧನೆಯ ದೇವತೆಯೇ' ಎನ್ನುವುದು.

ಕೊನೆ ಟಿಪ್ಪಣಿ

1. ಉದೃತ ನಾಗರಾಜ್.ಡಿ.ಆರ್, ಶಕ್ತಿ ಶಾರದೆಯ ಮೇಳ, ಪುಟ–8
2. ಅದೇ, ಪುಟ–9
3. ವೀರೇಶ್ ಬಡಿಗೇರ, ಅಡಿಗಲ್ಲು, ಪುಟ–55
4. ಉದೃತ,ನಾಗರಾಜ್, ಡಿ. ಆರ್, ಶಕ್ತಿ ಶಾರದೆಯ ಮೇಳ, ಪುಟ–11
5. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ, ಭೂಮಿ ತತ್ವ, ನನ್ನ ಮಾತು,ಪು–

6. ಶಿವರಾಮಯ್ಯ, ಸಾಹಿತ್ಯ ಪರಿಸರ, ಪುಟ–64
7. ಕುಶಾಲ ಬರಗೂರು, ಧರೆಯೊಳಗಣ ಬೇರು, ಪುಟ– ಪ್ರಸ್ತಾವನೆ ಮುನ್ನ ಪುಟ.
8. ಶಿವರಾಮಯ್ಯ, ಸಾಹಿತ್ಯ ಪರಿಸರ, ಪುಟ–64
9. ಅಂಬಿಕಾತನಯದತ್ತ, ನಾದ ಲಿಲೇ, ಪುಟ–1
10. ಅಂಬಬಿಕಾತನೆಯದತ್ತ, ಅರಳು ಮರಳು,, ಪುಟ–405
11. ಕುವೆಂಪು, ಪಕ್ಷಿಕಾಶಿ, ಪು–15
12. ಅದೇ, ಪು–58
13. ಸಂ:ಜಿ.ಎಚ್.ನಾಯಕ್, ಹೊಸಗನ್ನಡ ಕವಿತೆ, ಪು–85
14. ಅದೇ, ಪು–86
15. ಅಂಬಿಕಾತನಯ ದತ್ತ, ಅರಳು ಮರಳು, ಪು–54
16. ಬಿ.ದಾಮೋದರ್ ರಾವ್, ರಾಮದಾಸ್, ಗೊಪಾಲಕೃಷ್ಣ ಅಡಿಗ, ಆಯ್ದ ಕವನಗಳು, ಪು–148
17. ಕೆ.ಎಸ್.ನರಸಿಂಹಸ್ವಾಮಿ, ಆಯ್ದ ಕವನಗಳು, ಪು–65
18. ಕುವೆಂಪು, ಪಕ್ಷಿಕಾಶಿ, ಪು–10
19. ಅದೇ, ಪು–24
20. ದ.ರಾ. ಬೇಂದ್ರೆ, ವಿನಯ, ಪು–57
21. ಸುವರ್ಣ ಸಂಪುಟ, ಪು–171
22. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪು–77
23. ಕುವೆಂಪು, ಪಕ್ಷಿಕಾಶಿ, ಪು–39
24. ಕೆ.ಎಸ್.ನಿಸಾರ್ ಅಹಾಮದ್, ಪ್ರಾತಿಧಿಕ ಕವನಗಳು, ಪು–97
25. ಅಂಬಿಕಾತನಯ ದತ್ತ, ಕೃಷ್ಣ ಕುಮಾರಿ ಮತ್ತು ಹಾಡು ಪಾಡು, ಪು–35
26. ಅಂಬಿಕಾತನಯ ದತ್ತ, ಸಖೀಗೀತಾ, ಪು–35
27. ಕುವೆಂಪು, ಕಲಾಸುಂದರಿ, ಪು–3
28. ಕುವೆಂಪು, ಕಾನೂರು ಹೆಗ್ಗಡತಿ, ಪು–643
29. ಕುವೆಂಪು, ಮೊಡಣ್ಣನ ತಮ್ಮ, ಪು–8–9
30. ಸಂ: ಅರುಣಕುಮಾರ್ ಮುಖ್ಯೋಪಧ್ಯಾಯ, ಇಪ್ಪತ್ತೊಂದು ಬಂಗಾಳಿ ಕಥೆಗಳು, ಪು–133–34
31. ಅದೇ, ಪು–136
32. ಅದೇ,ಪು–134–35
33. ಅದೇ, ಪು–133–39
34. ಅರವಿಂದ ಮಾಲಗತ್ತಿ, ಮೂರನೆಯ ಕಣ್ಣು, ಪು–28
35. ಅದೇ, ಪು–29
36. ಅದೇ, ಪು–48
37. ಅದೇ, ಪು–55
38. ಅಬಿಕಾತನಯ ದತ್ತ, ಸಖೀಗೀತಾ, ಪು–55
39. ಮಲ್ಲು.ಸಿ.ಕೊತ್ನೂರ್, ವಸುಂಧರಾ, ಪು–50
40. ಅದೇ, ಪು–51–52
41. ಸಂ: ಗೋಪಿನಾಥ್, ಬಹುಜನ ವಾಯ್ಸ್, ಪು–4
42. ಡಿ.ವಿ.ಜಿ, ಮರುಳ ಮುನಿಯನ ಕಗ್ಗ, ಪು–83
43. ಕೆ.ಎಸ್. ನರಸಿಂಹಸ್ವಾಮಿ, ಆಯ್ದ ಕವನಗಳು, ಪು–90
44. ಅದೇ,ಪು–36–37
45. ಕುವೆಂಪು, ಪಾಂಚಜನ್ಯ, ಪು–3
46. ಅಂಬಿಕಾತನಯ ದತ್ತ, ಅರಳು ಮರಳು, ಪು–37–38
47. ಕೇಶವ ಮಳಗಿ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ದಿನಾಂಕ: 21–10–1999,ಪು–1

ಅಧ್ಯಾಯ: 6:

6. ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯ ತಾತ್ವಿಕ ಮಾರ್ಗ:

ಪ್ರಕೃತಿಯೊಳಗೆ ಯಾವುದೇ ಜೀವ ಜನ್ಮತಾಳಿದರೂ ಅದು ಪ್ರಕೃತಿಯ ನಿಯಂತ್ರನಕ್ಕೊಳಪಡಲೇ ಬೇಕು. ಒಳಪಟ್ಟಿದೆ ಎಂದರೆ, ಅದು ಏಕಾಂಗಿಯಾಗದೆ, ಕೌಟುಂಬಿಕವಾಗಿ, ಸಾಮುದಾಯಿಕವಾಗಿ ಅದರದೇ ಆದ ಜೀವಿಗಳ ವರ್ಗದ ಸಂಘ ಜೀವಿಯಾಗಿದೆ ಎಂದರ್ಥ. ಇದು ಪ್ರಕೃತಿ ನಿಯಮ. ಇದರೊಳಗೆ ಬಂಧಿಸಲ್ಪಟ್ಟಿದೆ ಅಂದ ಮೇಲೆ, ಆ ಪ್ರತಿಯೊಂದು ಜೀವಕ್ಕೂ ಅದರದೆಯಾದ ಜೀವನ ತಾತ್ವಿಕ ನಡೆವಳಿಕೆಗಳು ಸ್ವಾಭಾವಿಕವಾಗಿರುತ್ತವೆ. ಹೀಗೆ ಯಾವುದೇ ಜೀವವಿರಲಿ ಅಥವಾ ಜಡ ವಸ್ತುವಿರಲಿ, ಇವು ಪ್ರಕೃತಿಯೊಳಗೆ ಉದ್ಭವಗೊಂಡು, ಅದರದೆಯಾದ ಅಸ್ಥಿತ್ವ ಹೊಂದಿರುತ್ತದೆ. ಅದು ಇನ್ನೊಂದು ಜೀವಕ್ಕೆ ಸಹಾಯ, ಸಂಬಂಧಹೊಂದಿ, ಬಳಕೆಯಾಗಲೇಬೇಕು. 'ಬಳಕೆ' ಪದದ ಕ್ರಿಯಾರ್ಥ; ಪ್ರಕೃತಿಯ ಅನನ್ಯ ವ್ಯಕ್ತಿ, ವಸ್ತು, ಕ್ರಿಯೆಗೆ ಸಕಲ ಜೀವಿಗಳು ಒಂದರ ಸಹಾಯಕ್ಕೆ ಮತ್ತು ಸಂಬಂಧಕ್ಕೆ ಇನ್ನೊಂದು ಭಾಗಿಯಾಗಿ ನಡೆಯುವ ಇನ್ನೊಂದು ಕ್ರಿಯಾ ರೂಪದ ಮಧ್ಯವರ್ತಿಯ ಪಾಲಾಗಿರುತ್ತದೆ. ಅದು 'ಜಡ'(ವಸ್ತು) ಅಥವಾ ಜೀವ–ಜೀವಿ ಏನಿದ್ದರೂ ಅದು ಒಳ್ಳೆಯದು ಅಥವಾ ಕೆಟ್ಟದ್ದಕ್ಕೆ ಜೋಡಣೆಯಾಗಿದ್ದರೂ, ಅದನ್ನು 'ಬಳಕೆ'ಯಾದದ್ದು ಎಂದೇ ಗುರುತಿಸಲಾಗಿದೆ. ಕೆಲವೊಮ್ಮೆ ಕೆಲವರಿಗೆ ಒಳ್ಳೆಯದೂ ಕೆಟ್ಟದ್ದಾಗುತ್ತದೆ. ಇನ್ನೂ ಕೆಲವೊಮ್ಮೆ ಕೆಟ್ಟದ್ದೂ ಒಳ್ಳೆಯದಾಗಿ ಪರಿಣಮಿಸುತ್ತದೆ. ಹಾಗಾಗಿ ಈ ಮಾತಿನ ಅರ್ಥ ಕೆಲವೊಮ್ಮೆ ಧನಾತ್ಮಕವಾಗಿದ್ದರೆ, ಕೆಲವೊಮ್ಮೆ ಋಣಾತ್ಮಕವೂ ಆಗಿರುತ್ತದೆ. ಕೆಲವು, ಕೆಲವು ಸಂದರ್ಭಗಳಲ್ಲಿ, ಸನ್ನಿವೇಶಗಳಲ್ಲಿ ಸ್ವಾಭಾವಿಕವಾಗಿ ಒಂದರೊಡನೊಂದು ಸೇರಿ ಮತ್ತೊಂದು ಕೆಲಸ ನಡೆಯುತ್ತದೆ. ಕೆಲವು ಬಾರಿ ಪ್ರಯತ್ನ ಪೂರ್ವಕವಾಗಿ ಒಂದರೊಡನೊಂದು ಸೇರಿಸಿ ಮತ್ತೊಂದು ಕ್ರಿಯೆ ನೆಡಯುವಂತೆ ಮಾಡಲಾಗುತ್ತದೆ. ಇದು ಅಸ್ವಾಭಾವಿಕವಾದದ್ದು. ಆದ್ದರಿಂದ ಇದಕ್ಕೆ ನಾನಾರ್ಥಗಳಿವೆ.

ಪ್ರಕೃತಿಯಲ್ಲಿ ಜೀವವಿಲ್ಲದ್ದು ಯಾವ ವಸ್ತುಗಳು ಇಲ್ಲಾ. ಜಡವೆಂದರೆ ಜೀವವಿದ್ದು ಸ್ಥಿರವಾಗಿ ನೆಲೆನಿಂತ ಸ್ಥಿತಿಯುಳ್ಳದ್ದು, ಚಲಿಸಲಾರದ್ದನ್ನು ಜಡವೆಂದು ಗುರುತಿಸಿ ಕರೆಯಲಾಗಿದೆ. ಈ ಜಡ ಮತ್ತು ಜೀವ, ಜೀವಿಗಳು ಜೋಡಣೆಯಾಗಿರುತ್ತವೆ. ಜೀವ ವೈರಸ್ಸುಗಳ ಜೊಡಣೆಯಾಗುವ ಮಾದರಿಯಿಂದಲೇ ಇದನ್ನು ಗುರುತಿಸ ಬಹುದು. ಅಂದರೆ, ಜೀವ (ವೈರಸ್, ಬ್ಯಾಕ್ಟೀರಿಯ ಕಣಗಳು) ಇವುಗಳ ಪರಸ್ಪರ ಹೊಂದಾಣಿಕೆಯಿಂದ ಜೋಡಣೆಯಾಗಿ ರೂಪುಗೊಳ್ಳುವಂತಹವು ಜೀವಿಗಳು. ಇವು ತಮ್ಮ ಆಹಾರಕ್ಕಾಗಿ; ಜೀವ, ಜೀವಿಗಳಿರಲಿ, ಸಸ್ಯ ಆಹಾರ, ಮಾಂಸ ಆಹಾರವಿರಲಿ ಅದು ಬದುಕಬೇಕೆಂದರೆ ಆಹಾರವನ್ನು ಸೇವಿಸಲೇ ಬೇಕು. ಅವುಗಳಲ್ಲಿ ಒಂದರ ಆಹಾರದ ಹೋರಾಟವೆ ಇನ್ನೊಂದಕ್ಕೆ ತನ್ನ ಜೀವ ರಕ್ಷಣೆಯಾಗಿರುತ್ತದೆ. ಇವೆರಡರ ನಡುವಿನ ಸಂಘರ್ಷಣೆ ತುಂಬಾ ಸಂಕೀರ್ಣವಾಗಿರುತ್ತದೆ. ಇದರೊಳಗೆ ಸಿಕ್ಕ ಅಲ್ಪ ಕ್ಷಣಗಳನ್ನೂ ಶಾಂತಿ, ಪ್ರೀತಿ, ಮೈತ್ರಿಗಾಗಿ ಅರಸುತ್ತಾ ಸಾಗುವುದೇ ಸಕಲ ಜೀವಿಗಳ ಜೀವನ. ಇವು ಹೀಗೆ ಸದಾ ಕ್ರಿಯಾ ಶೀಲವಾಗಿದ್ದರೆ ಮಾತ್ರ, ಜಗತ್ತಿನಲ್ಲಿ ಬೆಲೆ. ಇಲ್ಲದಿದ್ದರೆ ಅವುಗಳಿಗೆ ಜೀವಂತಿಕೆಯ ಬೆಲೆಯಿರುವುದಿಲ್ಲ. ಈ ಮಾತು ಏಕ ಕಣ ಜೀವಿಯಿಂದ ಬಹು ಕಣ ಜೀವ–ಜೀವಿಗಳಿಗೆ ಮತ್ತು ಪ್ರಕೃತಿಯ ಜಡ ವಸ್ತುಗಳಿಗೆಲ್ಲಾ ಅನ್ವಯಿಸುವಂತಹುದು. ಆದರೆ ಜಡ ವಸ್ತುಗಳು ಸ್ಥಿರವಾಗಿರುತ್ತವೆ ಅವುಗಳನ್ನು ಬಳಸಿಕೊಳ್ಳುವ ಜೀವಿಗಳ ನಡವಳಿಕೆಗಳ ಹಿನ್ನೆಲೆಯಿಂದ; ಅವುಗಳ ಉಪಯೋಗಗಳ ಮಹತ್ವ ಹಾಗೂ ಸತ್ವ–ಶಕ್ತಿಗಳಿಂದ ಬೆಲೆ ಜಾಸ್ತಿಯಾಗುತ್ತದೆ. ಇದರೊಳಗೆ ಒಂದನ್ನು ತಿಂದು ಮತ್ತೊಂದು ಜೀವಿಸುವುದು ಸಾವಯವ ಕ್ರಿಯಾ ನಿಯಮವಾಗಿ ಪ್ರಕೃತಿಯೊಳಗೆ ರೂಪುಗೊಂಡಿದೆ. ಹಾಗಾಗಿ ಪ್ರತಿಯೊಂದು ಜೀವಕ್ಕೂ ಹುಟ್ಟು, ಸಾವು ಖಚಿತವಾದ ಸ್ವಾಭಾವಿಕ ನಿಯಮ. ಇದರಿಂದಲೇ ಜಗತ್ತಿನ ಸಕಲ ಜೀವ–ಜೀವಿಗಳು ಮತ್ತು ಜಡ, ಚರ ವಸ್ತುಗಳೆಲ್ಲಾ ಪ್ರಕೃತಿಯ ಸಾಂಘಿಕ ಜೀವನಕ್ಕೊಳಪಟ್ಟಿವೆ ಎಂಬುದು ಜಾಗತಿಕ ಸತ್ಯ. ಹಾಗಾಗಿ ಮೇಲಿನ ಈ ಮಾತಿನೊಳಗೆ ಮಾನವ ವರ್ಗವೂ ಸೇರಿಕೊಂಡಿರುವುದರಿಂದ ಮುಂದಿನ ಚರ್ಚೆಯಲ್ಲಿ ಸಕಲ ಜೀವಿಗಳನ್ನು ಕೇಂದ್ರ ಮಾಡಿಕೊಂಡು ಚರ್ಚಿಸಲಾಗಿದೆ. ಈ ಚರ್ಚೆಯನ್ನು ಮಾನವ ನೆಲೆಯಲ್ಲಿ ಮಾತನಾಡದೆ ಜೀವಕೇಂದ್ರಿತ ನೆಲೆಯಲ್ಲಿ ಬೆಳಸಲಾಗಿದೆ. ಇದರೊಳಗೆ ಒಂದಕ್ಕೊಂದು

ಜೀವಿಗಳ ಅಥವಾ ಒಬ್ಬರಿಗೊಬ್ಬರ ಮಾತುಗಳ ನಿರಂತರ ಭಾಷೆಯ ಸಾಗುವಿಕೆಯ; ಸರಳತೆ ಮತ್ತು ಗಟ್ಟಿತನದ ವಾದ, ಚರ್ಚೆಯ ಮಾತುಗಳು ಸಕಲ ಜೀವಿಗಳಿಗೂ ಸತ್ವ, ಶಕ್ತಿಯುಳ್ಳವಾಗಿದ್ದರೆ ಅವುಗಳನ್ನು ಆಯಾ ಜೀವಿಗಳ, ವಸ್ತುಗಳ ಸ್ವಾಭಾವಿಕ ಜೀವನ ತತ್ವವೆನ್ನುವುದು. ಈ ತತ್ವಗಳು ಸಮಗ್ರತೆಯಿಂದ ಕೂಡಿ, ಸಾಮ್ಯತೆಯಿಂದ ಪರಸ್ಪರ ಪ್ರೀತಿಯ ಹೊಂದಾಣಿಕೆಯುಳ್ಳ; ಜೀವಂತಿಕೆಯ ಮೌಲ್ಯವನ್ನು ಸರ್ವಕ್ಕೂ, ಸಾರ್ವಕಾಲಿಕವಾಗಿ ಯಾವುದು ಸಮಾನತೆಯನ್ನು ಬಿತ್ತಿ ಪ್ರತಿಪಾದಿಸುತ್ತದೊ ಅದು ಸಿದ್ಧಾಂತ. ಇದು ಪ್ರಕೃತಿಯ ಸಕಲ ಜೀವ, ಜೀವಿಗಳಿಗೆ, ಸಕಲ ಅಜೀವ ವಸ್ತುಗಳಂತೆ ಕಾಣುವ ಜೀವ ರೂಪಿ ಅನನ್ಯ ವಸ್ತುಗಳಿಗೂ, ಒಂದೆಯಾಗಿ ರೂಪಿಸಿರುವ **ನಿಸರ್ಗ ನಿಯಮವನ್ನು ಪ್ರಕೃತಿ, ಭೂಮಿ, ಆಕಾಶ, ಬಯಲು, ಮತ್ತು ಶೂನ್ಯ ತತ್ವ., ಸಿದ್ಧಾಂತ** ಎಂದು ನಾನಾ ಹೆಸರುಗಳಿಂದ ಕರೆಯುವುದು ರೂಢಿಯಾಗಿ ಬೆಳೆದು ಬಂದಿದೆ. ಈ ಶೂನ್ಯ ತತ್ವದ ಮೂಲಾಣುವೇ ವಿಜ್ಞಾನ ಗುರುತಿಸಿರುವ ಪರಮಾಣು, ಕಣ, ಸೂಕ್ಮಾಣುಗಳು. ಇವುಗಳನ್ನೆ ಇಲ್ಲಿ 'ಜೀವಾಣು' ಎಂದು ಕರೆಯಲಾಗಿದೆ.

ಜೀವ ತತ್ವದ ಸೈದ್ಧಾಂತಿಕತೆ:

ಪ್ರಕೃತಿಯ ಸಕಲ ಜೀವಿಗಳು ಈ ಜೀವ ತತ್ವ, ಸಿದ್ಧಾಂತಕ್ಕೆ ಒಳಗೊಳ್ಳುತ್ತವೆ. ಆಯಾ ಜೀವಿಗಳಿಗೆ ಪೂರಕವಾದ, ರೂಪಾಂತರ ಕ್ರಿಯೆಗೆ ಮೂಲ ಕಾರಣವಾಗುವ; ಬ್ಯಾಕ್ಟೀರಿಯ, ವೈರಸ್‌ಗಳಿರಬಹುದು ಅಥವಾ ಇನ್ಯಾವುದೆ ಸೂಕ್ಷ್ಮಾತಿ ಸೂಕ್ಷ್ಮ ಕಣವಿರಬಹುದು ಇವುಗಳ ಕಾರ್ಯ. ಗುಣಗಳ ಆಧಾರದ ಮೇಲೆ ಇವುಗಳನ್ನು ಜೀವವೆನ್ನಬೇಕು. ಇವು ಕೇವಲ ರೂಪಾಂತರ ಗುಣಹೊಂದಿ, ಸಾವಿಲ್ಲದೆ ಸಾರ್ವಕಾಲಿಕವಾಗಿರುತ್ತವೆ. ಹಾಗೂ ಎಕಕಣ, ಬಹುಕಣ, ಜೀವಿಗಳಾಗಿ; ರೂಪ, ಬಣ್ಣ, ವಾಸನೆಗಳು ಯಾವುವು ಇರುವುದಿಲ್ಲ. ಜೊತೆಗೆ ಅಗೋಚರಿಗಳು ಅಂದರೆ ಯಾವ ಜೀವಿಗಳ ಕಣ್ಣಿಗೂ ಕಾಣಿಸದಂತಿರುತ್ತವೆ. ಹೀಗೆ ಅಗೋಚರಿಯಾಗಿ ಮಾಡುವ, ನೆಡೆಯುವ ಧನಾತ್ಮಕ ಕಾರ್ಯವನ್ನೆ ಮಾನವ ದೇವರೆಂದಿರುವುದು. ಈ ವೈಜ್ಞಾನಿಕ ಸತ್ಯವನ್ನು ಅರಿತ ಬುದ್ಧ ಇದನ್ನು ಪ್ರಕೃತಿಯ ನೀತಿ, ನಿಯಮ, ನಿಸರ್ಗದ ಸ್ವಾಭಾವಿಕ ಕ್ರಿಯಾಗುಣವೆಂದಿದ್ದಾನೆ.

ಈ ತಾತ್ವಿಕತೆಯನ್ನು ತಿಳಿದ ವಿಜ್ಞಾನಿಗಳು ಇವುಗಳ ಶೋಧನೆಯಿಂದ ಅನನ್ಯ ಸಾಧಕರಾಗಿ ಅರಿಸ್ಟಾಟಲ್ನಿಂದ ಹಿಡಿದು ಕೊಪರ್ನಿಕಸ್,... ಐನ್‌ಸ್ಟೀನ್,.. ಸತ್ಯೇಂದ್ರನಾಥ್ ಬೋಸ್ ಮೊದಲಾದವರು; ಸಾವಿರಾರು ಪ್ರಾಚೀನದಿಂದ ಆಧುನಿಕ ವಿಜ್ಞಾನಿಗಳವರೆಗೆ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ನಾನಾ ರೀತಿಯ ವಿಜ್ಞಾನ, ತಂತ್ರಜ್ಞಾನಗಳ ಆವಿಷ್ಕಾರ ಮಾಡಿದ್ದಾರೆ. ಇವುಗಳಲ್ಲಿ ಯಾವುದರಲ್ಲಿಯು **'ಸಕಲ ಜೀವಿಗಳ ಸಾವಿಲ್ಲದ ಜೀವರಕ್ಷಣೆಯ ಆವಿಷ್ಕಾರ'** ಈ ದೇಶದಲ್ಲೇನೂ, ಜಗತ್ತಿನಲ್ಲೇ ನೆಡೆದಿಲ್ಲ. ಹೀಗೆನಾದರೂ ನೆಡೆದರೆ, ಇನ್ನೊಂದು ಜೀವಿಯ ಹುಟ್ಟಿಗೆ ಸಾಧ್ಯವಾಗುವುದಿಲ್ಲ. ಇಂತಹ ಕಾರ್ಯ ಸಾಧನೆ ಮಾನವನಿಂದ ಸಾಧ್ಯವಿಲ್ಲ. ನೆಡೆದರೆ, ಅದು ಪ್ರಕೃತಿ ವಿರೋಧಿ ಕಾರ್ಯವಾಗಿ, ಮಹಾನ್‌ದುಷ್ಪರಿಣಾ ಉಂಟಾಗುತ್ತದೆ. ಇದು ಮಾನವನ ಯಾವ ವಿಜ್ಞಾನ–ತಂತ್ರಜ್ಞಾನಗಳಿಂದಲೂ ಸಾಧ್ಯವಿಲ್ಲವೆನಿಸುತ್ತದೆ. ಹೀಗಾದರೆ ಪ್ರಕೃತಿ ತನ್ನ ಚಲನಶೀಲತೆಯನ್ನೆ ಕಳೆದುಕೊಳ್ಳ ಬೇಕಾಗುತ್ತದೆ. ಇಂತಹ ನಿಸರ್ಗ ನಿಯಮದೊಳಗೆ ಪ್ರಕೃತಿಯೆ ತನ್ನ ಕ್ರಿಯಾ ಮಿತಿಯೊಳಗೆ ಯಾವುದೂ ಅತಿಯಾಗದಂತೆ, ಯಾವುದೂ ದುರ್ಬಲ, ಕೀಳೂ ಆಗದಂತೆ, ಪ್ರತಿಯೊಂದಕ್ಕೂ ಒಂದಿದ್ದರೆ, ಇನ್ನೊಂದು ಇಲ್ಲದಂತೆ ರೂಪುಗೊಳಿಸಿ ಯಾರೂ ಯಾವುದೂ ಮೇಲೂ ಅಲ್ಲದೆ ಕೀಳೂ ಅಲ್ಲದಂತೆ ಸಮ ತೂಕದಲ್ಲಿ ಸೃಷ್ಟಿಯ ಚಲನಾ ಶೀಲತೆಯನ್ನು ರೂಡಿಸಿಕೊಂಡಿದೆ. ಪ್ರಕ್ರತಿಗೆ ಯಾವುದು ಅಸಾಧ್ಯವಾಗಿಲ್ಲ. ಎಲ್ಲವೂ ಸಾಧ್ಯವಿರುವುದರಿಂದ ಅದರ ಪಾಡಿಗೆ ಅದು, ಅದಕ್ಕೆ ಬೇಕಾದಾಗ ಅಪರಿಪೂರ್ಣದಂತಿದ್ದು, ಎಲ್ಲವನ್ನೂ ಪರಿಪೂರ್ಣಗೊಳಿಸಿಕೊಳ್ಳುತ್ತದೆ. ಇದು ಜಗತ್ತಿನ ಇನ್ನ ಯಾವುದೇ ಜೀವ, ಅಜೀವ ಸ್ಥಿತಿಗಳಿಗೆ ಸಾಧ್ಯವಿಲ್ಲ ಎಂಬುದು ಪ್ರಕೃತಿಯ ವಿಸ್ಮಯ ಗುಣ. ಇಂತಹ ಈ ಜೀವ ತತ್ವವನ್ನೊಳಗೊಂಡ ಪ್ರಕೃತಿಯನ್ನು ಭೌತ ವಿಜ್ಞಾನ, ಖಗೋಳ ವಿಜ್ಞಾನ, ಜೀವ ವಿಜ್ಞಾನ, ಹೀಗೆ ನಾನಾ ವಿಜ್ಞಾನದ ಆಳ ಅಗಲಗಳು ಈ ವಿಷಯದ ಬಂಧಕ್ಕೊಳಪಟ್ಟಿರುವುದನ್ನು ಮಾನವ ಕಂಡುಕೊಳ್ಳಲು ಮಾಡಿರುವ ದಾರಿಗಳಾಗಿವೆ, ಇವೆಲ್ಲಾ ಅಣು ಸಿದ್ಧಾಂತದ ಮೇಲೆ ರೂಪುಗೊಂಡಿರುವುದು ಗಮನಾರ್ಹ ಸಂಗತಿ.

ಜಗತ್ತಿನ ಈ ಅಣು ಮೂಲದಿಂದಲೇ ಸಕಲ ಜೀವಿಗಳ ಉಗಮವಾಗಿರುವುದು. ಜೊತೆಗೆ ಗಿಡ–ಮರ, ಪ್ರಾಣಿ, ಪಕ್ಷಿ, ಕೀಟ, ಜಲಚರಗಳಾದಿಯಾಗಿರುವ ಪ್ರತಿ ಜೀವ ಸಂಕುಲಗಳ ಹುಟ್ಟು, ಅವುಗಳ ಜೀವನ ಸಂಬಂಧಗಳಿಗೆ, ಮತ್ತು ಅವುಗಳ ಸಾವಿನ ಮೂಲಗಳಿಗೂ ಈ ಅಣುಗಳೆ ಮೂಲ ಕಾರಣವಾಗಿರುವುದನ್ನು

ವಿಜ್ಞಾನ ಪ್ರತಿಪಾದಿಸುತ್ತಿದೆ. ಆದ್ದರಿಂದಲೇ ಪ್ರಕೃತಿಯನ್ನು ಅಣು ವ್ಯೂಹ, ಜೀವ ವ್ಯೂಹ, ಜೀವಮಯವೆನ್ನುವುದು. ಈ ಎಲ್ಲಾ ಮೂಲ ಕಾರಣಗಳಿಂದಾಗುವ ಕಾರ್ಯಗಳ ತಾತ್ವಿಕತೆಯನ್ನೆ ಜೀವ ತತ್ವವೆಂದು ಪ್ರತಿಪಾದಿಸಲಾಗಿದೆ.

ಜೀವ ತತ್ವವೆಂದರೆ, ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ಜೀವ ಸಂಕುಲಕ್ಕೂ ಅದರ ಹುಟ್ಟಿನ ಮೂಲ ಪರಿಸರಸದ ಹಿನ್ನೆಲೆ, ವಾತವರಣದಿಂದ ಅದರದೆಯಾದ ಜೀವನ ಹೊಂದಾಣಿಕೆ, ಸಂಪರ್ಕ, ಸಂಬಂಧಗಳ ಆಧಾರದ ಮೇಲೆ ಅದು ತನ್ನಪಾಡಿಗೆ ತಾನು ಸ್ವಾಭಾವಿಕವಾಗಿ ಮತ್ತು ಸ್ವತಂತ್ರವಾಗಿ ಜೀವನ ಮಾಡಿಕೊಂಡಿರುತ್ತದೆ. ಜೀವನವೆಂದರೆ, ಪ್ರಕೃತಿಯ ಜೀವ ಸಂಕುಲಗಳೊಂದಿಗೆ ಮತ್ತು ತನ್ನ ವರ್ಗದ ಹಾಗೂ ನಾನಾ ತರದ ಜೀವಿಗಳೊಂದಿಗಿನ ವ್ಯಾವಹಾರಿಕ ಸಂಬಂಧವೇ; ಪ್ರತಿ ಜೀವಿಯ ಬಾಳಾಗಿರುತ್ತದೆ. ಇಂತಹ ಬಾಳಿನ ಎಲ್ಲಾ ಜೀವಿಗಳೊಂದಿಗೆ; ಪ್ರಕೃತಿಯಲ್ಲಿ, ಸ್ವಾಭಾವಿಕವಾಗಿ ಸಿಗುವ ಗಾಳಿ, ನೀರು, ಸೂರ್ಯ, ಚಂದ್ರ, ಭೂಮಿ, ಆಕಾಶಗಳ ನಡುವಿನ ಸಂಬಂಧದಲ್ಲಿ ಸಜಾತಿ ವರ್ಗಗಳ ಬಿನ್ನ ಲಿಂಗ ಜೀವಿಗಳ ಸಮಾಗಮದ ಕ್ರಿಯಾ ಗುಣದಿಂದ ಹುಟ್ಟಿ,, ಭೂಮಿ ಮೇಲೆ ಹೋರಾಟದ ಜೀವನ ಮಾಡುತ್ತವೆ. ಈ ಜೀವನದಲ್ಲಿ ಒಂದಕ್ಕೊಂದು ಸಹಕರಿಸಿ, ಕೃತಜ್ಞತಾ ಭಾವದಲ್ಲಿ ಪ್ರತಿಸ್ಪಂದಿಸುವ ಗುಣ; ಪ್ರಕೃತಿಯ ಸಹಜತೆಯಂತೆ, ಜೀವಿಗಳದ್ದು ಸ್ವಾಭಾವಿಕವಾಗಿರುತ್ತದೆ. ಕೊನೆಗೆ ಸತ್ವ, ಶಕ್ತಿ ಹೀನ ಮನಸ್ಸುಳ್ಳವಾಗಿ, ಉಸಿರಾಟ ನಿಲ್ಲಿಸಿ, ದೇಹವನ್ನು ವಿಸರ್ಜಿಸಿ, ಇನ್ನೊಂದು ಜೀವಕ್ಕೆ ಆಹಾರವಾಗುವ ಪ್ರಕೃತಿಯ ಜೀವ ಜೀವಿಗಳ ಕ್ರಿಯಾ ಗುಣದ ಜೀವನ ವಿಧಾನವನ್ನು 'ಜೀವ ತತ್ವ' ಎನ್ನಬಹುದು. ಈ ತತ್ವದ ಗುಣ ಧರ್ಮದಿಂದ ಯಾವ ಜೀವ ನಡೆದುಕೊಂಡರೂ, ಆ ಜೀವಿ ಅದರ ಸುತ್ತಮುತ್ತಲ ಸಕಲ ಜೀವಿಗಳಿಗೂ ಅದು ಪ್ರಿಯವಾಗುತ್ತದೆ. ಅದಕ್ಕೆ ಎಲ್ಲಾ ಜೀವಿಗಳ ಸಹಕಾರವಿರುತ್ತದೆ. ಇದಕ್ಕೆ ಮಾನವ ಹೊರತಾಗಿಲ್ಲ ಎಂಬುದಕ್ಕೆ ಬುದ್ಧರ ಜೀವನವೇ ಸಾಕ್ಷಿಯಾಗಿ, ಈ ನೆಲದ ಮೇಲೆ ಉಳಿದಿದೆ. ಆ ಹಿನ್ನೆಲೆಯಿಂದಲೇ ಜೀವ ತತ್ವವನ್ನು ಸಕಲ ಜೀವಿಗಳ ಜೀವನ ವಿಧಾನಗಳ ಮಾದರಿಯಿಂದ ಪರಿಶೀಲಿಸಿ ಅರಿಯಬಹುದಾಗಿದೆ.

1. ಪ್ರಕೃತಿ ಜೀವಿಗಳ ಹುಟ್ಟಿನ ರೂಪಗಳ ಎಂಟು ಮಾದರಿಗಳು:

ಪ್ರಕೃತಿಯೋಳಗೆ ಜೀವಿಗಳ ಹುಟ್ಟು ನಾನಾ ಮಾದರಿಗಳಲ್ಲಿ ರೂಪುಗೊಂಡಿದೆ. ಇವುಗಳನ್ನು ಹೇಳದೆ ಜೀವಿಗಳ ಹುಟ್ಟನ್ನು ಪರಿಶೀಲಿಸಲಾಗದು. ಅಂತಹ ಜೀವಿಗಳ ಹುಟ್ಟಿನ ರೂಪಗಳು ಸುಮಾರು ಐದು ರೀತಿಗಳಲ್ಲಿ ಗುರುತಿಸ ಬಹುದಾಗಿದೆ. 1. ಅವಸ್ಥಾಂತರ ಜೀವಿಗಳು (ಮೊಟ್ಟೆಯಿಂದ ಮರಿಮಾಡುವ ವ್ಯವಸ್ಥೆ) 2. ಮರಿ ಹಾಕುವ ಜೀವಿಗಳು (ಒಂದು ಜೀವಿ ತನ್ನಂತಹ ಇನ್ನೊಂದು ಜೀವಿಯನ್ನೆ ಮರಿ ಹಾಕುವುದು) 3. ರೂಪಾಂತರ ಜೀವಿಗಳು (ಒಂದು ಜೀವಿಯಾಗಿ ಹುಟ್ಟಿ ನಂತರ ಇನ್ನೊಂದು ಜೀವಿಯಾಗಿ ಪರಿವರ್ತನೆಯಾಗುವ ವ್ಯವಸ್ಥೆ) 4. ಪುನರ್ಜನ್ಮ ಜೀವಿಗಳು (ಒಂದು ಜೀವಿ ಸತ್ತ ಮೇಲೆ ಇನ್ನೊಂದು ಜೀವಿ ಅಥವಾ ಅದೇ ಜೀವಿಯಾಗಿ ಹುಟ್ಟುವುದು) 5. ಪುನರ್ಭವ ಆಗುವ ಜೀವಿಗಳು (ಜೀವಿಗಳ ಸಾವಿನ ಕೊನೆಯ ಮನದ ನೆನಪಿನ ಜೀವಕ್ಕೆ ಬದಲಾವಣೆ ಹೊಂದುವುದು) 6. ಮಾನವ ನಿರ್ಮಿತ ಜೀವಿಗಳು (ಮಾನವ ಸಸ್ಯ, ಪ್ರಾಣಿ, ಪಕ್ಷಿಗಳನ್ನು ತನ್ನ ತಂತ್ರಜ್ಞಾನದಿಂದ ಹೈಬ್ರಿಡ್ ತಳಿ ಜೀವಿಗಳನ್ನಾಗಿ ಮಾಡುವುದು). 7) ಮಾನವ ಪುರಾಣ, ಸಾಹಿತ್ಯ ಕಲ್ಪಿತ ಜೀವಿಗಳು. 8) ಮಾನವ ಗ್ರಹಿಕೆಗೆ ಸಿಗದ ಜೀವಿಗಳ ಹುಟ್ಟು

1). ಅವಸ್ಥಾಂತರ ಜೀವಿಗಳು (ಮೊಟ್ಟೆಯಿಂದ ಮರಿ ಮಾಡುವ ವ್ಯವಸ್ಥೆ):

ಪ್ರಕೃತಿಯೊಳಗೆ ಮೊಟ್ಟೆಯಿಟ್ಟು ಮರಿ ಮಾಡುವ ವ್ಯವಸ್ಥೆಗೆ ಹೊಂದಿಕೊಂಡಿರುವ ಜೀವಿಗಳು ಅಗಣಿತ. ಬ್ಯಾಕ್ಟೀರಿಯ ಜೀವಿಗಳಿಂದ ಹಿಡಿದು ಬಯಲು ಪ್ರದೇಶ, ಬೆಟ್ಟಗುಡ್ಡ, ಕಾಡು, ಜಲಚರಗಳಲ್ಲಿ ಈ ಮಾದರಿಯ ಜೀವಿ ಸಂಕುಲಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಮೀನು, ಉಭಯವಾಸಿ ಪ್ರಾಣಿ ಆಮೆ ಮತ್ತು ಹಕ್ಕಿ–ಪಕ್ಷಿ ಜಾಜಿ ಜೀವಿಗಳೆಲ್ಲಾ ಮೊಟ್ಟೆಯನ್ನಿಟ್ಟೆ ಮರಿ ಮಾಡುವ ಗುಣವುಳ್ಳವು. ಇವುಗಳ ದೇಹ ರಚನೆಯನ್ನೆ ಪ್ರಕೃತಿ ಅವುಗಳಿಗೆ ನೀಡಿದೆ. ಜೊತೆಗೆ ಕಾಲ, ಋತುಗಳಿಗೆ ಅನುಗುಣವಾಗಿ ಅವುಗಳಲ್ಲೂ ಹೆಣ್ಣು–ಗಂಡಿನ ಸಂಪರ್ಕ, ಸಂಭೋಗ ಕ್ರಿಯಾ ವಿಧಾನಗಳಿಂದಾಗುವ ಜೀವಾಣುಗಳಿಂದ ಮೊಟ್ಟೆಯ ರೂಪ ಅದರ ಗರ್ಭದೊಳಗೆ ರಚನೆಯಾಗಿರುತ್ತದೆ. ಅದನ್ನು ಹೆಣ್ಣು ಜೀವಿ ಅದರ ದೇಹ ರಚನೆಗೆ ಅನುಗುಣವಾಗಿ ಮೊಟ್ಟೆಗಳನ್ನು ಹೊರಗಿಟ್ಟು ಮರಿ ಮಾಡುವುದು ಸ್ವಾಭಾವಿಕವಾಗಿ ಬೆಳವಣಿಗೆಯಾಗಿದೆ. ಇವುಗಳಲ್ಲಿ ಒಂದೊಂದು ಜಾತಿಯ ಜೀವಿಗಳು ಅವುಗಳ ಪರಿಸರ, ಆಹಾರ, ದೇಹ ರಚನೆಗೆ ಅನುಗುಣವಾಗಿ ಒಂದಕ್ಕಿಂತ ಹೆಚ್ಚು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ಮೀನು ಜಾತಿಗಳೆಂತು ಒಂದು ಮೀನು ಸಾವಿರಾರು ಮೊಟ್ಟೆಯಿಟ್ಟು, ಮರಿಗಳನ್ನು

ಮಾಡುವ ಕ್ರಿಯೆಯಂತೆ ಕೆಲವು ಜಾತಿ ಮೀನುಗಳು ಮರಿಗಳನ್ನು ಹಾಕುತ್ತವೆ. ಇಂತಹವು ಪ್ರಕೃತಿಯೊಳಗೆ ವಿಸ್ಮಯ ಸೃಷ್ಟಿ ಕ್ರಿಯೆ ನಡೆಯುತ್ತಿರುತ್ತದೆ. ಅಂದರೆ ಮೀನಿನಂತ ಅಸಂಖ್ಯಾ ಜಾತಿಯ ಜೀವಿಗಳು ಆಯಾ ಪರಿಸರದ ಜೀವಿಗಳ ಆಹಾರ ಕ್ರಮಕ್ಕಾಗಿಯೆ ಮೀನಿನಂತಹ ಸಾವಿರಾರು ಲಕ್ಷಾಂತರ ಮರಿಗಳ ಸೃಷ್ಟಿಗೆ ಕಾರಣವಾಗುವುದನ್ನು ಮರೆಯಲಾಗದು. ಇದು ಅಂತಹ ಜೀವಿಗಳ ಜೀವನ ತತ್ವ.

ಸಸ್ಯ ಸಂಕುಲಕ್ಕಾಗಲಿ ಅಥವಾ ಆಯ್ದ ಕೆಲವು ಚಿಕ್ಕ ಮತ್ತು ದೊಡ್ಡ ಪ್ರಾಣಿಗಳಿಗಾಗಲಿ ಮೊಟ್ಟೆಯಿಟ್ಟು ಮರಿಮಾಡುವ ಗುಣ, ಸ್ವರೂಪಗಳನ್ನು ಪ್ರಕೃತಿ ನೀಡಿಲ್ಲವೆಂಬುದೇ ವಿಶೇಷ. ಇವುಗಳನ್ನು ಪ್ರತ್ಯೇಕವಾಗಿ ಗುರುತಿಸಿ ಪರಿಶೀಲಿಸಲಾಗಿದೆ.

2). ಮರಿ ಹಾಕುವ ಜೀವಿಗಳು (ಒಂದು ಜೀವಿ ತನ್ನಂತಹ ಇನ್ನೊಂದು ಜೀವಿಯನ್ನೆ ಮರಿ ಹಾಕುವುದು):

ಮರಿಹಾಕುವ ದೊಡ್ಡ ಪ್ರಾಣಿಗಳೇ ಜಾಸ್ತಿ ಇದ್ದರೂ, ಮೊಟ್ಟೆ ಇಡುವ ಚಿಕ್ಕ ಚಿಕ್ಕ ಪ್ರಾಣಿಗಳು ಇವೆ. ಕೆಲವು ಜಾತಿಯಲ್ಲಿ ಮೊಟ್ಟೆಯಿಡುವ, ಮರಿ ಹಾಕುವ ಎರಡು ಇರುವಂತಹ ಬೇರೆ ಬೇರೆ ಜಾತಿಯ ಪ್ರಾಣಿಗಳಿವೆ. ಉದಾ: ಕೆಲವು ಹಾವು ಮೊಟ್ಟೆನೂ ಇಡುತ್ತವೆ ಕೆಲವು ಮರಿಗಳನ್ನು ಹಾಕುತ್ತವೆ ಈ ಯಾವ ಕ್ರಿಯೆಗೂ ಹೆಣ್ಣು ಗಂಡಿನ ಸಂತನೋತ್ಪತ್ತಿ ಕ್ರಿಯೆಯಿಲ್ಲದೆ ಇವುಗಳ ಹುಟ್ಟು ಸಾಧ್ಯವಿಲ್ಲವೆಂಬುದು ಪ್ರಕೃತಿಯ ಸಹಜವಾದ ತತ್ವಿಕ ಗುಣ. ಮರಿ ಹಾಕುವ ಪ್ರಾಣಿಗಳ ಜಾತಿಗೆ ಮಾನವನು ಸೇರಿದ್ದಾನೆ. ಎಲ್ಲಾ ಪ್ರಾಣಿ, ಪಕ್ಷಿಗಳಿಗೂ ಋತುಮಾನಕ್ಕನುಗುಣವಾಗಿ ಸಂತಾನೋತ್ಪತ್ತಿ ಕಾರ್ಯನೆಡೆದರೆ, ಮಾನವನಿಗೆ ಮಾತ್ರ ಸರ್ವ ಋತುಮಾನಗಳಲ್ಲೂ ಅವನಿಗೆ ಸಂತಾನೋತ್ಪತ್ತಿ ಮಾಡುವ ಚಟುವಟಿಕೆಯನ್ನು ಪ್ರಕೃತಿ ನೀಡಿರುವ ವಿಶೇಷ ಕಾಣಿಕೆ. ಇವೆಲ್ಲಾ ಜೀವಿಗಳಿಗೆ ಸ್ವಾಭಾವಿಕವಾಗಿ ಪ್ರಕೃತಿಯಿಂದ ರೂಪುಗೊಂಡಿರುವ ತಾತ್ವಿಕ ನಿಯಮಗಳು.

3). ರೂಪಾಂತರ ಜೀವಿಗಳು (ಒಂದು ಜೀವಿಯಾಗಿ ಹುಟ್ಟಿ ನಂತರ ಇನ್ನೊಂದು ಜೀವಿಯಾಗಿ ಬದಲಾಗುವ (ರೂಪಾಂತರವಾಗುವ) ವ್ಯವಸ್ಥೆ):

ಪ್ರಕೃತಿಯ ಈ ಸೃಷ್ಟಿ ಪ್ರಕ್ರಿಯೆಯ ವ್ಯವಸ್ಥೆಯಲ್ಲಿ ರೂಪಾಂತರ ಜೀವಿಗಳ ಹುಟ್ಟು ಮತ್ತು ಬೆಳವಣಿಗೆಗಳೆ ವಿಸ್ಮಯವಾದುದ್ದು. ಯಾಕೆಂದರೆ ನಮ್ಮ ಕಣ್ಣೆದುರೆ ಹುಟ್ಟಿ ಬೆಳೆದ ಜೀವಿ ಸ್ವಲ್ಪ ಸಮಯದ ನಂತರ ಇನ್ನೊಂದು ಜೀವಿಯಾಗಿ ರೂಪಾಂತರವಾಗುವ ಗುಣವೇ ವಿಶಿಷ್ಟವಾದುದ್ದು. ಅಂತಹ ಜೀವಿಗಳಲ್ಲಿ ಹೆಚ್ಚಾಗಿ ಎಲ್ಲರಿಗೂ ತಿಳಿದಿರುವ ಜೀವಿ ಎಂದರೆ 'ಕಂಬಳಿ ಹುಳು'. ಇದು ಚಿಟ್ಟೆಯಾಗಿ ರೂಪಾಂತರಗೊಳ್ಳುವುದು ನೋಡಿದವರ ಗಮನ ಸೆಳೆದಿದೆ. ಅದೇ ರೀತಿ 'ಕೊಡತಿ ಹುಳು' ತನ್ನ ಅಪ್ಸರೆ ರೂಪದಿಂದ ವಯಸ್ಕ ರೂಪಕ್ಕೆ ರೂಪಾಂತರ ಹೊಂದುತ್ತದೆ. ಇಂತಹ ಕೆಲಸ ಕೆಲವು ಹುಳುಗಳಲ್ಲಿ ನಿಧಾನವಾಗಿ ಮತ್ತೆ ಕೆಲವಲ್ಲಿ ವೇಗವಾಗಿ ಜರುಗುತ್ತವೆ. ಇಂತಹ ದೃಷ್ಟಾಂತಗಳು ಕೀಟ ಜಗತ್ತಿನಲ್ಲಿ ಹೆಚ್ಚಾಗಿವೆ. ಅಂದರೆ ಜಿರಲೆ, ಮಿಡತೆಯಂತಹ ಅದಿಮ ಕೀಟಗಳಲ್ಲಿ ನಿಧಾನವಾಗಿ ಜರುಗುತ್ತದೆ. ಈ ರೂಪಾಂತರವೆಂದರೆ, ಡಿಎನ್‌ಎ ಅನುಕ್ರಮವು ಪ್ರತಿ ಜೀವಿಗೆ ನಿರ್ದಿಷ್ಟವಾಗಿರುತ್ತದೆ. ಇದು ಕೆಲವೊಮ್ಮೆ ಅದರ ಮೂಲ ಜೋಡಿಗಳ ಅನುಕ್ರಮದಲ್ಲಿ ಬದಲಾವಣೆಗೆ ಒಳಗಾಗ ಬಹುದು. ಇದನ್ನು ರೂಪಾಂತರವೆಂದು ಕರೆಯಲಾಗುತ್ತದೆ. ಜೀವಕೋಶದ ಜೀನ್‌ಗಳು ಅಥವಾ ಕ್ರೋಮೋಸೋಮ್‌ಗಳಲ್ಲಿನ ಬದಲಾವಣೆ. ಗ್ಯಾಮೆಟ್‌ಗಳಲ್ಲಿನ ಈ ಬದಲಾವಣೆಯು ಸಂತತಿಯ ಬೆಳವಣಿಗೆ ಮತ್ತು ರಚನೆಯ ಮೇಲೆ ಪರಿಣಾಮ ಬೀರಬಹುದು. ಜೀವಶಾಸ್ತ್ರದಲ್ಲಿ ರೂಪಾಂತರವು 'ವೈರಸ್, ಎಕ್ಸ್‌ಟ್ರಾಕ್ರೋಮೋಸೋಮಲ್ ಡಿಎನ್‌ಎ ಅಥವಾ ಜೀವಿಗಳ ಜೀನೋಮ್‌ನ ನ್ಯೂಕ್ಲಿಯಿಕ್ ಆಸಿಡ್ ಅನುಕ್ರಮದ ಮಾರ್ಪಾಡು' ಎಂದು ಗುರುತಿಸಲಾಗಿದೆ. ಈ ಎಲ್ಲಾ ವೈಜ್ಞಾನಿಕ ಹಿನ್ನೆಲೆಯಿಂದ ಕೆಲವು ಜೀವಿಗಳು ರೂಪಾಂತರ ಕ್ರಿಯೆಗೆ ಒಳಗಾಗುತ್ತವೆ.

4). ಪುನರ್ಜನ್ಮ: (ಜೀವಿಗಳು ಸತ್ತ ಮೇಲೆ ಅದೇ ಜೀವಿಯಾಗಿ ಮತ್ತೆ ಹುಟ್ಟುವುದು):

ಪುನರ್ಜನ್ಮ ಎನ್ನುವುದು ಕೇವಲ ಮಾನವನಿಗೆ ಮಾತ್ರ. ಇನ್ನುಳಿದ ಯಾವ ಜೀವಿಗಳಿಗೂ ಈ ಪರಿಕಲ್ಪನೆಯ ತತ್ವವನ್ನು ಬಿತ್ತಿಲ್ಲ. ಮಾನವ ತಪ್ಪು ಮಾಡಿ ಪಾಪದ ಕೆಲಸ ಮಾಡಿದರೆ ತಿರಸ್ಕೃತ ಪ್ರಾಣಿಗಳಾಗಿ ಹುಟ್ಟಿ, ಹಿಸೆಗೊಳಪಟ್ಟು, ಸಾಯುತ್ತಾನೆ ಎಂದು ಹೆದರಿಸುವುದಕ್ಕಾಗೆ ಬಳಸಿಕೊಂಡ ಪದವಾಗಿ ಪುನರ್ಜನ್ಮ ಬಳಕೆಯಾಗಿದೆ. ಅದರಲ್ಲೂ ಪುರಾಣ, ಧರ್ಮ ಕಥೆಗಳಲ್ಲಿ ಅಂದರೆ ಒಮ್ಮೆ ಹುಟ್ಟಿದ ಜೀವಿಗಳು ಸತ್ತಮೇಲೆ ಮತ್ತೆ ಅದೇ ಜೀವಿಗಳಾಗಿ ಹುಟ್ಟುತ್ತವಾ? ಎಂಬ ಪ್ರಶ್ನೆ ತುಂಬಾ ವರ್ಷಗಳಿಂದ ಧರ್ಮಪ್ರವರ್ತಕರಿಂದ, ತತ್ವಜ್ಞಾನಿಗಳಿಂದ, ವೈದಿಕ ಮತ್ತು ಜೈನ ಪುರಾಣ ಕಥೆ, ಸಾಹಿತ್ಯ ಮುಂತಾದ ಜ್ಞಾನಶಾಖೆಗಳಿಂದ

ಚರ್ಚೆನಡೆಯುತ್ತಾ ಬಂದಿದೆ. ಪುನರ್ಜನ್ಮವನ್ನು ಪುರಾಣಗಳು ಪ್ರತಿಪಾದಿಸಿದರೆ, ವೈಚಾರಿಕರು, ವಿಜ್ಞಾನ ಮತ್ತು ವೈಜ್ಞಾನಿಕ ಚಿಂತಕರು ಇದನ್ನು ವಿರೋಧಿಸಿದ್ದಾರೆ. ಪ್ರಕೃತಿಯ ಜೀವರಾಶಿಗಳಲ್ಲಿ ಒಂದು ಜೀವಿ, ಒಂದು ಸಾರಿ, ಒಂದು ರೀತಿಯ ಜೀವಿಯಾಗಿ ಹುಟ್ಟಿದ ಮೇಲೆ ಅದು ಭೂಮಿಯಲ್ಲಿ ಜೀವನ ಕಳೆದು ಸಾವನ್ನಪ್ಪುತ್ತದೆ, ಸತ್ತ ಜೀವಿಯು ಮತ್ತೆ ಅದೇ ಜೀವಿಯಾಗಿ ಹುಟ್ಟಿಬರುವುದನ್ನು ಪುನರ್ಜನ್ಮ ಎನ್ನಲಾಗಿದೆ. ಆದರೆ ಇದು ಸಾಧ್ಯವೆ? ಎಂಬಾ ವಾದವಿದೆ. ಇದ್ದರೆ, ಇದು ಪ್ರಕೃತಿ ನೀತಿ, ನಿಯಮ, ತತ್ವಗಳನ್ನು ಶೋಧಿಸಿ ನೋಡಿದರೆ ಪುನರ್ಜನ್ಮ ಎನ್ನುವುದು ಸಾಧ್ಯವಿಲ್ಲ. ಇದ್ದರೆ ಪ್ರಕೃತಿಯಲ್ಲಿ ಈಗಿರುವ ಜೀವಿಗಳ ವೈವಿದ್ಯತೆ ಇರುತ್ತಿರಲಿಲ್ಲ. ಏಕೆಂದರೆ ಒಮ್ಮೆ ಹುಟ್ಟಿದ ಜೀವಿಗಳು ಮತ್ತೆ ಮತ್ತೆ ಹುಟ್ಟುತ್ತಿದ್ದರೆ ಪ್ರಕೃತಿಯ ಭೂಮಿಗೆ ಭಾರವಾಗಿ, ಒಂದೇ ರೀತಿಯ ಜೀವಿಗಳ ಹುಟ್ಟಾಗಿ, ಪ್ರಕೃತಿ ಭೂಮಿಯ ಕ್ರಿಯಾಶೀಲತೆಯನ್ನು ಕಳೆದುಕೊಳ್ಳುತ್ತಿತ್ತು. ಯಾಕೆಂದರೆ ಯಾವುದೇ ಸೃಜನಶೀಲ ಸೃಷ್ಟಿ ಕ್ರಿಯೆಗೆ ಮತ್ತು ಸೃಷ್ಟಿಯಾದ ಜೀವಕ್ಕೆ ಒಂದೆ ಆಹಾರ, ಬಣ್ಣ, ವಾಸನೆ, ಕೆಲಸ, ಗುಣ.... ಇತ್ಯಾದಿಗಳು ಒಗ್ಗುವುದಿಲ್ಲ, ಏಕೆಂದರೆ, ವಿವಿಧತೆಯ ಐಕ್ಯತೆಗೊಳ್ಳುವ ಗುಣವೆ ಜೀವಿಗಳ, ಪ್ರಕೃತಿ–ಭೂಮಿಯ ಸಹಜ ಗುಣವಾಗಿದೆ. ಇದು ಇರದಿದ್ದರೆ ಅದು ಅದರ ವಿನಾಶದ ಲಕ್ಷಣ. ಹಾಗಾಗಿ ಇದು ಪ್ರಕೃತಿಗೂ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಹಾಗಾಗೆ ಒಮ್ಮೆ ಹುಟ್ಟಿ ಸತ್ತ ಜೀವಿಗಳು ಮತ್ತೆ ಅದೇ ಜೀವಿಯಾಗಿ ಪುನರ್ಜನ್ಮ ಪಡೆಯುವುದಿಲ್ಲವೆಂಬುದು ಅಪ್ಪಟ ಸತ್ಯ. ಇಂತಹ ಸತ್ಯವಿದ್ದರೂ ಕ್ರೈಸ್ತ ಮತ್ತು ಮುಸ್ಲಿಂ ಧರ್ಮ ತತ್ವಗಳು ದೇವರಿಗೆ ಪುನರ್ಜನ್ಮವನ್ನು ಕಲ್ಪಿಸಿ, ದೇವರ ಅಸ್ತಿತ್ವವನ್ನು ನಂಬಿಸಿ, ಧರ್ಮ ಕಟ್ಟಲಾಗಿದೆ. ಈ ಹಿನ್ನೆಲೆಯಿಂದ ಇವುಗಳು ಪದ್ಯಬರೆದಂತೆ ಮಹಾಹಾವ್ಯಗಳನ್ನು ಬರೆಯಲಾಗಿಲ್ಲ. ಆದರೆ ಭಾರತದಲ್ಲಿ ದ್ರಾವಿಡ ಮೂಲ ನಿವಾಸಿಗಳ ಜನಪದ ಕಥೆ, ಪುರಾಣ, ಅನುಭವ ತತ್ವಗಳನ್ನು; ವೈದಿಕರು ಹಿಂದೂ ಹೆಸರಲ್ಲಿ ವೈದಿಕ ಪುರಾಣಗಳು, ರಾಮಾಯಣ, ಮಹಾಭಾರತ ಮತ್ತು ಅವುಗಳ ಉಪಕಥೆಗಳು, ವೇದ, ಉಪನಿಷತ್ತು, ಭಗವದ್ಗೀತೆ ಮುಂತಾದವುಗಳನ್ನು ಸಂಸ್ಕೃತದಲ್ಲಿ ಪುನರ್ ಸೃಷ್ಟಿಸಿ, ವೈದಿಕೀಕರಣ ಗೊಳಿಸಲ್ಪಟ್ಟಿದೆ. ಇವುಗಳನ್ನೆ ಆಧಾರ ಮಾಡಿಕೊಂಡ ಜೈನರು, ತಮ್ಮ ಜೈನ ತತ್ವಗಳನ್ನು ಈ ವೈದಿಕ ಕಥೆ, ಪುರಾಣ, ಕಾವ್ಯ, ತತ್ವಗಳನ್ನು ಮುರಿದು ಕಟ್ಟಿವೆ. ಹಾಗಾಗಿ ಇವೆರಡು ಪರಸ್ಪರ ಒಂದೆ ಕಥಾ ಹಂದರವನ್ನಿಟ್ಟುಕೊಂಡು ಬೆಳೆದಿವೆ. ವೈದಿಕರು ತಮ್ಮ ಹಿಂದೂವಾದಕ್ಕೆ ಹಿಂಸಾವಾದಿ ಮಾರ್ಗ ತತ್ವಗಳನ್ನು ಅನುಸರಿಸಿದರೆ; ಜೈನರು ತಮ್ಮ ಅಹಿಂಸಾ ತತ್ವಕ್ಕೆ ವೈದಿಕರ ಕಥೆ, ಕಾವ್ಯ, ಪುರಾಣಗಳನ್ನೆ ಬಳಸಿಕೊಂಡು ಪ್ರತಿಪಾದಿಸಿದ್ದಾರೆ. ಇವುಗಳಲ್ಲೆಲ್ಲಾ ದೇವರು ಮತ್ತು ಮಾನವರ ಪುನರ್ಜನ್ಮದ ಕಥೆ ಮತ್ತು ಘಟನೆಗಳೆ ತುಂಬಿವೆ. ವೈದಿಕರ ಪುರಾಣ ಕಾವ್ಯಗಳಲ್ಲಿ ಬ್ರಾಹ್ಮಣ, ಸುರ–ದೇವತೆಗಳಾಗಿ, ಪ್ರಾಣಿಗಳ ಜನ್ಮ ತಾಳಿ, ಅವತಾರಿಗಳಾಗಿ (ದಶಾವತಾರ ತಾಳಿ) 'ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ' ಎಂಬ ತತ್ವದ ಮೇಲೆ ಭಾರತೀಯ ದ್ರಾವಿಡ, ಮೂಲನಿವಾಸಿ, ಬುಡಕಟ್ಟು ಮಾನವರನ್ನು ರಾಕ್ಷಸರನ್ನಾಗಿ, ದುಷ್ಟರನ್ನಾಗಿ ಚಿತ್ರಿಸಿ ಅವರನ್ನು ಕೊಲೆ ಮಾಡಲಾಗಿದೆ. ಅದಕ್ಕೆ ದೇವರು, ಋಷಿಗಳ ಶಾಪವನ್ನು ಆರೋಪಿಸಲಾಗಿದೆ. ಆ ಮೂಲಕ ದ್ರಾವಿಡ ರಾಜ ಮತ್ತು ಬ್ರಾಹ್ಮಣ ಪಾತ್ರಗಳು ಮತ್ತೆ ಅದೇ ಇನ್ನೊಂದು ಜನ್ಮದ ಶೂದ್ರ ಭಕ್ತನಾಗಿ ಮತ್ತು ದೇವರು, ಋಷಿಗಳಾಗಿ, ಮಾನವ ಜನ್ಮ ತಾಳಿ, ಶಾಪ ಪರಿಹಾರ ಮಾಡಿಕೊಂಡು ಮೂರನೆ ಜನ್ಮಕ್ಕೆ ದೇವರ ಸನ್ನಿದಿ ಅಂದರೆ ಬ್ರಾಹ್ಮಣರ ಜೊತೆ ಸೇರಿ ಅವರ ಭಕ್ತನಾಗಿರುವಂತೆ ಕಥೆ ಕಟ್ಟಲಾಗಿದೆ. ಇದು ಭಾರತೀಯ ಮೂಲನಿವಾಸಿ ಪುರುಷರ ಚರಿತ್ರೆಯಾಗಿದೆ.

ಈ ಸಮುದಾಯಗಳ ಸ್ತ್ರೀಯರ ಚರಿತ್ರೆ ದುರಂತ ಕಥೆಗಳಾಗಿ ರೂಪುಗೊಂಡಿವೆ. ಅಂದರೆ ವೈದಿಕ ಆರ್ಯರು ಅಫ್ಘಾನಿಸ್ಥಾನದ ಕಡೆಯಿಂದ ಧನ ಕರುಗಳನ್ನು ಹಿಡಿದು ಅಲೆಯುತ್ತಾ ಬೇರೆ ಬೇರೆ ದೇಶದ ಕಡೆ ವಲಸೆ ಬಂದವರು ಅವರ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಬಂದವರಲ್ಲ. ಎಂಬುದನ್ನು ಈಗಾಗಲೇ ಚರಿತ್ರೆ ಸಾರಿದೆ. ಹಾಗಿದ್ದ ಮೇಲೆ ಗಂಡಸರಾಗಿ ಬಂದ ಆರ್ಯರು ಇಲ್ಲಿಯ ಪ್ರಾಕೃತಿಕ ಪರಿಸರಕ್ಕೆ ಅನುಗುಣವಾಗಿ ದೈಹಿಕ ಮತ್ತು ಮಾನಸಿಕ ಬದಲಾವಣೆಗೆ ಅನುಗುಣವಾಗಿ ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ವಾಸಮಾಡುತ್ತಿದ್ದ ಆ ಜನಗಳು ಅವರ ದೈಹಿಕ ಚಪಲ ತೀರಿಸಿಕೊಳ್ಳಲು ಸ್ತ್ರೀಯರ ಅಗತ್ಯವಿತ್ತು. ಭಾರತೀಯ ಮೂಲನಿವಾಸಿ, ದ್ರಾವಿಡರಾದ ಬುಡಕಟ್ಟು ಸಮುದಾಯದ ಹೆಣ್ಣುಮಕ್ಕಳನ್ನು ಬಳಸಿಕೊಂಡಿದ್ದಾರೆ. ಇಂತಹ ಘಟನೆಗಳೆ ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ಬರುವ ಸ್ತ್ರೀ ಪಾತ್ರಗಳು. ದಶರತನ ಹೆಂಡತಿಯರಾದ ಕೌಶಲ್ಯೆ, ಸುಮಿತ್ರೆ, ಕೈಕೆಯಿ. ಮಹಾಭಾರತದ ಕಾವ್ಯದ ದೃತರಾಷ್ಟ್ರನ ಮಡದಿ ಗಾಂಧಾರಿ, ಪಾಂಡುರಾಜನ ಮಡದಿಯರು ಕುಂತಿ ಮತ್ತು ಮಾದ್ರಿ ನಿಯೋಗ ಪದ್ದತಿಗೆ ಒಳಪಟ್ಟವರು. ಇದು ಒಂದು ರೀತಿ ಬಾಡಿಗೆ ತಾಯಂದಿರ ಪಾತ್ರ ನಿರ್ವಾಹಿಸಿದವರು ಇವರೆಲ್ಲಾ. ಇಂತಹ ಪದ್ದತಿಗೆ ಒಳಪಟ್ಟವರು. ವೇದವ್ಯಾಸ, ಅಗಸ್ತ್ಯೆ ಮುಂತಾದ ಋಷಿ ಮುನಿಗಳು. ಪುತ್ರಕಾಮೇಷ್ಟಿ ಯಾಗ ಮಾಡುವುದರಿಂದ ರಾಜನ

ಹೆಂಡತಿಯರನ್ನೆ ತಮ್ಮ ಕಾಮದ ತೀಟೆ ತೀರಿಸಿಕೊಳ್ಳಲು ಬಳಸಿಕೊಳ್ಳುವ ತಂತ್ರವನ್ನು ರಾಜರಿಗೆ ಮಕ್ಕಳಿಲ್ಲದ ಕಾರಣ ಕೊಟ್ಟು, ಮಕ್ಕಳ ಹೆಸರಲ್ಲಿ ರಾಜರ ಹೆಂಡತಿಯರೊಂದಿಗೆ ಕೂಡುವ ನಿಯಮ ಮಾಡಿಸಿಕೊಂಡು, ಆರೋಪಕ್ಕೆ ಒಳಪಡದೆ, ಆ ಕಾಲದ ಸ್ತ್ರೀಯರನ್ನು ಬಳಸಿಕೊಂಡಿದ್ದಾರೆ. ಇಂತಹ ಸಂಬಂಧದ ದಾಖಲೆಗಳು ಪುರಾಣ, ಕಥೆ, ಮತ್ತು ಮಹಾಕಾವ್ಯ ಸಾಹಿತ್ಯಗಳಲ್ಲಿ ದಟ್ಟವಾಗಿ ಸಿಗುತ್ತವೆ.

ಬ್ರಾಹ್ಮಣ ವೈದಿಕರು ತಮ್ಮ ಜಾತಿಯಲ್ಲದ ದ್ರಾವಿಡ ಹೆಣ್ಣು ಮಕ್ಕಳನ್ನು ತಮ್ಮ ದೇಹಸುಖಕ್ಕೆ ಬಳಸಿಕೊಂಡದ್ದರಿಂದ; ಆ ಹೆಣ್ಣು ಮಕ್ಕಳನ್ನು ತಮ್ಮ ಪೂಜೆ ಪುರಸ್ಕಾರದಿಂದ ದೂರವಿಟ್ಟು, ಕೌಟುಂಬಿಕ ಹೊರಕಾರ್ಯಗಳಿಂದ ದೂರವಿಟ್ಟು, ಜೀತದ ಆಳಂತೆ ಕುಟುಂಬ ಸೇವಕಿ ಮಾಡಲಾಗಿತ್ತು. ಇದಕ್ಕೆಲ್ಲಾ ಅವರ ಪುರಾಣ ಕಾವ್ಯಗಳೇ ಇಂದಿಗೂ ಅವಳಿಗೆ ಸ್ವಾತಂತ್ರ್ಯ ನೀಡದೆ ಬಂದಿರುವುದರ ದಾಖಲೆ ನೀಡುತ್ತವೆ.. ಹಾಗಾಗಿ ಈ ದೇಶದ ಮೊದಲ ಶೋಷಿತ ಶೂದ್ರಳನ್ನಾಗಿ ಮಾಡಿದ್ದು, ಈ ವೈದಿಕರ ಮನೆಯಲ್ಲಿ. ಈ ಹಿನ್ನೆಲೆ ಮತ್ತು ಕಾರಣಗಳಿಂದ ವೈದಿಕ ಪುರುಷ ಪ್ರಧಾನ ಕುಟುಂಬಗಳಲ್ಲಿ ಮೊದಲು ಶೂದ್ರಳಾಗಿ ಶೋಷಣೆಗೆ ಒಳಪಟ್ಟವಳೆ ಆ ಮನೆಯ ಹೆಣ್ಣು ಸಂತತಿ. ನಂತರ ದ್ರಾವಿಡ ಮತ್ತಿತರ ಸಮುದಾಯಗಳನ್ನು ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮರೆಂದು ಒಡೆದು, ವಿಭಾಗಿಸಿ ಒಟ್ಟಿಗಿದ್ದ ಭಾರತೀಯ ಸಮುದಾಯಗಳ ಸಾಮಾಜಿಕ ಗೌರವದ ಮನಸ್ಸನ್ನು ದುರ್ಬಲಗೊಳಿಸಿ, ಕೀಳರಿಮೆ ಸೃಷ್ಟಿಸಿದರು. ಇಲ್ಲಿಂದ ಸೃಷ್ಟಿಯ ಸಂಕೇತವಾಗಿ ಹೆಣ್ಣನ್ನು ಕಂಡು ಅವಳನ್ನು ದೇಶಕ್ಕೆ, ಭೂಮಿಗೆ, ಪ್ರಕೃತಿಗೆ ಹೊಲಿಸಿಕೊಂಡು ಬರಲಾಗಿದೆ. ಹಾಗಾಗಿ ಆದಿಶಕ್ತಿ ದೇವತೆಯನ್ನಾಗಿಯು ಕಂಡು, ಬರೆದು, ಆಚರಣೆಗೆ ತಂದು, ಅವಳನ್ನು ಪ್ರತಿಭಟಿಸದಂತೆ ಮಾನಸಿಕವಾಗಿ ವೈಭವಿಕರಿಸಿ ಮುದುಡಿಸಲಾಗಿದೆ. ಇದು ಪುರುಷ ಪ್ರಧಾನ ವ್ಯವಸ್ಥೆಯ ತಂತ್ರವಾಗಿದೆ. ಇದು ಎಲ್ಲಾ ದೇಶ ಮತ್ತು ಧರ್ಮಗಳಲ್ಲೂ ರೂಢಿಗೆ ತಂದು ಸಾವಿರಾರು ವರ್ಷಗಳಿಂದ ಚಾಲನೆಯಲ್ಲಿರುವುದರಿಂದ ಮೂಲ ದ್ರಾವಿಡ ಮಾತೃ ಪ್ರಧಾನ ಸಂಸ್ಕೃತಿ ದೂರವಾಗಿ, ಈಗ ಪಿತೃ ಪ್ರಧಾನ ಸಂಸ್ಕೃತಿ ಚಾಲನೆಯಲ್ಲಿದೆ. ಇದರ ಪ್ರತಿಭಟನೆಗೆ ಈಗ ಮಹಿಳಾ ವಾದ ಕಳೆದ ಮೂಲ ಚಾರಿತ್ರಿಕ, ಪೌರಾಣಿಕ ಚರ್ಚೆಗೆ ಹೋಗದೆ, ಕೇವಲ ವರ್ತಮಾನದ ಘಟನೆಗಳ ಆಧಾರದ ಮೇಲೆ ಧ್ವನಿ ಎತ್ತುತ್ತಿರುವುದು ಅಲ್ಲಾಲ್ಲೆ ಕೇಳಿಬರುತ್ತಿದೆ.

ಮಾನವ ಮಾಡಿಕೊಂಡಿರುವ ಸೃಷ್ಟಿಯ ಸಂತಾನೋತ್ಪತ್ತಿ ಕ್ರಿಯೆಯನ್ನು ಅವನಿಗೆ ಅನುಕೂಲವಾಗುವಂತೆ ಮಾನವ ಕೇಂದ್ರಿತ ನೆಲೆಯಲ್ಲೆ ಬದಲಾವಣೆ ಮಾಡಿಕೊಂಡು ಬದುಕುತ್ತಾ ಬಂದಿದ್ದಾನೆ. ಮೇಲೆ ಚರ್ಚಿಸಿದ ಪುನರ್ಜನ್ಮದ ಮೂಲ ನೆಲೆ ಮಾನವರಲ್ಲಿ ಸೃಷ್ಟಿಯ ನೆಲೆ ಹೆಣ್ಣೆ ಆಗಿರುವುದರಿಂದ ಆ ಮಾದರಿಯ ಗುಣ; ಭೂಮಿ, ಪ್ರಕೃತಿಗೂ ಇರುವುದರಿಂದ ಈ ಮೂರನ್ನು ಸೃಷ್ಟಿಯ ಸ್ವರೂಪಿ, ಸ್ತ್ರೀರೂಪಿಯಾಗಿ ಬೆಳೆದು ಬಂದಿದೆ. ಅದರ ತಾತ್ವಿಕ ನಿಯಮವೇ ಮಾನವ ಮಾಡಿಕೊಂಡಿರುವ ನೀತಿ, ನಿಯಮಕ್ಕಿಂತ ಬಿನ್ನವಾಗಿದೆ.

5) ಪುನರ್ಭವ ಆಗುವ ಜೀವಿಗಳು (ಜೀವಿಗಳ ಸಾವಿನ ಕೊನೆಯ ಮನದ ನೆನಪಿನ ಜೀವಕ್ಕೆ ಬದಲಾವಣೆ ಹೊಂದುವುದು)

ವೈದಿಕ ಪುರೋಹಿತರ ತತ್ವ–ಚಿಂತನೆಯ ರೂಢಿಯಲ್ಲಿ ಚರ್ಚಿಸಿದ ಮಾತುಗಳು ಪುನರ್ಜನ್ಮ, ಆತ್ಮ, ಪಾಪ–ಪುಣ್ಯ, ಮುಕ್ತಿ ಮುಂತಾದವು. ಇವುಗಳನ್ನು ಬುದ್ದನು ತಾನು ಕಂಡ ಪ್ರಕೃತಿಯ ತತ್ವ ದರ್ಶನದ ಸತ್ಯವನ್ನು ಜನಮನಕ್ಕೆ ಮನವರಿಕೆ ಮಾಡುತ್ತಾ ಸಾಗಿ ಬಂದ ದಾರಿ ವಿಶಾಲವಾದುದ್ದು. ಈ ಹಿನ್ನೆಲೆಯಿಂದಲೇ ಅವನು ಜಗತ್ತಿನ ಮೌಢ್ಯ ಚಿಂತನೆಗಳನ್ನು ಪರಿಶೀಲಿಸಿ, ವೈಜ್ಞಾನಿಕವಾಗಿ ಶೋಧಿಸಿ ತಾನು ಕಂಡ ಸತ್ಯವನ್ನು ಪ್ರತಿಪಾದಿಸಿದ್ದಾನೆ. ಅಂತಹ ಪ್ರಕೃತಿ ತತ್ವದ ವಿಷಯವೇ ಪುನರ್ಜನ್ಮಕ್ಕೆ ಪ್ರತಿಯಾಗಿ 'ಪುನರ್ಭವ' ಎಂದು ಆತ್ಮಕ್ಕೆ 'ಮನಸ್ಸು' ಎಂದು ಹೇಳಿರುವುದು. ವಿಜ್ಞಾನ ಬುದ್ದರ ಮಾತಿನ ಸತ್ಯವನ್ನು ಒಪ್ಪಿ ಅದರ ಸತ್ಯವನ್ನು ಪ್ರತಿಪಾದಿಸಿದೆ. ಆ ಹಿನ್ನೆಲೆಯಿಂದ ಪರಿಶೀಲಿಸಿ ಹೇಳುವ ಸಂಶೋಧನಾ ಸತ್ಯಾಧಾರದ ಮಾತುಗಳಿವು.

"ಜೀವ–ಜೀವಿಗಳ ನಡುವೆ ಮತ್ತು ಅವುಗಳ ಜೀವ–ಭಾವಗಳಿಂದ ನಡೆಯುವ ಕ್ರಿಯಾ ಚಟುವಟಿಕೆಯ ಅನುಭವಗಳಾದ ಜೀವನದ ನಡವಳಿಕೆಗಳಾಗಿರುತ್ತವೆ. ಇಂತಹ ಹೆಜ್ಜೆಗಳು ಆಕಸ್ಮಿಕ ಹಾಗೂ ಸಹಜವಾಗಿ ಸಂಭವಿಸುವುದು ಸಹಜ. ಹಾಗಾಗಿ ಈ ಪ್ರಾಕೃತಿಕ ಚಟುವಟಿಕೆಗಳ ಸೃಜನಶೀಲವಾದ ನಿಯಮಬದ್ಧವಾದ, ಸಕಲ ಜೀವಿಗಳಲ್ಲೂ ನೆಡೆಯುವ, ಎರಡು ಲಿಂಗ ಭೇದದ ಜೀವಿಗಳ ನಡುವೆ, ಸಂತನೋತ್ಪತ್ತಿ ಕ್ರಿಯೆ ಸಂಭವಿಸುತ್ತದೆ. ಆ ಕ್ರಿಯೆಯೊಳಗೆ ಈ ಎರಡು ಜೀವಿಗಳೊಳಗಿನ ಜೀವ–ಜೀವ ಅಂದರೆ ಸ್ಪರ್ಮ್–ಅಣುಗಳ ಕ್ರಿಯಾ

ಚಟುವಟಿಕೆಯಲ್ಲಿ ರೂಪುಗೊಳ್ಳುವ, 'ಪ್ರಕೃತಿ ಜೀವಿಯ ಸೃಷ್ಟಿ' ಸಂಪ್ರದಾಯ ಎನ್ನುವುದು. ಇದರಲ್ಲಿ ಸಕಲ ಜೀವ–ಜೀವಿಗಳ ಸಮ ಮತ್ತು ವಿಭಿನ್ನ ವರ್ಗಗಳ ನಡುವೆ ಸಂಭವಿಸುವ ಸ್ವಾಭಾವಿಕ ಘಟನೆಗಳ ಕ್ರಿಯಾಗುಣವಿರುತ್ತದೆ. ಇಂತಹ ನಡವಳಿಕೆಗಳ ಸಹಬಂಧವೇ 'ಜೀವ ವೃತ್ತ'. ಇದು ಪ್ರಕೃತಿಯ ಚೌಕಟ್ಟೊಳಗೆ ಇರುವುದರಿಂದ ಪ್ರಕೃತಿ ಕೇಂದ್ರಿತ 'ಜೀವ ವ್ಯೂಹ'ವೆಂದು ಕರೆಯುವುದು. ಇದರಿಂದ ನಡೆಯುವ ಜೀವ, ಜೀವಿಗಳ ಭಾವನೆಯ ಮನೋಕಾರ್ಯವನ್ನೆ ಜೀವ ಶಕ್ತಿ ಎನ್ನುವುದು. ಸಸ್ಯ, ಕೀಟ, ಹಕ್ಕಿ–ಪಕ್ಷಿ, ಜಲಚರ, ವಾಯುಚರ, ಪ್ರಾಣಿ, ಮಾನವರುಗಳೊಳಗೆ ಒಂದಕ್ಕೊಂದು ಭಿನ್ನವಾದ ಸೃಷ್ಟಿ ಕ್ರಿಯಾ ಚಟುವಟಿಕೆಗಳಿಗೆ ಮೂಲ ಅವುಗಳ ಮನಸ್ಸುಗಳ ಕಾರ್ಯದಿಂದ ಸಂಭವಿಸುವುದು ಗಮನಾರ್ಹ ಸಂಗತಿ.

ಈ ಮನಸ್ಸಿನ ಕಾಣದ ಜೀವ ಶಕ್ತಿಯನ್ನು 'ಅಣು ಶಕ್ತಿ' ಎಂದೂ ಕರೆಯಬಹುದು. ಅಣುಗಳನ್ನೆ ವಿಜ್ಞಾನ 'ಪಾರ್ಟಿಕಲ್ಸ್' ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ಕಣಗಳೆಂದು ಕರೆಯುತ್ತದೆ. ಇವು ಕೆಲವೊಮ್ಮೆ ನಿಶ್ಕ್ರಿಯೆಗೊಳ್ಳತ್ತವೆ, ಎಲ್ಲಿಯವರೆಗೆ ಅಂದರೆ, ಅವುಗಳಿಗೆ ಆಧಾರ ಶಕ್ತಿಯಾಗಿ ಇನ್ನೊಂದು + ಅಥವಾ – ಅಣು ಸಿಗುವವರೆಗೆ ದೀರ್ಘಕಾಲಿಕವಾಗಿಯಾದರೂ ಕಾಯುತ್ತವೆ. ಸಿಕ್ಕಮೇಲೆ; ಧನಾತ್ಮಕವಾಗಿಯಾದರೂ ಸರಿ, ಋಣತ್ಮಾಕವಾಗಿಯಾದರೂ ಸರಿ, ಅವು ತಮಗೆ ತಾವೆ ರೂಪಾಂತರ ಕಾರ್ಯಕ್ಕೆ ತೊಡಗಿಕೊಂಡು ಬೆಳವಣಿಗೆಯಾಗುತ್ತವೆ. ಇವುಗಳಿಗೆ ಬೇರೆ ಜೀವಿಗಳಿಗಿರುವಂತೆ ಆಹಾರ, ನೀರು, ಗಾಳಿ, ಬೆಳಕು(ಬೆಂಕಿ) ಏನೂ ಬೇಕಾಗಿಲ್ಲ. ಸಿಕ್ಕರೂ ತಿರಸ್ಕರಿಸುವುದಿಲ್ಲ, ಅವುಗಳು ಎಲ್ಲಿ ಬೇಕೋ ಅಲ್ಲಿ, ಅಲ್ಲಿಯ ವಾತವರಣಕ್ಕೆ ಅನುಗುಣವಾಗಿ ತಟಸ್ಥ (ನಿಶ್ಕ್ರಿಯೆ) ವಾಗಿರುತ್ತವೆ, ಇಲ್ಲಾ ಚಟುವಟಿಕೆಯಲ್ಲಿರುತ್ತವೆ. ಇವುಗಳಿಗೆ ಸಾವಿಲ್ಲ, ಯಾವುದೇ ನಿಶ್ಚಿತವಾದ ಸ್ಥಿರ ಕಾಲ, ರೂಪ, ಬಣ್ಣ, ಆಕಾರಗಳಿರುವುದಿಲ್ಲ. ಆದರೂ ಅವುಗಳಿಗೆ ಅವಕಾಶ ಸಿಕ್ಕಾಗ ಅವು ಎಲ್ಲಿದ್ದರೂ ಯಾವರೂಪವನ್ನಾದರೂ ತಾಳಿ ಅವುಗಳ ಕೆಲಸವನ್ನಾರಂಬಿಸುತ್ತವೆ. ಇವುಗಳ ಕೆಲಸ ಕಣ್ಣಿಗೆ ಕಾಣುವುದಿಲ್ಲ, ಇದು ಭೂಮಿ ಮತ್ತು ಆಕಾಶಗಳ ನಡುವೆ ಜೀವಿಗಳ ಮನದಲ್ಲಿ ನಡೆಯುವ ಮನೋವಿಸ್ಮಯ ಕಾರ್ಯಗಳು. ಇವುಗಳನ್ನು ಗಮನಿಸಿ, ಎದುರಿಸಿ, ಹೊಂದಾಣಿಕೆಯಲ್ಲಿ ಜೀವಿಸುತ್ತಿರುವ ಮಾನವ ಪ್ರಕೃತಿಯಲ್ಲಿ ನಡೆಯುತ್ತಿರುವ ಈ ಸ್ವಾಭಾವಿಕ ಚಟುವಟಿಕೆಗಳಾದ ಹುಟ್ಟು, ಸಾವುಗಳ ನಡುವಿನ ಜೀವನ ವೈರುದ್ಯಗಳ ವಿಸ್ಮಯವನ್ನು ಕಂಡು ಅವುಗಳನ್ನು ದೇವರು, ಪ್ರಕೃತಿ, ನಿಸರ್ಗ ನಿಯಮ ಹೀಗೆ ನಾನಾ ಪರಿಕಲ್ಪನೆಗಳಿಂದ ಕರೆಯುತ್ತಿದ್ದಾನೆ. ಇಂತಹ ಚಟುವಟಿಕೆಗಳ ಮೂಲ ಆಧಾರ ಶಕ್ತಿಯಾದ ಪಾರ್ಟಿಕಲ್ ಜೀವ ನಡೆಯನ್ನೆ **"ಜೀವ ಶಕ್ತಿ"** ಎಂದು ಈ ಚರ್ಚೆಯಿಂದ ಗುರುತಿಸಲಾಗಿದೆ. ಇವುಗಳಿಂದಲೇ ಜಗತ್ತಿನ ಸಕಲ ಘನ, ದ್ರವ, ಅನಿಲಗಳೊಳಗಿನ ಜೀವಿಗಳ ರೂಪಾಂತರ ಪ್ರಕ್ರಿಯೆ ಅಂದರೆ; ಕಾಲ, ಹುಟ್ಟು, ಜೀವನ, ಸಾವುಗಳು ಚಲನಶೀಲವಾಗಿರುವುದು.

ಪ್ರಕೃತಿಯ ಎಲ್ಲಾ ಜೀವಿಗಳಲ್ಲೂ ಅವುಗಳ ದೇಹ ಮತ್ತು ಮನಸ್ಸಿನ ಕ್ರಿಯಾ ಚಟುವಟಿಕೆಗಳಾಗುತ್ತಾ, ತಮ್ಮ ತಮ್ಮ ಅನುಭವ ಪಡೆಯುತ್ತವೆ. ಆ ಅನುಭವಗಳು ದೃಶ್ಯಾತ್ಮಕವಾಗಿರುವುದಿಲ್ಲ. ಆದ್ದರಿಂದ ಇಂತಹ ದೃಶ್ಯಗಳನ್ನು ಕವಿ ಬೇಂದ್ರೆ ತಮ್ಮ ಪದ್ಯದ ಮೂಲಕ ಕಾಣುವ ದೃಶ್ಯವಿದು.

"ಜೀವನವು ವಿಷವಾದ ವಿಷಮ ಲೀಲೆ,
ಜೀವ ಕಲಹವ ಪ್ರಥಮ ಪಾಠಶಾಲೆ,
ಜೀವ ಜೀವಕೆ ಹರಣ, ಜೀವ ಮರಣ,
ಪ್ರಾಣಿ ಜೀವನವೊಂದು ಪ್ರಾಣ ಹರಣ"[5] (ಪ್ರಾಣಿ ಜೀವನ)

ಇಲ್ಲಿ ಮನುಷ್ಯನೇನು ಯಾವುದೇ ಜೀವಿಯ ಜೀವದ ಮೊದಲ ಹೋರಾಟ ಕಾರ್ಯ ನಡೆಯುವುದನ್ನು ಕವಿ ಪ್ರಥಮ ಪಾಠಶಾಲೆ ಎನ್ನುತ್ತಾರೆ. 'ಜೀವ ಜೀವಕೆ ಹರಣ, ಜೀವ ಮರಣ' ಎನ್ನುವುದರಲ್ಲಿ ಕವಿ ಜೀವಿ–ಜೀವಿಗಳ ಹೋರಾಟದ ಘರ್ಷಣೆಯ ಪರಿಣಾಮವನ್ನು ಹರಣ, ಮರಣವೆಂದು ಕರೆದಿದ್ದಾರೆ ಸರಿ. ಇದು ಹೊರ ಮುಖ, ಇವೆಲ್ಲಾ ಇದುವರೆಗೂ ಮಾನವ ಜನಾಂಗದಲ್ಲಿ ರೂಢಿಗತವಾಗಿ ನಂಬಿಕೊಂಡುಬಂದ ತಾತ್ವಿಕತೆಯ ಸಹಜ ಮಾತುಗಳಾಗಿವೆ ನಿಜ. ಆದರೆ ಇಲ್ಲಿ ಚರ್ಚೆಗೆ ಎತ್ತಿಕೊಂಡು ಪರಿಶೀಲಿಸುತ್ತಿರುವುದು ಸಕಲ ಜೀವಿಗಳಿಗೂ ಅನ್ವಹಿಸುತ್ತದೆ. ಈ ಪದ್ಯ ಅಂತರಂಗದ ಮನೋಭಾವಕ್ಕೆ ಹೊಲಿಸಿದರೆ, ಈ ಸಾಲುಗಳನ್ನು ವಿಜ್ಞಾನದ ಅರ್ಥಕ್ಕೆ

ಪರಿವರ್ತಿಸಿಕೊಳ್ಳಬೇಕಾಗಿದೆ. ಅದರ ಪ್ರಕಾರ ಜೀವ ಜೀವಕೆ ಹರಣವಾಗದು, ಮೇಲೆ ಹೇಳಿದಂತೆ ಘರ್ಷಣೆ, ಹೋರಾಟ ನಡೆಯುತ್ತದೆ. ಅವುಗಳ ಹರಣವಾಗಲಿ, ಮರಣವಾಗಲಿ ನಡೆಯದು. ಅದು ನಡೆಯುವುದು ಕೇವಲ ಜೀವದ ಜೀವಿಯ ದೇಹಕ್ಕೆ ಮಾತ್ರ, ಈ ಹರಣ, ಮರಣ ನಡೆಯುತ್ತದೆ. ಆದರೆ ಜೀವಿಯ ಮನದ ಜೀವ ಸಾವಾಗುವ ಸಂದರ್ಭದಲ್ಲಿ ಅದರ ಕೊನೆಯ ನೆನಪು; ಜೀವ, ಜೀವಿ ಅಥವಾ ಜೀವಿಯ ವಸ್ತುಗಳ ರೂಪಕ್ಕೆ ಕೊನೆಯಾದರೆ, ಆ ರೂಪದ ಮೂಲ ಜೀವಕ್ಕೆ ಬದಲಾವಣೆಯಾಗುತ್ತದೆ. ಇದನ್ನೆ 'ಪುನರ್ಭವ' ಎನ್ನುವುದು. ಇದು ಮನಸ್ಸಿನ ಕಾರ್ಯ. ಈ ಕಾರ್ಯ ಅಗೋಚರವಾದ್ದರಿಂದ ಅದನ್ನು ಆರಂಭದ ಹಂತದಲ್ಲಿ ಕಂಡುಕೊಂಡ ಜನರು 'ಆತ್ಮ', 'ಪ್ರಾಣ', 'ಜೀವ' ಎಂದೆಲ್ಲಾ ಪುರಾಣ, ಕಾವ್ಯ, ತತ್ವಜ್ಞಾನಗಳ ಚಿಂತಕರಾದ ಮಾನವರು ಪರಿಭಾವಿಸಿದ್ದಾರೆ. ಇದು ಜೀವಾಣುಗಳ ಕಾರ್ಯವಾದ್ದರಿಂದ ಇದನ್ನು 'ಜೀವ'ವೆಂದು ಕರೆಯಲಾಗಿದೆ. ಇದಕ್ಕೆ ಎಂದೂ ಸಾವಿರದು ಎಂಬುದನ್ನು ಮರೆಯಬಾರದು. ಏಕೆಂದರೆ ಈ ಆತ್ಮ, ಪ್ರಾಣ, ಜೀವವೆಂದು ಕರೆಯುವವೆಲ್ಲವೂ ಕಾಣುವುದಿಲ್ಲ. ಹಾಗಾಗಿ ಈ ಪದಗಳಿಂದ ಗುರುತಿಸಿ ಕರೆಯಲಾಗಿದೆ. ಇದು ವಿಜ್ಞಾನದ ವಿಷಯಗಳನ್ನು ಸಾಹಿತ್ಯ ಅಭಿವ್ಯಕ್ತಿಗೊಳಿಸುವ ಕ್ರಮ ಎಂಬುದನ್ನು ಗಮನಿಸಬೇಕು. ಅಂದರೆ, ಯಾವುದೆ ಜೀವಿಗಳಲ್ಲಿ ಕಾಣದಿರುವ ಅಂಗ ಯಾವುದು? ಕಾಣದಿದ್ದರೂ ಅದು ಮಾಡುವ ಕಾರ್ಯ ಯಾವುದು? ಎಂದು ಪ್ರಶ್ನೆ ಮಾಡಿಕೊಂಡರೆ ಉತ್ತರ ಕಷ್ಟವೆನಿಸಿದರೂ ಸುಲಭ. ಯಾಕೆಂದರೆ ಪ್ರತಿ ಜೀವಿಗಳ ಕ್ರಿಯಾ ಚಟುವಟಿಕೆಗಳಿಗೆ ಮನಸ್ಸಿಲ್ಲದೆ ನೆಡೆಯುವ ಕಾರ್ಯವಿಲ್ಲ. ಈ ಸತ್ಯ ಅರಿವಾದ ಮೇಲೆ, ಅದು ಪ್ರತಿ ಜೀವಿಗಳಲ್ಲೂ ಕಾಣದ ಅಂಗವೆಂದರೆ ಅದೇ 'ಮನಸ್ಸು' ಹಾಗಾಗಿ ಆ ಮನಸ್ಸಿಗೆ ಸಾವಿಲ್ಲ, ಅದು ಪ್ರತಿ ಜೀವಿಯು ಮರಣ ಹೊಂದಿದರೆ ಅದರ ದೇಹಕ್ಕೆ ಮರಣವೇ ಹೊರತು, ಅದರ ಮನಸ್ಸುಳ್ಳ ಜೀವ ಕಣಕ್ಕಲ್ಲಾ ಎಂಬ ಸತ್ಯ ಮನವರಿಕೆಯಾಗಬೇಕು. ಇದೇ ಪ್ರಕೃತಿಯ ವಿಸ್ಮಯ. ಇದನ್ನು ಅರಿತು ಬಿಡಿಸಿ ಹೇಳಲಾರದೆ, ಮಾನವರ ಚಿಂತನೆಯಲ್ಲಿ; ತತ್ವ, ಧರ್ಮ, ಪುರಾಣ, ಕಾವ್ಯ, ಕೃತಿಕಾರರು ಅದನ್ನು 'ಆತ್ಮ'ವೆಂದು ಕರೆದು ನಂತರ ಪುನರ್ಜನ್ಮದ ಪರಿಕಲ್ಪನೆಯನ್ನು ನೀಡಿದ್ದಾರೆ. ಇವರ ಈ ಪುನರ್ಜನ್ಮದ ಪರಿಕಲ್ಪನೆಯನ್ನು ಒಪ್ಪದ ಬುದ್ದ ಈ ವೈಜ್ಞಾನಿಕ ಸತ್ಯವನ್ನು ಅರಿತಿದ್ದರಿಂದ ಯಾವ ಜೀವಕ್ಕೂ ಮಾನವನಿಂದ ಅತಿ ಸೂಕ್ಷ್ಮ ಜೀವಿಗಳವರೆಗೂ ಪುನರ್ಜನ್ಮ ಸಾಧ್ಯವಿಲ್ಲ, ಅವುಗಳು ಅಳಿದ ಮೇಲೆ **"ಪುನರ್ಭವ"** ಗೊಳ್ಳುತ್ತವೆ ಎಂದ. ಅಂದರೆ ಬದಲಾವಣೆಗೊಳ್ಳುವುದು ಎಂಬ ಅರ್ಥವನ್ನು ಕೊಟ್ಟು ಸ್ಪಷ್ಟಪಡಿಸಿದ್ದಾನೆ. ಅದರಲ್ಲೂ ಬದಲಾವಣೆ ಹೇಗಾಗುತ್ತದೆಂದರೆ ಹುಟ್ಟಿದ ಜೀವ ತನ್ನ ಕಾಲಾವಧಿಯಲ್ಲಿ ನೋಡಿ, ಕೇಳಿ, ಮಾಡಿ, ಓದಿ (ಮಾನವನಿಗೆ ಮಾತ್ರ) ಈ ಅನುಭವದ ಗ್ರಹಿಕೆಯ ನೆನಪಿನಾಳಗಳು ಯಾವ ಜೀವಿಗಳು, ಯಾವಾಗ ಶಕ್ತಿ ಹೀನ ಸ್ಥಿತಿಗೆ ಬಂದು ಸೇರುತ್ತವೊ, ಅವುಗಳ **"ಕೊನೆಯ ಮನದ ಕ್ಷಣದಲ್ಲಿ ಬರುವ, ಮನದ ಜೀವ, ಜೀವಿ, ವಸ್ತು, ಪ್ರಕೃತಿಯ ರೂಪಗಳು ಯಾವುದಾಗಿರುತ್ತದೊ ಅಲ್ಲಿಗೆ ಈ ಮನದ ಜೀವ ಅಥವಾ ಜೀವಣು ಬದಲಾವಣೆಯಾಗುತ್ತದೆ. ಆ ಬದಲಾವಣೆಯನ್ನೆ ಸಾವು ಮತ್ತು ಹುಟ್ಟು ಎನ್ನುವುದು"**. ಅಂದರೆ ಒಂದು ಜೀವಕ್ಕೆ ಸಾವಾದರೆ ಅದು ಇನ್ನೊಂದು ಕಡೆ ಇನ್ನೊಂದು ಜೀವಿಯಾಗಿ ಬದಲಾವಣೆಯಾಗುತ್ತದೆ. ಅದನ್ನೆ ಹುಟ್ಟು ಎನ್ನುವುದು. ಆದ್ದರಿಂದಲೇ ಈ ಮನಸ್ಸಿನ ಜೀವಕ್ಕೆ, ಅಂದರೆ, ಇದುವರೆಗೆ ವಾಡಿಕೆಯಲ್ಲಿ ರೂಢಿಯಾಗಿ ಬಳಕೆಯಲ್ಲಿರುವ ಆತ್ಮಕ್ಕೆ ಸಾವಿಲ್ಲ ಎನ್ನುವುದು ಈ ಸತ್ಯದಿಂದ. ಅದರಲ್ಲೂ ಕೊನೆಯ ನೆನಪಿನ ಸಂದರ್ಭದಲ್ಲಿ ವಸ್ತು, ಮತ್ತು ಪ್ರಕೃತಿಯ ರೂಪಗಳು ಆಕಾಶ, ನಕ್ಷತ್ರ, ಗ್ರಹತಾರೆಗಳು, ಗಾಳಿ. ನೀರು (ಸಮುದ್ರ, ನದಿ, ಕೆರೆ, ಭಾವಿ, ಕೊವೆ, ಭಾವಿ) ಇತ್ಯಾದಿ. ಜೊತೆಗೆ ಘನ, ದ್ರವ, ಅನಿಲ ರೂಪಿ ವಸ್ತುಗಳು ನೆನಪಾದರೆ, ಅವುಗಳಿಂದ ಮಾಡಲ್ಪಟ್ಟ ವಸ್ತುಗಳು ಕರಗಿದ ಜೀವಣು ರೂಪಿಯಾದ ಮನಸ್ಸು ಇನ್ನೊಂದು ಜೀವಿಯಾಗಿ ರೂಪುಗೊಳ್ಳಲು ಸಮಯ ತೆಗೆದುಕೊಳ್ಳುತ್ತದೆ. ಅದೇ ಜೀವಿಗಳ ಜನ್ಮಾಂತರದ ಕಥೆ. ಈ ಕ್ರಿಯೆ ವಿಜ್ಞಾನಕ್ಕೂ ನಿಲುಕದ ಕಾರ್ಯ. ಅದೇ ಪ್ರಕೃತಿಯ ವಿಸ್ಮಯವೆನ್ನುವುದು. ಇದನ್ನು ಅರಸುವ ಕಾರ್ಯವನ್ನು ವಿಜ್ಞಾನ ಇನ್ನೂ ಮಾಡಬೇಕಾಗಿದೆ. ಅಂದರೆ, ಒಂದು ಜೀವಿಯ ಮನದಿಂದ ಇನ್ನೊಂದು ಜೀವಿಯ ಮನಕ್ಕೆ ಬದಲಾವಣೆಯಾಗುವ ಕೆಲಸ. ಆ ಕೆಲಸವನ್ನು ಯಾವ ಮಾನವನಿರಲಿ, ದೇವರೆಂದು ಗ್ರಹಿಸುವ ರೂಪವಿರಲಿ, ಯಾವುದೂ ಕೂಡ ಇದುವರೆಗೆ ಆ ಕ್ಷಣವನ್ನು ಕಂಡಂತೆ ದಾಖಲಿಸಲಾಗಿಲ್ಲ. ಹಾಗಾಗಿ ಇದನ್ನು ಮೊದಲು ಗ್ರಹಿಸಿದ ಬುದ್ದನು ಇದನ್ನು 'ಪುನರ್ಭವ' ಶಬ್ದದಿಂದ ಹೇಳಿದ್ದಾನೆ. ಇದು ವಿಜ್ಞಾನದ ಕಾರ್ಯ. ಅಂದರೆ, ಪುನರ್ಭವಗೊಳ್ಳುವ ಜೀವಾಣು, ಸೃಷ್ಟಿ ಕಾರ್ಯಕ್ಕೆ ಗರ್ಭಾಂತರವಾಗುತ್ತದೆ. ಆದ್ದರಿಂದಲೇ ಹುಟ್ಟು, ಸಾವುಗಳು ತಿಳಿಯುವುದಿಲ್ಲ. ತಿಳಿದಿರುವ ವಿಜ್ಞಾನದ

ಸತ್ಯ ವಿರ್ಯಾಣು, ಅಂಡಾಣು, ಪರಾಗರೇಣುಗಳ ಕಾರ್ಯ ಮಾತ್ರ. ಇವುಗಳ ಆದಿ ಅಣು ಎಲ್ಲಿಯಾದು? ಇದು ಯಾವಾಗ?, ಎಲ್ಲಿ? ಹೇಗೆ? ಬದಲಾವಣೆಯಾಗುತ್ತದೆ ಎಂಬುದನ್ನು ವಿಜ್ಞಾನ ಇನ್ನುಮುಂದಾದರೂ ಆಧುನಿಕ ತಂತ್ರಜ್ಞಾನದಿಂದ ಶೋಧಿಸಲು ಸಾಧ್ಯವೇ? ಪರಿಶೀಲಿಸಬೇಕಾಗಿದೆ. ಬಹುಶ: ವಿಜ್ಞಾನ ಕಂಡ ಜಗತ್ ಸೃಷ್ಟಿಯ ಮೂಲ 'ಕ್ವಾರ್ಕ್ ಕಣ'ವಾದ ಅತ್ಯಂತ ಸೂಕ್ಷ್ಮಕಣವೇ, ಗಾಡ್ ಪಾರ್ಟಿಕಲ್(ದೇವಕಣ) ಇದನ್ನು ಕೂಡ, ಒಡೆದು, ಸೀಳಿನೋಡುವ ಪ್ರಯತ್ನ ಮಾಡುತ್ತಿದೆ. ಆದನ್ನು ಒಡೆದಾಗ ಆಗುವ ಯಾವುದಾದರೂ ಒಂದು ಕಣದಿಂದ, ಈ ಮನಸ್ಸಿನ ಕಾರ್ಯ ಆಗುತ್ತಿರಬಹುದೇನೋ ಎಂದು ಅನ್ನಿಸುತ್ತಿದೆ. ಕಾದು ನೋಡಬೇಕಾಗಿದೆ. ಇದು ನನ್ನ ಸಂಶೋಧನ ಮಾಹಿತಿಗಳ ವಿಶ್ಲೇಷಣೆಯಿಂದ ಗ್ರಹಿಸಿದ ಸತ್ಯವೆ ಹೊರತು, ಕಂಡ ಸತ್ಯವಲ್ಲ. ಇಂತಹ ಸಾಧ್ಯತೆ ಯಾಕಿರಬಾರದು? ಎಂದು ಸಂಶೋಧನೆಯಿಂದ ಗ್ರಹಿಸಲು ಸಾಧ್ಯವಿದೆ. ಇದನ್ನೆ ಬಹುಶಿಸ್ತೀಯ ಜ್ಞಾನವೆನ್ನುವುದು.

ಹಾಗಾಗಿ ಬೇಂದ್ರೆಯ ಈ ಪದ್ಯದ ಕೊನೆಯ ಸಾಲಿನಲ್ಲಿರುವ 'ಪ್ರಾಣಿ ಜೀವನವೊಂದು ಪ್ರಾಣ ಹರಣ' ಎಂಬ ಸಾಲಿನಲ್ಲೂ ಪ್ರಾಣಿ ಜೀವನವೊಂದು 'ಹರಣವೆ' ಹೊರತು 'ಪ್ರಾಣ ಹರಣ'ವಾಗುವುದಿಲ್ಲ ಎಂಬುದನ್ನು ನಾವು ಪುನರ್ ಮೌಲ್ಯೀಕರಣ ಮಾಡಿಕೊಳ್ಳುವ ಅಗತ್ಯ ವರ್ತಮಾನಕಾಲದ್ದಾಗಿದೆ. ಈಗ ಇದರ ವೈಜ್ಞಾನಿಕ ಪ್ರಜ್ಞೆಯ ಅಗತ್ಯವಿದೆ ಎಂಬುದನ್ನು ಮರೆಯಬಾರದು. ಪ್ರಾಣಿಗಳ ಜೀವನದಲ್ಲಿ ವಿಷಮ ಲೀಲೆಯಾಗಲು ಕಾರಣವೆನೆಂದು ಪ್ರಶ್ನಿಸಿಕೊಂಡರೆ ಅವುಗಳ ಮಿತಿಯಿಲ್ಲದ ಸಂತಾನೋತ್ಪತ್ತಿಯು ಒಂದು ಕಾರಣವಾದರೆ ಪ್ರಕೃತಿಯ ವೈಪರಿತ್ಯಗಳ ಬದಲಾವಣೆಯು ಇನ್ನೊಂದು ಕಾರಣವೆಂಬುದನ್ನು ಗಮನಿಸಬೇಕು. ಹಾಗಾಗಿ ಪ್ರತಿಯೊಂದು ಜೀವಿಯ ವರ್ಗದಲ್ಲಿಯೂ ಹೆಚ್ಚಾದ ಸಂತಾನೋತ್ಪತ್ತಿಯಿಂದಾಗಿ ಅವುಗಳ ಆಹಾರ, ವಾಸಸ್ಥಳ, ರಕ್ಷಣಾತ್ಮಕ ಸ್ಥಿತಿಗತಿಗಳು ಮಿತಿಯಾಗಿರುತ್ತವೆ. ಆದ್ದರಿಂದ ಒಂದರ ಮೇಲೊಂದು ಆಹಾರ ಮತ್ತು ರಕ್ಷಣೆಗಾಗಿ ಸಂಘರ್ಷಗಳುಂಟಾಗುತ್ತವೆ. ಇದರಲ್ಲಿ ಒಂದಕ್ಕೊಂದು ಹೋರಾಡಿ ಮಡಿಯುವುದು ಸಹಜ ಮತ್ತು ವಾಸ್ತವ. ಆದರೆ ಈ ಪ್ರಾಣಿಗಳ ಆವಾಸ ಸ್ಥಳ ಮತ್ತು ಆಹಾರಗಳನ್ನೆ ಮಾನವ ಕಿತ್ತುಕೊಂಡರೆ, ವಿನಾಶಗೊಳಿಸಿದರೆ ಅಲ್ಲಿ ವಾಸಿಸುವ ಜೀವಿಗಳು ಎಲ್ಲಿಗೆ ಹೋಗಬೇಕು. ಆಗ ಮತ್ತೊಂದು ರೀತಿಯ ಅಸಮತೋಲನದ ಹೋರಾಟ ಅವುಗಳಲ್ಲಿ ಸೃಷ್ಟಿಯಾಗುತ್ತದೆ. ಇದನ್ನೆ ಬೇಂದ್ರೆ ತಮ್ಮ ಕೊನೆಯ ಸಾಲಿನಲ್ಲಿ ಹೇಳಿರುವುದು. ಹಾಗಾಗಿ ಪ್ರಾಣಿಗಳ ಈ ಸಾವು, ಬದುಕಿನ ನಾನಾ ಹೋರಾಟದ ಜೀವನವನ್ನೆ 'ಪ್ರಾಣಿಗಳ ಜೀವನ ಸಂಸ್ಕೃತಿ' ಎಂದು ಕರೆಯುವುದು. ಈ ಸಂಸ್ಕೃತಿಗೊಳಪಡುವ ಪ್ರಕೃತಿಯ ಸಕಲ ಪ್ರಾಣಿಗಳೆಂದರೆ ಏಕಕಣ, ಅಮಿಭಾದಿಂದ ಹಿಡಿದು, ಬಹುಕಣ ಜೀವಿಗಳಾದ ಪ್ರಾಣಿಗಳಿಂದ ಆನೆ, ಹುಲಿ, ಸಿಂಹ, ಚಿರತೆ, ನರಿ, ನಾಯಿ, ಹಸು, ಹಾವು, ಕೀರಾ, ಇಲಿ, ಹಕ್ಕಿ–ಪಕ್ಷಿ, ಕೀಟ, ದುಂಬಿಗಳವರೆಗೆ ಅಸಂಖ್ಯಾ ಪ್ರಾಣಿ, ಪಕ್ಷಿ, ಕೀಟಾಗಳಂತಹ ಜಲಚರ, ವಾಯುಚರ, ಭೂಚರಗಳೆಲ್ಲಾ ಸಂಕುಲಗಳು ಸೇರುತ್ತವೆ. ಇವುಗಳೆಲ್ಲವುಗಳ ಜೀವನ ನಡವಳಿಕೆಗಳ ಕ್ರಿಯೆಗೆ ಮೂಲವಾದದ್ದೆ ಮನಸ್ಸು. ಆ ಮನಸ್ಸಿನ ಪ್ರೇರಣೆಯಿಂದಲೇ ಈ ಎಲ್ಲ ಜೀವಿಗಳ ಜೀವನ ಚಟುವಟಿಕೆಗಳು ಮಾನಸಿಕ ಮತ್ತು ದೈಹಿಕವಾಗಿ ನಡೆಯುವುದು. ಆದ್ದರಿಂದಲೇ ಹುಟ್ಟು, ಸಾವುಗಳಲ್ಲಿ ನಮ್ಮ ಮನಸ್ಸಿನ ಕಾರ್ಯವಿರುತ್ತದೆ ಎಂಬುದು ಸ್ಪಷ್ಟವಾಗಿದೆ. ಹಾಗಾಗಿ ಪುನರ್ಜನ್ಮ ಪ್ರಕೃತಿಯಲ್ಲಿ ಸಾಧ್ಯವಿಲ್ಲ, ಎಲ್ಲಾ ಜೀವಿಗಳು ಪುನರ್ಭವಗೊಳ್ಳುವುದು ಪ್ರಕೃತಿಯ ಸಹಜ ಕಾರ್ಯವಾಗಿದೆ.

6) ಮಾನವ ನಿರ್ಮಿತ ಜೀವಿಗಳು (ಮಾನವ, ಸಸ್ಯ, ಪ್ರಾಣಿ, ಪಕ್ಷಿಗಳಲ್ಲಿ ತಂತ್ರಜ್ಞಾನದಿಂದ – ಹೈಬ್ರಿಡ್ ತಳಿ ಜೀವಿಗಳನ್ನಾಗಿ ಮಾಡುವುದು).

ಮಾನವ ಜನಾಂಗದಲ್ಲಿ ಹೆಣ್ಣಿರಲಿ, ಗಂಡಿರಲಿ ಅವರ ವಿರ್ಯಾಣು, ಅಂಡಾಣು ಉತ್ಪತ್ತಿಯ ದೋಷದಿಂದ ಇವರಿಬ್ಬರಲ್ಲಿ ಯಾರಾದರೂ ಒಬ್ಬರಲ್ಲಿ, ಹೆಚ್ಚಾಗಿ ಗಂಡಸರಲ್ಲಿ ಮಕ್ಕಳ ಸೃಷ್ಟಿ ಕ್ರಿಯೆ ನಡೆಯಲಾಗದಿದ್ದಾಗ; ಅಂತಹ ಸಮಸ್ಯೆ ಕಂಡುಬರುತ್ತದೆ. ಇಂತಹವರ ಮಕ್ಕಳ ಸಮಸ್ಯೆಗೆ ಪರಿಹಾರವಾಗಿ ಇಂದು ಪ್ರನಾಳ ಶಿಶುವಿನ ಸೃಷ್ಟಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.. ಇದಕ್ಕೆ ಬಾಡಿಗೆ ತಾಯಿ ಮತ್ತು ಬೇರೊಬ್ಬ ಪುರುಷರ ವಿರ್ಯವನ್ನು ಬಳಸಿಕೊಂಡು ಈ ತಂತ್ರಜ್ಞಾನದ ಮೂಲಕ ಪ್ರನಾಳ ಶಿಶುವನ್ನು ಬೆಳಸಿ ಅಭಿವೃದ್ಧಿಪಡಿಸಿ ಮಕ್ಕಳನ್ನು ಪಡೆಯಲಾಗುತ್ತಿದೆ.

ಇದಕ್ಕೂ ಮೊದಲು ಈ ಪ್ರಯೋಗವನ್ನು ಮಾನವ ತನ್ನ ಸಾಕು ಪ್ರಾಣಿಗಳಾದ ಹಸು ಎಮ್ಮೆ, ಆಡು, ಕುರಿ, ಕೋಳಿ, ಮೀನು ಇಲಿ ಇತ್ಯಾದಿ ಪ್ರಾಣಿಗಳ ಮೇಲೆ ಮಾಡಿದ ಮೇಲೆ ಮಾನವನಲ್ಲಿ ಪ್ರಯೋಗ ಮಾಡುವುದನ್ನು ವಿಜ್ಞಾನ ಚಾಲನೆಗೆ ತಂದಿದೆ. ಅದೇ ತರಹ ಪ್ರಾಣಿ ಪಕ್ಷಿಗಳನ್ನು ಆಹಾರಕ್ಕೆ, ಮತ್ತು ಹಾಲಿನ ಉತ್ಪಾದನೆಗಾಗಿ ಹೈಬ್ರಿಡ್ ತಳಿಯನ್ನು ಸೃಷ್ಟಿಸಿ ಅಭಿವೃದ್ಧಿಪಡಿಸಿ, ಅವುಗಳ ಹೆಚ್ಚಿನ ಉತ್ಪಾದನೆ ಮಾಡುತ್ತಿದೆ. ಇದು ಈಗ ಹಸು, ಎಮ್ಮೆ, ಆಡು, ಕುರಿ, ಕೋಳಿಗಳ ಮೇಲೆ ಹೆಚ್ಚು ಪ್ರಯೋಗ ಮಾಡಲಾಗುತ್ತಿದೆ. ಇದು ಹಸು ಎಮ್ಮೆಗಳಿಗೆ ಹಾಲಿಗಾಗಿ ಹೈಬ್ರಿಡ್ ತಳಿಯನ್ನು ಉತ್ಪಾದನೆ ಮಾಡಿದರೆ, ಆಡು, ಕುರಿಗಳನ್ನು ಮಾಂಸಕ್ಕಾಗಿ ಮತ್ತು ಕೋಳಿಗಳನ್ನು ಮಾಂಸ, ಮೊಟ್ಟೆಗಾಗಿ ಹೈಬ್ರಿಡ್ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದೇ ರೀತಿಯಲ್ಲಿ ಆಹಾರ ಉತ್ಪಾದನೆಗಾಗಿ ಮಾನವ ಸಸ್ಯ ತಳಿಯ ಮೇಲೂ ಪ್ರಯೋಗ ಮಾಡಿ ಕಂಡುಕೊಂಡ ಬೆಳವಣಿಗೆಯೆ ಹೈಬ್ರಿಡ್ ತಳಿಗಳು, ಜೊತೆಗೆ ಕಸಿಕಟ್ಟುವುದು. ಇದರಿಂದ ನಾನಾ ತರಹದ ಹಣ್ಣುಗಳ ಉತ್ಪಾದನೆ ಜಾಸ್ತಿಯಾಗಿದೆ. ಹೀಗೆ ಮಾನವನಿಗೆ ಬೇಕಾಗುವ ಆಹಾರೋತ್ಪಾದನೆಯನ್ನು ನಾನಾ ರೀತಿಯ ಪ್ರಯೋಗದಿಂದ ಕಂಡುಕೊಂಡಿದ್ದಾನೆ. ಈ ಪ್ರಯೋಗಗಳು ಮಾನವನ ಜನ ಸಂಖ್ಯೆ ಜಾಸ್ತಿಯಾದಂತೆ ಅವನ ಆಹಾರಕ್ಕಾಗಿ ಕಂಡುಕೊಂಡ ಆಹಾರ ತಳಿಗಳ ವೈಜ್ಞಾನಿಕ ಸೃಷ್ಟಿಯಾಗಿ ಈಗ ಅಭಿವೃದ್ಧಿಪಡಿಸಿ, ಪರಿಹಾರ ಮಾರ್ಗ ಕಂಡುಕೊಳ್ಳಲಾಗಿದೆ. ಇದು ತಾತ್ಕಾಲೀಕ ಪರಿಹಾರವಾಗಿ, ದೀರ್ಘಾಕಾಲಿಕಾ ಬಳಕೆಯಾಗಿ, ಈಗ ನಾನಾ ರೀತಿಯ ಆರೋಗ್ಯ ಸಮಸ್ಯಗಳಿಗೆ ಎಡೆಯಾಗಿದೆ. ಇದು ಇನ್ನೊಂದು ರೀತಿಯ ಸಮಸ್ಯೆಗಳಾಗಿ ಮಾರ್ಪಟ್ಟಿರುವುದೆ. ಮಾನವನಿರಲಿ, ಸಕಲಜೀವಿಗಳ ಮೇಲೆ ಆಹಾರ ಸರಪಳಿಯಿಂದಾಗಿ ನಾನಾ ರೀತಿಯ ದುಷ್ಪರಿಣಾಮ ಉಂಟಾಗಿದೆ.

ಹೀಗೆ ಮಾನವನ ಸೃಷ್ಟಿ ಕಾರ್ಯಗಳಿಂದ ಆಗುತ್ತಿರುವ ದುಷ್ಪರಿಣಾಮ ನಿಧಾನವಾಗಿ, ಮಂದಗತಿಯಲ್ಲಿ ಈಗೀಗಾ ಮಾನವನಿಗೆ ನಾನಾ ರೋಗ–ರುಜಿನಗಳಿಂದ ನರಳಿ ತನ್ನ ಸಾವಿನ ಸಾರಸರಿ ವಯಸ್ಸಿನ ಧರ ಸಹಜವಾಗಿ ಇಳಿಕೆಯಾಗಿರುವುದನ್ನು ಗಮನಿಸ ಬಹುದು.

7) ಮಾನವ ಪುರಾಣ, ಸಾಹಿತ್ಯ ಕಲ್ಪಿತ ಜೀವಿಗಳು.

ಕಲ್ಪನೆಗಳು ಕಾವ್ಯ, ಪುರಾಣ, ಜನಪದ ಕಥೆ, ಕಾವ್ಯಗಳಲ್ಲಿ ನಾನಾ ರೀತಿಯ ಪರಿಕಲ್ಪನೆಗಳಲ್ಲಿ ಗಿಡ–ಮರ, ಪ್ರಾಣಿ–ಪಕ್ಷಿಗಳನ್ನು ಕವಿ, ಕಥೆಗಾರ, ಅವನದೇ ಆದ ಕಲ್ಪನೆಯಲ್ಲಿ ಕಂಡಿದ್ದಾನೆ. ಅಂತಹ ಜೀವಿಗಳಲ್ಲಿ ಗಂಡುಬೇರುಂಡ, ಏಳೆಡೆ ಸರ್ಪ, ಎರಡು, ಮೂರು ತಲೆಯ ಜೀವಿಗಳು,, ಎರಡು ತಲೆ, ಕಾಲುಗಳಂತಹ ಮಾನವ ಮಕ್ಕಳು ಜನಿಸಿದ್ದಾರೆ, ಹಾವು, ದನ, ಎಮ್ಮೆ ಮುಂತಾದ ಜೀವಿಗಳು ಹುಟ್ಟಿರುವುದನ್ನು ನಾವು ಕಾಣಬಹುದು. ಇಂತಹ ಹುಟ್ಟು ಎಕ್ಸ್, ವಯ್ ಕ್ರೋಮೊಸೋಮ್ಗಳು ಹೆಚ್ಚುವರಿಯಾಗಿ ಸೇರಿಕೊಂಡಾಗ ಜೀವಿಗಳ ದೇಹ ರಚನೆಯಲ್ಲಿ ಹೆಚ್ಚುವರಿ ದೇಹರಚನೆ ಸಾಧ್ಯವಾಗುತ್ತದೆ ಇಷ್ಟೆ ಏಕೆ? ರಾಮಾಯಣ ಕಾವ್ಯದಲ್ಲಿ ಬರುವ ಹತ್ತು ತಲೆ ಹದಿನಾರು ಬುಜವುಳ್ಳ ರಾವಣನ ಕಲ್ಪನೆ, ಪುಷ್ಪರಾಣಿ, ಹಯವದನ, ಗಣೇಶ, ಇಂತಹ ಕಲ್ಪನೆಗಳು; ಮಾನವ, ಪ್ರಾಣಿ, ಪಕ್ಷಿಗಳನ್ನು ಸೇರಿಸಿ ಪರಿಲ್ಪಿಸುವುದು. ಇಂತಹ ಕಲ್ಪನೆಯಲ್ಲಿ ಮಾನವ ದೇಹಕ್ಕೆ ಆನೆಯ ಕಲೆಯನ್ನು ಹಾಕಿರುವ ಗಣೇಶನನ್ನು ದೇವರನ್ನಾಗಿ ಪರಿಭಾವಿಸಿರುವುದು ಇನ್ನೂ ವಿಶೇಷವಾದದ್ದು. ಇಂತಹ ಕಲ್ಪಿತ ಜೀವಿಗಳು ಹುಟ್ಟಬಾರದೇಕೆ? ಇದುವರೆಗಿನ ಕಲ್ಪನೆಗಳು ಸಹಜವಾಗಿ ರೂಪುಗೊಂಡಿರುವುದನ್ನು ಗಮನಿಸಬಹುದು. ವಿಜ್ಞಾನ ಕೂಡ ಕಲ್ಪನೆಯ ವಸ್ತು, ಜೀವಿಗಳ ಮಾದರಿಗಳನ್ನು ಕಂಡುಹಿಡಿದಿರುವುದು ಪುಷ್ಪಕ ವಿಮಾನಗಳಂತಹ ನಾನಾ ಯಂತ್ರಗಳನ್ನು ಡಾಲಿಯಂತಹ ಜೀವಿಗಳನ್ನು ಸೃಷ್ಟಿಸಿರುವುದನ್ನು ಗಮನಿಸಬಹುದು.

8). ಮಾನವ ಗ್ರಹಿಕೆಗೆ ಸಿಗದ ಜೀವಿಗಳ ಹುಟ್ಟು:

ಎಷ್ಟೋ ಅಸಂಖ್ಯ ಜೀವಿಗಳ ಹುಟ್ಟು ಮತ್ತು ಸಾವಿನ ಮಾಹಿತಿ ಇನ್ನು ಮಾನವನ ಗ್ರಹಿಕೆಗೆ ಬಾರದಿರಲೂ ಬಹುದು. ಯಾಕೆಂದರೆ ಮಾನವನ ತಿಳುವಳಿಕೆಗೆ ಬಂದ ಜೀವಿಗಳ ಬಗ್ಗೆ ಅಪಾರ ಶೋಧ ಮಾಡಿ, ಅವುಗಳ ಸೂಕ್ಷ್ಮಾತಿ ಸೂಕ್ಷ್ಮ ವಿಷಯ, ವಿಚಾರಗಳನ್ನು ಈಗಾಗಲೇ ಜಗತ್ತಿಗೆ ಪ್ರಕಟಿಸಲಾಗಿದೆ. ಹೀಗಿದ್ದೂ ಇನ್ನೂ ಎಷ್ಟೋ ಜೀವಿಗಳ ಹುಟ್ಟು, ಅವುಗಳ ಜೀವನ ನಡವಳಿಕೆಗಳ ಬಗ್ಗೆ ಮಾಹಿತಿ ಇನ್ನೂ ಸಿಗದಿರುವ ಸ್ಥತಿ ಇಂದಿಗೂ ಇರಬಹುದು. ಇಲ್ಲವೆನ್ನಲಾಗದು. ಇದೇ ಪ್ರಕೃತಿಯ ವಿಸ್ಮಯದಲ್ಲಿರುವ ತಾತ್ವಿಕ ನಿಯಮ.

2. ಜೀವಿ ಸಂಕುಲಗಳ ಹುಟ್ಟಿಗೆ: ವಿಭಿನ್ನ ಸಂತಾನೋತ್ಪತ್ತಿಯ ತಾತ್ವಿಕ ಸಿದ್ಧಾಂತ:

ಪ್ರಕೃತಿಯ ಪ್ರತಿಕ್ಷಣದ ಕಾರ್ಯ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲೆ ಇರುವುದರಿಂದ ಸಕಲ ಜೀವಿಗಳು ಕ್ರಿಯಾಶೀಲವಾಗಿ, ನಿಸರ್ಗದ ಚಲನಶೀಲ ಗುಣಕ್ಕೆ ಸಾಕ್ಷಿಯಾಗಿದೆ. ಇದನ್ನೆ ಪ್ರಕೃತಿಯ ತಾತ್ವಿಕ ಸಿದ್ಧಾಂತವೆನ್ನುವುದು. ಇದರ ತಾತ್ವಿಕ ಕಾರ್ಯಕ್ಕೆ ಅದರೊಳಗೆ ಅವಿನಾಭಾವ ಸಂಬಂಧ ಹೊಂದಿ ರೂಪುಗೊಂಡಿರುವ ಸೂಕ್ಷ್ಮಾತಿ ಸೂಕ್ಷ್ಮ ಕಣಗಳ ಕ್ರಿಯಾ ವಿಧಾನವನ್ನೆ ಪ್ರಕೃತಿ ಎನ್ನುವುದು. ಈ ಕೆಲಸಕ್ಕೆ ಇನ್ನೊಬ್ಬ ಯಾವ ಅಸಾಮಾನ್ಯ ವ್ಯಕ್ತಿಯ ಸಹಭಾಗಿತ್ವವಿರುವುದಿಲ್ಲ ಎಂಬುದು ಸೈದ್ಧಾಂತಿಕ ಶಕ್ತಿ. ಈ ಶಕ್ತಿಯೊಳಗೆ ಹುಟ್ಟಿ ಬರುತ್ತಿರುವ ಪ್ರಕೃತಿಯ ಸಕಲ ಜೀವಿಗಳಿಗೂ ಅವುಗಳದ್ದೆ ಆದಾ ಸ್ವಾತಂತ್ರ್ಯವುಳ್ಳ ಜೀವನ ತತ್ವ, ವಿಧಾನಗಳ ರೀತಿ, ನೀತಿಗಳ ಸ್ವಾಭಾವಿಕ ಸಿದ್ಧಾಂತಕ್ಕೊಳಪಟ್ಟಿರುತ್ತವೆ. ಅದೇ ರೀತಿ ಸಕಲ ಮಾನವರು ಈ ತತ್ವಕ್ಕೆ ಒಳಪಟ್ಟಿರುತ್ತಾರೆ. ಆದರೆ ಯೋಚನಾ ಶಕ್ತಿಯನ್ನು ಪಡೆದುಕೊಂಡಿರುವ ಮಾನವರು ನಾಗರೀಕತೆಯ ವಿಷಯ, ವಿಚಾರ, ತತ್ವಗಳನ್ನು ಅಳವಡಿಸಿಕೊಂಡು ಮಾನವ ಮಾನವರೊಡನೆ ಮತ್ತು ಜೀವಿಗಳೊಡನೆ ಹೊಂದಾಣಿಕೆಯಿಂದ ಬಾಳಲು; ಕೆಲವು ತತ್ವ, ಸಿದ್ಧಾಂತಗಳನ್ನು ಅವನಿಗೆ ಅವನೆ ಹಾಕಿಕೊಂಡು, ಅನುಸರಿಸುತ್ತಾ, ಬಾಳುತ್ತಾ ಬರುತ್ತಿದ್ದಾನೆ. ಆದ್ದರಿಂದ ಅವನು ಇತರ ಜೀವಿಗಳಿಗೆ ಭಿನ್ನ ಜೀವಿಯಾಗಿ ಕಂಡುಬರುತ್ತಿದ್ದಾನೆ. ಆದರೆ ಅವನ ಏನೆಲ್ಲಾ ಸಾಧನೆಗಳಿದ್ದರೂ, ಅವೆಲ್ಲಾ ಕ್ಷಣಿಕ ಮಾತ್ರ. ಪ್ರಕೃತಿಗೆ ಅವೆಲ್ಲಾ ತೃಣ. ಕೃತಕವಾಗಿ ಮಾನವ ಏನೇ ಮಾಡಿದರೂ ಪ್ರಕೃತಿ ಅವುಗಳಿಗೆ ಪರ್ಯಾಯ ರೂಪಗಳನ್ನು ರೂಪಾಂತರಿಸುತ್ತದೆ. ಆ ರೂಪಾಂತರ ಕಾರ್ಯಗಳಲ್ಲೆ ಸಾಮೂಹಿಕವಾಗಿ ಭಾರಿ ಸಾವು ನೋವುಗಳುಂಟಾಗುವುದು. ಇದರ ವಿಸ್ಮಯಕ್ಕೆ ಬೆರಗಾಗಿ, ಮಾನವ ಪ್ರಕೃತಿಯನ್ನು ನಾನಾ ದೈವಿ ರೂಪದಲ್ಲಿ ಕಂಡುಕೊಂಡು ಭಯ, ಭಕ್ತಿಯಿಂದ ಆಧ್ಯಾತ್ಮಿಕವಾಗಿ ಬೆಳೆದು ಬಂದಿದ್ದಾನೆ. ಇದನ್ನು ಮೀರಿ ಬೆಳೆದಿರುವುದೆ ವಿಜ್ಞಾನ–ತಂತ್ರಜ್ಞಾನ, ಇದರ ಎಳೆಯನ್ನು ಹಿಡಿದು, ಅಭಿವೃದ್ಧಿಯ ಹೆಸರಲ್ಲಿ ಜಗತ್ತಿನ ರಾಜಕೀಯ ಶಕ್ತಿ, ಬಂಡವಾಳ ಶಕ್ತಿ, ಆಡಳಿತ ಶಕ್ತಿಗಳು ಮೀರಿ ಬೆಳೆದು, ಸಹಜ ಮಾನವ ಜೀವನ ಪದ್ಧತಿಗಳನ್ನು ಬದಲಾವಣೆಗೆ ತಂದಿದ್ದಾರೆ, ಇದರಿಂದ ಮಾನವ ಸಹಜತೆಯ ಜೀವನವನ್ನು ಮೀರಿ ಅಸಹಜ ಬದುಕಿಗೆ ಮಾರುಹೋಗಿ ಮುನ್ನೆಡೆಯುತ್ತಿರುವುದರ ಪರಿಣಾಮ ನಾನಾ ದುಷ್ಪರಿಣಾಮಗಳುಂಟಾಗಿ ಜಾಗತಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ. ಪ್ರಕೃತಿಯ ಈ ರೂಪಾಂತರ ಗುಣಕ್ಕೆ ಮಾನವ ವಿಸ್ಮಯಗೊಂಡಿದ್ದಾನೆ. ಹಾಗಾಗಿ ಪ್ರಕೃತಿಯನ್ನು ನಿಯಂತ್ರಿಸಲು ಮಾನವನಿಗೆ ಅಸಾಧ್ಯವೆಂಬುದನ್ನು ಈಗೀಗ ಕಂಡುಕೊಳ್ಳುತ್ತಿದ್ದಾನೆ. ಹೀಗಿರುವುದರಿಂದ ಇದರ ಅಂತಿಮ ಸಾರ ಇಷ್ಟೇ. ಪ್ರಕೃತಿಯೇ ಜೀವ. ಅಂದರೆ, ಅದು ರೂಪುಗೊಂಡಿರುವುದು, ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ಕಣಗಳಿಂದ. ಆ 'ಕಣಗಳೇ ಜೀವ'ವೆಂದು. ಮೇಲೆ ಹೇಳಲಾಗಿದೆ. ಈ ವಿಚಾರವನ್ನು ವಿಜ್ಞಾನ, ಧರ್ಮಗಳು, ನಾನಾ ಪುರಾಣಗಳು, ಜನಪದರು ಪರಿಭಾವಿಸಿದ ಕಥೆ, ಕಾವ್ಯ, ಪುರಾಣಗಳು, ಮತ್ತು ಪ್ರಾಚೀನ, ಮಧ್ಯಕಾಲೀನ, ಆಧುನಿಕ ಸಾಹಿತ್ಯ ಕಥೆ, ಕಾವ್ಯಗಳು ಪರಿಭಾವಿಸಿರುವ ಹಲವು ರೀತಿಯ ಚಿಂತನೆಗಳು ಜಗತ್ತಿನಾಧ್ಯಾಂತ ಪಸರಿಸಿ, ಅವುಗಳನ್ನೆ ಆಯಾ ದೇಶ, ಪ್ರದೇಶದಲ್ಲಿ ವಾಸಮಾಡುವ ಜನ ತಮ್ಮ ತಮ್ಮ ನಂಬಿಕೆಯ ಸಾಮಾಜಿಕ, ಧಾರ್ಮಿಕ, ವೈಜ್ಞಾನಿಕ ತತ್ವಗಳೆಂದು ನಂಬಿಕೊಂಡು ಮಾನವರು ಜೀವನ ಮಾಡುತ್ತಿರುವುದು, ಇವತ್ತಿಗೂ ವಾಸ್ತವ, ಸಹಜ ಶೈಕ್ಷಣಿಕ ಪಠ್ಯ ವಿಚಾರಗಳಾಗಿವೆ. ಆದಿ ಕಾಲದಿಂದ ಆಧುನಿಕ ಕಾಲದವರೆಗೆ ನಾನಾ ರೀತಿಯ ಆಲೋಚನೆ, ಚಿಂತನೆ, ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆಗಳಿಂದ; ಆದಿಯ ತಿಳುವಳಿಕೆಗಳ ಪರಿವರ್ತನೆಯಿಂದ ಪ್ರಕೃತಿಯ ಸತ್ಯವನ್ನರಿಯುವ ಪ್ರಯತ್ನ ಇಂದಿಗೂ ನೆಡೆಯುತ್ತಲೇ ಬಂದಿದೆ.

ಮೇಲೆ ಚರ್ಚಿಸಿದಂತೆ, ವಿಜ್ಞಾನ ಕಂಡ, ಜಗತ್ತಿನ ಮೂಲಕಣ 'ಕ್ವರ್ಕ್' ಆದರೆ, ಇದರ ಅಣುಗಳ ನಾನಾ ವ್ಯೂಹವೆ ಪ್ರಕೃತಿಯ ನಾನಾ ಗ್ರಹ ತಾರೆಗಳು. ಅದಕ್ಕೆ ಭೂಮಿ, ಸೂರ್ಯ ಚಂದ್ರರೂ ಹೊರತಾಗಿಲ್ಲ. ಆ ಕಾರಣವನ್ನು ಅರಿತದ್ದರಿಂದಲೇ ಜಗತ್ತು ಸೂರ್ಯ ಕೇಂದ್ರಿತ ಸಿದ್ಧಾಂತವನ್ನು ನಂಬಿ ನೆಡೆಯುತ್ತಿರುವುದನ್ನು; 'ಪರಿಸರ ಜಿಜ್ಞಾಸೆ' ಎಂಬ ಸಂಶೋಧನಾ ಕೃತಿ ತಿರಸ್ಕರಿಸಿ, ಸೂರ್ಯಕೇಂದ್ರಿತ ಸಿದ್ಧಾಂತಕ್ಕೆ ಬದಲಾಗಿ, ಬಹುಶಿಸ್ತೀಯ ವೈಜ್ಞಾನಿಕ ಆಧಾರ ಸಾಕ್ಷಿಗಳ ಮೂಲಕ ಪರಿಶೀಲಿಸಿ, 'ತ್ರಿಭೂತ ವ್ಯೂಹ'ವನ್ನು ಪ್ರತಿಪಾದಿಸಲಾಗಿದೆ. ಇಂತಹ ನಾನಾ ಸೂಕ್ಷ್ಮಾತಿ ಸೂಕ್ಷ್ಮ ಪ್ರಕೃತಿಯ ಗುಣಗಳನ್ನು ಮಾನವ ತನ್ನ ವಿಚಾರ, ಚಿಂತನೆಗಳಿಂದ ತಿಳಿಯುವುದು ನಿರಂತರ ಕಾರ್ಯವೆ ಹೊರತು, ಜ್ಞಾನಕ್ಕೆ ಕೊನೆಯಿಲ್ಲ. ಇದೇ ಮಾನವ ಜೀವನ. ಪ್ರಕೃತಿಯ ಇಂತಹ ಕಾರ್ಯ, ಗುಣಗಳಿಂದಾಗಿರುವ ಈ ಬ್ರಹ್ಮಾಂಡದ ಜೀವಿಗಳ ಸೃಷ್ಟಿಯ ವಿಸ್ಮಯ ಕಾರ್ಯವನ್ನು ವೈಜ್ಞಾನಿಕವಾಗಿರುವ ಅದರ ನಿತ್ಯ ಸತ್ಯದ ತಾತ್ವಿಕತೆಯನ್ನು ಅರಿಯುವ ಪ್ರಯತ್ನವಿದು.

ಜಗತ್ತಿನ ಸಕಲ ಜೀವಿಗಳು ಪ್ರಕೃತಿದತ್ತ ಹೆಣ್ಣು–ಗಂಡಿನ ಲಿಂಗ ಸಂಬಂಧದಿಂದ ಹುಟ್ಟಿ ಜೀವನ ಮಾಡಿ ಕೊನೆಗೆ ಸಾವಿನಿಂದ ಪ್ರಕೃತಿಯಲ್ಲಿ ಮತ್ತೆ ಲೀನವಾಗುವುದು ನಿಸರ್ಗ ನಿಯಮವಾಗಿದೆ. ಇದು ಜಾಗತಿಕ ಸತ್ಯ. ಈ ನಿಯಮಕ್ಕೆ ವಿರುದ್ಧವಾದ ಹುಟ್ಟನ್ನು ಪಡೆದು; ಸಾವಿಲ್ಲದೆ ಜೀವಿಸುವ ಅಥವಾ ಹುಟ್ಟು–ಸಾವು ಎರಡು ಇಲ್ಲದೆ; ಪ್ರಕೃತಿಯಲ್ಲಿ ಜೀವಿಸುವ ಯಾವುದಾದರೂ ಜೀವಿಗಳು ಇರುವ ಯಾವ ಸೂಚನೆಗಳು ಇದುವರೆಗಿನ ಯಾವ ವೈಜ್ಞಾನಿಕ ಸಂಶೋಧನೆಗಳಿಗೂ ಸಿಕ್ಕಿಲ್ಲ. ಯಾಕೆಂದರೆ ವಿಜ್ಞಾನ ಹೆಣ್ಣು ಗಂಡಿನ ಲಿಂಗ ಸಂಬಂಧವಿಲ್ಲದೆ ಕೃತಕವಾಗಿ ಸೃಷ್ಟಿಸಿದ 'ಡಾಲಿ' ಎಂಬ ಕುರಿ ಹುಟ್ಟಿದ ಮೇಲೆ ಜೀವಿಸಿ ಅದಕ್ಕೂ ಸಾವಾಗಿದೆ. ಅದೇ ತರಹ ಮಾನವನ ಆಹಾರಕ್ಕಾಗಿ ವಿಜ್ಞಾನ ಗಿಡ–ಮರಗಳಿಗೆ ಕಸಿ ಕಟ್ಟಿ ಬೇಗ ಫಲ ಬಿಡುವಂತೆ ಸೃಷ್ಟಿಸಿ ಹೈಬ್ರಿಡ್ ತಳಿಗಳನ್ನು ಉತ್ಪಾದನೆ ಮಾಡಿದೆ. ಇದು ಮಾನವ ಸಾಕುವ ಪ್ರಾಣಿ–ಪಕ್ಷಿಗಳ ಮೇಲೂ ಮಾಡಿ ಆಹಾರೋತ್ಪಾದನೆ ಮಾಡಿಕೊಂಡು ಸಸ್ಯ ಮತ್ತು ಮಾಂಸ ಆಹಾರವನ್ನು ವೃದ್ಧಿಸಿಕೊಂಡು ಜೀವನ ಮಾಡುತ್ತಿರುವುದನ್ನು ಬಿಟ್ಟರೆ, ಇನ್ಯಾವ ಜೀವಿಗಳಿಗೂ ಲಿಂಗ ಸಂಬಂಧವಿಲ್ಲದೆ ಭೌತಿಕವಾಗಿ ದೊಡ್ಡ ಜೀವಿಗಳ ಹುಟ್ಟನ್ನು ಗುರುತಿಸಲಾಗಿಲ್ಲ. ಇಷ್ಟೇ ಏಕೆ? ಇದ್ದಕ್ಕಿದ್ದಂತೆ ಮೊಸರು ಹುಳಿ ಬಂದರೆ ಹುಳುವಾಗುತ್ತದೆ, ಜೀವಿಗಳು ತಿನ್ನುವ ಯಾವ ವಸ್ತುವಾದರೂ ಅದಕ್ಕೆ ನೀರು, ಗಾಳಿ, ದೂಳು ಸೇರಿದ್ದರ ಸಮಯ ಮೀರಿದರೆ, ಅವೆಲ್ಲಾ ಹುಳುವಾಗುತ್ತವೆ. ಅವುಗಳಿಗೆ ಲಿಂಗ ಸಂಬಂಧ ಹೇಗೆ? ಎಂದು ಪ್ರಶ್ನೆ ಮೂಡಬಹುದು. ಇದನ್ನೆ ಪ್ರಕೃತಿ ವಿಸ್ಮಯವೆನ್ನುವುದು. ಅದು ಪ್ರಕೃತಿಯ ಜೀವಾಣುಗಳೊಳಗೆ ಇಂತಹ ಅವಿನಾಭಾವದ ಸಂಬಂಧವನ್ನು ಪ್ರಕೃತಿ ಕೂಡಿಸಿರುವುದನ್ನು ಯಾವುದರಲ್ಲೂ ಅಳೆಯಲಾಗದು. ಈ ಎಲ್ಲಾ ಬೆಳವಣಿಗೆಗಳು ಮಾನವ ಕೇಂದ್ರಿತ ವಿಜ್ಞಾನದ ಪರಿಷ್ಕರಣಾ ಸಂಶೋಧನೆಗಳೆನ್ನುವುದರಲ್ಲಿ ಎರಡು ಮಾತಿಲ್ಲ. ಇದನ್ನೆ ಸಸ್ಯ ಸಂಕುಲ, ಪ್ರಾಣಿ ಸಂಕುಲಗಳ ಬಗ್ಗೆ ಚರ್ಚಿಸುವಾಗ ಆಯಾ ಅಧ್ಯಾಯಗಳಲ್ಲಿ ಪರಿಶೀಲಿಸಲಾಗಿದೆ.

ಜೀವಿಗಳ ಈ ಕ್ರಿಯೆಗಳ ಪರಿಷ್ಕಾರದಿಂದ ತಿಳಿಯುವುದೇನೆಂದರೆ; ಜೀವ ಸಂಸ್ಕೃತಿಯ ಹುಟ್ಟೆ ಹೆಣ್ಣು ಮತ್ತು ಗಂಡಿನ ಲಿಂಗ ಸಂಬಂಧದ ಚಯಾಪಚಯ ಕ್ರಿಯೆಯ ಪರಿಣಾಮ, ಇನ್ನೊಂದು ಜೀವಿಯ ಹುಟ್ಟು. ಇದು ಸ್ವಾಭಾವಿಕವಾಗಿ ಪ್ರಕೃತಿಯಲ್ಲಿ ನಡೆಯುತ್ತ ಬಂದಿದೆ. ಸಸ್ಯಗಳಲ್ಲಿ ಮಾತ್ರ ವಿಸ್ಮಯವಾದ ಕೆಲಸ ನಡೆಯುತ್ತದೆ. ಅಂದರೆ, ಗಿಡ–ಮರಗಳು ಹೂದುಂಬುವ ಸ್ಥಿತಿಯಲ್ಲಿದ್ದಾಗ, ಆಯಾ ಗಿಡ ಮರಗಳಿಗೆ ಪೂರಕವಾದ ಇನ್ನೊಂದು ಗಿಡ–ಮರಗಳ ಪರಾಗ ಅಣುವನ್ನು ಕೀಟಗಳು ತಮ್ಮ ಕಾಲು, ಬಾಲ, ಕೊಕ್ಕುಗಳ ಮೂಲಕ ತಂದು, ಹೂದುಂಬುವ ಸ್ಥಿತಿಯಲ್ಲಿರುವ ಗಿಡ, ಮರಗಳ ಮೇಲೆ ಕುಳಿತು ಸ್ಪರ್ಶಿಸಿದಾಗ, ನೆಡೆಯುವ ಕೀಟಗಳ ಕಾರ್ಯವನ್ನು ಪರಾಗಸ್ಪರ್ಶಕ್ರಿಯೆ ಎನ್ನುವುದು. ಆ ನಂತರವೇ ಗಿಡ ಮರಗಳು ಹೂದುಂಬಿ, ಕಾಯಾಗಿ ಬೀಜೋತ್ಪಾದನೆಯಾಗುವುದು.

ಕೀಟಗಳ ಈ ಮಧ್ಯವರ್ತಿ ಕ್ರಿಯೆಯನ್ನು ಅರಿತ ವಿಜ್ಞಾನಿಗಳು ಯಂತ್ರ ಬಳಕೆಮಾಡಿ ಇನ್ನೊಂದು ವಿಸ್ಮಯ ಕಾರ್ಯಕ್ಕೆ ಕೈ ಹಾಕಿ ಹೆಣ್ಣು ಗಂಡಿನ ಸ್ಪರ್ಶವಿಲ್ಲದೆ ಕೇವಲ ಹೆಣ್ಣಿನ ಜೀವಾಣುಗಳಲ್ಲೆ ಪ್ರಣಾಳು ಶಿಸುವನ್ನಾಗಿ ಸೃಷ್ಟಿಸಿದ ಕಾರ್ಯದಿಂದ ವಿಸ್ಮಯವಾಗಿ 'ಡಾಲಿ' ಹುಟ್ಟಿತು. ಅದೇ ರೀತಿ ನಾಟಿ ತಳಿಗಳಿಗೆ ಇನ್ನೊಂದು ಉತ್ತಮವೆನಿಸುವ ತಳಿ ಭಾಗವನ್ನು, ಸರಿಯಾಗಿ ಕಟ್ ಮಾಡಿ ಸೇರಿಸಿ, ಬೆಳೆಸುವ ಕಾರ್ಯವನ್ನು 'ಕಸಿ ಕಟ್ಟುವುದು' ಎನ್ನಲಾಯಿತು. ಈ ಪದ್ಧತಿಯಿಂದ ಒಂದು ತಳಿಯಲ್ಲಿ ಇನ್ನೊಂದು ತಳಿಯ ಫಲವನ್ನು ಪಡೆಯ ಬಹುದು, ಹಾಗೂ ಪ್ರಾಣಿ ಪಕ್ಷಿಗಳ ಹೆಣ್ಣು ತತ್ತಿಯಲ್ಲಿ ಗಂಡು ವೀರ್ಯವನ್ನು ಸೇರಿಸಿ, ಹೈಬ್ರಿಡ್ ತಳಿಯನ್ನು ಉತ್ಪಾದನೆ ಮಾಡುವ ಕಾರ್ಯವನ್ನು ವಿಜ್ಞಾನ ಮಾಡುತ್ತಿದೆ. ಇವೆಲ್ಲಾ ಮಾನವ ಕೇಂದ್ರಿತ ಪ್ರಕೃತಿ ವಿರೋಧಿ ವೈಜ್ಞಾನಿಕ ಆಧುನಿಕ ತಂತ್ರಜ್ಞಾನದ ಸಾಧನೆಯಾಗಿದೆ.

ಮಾನವ ಸಂತತಿ ಭೂಮಿ ಮೇಲೆ ಹುಟ್ಟಿ ಬೆಳೆದ ಮೇಲೆ, ಈ ಪ್ರಕೃತಿಯನ್ನು ಅನುಕರಿಸಿ, ಕಲಿತು, ಪ್ರಕೃತಿಯ ನಾನಾ ಸಂಪತ್ತನ್ನು ಬಳಸಿಕೊಂಡು; ಜೀವನ ಮಾಡುತ್ತ, ತನ್ನ ಆಶ್ರಯ ಪಡೆದುಕೊಂಡು ಬೆಳೆದವನು. ನಂತರ ಪ್ರಕೃತಿಗೆ ವಿರುದ್ಧವಾದ ಚಟುವಟಿಕೆಗಳನ್ನು ಆರಂಭಿಸಿ, ಈಗ ಅದರ ಅವಸಾನಕ್ಕೆ ಕಾರಣವಾಗುತ್ತಿದ್ದಾನೆ. ಇದರಿಂದಾಗುತ್ತಿರುವ ಪ್ರಕೃತಿಯ ದುಷ್ಪರಿಣಾಮ. ಅದೇ ಜೀವ ಸಂಕುಲದ ಮೇಲೆ ಪರಿಣಾಮ ಬೀರಿ ಎಷ್ಟೋ ಜೀವಿಗಳು ವಿನಾಶವಾಗಿವೆ. ಇದರ ಪರಿಣಾಮ ಮಾನವನು ಸೇರಿದಂತೆ ನಾನಾತರದ ಸಸ್ಯ, ಪ್ರಾಣಿ–ಪಕ್ಷಿ–ಕೀಟ ಸಂಕುಲಗಳೆಲ್ಲ ಒಂದನ್ನೊಂದು ಅವಲಂಭಿಸಿ, ಅವುಗಳ ಜೀವನಾಭಿವೃದ್ಧಿ ಆಗುತ್ತಿದ್ದದ್ದು; ಈಗ ಅದು ಕ್ಷೀಣಿಸುತ್ತಾ ಬಂದು, ಎಲ್ಲಾ ಜೀವಿಗಳ ದೈಹಿಕ, ಮಾನಸಿಕ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಎಲ್ಲಾ ಜೀವಿಗಳು ಒಂದಕ್ಕೊಂದು ಜೀವ ಹಿಂಸೆಯ ಬದುಕನ್ನು ಅವಲಂಭಿಸಿವೆ. ಮಾನವನಿಗೆ ಅರಿವಿದ್ದು, ಅರಿವಿಲ್ಲದಂತೆ ವ್ಯವಹರಿಸುತ್ತಾ ಜೀವಿಸುತ್ತಿದ್ದಾನೆ. ಇದರಿಂದಾಗುತ್ತಿರುವ ನಾನಾ ತರದ ನಿಸರ್ಗದ ದುಷ್ಪರಿಣಾಮಗಳಾದ ಪ್ರಕೃತಿ ವಿಕೋಪಗಳಿಂದ

ಸಾಮೂಹಿಕವಾಗಿ ಮಾನವನನ್ನು ಸೇರಿಸಿಕೊಂಡು, ಆಯಾ ಪ್ರಾದೇಶಿಕ ಜೀವ ಸಂಕುಲಗಳನ್ನು ಅಹುತಿ ಪಡಯುತ್ತಿದೆ. ಹಾಗಾಗಿ ಇಂದಾದರೂ ಮಾನವನ ವೈಜ್ಞಾನಿಕ, ತಾಂತ್ರಿಕ, ಆಧುನಿಕ ಅಭಿವೃದ್ಧಿಯ ಬೆಳವಣಿಗೆಗಳ ಗುರಿ ಮತ್ತು ತಿಳುವಳಿಕೆಯ ಪರಿಕಲ್ಪನೆ ಹಾಗೂ ಚಿಂತನೆಗಳೆಲ್ಲಾ 'ಜೀವ ತತ್ವದ' ಆಲೋಚನೆಗಳ ದಾರಿ ಹಿಡಿಯದೆ, ಪರಿವರ್ತನೆ ಸಾಧ್ಯವಿಲ್ಲ. ಆದ್ದರಿಂದ ಮಾನವನ ಜೀವನ ಬೆಳವಣಿಗೆಗಳ ತಾತ್ವಿಕ ವಿಚಾರ, ಚಿಂತನೆ, ಅಭಿವೃದ್ಧಿಯ ಆಲೋಚನೆಗಳೆಲ್ಲ ಪುನರಾವಲೋಕನಕ್ಕೆ ಒಳಪಟ್ಟು, ಮಾನವ ಜೀವನವೇ ಹೊಸ ಜೀವನ ತತ್ವದ ತಿಳುವಳಿಕೆಗೆ ಎಡೆಮಾಡಿಕೊಡುತ್ತಿದೆ. ಈ ಎಲ್ಲಾ ಕಾರಣಗಳಿಂದ ಮಾನವನ ಕೆಲವು ಪ್ರಧಾನ ತತ್ವ ಚಿಂತನೆಗಳಿರ ಬಹುದು, ಆಧುನಿಕ ವಿಜ್ಞಾನ–ತಂತ್ರಜ್ಞಾನಗಳಿರ ಬಹುದು, ಜಗತ್ತಿನ ಎಲ್ಲಾ ದೇಶ ರಾಜ್ಯಗಳ ಆಡಳಿತದ ಕಾರ್ಯಯೋಜನೆಗಳಿರ ಬಹುದು ಇವೆಲ್ಲಾ ಜೀವ ತತ್ವದ ಕಾರ್ಯಯೋಜನೆಗೆ ಒಳಪಡಬೇಕಾದ ಅನಿವಾರ್ಯತೆಯಿದೆ. ಇದರೊಂದಿಗೆ ಸಾಹಿತ್ಯ ಚಿಂತನೆಗಳು, ಶೈಕ್ಷಣಿಕ ಚಿಂತನೆ, ಪದ್ದತಿಯ ರೀತಿ ನೀತಿಯ ಸ್ವರೂಪಗಳೆಲ್ಲಾ ಮನುಷ್ಯ ತತ್ವವಾದ ಮಾನವೀಯತೆಗೆ ಪರ್ಯಾಯವಾಗಿ 'ಜೀವ ತತ್ವದ' ಸತ್ಯವನ್ನು ಮನವರಿಕೆ ಮಾಡುವುದೇ ಇವತ್ತಿನ ಪ್ರಾಧಾನ ಸಂಗತಿ. ಈ ಕಾರಣಕ್ಕಾಗಿ ಈಗಿರುವ ಕೆಲವು ತಾತ್ವಿಕ ಚಿಂತನೆಗಳು ರೂಪುಗೊಂಡ ಹಿನ್ನೋಟಗಳ ಮಾದರಿಗಳನ್ನು ಪುನರಾವಲೋಕಿಸಿ; ವರ್ತಮಾನದ ನಾಳೆಯ ಮಾನವ ಸಂತತಿಯ ಅಸ್ಥಿತ್ವಕ್ಕಾಗಿ, ಅವನು ವಾಸಿಸುವ ಜೀವಪರಿಸರದ ಅಸ್ಥಿತ್ವದ ಪ್ರಜ್ಞೆ ಸದಾ ಜಾಗೃತವಾಗಿರಬೇಕು. ಇದಕ್ಕಾಗಿ ಜೀವಸಂಕುಲದ ಜೀವಪರ ಕಾಳಜಿಯಿಂದ ಜೀವ ತತ್ವವನ್ನು ಮಾನವನ ಪ್ರತಿ ರಂಗಗಳಲ್ಲೂ ಅನುಸರಿಸುವ ಜರೂರನ್ನು ಜನಮನಕ್ಕೆ ಬಿತ್ತಿ ಬೆಳೆಯುವುದು ಅನಿವಾರ್ಯವಾಗಿದೆ.

3. ಜೀವಿ ಸಂಕುಲಗಳ ಯೌವನ–ಸಂತಾನೋತ್ಪತ್ತಿಗಳ ಸ್ವಾಭಾವಿಕವಾದ ತಾತ್ವಿಕ ನಿಯಮಗಳು:

ಪ್ರಕೃತಿಯಲ್ಲಿ ಹುಟ್ಟಿದ ಪ್ರತಿ ಜೀವಕ್ಕೂ ಅದರದೆ ಆದಾ ಯೌವನ, ಯೌವನಕ್ಕೆ ತಕ್ಕ ಹೊಂದಾಣಿಕೆಯ ಭಿನ್ನ ಲಿಂಗಿ ಸಂಗಾತಿಯನ್ನು ಅರಸಿ ಕೂಡುವ ಗುಣ, ಪ್ರಕೃತಿಯ ಸಹಜ ಚಟುವಟಿಕೆಗಳಾಗಿವೆ. ಸಕಲ ಜೀವಿಗಳಿಗೂ ಯೌವನ ವೃದ್ದಿಸುವುದು ಅವುಗಳು ವಾಸವಾಗಿರುವ ಸ್ಥಳ, ಪರಿಸರ, ಕಾಲದ ವಾತವರಣ, ಅದಕ್ಕನುಗುಣವಾದ ಆಹಾರ ಸೇವನೆ, ಇವುಗಳಿಂದ ಸಿಗುವ ವಿಟಮಿನ್ ಮತ್ತು ನಾನಾ ಪೂರಕವಾದ ಖನಿಜಾಂಶಗಳು ಆಯಾ ಜೀವಿಗಳು (ಸಸ್ಯ, ಪ್ರಾಣಿ, ಪಕ್ಷಿ, ಕೀಟ,(ಭೂಚರ), ಜಲಚರ, ವಾಯುಚರವಾಸಿಗಳಿಗೆಲ್ಲಾ) ಒಂದೇ ಸಾಮಾನ್ಯ ನಿಯಮ. ಇದು ಮಾನವನಿಗೇನು ಭಿನ್ನವಾಗಿಲ್ಲ. ಆದರೆ ಅವನ ಅತಿಕ್ರಮಣ ನೀತಿಯ ತಿಳುವಳಿಕೆಯಿಂದ, ಬಹು ಅನುಭೋಗಿ ತತ್ವಗಳ ದುರಾಸೆಗಳಿಂದ ನಾನಾ ದುಷ್ಪರಿಣಾಮಗಳುಂಟಾಗಿತ್ತಿವೆ.

ಸಂತಾನೋತ್ಪತ್ತಿಯ ಸಂಬಂಧ ಸಸ್ಯ ಸಂಕುಲಕ್ಕೆ ಒಂದು ರೀತಿ ಇದ್ದರೆ, ಪ್ರಾಣಿ, ಪಕ್ಷಿ, ಕೀಟ, ಜಲಚರ ಜೀವಿಗಳಿಗೆ ಇನ್ನೊಂದು ತರಹ ಇದೆ. ಇವುಗಳಿಗೆ ಬಾಲ್ಯದಿಂದ ಯೌವನ ಬಂದಂತೆ ತಂದೆ, ತಾಯಿ, ಅಕ್ಕ, ಅಣ್ಣ, ತಮ್ಮ, ತಂಗಿ ಎಂಬ ಯಾವ ಭೇದ–ಭಾವ ಭಿನ್ನತೆಯ ಸಂಬಂಧಗಳ ಅರಿವಿರುವುದಿಲ್ಲ. ಇವು ತಮ್ಮ ಸಮಯ, ಸಂದರ್ಭಕ್ಕಾದ ಮನಸ್ಸು, ಮತ್ತು ವಯಸ್ಸಿನ ದೇಹ ಪ್ರಕೃತಿಗೆ ಅನುಗುಣವಾಗಿ, ತಾವು ವಾಸಮಾಡುತ್ತಿರುವ ಪರಿಸರದಲ್ಲಿ ಸಿಗುವ ಭಿನ್ನ ಲಿಂಗಿಗಳೊಂದಿಗೆ ವಯಸ್ಸು, ಸಂಬಂಧದ ಅರಿವಿಲ್ಲದೆ ಒಪ್ಪಿತ ಇನ್ನೊಂದು ಜೀವಿಯೊಂದಿಗೆ ಕೂಡಿ ಸಂತನೋತ್ಪತ್ತಿ ಮಾಡುತ್ತವೆ. ಆದರೆ ಸಸ್ಯ ಸಂಕಲದ ಸಂತಾನೋತ್ಪತ್ತಿಗೆ ಕೀಟಗಳು ಮಧ್ಯವರ್ತಿಯಾಗಿ ಭಾಗವಹಿಸುತ್ತವೆ. ಅವುಗಳಲ್ಲಿ ಯಾವ ಕೀಟವಾದರೂ, ಯಾವ ಸಸ್ಯ ಸಂಕುಲವಾದರೂ ಆಗ ಬಹುದು. ಅವುಗಳು ವಾಸಮಾಡುವ ಜಾಗದಲ್ಲಿ ಅವುಗಳ ಆಹಾರ, ದೇಹ ಗುಣದ ಚಟುವಟಿಕೆಗಳಿಗೆ ಅನುಗುಣವಾಗಿ ಕಾಲ ಮತ್ತು ವಾತವರಣಕ್ಕೆ ಅನುಗುಣವಾಗಿ ಸ್ವಭಾವಿಕವಾಗಿ ಒಂದಕ್ಕೊಂದು ನಡೆದುಕೊಳ್ಳುತ್ತವೆ. ಈ ನಡವಳಿಕೆಯಲ್ಲೆ ಸಂತಾನೋತ್ಪತ್ತಿಯು ನೆಡೆದಿರುತ್ತದೆ, ಒಂದರಿಂದ ಇನ್ನೊಂದಕ್ಕೆ ಆಹಾರ, ಸುಗಂಧವೂ ಸಿಕ್ಕಿರುತ್ತದೆ. ಹೀಗೆ ಒಂದಕ್ಕೊಂದು ಪರಸ್ಪರ ಅವಲಂಭಿಸಿ ಜೀವನ ಮಾಡುತ್ತವೆ. ಈ ಸಂಬಂಧಗಳ ವಿಸ್ಮಯ ಚಟುವಟಿಕೆ ಮಾನವನಿಗೆ ಅಷ್ಟು ಸುಲಬವಾಗಿ ಅರ್ಥವಾಗುವುದಿಲ್ಲ. ಅದನ್ನು ವಿಜ್ಞಾನ ಮಾತ್ರ ತನ್ನ ಶೋಧ ಕ್ರಿಯೆಗಳಿಂದ ಅರ್ಥಮಾಡಿಕೊಳ್ಳಲು ಸಾಧ್ಯವಾಗಿರುವುದು ಕಿಂಚಿತ್ತು ಮಾತ್ರ. ಈ ಎಲ್ಲಾ ಪ್ರಕೃತಿ ಜೀವಿಗಳ ಚಟುವಟಿಕೆಗಳ ಹಿನ್ನೆಲೆಯನ್ನು ಗಮನಿಸಿದರೆ, ಮಾನವನಿಗೂ ಇತರ ಜೀವಿಗಳಿಗೂ ಎಷ್ಟೊಂದು ಬಿನ್ನ ವ್ಯತ್ಯಾಸದ ಜೀವನ ಚಟುವಟಿಕೆಗಳು ಅಡಕವಾಗಿವೆ ಪ್ರಕೃತಿಯಲ್ಲಿ ಎಂಬುದೆ ವಿಸ್ಮಯ.

ಸಾಮಾನ್ಯವಾಗಿ ಮಾನವನನ್ನು ಹೊರತುಪಡಿಸಿ ಇನ್ಯಾವ ಜೀವಿಗಳಿಗೂ ವಾತವರಣದ ಸಕಲ ಕಾಲಗಳಲ್ಲೂ ಸಂತಾನೋತ್ಪತ್ತಿ ಮಾಡುವ ಶಕ್ತಿಯನ್ನು ಪ್ರಕೃತಿ ನೀಡಿಲ್ಲ. ನೀಡಿದ್ದರೂ ಅವು ಮಾನವನಂತೆ ವರ್ತಿಸುವುದಿಲ್ಲ. ಹಾಗೆಯೇ .ಸಂಗಾತಿ ಆಯ್ಕೆಯನ್ನು ಮಾನವ ಪ್ರಯತ್ನ ಪೂರ್ವಕವಾಗಿ, ತನ್ನ ಕೌಟುಂಬಿಕ

ಸಂಬಂಧಗಳನ್ನು ಹೊರತುಪಡಿಸಿ, ಈಗೀಗಾ ಒಪ್ಪಿತ ಸಂಬಂಧಗಳನ್ನು ಆಯ್ದುಕೊಂಡು ಸೇರುವುದು ಮಾನವ ಸಂಕುಲ ಮಾತ್ರ. ಈ ಸಂಬಂಧಗಳು ಅನಿರೀಕ್ಷಿತವಾಗಿ ಒದಗಿ ಬರುತ್ತವೆ ಎಂಬುನ್ನು ಗಮನಿಸಿದರೆ, ಮಾನವ ದಾಂಪತ್ಯ, ಸಂಗಾತಿಗಳ ಸಂಬಂಧವೂ ಕೂಡ ನಿಸರ್ಗ ನಿಯಮವೆಂಬ ಭಾವ ತರುತ್ತದೆ. ಬಾಲ್ಯ, ಯೌವನ, ಮುಪ್ಪು ಈ ಮೂರು ಹಂತಗಳು ಸಕಲ ಜೀವಿಗಳಿಗೂ ಸಂಬಂಧಿಸಿದ್ದು. ಹುಟ್ಟಿದ ಜೀವಕ್ಕೆ ಖಚಿತವಾದ ಆಯಸ್ಸಿರುವುದಿಲ್ಲ. ಆದರೆ ಒಂದೊಂದು ಜೀವಿಗಳಿಗೂ ಅವುಗಳದ್ದೇಯಾದ ಜೀವನ ಆಯಸ್ಸು ಒಂದು ಅಂದಾಜಿನಲ್ಲಿ ವಿಜ್ಞಾನ ಗುರುತು ಮಾಡಿದೆ. ಎಷ್ಟೋ ಜೀವಿಗಳು ಹುಟ್ಟಿದಾಗಲೇ ಸಾಯುತ್ತವೆ. ಕೆಲವುಗಳಿಗೆ ನಿಮಿಷ, ಗಂಟೆ, ವರ್ಷ, ಹೀಗೆ ಒಂದು ವರ್ಷದಿಂದ ಕೆಲವು ಜೀವಿಗಳಿಗೆ ಹಿಂದೆ ನೂರಾರು ವರ್ಷ ಆಯಸ್ಸುಳ್ಳವಾಗಿದ್ದೊ. ಅಷ್ಟರಲ್ಲೆ ಬಾಲ್ಯ, ಯೌವನ, ಮುಪ್ಪುಗಳಲ್ಲಿ ಜೀವನ ಕಳೆದಿರುವುದು ಈಗ ಇತಿಹಾಸ. ಹಾಗಾಗಿ ಹಿಂದಿನಂತಿದ್ದ 120–150 ಕ್ಕೂ ಹೆಚ್ಚಿನ ವಯಸ್ಸು ಇಂದು ಯಾವ ಜೀವಿಗಳಿಗೂ ಇದ್ದಂತಹ ದಾಖಲೆಗಳು ಗೋಚರಿಸುತ್ತಿಲ್ಲ. ಇಂದು ನೂರಾರು ವರ್ಷ ಜೀವಿಸುತ್ತಿದ್ದ ಮಾನವನಿಗೂ ಇದೇ ನಿಯಮ ಅನ್ವಯವಾಗಿ, ಅವನ ಸರಾಸರಿ ವಯಸ್ಸು ಈಗ 40ಕ್ಕೆ ಇಳಿದಿದೆ ಎಂಬುದೇ ವಿಪರ್ಯಾಸದ ಸಂಗತಿ. ಎಲ್ಲಾ ಜೀವಿಗಳಿಗೂ ಜೀವನದ ನಿಯಮ ಒಂದೆ ಆದರೂ, ಆಯಾಯ ಜೀವಿಗಳ ಜೀವನ ಹಂತಗಳ ಸ್ವರೂಪ ಮಾತ್ರ ಬೇರೆ ಬೇರೆ. ಹಾಗಾಗಿ ಮಾನವ ಇತರ ಜೀವಿಗಳಿಗೆ ಭಿನ್ನ ಜೀವಿಯಾಗಿದ್ದಾನೆ. ಅವನು ಧೈಹಿಕ ಸ್ವರೂಪ, ಮಾನಸಿಕ, ಮಾತು, ಚಿಂತನೆ, ಕೆಲಸ, ನಡವಳಿಕೆ, ಅನುಭೋಗ, ಸಾಧನೆಗಳೆಲ್ಲಾ ವಿಶಿಷ್ಟವಾದವು. ಇವುಗಳನ್ನು ನೋಡಿದರೆ, ಪ್ರಕೃತಿಯ ವಿಸ್ಮಯ ಗುಣಗಳು ಅಚ್ಚರಿ ತರಿಸುತ್ತವೆ.

ಸಕಲ ಜೀವಿಗಳ ಕ್ರಿಯಾಶೀಲ ಚಟುವಟಿಕೆಗಳು ನಡೆಯುವುದೆ ಯೌವನದಲ್ಲಿ. ಅದರಿಂದಾಗುವ ಬೆಳವಣಿಗೆಗಳು ಸುಂದರವಾಗಿರುತ್ತವೆ, ಇದರಿಂದಾಗಿ ಜಗತ್ತೆ ಭವ್ಯವಾಗಿ ಕಾಣುತ್ತದೆ. ಅನಂತರೆ ನಿಸರ್ಗದ ಜೀವ ಸಂಕುಲಗಳಿಗೆಲ್ಲಾ ಯೌವನದ ಸಂತಾನೋತ್ಪತ್ತಿ ಕಾರ್ಯಗಳು ಸಹಜ, ಸ್ವಾಭಾವಿಕ ಕಾರ್ಯಗಳು. ಈ ಕಾರ್ಯಗಳ ಪ್ರಕೃತಿಯಲ್ಲಿ, ಯಾವುದೇ ರೀತಿಯ ಭೇದ ಭಾವವಿಲ್ಲ. ಹಾಗಾಗಿ ಈ ಜೀವಿಗಳ ನಡವಳಿಕೆಗಳ ಭಿನ್ನತೆಗಳೇ ಈ ಅಹಿಂಸೆಗೆ, ಅಸಮಾನತೆಗೆ ಕಾರಣವಾಗಿದೆ. ಇದರ ಸಮತೋಲನ ಸ್ಥಿತಿಗೆ ತರುವುದೇ, ಈ ಸೈದ್ಧಾಂತಿಕ ನೀತಿ ತತ್ವಗಳನ್ನು ಅಳವಡಿಕೊಂಡು ಜೀವನ ಮಾಡುವ ಕ್ರಮವೇ ವರ್ತಮಾನದ ಅಗತ್ಯವಾಗಿದೆ.

ಜೀವ ಸಂಕುಲಗಳಲ್ಲೆಲ್ಲಾ ಸಸ್ಯ ಸಂಕುಲಗಳ ಜೀವನ ಸಂಸ್ಕೃತಿ ಅಪಾರ ಉಪಯೋಗಕಾರಿಯಾದುದ್ದು. ಯಾಕೆಂದರೆ ಅದು ಯಾರಿಂದಲೂ ಏನನ್ನು ಬಯಸದೆ ತನ್ನ ಎಲೆ, ಕಾಂಡ, ಬೇರು, ಹೂವು, ಕಾಯಿ, ಹಣ್ಣು, ಬೀಜಗಳೆಲ್ಲಾ ಇತರ ಜೀವ ಸಂಕುಲಗಳಿಗೆ ಆಹಾರ, ನೆರಳು, ಆರೋಗ್ಯಕ್ಕೆ ನಾನಾ ರೀತಿಯಲ್ಲಿ ಸಹಾಯವಾಗಿವೆ. ಇವುಗಳದ್ದು ಸ್ವಾವಲಂಭಿ ಜೀವನ, ಉಳಿದ ಜೀವಿಗಳದ್ದು ಪರಾವಲಂಭಿ ಜೀವನವಾಗಿದೆ. ಇದರೊಳಗೂ ಇರುವ ಜೀವಿಗಳು ಇನ್ನಿತರ ಜೀವಿಗಳಿಗೆ, ತನ್ನ ಸಹಚರಿ ಜೀವಿಗಳಿಗೆ ಸಹಾಯವಾಗಿ ಜೀವಿಸುವುದೆ ಸಕಲ ಜೀವಿಗಳ ಪ್ರಾಕೃತಿಕ ಜೀವನ ಸಂಬಂಧವಾಗಿದೆ. ಆದರೆ ಮಾನವ ಈ ಎಲ್ಲಾ ಜೀವಿಗಳ ಸಂಬಂಧಗಳಿಗಿಂತ ಭಿನ್ನವಾಗಿ ಸ್ವಾರ್ಥ ಸಂಸ್ಕೃತಿಗೆ ಬದ್ದನಾಗಿ ಬಾಳುತ್ತಿರುವುದೇ, ಪ್ರಕ್ರತಿಯ ದುಷ್ಪರಿಣಾಮಕ್ಕೆ ಕಾರಣವಾಗಿದ್ದಾನೆ. ಇಂತಹ ಚಟುವಟಿಕೆಗಳಿಗೆ ಮಾನವನಿಗೆ ವಯಸ್ಸಿನ ಮಿತಿಯಿಲ್ಲಾ. ಮಾನವನಿಗೆ ಪ್ರಕೃತಿಯೇ ನೀಡಿದ ಸ್ವಾಭಾವಿಕ ಗುಣವಿರಬಹುದೇನಿಸ ಬಹುದು, ಆದರೆ ಎಲ್ಲಾ ಮಾನವರು ಒಂದೇ ಗುಣ ನಡತೆಯಲ್ಲಿಲ್ಲಾ. ಹಾಗಾಗಿ ಸ್ವಾರ್ಥ ಭಾವದ ಸಂಸ್ಕೃತಿ ಜನರ ಮತ್ತು ಆಢಳಿತ ಸ್ವರೂಪಗಳು ಪರಿವರ್ತನೆಯಾಗಬೇಕೆಂಬುದೇ ನಮ್ಮ ಇಲ್ಲಿಯ ಸೈದ್ಧಾಂತಿಕ ನಿಲುವು.

4. ಜೀವಿಗಳಲ್ಲಿ ಮುಪ್ಪು, ಸಹಜ ಸಾವು ಮತ್ತು ಆಕಸ್ಮಿಕ ಅವಸಾನವಾಗುವ ಜೀವನ ಚಟುವಟಿಕೆಗಳ ತಾತ್ವಿಕ ಸಿದ್ಧಾಂತ:

ಸಾವಿನ ಮಾದರಿಗಳು:

1. ಹುಟ್ಟುವಾಗ ತಾಯಿ ಗರ್ಭದಲ್ಲೆ ಏರುಪೇರುಗಳಿಂದ ಸಂಭವಿಸುವ ಆಕಸ್ಮಿಕ ಸಾವು. ಎಲ್ಲಾ ಜೀವಿಗಳಲ್ಲೂ ಆಗುತ್ತದೆ.
2. ಪ್ರಕೃತಿ ಸಹಜ ಮುಪ್ಪಿನಿಂದ ಬರುವ ಸಾವು ಎಲ್ಲಾ ಜೀವಿಗಳಲ್ಲೂ ಕಂಡುಬರುತ್ತದೆ.
3. ಪ್ರಕೃತಿ ವಿಕೋಪಗಳಿಂದ ಪ್ರಾದೇಶಿಕವಾಗಿ ಸಂಭವಿಸುವ ಸಕಲ ಜೀವಿಗಳ ಸಾವು ಜೀವಿಗಳ ಜಗತ್ತಿನಲ್ಲಿ ಸಹಜವಾಗಿರುತ್ತದೆ.
4. ಮಾನವ ನಿರ್ಮಾಣ ವಾಹನಗಳ ಅಪಘಾತಗಳಿಂದಾಗುವ ಸಾವು, ಮಾನವನೇನು ಎಲ್ಲಾ ಜೀವಿಗಳಿಗೂ ಮಾನವನ ನಡವಳಿಕೆಗಳಿಂದ ಸಂಭವಿಸುತ್ತದೆ.

5. ಆಹಾರದ ವೈಪರಿತ್ಯಗಳಿಂದ ಉಂಟಾಗುವ ದೈಹಿಕ ರೋಗಗಳಿಂದಾಗುವ ಸಾವು. ಇದು ಕೂಡ ಎಲ್ಲಾ ಜೀವಿಗಳಲ್ಲೂ ಸಂಭವಿಸುತ್ತದೆ.
6. ಜೀವಿಸುವುದಕ್ಕಾಗಿ, ಒಂದನ್ನೊಂದು ತಿಂದು ಬದುಕಲು ನಡೆಯುವ ಭೇಟೆಗಳಿಂದ ಸಂಭವಿಸುವ ಸಾವು. ಇದು ಸಕಲ ಜೀವಿಗಳಲ್ಲಿ ನಡೆಯುವ ಸ್ವಾಭಾವಿಕ ಸಾವು.
7. ತಮಗೆ ತಾವೆ ಜೀವನ ತ್ಯೆಜಿಸುವುದು ಮತ್ತು ಅಪಮಾನ ಎದುರಿಸಲಾರದೆ, ಕಷ್ಟಗಳನ್ನು ತಡೆಯಲಾರದೆ, ಬೆಸೆತ್ತು ಹಲವಾರು ಮಾದರಿಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದು ಮಾತ್ರ ಮಾನವ ಜೀವಿಗಳಲ್ಲಿ ಹೆಚ್ಚು. ಉಳಿದ ಜೀವಿಗಳಲ್ಲಿ ಹಾಗೆ ನೆಡೆಯ ಬಹುದು ಇಲ್ಲಾ ನೆಡೆಯದಿರಲೂ ಬಹುದು. ಅದರೆ ಮಾನವ ಗ್ರಹಿಸಲಾಗಿಲ್ಲ
8. ಒಂದಕ್ಕೊಂದು ದುರಾಸೆ, ದ್ವೇಷ, ಅಸುಹೆ, ಸಿಟ್ಟು, ಹಿಂಸಾ ಚಟುವಟಿಕೆಗಳಿಂದಾಗುವ ಹೋರಾಟ, ಯುದ್ಧಗಳಿಂದಾಗುವ ಸಾವು. ಮಾನವರಲ್ಲಿ ಜಾಸ್ತಿಯಾದರೂ ಇತರ ಪ್ರಾಣಿಗಳಲ್ಲೂ ನಡೆಯಬಹುದು. ಸಿಟ್ಟಿನ ಹೋರಾಟ ಎಲ್ಲಾ ಜೀವಿಗಳಲ್ಲೂ ಸಹಜವಾಗಿದೆ.
9. ಉಸಿರಾಟದ ಏರಿಳಿತದ ತೊಡಕುಗಳಿಂದ ಸಂಭವಿಸುವ ಸಾವು. ಮಾನವನಲ್ಲಿರುವಂತೆ ಎಲ್ಲಾ ಜೀವಿಗಳಲ್ಲೂ ಇರುವ ಸಾಧ್ಯತೆಗಳಿರುತ್ತವೆ.
10. ಮಾನವ ನಿರ್ಮಿತ ರಾಸಾಯನಿಕ ಗೊಬ್ಬರ, ಕೀಟನಾಶಕ, ಔಷಧಿಗಳಿಂದ ಸಸ್ಯ, ಪ್ರಾಣಿ, ಜಲಚರಗಳ ಮೇಲಾಗುತ್ತಿರುವ ದುಷ್ಪರಿಣಾಮಗಳಿಂದ ಉಂಟಾಗುತ್ತಿರುವ ಸೈಲೆಂಟ್ ಸಮರದಂತಹ ಸಾವು. ಸಕಲ ಜೀವಿಗಳ ಮೇಲೂ ನೆಡೆಯುತ್ತಿದೆ.
11. ಮಾನವ ನಿರ್ಮಿತ ಡೈನಮೆಟ್, ಅಣುಬಾಂಬ್‌ಗಳ ಬಳಕೆಯಿಂದಾಗುವ ಸಾಮೂಹಿಕ ಸಾವು.
12. ಇನ್ನೂ ಬಿನ್ನ ರೀತಿಯ ಸಾವುಗಳು ಜೀವಿಗಳಲ್ಲಿ ಸಂಭವಿಸುತ್ತಿವೆ.

ಪ್ರಕೃತಿಯ ಕಾರ್ಯ, ಗುಣಗಳು ಸ್ವಾಭಾವಿಕವಾದ ಸಹಜತೆಯಲ್ಲಿ ನಡೆಯುತ್ತಿರುತ್ತದೆ. ಹುಟ್ಟಿ ಬಾಲ್ಯದಲ್ಲಿದ್ದ ಸಕಲ ಜೀವಿಗಳು ಬೆಳೆದು, ಯೌವನದಿಂದ ಮುಪ್ಪಿಗೆ ಬರುವವರೆಗೆ ಜೀವನ ಚಟುವಟಿಕೆಗಳಲ್ಲಿ ತೊಡಗಿ, ಕೊನೆಗೆ ದೇಹ ಮತ್ತು ಮನಸ್ಸಿನ ದುರ್ಬಲತೆಗೆ ಒಳಪಟ್ಟು ಯಾವುದೇ ಕ್ರಿಯಾಶೀಲ ಚಟುವಟಿಕೆಗಳು ಮುಪ್ಪಿಗೆ ಬಂದಾಗ, ಜೀವಿಗಳ ಜೀವನ ಚಟುವಟಿಕೆಗಳು ನಡೆಯಲಾರವು. ಇದೇ ಸ್ಥಿತಿ ಬೆಳೆದಂತೆಲ್ಲಾ, ದೇಹ ಮತ್ತು ಮನಸ್ಸು, ಶಕ್ತಿಹೀನವಾಗಿ ಸಾವು ಸಂಭವಿಸುವುದು ಸಹಜ ಸಂಗತಿ. ಇದು ಯಾರನ್ನು ಬಿಟ್ಟದ್ದಿಲ್ಲ. ಇದು ಕೂಡ ಸಕಲ ಜೀವಿಗಳಿಗೂ ಒಂದೆ ನಿಯಮ. ಸಾವಿಲ್ಲದ ಜೀವಿಗಳು ಪ್ರಕೃತಿಯಲ್ಲಿ ಇಲ್ಲವೆ ಇಲ್ಲಾ. ವಯಸ್ಸಿನ ಅಂತರ ಮತ್ತು ಜೀವನ ಪದ್ಧತಿ ಮಾತ್ರ ಭಿನ್ನ ಭಿನ್ನವಾಗಿರುತ್ತದೆ. ಒಂದು ಜೀವಕ್ಕೆ ಸಾವು ಬಂದರೆ, ಇನ್ನೊಂದು ಜೀವದ ಹುಟ್ಟಿಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಿಂದಲೆಯೇನೋ ಮಾನವ ಹುಟ್ಟು, ಸಾವುಗಳೆರಡನ್ನು ಶುಭಸೂಚಕವಾಗೆ ನೋಡುತ್ತಾನೆ. ಸಾವಿನ ನಡವಳಿಕೆ ಸಸ್ಯ ಸಂಕುಲಗಳಲ್ಲಿ, ಅವುಗಳ ನಡವಳಿಕೆ ಮಾನವನಿಗೆ ತಿಳಿಯದಿರಬಹುದು. ಆದರೆ ಪ್ರತಿ ಪ್ರಾಣಿಗಳು ತಮ್ಮ ತಮ್ಮ ಕುಟುಂಬಗಳಲ್ಲಿ ಸಹಜ ಸಾವಾದರೆ ಅವುಗಳ್ನು ತಮ್ಮ ಮಿತಿಯಲ್ಲಿ ಗೌರವಯುತವಾಗಿ ಮಣ್ಣು ಅಥವಾ ಪೊದೆಗಳಲ್ಲಿ ಮರೆ ಮಾಡುತ್ತವೆ. ಈ ತಿಳುವಳಿಕೆಯಿಲ್ಲದ ಎಷ್ಟೋ ಪ್ರಾಣಿ, ಪಕ್ಷಿ, ಕೀಟಗಳು ಏನು ಮಾಡಲು ತಿಳಿಯದೆ, ತಮ್ಮ ಪಾಡಿಗೆ ತಾವು ನೋಡಿ, ಮರುಕ ಪಟ್ಟು ಮೌನವಾಗುತ್ತವೆ. ಆ ನಡವಳಿಕೆಗಳನ್ನೆ ಜೀವಿಗಳ ಸಂಸ್ಕೃತಿ ಎಂದು ಕರೆಯಲಾಗಿರುವುದನ್ನು ಈ ಹಿಂದೆ ಪ್ರಸ್ತಾಪಿಸಲಾಗಿದೆ.

ಅಸಹಜ, ಅಥವಾ ಆಕಸ್ಮಿಕ ಸಾವು, ಇಲ್ಲಾ ಹೆಚ್ಚು ಜೀವಿಗಳು ಗುಂಪು ಗುಂಪಾಗಿ ಅವುಗಳ ಅರಿವಿಗೆ ಬಾರದಂತೆ ಸಾವಾಗುವುದನ್ನು (ಜಲ, ಭೂ ಪ್ರಳಯ, ಭೂಕಂಪ ಇತ್ಯದಿ) ಅವಸಾನವೆಂದು ಕರೆಯಲಾಗಿದೆ. ಇದಕ್ಕೆ ಮಾನವನು ಸೇರಿಕೊಂಡಿದ್ದಾನೆ. ಇದಲ್ಲದೆ ಮಾನವನ ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದ ಆಕಸ್ಮಿಕ ಅಪಘಾತಕ್ಕೆ, ಒಳಪಟ್ಟು ಸಾವಾಗುವ ಜೀವಿಗಳು ಈಗ ಹೆಚ್ಚಾಗುತ್ತಿವೆ. ಇವೆಲ್ಲಾ ಮಾನವನಿಂದ ಸಂಭವಿಸುತ್ತಿರುವ ಜೀವಹೀನ ಅಭಿವೃದ್ದಿ ಕಾರ್ಯಗಳ ಫಲವಾಗಿದೆ. ಇಂತಹ ಅಭಿವೃದ್ದಿ ಕಾರ್ಯಗಳ ಮಿತಿಗಾಗಿ ಮಾನವನ ಮಾನಸಿಕ ಬದಲಾವಣೆಗಾಗಿ ಕೆಲವು ನೀತಿ ತತ್ವಗಳು ಬದಲಾಗಿ ಚಾಲನೆಗೆ ಬರಬೇಕು. ಅದಕ್ಕಾಗೆ ಕೆಲವು ಸೈದ್ಧಾಂತಿಕ ವಿಚಾರಗಳನ್ನು ಇಲ್ಲಿ ಬಿತ್ತಲಾಗುತ್ತಿದೆ. ಪ್ರಕೃತಿಯ ಸಕಲ ಜೀವಿಗಳ ಜೀವನ, ಅವುಗಳ ಆಹಾರ, ಆವಾಸ, ವಯಸ್ಸಿನ ಅನುಭವಗಳನ್ನು ಆಕ್ರಮಣಕಾರಿಯಾಗಿ ಕಿತ್ತುಕೊಳ್ಳುತ್ತಿರುವ ಮಾನವಾಭಿವೃದ್ಧಿ ಕಾರ್ಯಗಳು ಮಾನವ ಕೇಂದ್ರಿತವಾಗಿವೆ. ಹಾಗಾಗಿ ಮಾನವನ ಕಾರ್ಯಗಳು

ಜೀವಕೇಂದ್ರಿತವಾಗಿ ರೂಪುಗೊಂಡರೆ, ಎಷ್ಟೋ ದುಷ್ಪರಿಣಾಮಗಳನ್ನು ದೂರಮಾಡಬಹುದು. ಆದ್ದರಿಂದ ಮಾನವ ಕೇಂದ್ರಿತ ಜೀವನಕ್ಕೆ ಬದಲಾಗಿ ಭೂಮಿ ತತ್ವ, ಜೀವತತ್ವ, ಪ್ರಕೃತಿ ತತ್ವಾಧಾರಿತ ಚಿಂತನಾ ಕಾರ್ಯಗಳು ರೂಪುಗೊಂಡರೆ ಜೀವ ಸಂಸ್ಕೃತಿಗೆ, ಬಲಬಂದಂತಾಗಿ, ಪ್ರಕೃತಿಯೊಳಗೆ ನಡೆಯುವ ಜೀವಹೀನ ಚಟುವಟಿಕೆಗಳು ಕಡಿಮೆಯಾಗಿ, ಪ್ರಕೃತಿಯ ಶುದ್ದತಾ ಕಾರ್ಯ ನಿಧಾನವಾಗಿ ಅಭಿವೃದ್ಧಿಯಾಗುತ್ತದೆ. ಇದರಿಂದ ಜೀವ ಸಂರಕ್ಷಣೆ, ಪ್ರಕೃತಿ ಸಂರಕ್ಷಣೆ ಸ್ವಾಭಾವಿಕ ಬೆಳವಣಿಗೆಯಾಗಿ, ಎಲ್ಲಾ ಜೀವಿಗಳ ಆರೋಗ್ಯ ಸುಧಾರಣೆ, ಜೀವಿಗಳ ಜೀವನ ಸಂರಕ್ಷಣೆಯಿಂದ, ಭೂ ಪರಿಸರ ಶಾಂತಿ, ಪ್ರೀತಿ ಹೆಚ್ಚಾಗಿ, ಎಲ್ಲವೂ ಸಮತೋಲನ ಸ್ಥಿತಿ ರೂಪುಗೊಳ್ಳುವ ಅವಕಾಶವೂ ಆಗಬಹುದು. ಆದರೆ ಪ್ರಕೃತಿಯಲ್ಲಿ ಇದು ಧೀರ್ಘಾಕಾಲದ ಕಾರ್ಯವಾಗಿರುವುದಿಲ್ಲ. ಇದು ಪ್ರಕೃತಿಯ ಕ್ರೀಯಾಶೀಲ ಗುಣವಾದ್ದರಿಂದ, ಸಕಲ ಜೀವಿಗಳ ಮನಸ್ಸಿನ ಕಾರ್ಯ ಚಟುವಟಿಕೆಗಳ ಏರಿಳಿತದಿಂದ, ತುಂಬಾ ಮಂದಗತಿಯಲ್ಲಿ ಪ್ರಕೃತಿ ಸಹಜ ದುಷ್ಪರಿಣಾಮ ಉಂಟಾಗಿ ಅಸಮತೋಲನವಾಗುತ್ತದೆ. ಆದರೆ, ಮಾನವ ಮಾಡುವ ದುರಾಸೆಯ, ವಿಕೃತ ಕಾರ್ಯಗಳಿಂದಾಗುವ ಅಸಮತೋಲನದಷ್ಟು ದುಷ್ಪರಿಣಾಮ ಇತರ ಜೀವರಾಶಿಗಳಿಂದ ಉಂಟಾಗಿಲ್ಲ ಎಂಬುದನ್ನು ಮನಗಾಣಬೇಕು.

5. ಮಾನವೀಯತೆಯೊಳಗಿರುವ ಮಾನವತ್ವದ; ಮಾನವ ಕೇಂದ್ರೀತ, ಜೀವಹೀನ ತತ್ವ, ಸಿದ್ಧಾಂತಗಳು:

ಮಾನವೀಯತೆ ಎಂದರೆ, ಯಾವುದೇ ಮಾನವರಾದ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿ ಅಸಹಾಯಕವಾಗಿದ್ದಾಗ, ಸಹಾಯಕ್ಕೆ ಸ್ಪಂದಿಸುವುದು, ಆಕಸ್ಮಿಕವಾಗಿ ಸಾವು, ನೋವುಗಳಿಗೆ ಒಳಪಟ್ಟ ಯಾವ ಜೀವಿಗಳಾದರೂ ಅವುಗಳ ರಕ್ಷಣೆ ಮಾಡುವ ಗುಣ, ನಡತೆ, ಸ್ವಭಾವದ ಪ್ರತಿಪಾದನೆಗಾಗಿ; ಜಗತ್ತಿನ ಪ್ರತಿ ಮಾನವರನ್ನೊಳಗೊಂಡ ತಾತ್ವಿಕತೆಯನ್ನು ಕಟ್ಟಿಕೊಡಲಾಗಿದೆ.

ಜಗತ್ತಿನಲ್ಲಿ ಮಾನವ ಮಾನವರೊಳಗೆ, ಧರ್ಮ ಭೇದ, ವರ್ಣ(ಬಿಳಿ–ಕಪ್ಪು) ಭೇದ, ಜಾತಿ(ಚಾತುರ್ವರ್ಣ) ಭೇದ, ಲಿಂಗ(ಗಂಡು–ಹೆಣ್ಣು) ಭೇದ, ಶ್ರೀಮಂತ–ಬಡವ, ಮೇಲು–ಕೀಳು, ಸಮಾನತೆ–ಅಸಮಾನತೆ, ಶ್ರೇಷ್ಠ–ಕನಿಷ್ಠ, ಒಳ್ಳೆಯದು–ಕೆಟ್ಟದ್ದು, ಸತ್ಯ–ಸುಳ್ಳು, ಸುಜ್ಞಾನಿ–ಅಜ್ಞಾನಿ, ಅಕ್ಷರಸ್ತ–ಅನಕ್ಷರಸ್ತ, ಸುಖ–ಕಷ್ಟ, ಪುಣ್ಯ–ಪಾಪ, ಸ್ವರ್ಗ–ನರಕ ಇಂತಹ ಹಲವಾರು ವೈರುಧ್ಯವುಳ್ಳ ಸಾಮಾಜಿಕ ಮತ್ತು ಧಾರ್ಮಿಕ ನೀತಿ–ತತ್ವಗಳನ್ನು ಮಾನವ ಮಾನವನಿಗಾಗೆ ಹಾಕಿಕೊಂಡಿದ್ದಾನೆ. ಇಲ್ಲಿ ಬಳಸಿರುವ ಜೋಡಿ ಪದಗಳಲ್ಲಿ ಮೊದಲ ಮತ್ತು ಎರಡನೆ ಪದಗಳಿಗೆ ಒಳಪಡುವ ಜನಗಳ ಮೇಲೆ ನಿಯಂತ್ರಣವನ್ನು, ಧಾರ್ಮಿಕ ಗುರುಗಳು, ಕಾನೂನುಗಳು ಮತ್ತು ಕುಟುಂಬ ನಿಯಂತ್ರಣ ಮಡುವ ಹಿರಿಯ ಜೀವಿಗಳಿಂದಾಗುತ್ತದೆ. ಇದರಲ್ಲಿ, ಪ್ರಬಲ ಜೀವಿಗಳು ದುರ್ಬಲ ಅಥವಾ ಕಿರಿಯ ಜೀವಿಗಳ ಮೇಲೆ ಮಾಡುವ ಆಕ್ರಮಣ, ಶೋಷಣೆ, ಹಿಂಸೆಗಳಿಂದ ಉಂಟಾಗುವ ಪರಿಣಾಮಗಳೆ ಎರಡನೆ ಪದದ ಪ್ರತಿಫಲ. ಅಂದರೆ, ಕೆಟ್ಟ ಕಾರ್ಯಕ್ಕೆ ಸಿಗುವುದೆ ನರಕ, ಪಾಪ....ಇತ್ಯಾದಿ. ಇದು ಮಾಡುವವರಿಗೆಲ್ಲಾ ಸಿಗುತ್ತದೆ. ಅದೇ ರೀತಿ ಒಳ್ಳೆ ಕೆಲಸವನ್ನು ಯಾರುಬೇಕಾದರೂ ಮಾಡಬಹುದು ಇದಕ್ಕೆ ಯಾವುದೆ ಭೇದವಿಲ್ಲಾ. ಪ್ರೀತಿ, ಕರುಣೆ, ನಂಬಿಕೆ, ಅಭಿಮಾನಗಳಿಂದ ಮಾಡುವ ತ್ಯಾಗ, ಸಹಾಯ, ಸಹಾಕಾರ, ಜೀವ ರಕ್ಷಣೆ, ಧಾನ, ಧರ್ಮ ಮುಂತಾದಂತಹ ಕಾರ್ಯಗಳು ಪುಣ್ಯ, ಸ್ವರ್ಗ, ಶ್ರೇಷ್ಠ, ಸತ್ಯ ನಡೆ–ನುಡಿಗಳೆಂದು ಗುರುತಿಸಲಾಗುತ್ತದೆ. ಈ ಎರಡನೆ ಪದಕ್ಕೊಳಪಡುವವರನ್ನು ಹಿಂಸೆ, ಕೊಲೆಗಳಿಂದ ಮಾನಸಿಕ ಮತ್ತು ದೈಹಿಕ ಶೋಷಣೆಗೊಳಪಡಿಸುತ್ತಾರೆ. ಈ ಕಾರ್ಯವನ್ನು ದೊಡ್ಡವರು–ಚಿಕ್ಕವರು, ಬಡವ–ಶ್ರೀಮಂತ, ಬಿನ್ನ ಜಾತಿ, ವರ್ಗ, ವರ್ಣ, ಧರ್ಮದವರು ಯಾರು ಬೇಕಾದರೂ ಮಾಡಬಹುದು. ಇದು ಚಿಂತಿಸಿ ಕಾರ್ಯ ಸಾಧನೆ ಮಾಡುವ ಮಾನವರೊಳಗಿನ ಸಹಜ ದೋಷದ ಗುಣ ಕಾರ್ಯಗಳು. ಹೀಗೆ ಮಾಡಬೇಡಿರೆಂಬ ನಿರ್ಭಂದಿತ ನಿಯಮಗಳಾಗಿ; ಇವರಿಗಾಗೆ ಹುಟ್ಟಿಕೊಂಡ ತಾತ್ವಿಕತ್ವಗಳೆ ಮಾನವತ್ವದ ಮನವೀಯ ತತ್ವಗಳು. ಮೂಲತಹ ಮಾನವನು ಪ್ರಕೃತಿಯ ಜೀವ ಸಂಕುಲ ಭೂಮಿ, ಸೂರ್ಯ, ಚಂದ್ರ, ಗ್ರಹತಾರೆ ಮತ್ತು ಗಾಳಿ, ನೀರು, ಬೆಂಕಿಗಳನ್ನು ಬಳಸಿಕೊಂಡೆ ತಾನು ಜೀವಿಸಿ ಅಭಿವೃದ್ದಿಗೊಳ್ಳುತ್ತಿರುವುದು. ಇದನ್ನು ಅಮಾನವೀಯ ಕಾರ್ಯವೆನ್ನುವುದಿಲ್ಲ ಏಕೆ? ಅಂದರೆ ಮಾನವ ಸಮಾಜಕ್ಕೆ ಸಮಾನವಾಗಿ ಪ್ರಕೃತಿಯ ಮಾನವೇತರ ಜೀವಿಗಳನ್ನು ಪರಿಗಣಿಸಿಲ್ಲದಿರುವುದರಿಂದ ಎಂಬ ವಾಸ್ತವ ಸತ್ಯವನ್ನು ಅರಿಯಬೇಕು. ಹಾಗಾಗಿ ಮಾನವ ಕಟ್ಟಿಕೊಂಡಿರುವ ಮಾನವೀಯ ಮಾನವ ತತ್ವ ಚಿಂತನೆಗಳು ಮಾನವ ಮಾನವರ ನಡುವಿನ ಪ್ರೀತಿ, ರಕ್ಷಣೆಯ ಸಹಬಾಳ್ವೆಗಾಗಿಯು ಇಲ್ಲದಿರುವಾಗ, ಮಾನವೇತರ ಜೀವಿಗಳಿಗೆ ಹೇಗೆ ಅನ್ವಯಿಸುತ್ತದೆ? ಇದು ತುಂಬಾ ಸಂಕೀರ್ಣವಾದ ವಿಷಯ. ಮಾನವನ ಈ ತತ್ವಗಳು ಧರ್ಮ, ಸಮಾಜ, ಸಂವಿಧಾನದ ಹೇಳಿಕೆ ತತ್ವಗಳೆ ಹೊರತು; ಚಾಲನೆಯಲ್ಲಿಲ್ಲದ, ಹಲ್ಲಿಲ್ಲದ ಹಾವುಗಳಂತಾಗಿವೆ. ಆದ್ದರಿಂದ ಇವು ಮಾನವ ಮಾನವರೊಳಗೆ ಯಾವಾಗಲೋ, ಅಲ್ಲೊಂದು ಇಲ್ಲೊಂದು ಚಾಲನೆಯಲ್ಲಿದ್ದು, ಅವು ನೂರಕ್ಕೆ ಏದು ಭಾಗ

ಮಾತ್ರ ಇವೆ. ಅವುಗಳನ್ನೆ ಸಾಂಕೇತಿಕವಾಗಿ ಬಳಸಿಕೊಂಡು ಬೆಳೆದು ಬಂದ ಈ ತತ್ವಗಳು; ಈಗ ವೇದಿಕೆಯ, ಪುಸ್ತಕಗಳ, ಹೇಳಿಕೆಯ ಶ್ರೀಮಂತ ಮೇಲ್ಜಾತಿ, ವರ್ಗ, ವರ್ಣ, ಅಧಿಕಾರಸ್ತ ಮಾನವರ ಹೇಳಿಕೆಯ ಮೌಲ್ಯಗಳಾಗಿ ಉಳಿದಿವಿಯೇ ಹೊರತು, ಏನೂ ಇಲ್ಲದ, ದುರ್ಬಲ ಮಾನವ ಕುಲದವರ ಬಾಳಿನ ಮೌಲ್ಯಗಳಾಗಿಲ್ಲ.

ಇನ್ನೊಂದು ರೀತಿ ಹೇಳುವುದಾದರೆ ಜಗತ್ತಿನ ಸ್ತ್ರೀಯರು, ಬಡವರು ಮತ್ತು ದುರ್ಬಲ ಸಮುದಾಯಗಳು ಪ್ರಬಲ ಗಂಡಸರಿಂದ, ಅಧಿಕಾರಸ್ತರಿಂದ, ಮೇಲ್ವರ್ಗ, ವರ್ಣ, ಜಾತಿಯ ಜನ ಶೋಷಿತರಿಂದ ನಿರೀಕ್ಷಿಸುವ, ಬೇಡುವ ಗುಣ ತತ್ವಗಳಾಗಿವೆ. ಹಾಗೆ ನೋಡಿದರೆ ನಿಜವಾದ ಮಾನವೀಯ ತತ್ವ ಚಿಂತನೆಯ ಗುಣಗಳು ಚಾಲನೆಯಲ್ಲಿದ್ದರೆ ಅವು ಮಹಿಳೆಯರಲ್ಲಿ ಮತ್ತು ಹಿಂದುಳಿದ ಕೆಳ ಜಾತಿ–ವರ್ಗ, ಬುಡಕಟ್ಟು ಜನರಲ್ಲಿ ನೂರಕ್ಕೆ ತೊಂಬತ್ತೈದು ಭಾಗದಷ್ಟು ಜನರಲ್ಲಿ ದಟ್ಟವಾಗಿದೆ. ಈ ಗುಣಗಳೆ ಅವರ ಆಸ್ತಿ, ಅವುಗಳಿಂದಲೇ ಅವರ ಸುಖ, ಶಾಂತಿ, ಸರಳತೆಯ ಬಡತನದ ಬಾಳಾಗಿದೆ. ಆದ್ದರಿಂದಲೇ ಇವರಿಗೆ ಪ್ರಬಲ ಸಮಾಜದಲ್ಲಿ ಬೆಲೆಯಿಲ್ಲ. ಹೀಗಿರುವಾಗ ಇನ್ನೂ ಕಾಡು, ಬೆಟ್ಟಗುಡ್ಡ, ಬಯಲು, ನದಿ–ಸಮುದ್ರ, ಕೆರೆ–ಕಟ್ಟೆಗಳಲ್ಲಿ ವಾಸಿಸುವ ಪ್ರಕೃತಿ ಜೀವಿಗಳಿಗೆ ಮಾನವ ಸಮಾಜದ ಜನರು ಬೆಲೆ ಕೊಡುವುದಾದರೂ ಹೇಗೆ? ಆದ್ದರಿಂದಲೇ ಜಗತ್ತಿನ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಸ್ವಾರ್ಥ, ಅಸಮಾನತೆ, ಹಿಂಸೆ, ಆಶಾಂತಿ, ಮೋಸ, ಕಳ್ಳತನ, ಆಕ್ರಮಣಕಾರಿ ದುರಾಸೆಯ ಜನ ಸಮಾಜಗಳು ತುಂಬಿ ಮಾನವ ಮಾನವನಿಂದಲೇ ವಿನಾಶಗೊಳ್ಳುವ ಕಾಲಕ್ಕೆ ವಿಜ್ಞಾನ, ತಂತ್ರಜ್ಞಾನಗಳು ಅಣಿ ಮಾಡುತ್ತಿವೆ.

ಮಾನವ ಸಂತತಿ ಹುಟ್ಟಿ ಹತ್ತಾರು ಸಾವಿರ ವರುಷಗಳಿಂದ ಮಾನವ ಮಾನವರ ರಕ್ಷಣೆಗಾಗಿ ಹುಟ್ಟಿಕೊಂಡ ಈ ಮಾನವ ತತ್ವ, ಚಿಂತನೆಗಳ ಕಾಲ ಈಗ ಮುಗಿದಿದೆ. ಇನ್ನು ಮುಂದೆ ಮಾನವನಿರಲಿ ಪ್ರಕೃತಿಯ ಜೀವ ಸಂಕುಲಗಳು ಉಳಿಯಬೇಕಾದರೆ, ಇದುವರೆಗೆ ಜಗತ್ತಿನ ಮನವ ಮನದಲ್ಲಿ ಮನೆ ಮಾಡಿರುವ ಮಾನವ ಕೇಂದ್ರಿತ ನೀತಿ–ತತ್ವ, ಚಿಂತನೆಗಳ ಗುಣ, ಕಾರ್ಯಗಳು ಬದಲಾಗದೆ ಉಳಿಗಾಲವಿಲ್ಲ. ಆದ್ದರಿಂದ ಮಾನವನ ಈ ತತ್ವ–ಸಿದ್ಧಾಂತಗಳಿಗೆ ಬದಲಾಗಿ, ಜೀವಕೇಂದ್ರಿತ ಜೀವ–ಜೀವಿ–ಜೀವನ ತತ್ವ, ಸಿದ್ಧಾಂತಗಳು ರೂಢಿಗೆ ಬಾರದೆ, ನವ ಆಧುನಿಕತೆಯ ವರ್ತಮಾನಕ್ಕೆ ಅನುಗುಣವಾಗಿ, ಹೊಸ ದಾರಿ–ಮಾರ್ಗಗಳು ಉದಯಿಸಲಾರವು. ಈ ತತ್ವ ಚಿಂತನೆಗಳು, ಮಾನವ ಜಗತ್ತಿನ ಸರ್ಕಾರಿ ಆಡಳಿತ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ವಿಜ್ಞಾನ–ತಂತ್ರಜ್ಞಾನ ಮತ್ತಿತರ ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರಗಳ ವ್ಯವಹಾರಗಳೊಳಗೆ ಮಂದಗತಿಯಲ್ಲಾದರೂ ಅಡಕಗೊಂಡು ಚಾಲನೆಗೊಳ್ಳಬೇಕಾದ ತುರ್ತು ನವ ಆಧುನಿಕ ಯುಗದ್ದಾಗಿದೆ.

ಸಮಾರೋಪ

1. ಸಂಶೋಧನ ಫಲಿತಗಳು:

ಸಾಹಿತ್ಯ, ಸಂಶೋಧನೆ, ವಿಮರ್ಶೆಗಳು ಈ ಜಗತ್ತಿನ ಸಕಲ ಜೀವಿಗಳ ಸಮಾಜ, ಸಂಸ್ಕೃತಿಗಳ ಮಾದರಿಯನ್ನು ಅರಿಯಲು, ತಮ್ಮ ಮಿತಿಗಳನ್ನು ತಿಳಿದು ಪರಿವರ್ತನೆಗೊಂಡು, ಮಾನವರು ಬೆಳೆಯಲು ಮತ್ತು ತಮ್ಮ ಚಾರಿತ್ರಿಕ ಪರಂಪರೆಗಳನ್ನು ಅರಿತು ಮುನ್ನೆಡೆಯಲು ಅನನ್ಯ ಕಾಣಿಕೆ ನೀಡಿವೆ. ಅಷ್ಟೇ ಅಲ್ಲ, ಇದು ವೈಜ್ಞಾನಿಕ ಬೆಳವಣಿಗೆಗೂ ಕೂಡ ಅಷ್ಟೇ ಹಿನ್ನೆಲೆ, ಪ್ರೇರಣೆಯೊದಗಿಸಿವೆ. ಮಾನವ ಸಮಾಜಕ್ಕೆ ಸಾಹಿತ್ಯದ ಮೌಲ್ಯ ಮತ್ತು ಅದರ ಅಗತ್ಯತೆಯೆಷ್ಟು ಎಂಬುದು ಸಾಹಿತ್ಯೇತರ ವಿಷಯಗಳ ಕೆಲವು ಅಧ್ಯಯನಕಾರರಿಗೆ ಅರ್ಥವಾಗದು. ಹೀಗಿದ್ದೂ ಎಲ್ಲಾ ರೀತಿಯ ಹೆಚ್ಚಿನ ಜನಗಳಿಗೆ ಪಂಪ ಪೂರ್ವ ಸಾಹಿತ್ಯದಿಂದ ಅಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಸಾಹಿತ್ಯದಿಂದ ಮಾನವ ಸಮಾಜದ ಪರಿವರ್ತನೆ ಮತ್ತು ಬೆಳವಣಿಗೆಯ ದಾರಿಗಳೆಷ್ಟಾಗಿವೆ ಎನ್ನುವುದು ಸಾಮಾನ್ಯವಾಗಿ ತಿಳಿಯುತ್ತದೆ. ಇಂತಹ ಸಾಹಿತ್ಯ, ಸಂಶೋಧನೆಗಳೊಳಗೆ ಮನವನನ್ನು ಹೊರತುಪಡಿಸಿ, ಜಗತ್ತಿನ ಸಕಲ ಜೀವ ಸಂಕುಲಗಳಿಗೂ ಅವುಗಳದೆಯಾದ ಜೀವನ ಸಂಸ್ಕೃತಿಯಿದೆ ಎಂದು ಗುರುತಿಸಿ ಬರೆಯಲಾಗಿಲ್ಲ. ಈ ಸೂಕ್ಷ್ಮತೆಯನ್ನು ತಿಳಿದು, ಮಾಡಲಾಗದ ಕ್ಷೇತ್ರದಲ್ಲಿ ಏನಾದರೂ ಹೊಸದನ್ನು ಅರಸಿ ಶೋಧಿಸುವ ಕಾರ್ಯವನ್ನು ಇಲ್ಲಿ ಮಾಡಲಾಗಿದೆ. ಈ ಹಿನ್ನೆಲೆಯಿಂದ ಅಧ್ಯಯನ ಮಾಡುವಾಗಲೇ ಈ ಬ್ರಹ್ಮಾಂಡದಲ್ಲಿ ಎರಡು ಪ್ರಧಾನ ಸಂಸ್ಕೃತಿಗಳಿರುವುದು ತಿಳಿಯಿತು. ಅವುಗಳಲ್ಲಿ ಒಂದು ಪ್ರಾಕೃತಿಕ ಸಂಸ್ಕೃತಿ. ಇನ್ನೊಂದು ಮಾನವ ಸಂಸ್ಕೃತಿ. ಪ್ರಾಕೃತಿಕ ಸಂಸ್ಕೃತಿಯನ್ನು ಬಿಡಿಸಿ, ಭೂಮಿ, ನೆಲ, ಮಣ್ಣಿನ ಸಂಸ್ಕೃತಿಗಳೆಂದು ಗುರುತಿಸಿ ಕರೆಯಲಾಗಿದೆಯೆ ವಿನಹ; ಪ್ರಕೃತಿಯ ಭೂಮಿಯೊಳಗೆ, ಜೀವಿಸುತ್ತಿರುವ ಅಸಂಖ್ಯಾತ ಜೀವಿಗಳ ಜೀವನದ ಬಗ್ಗೆ ಚರ್ಚೆ, ಚಿಂತನೆ, ಸಂಶೋಧನೆಗಳು ನೆಡೆದಂತೆ ಆ ಜೀವಿಗಳ ಜೀವನ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ದ ಬಗ್ಗೆ ಸಂಶೋಧನೆಗಳು ನೆಡೆದಂತೆ ಕಂಡುಬರುವುದಿಲ್ಲ. ಈ ಹಿನ್ನೆಲೆಯಿಂದ ಜೀವಿಗಳ ವೈವಿದ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯನ್ನು ಗುರುತಿಸುವ ಸಲುವಾಗಿ ಸಂಶೋಧನೆಗೆ ಈ ವಿಷಯವನ್ನು ಆಯ್ಕೆ ಮಾಡಿಕೊಂಡಿರುವ ಅಂಶವನ್ನು ಅಧ್ಯಯನದ ಉದ್ದೇಶದಲ್ಲೇ ಸ್ಪಷ್ಟವಾಗಿ ಗುರುತಿಸಲಾಗಿದೆ.

ಅದೇ ರೀತಿ ಎರಡನೆ ಪ್ರಧಾನ ಸಂಸ್ಕೃತಿ ಮಾನವನದು. ಅವನು ಭೂಮಿ ಮೇಲೆ ವಾಸಿಸುತ್ತಿರುವ ಮಾನವ ಮಾತ್ರ ತನ್ನನ್ನು ಹೊರತುಪಡಿಸಿ ಉಳಿದ ಜೀವಿಗಳನ್ನು ತನ್ನಂತೆ ಅವುಗಳಿಗೂ ಜೀವಿಸುವ ಹಕ್ಕು, ಸ್ವಾತಂತ್ರ್ಯವಿದೆ, ಜೊತೆಗೆ ಅವುಗಳದ್ದೇಯಾದ ಸಂಸ್ಕೃತಿಯೂ ಇದೆ ಎಂದು ಅರಿತು ತನ್ನ ಕಾರ್ಯ ಅಧ್ಯಯನಗಳನ್ನು ಮಾಡದಾಗಿದ್ದಾನೆ. ಆದರೆ ಮಾನವನಲ್ಲಿ ಮಾತ್ರ ವ್ಯಕ್ತಿ, ಕುಟುಂಬ, ನಾಡು, ದೇಶ, ವರ್ಗ, ಜಾತಿ, ಧರ್ಮ, ಕಾರ್ಯ, ಭಾಷೆ, ಪ್ರಾದೇಶಿಕ ಭಿನ್ನತೆಗಳಿರುವಂತೆ; ಅನನ್ಯ ಸಂಸ್ಕೃತಿಗಳಿರುವುದನ್ನು ಗುರುತಿಸಿಕೊಂಡು ಎಲ್ಲವನ್ನೂ ಒಡೆದುನೋಡಿ, ಶೋಧಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದಾನೆ. ಇದನ್ನೆ ಮಾನವ ಕೇಂದ್ರಿತ ಸಂಸ್ಕೃತಿ ಎಂದು ಈ ಸಂಶೋಧನೆಯಲ್ಲಿ ಗುರುತಿಸಿ ಪ್ರತಿಪಾದಿಸಲಾಗಿದೆ. ಜೊತೆಗೆ ಮಾನವನಿಗಾಗೆ ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ ಕ್ಷೇತ್ರದ ಸಂಶೋಧನೆಗಳು ನೆಡೆದು ಸಂಸ್ಕೃತಿ ಪದವನ್ನು ಹುಟ್ಟು ಹಾಕಲಾಗಿದೆ. ಇವು ಯಾವುವೂ ಪ್ರಕೃತಿಯ ಇನ್ನಿತರ ಜೀವಿಗಳ ಅಸ್ತಿತ್ವದ ಬಗ್ಗೆ ಅವುಗಳ ರಕ್ಷಣೆಯಾದರೆ ಮಾನವನ ರಕ್ಷಣೆ ಎಂಬುದನ್ನು ಅರಿಯದಂತೆ ಮಾನವ ಪ್ರಜ್ಞೆಯಿಂದ ಈ ಪದವನ್ನು ಹುಟ್ಟುಹಾಕಿ ಬೆಳೆದು ಬಂದಿರುವ ಈ ಮಾನವ ಕೇಂದ್ರಿತ ಸಂಸ್ಕೃತಿ ಪದಕ್ಕೆ ಪರ್ಯಾಯ ಪದವನ್ನು ಜೀವಕೇಂದ್ರಿತ ನೆಲೆಯಲ್ಲಿ ಹುಟ್ಟು ಹಾಕಿ ಚಾಲನೆಗೆ ತರಬೇಕಾಗಿದೆ. ಆ ಹಿನ್ನೆಲೆಯಲ್ಲಿ ನಾನು ಈ ಅಧ್ಯಯನದ ಸಂಶೋಧನೆಯ ಅಂತರಂಗದಲ್ಲಿ ಸಂಸ್ಕೃತಿ ಪದದ ಹೊಸ ವ್ಯಾಖ್ಯಾನಗೊಳಿಸುವ ಪ್ರಯತ್ನ ಮಾಡಿದ್ದೇನೆ. ಆದ್ದರಿಂದ ಪ್ರಕೃತಿಕ, ಭೂಮಿ, ಮಣ್ಣಿನ ಸಂಸ್ಕೃತಿಯೆಂದು ಬಳಸಲಾಗಿದೆಯೆ ಹೊರತು ಸಾಹಿತ್ಯ ಕ್ಷೇತ್ರದಲ್ಲಿ; ಈ ಪ್ರಕೃತಿಯ ಸ್ವಭಾವಿಕ ಜೀವ–ಜೀವಿಗಳ ವೈವಿಧ್ಯ ಚಟುವಟಿಕೆಗಳ ಜೀವಂತ ಕ್ರಮಗಳ ಬಗ್ಗೆ ಆಲೋಚಿಸಿ, ಅವುಗಳ ಸಂಬಂಧ ಈ ಜೀವವ್ಯೂವಹಗಳ ಬಂಧದ ಪ್ರಜ್ಞೆಯ ಅರಿವನ್ನು ಸಕಲ ಮಾನವ ಕುಲಕೋಟಿಗೆ ಇನ್ನೂ ತರಲಾಗಿಲ್ಲ. ಆ ಕಾರಣದಿಂದಲೇ ಈಗಿರುವ ಸಂಸ್ಕೃತಿಯ ಪರಿಕಲ್ಪನೆಯನ್ನು ಬಿಟ್ಟು, ಪುನರ್ ವ್ಯಾಖ್ಯಾನಗೊಳಿಸಲಾಗಿದೆ. ಅದರ ಪ್ರಕಾರ "ಸಕಲ ಜೀವ–ಜೀವಿಗಳ ವೈವಿಧ್ಯತೆಯ ನಿರಂತರ ಸ್ವಭಾವಿಕ ಚಟುವಟಿಕೆಗಳ ಜೀವನ ಕ್ರಮ"ವೆಂದು ಈ ಅಧ್ಯಯದಲ್ಲಿ ಪರಿಶೀಲಿಸಿ ಚರ್ಚಿಸಲಾಗಿದೆ. ಇದುವರೆಗಿನ ಅಧ್ಯಯನ ಜೀವಿಗಳ ಜೀವನ ಕ್ರಮ ಮಾನವನಿಗೆ ಶೀಮಿತಗೊಳಿಸಲಾಗಿದೆಯೇ ವಿನ: ಸಕಲ ಜೀವಿಗಳಿಗೆ ವಿಸ್ತರಿಸಿ ಪರಿಕಲ್ಪಿಸಿರಲಿಲ್ಲ. ಹಾಗಾಗಿ ಮಾನವ ಕೇಂದ್ರಿತ ಮಾನವೀಯತೆಯನ್ನು ಬಿಟ್ಟು ಜೀವಕೇಂದ್ರಿತ ಪರಿಕಲ್ಪನೆಯಲ್ಲಿ ಇವತ್ತಿನ ವರ್ತಮಾನದ ಸಂಸ್ಕೃತಿಯನ್ನು, ಇಲ್ಲ ಪರ್ಯಾಯ ಪರಿಕಲ್ಪನೆಯ ಪದವನ್ನು ಸಂಯೋಜಿಸುವ ಭಾಷಾ ಶಾಸ್ತ್ರದ ಕಾರ್ಯ ತುರ್ತಾಗಿದೆ.

ಈ ಚಾರಿತ್ರಿಕ ಹಿನ್ನಲೆಯಿಂದಲೇ ಮುಂದಿನ ಮಾನವ ಸಮಾಜ ಜೀವಿಗಳ ಸಂಸ್ಕೃತಿಯ ಜೀವಂತಿಕೆಗೆ ಅಧುನಿಕ ಕನ್ನಡ ಸಾಹಿತ್ಯದ ಉತ್ತರಾರ್ಧದ ಪಾತ್ರವೇನು? ಎನ್ನುವುದು ಮುಂದಿನ ಪ್ರಶ್ನೆಯಾಗಿ ಕಾಡುವುದು ಸಹಜ. ಈ ಪ್ರಶ್ನೆಗೆ ಅನುಗುಣವಾಗಿ ಉತ್ತರವನ್ನು ಈ ಭಾಗದಲ್ಲಿ ಗುರುತಿಸಲಾಗಿದೆ. ಇಪ್ಪತ್ತನೇ ಶತಮಾನದ ಜೀವಿಗಳ ಸಂಸ್ಕೃತಿ ಸಂಬಂಧಿ ಸಾಹಿತ್ಯ ಕೃತಿಗಳು ಹೆಚ್ಚು ಸೃಷ್ಟಿಯಾಗಿ ಬೆಳೆದರೆ, ನಾಳೆಯ ಮಾನವ ಸಮಾಜ ಮತ್ತು ಪ್ರಾಕೃತಿಕ ಜೀವ ಪರಿಸರಕ್ಕೆ ಜೀವ ತುಂಬುವಲ್ಲಿ, ಜನ ಜೀವನಕ್ಕೆ ಅರಿವು ಮುಡಿಸುವುದರಲ್ಲಿ ಗಮನಾರ್ಹ ಪಾತ್ರ ನಿರ್ವಾಹಿಸುತ್ತದೆ. ಇಂತಹ ವಿಚಾರ ಚಿಂತನೆಗಳನ್ನು ಈ ಅಧ್ಯಯನದ ವಿಷಯ, ವಸ್ತುಗಳ ಚರ್ಚೆಗೊಳಪಟ್ಟ ಕೃತಿಗಳ ವಿಶ್ಲೇಷಣೆಯ ಸಂದರ್ಭಗಳಲ್ಲೇ ಪರಿಶೀಲಿಸಲಾಗಿದೆ.

ಕನ್ನಡ ಸಾಹಿತ್ಯ ವಿಸ್ತರಿಸಿಕೊಂಡಿರುವ ಎಲ್ಲ ಸಾಹಿತ್ಯ ಮಾರ್ಗ ಮತ್ತು ಪಂಥಗಳು ಪ್ರಾಕೃತಿಕ ಪರಿಸರ ಸಂಬಂಧಿ ವಿಷಯ, ವಸ್ತುಗಳನ್ನು ಕೇಂದ್ರವಾಗಿಟ್ಟುಕೊಂಡು ಬೆಳೆದಿಲ್ಲದಿರುವುದು ನಿರ್ವಿವಾದ. ಆದರೆ ಅಲ್ಲೆಲ್ಲ ವಿರಳವಾಗಿ ಕೆಲವು ಕೃತಿಗಳಲ್ಲಿ ಜೀವ ಪರ, ಜೀವ ಕೇಂದ್ರಿತ ತಿಳುವಳಿಕೆಯ ಧೋರಣೆಗಳಿಂದ ಕೂಡಿರುವುದನ್ನು ಗುರುತಿಸಲಾಗಿದೆ. ಮೊದಲಿಗೆ ಪ್ರಾಚೀನ, ಮಧ್ಯಕಾಲೀನ ಮಹಾಕಾವ್ಯ ಕೃತಿಗಳಲ್ಲಿ ಅಷ್ಟದಶ ವರ್ಣನೆಗಳಲ್ಲಿ ಸೂರ್ಯ, ಸಮುದ್ರ, ಅರಣ್ಯ ಮುಂತಾದ ಪ್ರಕೃತಿ ವರ್ಣನೆಗಳು ಬರುತ್ತವೆ. ಅವುಗಳು ಯಾವುದರಲ್ಲೂ *ಜೀವಿಗಳ ಸಂಸ್ಕೃತಿಯ ಬಗ್ಗೆ ಮಾತಾಡುವಂತಹ ಸುಳಿವುಗಳು ದೊರೆಯುವುದಿಲ್ಲ. ಆದರೆ* ಆಧುನಿಕ ಕನ್ನಡ ಸಾಹಿತ್ಯದ ನವೋದಯ ಸಂದರ್ಭದ ಸಾಹಿತ್ಯ ಕೃತಿಗಳಲ್ಲಿ, ಕವಿಗಳು ಪ್ರಕೃತಿ ಆರಾಧಕರಾಗಿದ್ದು, ಅವರ ಗದ್ಯ ಪದ್ಯಗಳೆಲ್ಲ ಆ ಕಾಲಘಟ್ಟದ ಸಾಹಿತ್ಯ ಧೋರಣೆಗೆ ಅನುಗುಣವಾಗಿ ರಚನೆಯಾಗಿವೆ. ಆಗಿನ ಕವಿಗಳೆಲ್ಲ ಭಾವಜೀವಿಗಳಾಗಿದ್ದು, ಯಾರೂ ದೇವರನ್ನು ವಿರೋಧಿಸಲಿಲ್ಲ. ಹೆಚ್ಚಾಗಿ ಅವರು ಭೂಮಿ, ಸೂರ್ಯ, ಚಂದ್ರ, ಪ್ರಾಣಿ, ಪಕ್ಷಿ, ಗಿಡ–ಮರ, ನದಿ–ಸಾಗರ ಮುಂತಾದ ಜೀವ ಪ್ರಕೃತಿಯಲ್ಲೆಲ್ಲ ದೈವತ್ವವನ್ನೇ ಕಲ್ಪಿಸಿಕೊಂಡವರು. ಇದಕ್ಕೆ ಪ್ರೇರಣೆ, ಪ್ರಭಾವ ಇಂಗ್ಲಿಷ್ ರೊಮ್ಯಾಂಟಿಕ್ ಸಾಹಿತ್ಯದಿಂದ ಬಂದದ್ದು. ಆ ಸಾಹಿತ್ಯದಲ್ಲಿ ಲೇಖಕರು ಮಾನವ ಜೀವನದ ಸರ್ವವೂ ಪ್ರಕೃತಿಯಲ್ಲೇ ವಿಕಾಸವಾಗಿ ಪರಿಪೂರ್ಣವಾಗುವುದು ಎಂಬ ಮಹತ್ವದ ವಿಷಯವನ್ನು ಸೂಕ್ಷ್ಮವಾಗಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಇವರು ತಮ್ಮ ಕಾವ್ಯದಲ್ಲಿ ವಿಜ್ಞಾನ ಮತ್ತು ಬುದ್ಧಿಭಾವಗಳ ನಡುವೆ ಸಾಮರಸ್ಯವನ್ನು ಪ್ರಕಟಿಸಿದ್ದಾರೆ. ಇಂತಹ ಸೃಜನಶೀಲ ಸಾಹಿತ್ಯ ಕ್ರಿಯೆಯಲ್ಲಿ; ಭೂಮಿ ಪ್ರಕೃತಿಗೂ ಮತ್ತು ಮಾನವನಿಗೂ ಅವಿನಾಭಾವ ಸಂಬಂಧವನ್ನು ತೋರಿಸಿ, ಅದರಲ್ಲೇ ದೈವ ಗುಣವನ್ನು ಕಾಣುವ ಭಾವನಾತ್ಮಕತೆಯೆ ಅಧ್ಯಾತ್ಮ ಸ್ವರೂಪವನ್ನು ಪಡೆದುಕೊಳ್ಳುವುದು. ಈ ಅಂಶಗಳು ಹೆಚ್ಚಾಗಿ ಕುವೆಂಪು, ಬೇಂದ್ರೆ, ಮಾಸ್ತಿ, ಮಧುರಚೆನ್ನ, ವಿ.ಸೀತಾರಾಮಯ್ಯ, ಪು.ತಿ.ನ. ಮುಂತಾದವರ ಕಾವ್ಯಗಳಲ್ಲಿಯೂ, ಭಾರತೀಸುತ, ಕುವೆಂಪು, ಶಿವರಾಮ ಕಾರಂತ ಮುಂತಾದವರ ಕಾದಂಬರಿಗಳಲ್ಲಿಯೂ ಕಾಣುತ್ತೇವೆ.

ನವೋದಯದವರ ಜನಪ್ರಿಯ ಸಾಹಿತ್ಯವಾದ ಕಾವ್ಯಗಳಲ್ಲಿ ತಮ್ಮ ಭಾವನೆ ಮತ್ತು ಚಿಂತನೆಗಳನ್ನು, ಅಭಿವ್ಯಕ್ತಿಗೊಳಿಸಿದ್ದಾರೆ. ಅವುಗಳಲ್ಲಿ ನಿಸರ್ಗವನ್ನು ದೇವರ ಕಲ್ಪನೆಯಲ್ಲಿ, ಸಮಾಜವನ್ನು ಅನುಭವದ ಆಧಾರದ ಮೇಲೆ ಕಾವ್ಯ ನಾನಾತರದಲ್ಲಿ ರೂಪ ಪಡೆದಿವೆ. ಅವು ಭಾವಗೀತಾತ್ಮಕವಾಗಿಯು ಹೆಚ್ಚು ಕಾವ್ಯಗಳು ಲಯಬದ್ದಗೊಂಡಿವೆ. . ಆದ್ದರಿಂದ ಕಥೆ, ನಾಟಕ, ಕಾದಂಬರಿಗಳಿಗಿಂತ ಕಾವ್ಯವೇ ಪ್ರಧಾನ ಸಾಹಿತ್ಯ ಪ್ರಕಾರವಾಗಿ ಮೈದಳೆದಿದೆ. ಕುವೆಂಪು, ಬೇಂದ್ರೆ, ಪು.ತಿ.ನ. ಶಿವರುದ್ರಪ್ಪ, ಚೆನ್ನವೀರ ಕಣವಿ ಅಂತಹವರು ಪ್ರಮುಖ ಕವಿಗಳಾಗಿ ರೂಪುಗೊಂಡರು. ಇವರೊಳಗೆ ಕವಿಗಳಾಗದೆ ಕಾದಂಬರಿಕಾರರಾಗಿ ಹೆಸರು ಮಾಡಿದವರು ಶಿವರಾಮ ಕಾರಂತ, ಭಾರತೀಸುತರು. ಇವರು ತಮ್ಮ ಬರವಣಿಗೆಯ ಕ್ಷೇತ್ರವನ್ನು ಕಾದಂಬರಿ ಪ್ರಕಾರಕ್ಕೆ ಮೀಸಲಾಗಿರಿಸಿಕೊಂಡರು. ಜೊತೆಗೆ ಕುವೆಂಪು ಪದ್ಯದಿಂದ ಗದ್ಯ ಕ್ಷೇತ್ರಕ್ಕೂ ತಮ್ಮ ಪ್ರತಿಭೆಯ ಚಾಪನ್ನೊತ್ತಿದರು. ಬೇರೆಯ ಕವಿಗಳಿಗೆ ದಕ್ಕದ ವಿಷಯ, ವಸ್ತುಗಳು ಈ ಮೂವರಿಗೆ ದಕ್ಕಿದವು. ಕಾರಣ ಇವರುಗಳು ಮಲೆನಾಡು ಪ್ರದೇಶದಿಂದ ಬಂದ ಲೇಖಕರುಗಳಾದ್ದರಿಂದ ಅಲ್ಲಿಯ ಕಾಡು, ಬೆಟ್ಟ,–ಗುಡ್ಡ, ನದಿ, ಸಮುದ್ರ, ಪ್ರಾಣಿ–ಪಕ್ಷಿಗಳೇ ಇವರ ಕಾದಂಬರಿಯ ಕೇಂದ್ರ ವಿಷಯ ವಸ್ತುಗಳಾದವು. ಈ ಮೂವರ ಸಾಹಿತ್ಯ ಕೃತಿಗಳಲ್ಲಿ ಪ್ರಕೃತಿಯ ವರ್ಣನೆ, ವಿವರಣೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಇವುಗಳ ಜೊತೆಗೆ ರಮ್ಯ ಕವಿಗಳ ಹಲವಾರು ಕೃತಿಗಳನ್ನು ಬಳಸಿಕೊಂಡು ಅವುಗಳೊಳಗಿನ ಬೌದ್ಧ ಸಾಹಿತ್ಯ ಮೀಮಾಂಸೆಯ ಪರಿಕಲ್ಪನೆಗೆ ಜೀವತತ್ವದ, ಅಂಶಗಳನ್ನು ಆಯ್ದು ಪ್ರಕೃತಿಯೊಳಗಿನ ಜೀವ ಸಂಸ್ಕೃತಿಯನ್ನು ಗುರುತಿಸಲಾಗಿದೆ. ಇದಕ್ಕೆ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡಿತಿಗಳಲ್ಲಿಯೂ ಕಾರಂತರ ಬೆಟ್ಟದ ಜೀವ, ಮರಳಿ ಮಣ್ಣಿಗೆ, ಕುಡಿಯರ ಕೂಸು ಮುಂತಾದ ಕಾದಂಬರಿಗಳು ಓದುಗರ ಆಲೋಚನೆಗೆ ಸಾಕಷ್ಟು ವಿಷಯ, ವಸ್ತುಗಳನ್ನು ನೀಡಿವೆ. ಆದರೂ ಇಲ್ಲಿಯ ಅಧ್ಯಯನಕ್ಕೆ ವಿಷಯ ಕೇಂದ್ರವಾಗಿ ಸಿಕ್ಕ ಅಂಶಗಳನ್ನಷ್ಟೆ ಅಲ್ಲಲ್ಲಿ ಬಳಸಿಕೊಂಡು ಚರ್ಚಿಸಲಾಗಿದೆ.

ಕಾರಂತರು ಆಯ್ಕೆ ಮಾಡಿಕೊಂಡ ಗದ್ಯ ಕ್ಷೇತ್ರದಲ್ಲೂ ಅವರ ಸಾಹಿತ್ಯ ಧೋರಣೆಯನ್ನು ಬಿಟ್ಟುಕೊಡದೆ, ಕಾಲಕ್ಕನುಗುಣವಾದ ಅಂದಿನ ಸಾಹಿತ್ಯ ತತ್ವಗಳನ್ನು ಅವರ ಕೃತಿಗಳಲ್ಲಿ ಬಿಡುಗಡೆಗೊಳಿಸಿದ್ದಾರೆ. ಈ ಅಂಶಗಳನ್ನು ಅವರ ಮರಳಿ ಮಣ್ಣಿಗೆ ಕೃತಿಯ ಸರಸ್ವತಿ, ನಾಗವೇಣಿ, ರಾಮು ಮತ್ತು ಬೆಟ್ಟದಜೀವ ಕೃತಿಯ ಗೋಪಾಲಯ್ಯ ನಂತಹ ಪಾತ್ರಗಳಲ್ಲಿ ಕಾಣಬಹುದು. ಇದೇ ರೀತಿ ಕುವೆಂಪು ತಮ್ಮ ಕಾದಂಬರಿಗಳಲ್ಲಿ ಹೂವಯ್ಯ, ಸೀತೆ, ಮುಕಂದಯ್ಯ ಗುತ್ತಿ, ತಿಮ್ಮಿ ಮುಂತಾದ ಪಾತ್ರಗಳನ್ನು ಚಿತ್ರಿಸಿ ಯಶಸ್ವಿಯಾಗಿದ್ದಾರೆ. ಇವರ ಕಾಲದಲ್ಲಿ ಭಾರತೀಸುತರೂ ಕೂಡ ಉತ್ತಮ ಕಾದಂಬರಿಕಾರರಾಗಿ ಹೆಸರು ಮಾಡಿದ್ದಾರೆ. ಇವರ ಈ ಕೃತಿಗಳಲ್ಲಿ ಮಣ್ಣಿನ ವಾಸನೆಯನ್ನು ಅದರ ಕಂಪನ್ನು ಹೊರಚೆಲ್ಲುವ ವಿಶಿಷ್ಟ ಸಾಹಿತ್ಯವಾಗಿವೆ. ಹುಲಿಯ ಹಾಲಿನ ಮೇವು, ಎಡಕಲ್ಲುಗುಡ್ಡದ ಮೇಲೆ, ಬಯಲುದಾರಿ, ಗಿರಿಕನ್ಯೆಗಳಲ್ಲಿ ಮನುಷ್ಯ ಮತ್ತು ಮಲೆನಾಡಿನ ನೈಸರ್ಗಿಕ ವ್ಯಾಪಾರಗಳ ವರ್ಣನೆಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಸಾಮಾಜಿಕ ವಸ್ತುಗಳ ಪ್ರಧಾನತೆಯಿಂದ ಚಲನಚಿತ್ರಗಳಾಗಿರುವುದೂ ಗಮನಾರ್ಹ ಅಂಶ. ಇಂತಹ ಕೃತಿಗಳ ವಸ್ತು, ವಿಷಯಗಳಲ್ಲಿ ಬರುವ ಜೀವಿಗಳ ಜೀವನ ವಿಚಾರಗಳು ದಾಖಲಾಗಿಸಿದ್ದಾರೆ, ಅವುಗಳನ್ನು ಇಲ್ಲಿಯ ಸಂಶೋಧನಾ ವಿಷಯ, ವಿಚಾರಗಳಿಗೆ ಅನುಗುಣವಾಗಿ ಆಯ್ದುಕೊಂಡು, ಪರಿಶೀಲಿಸಿಆ ಜೀವಿಗಳ ಜೀವನ ನಡವಳಿಕೆಗಳನ್ನೆ ಸಂದರ್ಭಕ್ಕನುಗುಣವಾಗಿ ಇಲ್ಲಿ ಜೋಡಿಸಿ ಆಯಾ ಜೀವಿಗಳ ಸಂಸ್ಕೃತಿಯನ್ನು ಗುರುತಿಸಲಾಗಿದೆ.

ನವೋದಯ ಪಂಥದವರ ತತ್ವಧೋರಣೆಗಳಿಗೆ ಭಿನ್ನವಾಗಿ ಪ್ರಗತಿಶೀಲ ಪಂಥದವರು ಗುರುತಿಸಲ್ಪಟ್ಟರು. ಪ್ರಗತಿಶೀಲರು ನವೋದಯದವರ ದೇವರ ಕಲ್ಪನೆ, ಭಾವನೆಗಳು ವಾಸ್ತವತೆಯನ್ನು ಮೀರಿದ್ದೆಂದು ದೇವರ ಬಗ್ಗೆ ಪ್ರಶ್ನೆಗಳನ್ನೆತ್ತಿದರು. ಮಾನವ ಮೂಲಭೂತವಾದ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಹಿಡಿಯಬೇಕೆಂದು ವಾಸ್ತವವಾದಕ್ಕೆ ಪ್ರಾಧಾನ್ಯತೆ ಕೊಟ್ಟರು. ಇವರೆಲ್ಲ ಕಾವ್ಯ ಪ್ರಕಾರಕ್ಕಿಂತ ಹೆಚ್ಚಾಗಿ ಗದ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಂಡು ಕಾದಂಬರಿಗಳನ್ನೇ ಹೆಚ್ಚು ಬರೆದರು. ಅವರುಗಳಲ್ಲಿ ಪ್ರಮುಖರಾದವರು ಅ.ನ.ಕೃ., ನಿರಂಜನ, ತರಾಸು. ಕಟ್ಟೀಮನಿ, ಎಂ.ಕೆ. ಇಂದಿರಾ, ಚದುರಂಗ, ಅನುಪಮ ನಿರಂಜನ ಮುಂತಾದವರು. ಈ ಲೇಖಕರ ಕೃತಿಗಳ ಕೇಂದ್ರ ವಿಷಯ, ವಸ್ತುಗಳೆಲ್ಲ ಸಾಮಾಜಿಕವಾದವು. ಇವರು ಮಹಿಳೆಯರ, ಬಡವರ, ಮಕ್ಕಳ, ಕಾರ್ಮಿಕರ ನಾನಾ ಸಮಸ್ಯೆಗಳನ್ನು ಎತ್ತಿಹಿಡಿಯಲು ಮುಂದಾದರು. ಇವರಿಗೆ ಪ್ರಕೃತಿ ಪರಿಸರದ ಸಮಸ್ಯೆ ಅನುಭವಕ್ಕೆ ಬಾರಲೇ ಇಲ್ಲ. ಅದು ಈ ಸಮಾಜದ ಸಮಸ್ಯೆಯೇ ಆಗಿ ಅವರಿಗೆ ಕಂಡು ಬರಲಿಲ್ಲ. ಹಾಗಾಗಿ ಪ್ರಕೃತಿ ಪರಿಸರದ ಅಂಶಗಳು ಅವರ ಕೃತಿಗಳಲ್ಲಿ ಪ್ರಧಾನವಾಗಿರದೆ ಕೃತಿ ರಚನೆಗೆ ಪೂರಕವಾದ ಸಂದರ್ಭ ಸನ್ನಿವೇಶಗಳಿನುಗುಣವಾಗಿ ಪರಿಸರ ವರ್ಣನೆಗಳು ವಿರಳವಾಗಿ ಕಂಡು ಬರುತ್ತವೆಯೇ ಹೊರತು; ಜೀವಿಗಳ ಜೀವನ ನಡವಳಿಕೆಗಳ ಸೂಕ್ಷ್ಮತೆಗಳು ಯಾವ ಲೇಖಕರಲ್ಲೂ ಕಂಡುಬರುವುದಿಲ್ಲ. ಅದರಲ್ಲೂ ಪ್ರಗತಿಶೀಲ ಪಂಥದಲ್ಲಿ ಗುರುತಿಸಿಕೊಂಡ ಚದುರಂಗರು ಆ ಪಂಥಕ್ಕೆ ಮೀಸಲಾಗದೆ ಅವರು ನವ್ಯ, ಬಂಡಾಯ, ದಲಿತ ಮತ್ತು ಮಹಿಳಾ ಸಾಹಿತ್ಯ ಸಂದರ್ಭಗಳಿಗೆಲ್ಲ ಹೊಂದಿಕೊಂಡು ಸಾಹಿತ್ಯ ರಚನೆ ಮಾಡಿದ ಅಪರೂಪದ ಸಮನ್ವಯ ಲೇಖಕರು. ಇವರ ಸಮಗ್ರ ಕಥೆಗಳು ಮತ್ತು ವೈಶಾಖ, ಹೆಜ್ಜಾಲ ಕಾದಂಬರಿಗಳಲ್ಲಿ ತರುವ ಜೀವಿಗಳ ರೂಪಕಗಳನ್ನು ಸಂಶೋಧನಾ ವಿಷಯಕ್ಕೆ ಅನುಗುಣವಾಗಿ ಸಿಗುವ ಕೃತಿಗಳ ಚಿತ್ರಣವನ್ನು ವಿಷಯದ ಚರ್ಚೆಗೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಪ್ರಗತಿಶೀಲ ಪಂಥ ಸ್ವತಂತ್ರ ಭಾರತದ ಪೂರ್ವ ಮತ್ತು ಉತ್ತರ ಕಾಲಘಟ್ಟದ ಸುಮಾರು1940ರಿಂದ50 ಹತ್ತು ವರ್ಷಗಳ ಕಾಲ ಇದ್ದ ಸಾಹಿತ್ಯ ಪಂಥ. ಇದರ ನಂತರ ನವ್ಯಸಾಹಿತ್ಯ ಅಸ್ಥಿತ್ವ ಪಡೆಯಿತು. ಇದನ್ನು 1950ರಿಂದ70 ರವರೆಗೆ ಗುರುತಿಸಲಾಗಿದೆ. ಈ ಇಪ್ಪತ್ತು ವರ್ಷಗಳ ಅವಧಿಯ ಸ್ವತಂತ್ರ ಭಾರತದಲ್ಲಿ ವೈಜ್ಞಾನಿಕ, ಆರ್ಥಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಬೆಳವಣಿಗೆಗಳನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ಹೆಚ್ಚಾಗಿ ಸ್ವಾರ್ಥ, ವ್ಯಕ್ತಿಗತ ಬೆಳವಣಿಗೆಗಳೇ ಜಾಸ್ತಿಯಾಗಿ ಕಾಣಿಸಿಕೊಳ್ಳುತ್ತವೆ. ಇದರಿಂದ ರಾಷ್ಟ್ರೀಯ ಸಂಪತ್ತುಗಳೆಲ್ಲ ಮೇಲ್ಜಾತಿ, ವರ್ಗ ಹಾಗೂ ಮಧ್ಯಮವರ್ಗದವರ ಸ್ವತ್ತಾಗುತ್ತಿದ್ದವೇ ಹೊರತು, ಕೆಳವರ್ಗದವರಿಗೆ ದಕ್ಕುತ್ತಿರಲಿಲ್ಲ. ಇದರಿಂದ ಸಮಾಜದಲ್ಲಿ ತಾರತಮ್ಯ, ಅಸಮಾನತೆ ಇನ್ನಷ್ಟು ಉಲ್ಬಣಗೊಂಡು ಸಾಮಾಜಿಕ ಸಮಾನತೆ ಸಾಧ್ಯವಾಗಲೇ ಇಲ್ಲ. ಈ ಅಂಶವನ್ನು ತೇಜಸ್ವಿ ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನದ ಮುನ್ನುಡಿಯಲ್ಲಿಯ ಮಾತು–

"ನಮ್ಮ ಸಾಹಿತ್ಯ ಸಂಪೂರ್ಣ ನಿಸ್ತೇಜಗೊಂಡಿದೆ. ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು ಅದು ಹೊರಲಾರದು ಏಕೆಂದರೆ ಮೊದಲನೆಯದಾಗಿ ಯಾಂತ್ರಿಕವಾಗಿರುವ ಅದರ ಸಾಂಕೇತಿಕ ಶೈಲಿ, ತಂತ್ರಗಳು. ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿ ವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೆ ಸೀಮಿತಗೊಂಡ ಅದರ ಕ್ರಾಂತಿಕಾರಕತನ. ಈ ಮೂರು ಕಾರಣಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸ ಬಯಸುತ್ತೇನೆ. ನವ್ಯ ಮಾರ್ಗದ ಸಾಂಕೇತಿಕ ಶೈಲಿ ಮತ್ತು ತಂತ್ರಗಳು ಮೊದಲನೆಯದಾಗಿ ಸಾಹಿತ್ಯದ ಅನೇಕ

ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಸಾಹಿತಿಗಳಾಗಿರುವವರ ತಿರಸ್ಕಾರವನ್ನು ತೋರಿಸುತ್ತದೆ. ನಮ್ಮ ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ಉಚ್ಚ ವರ್ಗ ಮತ್ತು ಜಾತಿಗಳೂ, ಮಿಕ್ಕುದನ್ನು ಮಧ್ಯಂತರ ವರ್ಗ ಮತ್ತು ಜಾತಿಗಳು ತಿಂದು ಹಾಕುತ್ತಿರುವುದರಿಂದ ಸಾಕ್ಷರತೆ ನಿರೀಕ್ಷಿತ ಗತಿಯಲ್ಲಿ ವೃದ್ಧಿಸಿಯೇ ಇಲ್ಲ. ಈ ಕಾರಣದಿಂದಲೇ ಭಾರತದ ಗ್ರಾಮಗಳಲ್ಲಿ ಕೇವಲ ಹೆಬ್ಬೆಟ್ಟೊತ್ತುವ ಪಶುಸದೃಶ ಶೂದ್ರ ಸಮುದಾಯ ಒಂದನ್ನು ನಿರ್ಮಾಣ ಮಾಡುತ್ತಿದ್ದೇವೆ"1.

ತೇಜಸ್ವಿ ನವ್ಯ ಸಾಹಿತ್ಯ ನಿಸ್ತೇಜಗೊಂಡಿರುವುದಕ್ಕೆ ಕೊಟ್ಟ ಈ ಮೂರು ಕಾರಣಗಳಲ್ಲಿ ಮೊದಲ ಕಾರಣದ ವಿವರಣೆಯಲ್ಲಿ ನಮ್ಮ ರಾಷ್ಟ್ರೀಯ ಉತ್ಪಾದನೆಯಲ್ಲಿ ಬಹುಪಾಲನ್ನು ಉಚ್ಚ ಮತ್ತು ಮಧ್ಯಮ ಜಾತಿ ವರ್ಗಗಳೇ ತಿಂದು ಹಾಕುತ್ತವೆ ಎಂಬ ಮಾತು ಇಲ್ಲಿ ಪ್ರಧಾನವಾದುದ್ದು. ಇದರಿಂದ ನವ್ಯ ಸಾಹಿತ್ಯ ಸಂದರ್ಭವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಈ ಕಾಲ ಘಟ್ಟದ ಅಭಿವೃದ್ಧಿಯ ಬೆಳವಣಿಗೆಯಿಂದಲೇ ಪ್ರಕೃತಿ ಪರಿಸರ, ಮಾನವ ಸಮಾಜದಿಂದ ಆಕ್ರಮಣಕ್ಕೊಳಪಟ್ಟಿತು. ಅದರ ಮೂಲಕ ಕಾಡು ನಾಡಾಯಿತು. ನಾಡು ವಿಜ್ಞಾನ, ತಂತ್ರಜ್ಞಾನಗಳಿಂದ ಕೈಗಾರಿಕೆಗಳ ಬೀಡಾಯಿತು. ಪರಿಣಾಮವಾಗಿ ಪ್ರಕೃತಿ ವಿಕೃತವಾಯಿತು. ಈ ಎಲ್ಲ ವಿಶ್ಲೇಷಣೆಗೆ ಪೂರಕವಾದ ಅಂಶಗಳನ್ನು ಕುರಿತು ಎಂ.ಮಹೇಶನ್– "1920 ರಷ್ಟು ಹಿಂದೆಯೇ ವಿಶ್ವೇಶ್ವರಯ್ಯನವರು ಪ್ರತಿಪಾದಿಸಿದ ಕೈಗಾರಿಕೀಕರಣ ಅಥವಾ ವಿನಾಶ ಸಿದ್ಧಾಂತ, ನೆಹರೂ ಚಿಂತನೆಯ ರೂವಾರಿಯಾಗಿದ್ದ ಶ್ರೀ ಮಹಾಲನೋಬಿಸ್ ತಿಳಿಸಿದ ತಂತ್ರಜ್ಞಾನದ ಕೊರತೆಯೇ ದೇಶದ ಅನಭಿವೃದ್ಧಿ ಸ್ಥಿತಿಗೆ ಕಾರಣ. ಅಂದರೆ ಬೃಹತ್ ಕೈಗಾರಿಕೀಕರಣವೇ ಅಭಿವೃದ್ಧಿಯ ಮೂಲಮಂತ್ರ. ಸಣ್ಣ ಕೈಗಾರಿಕೆಗಳಾಗಲಿ, ಗುಡಿ ಕೈಗಾರಿಕೆಗಳಾಗಲಿ ಈ ದೇಶವನ್ನು ಬಲಿಷ್ಠವಾಗಿ ಮಾಡಲಸಾಧ್ಯವೆಂಬ ಅಭಿಪ್ರಾಯಗಳು ದೇಶದ ಪ್ರಪ್ರಥಮ ಪ್ರಧಾನಿಯವರನ್ನು ಪ್ರಭಾವಿಸಿದವು. ಆದ್ದರಿಂದ ಅರಣ್ಯಗಳನ್ನು ಪರಮ ವಾಣಿಜ್ಯ ಘಟಕಗಳೆಂದು ಪರಿಗಣಿಸುವ ರಾಷ್ಟ್ರೀಯ ಅರಣ್ಯ ನೀತಿ 1952 ರಲ್ಲಿ ಪ್ರಕಟವಾಯಿತು. ಸ್ವಾತಂತ್ರ್ಯ ಪೂರ್ವ ಭಾರತದ ಅರಣ್ಯನೀತಿಯ ತಿರುಳಾಗಿದ್ದ ಅರಣ್ಯಗಳ ರಕ್ಷಣೆ, ಉತ್ಪತ್ತಿ ಮತ್ತು ನಿರ್ವಹಣೆ, ರಾಜ್ಯದ ಹಕ್ಕು ಈ ತತ್ವಗಳನ್ನೇ ಪುನರುಚ್ಚರಿಸಿ ಜನಪದ ಶೋಷಣೆಯನ್ನು ಸ್ಥಿರೀಕರಿಸಲಾಯಿತು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಬಿಳಿಯರು ಮಾತ್ರ ಶೋಷಣೆಯ ಏಜೆಂಟರಾಗಿದ್ದರು. ಸ್ವಾತಂತ್ರ್ಯ ನಂತರದಲ್ಲಿ ಬಂಡವಾಳಶಾಹಿ ಕೈಗಾರಿಕೆಗಳ ಒಡೆಯರು, ಬಲ್ಲಿದರಾದ ರೈತವರ್ಗ, ಇವೆರಡನ್ನೂ ಮೀರಿಸಿದ ಅಧಿಕಾರಶಾಹಿ ರಾಜಕಾರಣಿಗಳು 'ಅಪವಿತ್ರ ದುಷ್ಟತ್ರಯರು' ದೇಶದ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಹೀರುವ ಪಿಪಾಸುಗಳಾದರು"2.(ಮಹೇಶನ್.ಎಂ, ಪರಿಸರ ಪ್ರಜ್ಞೆ: ಕಥೆ–ವ್ಯಥೆ, ಪು–98)

ಈ ಮಾತುಗಳು ಭೂ ಒಡೆತನ, ಕೈಗಾರಿಗಳ, ಅಧಿಕಾರಗಳ, ರಾಜ್ಯ, ರಾಷ್ಟ್ರ ಸಂಪತ್ತಿನ ಒಡೆತನವುಳ್ಳವರೇ ಈ ಸಮಾಜದ ಪ್ರಬಲ ಕೋಮಿನ ಜನ. ಇವರು ಸಾಮಾಜಿಕ ವ್ಯವಸ್ಥೆಯ ದುರ್ಬಲ ಜಾತಿ, ವರ್ಗದ ಬಹುಜನರ ಮೇಲೆ, ರಾಷ್ಟ್ರೀಯ ಬಹು ಸಂಪತ್ತುಗಳ ಮೇಲೆ ಸರ್ವಾಧಿಕಾರ ಸ್ಥಾಪಿಸಿದ್ದರ ಹಸಿ ಸತ್ಯವನ್ನು ತೆರೆದಿಡುತ್ತವೆ. ಇವೆಲ್ಲ ಈ ದೇಶದಲ್ಲಿದ್ದ ನವ್ಯ ಸಾಹಿತ್ಯ ಸಂದರ್ಭದ ಅಸಮಾನತೆಯ ಸಂಕೀರ್ಣ ಸ್ಥಿತಿಯನ್ನೆ ಇವರು ಹೇಳಿರುವುದು.

ಇದರ ಭವಿಷ್ಯದ ದುರಂತವನ್ನರಿತೇ ತೇಜಸ್ವಿಯವರು ತಮ್ಮ ಸಾಹಿತ್ಯದ ಮೂಲಕ ಆಗಿನ ಸಾಹಿತ್ಯ ಮತ್ತು ಲೇಖಕರನ್ನು ಎಚ್ಚರಿಸಿದ್ದು ಶ್ಲಾಘನೀಯವಾಗಿದೆ. ಆ ಸಂದರ್ಭದ ಸಮಾಜದ ಸ್ಥಿತಿ ಮತ್ತು ಪ್ರಕೃತಿಯ ಚಿತ್ರಣವನ್ನು ನಮ್ಮ ಲೇಖಕರ ಕೃತಿಗಳು ಗಮನಾರ್ಹವಾಗಿ ಅಭಿವ್ಯಕ್ತಿಗೊಳಿಸಿವೆ. ಅವುಗಳಲ್ಲಿ ಈ ಅಧ್ಯಯನದ ಚರ್ಚೆಗೊಳಪಟ್ಟ, ಗೋಪಾಲ ಕೃಷ್ಣ ಅಡಿಗರ ಭೂಮಿಗೀತ, ಭೂತ ಕಾವ್ಯಗಳು, ಚಂದ್ರಶೇಖರ ಕಂಬಾರರ ಪುಷ್ಪರಾಣಿ ನಾಟಕ, ತೇಜಸ್ವಿಯವರ ಚಿದಂಬರ ರಹಸ್ಯ, ಪರಿಸರದ ಕಥೆಗಳು, ಏರೋಪ್ಲೇನ್ ಚಿಟ್ಟೆ ಮತ್ತಿತರ ಕಥೆ ಮತ್ತು ಕಾದಂಬರಿಗಳು, ಎಚ್.ಎಸ್.ಶಿವಪ್ರಕಾಶರ ಮಂಟೇಸ್ವಾಮಿ ಕಥಾಪ್ರಸಂಗ, ಮಾದಾರಿ ಮಾದಯ್ಯ ನಾಟಕಗಳು ಇನ್ನೂ ಹಲವಾರು ಪುಸ್ತಕಗಳು ಆಯಾ ಕಾಲದಲ್ಲಿ ಪ್ರಕೃತಿಯ ಗಿಡ–ಮರ, ಪ್ರಾಣಿ–ಪಕ್ಷಿಗಳ ಮೇಲೆ ಉಂಟಾದ ಪರಿಣಾಮವನ್ನು ಚಿತ್ರಿಸಿವೆ. ಇವುಗಳಲ್ಲೆಲ್ಲ ಜೀವಿಗಳ ಸಂಸ್ಕೃತಿಯ ಬೇರನ್ನು ಹಿಡಿದು ನಾಳೆಯ ಜೀವ ಧರ್ಮದ ಗುರಿಗೆ ಹೆಚ್ಚಾಗಿ ತೇಜಸ್ವಿ, ಕಂಬಾರ, ಶಿವಪ್ರಕಾಶರ ಕೃತಿಗಳ ಬೌದ್ಧ ಸಾಹಿತ್ಯ ಮೀಮಾಂಸೆಯ ಆಳದಿಂದ ಹೆಕ್ಕಿ ತೆಗೆದು ಪರಿಶೀಲಿಸಲಾಗಿದೆ.

ನವ್ಯಸಾಹಿತ್ಯ ಸಂದರ್ಭದಲ್ಲಿ ಆದ ಭಾರತದ ರಾಜಕೀಯ ಬೆಳವಣಿಗೆಯಿಂದಾಗಿ ಮೇಲ್ಜಾತಿವರ್ಗಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಬೆಳವಣಿಗೆ ಪ್ರಬಲವಾಗತೊಡಗಿತು. ಪರಿಣಾಮವಾಗಿ ಭೂ ಒಡೆತನ, ಕೈಗಾರಿಕಾ ಒಡೆತನ, ಖನಿಜ ಸಂಪತ್ತುಗಳ ಮೇಲೆ ಆಕ್ರಮಣ; ಈ ಎಲ್ಲ ರಾಷ್ಟ್ರೀಯ ಸಂಪತ್ತುಗಳೂ ಮೇಲ್ಜಾತಿ ವರ್ಗದವರ ಸ್ವತ್ತಾದವು. ಕೆಳ ಜಾತಿಯ ಜನರೆಲ್ಲ ಇವರ ಕೈ ಕೆಳಗೆ ಕೂಲಿ ಕಾರ್ಮಿಕರಾದರು. ಆದರೆ ಕೆಳಜಾತಿಯ ಜನಕ್ಕೆ ವಿದ್ಯೆ ಮತ್ತು ಓಟಿನ ಹಕ್ಕು ಸಿಕ್ಕಿದರೂ ಅವರಿಗೆ ಸಂವಿಧಾನ ಬದ್ಧ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ

ದಕ್ಕಲಿಲ್ಲ. ಪರಿಣಾಮವಾಗಿ ಅಸಮಾನತೆ, ಹಿಂಸೆ, ಶೋಷಣೆಗಳು ಹೆಚ್ಚಾದವು. ಈ ಹಿನ್ನೆಲೆಯಿಂದಲೇ ತೇಜಸ್ವಿಯವರು ನವ್ಯ ಸಾಹಿತ್ಯ ನಿಸ್ತೇಜಗೊಂಡಿದೆ ಎಂದು ಕೊಟ್ಟ ಮೊದಲ ಕಾರಣ. ಈ ಕಾರಣಗಳ ವಾಸ್ತವತೆ ಅರಿವಾದ ಕೆಳವರ್ಗದ ವಿದ್ಯಾವಂತರು ಈ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದರು. ಪ್ರಜ್ಞಾವಂತರು ಇವರೊಂದಿಗೆ ಸ್ಪಂದಿಸಿ ಬೆಂಬಲಿಸಿದರು. ಇಲ್ಲಿಂದ ಆರಂಭವಾದ ಬಂಡಾಯ ದಲಿತ ಚಳುವಳಿ, ಸಾಹಿತ್ಯ ಸಂದರ್ಭದಲ್ಲಿ ಶೂದ್ರ ಅತಿಶೂದ್ರರೆಲ್ಲ ಒಟ್ಟಾಗಿ ಪ್ರತಿಭಟನೆ, ಚಳುವಳಿಗಳನ್ನು ಸಮಾಜ, ಸರ್ಕಾರದ ವಿರುದ್ಧ ಮಾಡಿ; ಆಸ್ತಿ, ಅಧಿಕಾರಕ್ಕಾಗಿ, ಸಾಮಾಜಿಕ ನ್ಯಾಯದ ಸಮಾನತೆಯ ಮಾನವತೆಗಾಗಿ ಹೋರಾಡಿದರು. ಅಂದಿನ ಭಿನ್ನ ಜಾತಿ, ಧರ್ಮ, ಸಂಸ್ಕೃತಿ ಸಮಾಜದ ಲೇಖಕರು ಹುಟ್ಟಿಕೊಂಡು ತಮ್ಮ ತಮ್ಮ ಅನುಭವಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಗೊಳಿಸಿದರು. ಹಾಗಾಗಿ ದಲಿತ, ಬಂಡಾಯ, ಮಹಿಳಾ ಸಾಹಿತ್ಯ ಕೃತಿಗಳಲ್ಲಿ ಹೆಚ್ಚಾಗಿ ಸಾಮಾಜಿಕ ಸಮಸ್ಯೆಗಳನ್ನೆ ತೆರೆದಿಡಲಾಯಿತು. ಕೆಳಜಾತಿಯ ಜನ ಮತ್ತು ಬುಡಕಟ್ಟು ಜನರು ನಾನಾ ರೀತಿಯ ಹಿಂಸೆ, ಶೋಷಣೆಗೊಳಪಟ್ಟಿರುವ ನಾನಾ ರೂಪಕಗಳನ್ನು ಈ ಸಾಹಿತ್ಯ ಕೃತಿಗಳು ದಾಖಲಿಸಿವೆ. ಇವರ ಜೀವನ ಅಸ್ತಿತ್ವ ಕೇಂದ್ರವಾದ ಕಾಡು, ನೀರು, ಭೂಮಿ ಮುಂತಾದ ಸ್ವಾಭಾವಿಕ ರಾಷ್ಟ್ರೀಯ ಈ ಸಂಪತ್ತನ್ನು, ಪಡೆಯುವ ಮೂಲಭೂತ ಹಕ್ಕಿನಿಂದ ವಂಚಿಸಿ, ಈ ವ್ಯವಸ್ಥೆಯ ಶೋಷಣೆಯ ವಿರುದ್ಧ, ತಮ್ಮ ಹಕ್ಕಿಗಾಗಿ; ಆ ಜನ ಹೋರಾಟ ಮಾಡಿದ್ದನ್ನು ಅಲ್ಲಲ್ಲೇ ಚಿತ್ರಿಸಿವೆ. ಅಂತಹವುಗಳಲ್ಲಿ ಬಂಜಗೆರೆ ಜಯಪ್ರಕಾಶ ಅವರ 'ಮಹೂವ' ಪದ್ಯ ಒಂದು ಮಹತ್ವ ಪೂರ್ಣ ಕಾವ್ಯ.

ಈ ಕಾಲ ಘಟ್ಟದ ಪ್ರಾತಿನಿಧಿಕ ಲೇಖಕರಲ್ಲಿ ಬೆಸಗರಹಳ್ಳಿ ರಾಮಣ್ಣ, ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ದೇವನೂರು ಮಹಾದೇವ, ಡಾ. ಸಿದ್ದಲಿಂಗಯ್ಯ. ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ರಾಘವೇಂದ್ರ ಪಾಟೀಲ. ಚಂದ್ರಶೇಖರ ತಾಳ್ಯ, ಬಂಜಗೆರೆ ಜಯಪ್ರಕಾಶ, ಕರೀಗೌಡ ಬೀಚನಹಳ್ಳಿ, ಕಾ.ತ.ಚಿಕ್ಕಣ್ಣ ಇನ್ನೂ ಮುಂತಾದವರಿದ್ದಾರೆ. ಇವರಲ್ಲಿ ಕೆಲವರ ಕೆಲವು ಕೃತಿಗಳಲ್ಲಿರುವ ಜೀವಿಗಳ ಜೀವನ ನಡೆವಳಿಕೆಗಳನ್ನು ಮಾತ್ರ ಆಯ್ದುಕೊಂಡು ಪರಿಶೋಧನೆಗೆ ಒಳಪಡಿಸಲಾಗಿದೆ. ಅದರಲ್ಲು ಆಯ್ದುಕೊಂಡ ತುಣುಕುಗಳಲ್ಲಿರುವ ಬೌದ್ಧ ಮೀಮಾಂಸೆಯ ಪರಿಕಲ್ಪನೆಯಲ್ಲಿ ಜೀವ, ಜೀವಿಗಳ ಸಂಸ್ಕೃತಿಯ ತತ್ವಾಂಶಗಳನ್ನು ಹೆಕ್ಕಿ ತೆಗೆಯಲಾಗಿದೆ. ಇಲ್ಲಿ ಚರ್ಚಿಸಲ್ಪಟ್ಟಿರುವ ಸಾಹಿತ್ಯ ಪಂಥಗಳ ಸೃಜನಶೀಲ ಕೃತಿಗಳ ಜೊತೆಗೆ ವೈಜ್ಞಾನಿಕ, ವೈಚಾರಿಕ ಕೃತಿಗಳಾದ ಬಿ.ಜಿ.ಎಲ್.ಸ್ವಾಮಿಯವರ 'ಹಸಿರುಹೊನ್ನು', ನಾಗೇಶ ಹೆಗಡೆಯವರ 'ಇರುವುದೊಂದೇ ಭೂಮಿ', ಹಿ.ಚಿ. ಬೋರಲಿಂಗಯ್ಯನವರ 'ಗಿರಿಜನ ನಾಡಿಗೆ ಪಯಣ', ಚಂದ್ರಶೇಖರ ನಂಗಲಿಯವರ 'ಕಾಡು ಮತ್ತು ತೋಪು'ನಂತಹ ಹಲವಾರು ಕೃತಿಗಳನ್ನು ಚರ್ಚಾ ವಿಷಯಗಳಿಗನುಗುಣವಾಗಿ ಬಳಸಿಕೊಳ್ಳಲಾಗಿದೆ. ಜಾನಪದ ಸಾಹಿತ್ಯ ಕೃತಿಗಳನ್ನು, ಸೃಜನೇತರ ಕೃತಿಗಳನ್ನು ಹಾಗೂ ಧರ್ಮ, ಪುರಾಣ, ಇತಿಹಾಸ, ವಿಜ್ಞಾನ, ಅನುವಾದ, ಸಂಕಲನಗಳಂತಹ ನಾನಾ ರೀತಿಯ ಪುಸ್ತಕಗಳಲ್ಲದೆ, ತಿಂಗಳು, ವಾರ, ದಿನ ಪತ್ರಿಕೆ ಇನ್ನಿತರ ಮಾಹಿತಿಗಳನ್ನು ಬಳಸಿಕೊಂಡು ಪ್ರಾಕೃತಿಕ ಜೀವಿಗಳ ಜೀವನ ನಡವಳಿಕೆಗಳ ಬಗ್ಗೆ ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಈ ಚರ್ಚೆಗೆ ಬಳಕೆಯಾಗಿರುವ ಯಾವ ಕೃತಿಯನ್ನೂ ಯಾವ ಲೇಖಕರನ್ನೂ ಪ್ರಧಾನವಾಗಿಯಾಗಲಿ ಅಥವಾ ಸಾಮಾನ್ಯವಾಗಿಯಾಗಲಿ ಪರಿಗಣಿಸಲಾಗಿಲ್ಲ. ಆದರೆ ಎಲ್ಲವೂ ಮಹತ್ವ ಆಧಾರ ಪೂರ್ಣ ವಿಷಯ, ವಿಚಾರಗಳುಳ್ಳ ಕೃತಿಗಳಾನ್ನಾಗಿಯೂ, ಆ ಕೃತಿಗಳನ್ನು ರಚನೆ ಮಾಡಿದ ವಿಶಿಷ್ಟ. ಪ್ರತಿಭೆಯ ಲೇಖಕರನ್ನಾಗಿಯೂ ಪರಿಗಣಿಸಿ ಪರಿಶೋಧಿಸಲ್ಪಟ್ಟಿರುವುದು ಈ ಸಂಶೋಧನೆಯ ವಿಶೇಷ. ಆದ್ದರಿಂದ ಇಲ್ಲಿಯ ಎಲ್ಲ ಅಂಶಗಳು ಮಹತ್ವವಾದವುಗಳೇ ಆಗಿವೆ. ಇಂತಹ ಜೀವ–ಜೀವಿಗಳ ಮಾಹಿತಿಯುಳ್ಳ ಮೌಲ್ಯಾಧಾರಿತ ಸಾಹಿತ್ಯ ಮತ್ತು ವಿಜ್ಞಾನ ಕೃತಿಗಳ ಪ್ರಸ್ತುತತೆಯನ್ನು ಇಂದು ಮತ್ತು ನಾಳೆಯ ಮಕ್ಕಳ ಮತ್ತು ಜೀವ ಸಂಕುಲಗಳ ಭವಿಷ್ಯಕ್ಕಾಗಿ ಎತ್ತಿ ಹಿಡಿಯಲಾಗಿದೆ. ಪ್ರಕೃತಿ ಹೇಗೆ ಸೃಷ್ಟಿಶೀಲ ಗುಣದಿಂದ ಚಲನಶೀಲವಾಗಿ ಜೀವಸಿರಿಯನ್ನು ಹೊಂದಿದೆಯೋ ಹಾಗೆಯೇ ಈ ಜೀವಿಗಳ ಸಂಬಂಧಿ ಕೃತಿಗಳು ಮಾನವ ಸಮಾಜಕ್ಕೆ ಪ್ರಕೃತಿಯಷ್ಟೇ ಪರಿಣಾಮಕಾರಿಯಾಗಬಲ್ಲವು ಎಂಬುದು ಉತ್ಪ್ರೇಕ್ಷೆ ಮಾಡದೆ, ಇಲ್ಲಿಯ ವಿಷಯ ಅಧ್ಯಯನಕ್ಕೆ ಅನುಗುಣವಾಗಿ ಬಳಸಲ್ಪಟ್ಟ ಸಾಹಿತ್ಯದ ಮಹತ್ವವನ್ನು ಎತ್ತಿಹಿಡಿಯಲಾಗಿದೆ. ಇದು ಸಾರ್ವತ್ರಿಕವಾದ ಸಾರ್ವಕಾಲಿಕ ಸತ್ಯ. ಈ ಸತ್ಯವನ್ನು ಜಗತ್ತಿನ ಜನ ಸಮುದಾಯಕ್ಕೆ ಬಿತ್ತುವ ಕರ್ತವ್ಯ ಸಂಶೋಧಕರು, ಲೇಖಕರು, ಪತ್ರಕರ್ತರು ಮತ್ತು ಸರ್ಕಾರಗಳದ್ದು ಎಂಬುದನ್ನು ಮತ್ತೆ ಮತ್ತೆ ಪುನರುಚ್ಚರಿಸುವುದು ಸಲ್ಲದು. ಜೊತೆಗೆ ಪ್ರತಿಯೊಬ್ಬ ಮಾನವನೂ ಇವರೊಂದಿಗೆ ಮತ್ತು ತನ್ನ ಸುತ್ತ ಮುತ್ತಲ ಪರಿಸರವನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯ ಬಗ್ಗೆ ಅರಿತು ಆತ್ಮ ಪರಿವರ್ತನೆ ಮಾಡಿಕೊಳ್ಳುವುದು ದೊಡ್ಡದೆಂಬ ತಾತ್ವಿಕತೆಯನ್ನು ಎತ್ತಿಹಿಡಿಯಲಾಗಿದೆ.

ಪ್ರಕೃತಿ ಪರಿಸರದ ಜೀವ ರಕ್ಷಣೆಯ ಬಗ್ಗೆ ಜಗತ್ತಿನ ಜನರ ಮನ ಪರಿವರ್ತನೆಗೆ ಸಾಹಿತ್ಯ ಸಂಸ್ಕೃತಿಯ ಪಾಲೇನು ಎನ್ನುವುದಕ್ಕೆ ಇದುವರೆಗಿನ ಅಧ್ಯಯನದ ನಮ್ಮ ಸಕಲ ಸಾಹಿತ್ಯ ಘಟ್ಟಗಳ ಜೀವಿಗಳ ಸಂಬಂಧಿ ಸಾಹಿತ್ಯ ಕೃತಿಗಳನ್ನು ಪುನರಾವಲೋಕಿಸಿದರೆ ಅರಿವಾಗುತ್ತದೆ. ಈ ಹಿನ್ನೆಲೆಯಿಂದ ಪ್ರಬಂಧದ ಭಾಗಗಳನ್ನು ತೆರೆದರೆ, ಮೊದಲಿಗೆ ಸಂಶೋಧನೆಯ ವಿಷಯ ಪ್ರವೇಶಕ್ಕೆ ಒದಗಿಸಿಕೊಂಡ ಹಿನ್ನೆಲೆ ಸಕಲ ಜೀವಿಗಳ ಪರಿಸ್ಥಿತಿ ಹಾಗೂ ಅವುಗಳ ಸಕಲ ಹಿಂಸಾತ್ಮಕ ಚಟುವಟಿಕೆಗಳ ಬೆಳವಣಿಗೆ ಮತ್ತು ಇವತ್ತಿನ ಜೀವಿಗಳ ಸಾಂಸ್ಕೃತಿಕ ಅಧ್ಯಯನಗಳ ಪ್ರಾಮುಖ್ಯತೆ ಮುಂತಾದ ಪ್ರಮುಖ ವಿಚಾರಗಳನ್ನು ತಳಹದಿಯನ್ನಾಗಿಟ್ಟು ಕೊಂಡು ಚರ್ಚೆ ಮಾಡಲಾಗಿದೆ.

ಮೊದಲ ಭಾಗದಲ್ಲಿ ಪ್ರಕೃತಿಯ ಜೀವ–ಜೀವಿ ಸಂಸ್ಕೃತಿಗಳ ಮೂಲ ಚರ್ಚೆಯನ್ನೇ ಈ ಪ್ರಬಂಧದ ತಾಯಿಬೇರನ್ನಾಗಿ ಮಾಡಿಕೊಂಡು ಪರಿಶೀಲಿಸಲಾಗಿದೆ. ಇಲ್ಲಿ ಜೀವ ಸೃಷ್ಟಿಯ ಆದಿ ಹೇಗಾಗಿರಬಹುದೆಂದು ವೈಜ್ಞಾನಿಕವಾಗಿ ಕಂಡುಕೊಳ್ಳಲಾಗಿದೆ. ಇದನ್ನು ವಿಜ್ಞಾನದ ಬರಹಗಳಿಂದ ಸಾಹಿತ್ಯ, ಜಾನಪದ, ವಿಜ್ಞಾನ ಪರಿಕಲ್ಪನೆಗಳಿಂದ ಬಿಡಿಸಲಾಗಿದೆ. ಈ ಎಲ್ಲ ಆಧಾರಗಳಿಂದ ತಿಳಿದದ್ದು ಪ್ರಕೃತಿ ಸೃಷ್ಟಿಯ ಮೂಲ ಪರಮಾಣು, ಅದೇ ಜೀವಾಣು. ಈ ಜೀವಾಣುಗಳಿಂದ ಸೃಷ್ಟಿಯಾದವು ಭೂಮಿ, ಆಕಾಶ ಮತ್ತು ಭೂಮಿ ಮೇಲಿನ ಸಮಸ್ತ ಜೀವ ಸಂಕುಲಗಳು. ಇಂತಹ ಸೃಷ್ಟಿಯ ಮೂಲವಾದ ಅಣು(ಜೀವಾಣು)ಗಳ ವೈವಿಧ್ಯ ಚಟುವಟಿಕೆಗಳ ಕ್ರಮ (ಸಂಸ್ಕೃತಿ)ಯಿಂದಾದದ್ದೇ ಜೀವ ವಿಕಾಸ ಎಂಬ ಸ್ಪಷ್ಟ ನಿಲುವನ್ನು ಕಂಡುಕೊಳ್ಳಲಾಗಿದೆ.

ಎರಡನೇ ಭಾಗದಲ್ಲಿ ಸಸ್ಯ, ಕೀಟಗಳ ವೈವಿಧ್ಯ ಚಟುವಟಿಕೆಗಳ ಸಹಜ ಕ್ರಮ (ಸಂಸ್ಕೃತಿ)ಯ ನಾನಾ ಸ್ವರೂಪವನ್ನು ಗುರುತಿಸಿ ಸಾಹಿತ್ಯೀಕ ದಾಖಲೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಅದೇ ರೀತಿ ಮೂರು ಮತ್ತು ನಾಲ್ಕನೆ ಅಧ್ಯಾಯಗಳಲ್ಲಿ ಪ್ರಾಣಿ, ಪಕ್ಷಿ, ಜಲಚರ ಜೀವಿಗಳ ವೈವಿಧ್ಯ ಚಟುವಟಿಕೆಗಳ ಸ್ವಾಭಾವಿಕ ಕ್ರಮ (ಸಂಸ್ಕೃತಿ)ಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿ ದಾಖಲಿಸಲಾಗಿದೆ. ಪ್ರಕೃತಿಯ ಸಕಲ ಜೀವಸಂಕುಲಗಳಿಗೂ ಮಾನವನಂತೆ ಅವುಗಳದೇ ಆದ ವಿಶಿಷ್ಟ ಸಂಸ್ಕೃತಿ ಇದೆ. ಆದನ್ನು ಸಂಸ್ಕೃತಿಯ ನೆಲೆಯಲ್ಲಿ ನೋಡಿಲ್ಲ. ಕೇವಲ ಕೆಲವು ಕೃತಿಗಳಲ್ಲಿ ಮಾತ್ರ ಸಸ್ಯ. ಪ್ರಾಣಿ, ಪಕ್ಷಿ, ಕೀಟ ಮುಂತಾದ ಜೀವಿಗಳ ಜೀವನ ನಡವಳಿಕೆಗಳ ಉಲ್ಲೇಖ ಅಲ್ಲಲ್ಲೇ ಕಂಡು ಬರುತ್ತದೆ ಅಷ್ಟೆ. ಅಂತಹ ಹಲವಾರು ಅಂಶಗಳನ್ನು ಈ ಅಧ್ಯಯನದಲ್ಲಿ ಎತ್ತಿ ಹಿಡಿಯಲಾಗಿದೆ. ಐದನೆಯ ಅಧ್ಯಾಯದಲ್ಲಿ ಭೂಮಿ–ಪ್ರಕೃತಿ–ಮಾನವ ಸಂಸ್ಕೃತಿಗಳ ಚರ್ಚೆಯನ್ನು ಕೈಗೆತ್ತಿಕೊಂಡು ಪರಿಶೀಲಿಸಲಾಗಿದೆ. ಪ್ರಕೃತಿ ಗುಣದ ಮಾನವೇತರ ಜೀವಿಗಳ ಜೀವನ ನಡವಳಿಕೆಗಳ ಗುಣಗಳು ಮೌಲ್ಯಾಧಾರಿತವಾದದ್ದು, ಜೀವ ಕೇಂದ್ರಿತವಾದದ್ದೆಂದು ಗುರುತಿಸಲಾಗಿದೆ. ಈ ಅಧ್ಯಾಯಗಳಲ್ಲೆಲ್ಲಾ ಜೀವಿಗಳ ಜೀವ ಧರ್ಮದ ಗುಣ ಮತ್ತು ನಡವಳಿಕೆಗಳಿಂದ ಭೂಮಿಯ ಪ್ರಕೃತಿ ಗುಣ ತತ್ವಗಳನ್ನೊಳಗೊಂಡಾಗ ಸಕಲ ಶಾಂತಿ, ಪ್ರೀತಿ, ಸಮಾನತೆಯ ಪ್ರಾಕೃತಿಕ ತತ್ವಗಳನ್ನು ಕಂಡುಕೊಳ್ಳಲಾಗಿದೆ. ಇಂತಹ ಪ್ರಮುಖಾಂಶಗಳು ಸಾಹಿತ್ಯ ಮತ್ತು ಸಾಹಿತ್ಯೇತರ ಕೃತಿಗಳಿಂದ ಈ ಅಧ್ಯಯನಗಳಲ್ಲಿ ಗೋಚರಿಸಿವೆ. ಅಲ್ಲದೆ ಜಾನಪದ ಸಾಹಿತ್ಯವೂ ಸಸ್ಯ, ಪ್ರಾಣಿ, ಪಕ್ಷಿ ಜೀವನ ಸಂಸ್ಕೃತಿಯ ಬಗ್ಗೆ ಮಾಹಿತಿಯನ್ನೊಳಗೊಂಡಿರುವುದನ್ನು ಗುರುತಿಸಲಾಗಿದೆ. ಆ ಸಾಹಿತ್ಯದಲ್ಲಿ ಹಳ್ಳಿಯ ಜನಪದರು ತಮ್ಮ ಪ್ರಾಣಿ ಪಕ್ಷಿಗಳೊಂದಿಗಿನ ಜೀವನಾನುಭವವನ್ನು ತುಂಬಿದ್ದಾರೆ. ಕೊನೆಯ ಭಾಗದಲ್ಲಿ ಈ ಅಧ್ಯಾಯಗಳ ಫಲಿತಗಳನ್ನು ಮತ್ತು ಮುಂದೆ ಮಾಡಬೇಕಾಗಿರುವ ಸಂಶೋಧನಾ ಮಾದರಿಗಳ ಸೂಕ್ಷ್ಮತೆಗಳನ್ನು ಇಲ್ಲಿ ಸೂಚಿಸಲಾಗಿದೆ. ಈ ಅಧ್ಯಾಯಗಳಲ್ಲಿ ಸಾಹಿತ್ಯ ಅಧ್ಯಯನ ಮಾಡಿರುವುದರಿಂದ, ಸಾಹಿತ್ಯ ಕೃತಿಗಳ ವಿಶೇಷವಾದ ಸೂಕ್ಷ್ಮಾಂಶಗಳನ್ನು ತೆರದಿಡಲಾಗಿದೆ.

ವಿಶೇಷವಾಗಿ ಶಿವರಾಮ ಕಾರಂತರು ಪರಿಸರ ಪ್ರಜ್ಞೆಯನ್ನು ಹೊರಸೂಸುವ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ' 'ಕುಡಿಯರ ಕೂಸು' ಗಳಂತಹ ಕಾದಂಬರಿಗಳನ್ನು ಬರೆದರೂ ಅವರು ಮಾನವನನ್ನು ಹೊರತಾದ ಜೀವಿಗಳ ನಡವಳಿಕೆಗಳ ಸಂಸ್ಕೃತಿಯನ್ನು ಪ್ರಧಾನವಾಗಿ ಚಿತ್ರಿಸಿರುವುದು ಗೌಣವಾಗಿದೆ. ಈ ಕೊರತೆಯನ್ನು ತುಂಬಲು ತಮ್ಮ ವೈಜ್ಞಾನಿಕ, ವೈಚಾರಿಕ, ತಿಳುವಳಿಕೆ, ಅನುಭವಗಳಿಂದ ಪ್ರಾಣಿ, ಪಕ್ಷಿ ಮುಂತಾದವುಗಳ ಜೀವನ ಸಂಸ್ಕೃತಿಯನ್ನು 'ಪ್ರಾಣಿ ಪ್ರಪಂಚ', 'ಎಂದೆಂದೂ ಇಲ್ಲದ ಹಕ್ಕಿ', 'ಹಿರಿಕಿರಿಯ ಹಕ್ಕಿಗಳು' ಇಂತಹ ಪ್ರಮುಖ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. ಇವರ ಬರಹಗಳಂತೆಯೇ ತೇಜಸ್ವಿಯವರ ಅನುಭವಪೂರ್ಣ ಕಥೆಗಳಾಗಿ 'ಪರಿಸರದ ಕಥೆ', 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು' 'ವಿಸ್ಮಯ ಸಂಪುಟಗಳು', 'ಕನ್ನಡ ನಾಡಿನ ಹಕ್ಕಿಗಳು' 'ಮಿಂಚುಳ್ಳಿ' ಸಂಪುಟಗಳು, ಕಾಡಿನ ಕಥೆಗಳು ಮುಂತಾದವು ಅವರ ಪಕ್ಷಿ, ಪ್ರಾಣಿಗಳ ಜೀವನ ನಡವಳಿಕೆಗಳನ್ನು ಪ್ರತಿಬಿಂಬಿಸುವ ವಿಶಿಷ್ಟ ಸೃಜನಶೀಲ ಸಾಹಿತ್ಯ ಬರಹಗಳಾಗಿವೆ. ಇವರ ಕರ್ವಾಲೋ, ಚಿದಂಬರ ರಹಸ್ಯ ಕೃತಿಗಳು ಅನುಭವ ಕಲ್ಪಕತೆಗಳ ಜೊತೆ ಬೌದ್ಧಿಕತೆಯ ನೆಲೆಯನ್ನು ಸೇರಿ ಸೃಷ್ಟಿಯಾದರೆದ ಬೌದ್ಧಿಕತೆ ಜಾಸ್ತಿಯಾಗಿ ಅನುಭವ ಪ್ರಮಾಣ ಕಡಿಮೆಯಾಗಿ ಜುಗಾರಿ ಕ್ರಾಸ್‌ನಂತಹ ಕೃತಿಗಳು ಹುಟ್ಟಿಕೊಂಡಿವೆ. ಈ ಎಲ್ಲ ಕೃತಿಗಳು

ಹೆಚ್ಚು ಪರಿಸರ ಸಮಸ್ಯೆಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ಮಾನವ ಸಮಾಜದೊಳಗಿರುವ ಸಮಸ್ಯೆಗಳು ಸೃಷ್ಟಿಯ ಸಂಕೀರ್ಣ ಜಾಲವನ್ನೆಲ್ಲ ಹಿಡಿದಿಡಲು ಪ್ರಯತ್ನಿಸಿ ಓದುಗರ ಮನಪರಿವರ್ತನೆಗೆ ದಾರಿ ಮಾಡುತ್ತವೆ. ಇದು ಜೀವತತ್ವದ ಮಾರ್ಗ. ಈ ಮಾರ್ಗ ತೋರುವ ಸಾಹಿತ್ಯವೇ ತೇಜಸ್ವಿಯವರ ಬೌದ್ಧ ಸಾಹಿತ್ಯ ಮೀಮಾಂಸೆಯ ಕೃತಿಗಳೆಂದು ಗುರುತಿಸಲಾಗಿದೆ. ಹಾಗಾಗೇ ಪ್ರಕೃತಿ ಪರಿಸರ, ಸಮಾಜಿಕ ಪರಿಸರ ಸಂಬಂಧಿ ಕೃತಿಗಳನ್ನು ಕನ್ನಡದ ಇತರ ಲೇಖಕರಿಗಿಂತ ಹೆಚ್ಚಾಗಿ ತೇಜಸ್ವಿಯವರಲ್ಲಿ ಕಾಣುತ್ತೇವೆ. ಇದು ತೇಜಸ್ವಿಯವರ ವೈಶಿಷ್ಟ್ಯ. ಹಲವಾರು ಲೇಖಕರು ತಮ್ಮ ಸೃಜನಶೀಲ ಕೃತಿಗಳಲ್ಲಿ ಇವತ್ತಿನ ಮಾನವೇತರ ಜೀವ ಸಂಸ್ಕೃತಿ ಪರಿಸರ ವಿಚಾರಗಳನ್ನು ಹಿಡಿದಿಡಲಾರದೆ, ಅವರು ವೈಚಾರಿಕ, ವೈಜ್ಞಾನಿಕ ಬರಹಗಳ ಮೊರೆ ಹೋಗಿದ್ದಾರೆ. ಅವರುಗಳೆಂದರೆ, ಬಿ.ಜಿ.ಎಲ್.ಸ್ವಾಮಿ, ನಾಗೇಶ ಹೆಗಡೆ, ಯಲ್ಲಪ್ಪರೆಡ್ಡಿ, ಅಜ್ಜಂಪುರ ಕೃಷ್ಣಸ್ವಾಮಿ, ಉಲ್ಲಾಸ ಕಾರಂತ, ಕೃಪಾಕರ ಸೇನಾನಿ ಮುಂತಾದವರು. ಇವರ ಬರಹಗಳಲ್ಲಿ ಮಾನವ ಕೇಂದ್ರಿತ ನೆಲೆಯಿಂದ ಜೀವಕೇಂದ್ರಿತ ನೆಲೆಗೆ ಮುಖಮಾಡಿರುವುದನ್ನು ಗುರುತಿಸಲಾಗಿದೆ.

ಶಿವರಾಮ ಕಾರಂತ, ಪೂರ್ಣಚಂದ್ರ ತೇಜಸ್ವಿಯವರುಗಳನ್ನು ಸೇರಿಸಿಕೊಂಡಂತೆ ಮೇಲೆ ಹೇಳಿದಂತಹ ಹಲವಾರು ಜನ ಹಿರಿಯ ಮತ್ತು ಕಿರಿಯ ಲೇಖಕರ ಬರಹಗಳಿಂದಲೇ ಹೆಚ್ಚಾಗಿ ಸಸ್ಯ ಮತ್ತು ಪ್ರಾಣಿ ಪಕ್ಷಿಗಳ ಜೀವನ ನಡವಳಿಕೆಗಳ ಮಾಹಿತಿಗಳ ಆಧಾರದಲ್ಲಿ ಮಾನವನ ಸಂಸ್ಕೃತಿಯ ಪರಿಕಲ್ಪನೆಯ ಹಿನ್ನೆಲೆಯಲ್ಲೇ ಸಕಲ ಜೀವಿಗಳಿಗೂ ಹೇಗೆ ಅವುಗಳದ್ದೇಯಾದ ಜೀವನ ಸಂಸ್ಕೃತಿ ಇದೆ ಎಂಬುದನ್ನು ಗುರುತಿಸಿ ವ್ಯಾಖ್ಯಾನಿಸಲಾಗಿದೆ. ಈ ಹಿನ್ನೆಲೆಯಿಂದ ಸಮಾಜದ ಜನಕ್ಕೆ ಪ್ರಕೃತಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಬೇಕಾದರೆ ಅದರ ಅನನ್ಯ ವಿಷಯ, ವಿಚಾರಗಳ ಮಾಹಿತಿ, ಸೃಜನಶೀಲ, ಸೃಜನೇತರ ಸಾಹಿತ್ಯ ಕೃತಿಗಳ ಮೂಲಕ ಸರ್ವ ಶೈಕ್ಷಣಿಕ ತರಗತಿಗಳಲ್ಲಿ ಪಠ್ಯವಾಗಿ ಬೋಧನೆಗೊಳಪಟ್ಟರೆ ಮಹತ್ವದ ಬದಲಾವಣೆಯಾದಂತಾಗುತ್ತದೆ. ಅಂತೆಯೇ ನಗರ ಮತ್ತು ಗ್ರಾಮೀಣ ಜನರ ಸಾಮಾನ್ಯ ತಿಳುವಳಿಕೆಗೆ ಪರಿಸರದ ಜೀವಿ ಸಂಕುಲಗಳ ಸಂಬಂಧದ ಮಾಹಿತಿ ಲಭ್ಯವಾಗಲ್ಪಟ್ಟರೆ, ಪ್ರಕೃತಿಯ ಜೀವ ಸಂಕುಲ ಪರಿಸರದ ಜ್ಞಾನ ಕೊಡುವ ಪರಿಜ್ಞಾನ; ಪರಿಸರ, ಪ್ರಾಣಿದಯ ಸಂಘಟನೆಗಳ ಆಂದೋಲನಗಳಿಗೆ ಮತ್ತಷ್ಟು ಅರ್ಥ, ಮಹತ್ವ ಲಭ್ಯವಾಗುತ್ತದೆ. ಹೀಗೆ ಪ್ರಾಕೃತಿಕ ಪರಿಸರದ ಜ್ಞಾನ ದಾನವನ್ನು ಜನರಿಗೆ ಮಾಡದಿದ್ದರೆ ಅವರು ಜೀವಿಗಳ ಬಗ್ಗೆ, ಪ್ರಕೃತಿ ಸಂಪತ್ತುಗಳ ಬಗ್ಗೆ ಮತ್ತು ತಮ್ಮ ಸುತ್ತ ಮುತ್ತಲ ಪರಿಸರದ ಬಗ್ಗೆ ಕಾಳಜಿ ಮತ್ತು ಕಳಕಳಿಯ ಜವಾಬ್ದಾರಿಯನ್ನು ಹೊಂದುವುದಾದರೂ ಹೇಗೆ?. ಆದ್ದರಿಂದ ಈ ಜ್ಞಾನ ಇವತ್ತು ಬೆಳೆದಿರುವ ವಿಜ್ಞಾನ, ಮಾಹಿತಿ ತಂತ್ರಜ್ಞಾನಗಳ ಮೂಲಕ ಮತ್ತು ನಾನಾ ರೀತಿಯ ಸಾಹಿತ್ಯ, ಸಂಸ್ಕೃತಿ, ಕಲೆಗಳ ಮೂಲಕ ಪ್ರತಿ ಮನೆಯ ಮನ ಮನಗಳಲ್ಲಿ ನೆಲೆಯೂರುವಂತಾಗುವ ಅಗತ್ಯತೆ ಇಂದು ದಟ್ಟವಾಗಿದೆ. ವಿಶ್ವವ್ಯಾಪಿಯಾಗಿ ಮಾಡಬೇಕಾಗಿರುವ ಈ ಕಾರ್ಯಕ್ಕೆ ಸರ್ಕಾರಗಳೇ ಜವಾಬ್ದಾರಿಯಾಗಿದ್ದು, ಇವರೊಡನೆ ಎಲ್ಲ ಸಂಘ, ಸಂಸ್ಥೆಗಳು ಮತ್ತು ಪ್ರಜೆಗಳೆಲ್ಲರೂ ಒಂದೇ ಗುರಿಯಿಂದ ಕೈಜೋಡಿಸಿ ಪ್ರೋತ್ಸಾಹಿಸಿ ನಡೆದರೆ, ಪರಿಸರ ರಕ್ಷಣೆಯ ದಾರಿ ಸುಗಮವಾಗುವುದರಲ್ಲಿ ಅನುಮಾನವಿಲ್ಲ.

ಬೌದ್ಧ ರಾಜ ಆಶೋಕ ರಸ್ತೆಬದಿ ಸಾಲುಮರಗಿಡಗಳನ್ನು ನೆಡಿಸುತ್ತಿದ್ದನೆಂದು ಚರಿತ್ರೆ ಸಾರುತ್ತದೆ. ಈ ಪರಂಪರೆ ಬೆಳೆದು ಬಂದು ಸಸಿಗಳನ್ನು ದಾನ ಮಾಡುವ, ಗಿಡಗಳನ್ನು ನೆಟ್ಟು ಬೆಳೆಸುವ ಸಂಸ್ಕೃತಿಯನ್ನು ಒಂದು 'ವ್ರತ' ವನ್ನಾಗಿ ಮಾಡಿಕೊಂಡಿರುವ ಬೌದ್ಧ ಮೂಲನಿವಾಸಿ ದ್ರಾವಿಡ ಸಂಸ್ಕೃತಿಯುಳ್ಳ ಪ್ರಾದೇಶಿಕ ರಾಜ ಪರಂಪರೆಯಲ್ಲಿ 'ಷಿತಿರುಹನೋಂಪಿ' ಯ ಉಲ್ಲೇಖ ಹಿರೇಬೇವಿನೂರಿನ ಶಾಸನದಲ್ಲಿದೆ. ಇದರಲ್ಲಿ ಸಿರಿಯಾದೇವಿ ನಾನಾ ತರದ ಹಣ್ಣಿನ ಸಸಿಗಳನ್ನು ದಾನ ಮಾಡಿ ನೆಟ್ಟು ಬೆಳೆಸಿದ್ದನ್ನು ಚರ್ಚಿಸಲಾಗಿದೆ. ಇವೆಲ್ಲ ಆಡಳಿತಾತ್ಮಕ ಆಧಾರ, ಆಸ್ತಿ ಸಂಪತ್ತಿನ ಹಿನ್ನಲೆಯುಳ್ಳ ಜನರಿಂದ ಸ್ಥಾಪಿತವಾದವು. ಆದರೆ ಇಂದು ಇಂತಹ ಯಾವುದೇ ಆಧಾರ, ಹಿನ್ನಲೆಯಿಲ್ಲದೆ ಪ್ರತಿಫಲ ನಿರಾಪೇಕ್ಷೆಯಾಗಿ ಮಾಡುತ್ತಿರುವ ಭೂಮಿ ಗುಣದ ಸಾಲು ಮರದ ತಿಮ್ಮಕ್ಕನ ಕಾರ್ಯ ಶ್ಲಾಘನೀಯವಾದದ್ದು. ತಿಮ್ಮಕ್ಕ ದಂಪತಿಗಳು ಅತ್ಯಂತ ಕೀರ್ತಿ ಶ್ರೇಷ್ಠರು. ಇಂತಹ ಜನ ಮತ್ತು ಜೀವಿ ಸಂರಕ್ಷಣೆಯುಳ್ಳ ಸಂಸ್ಕೃತಿ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಮಾನವ ಕೇಂದ್ರಿತವಾದ ಪ್ರಾಣಿ ಪಕ್ಷಿಗಳ ಬೇಟೆ ಸಂಸ್ಕೃತಿಯೂ ಇರುವುದು ವಿಷಾದವೆನಿಸುತ್ತದೆ. ಇದನ್ನೇ ಸಂಸ್ಕೃತಿಯ ಸಂಘರ್ಷವೆನ್ನುವುದು. ಇದಕ್ಕೆ ಕುವೆಂಪು, ಕಾರಂತರ ಬರಹಗಳು ಮನಜ ಅವರ ಜಲ, ಕಂಬಾರರ ಪುಷ್ಪರಾಣಿ, ನಾಟಕಗಳು ಮುಂತಾದ ಕೃತಿಗಳು ಗಮನಾರ್ಹವಾಗಿವೆ. ಇವೆಲ್ಲ ಗ್ರಾಮಗಳ ಮೌಲ್ಯಾಧಾರಿತ ಸಂಸ್ಕೃತಿಗಳ ಪರಿಶೀಲನೆಯನ್ನೊಳಗೊಂಡಿವೆ.

ಶಿವಪ್ರಕಾಶ ಅವರ ಮಂಟೇಸ್ವಾಮಿ ಕಥಾ ಪ್ರಸಂಗ, ಮಾದಾರಿ ಮಾದಯ್ಯ ನಾಟಕಗಳು ನಗರದ ಬುದ್ಧಿ ಜೀವಿಗಳು ಸೃಷ್ಟಿಸಲ್ಪಟ್ಟ ಪ್ರಕೃತಿ ಭಕ್ಷಣೆಯ ಸಂಸ್ಕೃತಿಯನ್ನು ಚಿತ್ರಿಸಿರುವ ವಿಶಿಷ್ಟ ಕೃತಿಗಳಾಗಿವೆ. ನಗರದ ನಾಗರೀಕರೆನಿಸಿಕೊಂಡಿರುವ ಅಲ್ಲಿಯ ಜನ ಪ್ರಕೃತಿಯ ಎಲ್ಲ ರೀತಿಯ ಜೀವ ಸಂಕುಲಗಳನ್ನು ತನ್ನ ಸಕಲ ಬೆಳವಣಿಗೆ, ಅನುಭೋಗಕ್ಕೆ ಮತ್ತು ಸ್ವಾರ್ಥ ಬೆಳವಣಿಗೆಗೆ ಅವರ ಕೀರ್ತಿಗಾಗಿ ಬಲಿ ತೆಗೆದುಕೊಳ್ಳುತ್ತಿರುವ

ಅಂಶಗಳನ್ನು ತೇಜಸ್ವಿ ಮತ್ತಿತರ ಲೇಖಕರು ತಮ್ಮ ಕಥೆ, ಕಾದಂಬರಿಗಳಲ್ಲಿ ಪ್ರಧಾನವಾಗಿ ಗುರುತಿಸಿದ್ದಾರೆ. ಬುಡಕಟ್ಟು, ಗ್ರಾಮ ಜನರ ಜೀವ ರಕ್ಷಣಾ ಪ್ರಕೃತಿ ಸಂಸ್ಕೃತಿಯೇ ನಗರಕ್ಕೆ ಭಕ್ಷಣೆ ಸಂಸ್ಕೃತಿಯಾಗಿ ಮಾರ್ಪಟ್ಟಿದೆ. ಇದೇ ಅವರಿಗೆ ಮೌಲ್ಯಾಧಾರಿತ ಮಾನವಾಭಿವೃದ್ಧಿ ಸಂಸ್ಕೃತಿಯೂ ಆಗಿದೆ. ಇಂತಹ ಮಾನವ ಕೇಂದ್ರಿತ ಜೀವ ಹೀನ ಪರಿಕಲ್ಪನೆಯಿಂದಲೆ, ನಗರ ಸಮುದಾಯ ಪ್ರಕೃತಿಯೊಂದಿಗೆ ಸಂಬಂಧ ಹೊಂದಿದೆ ಎಂಬ ಹಲವಾರು ಅಂಶಗಳನ್ನು ಈ ಭಾಗದಲ್ಲಿ ಪರಿಶೀಲಿಸಲಾಗಿದೆ. ಇಲ್ಲೆಲ್ಲ ಪ್ರಕೃತಿ, ಮಾನವ, ಸರ್ಕಾರ, ಬಂಡವಾಳಶಾಹಿಗಳ ವಿಷವೃತ್ತದಲ್ಲಿ ಸಿಕ್ಕ ನಿಸರ್ಗ ಪರಿಸರ ಜೀವ ಸಂಕುಲ ಮತ್ತು ಬಡ ಮಾನವರ ದುಸ್ಥಿತಿಯ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ಇಂತಹ ನಾನಾ ರೀತಿಯ ಸಮಾಜ, ಸಂಸ್ಕೃತಿಗಳ, ಪ್ರಕೃತಿ ಪರಿಸರದ ವಿಷಯ–ವಿಚಾರಗಳನ್ನು ಸಾಹಿತ್ಯ ಕೃತಿಗಳು ಕಾಲಕಾಲಕ್ಕೆ ಎತ್ತಿ ಹಿಡಿಯುವುದರಿಂದಾಗಿ ಸಾಹಿತ್ಯದ ಮೌಲ್ಯ ಸಾರ್ವಕಾಲಿಕವಾಗಿ ಮಹತ್ವ ಪಡೆದಿದೆ. ಈ ಬಗೆಯ ನಾಳೆಯ ಸಾಹಿತ್ಯಸೃಷ್ಟಿ ಕೂಡ ಮುಂದಿನ ಸಮಾಜಕ್ಕೆ ಅತ್ಯಂತ ಮಹತ್ವದ ಕಾಣಿಕೆ ನೀಡುತ್ತದೆ. ಈ ಆಶಾವಾದಿತನದಿಂದಲೇ ಇವತ್ತಿನ ಜೀವ ಹಿಂಸಾ ಪರಿಸರ ಸಮಸ್ಯೆಯ ಪರಿಹಾರಕ್ಕೆ ಜೀವ–ಜೀವಿ ಸಂಸ್ಕೃತಿ ತತ್ವಗಳನ್ನು ಕೇಂದ್ರ ಮಾಡಿಕೊಂಡು ಕಟ್ಟುವ, ಸಾಹಿತ್ಯ ಸೃಷ್ಟಿಯು ಒಂದು ಹೊಸ ಸಾಹಿತ್ಯ ಮಾರ್ಗಕ್ಕೆ ನಾಂದಿಯಾಗ ಬಹುದೆಂದು ನಿಸ್ಸಂದೇಹವಾಗಿ ಹೇಳಬಹುದು. ಹಾಗೆಯೇ ಜೀವ ಪ್ರಜ್ಞೆಯುಳ್ಳ ವೈಚಾರಿಕ, ವೈಜ್ಞಾನಿಕ ಬೆಳವಣಿಗೆಯಿಂದಲೂ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ದಾರಿಗಳಿವೆ. ಅವುಗಳನ್ನು ಆಳವಾದ ಸಂಶೋಧನಾ ಅಧ್ಯಯನದಿಂದ ಕಂಡುಕೊಳ್ಳುವ ಅಗತ್ಯವಿದೆ.

ನೇರ ಮತ್ತು ಸ್ಪಷ್ಟವಾದ ತಿಳುವಳಿಕೆ ನೀಡುವ ವೈಚಾರಿಕ, ವೈಜ್ಞಾನಿಕ ಲೇಖನಗಳು ಬುದ್ಧಿ ಜೀವಿ ವರ್ಗದ ಸಮಾಜ, ಸರ್ಕಾರಗಳ ಮೇಲೆ ಹೆಚ್ಚು ಪರಿಣಾಮ ಬೀರಿವೆ ನಿಜ. ಆದರೆ ಇವು ಹೆಚ್ಚಾಗಿ ಭಾವಜೀವಿ ವರ್ಗವನ್ನು ಆಕರ್ಶಿಸಿಲ್ಲ. ಹಾಗಾಗಿ ಈ ಎರಡು ವರ್ಗದ ಜನ ಸಮುದಾಯವನ್ನು ತಟ್ಟಿ ಎಬ್ಬಿಸುವ ಪರಿಸರದ ಬಗ್ಗೆ ಸರ್ವಜನರ ಜ್ಞಾನದ ದಿಕ್ಕನ್ನೇ ಬದಲಾಯಿಸುವ ವೈಚಾರಿಕ, ವೈಜ್ಞಾನಿಕವಾದ ಸೃಜನಶೀಲ ಸಾಹಿತ್ಯವಾದ ಹಸಿರು ಹೊನ್ನು, ಕರ್ವಾಲೋ ಅಂತಹ ಕೃತಿಗಳು ಇಂದು ಹೆಚ್ಚು ಮೌಲ್ಯಾಧಾರಿತವಾಗಿವೆ. ಅದರಲ್ಲೂ ಜೀವ ಪ್ರಜ್ಞೆಯುಳ್ಳ ಜಲ, ಶ್ರೀ ಚಂಡಾಲ ಸ್ವರ್ಗಾರೋಹಣಂ, ಪುಷ್ಪರಾಣಿಯಂತಹ ಕೃತಿಗಳಿಂದ ಅವುಗಳನ್ನು ರಚಿಸಿದ ಕೃತಿಕಾರನಿಗೂ ಕೀರ್ತಿ ಬರುತ್ತದೆ. ಹಾಗೆ ನೋಡಿದರೆ ಈ ಕೀರ್ತಿ ಕವಿಸಾಹಿತ್ಯ ಸಮಾಜ ಸಂಸ್ಕೃತಿ ಭಾಷೆ ದೇಶ ಇವುಗಳಿಗೆಲ್ಲ ಒಂದಕ್ಕೊಂದು ಅವಿನಾಭಾವ ಸಂಬಂಧವಿದೆ. ಈ ಸಂಬಂಧದ ಮಾಧ್ಯಮವಾಗಿ ಸಾಹಿತ್ಯ ಕೆಲಸ ಮಾಡುತ್ತದೆ. ಇದು ಯಾವುದೇ ಒಂದು ದೇಶ, ಭಾಷೆ, ಸಂಸ್ಕೃತಿ, ಧರ್ಮ, ಜಾತಿ, ಜನಾಂಗಗಳಿಗೆ ಒಳಪಡದೆ ಈ ಎಲ್ಲವುಗಳ ವಿಷಯ, ವಸ್ತುಗಳ ಆಳ ಹೊಳವುಗಳಿಗೆ ತನ್ನನ್ನು ತೆರೆದುಕೊಂಡಿರುತ್ತದೆ. ಹಾಗಾಗಿ ಸಾಹಿತ್ಯದ ಗುಣ ತತ್ವ ನಮ್ಮ ದೇಶದ ಸಂವಿಧಾನದ ಪ್ರಸ್ತಾವನೆಯಲ್ಲಿರುವಂತೆ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವುದಾಗಿದೆ. ಇದು ಪ್ರಕೃತಿಯ ಮೂಲ ಗುಣವೂ ಆಗಿರುವುದರಿಂದ ಅದನ್ನು ಸಾಹಿತ್ಯ ಅಳವಡಿಸಿಕೊಂಡಿರುವುದರಲ್ಲಿ ಅದರ ಜೀವಂತಿಕೆ ಪ್ರಕೃತಿಯಷ್ಟೇ ಶಾಶ್ವತವಾದ ಸ್ಥಿರ ಚರ ಗುಣಗಳಿಂದ ಕೂಡಿರುತ್ತದೆ. ಸಾಹಿತ್ಯ ಸಂಸ್ಕೃತಿ ಕಲೆಗಳ ಮೂಲಕ ಪರಿಸರ ರಕ್ಷಣೆಯ ಪ್ರಧಾನ ಅಂಶಗಳನ್ನು ಈ ಭಾಗದಲ್ಲಿ ಎತ್ತಿಹಿಡಿಯಲಾಗಿದೆ. ಮೂಲತಃ ಈ ಸಾಹಿತ್ಯ ಬರಹಗಳೆಲ್ಲ ಭಾರತೀಯ ನಾನಾ ಸಮಾಜ ಸಂಸ್ಕೃತಿಯ ದಾಖಲೆಗಳು. ಈ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಕಲಾ ಮಾಧ್ಯಮ ಸಿನಿಮಾ. ಇದರ ಬಗ್ಗೆ ಈ ಅಧ್ಯಯನ ಚರ್ಚಿಸಿಲ್ಲ. ಇದರ ಬಗ್ಗೆ ಮುಂದೆ ಅಧ್ಯಯನ ಮಾಡುವ ಅವಕಾಶವಿರುವುದರಿಂದ ಸಿನಿಮಾ ಮಾಧ್ಯಮದ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಪರಿಸರ ರಕ್ಷಣೆಗೆ ಸಿನಿಮಾ ಪ್ರಮುಖ ಮಾಧ್ಯಮವಾಗಿಯೂ ಕೆಲಸ ಮಾಡಿದೆ. ಪ್ರಾಸಂಗಿಕವಾಗಿ ಹೇಳುವುದಾದರೆ ಭೂಮಿಗೀತ, ಜಯಸಿಂಹ, ಶಾಂತಿ, ಪ್ರಥಮ ಉಷಾಕಿರಣಗಳಂತಹ ಹಲವಾರು ಸಿನಿಮಾಗಳಲ್ಲಿ, ಪುಟ್ಟೀರಮ್ಮ, ಸಾಲುಮರದ ತಿಮ್ಮಕ್ಕ ನಂತಹ ಹಲವು ಸಾಕ್ಷ್ಯಚಿತ್ರಗಳಲ್ಲಿ ಪರಿಸರ ರಕ್ಷಣೆ ಅಂದರೆ ಜೀವಿಗಳ ರಕ್ಷಣೆಯನ್ನು ಎತ್ತಿಹಿಡಿಯಲಾಗಿದೆ. ಆದರೆ ಇವ್ಯಾವುದೂ ಸಮಾಜದ ಮೇಲೆ ಹೆಚ್ಚು ಪರಿಣಾಮ ಬೀರುವಂತೆ ಪ್ರಚಾರಗೊಂಡಿಲ್ಲ, ಪ್ರದರ್ಶನವನ್ನು ನೀಡಿಲ್ಲ. ಹಾಗಾಗಿ ಈ ಮಾಧ್ಯಮ ಪರಿಸರ ಕಾಳಜಿ, ರಕ್ಷಣೆ ಮಾಡುವ ವಿಷಯ ವಿಚಾರಗಳನ್ನು ಸಾರುವಲ್ಲಿ ಗಮನಾರ್ಹ ಬದಲಾವಣೆ ಕಂಡಿಲ್ಲ. ಆದ್ದರಿಂದ ಇಡೀ ಸಮಾಜವನ್ನೇ ಶೀಘ್ರ ಪರಿವರ್ತನೆಗೊಳಪಡಿಸುವ ಮಹಾನ್ ಶಕ್ತಿ ಹೊಂದಿರುವ ಈ ಸಿನಿಮಾ ಮಾಧ್ಯಮ ಪ್ರಕೃತಿಯ ಜೀವ ರಕ್ಷಣೆಯ ಗುರಿಯನ್ನಿಟ್ಟುಕೊಂಡು ಸಾಗುವುದೇ ಅದರ ನಿಜವಾದ ಜೀವರಕ್ಷಣೆಯುಳ್ಳ ಸಮಾಜ ಸೇವೆಯ ಪ್ರಧಾನ ಗುಣ. ಹಾಗಾಗಿ ಸಾಹಿತ್ಯ, ಸಂಗೀತ, ಕಲೆ, ಸಿನಿಮಾಗಳ ಮೂಲಕ ಜೀವ ರಕ್ಷಣೆಯನ್ನು ಕಂಡರಿಯದಂತಹ ಜಾಗೃತಿ ಮೂಡಿಸುವ ಸಾಧನ ಮಾರ್ಗಗಳು ಎನ್ನುವುದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಇಂದು ಸಿನಿಮಾ, ಸಾಕ್ಷ್ಯ ಚಿತ್ರ, ಧಾರವಾಹಿಗಳೇ ಈ ಸಮಾಜದ ಪರಿಣಾಮಕಾರಿ ಬದಲಾವಣೆಯ ಕೇಂದ್ರಗಳಾಗಿವೆ. ಆದ್ದರಿಂದ ಈ ಮಾಧ್ಯಮಗಳ ಕಡೆ ಹೆಚ್ಚು ಗಮನ ಹರಿಸಬೇಕಾಗಿದೆ.

ಈ ಕೃತಿಯಲ್ಲಿ ಕನ್ನಡ ಸಾಹಿತ್ಯವನ್ನೇ ಕುರಿತು ಅಧ್ಯಯನ ಮಾಡಬೇಕಾದರೂ ಇಲ್ಲಿ ವಿಷಯ ಕೇಂದ್ರಿತ ಶೋಧನ ಕಾರ್ಯವಾದ್ದರಿಂದ ಇದಕ್ಕೆ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಮಾಹಿತಿ ಕೊರತೆಯಾದದ್ದರಿಂದ ಹೆಚ್ಚು ಆಧುನಿಕ ಸಾಹಿತ್ಯವನ್ನು ಅವಲಂಬಿಸ ಬೇಕಾಯಿತು. ಈ ಅಧ್ಯಯನದ ವಿಷಯ ಸಾಹಿತ್ಯಕ್ಕೆ ಸಂಬಂಧಿಸಿದ್ದರಿಂದ; ಸಂಶೋಧನೆಯ ಇತಿಮಿತಿಯ ಸೀಮಿತತೆಯೊಳಗೆ, ಜೀವತತ್ವದ ಜೀವಿಗಳ ಸಹಜ ಜೀವನ ಪ್ರಜ್ಞೆಯ ಪರಿಕಲ್ಪನೆಯ ನಿಜವಾದ ಮಾರ್ಗ, ಗುರಿಗಳ ಫಲಿತವನ್ನು, ಮೇಲಿನೆಲ್ಲ ಅಂಶಗಳ ಸಾಮಾನ್ಯ ಜ್ಞಾನದ ಆಧಾರದಿಂದ ಕಂಡುಕೊಳ್ಳಲಾಗಿದೆ. ಈ ಸಂಶೋಧನೆಯಲ್ಲಿ ವಿಶ್ಲೇಷಣೆಗೊಳಪಡಿಸಿರುವ ಜೀವ ಸಂಸ್ಕೃತಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ಪೂರ್ಣವಾಗಿ ವಿಶ್ಲೇಷಿಸಿ ಮೌಲ್ಯಮಾಪನ ಮಾಡಲಾಗಿಲ್ಲ. ಕೇವಲ ಪ್ರಬಂಧದ ವಿಷಯ ವಿಚಾರಗಳ ಚರ್ಚೆಗಳಿಗನುಗುಣವಾಗಿ ಪೂರಕವಾಗಿ ಸಿಕ್ಕ ಅಂಶಗಳನ್ನು ಮಾತ್ರ ಅಧ್ಯಯನದ ಕೇಂದ್ರ ವಿಷಯಕ್ಕೆ ಸೀಮಿತಗೊಳಿಸಿಕೊಂಡು ಪರಿಶೀಲಿಸಲಾಗಿದೆ. ಜೊತೆಗೆ ಅಧ್ಯಯನಕ್ಕೆ ತಕ್ಕ ಮಾಹಿತಿಗಾಗಿ ಸಾಹಿತ್ಯ ಸಾಹಿತ್ಯೇತರ ಕೃತಿಗಳ ಪಟ್ಟಿಯೂ ಬೆಳೆದಿದೆ. ಇಲ್ಲಿ ಬಳಕೆಯಾಗಿರುವ ಪ್ರತಿಯೊಂದು ಸಾಹಿತ್ಯ ಪ್ರಕಾರವೂ ವೈಚಾರಿಕ, ವೈಜ್ಞಾನಿಕ, ಧಾರ್ಮಿಕ ಕೃತಿಗಳೆಲ್ಲವೂ ತಮ್ಮದೇ ಆದ ವಿಷಯ ವಸ್ತು, ಶೈಲಿಗಳನ್ನೊಳಗೊಂಡಿವೆ. ಇವುಗಳಲ್ಲಿ ಒಂದರ ಸಮಸ್ಯೆ ಒಂದಕ್ಕೆ ಇಲ್ಲ. ಇವೆಲ್ಲವೂ ತಮ್ಮದೇ ಆದ ಚೌಕಟ್ಟನ್ನುಳ್ಳ ಕೃತಿಗಳಾಗಿವೆ. ಈ ಜೀವ ಸಂಸ್ಕೃತಿಯ ಪರಿಕಲ್ಪನೆ, ಕೇವಲ ಮಾನವ ಕೇಂದ್ರಿತ ಸಂಸ್ಕೃತಿ ಪರಿಕಲ್ಪನೆಯ ಅರ್ಥಗ್ರಹಿಕೆಯಿಂದ ನೋಡಿದರೆ, ಸ್ಪಷ್ಟವಾಗುವುದಿಲ್ಲ. ಅನನ್ಯತೆಯಿಂದ ಕೂಡಿರುವ ಈ ಪರಿಕಲ್ಪನೆ, ಸಂಕೀರ್ಣವೂ ಆಗಿರುವುದರಿಂದ, ಇದನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಟ್ಟು ವಿಶ್ಲೇಷಿಸುವುದು ಕಷ್ಟ ಸಾಧ್ಯವಾಗಿದೆ. ಏಕೆಂದರೆ ಮಾನವ ಸಮಾಜ, ನಿಸರ್ಗ ಸಮಾಜ ಇವೆರಡೂ ಒಂದನ್ನೊಂದು ಸೇರದೆ ಇರಲಾರವು, ಸೇರಿಯೂ ಇರಲಾರವು ಅಂತಹ ಸಂಕೀರ್ಣ ಸ್ಥಿತಿ ಈ ಪ್ರಕೃತಿಯದ್ದು. ಹಾಗಾಗಿ ಈ ಜೀವ ಸಂಸ್ಕೃತಿ ಪರಿಕಲ್ಪನೆಯ ಗ್ರಹಿಕೆಯನ್ನು ಬಿಡಿಸುತ್ತಾ ಹೋದಂತೆ, ತೊಡಕಾಗಿಯೇ ಪರಿಣಮಿಸಿದೆ. ಮಾನವ ಪ್ರಕೃತಿಯ ಜೀವಿಗಳಿಂದ ಕಲಿತು, ಬೆಳೆದು ತನ್ನ ಉಪಯೋಗಕ್ಕೆ ಆ ನಿಸರ್ಗವನ್ನು ಬಳಸಿಕೊಂಡಿದ್ದಾನೆ. ಹೀಗೆ ಬಳಸದಿದ್ದರೆ ನಿಸರ್ಗಕ್ಕೆ ಮೌಲ್ಯವಿಲ್ಲ. ನಿಸರ್ಗ ಪರಿಸರವಿಲ್ಲದೆ ಮಾನವ ಬದುಕಿಗೆ ಅರ್ಥವಿಲ್ಲ. ಆದರೆ ಮಾನವನಿಂದ ಬಳಸಲ್ಪಟ್ಟ ನಿಸರ್ಗ, ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಾರಂಭಿಸಿದೆ. ಈ ಸಂಬಂಧಗಳ ಸಂಕೀರ್ಣತೆಯನ್ನು ಬಿಡಿಸಲು ಒಂದೇ ದಾರಿ ಮಾರ್ಗದಿಂದ ಸಾಧ್ಯವಿಲ್ಲ. ಅದಕ್ಕೆ ಹಲವು ದಾರಿ ಮಾರ್ಗಗಳ ತಂತ್ರಗಾರಿಕೆಯನ್ನು ಕಂಡುಕೊಳ್ಳಬೇಕೆಂಬುದು ಈ ಅಧ್ಯಯನದಿಂದ ಸ್ಪಷ್ಟವಾಗಿದೆ.

ಕೋಟ್ಯಾಂತರ ಜೀವ ಸಂಸ್ಕೃತಿ ಇರುವ ಪ್ರಕೃತಿಯಲ್ಲಿ ಮಾನವ ಸಂಸ್ಕೃತಿಯ ಪ್ರಧಾನಾಂಶದಂತೆ ಇನ್ನಾವ ಜೀವ ಸಂಸ್ಕೃತಿಯೂ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಖಗೋಳಕ್ಕೊಳಪಡುವ ಅಸಂಖ್ಯ ಗ್ರಹತಾರೆಗಳ ಬಗೆಗಾಗಲಿ, ಭೂಗರ್ಭದಲ್ಲಿರುವ ಅಸಂಖ್ಯ ಜೀವ ವೈವಿಧ್ಯತೆಗಳ ಸಂಸ್ಕೃತಿಯ ಬಗೆಗಾಗಲಿ, ಖನಿಜ ಸಂಪತ್ತಿನ ಬಗೆಗಾಗಲಿ ಇವುಗಳಲ್ಲಿ ಯಾವುದಾದರೂ ಒಂದರ ವಿಷಯ ವಸ್ತುವನ್ನು ಪ್ರಧಾನವಾಗಿಟ್ಟುಕೊಂಡು ಸಾಹಿತ್ಯ ಕೃತಿಗಳು ರಚನೆಯಾಗಿರುವುದರ ಮಾಹಿತಿಯಿಲ್ಲ. ಆದ್ದರಿಂದ, ಲೇಖಕರು ಇದರ ಕಡೆ ಹೆಚ್ಚು ಗಮನ ಹರಿಸುವುದು ಅಗತ್ಯ. ಈ ಎಲ್ಲಾ ವಿಷಯ ವಿಚಾರಗಳ ಬಗ್ಗೆ ಜನ ಪೂರ್ಣ ಪ್ರಜ್ಞಾವಂತರಾಗದಿದ್ದರೆ; ಅವುಗಳನ್ನು ಮತ್ತು ಸಸ್ಯ, ಪ್ರಾಣಿ, ಪಕ್ಷಿ ಮತ್ತಿತರ ಭೂ ಚರ, ಜಲಚರ ಜೀವಿಗಳ ರಕ್ಷಣೆಯ ಬಗ್ಗೆ ತಿಳುವಳಿಕೆ ಮೂಡಲು ಹೇಗೆ ಸಾಧ್ಯ? ಇವುಗಳ ಬಗ್ಗೆ ಜ್ಞಾನ ತಂಬುವ ಸಾಹಿತ್ಯ ಕೃತಿಗಳ ಸೃಷ್ಟಿಗೆ ಮೊದಲ ಅದ್ಯತೆ ನೀಡುವುದರ ಬಗ್ಗೆ ಚಿಂತಕರು, ಲೇಖಕರು, ಕವಿಗಳು ಮತ್ತು ಪತ್ರಿಕೆಗಳು, ಸರ್ಕಾರ, ಸಂಘ–ಸಂಸ್ಥೆಗಳು ಚಿಂತಿಸುವುದು ಹೆಚ್ಚು ಸೂಕ್ತ. ಇದರಿಂದ ಪಠ್ಯದ ಮೂಲಕ ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗಿರುವುದು ಸರ್ಕಾರ, ಶಿಕ್ಷಕರು ಮತ್ತು ಮಾನವರ ಮೂಲಭೂತ ಕರ್ತವ್ಯವಾಗಿದೆ.

ಈ ಪ್ರಬಂಧದ ವಿಷಯದಂತೆ ಅಧ್ಯಯನವೂ ದೀರ್ಘವಾಗಿದ್ದು, ನನ್ನ ಸಂಶೋಧನೆಯ ಮಿತಿಗೆ ಸಿಗದ ಹಲವಾರು ಅಂಶಗಳು ಕಂಡು ಬಂದಿವೆ. ಅಂತಹ ವಿಷಯಗಳ ಮೇಲೆ ಪ್ರತ್ಯೇಕವಾಗಿ ಒಂದೊಂದು ಸಂಶೋಧನಾ ಪ್ರಬಂಧ ಸಿದ್ಧಪಡಿಸುವಷ್ಟು ವಿಸ್ತಾರ ಮಾಹಿತಿಗಳನ್ನೊಳಗೊಂಡಿವೆ. ಅಂತಹ ವಿಷಯಗಳಲ್ಲಿ ವಿಶ್ವಸೃಷ್ಟಿ, ಸಸ್ಯ, ಪ್ರಾಣಿ, ಪಕ್ಷಿ, ಕೀಟ, ಜಲಚರ ಮುಂತಾದ ಅಸಂಖ್ಯಾ ಜೀವ ಜೀವೇತರ ಸಂಸ್ಕೃತಿ ಹಾಗೂ ಪ್ರಕೃತಿ ವಿಷಯ ವಿಚಾರಗಳ ಮೇಲೆ ಮತ್ತು ಸಾಹಿತ್ಯ, ವಿಜ್ಞಾನ, ಸಮಾಜ ವಿಜ್ಞಾನ, ಮನೋವಿಜ್ಞಾನ ಹೀಗೆ ಬೇರೆ ಬೇರೆ ಸಂಶೋಧನೆ ಮಾಡುವ ಅಪೂರ್ವ ಅಂಶಗಳಿವೆ. ಇಂತಹ ದೀರ್ಘ ವಿಷಯ, ಮಾಹಿತಿಗಳುಳ್ಳ ಈ ಸಂಶೋಧನಾ ವಿಷಯವನ್ನು ಒಂದು ಮಿತಿಯೊಳಗೆ ಬಳಸಿಕೊಂಡು ತುಂಬ ಆಳಕ್ಕಿಳಿದು ಪ್ರಕೃತಿ ಪರಿಸರದ ಸೂಕ್ಷ್ಮ ಸಂವೇದನೆಯಿಂದ ವೈಚಾರಿಕ, ವೈಜ್ಞಾನಿಕ ವಿಶ್ಲೇಷಣೆ, ವಿಮರ್ಶೆಗಳಿಂದ ಈ ಪ್ರಬಂಧವನ್ನು ವ್ಯಾಖ್ಯಾನಿಸಲಾಗಿದೆ. ಹಾಗೆಯೇ ಖಗೋಳ ಮತ್ತು ಖನಿಜ ಸಂಪತ್ತುಗಳ ಬಗೆಗೂ ವೈಜ್ಞಾನಿಕ ನೆಲೆಯಲ್ಲಿ

ಅಧ್ಯಯನ ಮಾಡುವ ಅಗತ್ಯವಿದೆ. ಅದೇ ತರಹ ಸಿನಿಮಾ ಸಾಹಿತ್ಯ ಮಾಧ್ಯಮದಲ್ಲಿಯೂ ಪರಿಸರ ಪ್ರಜ್ಞೆಯ ಪರಿಕಲ್ಪನೆಯನ್ನಿಟ್ಟುಕೊಂಡು ಸಂಶೋಧನೆ ಮಾಡಿ, ಅದರ ಸಾಧಕ ಬಾಧಕಗಳನ್ನು ಹೆಕ್ಕಿತೆಗೆದು, ಅದರಿಂದ ಈ ಸಮಾಜ ಮತ್ತು ಪ್ರಕೃತಿಗಿರುವ ಮಹತ್ವದ ಕೊಡುಗೆಯನ್ನು ಗುರುತಿಸಿ ಇಂತಹ ಅಧ್ಯಯನದ ಪ್ರಾಮುಖ್ಯತೆಯನ್ನು ಎತ್ತಿಹಿಡಿಯುವ ಅಗತ್ಯತೆ ದಟ್ಟವಾಗಿದೆ. ಹಾಗಾಗಿ ಪ್ರಕೃತಿ ಜೀವಿಗಳ ಜೀವನ ಸಂಸ್ಕೃತಿ ಸಂಬಂಧಿಯಾದ ಈ ಎಲ್ಲ ವಿಷಯ ಮಾಹಿತಿಗಳನ್ನು ಬಳಸಿಕೊಂಡರೆ, ಪ್ರಕೃತಿ ಪರಿಸರದ ಬಗ್ಗೆ ನಾನಾ ರೀತಿಯ ಸಂಶೋಧನೆ ಮಾಡುವ ವಿಷಯ,ವಿಚಾರ, ಮಾಹಿತಿ, ಮಾರ್ಗಗಳಿರುವುದು ಗಮನಾರ್ಹ ಸಂಗತಿ.

ಈ ಅಧ್ಯಯನ ಮುಂದಿನ ಜೀವ ಸಂಸ್ಕೃತಿ ಸಂಬಂಧಿ ಸಂಶೋಧನಾ ಕ್ರಿಯೆಗಳಿಗೆ ನಾನಾ ಸುಳಿವು, ಮಾರ್ಗಗಳನ್ನು ತೋರಿ ಮಾದರಿಯಾಗುವಂತೆ ಇಲ್ಲಿ ಗುರುತಿಸಲಾಗಿದೆ. ಈ ಮಹತ್ವಪೂರ್ಣ ಸಂಶೋಧನೆಯನ್ನು ಪೂರ್ಣಗೊಳಿಸಲು ಪಟ್ಟ ಶ್ರಮ, ಹಿಂಸೆ, ಕಷ್ಟಗಳು ಅಷ್ಟಿಷ್ಟಲ್ಲ. ಆದರೂ ಅವನ್ನೆಲ್ಲ ಮರೆಸಿದ್ದು ನನ್ನ ಪ್ರಬಂಧದ ವಿಷಯಕ್ಕೆ ಪೂರಕವಾದ ಪುಸ್ತಕಗಳ ಓದು, ವಿಚಾರಗಳ ಚರ್ಚೆ ಮತ್ತು ಜ್ಞಾನ ಚಿಂತನೆಗಳು. ಈ ವಿಷಯ ವಿಚಾರಗಳಿಂದ ನನ್ನ ಮನಸ್ಸಿಗೆ ಹೊಸ ಹೊಸ ಜ್ಞಾನ, ಬೆಳೆದು; ಪ್ರಕೃತಿಯ ಜೀವ ಪರಿಸರವನ್ನು ವಿಶ್ಲೇಷಿಸುವ ಶಕ್ತಿ ತುಂಬಿದ್ದು ಬುದ್ಧನ ಚಿಂತನೆಗಳು. ಹಾಗೂ ಕುವೆಂಪು, ತೇಜಸ್ವಿ, ಬಿ.ಜಿ.ಎಲ್.ಸ್ವಾಮಿಯವರ ಸಾಹಿತ್ಯ ಕೃತಿಗಳು ಮತ್ತು ನಾಗೇಶ ಹೆಗಡೆಯವರಂತಹ ಪತ್ರಿಕಾ ಬರಹಗಳು, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವಿಜ್ಞಾನ ಬರಹ ಪುಸ್ತಕಗಳಂತಹ ನಾನಾ ಜ್ಞಾನತುಂಬುವ ಹಲವಾರು ಕೃತಿಗಳಿಂದ ನನ್ನ ಅಧ್ಯಯನಕ್ಕೆ ಸ್ಫೂರ್ತಿ, ಪ್ರೇರಣೆಯುಂಟಾಗಿ ನಾನು ಹಲವು ರೀತಿಯ ಮಾನಸಿಕ ಸಂತೋಷವನ್ನು ಅನುಭವಿಸಿದ್ದೇನೆ. ಜೊತೆಗೆ ಜೀವ–ಜೀವಿ–ಜೀವನ ಸಂಸ್ಕೃತಿಗಳ ಬಗೆಗಿನ ನನ್ನ ಚಿಂತನ ಮಂಥನಗಳನ್ನು ಗೆಳೆಯರೊಡನೆ, ಗುರುಗಳೊಡನೆ, ಮಾರ್ಗದರ್ಶಕರೊಡನೆ ಹಿರಿಯ ಚಿಂತಕ ವಿಮರ್ಶಕರೊಡನೆ ಚರ್ಚಿಸುತ್ತಿದ್ದಾಗ, ಅವರು ನನ್ನ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದ ಕ್ಷಣಗಳು ನನ್ನನ್ನು ಮತ್ತಷ್ಟು ಅಧ್ಯಯನದ ಆಳಕ್ಕಿಳಿಯುವಂತೆ ಪ್ರೇರೇಪಿಸುತ್ತಿದ್ದವು. ಆದ್ದರಿಂದ ಅಧ್ಯಯನ ದೀರ್ಘವಾದರೂ ಆನಂದದಾಯಕವಾಗಿದೆ. ಇದರ ಅನುಭನ ಮತ್ತು ಚಿಂತನೆಗಳಿಂದ ನನ್ನನ್ನು ಹಲವಾರು ಪ್ರಶ್ನೆಗಳು ಕಾಡಿವೆ. ಅವೆಲ್ಲ ಈ ಶೋಧನೆಯ ಚರ್ಚೆಯೊಳಗೆ ತಲೆಯೆತ್ತಿ ಚರ್ಚೆಯೊಳಗಿನ ಮಾಹಿತಿ ಆಧಾರಗಳಿಂದಲೇ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಆದರೆ ನಿಸರ್ಗಪರಿಸರ ಸಂಬಂಧಿ ಎಲ್ಲ ಪ್ರಶ್ನೆಗಳಿಗೂ ಖಚಿತ ಉತ್ತರ ದೊರೆಯುವುದು ಕಷ್ಟ ಸಾಧ್ಯ. ಯಾಕೆಂದರೆ ಮಾನವ ತನ್ನ ಸಾಮಾಜಿಕ, ಆರ್ಥಿಕ, ರಾಜಕೀಯ ಸಂಘರ್ಷದ ಸಂಕೀರ್ಣತೆಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾನೆ. ಹೀಗಿದ್ದರೂ ಮಾನವ ಸಮುದಾಯಕ್ಕೆ ನೂರಾರು ಸಾವಿರಾರು ಸಮಸ್ಯೆಗಳಿದ್ದರೂ ಜೀವನ ಹೇಗೊ ಇದುವರೆಗೆ ಸಾಗಿಬಂದಿದೆ. ಆದರೆ ಇನ್ನು ಮುಂದೆ ಅವನ ಅಸ್ಥಿತ್ವಕ್ಕೆ ಪರಿಸರ ಸಮಸ್ಯೆಯೇ ಮಾರಕವಾಗಿದೆ. ಹಾಗೂ ಜಗತ್ತಿನ ಸರ್ವ ಜೀವಗಣಗಳ ಸರ್ವನಾಶಕ್ಕೆ ಇವನೇ ಸೃಷ್ಟಿಸಿದ ಅಣುಬಾಂಬು ಸಿದ್ಧವಾಗಿ ಎದುರು ನೋಡುತ್ತಿದೆ. ಇಲ್ಲಿ ಅಣುಬಾಂಬ್ ಸಿಡಿಯಲು ತನ್ನ ಕಾಲವನ್ನು ತಾನು ಕಾಯುತ್ತಿದ್ದರೆ ಪ್ರಕೃತಿಯು ತನ್ನ ವಿಮೋಚನೆಗೆ ಕಾಯುತ್ತಿದೆ. ಇವೆರಡರ ನಡುವೆ ಇಡೀ ಜೀವ ಸಮೂಹವೇ ಇಕ್ಕಳಕ್ಕೆ ಸಿಕ್ಕ ಅಡಿಕೆಯಂತಾಗಿದೆ. ಇಂತಹ ಸಂದಿಗ್ಧ ಕಾಲದಲ್ಲೂ ಜಗತ್ತಿನ ಯಾವ ಸಾಹಿತ್ಯವೂ ಗಂಭೀರವಾಗಿ ಪರಿಗಣಿಸಿ ಪರಿಣಾಮಕಾರಿಯಾಗಿ ಎದುರಿಸುತ್ತಿಲ್ಲ ಏಕೆ? ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕನ್ನಡದ ನಾನಾ ಸಿದ್ಧಾಂತ, ತತ್ವ–ಚಿಂತಕ–ವಾದದ ಸಾಹಿತ್ಯ ಮತ್ತು ಚಳುವಳಿಗಳು ಈ ಜೀವಿಗಳ ಸಂಸ್ಕೃತಿಯ ಪರಿಸರ ಪರಿಕಲ್ಪನೆಗೆ ಏಕೆ ಸ್ಪಂದಿಸುತ್ತಿಲ್ಲ? ಜೀವಿಗಳ ಜೀವನ ಅಸ್ಥಿತ್ವದ ಮೂಲಭೂತ ಸಮಸ್ಯೆಯಾಗಿರುವ ಈ ಪರಿಸರ ಸಮಸ್ಯೆ ಏಕೆ ಇವರಿಗೆ ಕಾಡಿಲ್ಲ ತಿಳಿಯದಾಗಿದೆ. ಬಹುಶ ಇವರಿಗೆ ತಮ್ಮ ಸಮಸ್ಯೆಗಳೇ ಜಾಸ್ತಿಯಾಗಿ ತಮ್ಮ ತಮ್ಮ ಜಾತಿ ಸಮುದಾಯಕ್ಕೆ ಮಾತ್ರ ಪ್ರಜ್ಞಾವಂತರಾಗಿ ಪರಿಸರ ಸಮಸ್ಯೆ ನಮ್ಮದಲ್ಲವೆಂದು ತಿಳಿದಿರಬಹುದೆ? ಸಮುದಾಯಪರವೆನಿಸಿಕೊಂಡಿರುವ ಲೇಖಕರು ಮತ್ತು ಚಳುವಳಿಗಾರರು ಪರಸ್ಪರ ಕ್ರಿಯಾಶೀಲವಾಗಿ ಬೆರೆತು ಅವರು ಪರಿಸರ ಪ್ರತಿಭಟನೆ, ಚಳುವಳಿಗಳಿಗೆ ಧ್ವನಿಗೂಡಿಸಿ, ಸರ್ಕಾರವನ್ನೂ ಎಚ್ಚರಗೊಳಿಸುತ್ತಲೇ, ಲೇಖಕರು ಪರಿಸರ ಸಂವೇದನೆಯ ಸೃಜನಶೀಲ ಕೃತಿಗಳನ್ನು ಜೀವಕೇಂದ್ರಿತ ನೆಲೆಯಲ್ಲಿ ಸಮಾನತೆಯ ಆಶಯವನ್ನೇ ಪ್ರಧಾನವಾಗಿಟ್ಟುಕೊಂಡು ಏಕೆ ರಚನೆ ಮಾಡಲು ಮುಂದಾಗುತ್ತಿಲ್ಲ? ತಿಳಿಯದಾಗಿದೆ. ಲೇಖಕರ ಈ ದುರ್ಬಲ ಮನಸ್ಸಿನ ಡೋಲಾಯಮಾನ ಸ್ಥಿತಿಯಿಂದಾಗಿ ಕನ್ನಡ ಸಾಹಿತ್ಯದಲ್ಲಿ ತೇಜಸ್ವಿಯವರು ಬರೆದಂತಹ ಪರಿಸರ ಕೃತಿಗಳ ದಾರಿಯಲ್ಲಿ ಇನ್ನಿತರ ಲೇಖಕರು ಹೆಚ್ಚಾಗಿ ಸಾಗುತ್ತಿಲ್ಲ. ಜೀವ ಸಂಸ್ಕೃತಿಯ ಪರಿಕಲ್ಪನೆಯ ಪರಿಸರ ಚಳುವಳಿಗಳು ಇಲ್ಲ. ಇರುವ ಸಂಘಟನೆಗಳು ಹೆಚ್ಚು ಪ್ರಬಲಗೊಳ್ಳುತ್ತಿಲ್ಲ. ಹಾಗಾಗಿ ಇಂದು ಪರಿಸರ ಸಾಹಿತ್ಯವನ್ನು ವಿಮರ್ಶಿಸುವಂತಹವರಿಗೂ, ಸಂಶೋಧಕರಿಗೂ ಹೆಚ್ಚಿನ ಮಹತ್ವವನ್ನು ನೀಡದಿರುವ ಪರಿಣಾಮ ನಾನಾ ಸಮಸ್ಯೆಗಳು ವೃದ್ಧಿಸುತ್ತಲೇ ಇವೆ. ಹಾಗಾಗಿ ಪರಿಹಾರ ಮಾರ್ಗಕ್ಕಾಗಿ ಹಲವಾರು ಮಾರ್ಗಗಳ ಸಹಾಯ, ಸಹಾಕಾರ, ಪ್ರೋತ್ಸಾಹಗಳ ನೆಲೆಯ ವಿಮರ್ಶೆಗಳ ಮಹತ್ವ ಪ್ರಸ್ತುತವೆನಿಸುತ್ತದೆ.

ಇದರ ಅರ್ಥ ಪ್ರಕೃತಿ ಪರಿಸರ ಸಾಹಿತ್ಯ ಕೃತಿಗಳಿಂದ, ಚಳುವಳಿಗಳಿಂದ ಪರಿಸರ ಸಮಸ್ಯೆಗೆ ಪರಿಹಾರವೆಂದಲ್ಲ. ಹಾಗೆ ನೋಡಿದರೆ ಸರ್ಕಾರಗಳು ದುರ್ಬಲವಾಗಿ ದಿವಾಳಿಯಾದಾಗ ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿ ಉಳ್ಳವರು ಪ್ರಬಲರಾಗಿ, ಇಡೀ ಸಮಾಜವೇ ದುರ್ಬಲವಾಗಿ, ಪ್ರಕೃತಿಯು ವಿನಾಶವಾಗುತ್ತದೆ. ಇದಕ್ಕೆ ಇವತ್ತಿನ ಬಳ್ಳಾರಿ ಗಣಿಧಣಿಗಳ ಖನಿಜ ಲೂಟಿಯ ಹಗರಣಗಳೇ ಸಾಕ್ಷಿ. ಇವತ್ತಿನ ಈ ಸ್ಥಿತಿಯಲ್ಲಿ ಸ್ವಾರ್ಥ ರಾಜಕಾರಣಿ ಪ್ರಭುಗಳು ಪ್ರಬಲರಾಗಿ, ಸಾರ್ವಜನಿಕ ಹಿತಾಸಕ್ತಿಗೆ, ಸರ್ವ ಜೀವಿಗಳ ಜೀವಂತಿಕೆಗೆ ಸ್ಪಂದಿಸದೆ ಸರ್ಕಾರಗಳು ದುರ್ಬಲವಾಗುತ್ತಿವೆ. ಹಾಗಾಗಿ ಪರಿಸರ ಸಮಸ್ಯೆಗಳು ಬೇರೆ ರೂಪ ಪಡೆದುಕೊಳ್ಳುತ್ತಿವೆ. ಆದ್ದರಿಂದಲೇ ಈ ಚಳುವಳಿಗಳು, ಸಾಹಿತ್ಯ ಕೃತಿಗಳು, ಸಮಾಜ, ಸರ್ಕಾರ, ರಾಜಕಾರಣಿ, ಬಂಡವಾಳಶಾಹಿಗಳನ್ನು, 'ಜೀವ ಕೇಂದ್ರಿತ ಜ್ಞಾನಿ' ಗಳನ್ನಾಗಿ ರೂಪಿಸುವ ಕಡೆ ಹೆಚ್ಚು ಗಮನ ಹರಿಸಬೇಕಾಗಿರುವುದು ಈ ಶತಮಾನದ ಸಾಹಿತ್ಯ, ಸಂಶೋಧನೆಗಳ ಮುಂದಿನ ಸವಾಲು. ಈ ಸವಾಲನ್ನು ಸಾಹಿತ್ಯ, ಸಮಾಜ, ಸರ್ಕಾರಗಳು ಎದುರಿಸದಿದ್ದರೆ ಇಡೀ ಮಾನವ ಕುಲ ವರ್ತಮಾನದ ಆತಂಕದಲ್ಲೇ ನಿಂತು ಭೂತದ ನೆನಪಿಗೂ ನಿಶ್ಯಕ್ತಿಗೊಂಡು ಭವಿಷ್ಯದ ಕನಸಿಲ್ಲದೆ ವಿನಾಶಗೊಳ್ಳುವ ಕಾಲ ದೂರವಿಲ್ಲ. ಇನ್ನು ನೂರಾರು ವರ್ಷಗಳಲ್ಲಿ ಈ ಜೀವ ಜಗತ್ತಿನ ಭವಿಷ್ಯ ನಿರ್ಧಾರವಾಗುವುದಂತೂ ಖಚಿತ. ಅದನ್ನು ಅರಿತು ಮುನ್ನಡೆಯಬೇಕಾದದ್ದು ಮಾನವರ ಕರ್ತವ್ಯ.

2. ಪರಾಮರ್ಶನ ಸಾಹಿತ್ಯ

2. 1. ಪ್ರಾಚೀನ ಧರ್ಮ, ಪುರಾಣ ಕೃತಿಗಳು

1. ಮಿರ್ಜಿ ಅಣ್ಣಾರಾಯ್, ಜೈನಧರ್ಮ, ಶಾಂತಿ ಸೇವ ಸದನ, ಸೇಡಬಾಳ, 1952.
2. ಅನು: ಕೃಷ್ಣಯ್ಯ ಎ.ಡಿ, ಬುದ್ಧ ಮತ್ತು ಆತನ ಧರ್ಮ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1996.
3. **Old and new Testaments : The holy bible,** For British and Foreign Bible society instituted in London in the year – 1804.
4. **Essence of the Upanisahsda,** Pandit M. P, Dipti Pablications Sri Auro Bindo Ashram, Pondicherry – 1969.
5. **ood qustion, Good answer**, Dhammlka's The Corparate Body of the Buddha Educational Foundation.
6. **The Devi Bhogavata. Purana.** Sree Cheever Mackenzie Brown, God as mother A Feminine Theolog in Indian (Hart ford. vt. Claude Stark - 1974)
7. **Hindu Goddesses**, Dovid Kinsley,

2. II. ಸೃಜನಶೀಲ ಮತ್ತು ವಿಮರ್ಶಾ ಕೃತಿಗಳು:

1. ಅನಂತ ಮೂರ್ತಿ. ಯು. ಆರ್, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ, 1971.
2. ಅನಂತ ರಾಮಯ್ಯ. ಆರ್. ಎಲ್, ವಡ್ಡಾರಾಧನ ಕಥಾ ಲೋಕ, ಡಿ.ವಿ.ಕೆ. ಮೂರ್ತಿ, ಮೈಸೂರು, 1971.
3. ಅಂಬಿಕಾತನಯ ದತ್ತ, ಅರಳು ಮರಳು, ಸಮಾಜ ಪುಸ್ತಕಾಲಯ, ಧಾರವಾಡ 1957.
4. ಅಂಬಿಕಾತನಯ ದತ್ತ, ಕೃಷ್ಣ ಕುಮಾರಿ ಮತ್ತು ಹಾಡು ಪಾಡು, ಸಮಾಜ ಪುಸ್ತಕಾಲಯ, ಧಾರವಾಡ, 1957, 2 ನೇ ಮುದ್ರಣ
5. ಅಂಬಿಕಾತನಯ ದತ್ತ, ಸಖೀಗೀತ, ಮನೋಹರ ಗ್ರಂಥಮಾಲೆ, ಧಾರವಾಡ, 1940.
6. ಅಂಬಿಕಾತನಯ ದತ್ತ, ಗರಿ, ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ, 1945.
7. ಅಂಬಿಕಾತನಯ ದತ್ತ, ಗಂಗಾವತರಣ, ಸಮಾಜ ಪುಸ್ತಕಾಲಯ, ಧಾರವಾಡ, 1976, 5 ನೇ ಮುದ್ರಣ
8. ಅಂಬಿಕಾತನಯ ದತ್ತ, ವಿನಯ, ಗೀತಾ ಬುಕ್‌ಹೌಸ್, ಮೈಸೂರು, 1976, 2 ನೇ ಮುದ್ರಣ
9. ಅಂಬಿಕಾತನಯ ದತ್ತ, ನಾಕು ತಂತಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ, 1964.
10. ಅಂಬಿಕಾತನಯ ದತ್ತ, ನಮನ, ಸಮಾಜ ಪುಸ್ತಕಾಲಯ, ಧಾರವಾಡ, 1958.
11. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ಅಭಿರುಚಿ ಪ್ರಕಾಶನ, ಮೈಸೂರು, 2001, 2 ನೇ ಮುದ್ರಣ
12. ಅರವಿಂದಮಾಲಗತ್ತಿ, ಪುರಾಣ ಜಾನಪದ ಮತ್ತು ದೇಶೀವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

1991.
13. ಅರವಿಂದ ಮಾಲಗತ್ತಿ, ಮೂರನೆಯ ಕಣ್ಣು, ಶೈಲ ಪ್ರಕಾಶನ, ಮುದ್ದೇಬಿಹಾಳ್, 1996.
14. ಅರವಿಂದ ಮಾಲಗತ್ತಿ, ಶ್ರೀ ಚಂಡಾಲ ಸ್ವರ್ಗಾರೋಹಣಂ, ಅಭಿರುಚಿ ಪ್ರಕಾಶನ, ಮೈಸೂರು, 2003.
15. ಕರೀಗೌಡ ಬೀಚನಹಳ್ಳಿ, ನೆನಪಲ್ಲ ವಾಸ್ತವ, ಕಲ್ಯಾಣ ಪ್ರಕಾಶನ, ಬೆಂಗಳೂರು 1991.
16. ಕುಮುದ. ಎಸ್, ಹದಿಬದೆಯ ಧರ್ಮ ಒಂದು ಪರಿಚಯ, ಚೇತನ ಬುಕ್ ಹೌಸ್, ಮೈಸೂರು, 1992.
17. ಕುವೆಂಪು, ಅಗ್ನಿಹಂಸ, ಕಾವ್ಯಾಲಯ ಪ್ರಕಾಶನ, ಮೈಸೂರು, 1940.
18. ಕುವೆಂಪು, ಕೃತ್ತಿಕೆ , ಕಾವ್ಯಾಲಯ ಪ್ರಕಾಶನ, ಮೈಸೂರು, 1946.
19. ಕುವೆಂಪು, ಕಿಂಕಿಣಿ, ಕಾವ್ಯಾಲಯ ಪ್ರಕಾಶನ, ಮೈಸೂರು, 1946.
20. ಕುವೆಂಪು, ಕಲಾಸುಂದರಿ, ಕಾವ್ಯಾಲಯ ಪ್ರಕಾಶನ, ಮೈಸೂರು, 1948.
21. ಕುವೆಂಪು, ಚಂದ್ರಮಂಚಕೆ ಬಾ ಚಕೋರಿ, ಉದಯರವಿ ಪ್ರಕಾಶನ, ಮೈಸೂರು, 1954
22. ಕುವೆಂಪು, ಪ್ರೇಮ ಕಾಶ್ಮೀರ, ಉದಯರವಿ ಪ್ರಕಾಶನ, ಮೈಸೂರು, 1954, 2 ನೇ ಮುದ್ರಣ
23. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಉದಯರವಿ ಪ್ರಕಾಶನ, ಮೈಸೂರು, 1954.
24. ಕುವೆಂಪು, ಇಕ್ಷು ಗಂಗೋತ್ರಿ, ಉದಯರವಿ ಪ್ರಕಾಶನ, ಮೈಸೂರು, 1957.
25. ಕುವೆಂಪು, ನವಿಲು, ಉದಯರವಿ ಪ್ರಕಾಶನ, ಮೈಸೂರು, 1971, 2 ನೇ ಮುದ್ರಣ
26. ಕುವೆಂಪು, ಷೋಡಶಿ, ಉದಯರವಿ ಪ್ರಕಾಶನ, ಮೈಸೂರು, 1965.
27. ಕುವೆಂಪು, ಬೊಮ್ಮನ ಹಳ್ಳಿಯ ಕಿಂದರಿ ಜೋಗಿ, ಉದಯರವಿ ಪ್ರಕಾಶನ, ಮೈಸೂರು, 1973.
28. ಕುವೆಂಪು, ಅನುತ್ತರಾ, ಉದಯರವಿ ಪ್ರಕಾಶನ, ಮೈಸೂರು, 1965.
29. ಕುವೆಂಪು, ಕೊಳಲು, ಕಾವ್ಯಾಲಯ ಪ್ರಕಾಶನ, ಮೈಸೂರು, 1948, 3 ನೇ ಮುದ್ರಣ
30. ಕುವೆಂಪು, ಪಕ್ಷಿಕಾಶಿ, ಉದಯರವಿ ಪ್ರಕಾಶನ, ಮೈಸೂರು, 1984, 3 ನೇ ಮುದ್ರಣ
31. ಕುವೆಂಪು, ಜಲಗಾರ, ಉದಯರವಿ ಪ್ರಕಾಶನ, ಮೈಸೂರು, 1987, 4 ನೇ ಮುದ್ರಣ
32. ಕುವೆಂಪು, ಬೆರಳ್‌ಗೆ ಕೊರಳ್, ಉದಯರವಿ ಪ್ರಕಾಶನ, ಮೈಸೂರು, 1991, 9 ನೇ ಮುದ್ರಣ
33. ಕುವೆಂಪು, ನನ್ನ ದೇವುರು ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ಮೈಸೂರು, 1985, 6ನೇ ಮುದ್ರಣ
34. ಕುವೆಂಪು, ಮಲೆನಾಡಿನ ಚಿತ್ರಗಳು, ಉದಯರವಿ ಪ್ರಕಾಶನ, ಮೈಸೂರು, 1994.
35. ಕುವೆಂಪು, ಅಮಲನ ಕಥೆ , ಉದಯರವಿ ಪ್ರಕಾಶನ, ಮೈಸೂರು, 1985.
36. ಕುವೆಂಪು, ಕಥ'ನ ಕವನಗಳು, ಉದಯರವಿ ಪ್ರಕಾಶನ, ಮೈಸೂರು, 1958, 3 ನೇ ಮುದ್ರಣ
37. ಕುವೆಂಪು, ಹಾಳೂರು, ಉದಯರವಿ ಪ್ರಕಾಶನ, ಮೈಸೂರು, 1952.
38. ಕುವೆಂಪು, ದ್ರೌಪದಿಯ ಶ್ರೀ ಮುಡಿ, ಉದಯರವಿ ಪ್ರಕಾಶನ, ಮೈಸೂರು 1979, 4 ನೇ ಮುದ್ರಣ
39. ಕುವೆಂಪು, ವಿಭೂತಿ ಪೂಜೆ, 1953, ಉದಯರವಿ ಪ್ರಕಾಶನ, ಮೈಸೂರು 1970, 2 ನೇ ಮುದ್ರಣ
40. ಕುವೆಂಪು, ತಪೋನಂದನ 1950, ಉದಯರವಿ ಪ್ರಕಾಶನ, ಮೈಸೂರು 1960, 3 ನೇ ಮುದ್ರಣ
41. ಕುವೆಂಪು, ಸಾಹಿತ್ಯ ಪ್ರಚಾರ 1944, ಉದಯರವಿ ಪ್ರಕಾಶನ, ಮೈಸೂರು 1972, 3 ನೇ ಮುದ್ರಣ
42. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, 1960.
43. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, 1995, 5 ನೇ ಮುದ್ರಣ
44. ಕುವೆಂಪು, ಶ್ರೀರಾಮಾಯಣ ದರ್ಶನಂ, ಕರ್ನಾಟಕಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1990.
45. ಕುವೆಂಪು, ನೆನಪಿನ ದೋಣಿ, ಉದಯರವಿ ಪ್ರಕಾಶನ, ಮೈಸೂರು, 1998, 4 ನೇ ಮುದ್ರಣ
46. ಕುವೆಂಪು, ಮೋಡಣ್ಣನ ತಮ್ಮ, ಉದಯರವಿ ಪ್ರಕಾಶನ, ಮೈಸೂರು, 1992, 2 ನೇ ಮುದ್ರಣ
47. ಕುರ್ತಕೋಟಿ, ಭೃಂಗದ ಬೆನ್ನೇರಿ, ಮನೋಹರ ಗ್ರಂಥ' ಮಾಲೆ, ಧಾರವಾಡ, 1975.
48. ಕೃಷ್ಣಕುಮಾರ್. ಸಿ. ಪಿ, ಕುವೆಂಪು ಸಾಹಿತ್ಯ ಸಂಧಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1995.
49. ಗೋಪಾಲಕೃಷ್ಣ ಅಡಿಗ,ನಡೆದು ಬಂದ ದಾರಿ, ಉಷಾ ಸಾಹಿತ್ಯ ಮಾಲೆ, ಮೈಸೂರು.
50. ಗಂಗಾಪಾದೇಕಲ್, ಹೊಸ ಹೆಜ್ಜೆ, ಕನ್ನಡ ಸಂಘ, ವಿವೇಕಾನಂದ ಕಾಲೇಜು, ಪುತ್ತೂರು, 1998.
51. ಗಂಗಾಪಾದೇಕಲ್, ವಾಸ್ತವ, ಮಹಿಳಾ ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ, 1996.

52. ಗುಂಡಪ್ಪ ಡಿ. ವಿ, ಪುರುಷ ಸೂಕ್ತ, ಕಾವ್ಯಾಲಯ ಪ್ರಕಾಶನ, ಮೈಸೂರು, 1971.
53. ಗುಂಡಪ್ಪ ಡಿ. ವಿ, ಮಂಕುತಿಮ್ಮನ ಕಗ್ಗ, ಕಾವ್ಯಾಲಯ ಪ್ರಕಾಶನ, ಮೈಸೂರು 1997, 14 ನೇ ಮುದ್ರಣ
54. ಗುಂಡಪ್ಪ ಡಿ. ವಿ, ಮರುಳ ಮುನಿಯನ ಕಗ್ಗ, ಕಾವ್ಯಾಲಯ ಪ್ರಕಾಶನ, ಮೈಸೂರು 1998.
55. ಚದುರಂಗ, ಹೆಜ್ಜಾಲ, ಪುಸ್ತಕ ಪ್ರಕಾಶನ, ಮೈಸೂರು 1998.
56. ಚದುರಂಗ, ಚದುರಂಗರ ಸಮಗ್ರ ಕಥೆಗಳು, ಅಭಿರುಚಿ ಪ್ರಕಾಶನ, ಮೈಸೂರು 2000.
57. ಚಿಕ್ಕಣ್ಣ ಕಾ. ತ, ಮುಂಜಾವು, ಕೊಪ್ಪಲು ಪ್ರಕಾಶನ, ಬೆಂಗಳೂರು 1989.
58. ಚಂದ್ರಶೇಖರ ಕಂಬಾರ, ಚಕೋರಿ, ಅಕ್ಷರ ಪ್ರಕಾಶನ, ಹೆಗ್ಗೋಡು 1996.
59. ಚಂದ್ರಶೇಖರ ಕಂಬಾರ, ಪುಷ್ಪರಾಣಿ, ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, 1998, 2 ನೇ ಮುದ್ರಣ
60. ಚಂದ್ರಶೇಖರ ತಾಳ್ಯ, ಸುಡುವ ಭೂಮಿ, ಯುವ ಹಿರಿಯ ವಿದ್ಯಾರ್ಥಿ ಸಂಘ, ಸಿರಿಗೆರೆ, 1994.
61. ಚಂದ್ರಶೇಖರ ನಂಗಲಿ. ವಿ, ಕಾಡು ಮತ್ತು ತೋಪು, ಲೋಹಿಯಾ ಪ್ರಕಾಶನ, ಬಳ್ಳಾರಿ2000.
62. ಚಂದ್ರಶೇಖರ ನಂಗಲಿ. ವಿ, ನಿರ್‌ಬೀಜೀಕರಣ ವಿರಾಟ್ ಸ್ವರೂಪ, ಲೋಹಿಯಾ ಪ್ರಕಾಶನ, ಬಳ್ಳಾರಿ 1999.
63. ಚಂದ್ರಶೇಖರ ನಂಗಲಿ ವಿ, ನಾ ನಿಮ್ಮೋಳಗು, ಲೋಹಿಯಾ ಪ್ರಕಾಶನ, ಬಳ್ಳಾರಿ2001.
64. ಜವರಯ್ಯ. ಮ.ನ, ಜಲ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು 1998.
65. ಜಯಪ್ರಕಾಶ ಬಂಜಗೆರೆ, ಮಹೂವಾ, ಚರ ಪ್ರಕಾಶನ, ಹಾರೋಹಳ್ಳಿ1992.
66. ಜಾ. ಗೋ, ಕಾವ್ಯ ಮಂಥನ, ಸಮಾಜ ಪುಸ್ತಕಾಲಯ, ಧಾರವಾಡ1999.
67. ಧರಣಿದೇವಿ ಮಾಲಗತ್ತಿ, ಸ್ತ್ರೀವಾದ ಮತ್ತು ಭಾರತೀಯತೆ, ಚೇತನ ಬುಕ್ ಹೌಸ್, ಮೈಸೂರು 1998.
68. ನರಸಿಂಹಶಾಸ್ತ್ರೀ. ಕೆ. ಎಲ್. ಪಂಪಮಹಾಕವಿ ವಿರಚಿತ ಆದಿಪುರಾಣಂ ಗದ್ಯನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1980.
69. ನರಸಿಂಹಸ್ವಾಮಿ ಕೆ. ಎಸ್, ಆಯ್ದು ಕವನಗಳು, ಕಾವ್ಯಾಲಯ ಪ್ರಕಾಶನ, ಮೈಸೂರು
70. ನರಸಿಂಹಸ್ವಾಮಿ ಕೆ. ಎಸ್, ಮನೆಯಿಂದ ಮನೆಗೆ, ಡಿ. ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
71. ನರಸಿಂಹಸ್ವಾಮಿ ಕೆ. ಎಸ್, ಮಲ್ಲಿಗೆ ಮಾಲೆ, ಲಿಪಿ ಪ್ರಕಾಶನ, ಬೆಂಗಳೂರು 1986
72. ನವರತ್ನ. ಎಸ್. ಆರ್, ಜಾಗತಿಕ ಧರ್ಮಗಳು, ಸಮಾಜ ಪುಸ್ತಕಾಲಯ, ಧಾರವಾಡ1976.
73. ನಾಗಭೂಷಣ. ಓ.ಎಲ್, ವಿಮರ್ಶೆಯ ಪರಿಭಾಷೆ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ1983.
74. ನಾರಯಣ ಪಂಡಿತ ಬೈಲೂರು, ಸಂಸ್ಕಾರ ಪಾರಿಜಾತ, ಕೆನರಾ ಹೈಸ್ಕೂಲ್ ಅಸೋಸಿಯೇಷನ್, ಮಂಗಳೂರು, 1994.
75. ನಾರಾಯಣಶಾಸ್ತ್ರೀ.ಹ,ವೆ, ಗದ್ಯಾನುವಾದ, ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2015, 4ನೇ ಮುದ್ರಣ.
76. ನಿರಂಜನ, ಚಿರಸ್ಮರಣೆ, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು 1983, 4 ನೇ ಮುದ್ರಣ
77. ಪರಮೇಶ್ವರ ಭಟ್ಟ, ಕನ್ನಡ ಅಭಿಜ್ಞಾನ ಶಾಕುಂತಳ, ಶಾರದ ಮಂದಿರ, ಮೈಸೂರು, 1983.
78. ಪಾಂಡುರಂಗ, ಮಹಾಕವಿ ಕಾಳಿದಾಸ ವಿರಚಿತ ಅಭಿಜ್ಞಾನ ಶಾಕುಂತಳಮ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1978.
79. ಪುಟ್ಟಪ್ಪ, ನಾ ಕಂಡ ಮಲೆನಾಡು, ಪ್ರಕಾಶಕರು, ಕರ್ನಾಟಕ ಸಂಘ, ಶಿವಮೊಗ್ಗ, 1991.
80. ಪುಟ್ಟಪ್ಪ. ಕೆ.ವಿ. ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪ್ರಕಾಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1976
81. ಪುರಾಣಿಕ. ಅ. ಕ, ಚನ್ನಬಸವ ಸಾಹಿತ್ಯ, ಸಹಜೀವನ ಪ್ರಕಾಶನ, ಹೈದರಾಬಾದ್, 1956.
82. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ಕಿರಗೂರಿನ ಗೈಯಾಳಿಗಳು, ಪುಸ್ತಕ ಪ್ರಕಾಶನ, ಮೈಸೂರು, 1991.
83. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ಫ್ಲೈಯಿಂಗ್ ಸಾಸರ್ಸ್, ಪುಸ್ತಕ ಪ್ರಕಾಶನ, ಮೈಸೂರು, 1991.
84. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್, ಪುಸ್ತಕ ಪ್ರಕಾಶನ, ಮೈಸೂರು, 1993, 3 ನೇ ಮುದ್ರಣ
85. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ವಿಸ್ಮಯ–1, ಪುಸ್ತಕ ಪ್ರಕಾಶನ, ಮೈಸೂರು, 1991.
86. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ವಿಸ್ಮಯ–2, ಪುಸ್ತಕ ಪ್ರಕಾಶನ, ಮೈಸೂರು, 1993.
87. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ವಿಸ್ಮಯ–3, ಪುಸ್ತಕ ಪ್ರಕಾಶನ, ಮೈಸೂರು, 1994.
88. ಪೂರ್ಣಚಂದ್ರ ತೇಜಸ್ವಿ. ಕೆ. , ಕರ್ವಾಲೊ, ಪುಸ್ತಕ ಪ್ರಕಾಶನ, ಮೈಸೂರು 1995, 11 ನೇ ಮುದ್ರಣ

89. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ಪರಿಸರದ ಕತೆ, ಪುಸ್ತಕ ಪ್ರಕಾಶನ, ಮೈಸೂರು 1999, 9 ನೇ ಮುದ್ರಣ
90. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ, ಮೈಸೂರು 1995,4 ನೇ ಮುದ್ರಣ
91. ಪೂರ್ಣಚಂದ್ರ ತೇಜಸ್ವಿ. ಕೆ. ಪಿ, ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ, ಮೈಸೂರು 1998,3 ನೇ ಮುದ್ರಣ
92. ಪೂರ್ಣಚಂದ್ರ ತೇಜಸ್ವಿ. ಕೆ.ಪಿ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಪುಸ್ತಕ ಪ್ರಕಾಶನ, ಮೈಸೂರು, 1997, 4ನೇ ಮುದ್ರಣ
93. ಪ್ರಧಾನ ಗುರುದತ್ತ, ಕುವೆಂಪು, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2001.
94. ಪ್ರೇಮಾ ಭಟ್, ಕಾಡು ಕಡಿದು ಊರು ಮಾಡಿದರು, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು, 1992.
95. ಬಸವರಾಜು.ಎಲ್. ಪಂಪನ ಸಮಸ್ತಾ ಭಾರತದ ಕಥಾಮೃತ, ಪ್ರಕಾಶಕ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001 2ನೇ ಮುದ್ರಣ
96. ಬಿ.ಜಿ.ಎಲ್. ಸ್ವಾಮಿ, ಹಸುರು ಹೊನ್ನು, ಕಾವ್ಯಾಲಯ ಪ್ರಕಾಶನ, ಮೈಸೂರು, 1998, ಹೊಸ ಪ್ರಕಟಣೆ
97. ಬಿ.ಜಿ.ಎಲ್. ಸ್ವಾಮಿ, ಸಸ್ಯ ಪುರಾಣ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು 1998, 2 ನೇ ಮುದ್ರಣ
98. ಬಿ.ಜಿ.ಎಲ್. ಸ್ವಾಮಿ, ಫಲಶೃತಿ, ಕಾವ್ಯಾಲಯ ಪ್ರಕಾಶನ, ಮೈಸೂರು, 1991, 2 ನೇ ಮುದ್ರಣ
99. ಬಿ.ಜಿ.ಎಲ್. ಸ್ವಾಮಿ, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ, ಬೆಂಗಳೂರು, 1991.
100. ಬಿ.ಜಿ.ಎಲ್. ಸ್ವಾಮಿ, ಶಾಸನಗಳಲ್ಲಿ ಗಿಡ ಮರಗಳು, ಬೆಂಗಳೂರು, 1995.
101. ಬೇಂದ್ರೆ. ದ. ರಾ, ಸಾಹಿತ್ಯ ವಿಮರ್ಶೆ, ಸಮಾಜ ಪುಸ್ತಕಾಲಯ, ಧಾರವಾಡ, 1949
102. ಬೋರಲಿಂಗಯ್ಯ.ಹಿ.ಚಿ, ಕಾಡು ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು,1995.
103. ಬೋರಲಿಂಗಯ್ಯ.ಹಿ.ಚಿ, ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು,1991.
104. ಭೂಸನೂರ ಮಠ ಪ್ರಾ. ಸಂ. ಶಿ, ಭವ್ಯ ಮಾನವ, ಪ್ರಕಾಶಕರು ರಾವೂರು ಶ್ರೀ ಸಿದ್ದಲಿಂಗೇಶ್ವರ ಮಠ ಮತ್ತು ಅದವಾಸಿ ಮಂಡಗಿರಿ ಕಲ್ಲು ಮಠದ ಅದಿಪತಿಗಳು, 1983.
105. ಮಲ್ಲು.ಸಿ.ಕೊತ್ನೂರ್, ವಸುಂಧರಾ, ಸಂಬಂಧ, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು, 1994.
106. ಮೂರ್ತಿ.ಡಿ.ವಿ.ಕೆ. ಸಾಹಿತ್ಯ ಮತ್ತು ಜೀವನದ ಮೌಲ್ಯಗಳು, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 1974.
107. ಯುಗಟಿ.ವಿ.ಸಿ. ಸಮಾಜ ಧರ್ಮ ಸಂಸ್ಕೃತಿ, ವಿಚಾರ ಪ್ರಕಾಶನ, ಧಾರವಾಡ, 1975.
108. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ತ ಕಾಲೇಜು, ಬೆಂಗಳೂರು, 1993.
109. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996.
110. ರಂಗಪ್ಪ.ಕೆ.ಎಸ್., ಕಥೆಗಳ ಕಥೆ ಮತ್ತು ಕುಚೇಷ್ಟೇ ಕೋತಿ, ಗೀತಾ ಬುಕ್ ಹೌಸ್, ಮೈಸೂರು, 1984.
111. ರಾಘವೇಂದ್ರ ಪಾಟೀಲ, ದೇಸಗತಿ, ಸಂವಾದ ಪ್ರಕಾಶನ, ಚಿತ್ರದುರ್ಗ, 1995.
112. ರಾಜರತ್ನಂ.ಜಿ.ಪಿ, ಧರ್ಮ ಪದ ಪ್ರಕಾಶಿಕಾ, ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು, 1956.
113. ರಾಮಕೃಷ್ಣ.ಎಂ, ಸಾಹಿತ್ಯ ಮತ್ತು ಸಮಾಜ, ಪದ್ಮ ಪ್ರಕಾಶನ, ಬೆಂಗಳೂರು, 1973.
114. ರಾಮಚಂದ್ರಪ್ಪ ಬರಗೂರು, ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, 2001.
115. ರಾಮಣ್ಣ ಬೆಸಗರ ಹಳ್ಳಿ, ಕನ್ನಂಬಾಡಿ, ಪಲ್ಲವಿ ಪ್ರಕಾಶನ, ಮಂಡ್ಯ, 1986.
116. ರಾಮಚಂದ್ರ. ಹಿ. ಶಿ, ಜಾನಪದ ಪ್ರಕೃತಿ, ಜ್ಞಾನೋದಯ ಪ್ರಕಾಶನ, ಬೆಂಗಳೂರು, 2001.
117. ರಾಮಯ್ಯ ಕೋಟಗಾನಹಳ್ಳಿ, ಸಿಂದ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
118. ರಾಹುಲ್ ಸಾಂಕೃತ್ಯಾಯನ, ವೊಲ್ಗಾಗಂಗಾ, ನವಕರ್ನಾಟಕ ಪ್ರಕಾಶನ, ಬೆಂಗಳೂರು 1993,4ನೇ ಮುದ್ರಣ
119. ಲಿಂಗಯ್ಯ. ಡಿ, ಜಾನಪದ ಪ್ರಾಣಿ ಕಥೆ ಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980.
120. ವಿದ್ವಾನ್ ಕೃಷ್ಣ ಭಟ್, ಕೆ.ವಿ, ಸಾಹಸ ಭೀಮ ವಿಜಯಂ, ಪ್ರಕಾಶಕ, ಕಾವೇರಿಕಾನ, ಕುಂಬಳೆ ಪೋಸ್ಟ್, ದ.ಕನ್ನಡ
121. ವಿಜಯ ಕುಮಾರ್. ಪಿ, ಬಂಗಾಲದ ಜಾನಪದ ಕಥೆ , ಪ್ರತಿಭಾ ಗ್ರಂಥ' ಮಾಲೆ, ಧಾರವಾಡ, 1979.
122. ವಿಜಯ ದಬ್ಬೆ, ಇತಿಗೀತಿಕೆ, ರಚನಾ ಪ್ರಕಾಶನ, ವಿಜಯನಗರ, ಮೈಸೂರು, 1996.
123. ವಿದ್ಯಾಶಂಕರ ಎಸ್, ಸಂಕೀರ್ಣ ವಚನ ಸಂಪುಟ–2 ಕರ್ನಾಟಕ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ

ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1937.
124. ವಿನಾಯಕ, ಪಯಣ, ಮನೋಹರ ಗ್ರಂಥ' ಪ್ರಕಾಶನ ಸಮಿತಿ, ಧಾರವಾಡ, 1937.
125. ವೀರಭದ್ರಪ್ಪ. ಕುಂ, ಭಗವತಿ ಕಾಡು, ಕಲ್ಯಾಣಿ ಪ್ರಕಾಶನ, ಬೆಂಗಳೂರು, 1990.
126. ವಿರೇಶ ಬಡಿಗೇರ, ಅಡಿಗಲ್ಲು, ಮಾಯಾ ಪ್ರಕಾಶನ, ಕಮಲಾಪುರ, 1997.
127. ವೆಂಕಟರಮಣನ್.ಡಿ.ಆರ್, ಕಗ್ಗಕ್ಕೊಂದು ಕೈಪಿಡಿ, ಶ್ರೀನಿತ್ಯಾನಂದ ಪ್ರಿಂಟರ್ಸ್ ಅಶೋಕ ನಗರ, ಬೆಂಗಳೂರು, 2001, 3 ನೇ ಮುದ್ರಣ
128. ವೆಂಕಟಸುಬ್ಬಯ್ಯ.ಜಿ, ಬನದ ಸೆರಗು, ಲಕ್ಷ್ಮೀಸ್ಮಾರಕ ಗ್ರಂಥ ಮಾಲೆ, ಮೈಸೂರು, 1974, 4 ನೇ ಮುದ್ರಣ
129. ವೆಂಕಟಸುಬ್ಬಯ್ಯ.ಜಿ, ನಿಸರ್ಗದ ಮಡಿಲು, ಗೌತಮ ಪ್ರಕಾಶನ, ಜಯನಗರ, ಮೈಸೂರು, 1976, 2ನೇ ಮುದ್ರಣ
130. ವೆಂಕಣ್ಣಯ್ಯ.ಓ,ಎಸ್, ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು, ಸ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, 1958.
131. ಶಾಮರಾಯ.ತ.ಸು, ನಾಗರಾಜಯ್ಯ.ಪ, ಆದಿಪುರಣಾ ದೀಪಿಕೆ, ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ, 1991.
132. ಶಿವಪ್ರಕಾಶ.ಎಚ್.ಎಸ್, ಮಂಟೇಸ್ವಾಮಿ ಕದ್ಕಾ ಪ್ರಸಂಗ., ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಮೈಸೂರು, 1995, 2ನೇ ಮುದ್ರಣ
133. ಶಿವಪ್ರಕಾಶ,ಎಚ್.ಎಸ್, ಮಾದರಿ ಮಾದಯ್ಯ, ಸಮುದಾಯ ಪ್ರಕಾಶನ, ಬೆಂಗಳೂರು, 1992.
134. ಶಿವಪ್ರಕಾಶ.ಎಚ್.ಎಸ್, ಮಹಾಚೈತ್ರ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1995.
135. ಶಿವಪ್ರಕಾಶ.ಎಚ್.ಎಸ್, ಮಾರನಾಯಕನ ದೃಷ್ಟಂತ, ಪರಿಸರ ಪ್ರಕಾಶನ, ಶಿವಮೊಗ್ಗ, 1996.
136. ಶಿವಪ್ರಕಾಶ.ಎಚ್.ಎಸ್, ಮಳೆ ಬಿದ್ದ ನೆಲದಲ್ಲಿ, ಕನ್ನಡ ಸಂಘ ಕ್ರೈಸ್ಟ ಕಾಲೇಜು, ಬೆಂಗಳೂರು, 1983.
137. ಶಿವರಾಮ ಕಾರಂತ. ಕೆ, ಬೆಟ್ಟದ ಜೀವ, ಎಸ್. ಬಿ. ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, 1998.
138. ಶಿವರಾಮ ಕಾರಂತ. ಕೆ, ಕುಡಿಯರ ಕೂಸು, ಪ್ರಕಾಶಕರು, ಶ್ರೀ. ಎಸ್. ನಾರಾಯಣರಾವ್, ಮ್ಯಾನೇಜರ್ ಪ್ರೈವೇಟ್ ಲಿಮಿಟೆಡ್, ಮಂಗಳೂರು.
139. ಶಿವರಾಮ ಕಾರಂತ. ಕೆ, ಮರಳಿ ಮಣ್ಣಿಗೆ, ಎಸ್. ಬಿ. ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, 1990.
140. ಶಿವರಾಮಯ್ಯ, ಸಾಹಿತ್ಯ ಪರಿಸರ, ಪ್ರಕಾಶಕರು, ವೈಚಾರಿಕ ಪುಸ್ತಕ ಮಾಲೆ, ಚಿಕ್ಕಮಗಳೂರು, 1993.
141. ಶಿವರುದ್ರಪ್ಪ, ಜಿ.ಎಸ್, ಕಾವ್ಯಾರ್ಥ ಚಿಂತನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2002,5ನೇ ಮುದ್ರಣ
142. ಶಿವರುದ್ರಪ್ಪ,ಜಿ.ಎಸ್, ಚೆಲುವು ಒಲವು, ತ.ವೆಂ.ಸ್ಮಾರಕ ಗ್ರಂಥ ಮಾಲೆ, ಮೈಸೂರು, 1982, 5ನೇ ಮುದ್ರಣ
143. ಶಂಕರನಾರಾಯಣ.ತೀ.ನಂ, ಸಂಕೀರ್ಣ ಜಾನಪದ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು 1974.
144. ಶಂಪಾ ದೈತೋಟ, ಕಾರಂತರು ಮತ್ತು ಪರಿಸರ, ಕರ್ನಾಟಕ ಸಂಘ ಪುತ್ತೂರು, ದಕ್ಷಿಣ ಕನ್ನಡ1994.
145. ಶ್ರೀಕಂಠಯ್ಯ ತೀ. ನಂ. ಆಯ್ದು ವಿಮರ್ಶಾ ಲೇಖನಗಳು, ಶೃಂಗಾರ ಪ್ರಕಾಶನ, ಚಿಕ್ಕನಾಯಕನ ಹಳ್ಳಿ, 1996.
146. ಶ್ರೀಕಂಠಯ್ಯ.ತೀ.ನಂ, ಭಾರತೀಯ ಕಾವ್ಯಮಿಮಾಂಸೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1990, 5ನೇ ಮುದ್ರಣ
147. ಶ್ರೀನಿವಾಸ, ಕಾಕನ ಕೋಟೆ, ಜೀವನ ಕಾರ್ಯಾಲಯ ಪ್ರಕಾಶನ, ಬೆಂಗಳೂರು 1988.
148. ಶ್ರೀನಿವಾಸ,ಹಾವನೂರು, ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1974.
149. ಶ್ರೀಧರ.ಎಂ.ಕೆ, ಮೌನ ಸಾಹಸಯಾತ್ರೆ, ಜನರಲ್ ತಿಮ್ಮಯ್ಯ, ರಾಷ್ಟ್ರೀಯ ಸಾಹಸ ಅಕಾಡೆಮಿ, 1991.
150. ಶ್ರೀಧರ್.ಎಂ.ಕೆ, ಚಾರಣ ಪರಿಸರ, ತೇಜಸ್ವಿನೀ ಪ್ರಕಾಶನ, ಬೆಂಗಳೂರು, 1994.
151. ಶ್ರೀರಾಮಕೃಷ್ಣ ಆಶ್ರಮ, ವೇದಕುಸುಮಾಂಜಲಿ, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, 1984.
152. ಶಾಂತಿನಾಥ ದೇಸಾಯಿ, ಓಂಣಮೋ, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರೀಬ್ಯೂಟರ್ಸ್, ಬೆಂಗಳೂರು, 1998.
153. ಸಿದ್ಧರಾಮಯ್ಯ. ಎಸ್. ಜಿ, ಸೊಲ್ಲು ಫಲವಾಗಿ, ಕನ್ನಡ ಸಂಘ, ಕ್ರೈಸ್ತ ಕಾಲೇಜು, ಬೆಂಗಳೂರು, 1997.
154. ಸಿದ್ಧಲಿಂಗಯ್ಯ, ಏಕಲವ್ಯ, ಅಜಂತ ಪ್ರಕಾಶನ, ಬೆಂಗಳೂರು, 1986.
155. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮ ಪ್ರಭುದೇವರ ವಚನ ನಿರ್ವಚನ ಸಂಪುಟ–1, ಜಗದ್ಗುರು ಶ್ರೀಶಿವರಾತ್ರೇಶ್ವರ

ಗ್ರಂಥಮಾಲೆ, ಮೈಸೂರು, 1998.
156. ಸುಚೇತನ ಸ್ವರೂಪ, ಮೋಹಿನಿ ಕನಸು, ಹಸಿರು ನಿತ್ಯ ಪ್ರಕಾಶನ, ಮೈಸೂರು, 1997.
157. ಸುಮತೀಂದ್ರ ನಾಡಿಗ, ಪಂಚಭೂತಗಳು, ಸ್ವಪ್ನ ಬುಕ್‌ಹೌಸ್, ಬೆಂಗಳೂರು, 1981.
158. ಸುಮತೀಂದ್ರ ನಾಡಿಗ, ತಬ್ಬಲಿಗಳು, ಶಿಲ್ಪ ಪ್ರಕಾಶನ, ಬೆಂಗಳೂರು, 1981.
159. ಸಂಗಮನಾಥ. ಜಿ. ಹಂಡಿ, ಸಹೃದಯ ಸ್ಫುರಣ, ಪ್ರಕಾಶಕರು. ತ.ವೇಂ. ಸ್ಮಾರಕ ಗ್ರಥಮಾಲೆ, ಮೈಸೂರು, 1973, 3ನೇ ಮುದ್ರಣ
160. ಹೆಗಡೆ.ಎಸ್.ಆರ್, ಪುರಾಣ ಜಿಜ್ಞಾಸೆ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1976, 2ನೇ ಮುದ್ರಣ

2. III. ಸಂಪಾದನ ಕೃತಿಗಳು:

1. ಅಮರೇಶ ನುಗಡೋಣಿ, ಸಣ್ಣ ಕಥೆಗಳು–1997, ಸಾಹಿತ್ಯ ಅಕಾಡಮಿ, ಬೆಂಗಳೂರು, 1998.
2. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಬಾವುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1984, 2ನೇ ಮುದ್ರಣ
3.ಕರ್ನಾಟಕ ವಿಶ್ವವಿದ್ಯಾನಿಲಯ, ಮಹಾಕವಿ ಪಂಪ ಹಾಗೂ ಅವನ ಕೃತಿಗಳು, ಕರ್ನಾಟಕ ವಿಶ್ವವಿದ್ಯಾನಿಲಯ,ಧಾರವಾಡ, 1969, 9ನೇ ಮುದ್ರಣ
4. ಕಮಲ ಹೆಮ್ಮಿಗೆ, ದೇವರಿಗೇ ಶರಣೆನ್ನುವೆನೇ, ಪ್ರಭಾ ಪಬ್ಲಿಷರ್ಸ್, ಧಾರವಾಡ, 1994.
5. ಕಾಳೇಗೌಡ ನಾಗವಾರ, ಬಯಲು ಸೀಮೆಯ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1973.
6. ಕೃಷ್ಣ.ಎಸ್. ದರಿದ್ರರ ಮಾರ್ಕ್ಸ್ ಕಾರ್ಡು ಸಾಹಿತ್ಯ, ಪುಷ್ಪ ಪ್ರಕಾಶನ, ಮಂಡ್ಯ, 1997.
7. ಕೃಷ್ಣ ಮೂರ್ತಿ.ಎಚ್.ಆರ್, ಪ್ರಕೃತಿ ದರ್ಶನ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, 1995.
8. ಗೋಪಿನಾಥ್,ಎಂ, ನಾಗಲೋಕ, ಪಬ್ಲಿಷ್ಡ್ ಬೈ ಅಂಬೇಡ್ಕರ್ ಸ್ಟಡೀ ಸರ್ಕಲ್, ಬೆಂಗಳೂರು, 1990.
9. ಗಂಗಾ ಪಾದೇಕಲ್, ಸಣ್ಣಕಥೆ–1994, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1996.
10. ಚನ್ನಪ್ಪ. ಎಸ್, ಕುವೆಂಪು ಸಾಹಿತ್ಯ ಸಪ್ತಾಹ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1999.
11. ಚನ್ನಪ್ಪ. ಎಸ್, ಬೇಂದ್ರೆ ಕಾವ್ಯ ಸಮೀಕ್ಷೆ, ನಂದಿ ಎಂಟರ್ ಪ್ರೈಸಸ್, ಬೆಂಗಳೂರು, 1999.
12. ಚನ್ನವೀರ ಕಣವಿ, ರಾಘವೇಂದ್ರರಾವ್.ಕೆ, ಆಧುನಿಕ ಕನ್ನಡ ಕಾವ್ಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1982.
13.ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂದಿ, ದೊರೆಸ್ವಾಮಿ ಎಂ. ಆರ್, ಪರಿಸರ, ಮೈತ್ರಿ ಪ್ರಕಾಶನ, ಗೋಕಾಕ್, 1982.
14.ದಾಮೋದರ ರಾವ್, ರಾಮದಾಸ್. ಬಿ, ಗೋಪಾಲ ಕೃಷ್ಣ ಅಡಿಗರ ಆಯ್ದ ಕವನಗಳು, ಅಕ್ಷರ ಪ್ರಕಾಶನ ಸಾಗರ. 1968.
15. ನಾಗಭೂಷಣ ಸ್ವಾಮಿ.ಓ.ಎಲ್, ನಮ್ಮ ಕನ್ನಡ ಕಾವ್ಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1997.
16. ನಾರಾಯಣಗೌಡ.ನಂ, ಚೌಡಿಕೆ ಕಾವ್ಯ, ಸಂಯುಕ್ತ ಪ್ರಕಾಶನ, ಮೈಸೂರು, 1974.
17. ಪಠಾಣಿ ಪಟ್ನಾಯಕ್, ಒರಿಯಾ ಕಥೆಗಳು, ನ್ಯಾಷಿನಲ್ ಬುಕ್ ಟ್ರಸ್ಟ್ ಇಂಡಿಯಾ 1992, 2ನೇ ಮುದ್ರಣ.
18. ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ, 1992, 2ನೇ ಮುದ್ರಣ
19. ಬಸವರಾಜು.ಎಲ್, ಅಲ್ಲಮನ ವಚನ ಚಂದ್ರಿಕೆ, ನಳಿನೀಶಂಕರ ಪ್ರಕಾಶನ, ಮೈಸೂರು, 1960.
20. ಬೈರೇಗೌಡ.ಎಂ, ತಿಮ್ಮಯ್ಯ.ತಾ.ಸಿ, ಅರ್ಕಾವತಿ, 67 ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999.
21. ಬೋರಲಿಂಗಯ್ಯ.ಹಿ.ಚಿ, ಮಂಟೇಸ್ವಾಮಿ, ಕನ್ನಡ ವಿಶ್ವವಿದ್ಯಾನಿಲಯ, ಮೈಸೂರು, 1974.
22. ಭಟ್.ಎಲ್.ಜಿ, ಹಾಲಕ್ಕಿ ಪಾಯಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974
23. ಮಲ್ಲಿಕಾರ್ಜುನ ಅಲೇಗಾವಿ, ರೇವಣ್ಣ. ಕೆ. ಎಂ, ಮತ್ತಿತರರು, ಹಸಿರು ತೋರಣ, ಜಿಲ್ಲಾ ಲೇಖಕರ ಸಂಘ, ಚಿಕ್ಕಮಗಳೂರು, 1993.

24. ಮಾಲಿನಿ ಮಲ್ಯ.ಬಿ, ಶಿವರಾಮ ಕಾರಂತರ ಲೇಖನಗಳು, ಸಂಗ್ರಹ–7, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 1995.
25. ಮಾಲಿನಿ ಮಲ್ಯ.ಬಿ, ಶಿವರಾಮ ಕಾರಂತರ ಲೇಖನಗಳು, ಸಂಗ್ರಹ–2, ಮಂಗಳೂರು. ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ, 1994.
26. ಮಾಲಿನಿ ಮಲ್ಯ.ಬಿ, ಶಿವರಾಮಕಾರಂತರ ಲೇಖನಗಳು, ಸಂಗ್ರಹ–4 ಮಂಗಳೂರು. ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ, 1994.
27. ರಘುನಾಥ.ಎನ್.ಎಸ್, ಹದಿ ಹೆಜ್ಜೆ, ಪೊಯೆಟ್ರಿ ಸೊಸೈಟಿ ಇಂಡಿಯಾ, ನವದೆಹಲಿ, ಪ್ರಾದೇಶಿಕ ಶಿಕ್ಷಣ ಕಾಲೇಜು, ಮೈಸೂರು, 1994.
28. ರಾಘವೇಂದ್ರ ರಾವ್.ಎಚ್.ಎಸ್, ಸಾಹಿತ್ಯ ವಿಮರ್ಶೆ–1984, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1985.
29. ರಾಘವೇಂದ್ರ ಪಾಟೀಲ್, ಸಂವಾದ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ, 1993.
30. ರಾಜಶೇಖರ.ಪಿ.ಕೆ, ಮಲೆಯ ಮಹದೇಶ್ವರ, ಪ್ರಕಾಶಕರು, ಪಿ.ಕೆ. ರಾಜಶೇಖರ, ಸಂಶೋಧನಾ ವಿದ್ಯಾರ್ಥಿ, 1972
32. ಲಂಕೇಶ್.ಪಿ, ಅಕ್ಷರ ಹೊಸ ಕಾವ್ಯ, ಪತ್ರಿಕೆ ಪ್ರಕಾಶನ, ಬೆಂಗಳೂರು, 1993.
33. ಲಂಕೇಶ್.ಪಿ, ಟೀಕೆ ಟಿಪ್ಪಣಿ, ಪತ್ರಿಕೆ ಪ್ರಕಾಶನ, ಬೆಂಗಳೂರು, 1991.
34. ವಕೀಲ್ ಧಾರವಾಡ, ಆಲೂರ್.ವಿ.ಬಿ, ಸುಖವೂ ಶಾಂತಿಯೂ 2ನೇ ಭಾಗ, ಜೆ. ಟಿ. ಎ. ಪ್ರಿಂಟೆಡ್ ಪ್ರೆಸ್, ಮೈಸೂರು.
35. ವಾಮನ ಬೇಂದ್ರೆ, ದ.ರಾ. ಬೇಂದ್ರೆ ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ, ಧಾರವಾಡ, 1974.
36. ವಿದ್ಯಾಶಂಕರ್.ಎಸ್, ಸಂಕೀರ್ಣ ವಚನ ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1993.
37. ವೀರಣ್ಣ. ಸಿ. ಕನ್ನಡ ಪ್ರತಿಭಟನೆ ಕಾವ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1981.
38. ವೆಂಕಟೇಶ್‌ಮೂರ್ತಿ.ಎಚ್.ಎಸ್, ರಾಘವೇಂದ್ರ ಪಾಟೀಲ, ಹೊಸ ಕಾವ್ಯದ ಮುನ್ನೆಲೆ–1, ಸುಂದರ ಪುಸ್ತಕ ಪ್ರಕಾಶನ, ಧಾರವಾಡ, 1979.
39. ವೆಂಕಟೇಶಮೂರ್ತಿ.ಎಚ್.ಎಸ್, ರಾಘವೇಂದ್ರ ಪಾಟೀಲ, ಹೊಸ ಕಾವ್ಯದ ಮುನ್ನೆಲೆ–2 , ಸುಂದರ ಪುಸ್ತಕ ಪ್ರಕಾಶನ, ಧಾರವಾಡ, 1983.
40. ಶಿವರಾಮ ಕಾಡನ ಕುಪ್ಪೆ, ಶಿವರಾಮ ಕಾರಂತರ ಹತ್ತು ಅಧ್ಯಯನಗಳು, ಭಾರತೀ ಪ್ರಕಾಶನ, ಮೈಸೂರು, 1982.
41. ಶಿವರುದ್ರಪ್ಪ.ಜಿ,ಎಲ್, ಸಾಹಿತ್ಯ ವಿಮರ್ಶೆ1975, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1977.
42. ಶಿವಪ್ರಕಾಶ,ಎಚ್.ಎಸ್, ಆರು ನಾಟಕಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1993.
43. ಶಿವ ಬಸವಸ್ವಾಮಿಗಳು, ಇಮ್ಮಡಿ, ಅಲ್ಲಮ ಪ್ರಭುವಿನ ಟೀಕಿನ ವಚನಗಳು, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 1986.
44. ಶಿವಾರೆಡ್ಡಿ, ಶತಮಾನದ ಕವಿತೆ ಜೋಗಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999.
45. ಶ್ರೀಕಂಠಶಾಸ್ತ್ರೀ.ಎಸ್, ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1954.
46. ಸಿದ್ಧಲಿಂಗಯ್ಯ.ಜಿ.ಎಸ್, ಮಿತ್ರ. ಅ. ರಾ, ಪ್ರಾಚೀನ ಕಾವ್ಯಮಾರ್ಗ2, ಬೆಂಗಳೂರು, 1998.
47. ಕನ್ನಡ ಸಾಹಿತ್ಯ ಸಂಘ, ಕನ್ನಡ ಕಾದಂಬರಿ ಸಮೀಕ್ಷೆ, ಸಾಹಿತ್ಯ ನಂದನ, ಮೈಸೂರು, 1987.
48. ವಿಮರ್ಶಾ ಮಾರ್ಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ. ವಿ. 1992.
49. ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ ಸಂಪುಟ–1, ಕ. ಅ. ಸಂಸ್ಥೆ, ಮೈಸೂರು, 1974.
50. ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ ಸಂಪುಟ–2, ಕ. ಅ. ಸಂಸ್ಥೆ, ಮೈಸೂರು, 1975.
53. ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ ಸಂಪುಟ–4, ಕ.ಅ. ಸಂಸ್ಥೆ, ಮೈಸೂರು, 1977.
54. ಸುವರ್ಣ ಸಂಪುಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1980.
55. ಸುವರ್ಣ ಸಂಪುಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1985.
56. ಸಂಪಾದನ ಮಂಡಳಿ, ದಶವಾರ್ಷಿಕ ಸಣ್ಣ ಕಥೆಗಳು–1974–83, ಕರ್ನಾಟಕ ಸಾಹಿತ್ಯ ಅಕಾಡೆಮಿ,

ಬೆಂಗಳೂರು, 1989, 2ನೇ ಮುದ್ರಣ
57. ಹನುಮಂತರಾವ್, ವೆಂಕಟರಾವ್ ಕು. ಗೊರಾಬಾಳಿ, ಸೃಷ್ಟಿ ಪ್ರಕರಣ ಸುಳಾದಿಗಳು, ಪ್ರಕಾಶಕರು ಶ್ರೀವರದೇಂದ್ರ ಶ್ರೀಹರಿ, ದಾಸ ಸಾಹಿತ್ಯ ಮಂಡಳಿ, ಲಿಂಗಸೂಗೂರ, ರಾಯಚೂರು, 1948.
58. ಹಾಮಾನಾ, ಸಂವಾದ, ಉಷಾ ಸಾಹಿತ್ಯ ಮಾಲೆ, ಮೈಸೂರು, 1972.
59. ಹಿರೇಮಠ.ಆರ್.ಸಿ, ಕಲಬುರ್ಗಿ.ಎಂ.ಎಂ, ಕನ್ನಡ ಶಾಸನ ಸಂಪದ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1968.

2. IV. ವೈಚಾರಿಕ ಮತ್ತು ವೈಜ್ಞಾನಿಕ ಕೃತಿಗಳು:

1. ಅನಂತ ನಾರಾಯಣ, ಎಲ್ಲೆಯರಿಯದ ಕಡಲು, ಮಯೂರ ಪ್ರಕಾಶನ, ಮೈಸೂರು, 1965.
2. ಅಮೀರ್ ಅಹ್ಮದ್.ಟಿ.ಎಂ, ನಮ್ಮ ಪರಿಸರ, ಪ್ರಕಾಶಕರು ಶ್ರೀಮತಿ ಎಸ್. ಎಂ. ಫೆಹಮಿದಾ ಬೇಗಮ್, ಜಯನಗರ, ಬೆಂಗಳೂರು, 1999.
3. ಅರೈಯರ್, ಪ್ರಕೃತಿ ಜೀವನದ ತಾತ್ವಿಕ ಆಧಾರ, ಗಾಂಧೀ ಸಾಹಿತ್ಯ, ಬೆಂಗಳೂರು, 1981.
4. ಅಶೋಕ. ಟಿ. ಪಿ, ವಾಸ್ತವತಾವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1999.
5.ಆನಂದರಾಮ ಮಡಿ.ಎಸ್, ಸಸ್ಯಗಳ ಪರಿಸರ ವಿಜ್ಞಾನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1988.
6. ಉಲ್ಲಾಸ ಕಾರಂತ. ಕೆ, ಅರಣ್ಯ ಮತ್ತು ಸಮಾಜ, ಅಕ್ಷರ ಪ್ರಕಾಶನ, ಹೆಗ್ಗೋಡು, 1985.
7. ಉಲ್ಲಾಸ ಕಾರಂತ. ಕೆ, ಕಾಡು ಪ್ರಾಣಿಗಳ ಜಾಡಿನಲ್ಲಿ, ಅತ್ರಿ ಬುಕ್ ಸೆಂಟರ್, ಮಂಗಳೂರು, 2001.
8. ಕರ್ನಾಟಕ ವಿಮೋಚನ ರಂಗ, ಕೊಜೆಂಟ್ರಿಕ್ಸ್ ವಿದ್ಯುತ್ತಿನ ವಿಪ್ಪತ್ತು, ಕ. ವಿ. ರ, 1995.
9. ಕಾರ್ಲ್‌ಮಾರ್ಕ್ಸ್ ಮತ್ತು ಎಂಗಲ್ಸ್, ಕಮ್ಯುನಿಸ್ಟ್ ಪಾರ್ಟಿ ಪ್ರಣಾಳಿಕೆ, ಪಗ್ರತಿ ಪ್ರಕಾಶನ ಮಾಸ್ಕೊ ಜಯನಗರ, ಬೆಂಗಳೂರು. 1999.
10. ಕೃಷ್ಣಾನಂದ ಕಾಮತ್, ಪ್ರಾಣಿ ಪರಿಸರ, ಮನೋಹರ ಗ್ರಂಥಮಾಲೆ, ಧಾರವಾಡ, 1975.
11. ಕೃಷ್ಣಪ್ಪ ಶೆಟ್ಟಿ. ಪಿ. ನಟರಾಜ್. ಡಿ. ಆರ್, ಪರಿಸರ ಮುಂದೇನು?, ಪರಿಸರ ವಿಜ್ಞಾನ ಪರಿಷತ್ತು ಮತ್ತು ಜವಹರಲಾಲ್ ನೆಹರು ಸೆಂಟರ್ ಫಾರ್ ಆಡವಾನ್ಸಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು, 1997.
12. ಕೃಷ್ಣಸ್ವಾಮಿ ಅಜ್ಜಂಪುರ, ಅರಣ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, 1998.
113. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು–ಸಾವಿನ ನಡುವೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
14. ಘನಶ್ಯಾಮ್. ಕೆ. ವಿ, ಕಡಲಿನ ಒಡಲು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1996.
15. ಚಂದ್ರಪುಜಾರಿ. ಎಂ, ಪರಿಸರ ಮತ್ತು ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1998.
16. ಚಂದ್ರ ಮೂರೂರು, ಪ್ರಪಂಚ ಪರಿಸರ, ಮದುಚಂದ್ರ ಪ್ರಕಾಶನ, ಬೆಂಗಳೂರು, 1998.
17. ಜಗದೀಶ ಕೊಪ್ಪ. ಎನ್, ಅಣುವೆಂಬ ಸದ್ದಿಲ್ಲದ ಸಾವಕುರಿತು, ಲೋಹಿಯಾ ಪ್ರಕಾಶನ, ಬಳ್ಳಾರಿ, 1999.
18. ಜಯದೇವ. ಜಿ. ಎಸ್, ಪರಿಸರದ ಸ್ವರೂಪ, ಇಂದ್ರ ಪ್ರಸ್ಥ ಪ್ರಕಾಶನ, ಬೆಂಗಳೂರು, 1995.
19. ತಿರುಮಲೇಶ. ಕೆ. ವಿ, ಅಸ್ತಿತ್ವವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1999, 2ನೇ ಮುದ್ರಣ
20. ನರೇಂದ್ರ ಎಂ.ಆರ್, ಪ್ರಳಯ–1999, ವಿದ್ಯಾನಿಧಿ ಪ್ರಕಾಶನ, ಮೈಸೂರು, 1992, 3ನೇ ಮುದ್ರಣ
21. ನಾಗಭೂಷಣ ರಾವ್ ಸಿಂಧೆ, ಜೀವ ಜೀವನ, ಮೈತ್ರಿ ಪ್ರಕಾಶನ, ಮಂಗಳೂರು, 1970.
22. ನಾಗೇಶ್ ಹೆಗಡೆ, ಇರುವುದೊಂದೆ ಭೂಮಿ, ಅಕ್ಷರ ಪ್ರಕಾಶನ, ಸಾಗರ, 1998.
23. ನಾರಾಯಣರಾವ್.ಜಿ. ಟಿ, ವೈಜ್ಞಾನಿಕ ಮನೋಧರ್ಮ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1993, 3ನೇ. ಮುದ್ರಣ
24. ನಾರಾಯಣರಾವ್.ಎ, ಪ್ರಾಣಿ ಜೀವನ, ಮೈಸೂರು ವಿಶ್ವವಿದ್ಯಾನಿಲಯ, 1945.
25. ಪುಟ್ಟಸ್ವಾಮಿ. ಕೆ, ಕೃಪಾಕರ ಸೇನಾನಿ, ಜೀವ ಜಾಲ, ಹಸಿರು ಪ್ರಕಾಶನ, ಬೆಂಗಳೂರು, 1999.
26. ಪೂರ್ಣಚಂದ್ರ ತೇಜಸ್ವಿ.ಕೆ.ಪಿ, ನಾಗೇಶ ಹೆಗಡೆ, ವಿವೇಕಾನಂದ. ಟಿ. ಎಸ್, ಕಿರಿಯರಿಗಾಗಿ ಪರಿಸರ, ಇಂದ್ರ ಪ್ರಸ್ಥ ಪ್ರಕಾಶನ, 1991.
27. ರವಿಕುಮಾರ. ಎಸ್. ಕದಳೀವನ ಕರ್ಪೂರ, ಅಭಿನವ ಪ್ರಕಾಶನ, ಬೆಂಗಳೂರು, 1996.

28. ರಾಘವೇಂದ್ರರಾವ್.ಎಚ್.ಎಸ್, ಪ್ರಗತಿಶೀಲತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1999.
29. ರಾಮಕೃಷ್ಣ ಮೂರ್ತಿ.ಕೆ.ಎಸ್, ಜ್ಞಾನ ಕೋಶ, ಸುಭಾಷ್ ಸ್ಟೋರ್ಸ್, ಬೆಂಗಳೂರು, 1986.
30. ರಾಮಪ್ರಸಾದ್.ಎಸ್, ನಿಕೊಲಸ್ ಕೊಪರ್ನಿಕಸ್, ಅಭಿಜಿತ್ ಪ್ರಕಾಶನ, ಮೈಸೂರು, 1997.
31. ರಾವ್.ಎಂ.ಎಸ್.ಎಸ್. ಪೃಥ್ವಿ ಮತ್ತು ಜೀವಿಗಳ ರೂಪಾಂತರ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1970.
32. ಶಿವರಾಮ ಕಾರಂತ.ಕೆ, ಪ್ರಾಣಿ ಪ್ರಪಂಚ. ಎಸ್.ಬಿ.ಎಸ್. ಪಬ್ಲಿಕೇಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, 1944, 2ನೇ ಮುದ್ರಣ
33. ಶಿವರಾಮ ಕಾರಂತ. ಕೆ, ಹಿರಿಕಿರಿಯ ಹಕ್ಕಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1971.
34. ಶಿವರಾಮಕಾರಂತ. ಕೆ, ವಿಜ್ಞಾನ ಪ್ರಪಂಚ ಭಾಗ–1 ಈ ಜಗತ್ತು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1979.
35. ಶಿವರಾಮ ಕಾರಂತ. ಕೆ, ಎಂದೆಂದೂ ಇಲ್ಲದ ಹಕ್ಕಿ, ಡಿ.ಬಿ.ಎಚ್. ಪ್ರಕಾಶನ, ಬೆಂಗಳೂರು 1989.
36. ಶಿವರಾಮ ಕಾರಂತ. ಕೆ, ವಿಜ್ಞಾನ ಪ್ರಪಂಚ ಭಾಗ–2 ಜೀವ ಜೀವನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1980, 2ನೇ ಮುದ್ರಣ
37. ಶಿವರಾಮ ಕಾರಂತ.ಕೆ, ವಿಜ್ಞಾನ ಪ್ರಪಂಚ ಭಾಗ–3 ವಸ್ತು, ಚೈತನ್ಯ. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1980, 2ನೇ ಮುದ್ರಣ
38. ಶಿವರಾಮ ಕಾರಂತ. ಕೆ, ಪರಿಸರ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1995.
39. ಶಿವರಾಮ ಪೈ. ಪಿ, ನಮ್ಮ ಪರಿಸರ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, 2000.
40. ಶೇಷಗಿರಿರಾವ್. ಡಿ, ಸಸ್ಯ ಸಂರಕ್ಷಣೆ ಕೈಪಿಡಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1971.
41. ಸಿದ್ದವೀರೇಗೌಡ, ಮಾನವನ ಉಗಮ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1969.
42. ಸಿದ್ದರಾಮಯ್ಯ.ಎಸ್.ಜಿ, ಕೆರೆಗೆ ಹಾರವನ್ನು ಕುರಿತು, ವೈಚಾರಿಕ ಪುಸ್ತಕ ಮಾಲೆ, ಚಿಕ್ಕಮಗಳೂರು, 1993.
43. ಸೀಬಯ್ಯ.ಎಲ್. ಸುಬ್ಬರಾಯಪ್ಪ,ಬಿ.ವಿ, ಸಾಮಾನ್ಯ ವಿಜ್ಞಾನ, ಮೈಸೂರು, 1960.
44. ಸುಧಾ ಮೂರ್ತಿ, ಅಟ್ಲಾಂಟಿಕದಾಚೆಗೆ, ಮನೋಹರ ಗ್ರಂಥಮಾಲೆ, ಧಾರವಾಡ, 1981.
45. ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ, ವಿಜ್ಞಾನ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1969.
46, Anil Kumar De., **Environmental Chemistry,** Wiley Eastern Limeted - New Delhi - 1987.
47. Carlo. Dunbar, **The earth,** Weiden feld & Niclson, London - WI- 1966.
48. Cook. A. H, **Physics of The earth and Planets,** The Macmillan Press Ltd.- 1973.
49. Carey Eroneis William. C Krumbein, **Down to Earth,** University of Chicago Press, Chicago and London - 1963.
50. Georgy Gamow, **Giography of The Earth,** Macmillan and VCo Ltd., London - 1959.
51. Richard Carrington : **The Story of our Earth,** Happer and Brothers Publishers, new Yeark- 1956.
52. Ruth Moore, **The Earth we Live on**, Jonathan Cape Thirty Bedford - Square London- 1957.
53. Robert M. Gurnels, **Text Book of Geology,** Harper and Brothers Publishers, New Yeark - 1951.
54. Sharma. P. D., **Ecology and Environment,** Rastogi Publications, India - 1994-95 (Sixth Edition).
55. Gregory. J. W, **Geology of To- Day, Seeley,** Service and Co. limited, London - 1915.

2.V. ಅನುವಾದಿತ ಕೃತಿಗಳು:

1. ಅರುಣ್ ಕುಮಾರ್ ಮುಖ್ಯೋಪಾಧ್ಯಾಯ, ಇಪ್ಪತ್ತೊಂದು ಬಂಗಾಳಿ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, 1994.
2. ಗಣೇಶ್‌ಶೈಣೈ ಮುನಿಯಲ್, ಮರುಭೂಮಿ ಕಾಡಾಯಿತು, ದಿಗಂತ ಸಾಹಿತ್ಯ, ಮಂಗಳೂರು, 1977.
3. ಗುರುನಾಥ್, ಜೋಶಿ, ಆರುಬಿಘೆ ಭೂಮಿ, ಸಾಹಿತ್ಯ ಅಕಾಡೆಮಿ, ಬೆಂಗಳೂರು, 1996, 2ನೇ ಮುದ್ರಣ
4. ಗೋಪಾಲಕೃಷ್ಣ ರಾವ್.ಕೆ.ಎಲ್, ಮಾರ್ಕ್ಸ್ ಕೂಲಿ. ಬೆಲೆ ಮತ್ತು ಲಾಭ, ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ, ಮಾಸ್ಕೋ ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 1987, 2ನೇ ಮುದ್ರಣ

5. ನಾಗೇಗೌಡ.ಎಚ್.ಎಸ್, ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, 1974, 2ನೇ ಮುದ್ರಣ
6. ನಾಗೇಶ ಹೆಗಡೆ, ಪರಿಸರ ಪ್ರಜ್ಞೆ:ನಗರ ನಿರ್ಮಾಣ, ಓರಿಯಂಟ್ ಲಾಂಗ್‌ಮನ್, ಮದ್ರಾಸ್, 1993.
7. ರಾಜಶೇಖರ. ಜಿ, ಪರಿಸರ ರಕ್ಷಣೆ ಮತ್ತು ಸಮಾಜವಾದ, ಅಕ್ಷರ ಪ್ರಕಾಶನ, ಸಾಗರ, 1985.
8. ಶಿವಪ್ಪ. ಡಿ. ಎಸ್. ಜೀವಂತ ಭೂಮಿ, ಗೀತಾ ಬುಕ್ ಹೌಸ್, ಮೈಸೂರು, 1969.
9. ಶಿವರಾಮ ಕಾರಂತ. ಕೆ, ಭಾರತದ ಪರಿಸರದ ಪರಿಸ್ಥಿತಿ–1982, ಅಕ್ಷರ ಪ್ರಕಾಶನ, ಸಾಗರ, 1984.

2.VI. ಸಂಶೋಧನಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳು:

1.ಅನಂತನಾರಾಯಣ. ಎಸ್, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ–1962, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, 1976, 2ನೇ ಮುದ್ರಣ
2.ಕುಶಾಲ. ಬಿ.ಸಿ, ಆಧುನಿಕ ಕನ್ನಡ ಸಾಹಿತ್ಯ: ಪರಿಸರ ಪ್ರಜ್ಞೆ ಮತ್ತು ಜೀವನ ದರ್ಶನ, ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996.
3. ಚಿದಾನಂದ ಮೂರ್ತಿ. ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿ. ವಿ. ಮೈಸೂರು, 1966.
4. ತಿಪ್ಪೇರುದ್ರಸ್ವಾಮಿ.ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪ್ರಕಾಶಕರು, ಡಿ.ವಿ.ಕೆ.ಮೂರ್ತಿ, ಮೈಸೂರು, 1968.
5. ನಾಗರಾಜು. ಡಿ. ಆರ್, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, 1993.
6. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ–1960, ನಿವೇದಿತ ಪ್ರಕಾಶನ, ಮೈಸೂರು, 1981, 2ನೇ ಮುದ್ರಣ
7. ರಹಮತ್ ತರೀಕೆರೆ, ಆಧುನಿಕ ಕನ್ನಡ ಕಾವ್ಯ ಮತ್ತು ಪ್ರತಿಭಟನೆ, ಪಿ.ಎಚ್.ಡಿ. ಪ್ರಂಬಂಧ, ಮೈ.ವಿ. ವಿ.ಮೈಸೂರು, 1987.
8. ರೇವಣ್ಣ ಮೈಲಹಳ್ಳಿ, ಚಿತ್ರದುರ್ಗ ಜಿಲ್ಲೆಯ ಮಾದಾರ ಜಾನಪದ ಸಾಹಿತ್ಯ, ಪಿ.ಎಚ್.ಡಿ. ಪ್ರಬಂಧ, ಮೈ.ವಿ.ವಿ. ಮೈಸೂರು.
9. ಸುವರ್ಣಲತಾ, ಕುವೆಂಪು ಕಾದಂಬರಿಗಳಲ್ಲಿ ಪ್ರಕೃತಿ ಒಂದು ಅಧ್ಯಯನ, ಪಿ.ಎಚ್.ಡಿ. ಪ್ರಬಂಧ, ಮೈ.ವಿ.ವಿ. 1999.
10. ಹರೀಶ್.ಪಿ.ಎನ್. ಕೊಡಗಿನ ಎರವರು: ಒಂದು ಅಧ್ಯಯನ, ಪಿ.ಎಚ್.ಡಿ. ಪ್ರಬಂಧ, ಮೈ.ವಿ.ವಿ.ಮೈ, 1988.

2.VII. **ಇತಿಹಾಸದ ಕೃತಿಗಳು :**

1. ಭಗವಾನ್. ಕೆ. ಎಸ್, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮ ಪ್ರಕಾಶನ, ಮೈಸೂರು, 1990.
2. ಶರ್ಮ,ಆರ್.ಎಸ್, ಅನು: ಶಂಕರನಾರಾಯಣರಾವ್.ಎನ್. ಪಿ, ಪ್ರಾಚೀನ ಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1997.
3. ಸದಾಶಿವ. ಕೆ, ಭಾರತದ ಇತಿಹಾಸ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 1998.
4. ಸದಾಶಿವ. ಕೆ, ಸಮಗ್ರ ಭಾರತದ ಇತಿಹಾಸ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2004

2. VIII. ವಿಶ್ವಕೋಶ ಮತ್ತು ಅರ್ಥಕೋಶಗಳು:

1.ಇಂಗ್ಲೀಷ ಕನ್ನಡ ಪರಿಸರ ನಿಘಂಟು, ಪರಿಸರ ಇಕಾಲಜಿಗಳ ವಿಸ್ತೃತ ವಿವರಣಾತ್ಮಕ ಅರ್ಥಕೋಶ ವಿವೇಕಾನಂದ ಟಿ.ಎ. ಶೇಷಗಿರಿ ಜೋಡಿದಾರ, ಇಂದ್ರಪ್ರಸ್ಥ ಪ್ರಕಾಶನ, ಬೆಂಗಳೂರು, 1988.
2. ಇಂಗ್ಲೀಷ ಕನ್ನಡ ನಿಘಂಟು, ಸಂಪುಟ–ಎರಡು ಹಣದಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1996.
3. ಎಪಿಗ್ರಾಫಿ ಕರ್ನಾಟಕ ಸಂಪುಟ–ಆರು, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈ, 1977.
4. ಕನ್ನಡ ಕನ್ನಡ ಶಬ್ದಕೋಶ, ಗುರುನಾಥ್ ಜೋಶಿ, ಸಂಕೇಶ್ವರ ಪ್ರಿಂಟರ್ಸ್ ಪ್ರೈ. ಲಿಮಿಟೆಡ್, ಗದಗ್, 1998.
5. ಕನ್ನಡ ವಿಶ್ವಕೋಶ, ಸಂಪುಟ–ಹತ್ತು, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈ 1989.
6. ಕನ್ನಡ ವಿಶ್ವಕೋಶ, ಸಂಪುಟ–ಹನ್ನೊಂದು, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈ, 1983.
7. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಐದನೆಯ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1988.
8. ಕಾವ್ಯ ಪದ ಮಂಜರಿ, ಕನ್ನಡ ಕನ್ನಡ ನಿಘಂಟು, ಕರ್ನಾಟಕ ಸರ್ಕಾರಿ ಪ್ರಕಾಶನ ಮಂದಿರ, ಬೆಂಗಳೂರು, 1970.

9. **KANNADA-ENGLISH DICTIONARY,** REV.F.KITTEL, MANGALORE BASEL MISSION Book & Tract Despository, Ninth AES Reprint, New Delhi - 1999.
10. **SOUTH INDIAN INSCRIPTIONS, Volume XX,** Bomaby, Karnataka, Inscription Published by the Director General. Archeological Survey of India, New Delhi-1988.
11. **ENCYCLOPAEDIA, BRITANNICA, Volume-7,** Encyclopaedia Britannica Ltd, Chicago London - TORONTO.
12. **ENCYCLOPAEDIA, BRITANNICA, Volume-16,** Encyclopaedia Britannica Ltd, Chicago London - TORONTO - 1769.

2. IX. ಪತ್ರಿಕೆ ಮತ್ತು ನಿಯತಕಾಲಿಕಗಳು:

1. ಕೃಷ್ಣ ಆಲನಹಳ್ಳಿ, ಸಮೀಕ್ಷಕ, ಎರಡನೆ ಸಂಚಿಕೆ, ಫೆಬ್ರವರಿ 1966, ಸಮೀಕ್ಷಕ ಪ್ರಕಾಶನ, ಮೈಸೂರು, 1966.
2. ಕೇಶವ ಮಳಗಿ, ಉಲ್ಕೆಯ ರಾಜ್ಯದಲ್ಲಿ ನಿರ್ಸಗದ ಪ್ರಳಯ ನೃತ್ಯ, ಪ್ರಜಾವಾಣಿ ಸಾಪ್ತಾಹಿಕ ಪುರಾವಣಿ, 1999.
3. ಖೋದಾನಪುರ ಎಸ್. ಬಿ., ಎಸಂಪಾದಕವಿ, ದಿಕ್ಸೂಚಿ, ಅಕ್ಟೋಬರ್, 1998.
4. ಗೋಪಿನಾದ್ , ಬಹುಜನ್‌ವಾಯ್ಸ್ ತಿಂಗಳ ಪತ್ರಿಕೆ, ಬೆಂಗಳೂರು.
5. ಚುಟುಕ ಸಂಪುಟ–1 ಸಂಚಿಕೆ, 49 ಮೇ 1992, ಸಂಗಮ ಪ್ರಕಾಶನ, ಬೆಂಗಳೂರು.
6. ಚುಟುಕ ಸಂಪುಟ–1 ಸಂಚಿಕೆ, 3 ಜುಲೈ 1991, ಸಂಗಮ ಪ್ರಕಾಶನ, ಬೆಂಗಳೂರು.
7. ಚುಟುಕ ಸಂಪುಟ–2 ಸಂಚಿಕೆ, 27 ಡಿಸಂಬರ್ 1992, ಸಂಗಮ ಪ್ರಕಾಶನ, ಬೆಂಗಳೂರು.
8. ಚಂದ್ರಶೇಖರ ಪಾಟೀಲ, ಸಂಕ್ರಮಣ ಸಂಚಿಕೆ–1 ಸಂಪುಟ 25, ಜನವರಿ, 1990.
9. ಚಂದ್ರಶೇಖರ ಪಾಟೀಲ, ಸಂಕ್ರಮಣ ಸಂಚಿಕೆ–5 ಸಂಪುಟ 35 ಸೆಪ್ಟಂಬರ್, ಅಕ್ಟೋಬರ್ 2000, ಸಂಕ್ರಮಣ, ಪ್ರಕಾಶನ, ಬೆಂಗಳೂರು.
10. ಜಗನ್ನಾಥ. ವಿ. ಭೂಮಿ ದಿನ ಲೇಖನ, ಪ್ರಜಾವಾಣಿ ಸಾಪ್ತಾಹಿಕ ಪುರಾವಣಿ, 23, 4, 2000.
11. ನಾವಡ.ಎ.ವಿ.ಎ ಸಂ: ವಿಜ್ಞಾನ ಸಂಗಾತಿ, ಸಂಪುಟ–6, ಸಂಚಿಕೆ–7, ಮಾರ್ಚ್1999, ಕ.ವಿ.ವಿ. ಹಂಪಿ.
12. ನಾವಡ.ಎ.ವಿ. ಸಂ: ವಿಜ್ಞಾನ ಸಂಗಾತಿ, ಸಂಪುಟ6, ಸಂಚಿಕೆ–8, ಏಪ್ರಿಲ್, 1999, ಕ.ವಿ.ವಿ. ಹಂಪಿ.
3. ನಾವಡ.ಎ.ವಿ. ಸಂ: ವಿಜ್ಞಾನ ಸಂಗಾತಿ, ಸಂಪುಟ7, ಸಂಚಿಕೆ–9, ಮೇ, 1999, ಕ.ವಿ.ವಿ. ಹಂಪಿ.
4. ನಾವಡ.ಎ.ವಿ. ಸಂ: ವಿಜ್ಞಾನ ಸಂಗಾತಿ, ಸಂಪುಟ6, ಸಂಚಿಕೆ–10, ಜೂನ್, 1999, ಕ.ವಿ.ವಿ. ಹಂಪಿ.
5. ನಾವಡ.ಎ.ವಿ. ಸಂ: ವಿಜ್ಞಾನ ಸಂಗಾತಿ, ಸಂಪುಟ6, ಸಂಚಿಕೆ–2, ಅಕ್ಟೋಬರ್, 1999, ಕ.ವಿ.ವಿ. ಹಂಪಿ.
6. ನಾವಡ.ಎ.ವಿ. ಸಂ: ವಿಜ್ಞಾನ ಸಂಗಾತಿ, ಸಂಪುಟ6, ಸಂಚಿಕೆ–3, ನವಂಬರ್, 1999, ಕ.ವಿ.ವಿ. ಹಂಪಿ.
7. ನಾವಡ.ಎ.ವಿ. ಸಂ: ವಿಜ್ಞಾನ ಸಂಗಾತಿ, ಸಂಪುಟ=7, ಸಂಚಿಕೆ–11, ಜುಲೈ,2000, ಕ.ವಿ.ವಿ. ಹಂಪಿ.
8. ನಿಖಿಲ್, ನಿರೂಪಣೆಯ, ಮರುಹುಟ್ಟಿನ ಸಂಕೇತ ಈಸ್ಟರ್ ಮೊಟ್ಟೆ, ಜನವಾಹಿನಿ ದಿನ ಪತ್ರಿಕೆ, ಏಪ್ರಿಲ್ ಪ್ರಜಾವಾಣಿ ವಿಜ್ಞಾನ ವಿಶೇಷ, ಅಂತರಿಕ್ಷದಲ್ಲೊಂದು ಮಹಾಸಾಗರ, ಪ್ರಜಾವಾಣಿ, ದಿನಪತ್ರಿಕೆ,4–10–2000.
9. ಪ್ರಜಾವಾಣಿ ವಾರ್ತೆ, ಮುತ್ತೋಡಿಯಲ್ಲಿ ಪ್ರಕೃತಿ ವಿಸ್ಮಯ, 8ನೇ ಡಿಸೆಂಬರ್, 2000.
20. ಯತಿರಾಜ್. ಸಿ,ಜೀವಲೋಕದ ಕಿಂದರ ಜೋಗಿಗಳು, ಪ್ರಜಾವಾಣಿ ಸಾಪ್ತಾಹಿಕ ಪುರಾವಣಿ,20–01–2002.
21. ಯತಿರಾಜ್.ಸಿ, ಓಝೋನ್ ನಾಶದಿಂದ ವಿನಾಶದತ್ತ, ಪ್ರಜಾವಾಣಿ ಸಾಪ್ತಾಹಿಕ ಪುರವಾಣಿ, 10ನೇ ಸೆಪ್ಟಂಬರ್, 2000.
22. ರಹಮತ್ ತರೀಕೆರೆ, ಸಂ: ಕನ್ನಡ ಅಧ್ಯಯನ, ಮಳೆ ಸಂಚಿಕೆ, ಸಂಪುಟ, 1994.
23. ಯತಿರಾಜ್. ಸಿ. ಜೀವದಲ್ಲೊಂದು ಕಿಂದರ ಜೋಗಿಗಳು, ಸಾಪ್ತಾಹಿಕ ಪುರವಾಣಿ, 20, 01, 2000.
24. ರಾಜಶೇಖರ ಕೋಟಿ, ಸಂ: ಆಂದೋಲನ ದಿನ ಪತ್ರಿಕೆ, ರಾಮಕೃಷ್ಣಾರ್ಪಣ ನಂದರ ಲೇಖನ, ಹಾಡು–ಪಾಡು 12, 02, 2001.
25. ರಾಜಶೇಖರ ಕೋಟಿ, ಸಂ: ಆಂದೋಲನ ದಿನ ಪತ್ರಿಕೆ, ನರ್ಮದಾ ಉಳಿಸಿ ಹೋರಾಟದ ಪ್ರಥಮ ಸತ್ಯಾಗ್ರಹಿ ಬಾಬಾ ಅಮ್ಟೆ, 16, 09, 2001.
26. ರಾಮಚಂದ್ರ ಎನ್.ಜಿ. ಸಂ: ಟೀಕ್‌ವರ್ಲ್ಡ್ ಸಂಪುಟ–5 ಸಂಚಿಕೆ–1 ಜನವರಿ,2002 ಶ್ರೀ ಗಂಗಾಧರ ಗುರು ಟೀಕ್ ಇನ್‌ವೆಸ್ಟ್‌ಮೆಂಟ್, ಮೈಸೂರು ಲಿಮಿಟೆಡ್, ಬೆಂಗಳೂರು, 2002.
27. ರಾಮಚಂದ್ರ, ಸಂ: ಸ್ಪರ್ಧಾ ಪ್ರಪಂಚ, ಮೇಜೂನ್, 1998.

28. ರಾಮಚಂದ್ರ, ಸಂ: ಸ್ಪರ್ಧಾ ಪ್ರಪಂಚ, ನವೆಂಬರ್, 1994.
29. ರಾಮಚಂದ್ರ, ಸಂ: ಸ್ಪರ್ಧಾ ಪ್ರಪಂಚ, ಮೇ, ಜೂನ್, 1996.
30. ರುದ್ರಪ್ಪ ಉಜ್ಜೈನಿಯವರ ಲೇಖನ, ಮಳೆ ಬೀಗ ತರಲು ಪಾದಯಾತ್ರೆ, ಪ್ರಜಾವಾಣಿ ದಿನಪತ್ರಿಕೆ, ಸಾಪ್ತಾಹಿಕ ಪುರವಾಣಿ, 2002.
31. ಲಲೀತಾಂಬ ಬಿ.ವೈ, ಸುಂದರಂ ಆರ್.ವಿ. ವೆಂಕಟೇಶ್ ಮೂರ್ತಿ ಎಚ್.ಎಸ್. ಚಂದನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1998.
32. ವಸಂತ ಬನ್ನಾಡಿ, ಅರಿವು ಬರಹ, ಮಂಗಳಗಂಗೋತ್ರಿ, ಮಂಗಳೂರು, 1993.
33. ವಾಸುದೇವ. ಎನ್. ಸಸ್ಯ ವಿಕಸನದ ಸಪ್ತಪದ, ಪ್ರಜಾವಾಣಿ ಸಾಪ್ತಾಹಿಕ ಪುರವಾಣಿ, 30ನೇ ಜನವರಿ, 2000.
34. ವಾಸುದೇವ.ಎನ್. ಜಲನಿಧಿ ವಿನಾಶದಹಾದಿ, ಪ್ರಜಾವಾಣಿ ಸಾಪ್ತಾಹಿಕ ಪುರವಾಣಿ, 13ನೇ ಫೆಬ್ರವರಿ, 2000.
35. ವಾಸುಕಿ. ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–3 , ಸಂಚಿಕೆ–2, ಅಕ್ಟೋಬರ್ 1995, ಕ.ವಿ. ವಿ. ಹಂಪಿ.
36. ವಾಸುಕಿ. ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–3, ಸಂಚಿಕೆ–9, ಮೇ 1996, ಕ.ವಿ.ವಿ. ಹಂಪಿ.
37. ವಾಸುಕಿ. ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–3, ಸಂಚಿಕೆ–10, ಜೂನ್, 1996, ಕ.ವಿ.ವಿ. ಹಂಪಿ.
38. ವಾಸುಕಿ. ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–2, ಸಂಚಿಕೆ–6, 1995, ಕ. ವಿ. ವಿ. ಹಂಪಿ.
39. ವಾಸುಕಿ ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–1, ಸಂಚಿಕೆ–2, 1993, ಕ.ವಿ.ವಿ. ಹಂಪಿ.
40. ವಾಸುಕಿ ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–2, ಸಂಚಿಕೆ–4, 1994, ಕ.ವಿ.ವಿ. ಹಂಪಿ.
41. ವಾಸುಕಿ ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–1, ಸಂಚಿಕೆ–4, ಡಿಸಂಬರ್, 1993, ಕ.ವಿ.ವಿ. ಹಂಪಿ.
42. ವಾಸುಕಿ ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–1, ಸಂಚಿಕೆ–5, ಡಿಸೆಂಬರ್, 1993, ಕ.ವಿ.ವಿ. ಹಂಪಿ.
43. ವಾಸುಕಿ ಕೆ.ಜಿ. ಸಂ: ವಿಜ್ಞಾನ ಸಂಗಾತಿ, ಸಂಪುಟ–3, ಸಂಚಿಕೆ–12, ಆಗಸ್ಟ್, 1996, ಕ.ವಿ.ವಿ. ಹಂಪಿ.
44.ಸುಧೀಂದ್ರ ಹಾಲ್ದೋಡ್ಡೇರಿ, ಜೀವ ಉಗಮದ ಕುರುಹು ಚಂದ್ರನಲ್ಲಿ, ಉದಯವಾಣಿ ದಿನಪತ್ರಿಕೆ, 10,11,2002.
45. ಪ್ರಬುದ್ಧ ಕರ್ನಾಟಕ, ಸಂಪುಟ 28, ಸಂಚಿಕೆ–1, 1946, ಮೈ.ವಿ.ವಿ. ಮೈಸೂರು.
46. ಪ್ರಬುದ್ಧ ಕರ್ನಾಟಕ, ಸಂಪುಟ 36, ಸಂಚಿಕೆ–4, 1955, ಮೈ.ವಿ.ವಿ. ಮೈಸೂರು.
47. ವಿಜ್ಞಾನ ಕರ್ನಾಟಕ, ಸಂಪುಟ 13, ಸಂಚಿಕೆ–1, 1981, ಮೈ.ವಿ.ವಿ. ಮೈಸೂರು.
49. ವಿಜ್ಞಾನ ಕರ್ನಾಟಕ, ಸಂಪುಟ 10, ಸಂಚಿಕೆ–2, 1978, ಮೈ.ವಿ.ವಿ. ಮೈಸೂರು.
49. ಪ್ರಬದ್ಧ ಕರ್ನಾಟಕ, ಸಂಪುಟ 24, ಸಂಚಿಕೆ–4, 1948, ಮೈ.ವಿ.ವಿ. ಮೈಸೂರು.
50. ಪುಸ್ತಕ ಪ್ರಪಂಚ, ಸಂಪುಟ 44, ಸಂಚಿಕೆ–4, ಡಿಸೆಂಬರ್ 1993, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.
51. ಪುಸ್ತಕ ಪ್ರಪಂಚ, ಸಂಪುಟ 50, ಸಂಚಿಕೆ–9, ಜೂನ್, 2000, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.
52. Yeshodara. K. Editor, **Environment Pollution Vol - 1,** No - 1 March, 2000, Mysore.